ಕರ್ನಾಟಕ ವಿಧಾನಸಭೆ

ಬುಧವಾರ 27ನೇ ಮಾರ್ಚ್ 2002

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10.20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪರವರು ಪೀಠವನ್ನು ಅಲಂಕರಿಸಿದರು.

1. ವಿತ್ತೀಯ ಕಾರ್ಯಕಲಾಪ

2002-2003ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು :- ಮಾನ್ಯರೇ, ನಿನ್ನೆ 9 ಗಂಟೆಗಳ ಅವಧಿಯಲ್ಲಿ 2-14 ನಿಮಿಷಗಳ ಕಾಲ ಜನತಾದಳ (ಯು) ನವರು ಮಾತನಾಡಿದ್ದಾರೆ. 3-12 ಗಂಟೆಗಳ ಕಾಲ ಬಿಜೆಪಿಯವರು ಮಾತನಾಡಿದ್ದಾರೆ. ಈ ಕಡೆಯವರು ಅಂದರೆ ಆಡಳಿತ ಪಕ್ಷದವರು ಎರಡು ಗಂಟೆಗಳ ಕಾಲ ಮಾತನಾಡಿದ್ದಾರೆ. ಇವೊತ್ತು ಸಂಜೆ ಏಳು ಗಂಟೆಯವರೆಗೂ ಎಲ್ಲಾ ಪಕ್ಷಗಳವರು ಎರಡೆರಡು ಗಂಟೆಗಳ ಕಾಲ ಅವಧಿಗೆ ಮಾತನಾಡಬಹುದು. ನಿಮ್ಮಲ್ಲಿ ಯಾರು ಬೇಕಾದರೂ ಮಾತನಾಡಿ, ಅದು ನಿಮ್ಮ ನಿರ್ಧಾರಕ್ಕೆ ಬಿಟ್ಟಿದ್ದು. ಅಂದ ೆರೆ ಕೊಟ್ಟ ಸಮಯವನ್ನು ದಯವಿಟ್ಟು ಮೇಂಟೇನ್ ಮಾಡಬೇಕು. ನಾವು ಸಾಯಂಕಾಲ ಏಳು ಗಂಟೆಗಳವರೆಗೆ ಸಭೆ ನಡೆಸೋಣ. ಮೊದಲೇ ಏನಾದರೂ ಮಾತನಾಡುವವರು ಇಲ್ಲದಿದ್ದರೆ ಸರಕಾರದವರು ರಿಪ್ಲೈ ಪ್ರಾರಂಭ ಮಾಡುತ್ತಾರೆ. ಹಾಗೆಯೇ ಮಾನ್ಯ ಎಸ್.ಎಸ್ ಪಾಟೀಲರವರಲ್ಲಿ ವಿನಂತಿ. ನೀವು ಏನೇನು ಮಾತನಾಡಬೇಕೋ ಮಾತನಾಡಿ. ನೀವು ಏನೋ ಪ್ರಶ್ನೆ ಕೇಳುವುದು ಅದಕ್ಕೆ ಅವರು ಏನೋ ಉತ್ತರವನ್ನು ಹೇಳುವುದು, ಹೀಗೆ ಕ್ರಾಸ್‌ಎಕ್ಸಾಮಿನೇಷನ್ ಆಗುವುದು ಬೇಡ ಎಂಬುದು ನನ್ನ ಅಭಿಪ್ರಾಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಪಾಟೀಲರು ಬೆಳಿಗ್ಗೆ ಪೂಜಾದಿಗಳನ್ನು ಮಾಡಿಕೊಂಡು ಸಭೆಗೆ ಮೊದಲು ಬಂದವರೇ ಅವರು. ಆದ್ದರಿಂದ ಅವರು ಇವೊತ್ತು ಆ ಕಡೆ ಈ ಕಡೆ ಹೋಗದೆ ಡಿಬೇಟ್ ಮುಂದುವರಿಸುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ ಮುಂಡರಗಿ:- ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದಂಥ ಬಜೆಟ್‌ನ ಬಗ್ಗೆ ನಿನ್ನೆ ಕೆಲವಾರು ವಿಚಾರಗಳನ್ನು ನಾನು ಹೇಳಿದ್ದೇನೆ. ನಿಜವಾಗಿಯೂ ಕೊರತೆ ತುಂಬಲು ಅವರು ಯಾವ ಕಠಿಣ ಕ್ರಮಗಳನ್ನೂ ತೆಗೆದುಕೊಂಡಿಲ್ಲ. ಹೋದ ವರ್ಷ ರಾಜಸ್ವ ಜಮೆ ರಾಜ್ಯ ತೆರಿಗೆ ಜಮೆ, 2000-01 ರ ಅಂದಾಜು 10,85 ಕೋಟಿ ರೂಪಾಯಿ ಹಿಡಿದಿದ್ದರು. ಅದು ಪರಿಷ್ಕೃತ ಅಂದಾಜು ಆದುದು 10,851 ಕೋಟಿ ರೂಪಾಯಿಗಳು. ಅಂದರೆ 700 ಕೋಟಿ ರೂ.ಗಳ ಕೊರತೆಯು ಅಲ್ಲಿ ಆಯಿತು. ಬಜೆಟ್‌ನಲ್ಲಿ ಬರುತ್ತದೆಂದು ತಿಳಿದ 700 ಕೋಟಿ ರೂ.ಗಳು ಕಡಿಮೆ ಆಯಿತು. ಪುನಃ ಈ ವರ್ಷ 11,883 ಕೋಟಿ ರೂ.ಗಳನ್ನು ಹಿಡಿದಿದ್ದಾರೆ. ಅದನ್ನು ಹೇಗೆ ಜಮಾ ಮಾಡುತ್ತಾರೆಂದು ನಮಗೆ

ಗೊತ್ತಿಲ್ಲ. ರಾಜಸ್ವ ಕೊರತೆಯು ಸುಮಾರು 3000 ಕೋಟಿ ರೂಪಾಯಿಗಳಷ್ಟು ಹೋದ ವರ್ಷದಲ್ಲಿ ಆಯಿತು. ಇದನ್ನು ತುಂಬಲು ಇವರು ಏನು ಮಾಡಿದ್ದಾರೆ ಎಂದು ನೋಡಿದಾಗ ಯಾವ ಒಂದು ಕಾರ್ಯಕ್ರಮವನ್ನೂ ಇವರು ಹಾಕಿಕೊಂಡಿದ್ದು ಕಾಣುವುದಿಲ್ಲ. ಇವರು ನಿನ್ನೆ ಹೇಳಿದ ಹಾಗೆ ಎಕ್ಸೈಸ್‌ನಲ್ಲಿ ಸಾವಿರ ಕೋಟಿ ರೂಪಾಯಿ ಮಾಡಬಹುದು. ಅದು ಸಾಧ್ಯವಿದೆ. ಅದು ಮುಖ್ಯಮಂತ್ರಿಯವರಿಗೂ ಗೊತ್ತಿದ್ದು ಕಠಿಣ ನಿರ್ಧಾರವನ್ನು ಅವರು ತೆಗೆದುಕೊಳ್ಳಬೇಕು. ಅದೇ ರೀತಿಯಲ್ಲಿ ಗಣಿ ಮತ್ತು ಭೂ-ವಿಜ್ಞಾನ ಸಚಿವರಲ್ಲಿ ನಾನು ವಿನಂತಿಸುತ್ತೇನೆ. ಬರೇ ಒಂದು ಉಸುಕು ಅಂದರೆ ತಾವುಗಳೇನು ಮರಳು ಎಂದು ಕರೆಯುತ್ತೀರಿ. ಆ ಮರಳಿನ ಮೂಲಕ 500-600 ಕೋಟಿ ರೂಪಾಯಿಗಳಷ್ಟು ಆದಾಯ ಪಡೆಯಬಹುದು. ಅಷ್ಟು ಹಣ ಸೋರಿ ಹೋಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ನಾನೇ ಒಮ್ಮೆ ಲೆಕ್ಕ ಹಾಕಿದ್ದೆ. ಹುಬ್ಬಳ್ಳಿಗೆ ಎಷ್ಟು ಉಸುಕು ಬರುತ್ತದೆ ಮತ್ತು ಎಷ್ಟು ಜಮಾ ಆಗುತ್ತದೆಂಬುದನ್ನು ನೋಡಿದರೆ, 25-30 ಲಕ್ಷ ರೂ.ಗಳವರೆಗೆ ಜಮಾ ಆಗುತ್ತದೆ, 4-5 ಕೋಟಿ ರೂ.ಗಳಷ್ಟು ಮೌಲ್ಯದ ಉಸುಕು ಅಲ್ಲಿಗೆ ಬರುತ್ತದೆ. ಹೀಗೆ ಬೇರೆ ಬೇರೆ ಇಲಾಖೆಗಳಲ್ಲಿಯೂ ಸೋರಿಕೆ ಆಗುತ್ತಿದೆ. ಹಾಗಾಗಿ ಬೇರೆ ಬೇರೆ ಇಲಾಖೆಗಳಲ್ಲಿರುವ ಸೋರಿಕೆಯ ಬಗ್ಗೆ ಮಾನ್ಯಮಂತ್ರಿಯವರು ಕಠಿಣ ನಿಲುವನ್ನು ತೆಗೆದುಕೊಂಡರೆ, ಸಂಪನ್ಮೂಲ ವೃದ್ಧಿಸಲು ಖಂಡಿತವಾಗಿ ಸಾಧ್ಯವಾಗುತ್ತದೆ. ಇಲ್ಲಿ ತಮ್ಮದು ದಿಟ್ಟ ನಿಲುವಿದೆ. ತಾವುಗಳೂ ಕೂಡ ನಂಬರ್ ಒನ್ ಮುಖ್ಯಮಂತ್ರಿಯಾಗಿದ್ದೀರಿ. ಯಾರೂ ನಿಮ್ಮನ್ನು ನಂಬರ್‌ಒನ್ ಮುಖ್ಯಮಂತ್ರಿ ಎಂದು ಸುಮ್ಮನೆ ಹೇಳಿರುವುದಿಲ್ಲ. ಎಲ್ಲರೂ ಹೇಳಿದ ಹಾಗೆ ಅಲ್ಲ ಎಂದು ನಾನು ಹೇಳಲು ತಯಾರಾಗಿಲ್ಲ. ಅವರು ಎಷ್ಟೇ ಮಂದಿಯ ಸರ್ವೆ ಮಾಡಿರಲಿ, ಏನೇ ಮಾಡಿರಲಿ, ಒಂದು ಮಾಡಿ ಹೇಳಿರುತ್ತಾರೆ. ಆದರೆ ಆ ಒಂದು ದಿಟ್ಟತನವನ್ನು ತಾವುಗಳು ಪ್ರದರ್ಶಿಸುತ್ತಿಲ್ಲ. ಕೇರಳದ ಮುಖ್ಯಮಂತ್ರಿಯವರ ಕ್ರಮವನ್ನು ನೋಡಿ. ಸಚಿವರ ಕಿಸ್‌ಗೆ ಕತ್ತರಿ ...... ಅವರಿಗೆ ಅಲ್ಲಿ ಬಹಳ ತೊಂದರೆ, ತ್ರಾಸ ಆಯಿತು. ಆದರೂ ಕೂಡ ಅವರು ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕಾಯಿತು. ಸುಮಾರು ನಮಗೆ ಈ ವರ್ಷದಲ್ಲಿ 45000 ಕೋಟಿ ರೂ.ಗಳಷ್ಟು ಸಾಲ ಆಗುತ್ತದೆ. ಅಸಲು ಬಡ್ಡಿ ಸೇರಿ ಇವರೇ ಹೇಳಿದಂತೆ ಒಯ ಅಂಕಿಸಂಖ್ಯೆ ಹೇಳುತ್ತದೆ. ಮಧ್ಯಂತರ ಆರ್ಥಿಕ ವಿವರಗಳನ್ನು ಏನು ಇವರು ಮಾಡಿದ್ದಾರೆ, ಇವರ ಪ್ರಕಾರವೇ ಎಲ್ಲಾ ಸೇರಿ ರಾಜಸ್ವ 22000 ಕೋಟಿ ರೂ.ಗಳಷ್ಟು ಅದು 2000-2003ಕ್ಕೆ ಆಗುತ್ತದೆ ಎಂದು ಹೇಳಿದ್ದಾರೆ. ಇವರ ಸಾಲ ಎಷ್ಟಾಗುತ್ತದೆ ಅಂದರೆ, 48,000 ಕೋಟಿ ರೂ.ಗಳಾಷ್ಟಾಗುತ್ತದೆ ಅಸಲು ಬಡ್ಡಿ ಸೇರಿ ಅಂದರೆ ನಮ್ಮ ಉತ್ಪನ್ನದ ಡಬಲ್ ಸಾಲವಾದರೆ, ನಾವು ಇದನ್ನು ಮ್ಯೆನೇಜ್ ಮಾಡುವುದು ಹೇಗೆ? ಈ ಕಡೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಗಮನ ಹರಿಸಿಲ್ಲ. ಇದೇ ನನ್ನ ವಾದ. ಆ ಬಗ್ಗೆ ಗಮನಹರಿಸಬೇಕಾಗುತ್ತದೆ. ನಾವೂ ಕೂಡ ಇದಕ್ಕೆ ಉಪಾಯಗಳನ್ನು ಸಜೆಸ್ಟ್ ಮಾಡಬೇಕಾಗುತ್ತದೆ. ಅಧ್ಯಕ್ಷರೇ, ನಾವು ಸಿಂಗಾಪುರ್ ರೀತಿಯಲ್ಲಿ ಮಾಡುತ್ತೇವೆಂದರೆ ಹಾಗೆಯೇ ಆಗುವುದಿಲ್ಲ. ಸಿಂಗಾಪುರವನ್ನು ಅವರು ಹೇಗೆ ಮಾಡಿದ್ದಾರೆಂಬುದನ್ನು ಹೋಗಿ ನೋಡಿಕೊಂಡು ಬರಬೇಕಾಗುತ್ತದೆ. ನಾವೆಲ್ಲರೂ ತ್ಯಾಗ ಮಾಡಬೇಕಾಗುತ್ತದೆ. "ಕಾಗೆ ಒಂದಗಳು ಕಂಡರೆ ಕರೆಯದೇ ತನ್ನ ಬಳಗವನ್ನೆಲ್ಲಾ ಕೋಳಿ ಒಂದು ಗುಟುಕ ಕಂಡರೆ ಕರೆಯದೇ ತನ್ನ ಕುಲವನ್ನು ... ಎಂಬಂತೆ ನಾವೆಲ್ಲರೂ ಒಂದೇ. ಅಧಿಕಾರಿಗಳು ಬೇರೆ, ಸಾರ್ವಜನಿಕರು ಬೇರೆ, ರೈತರು ಬೇರೆ, ಎಂದು ಇಲ್ಲ. ನಾವೆಲ್ಲರೂ ಈ ರಾಜ್ಯದ ಪ್ರಜೆಗಳು. ಬಂದಂಥದ್ದರಲ್ಲಿ ಎಲ್ಲರೂ ಸಮವಾಗಿ ಹಂಚಿಕೊಂಡು ತಿನ್ನಬೇಕು. ಈ ಒಂದು ದೃಷ್ಟಿಯಿಂದ ನಾನು ಹಿಂದೆ

ಹೇಳಿದ್ದೆ. ಮೊದಲನೇಯದಾಗಿ ನಮ್ಮ ಶಾಸಕರದ್ದು 30 ಪರ್‌ಸೆಂಟ್ ಕಟ್ ಮಾಡಿ ಎಂದು ಹೇಳಿದ್ದೆ. ಕಟ್ ಮಾಡದಿದ್ದರೆ ಇಂದಲ್ಲ ನಾಳೆ ನಮಗೂ, ಯಾರಿಗೂ ಪಗಾರ ಇಲ್ಲದ ಹಾಗೆ ಆಗಬಹುದು. ನಮ್ಮ ಮಂತ್ರಿಗಳಿಗೆ ಭತ್ಯೆ ಕೂಡ ಸಿಗದ ಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣ ಆಗುತ್ತದೆ. ಒಂದು ವೇಳೆ ನಾವು ರೈತರನ್ನು ಸರಿಯಾದ ಸ್ಥಿತಿಯಲ್ಲಿಡದಿದ್ದರೆ, ರೈತರು ಬೆಳೆ ಬೆಳೆಯದಿದ್ದರೆ, ರೈತರು ಆರ್ಥಿಕವಾಗಿ ಸಬಲರಾಗದಿದ್ದರೆ, ರೈತರು ಆರ್ಥಿಕ ದುಸ್ಥಿತಿಯಲ್ಲಿದ್ದರೆ, ನಮ್ಮ ಒಟ್ಟು ಉತ್ಪಾದನೆಯು ಕಡಿಮೆಯಾಗುತ್ತದೆ. ರೈತರು ತನ್ನ ಉತ್ಪಾದನೆಯನ್ನು ಬಜಾರಿಗೆ ಹಾಕಿದರೆ ಮಾತ್ರ ಎಲ್ಲಾ ರೀತಿಯ ಟಾಕ್ಸ್ ಇತ್ಯಾದಿಗಳು ಬರುತ್ತವೆ. ಅಭಿವೃದ್ಧಿಯಾಗುತ್ತದೆ. ನೌಕರಿ ಬರುತ್ತವೆ. ಉದ್ದಿಮೆಗಳು ಬರುತ್ತವೆ. ಈ ಎಲ್ಲಾ ಕಾರಣಗಳಿಗಾಗಿ ನಾವು ಇವೊತ್ತು ರೈತರ ಕಡೆಗೆ ಗಮನ ಕೊಡಬೇಕಾಗಿದೆ. ಈ ಒಂದು ಬಜೆಟ್‌ನಲ್ಲಿ ರೈತರ ಬಗ್ಗೆ ಏನೂ ಹೇಳಿಲ್ಲ. ಸುಮ್ಮನೆ ಹಿಂದಿನವರು ಹೇಳಿದ್ದನ್ನು ಗಿಳಿಪಾಠ ಮಾಡಿದ ಹಾಗೆ ಕೆಲವನ್ನು ಓದಿದ್ದಾರೆ. ರೈತರಿಗೆ ನೀವು ಏನಾದರೂ ಸವಲತ್ತು ಕೊಡಿ ಎಂದು ಹೇಳಿದ್ದೇವೆ. 15 ಜಿಲ್ಲೆಗಳಿಗೆ ನೇರವಾಗಿ ಅಪೆಕ್ಸ್ ಬ್ಯಾಂಕ್‌ನಿಂದ ಸಾಲವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇದು ಸಾಧ್ಯವೇ? ಇದು ನನ್ನ ಪ್ರಶ್ನೆ ಇರುವುದು ರೈತರಿಗೆ ಬಡ್ಡಿ ಕಡಿಮೆ ಮಾಡುತ್ತೇವೆಂದು ಹೇಳಿದ್ದಾರೆ. ಜಿಲ್ಲಾ ಬ್ಯಾಂಕ್‌ನ್ನು ಒಮ್ಮೆಗೆ ಬಂದ್ ಮಾಡಿ ನೇರವಾಗಿ ಅಪೆಕ್ಸ್ ಬ್ಯಾಂಕ್‌ನಿಂದ ಇದನ್ನು ಒಂದೇ ವರ್ಷದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಅದು ಸಾಧ್ಯವೇ? ಇವರು ಇದು 15 ವರ್ಷಗಳ ಯೋಜನೆ ಎಂದಾದರೂ ಹೇಳಬೇಕಾಗಿತ್ತು. ಅದನ್ನೂ ಹೇಳಲಿಲ್ಲ. ಹಿಂದೆ ಎರಡು ಪರ್‌ಸೆಂಟ್ ಬಡ್ಡಿ ಕಡಿಮೆ ಮಾಡುತ್ತೇವೆಂದು ಹೇಳಿದ್ದರು. ಅದೇ ರೀತಿಯಲ್ಲಿ ಇದು ಆಗುವುದು. ಈಗ ಇವರು 15 ಬ್ಯಾಂಕ್‌ಗಳನ್ನು ಕಡಿಮೆ ಮಾಡಬೇಕೆಂದು ಹೇಳಿದರೆ, ಅಲ್ಲಿ ಎಷ್ಟು ಸಾಲ ಇವೆ ಎಂದು ಹೇಳಿದರೆ, ಸುಮಾರು 16025 ಕೋಟಿ ರೂಪಾಯಿಗಳಷ್ಟು ಸಾಲ ನಾವು ಕೊಡುತ್ತೇವೆ. ನಬಾರ್ಡ್‌ನಿಂದ ನಮಗೆ ಬರುವುದು ಕೇವಲ 495 ಕೋಟಿಗಳು ರೂ.ಗಳು ಮಾತ್ರ. ಆ 495 ಕೋಟಿ ರೂಪಾಯಿಗಳ ಸಾಲವನ್ನು ಮಾತ್ರ ಆರೂಮುಕ್ಕಾಲು ಪರ್‌ಸೆಂಟ್ ಬಡ್ಡಿ ಮೇಲೆ ನಮಗೆ ಕೊಡುತ್ತಾರೆ. ಉಳಿದ ಸಾವಿರದ ಹನ್ನೆರಡು ನೂರು ಕೋಟಿ ರೂಪಾಯಿಗಳನ್ನು ನಾವು ನಮ್ಮ ಸ್ವಂತ ಬಂಡವಾಳದಿಂದ ಕೊಡುತ್ತೇವೆ. ಅದು ಡಿಸಿಸಿ ಬ್ಯಾಂಕ್ ಇರಬಹುದು, ಅಪೆಕ್ಸ್ ಬ್ಯಾಂಕ್ ಇರಬಹುದು, ಅವರು ತಮ್ಮ ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು; ಅದರ ಬಡ್ಡಿಯ ಕಾಸ್ಟ್ ಹತ್ತೂವರೆ ಪರ್ಸೆಂಟ್ ಆಗುತ್ತದೆ. ಅವರು ಒಂದು ಪರ್‌ಸೆಂಟ್ ಹಿಡಿದುಕೊಂಡರೂ ಅದು ಹನ್ನೊಂದೂವರೆ ಪರ್ಸೆಂಟ್ ಬಡ್ಡಿ ಬೀಳುತ್ತದೆ. ಹನ್ನೆರಡು ನೂರು ಕೋಟಿ ರೂ.ಗಳನ್ನು ಶೇಕಡಾ 11.50 ಬಡ್ಡಿಗೆ ಸಾಲ ತಂದು 470 ಕೋಟಿ ರೂ.ಗಳನ್ನು ಆರೂವರೆ ಶೇಕಡಾ ಬಡ್ಡಿಗೆ ತಂದು, ಒಂಬತ್ತು ಪರ್ಸೆಂಟ್‌ಗೆ ಕೊಡಲು ಆಗುತ್ತದೆಯೇ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಒಂದು ವೇಳೆ ನೀವು ಮಾಡಲು ಹೊರಟರೆ ಏನು ಮಾಡಲು ಆಗುತ್ತದೆ ಎಂಬುದನ್ನು ಹೇಳಬೇಕಾಗುತ್ತದೆ. ನೀವು ಮಾಡಲು ಸಾಧ್ಯವೆಂದಾದಲ್ಲಿ ಬಜೆಟ್‌ನಲ್ಲಿ 600 ಕೋಟಿ ರೂ.ಗಳನ್ನು ಇಡಬೇಕಾಗಿತ್ತು. ಇದರಲ್ಲಿ ಅಂತರ ಎಷ್ಟಿದೆ ಅಂದರೆ, 800 ಕೋಟಿ ರೂ.ಗಳಷ್ಟಿದೆ. ಲ್ಯಾಂಡ್‌ಬ್ಯಾಂಕ್‌ನವರದ್ದು 800 ಕೋಟಿ ರೂ.ಗಳು ಹಾಗೂ ಇವರದ್ದು 800 ಕೋಟಿ ರೂ.ಗಳು ಅಂದರೆ ಸುಮಾರು 1600 ಕೋಟಿ ರೂ.ಗಳು. ಈ 15 ಬ್ಯಾಂಕ್‌ಗಳನ್ನು ತೆಗೆದು ಅಫೆಕ್ಸ್ ಬ್ಯಾಂಕ್‌ಗೆ ಕೊಟ್ಟರೆ ಆ 800 ಕೋಟಿ ರೂ.ಗಳನ್ನು ಕೊಡುವವರು ಯಾರು? ಆ ಬ್ಯಾಂಕ್‌ಗಳು 800 ಕೋಟಿ ರೂ.ಗಳನ್ನು

ಎಲ್ಲಿಂದ ತರಬೇಕು? ಹೀಗಾಗಿ ರೈತರಿಗೆ ಸಾಲ ಕೊಡಲು ಸಾಧ್ಯವಾಗುವುದಿಲ್ಲ. ನೀವು ಏನಾದರೂ ಹೇಳಬೇಕಾಗಿದ್ದರೆ ಅದನ್ನು ಬಜೆಟ್‌ನಲ್ಲಿ ಹೇಳಬೇಕಾಗಿತ್ತು. ಕೇಂದ್ರ ಸರಕಾರದವರು ಒಂದು ಯೋಜನೆ ಮಾಡಿದ್ದರು. ಕೇಂದ್ರ ಸರಕಾರದವರು 60ರಷ್ಟು ನಾವು ಕೊಡುತ್ತೇವೆ, 40 ರಷ್ಟು ನೀವು ಕೊಡಿ ಎಂದು ತಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ. 40ರಷ್ಟು ಅಂದರೂ ಕೂಡ ಇವರು ಸುಮಾರು 600 ಕೋಟಿ ರೂಪಾಯಿಗಳನ್ನು ತೆಗೆದು ಇಡಬೇಕಾಗುತ್ತದೆ ತಮ್ಮ ಬಜೆಟ್‌ನಲ್ಲಿ 600 ಕೋಟಿ ರೂಪಾಯಿಗಳನ್ನು ತೆಗೆದು ಇಂಬ್ಯಾಲೆನ್ಸ್‌ನ್ನು ತೆಗೆದು, ಆ 600 ಕೋಟಿ ರೂಪಾಯಿಗಳನ್ನು ಇವರಿಗೆ ಕೊಟ್ಟರೆ ಖಂಡಿತವಾಗಿ ಇವರು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇವರು ಕೊಡಲಿಕ್ಕೆ ಆಗುವುದಿಲ್ಲ. ಇದು ಸುಮ್ಮನೆ ಒಂದು ಹೇಳಿಕೆಯಾಗಿ ಉಳಿಯುತ್ತದೆ. ಹೇಗೆ ನಮ್ಮ ಹೊಲ, ನಮ್ಮ ರಸ್ತೆ, ರೈತರಿಗೆ 2 ಪರ್‌ಸೆಂಟ್‌ನಷ್ಟು ಬಡ್ಡಿ ಕಡಿಮೆ ಮಾಡುತ್ತೇವೆ, 12 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆ ಎಂಬತ್ಯಾದಿ ಹೇಳಿದ್ದಾರಲ್ಲಾ ಅದೇ ರೀತಿ ಇದೂ ಒಂದು ಆಗುತ್ತದೆ. ಇದು ಆಗಬೇಕೆಂದರೆ ಇದೆನ್ನೆಲ್ಲಾ ಮಾಡಬೇಕಾಗುತ್ತದೆ. ಸುಮಾರು 600 ರಿಂದ 800 ಕೋಟಿ ರೂ.ಗಳಷ್ಟು ಬಜೆಟ್‌ನಲ್ಲೇ ಪ್ರಾವಿಷನ್ ಮಾಡಿದರೆ ಇದನ್ನು ಮಾಡಲಿಕ್ಕೆ ಸಾಧ್ಯವಿದೆ. ಆ ಕಾರಣದಿಂದ ನಾನು ಹೇಳುವುದು, ರೈತರಿಗೆ 9 ಪರ್ಸೆಂಟ್ ಬಡ್ಡಿ ಮೇಲೆ ನೇರವಾಗಿ ಇದೇ ವರ್ಷ ಅಪೆಕ್ಸ್ ಬ್ಯಾಂಕಿನಿಂದ ಕೊಡುತ್ತೇವೆಂದು ಹೇಳಿದರೆ ಅಪೆಕ್ಸ್ ಬ್ಯಾಂಕ್ ಮುಳುಗಿ ಹೋಗುತ್ತದೆ. ಈಗಾಗಲೇ ಲ್ಯಾಂಡ್ ಬ್ಯಾಂಕ್ ಮುಳುಗಿದೆ. ಲ್ಯಾಂಡ್ ಬ್ಯಾಂಕ್ ಉಳಿಯಲು ಸಾಧ್ಯವಿಲ್ಲ. ಒನ್ ಟೈಂ ಸೆಟ್ಲ್‌ಮೆಂಟ್ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಿ 800 ಕೋಟಿ ರೂ. ಕೊಟ್ಟರೆ ಆ ಲ್ಯಾಂಡ್ ಬ್ಯಾಂಕ್ ಉಳಿಯುತ್ತದೆ. ಅಪೆಕ್ಸ್ ಬ್ಯಾಂಕ್ ಡಿಸಿಸಿ ಬ್ಯಾಂಕ್ ಮತ್ತು ನಮ್ಮ ಸೊಸೈಟಿಗಳು ಉಳಿಸುತ್ತವೆ. ಇಲ್ಲದಿದ್ದರೆ ಖಂಡಿತ ಉಳಿಯಲು ಸಾಧ್ಯವಿಲ್ಲ. ಈ ಕಾರಣದಿಂದ ರೈತರಿಗೆ ಇವರು ಸಹಾಯ ಮಾಡಬೇಕೆಂದಿದ್ದರೆ 5 ಪರ್ಸೆಂಟ್ ಸಬ್ಸಿಡಿ ಘೋಷಣೆ ಮಾಡಬೇಕಾಗಿತ್ತು. ಆ ಮೂಲಕ 200-300 ಕೋಟಿ ರೂ. ಪ್ರಾವಿಷನ್ ಮಾಡಿದ್ದರೆ ಖಂಡಿತವಾಗಿ ಕೊಡಲು ಸಾಧ್ಯವಿತ್ತು. ಆ ಕಾರಣದಿಂದ ಇದು ಆಗುವುದಿಲ್ಲ. ಸುಮ್ಮನೆ ಹೇಳಿದ್ದಾರೆಂಬ ಮಾತನ್ನು ಈ ಸಂಧರ್ಬದಲ್ಲಿ ಹೇಳುತ್ತಿದ್ದೇನೆ. ಇವತ್ತು ಅಣ್ಣಿಗೇರಿಯಿಂದ ನನಗೆ ಫೋನ್ ಬಂದಿತ್ತು. ನಮ್ಮ ಕೃಷಿ ಮಾರುಕಟ್ಟೆ ಸಚಿವರು ಇದ್ದಂತೆ ಕಾಣುತ್ತಿಲ್ಲ. ಅಲ್ಲಿ ಸುಮಾರು 12 ಸಾವಿರ ಹತ್ತಿ ಅಂಗಡಿಗಳಿವೆ. ಅಲ್ಲಿನ ಸಿಸಿಐನವರು ನಾವು ಖರೀದಿ ಮಾಡುವುದಿಲ್ಲ, ನನಗೆ ಸಾಧ್ಯವಿಲ್ಲ ಎಂದು ಹೇಳಿ ಹೇಗಿಬಿಟ್ಟಿದ್ದಾರೆ ಹಾಗಾದರೆ ಯಾರು ಖರೀದಿ ಮಾಡುವವರು? ಆ ರೈತರ ಗತಿಯೇನು? ಈಗ ನೋಡಿ 15 ನೂರು ಇದ್ದ ಧಾರಣೆ ಸಾವಿರ ರೂಪಾಯಿಗೂ ಕೇಳುವವರಿಲ್ಲ. ಇದು ಇವತ್ತು ರೈತನ ಸ್ಥಿತಿ ಇದೆಲ್ಲಾ ಆಗಬೇಕಾದರೆ ನಮ್ಮ ಟೆಕ್ಸ್‌ಟೈಲ್ ಮಿಲ್ಸ್ ಉಳಿಯಬೇಕಾಗುತ್ತದೆ. ಟೈಕ್ಸ್‌ಟೈಲ್ ಮಿಲ್ಸ್ ಉಳಿಸದೆ ಇದ್ದರೆ ಖಂಡಿತವಾಗಿ ಎಲ್ಲಾ ನಾವೇ ಮಾಡಲು ಆಗುವುದಿಲ್ಲ ಏನೋ ಸುಮ್ಮನೆ ರೈತರಿಗೆ ಒಳ್ಳೆಯದು ಮಾಡುತ್ತೇವೆಂದರೆ ಒಳ್ಳೆಯದಾಗುವುದಿಲ್ಲ. ಆ ಟೆಕ್ಸ್‌ಟೈಲ್ಸ್ ಮಿಲ್ ಉಳಿಯಬೇಕಾದರೆ ಅಲ್ಲಿ ಇಂಬ್ಯಾಲೆನ್ಸ್ ಇದೆ, ಅದಕ್ಕೆ ನೂರಾರು ಕೋಟಿ ರೂ. ಬೇಕಾಗುತ್ತದೆ. ಆ ನೂರು ಕೋಟಿ ರೂ. ಹಣವನ್ನು ಟೆಕ್ಸ್‌ಟೈಲ್ ಮಿಲ್ಸ್ ಮತ್ತು ಎಣ್ಣೆ ಮಿಲ್‌ಗಳಿಗೆ ಕೊಟ್ಟು ಉಳಿಸಿದರೆ ಈ ರೈತನಿಗೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಸಂಪೂರ್ಣ ಬಂದ್ ಆಗಿಹೋಗುತ್ತವೆ. ಆದರೆ ಬಜೆಟ್‌ನಲ್ಲಿ ಆ ಟೆಕ್ಸ್‌ಟೈಲ್ ಮಿಲ್‌ಗಳ ಉಳಿಕೆ ಬಗ್ಗೆ ಒಂದು ಮಾತೂ ಹೇಳಿಲ್ಲ. ಹನ್ನೆರಡು ಸಾವಿರ ಹತ್ತಿ ಅಂಗಡಿಗಳು ಅಣ್ಣಿಗೇರಿಯಲ್ಲಿವೆ, ಹುಬ್ಬಳ್ಳಿ, ಗದಗ

ರಾಣಿಬೆನ್ನೂರುಗಳಲ್ಲದೆ ರಾಜ್ಯದ ತುಂಬಾ ಇವೆ, ಅದೇ ರೀತಿ ಶೇಂಗಾ ಸ್ಥಿತಿ. ಎಣ್ಣೆಕಾಳುಗಳನ್ನು ಇವತ್ತು ಖರೀದಿ ಮಾಡುವುದನ್ನು ಎಲ್ಲರೂ ಬಿಟ್ಟಬಿಟ್ಟರು. ಧಾರಣೆಯೇನೋ ಹೆಚ್ಚುಕಡಿಮೆ ಆಗುತ್ತದೆ, ಈಗಾಗಲೇ 50-100 ರೂ. ಕಡಿಮೆಯಾಗಿದೆ, ಇವರು ಎರಡು ಪರ್ಸೆಂಟ್ ಟ್ಯಾಕ್ಸ್ ಹೆಚ್ಚು ಮಾಡಿದ ಮೇಲೆ ಸಹಕಾರ ರಂಗದಲ್ಲಿರುವ ಎಣ್ಣೆಮಿಲ್ಸ್ ಹಾಗೂ ಟೆಕ್ಸ್‌ಟೈಲ್ ಮಿಲ್‌ಗಳನ್ನು ಉಳಿಸಬೇಕೆಂದರೆ ಸರ್ಕಾರ ಏನಾದರೂ ಒಂದು ಯೋಜನೆ ಹಾಕಬೇಕು. ಅದರ ಬಗ್ಗೆ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಇನ್ನು ರೈತರ ಆತ್ಮಹತ್ಯೆ. ನನ್ನ ಮುಂಡರಗಿ ತಾಲ್ಲೂಕಿನಲ್ಲಿ ರೈತ ನೇಣುಹಾಕಿಕೊಂಡು ಸತ್ತಿದ್ದಾನೆ, ನನಗೆ ಕಣ್ಣೀರು ಬಂತು, ಇವರು ಯಾರು ಹೋಗಿ ನೋಡಿಲ್ಲ. ಏನೂ ದುಡ್ಡು ಕೊಟ್ಟಿಲ್ಲ. ಹೀಗೆ ರೈತರು ಸತ್ತರೆ ಏನು ಮಾಡುವುದು? ಈಗಾಗಲೇ ರಾಜ್ಯದಲ್ಲಿ ನೂರಾರು ರೈತರು ಸತ್ತಿದ್ದಾರೆ. ಈ ವರ್ಷ ಇವೆಲ್ಲಾ ಮಾಲುಗಳನ್ನು ಮಾಡಿದರೆ ಖರೀದಿ ಊರೂರುಗಳಲ್ಲಿ ರೈತರು ಸಾಯುವ ಸ್ಥಿತಿ ಬರುತ್ತದೆ. ಸರ್ಕಾರ ಬಹಳ ಕಷ್ಟದಲ್ಲಿರುತ್ತದೆ ಎಂದು ಹೇಳುತ್ತೇನೆ. ರೈತರು ದಂಗೆ ಏಳುವ ಪ್ರಸಂಗ ಬರಬಹುದು. ಕಾಯುವವರಿಗೆ ಸಮುದ್ರ ಮೊಣಕಾಲು ಆಗುತ್ತದೆ. ಆ ಕಾರಣದಿಂದ ಮೊದಲೇ ಎಚ್ಚರಿಕೆ ವಹಿಸಿ ರೈತರಿಗೆ ನೀವು ಸಹಾಯ ಮಾಡಬೇಕಾಗುತ್ತದೆ. ರೈತರಿಗೆ ಸಹಾಯ ಮಾಡಬೇಕೆಂದರೆ ನಿಮ್ಮ ಹತ್ತಿರ ದುಡ್ಡಿಲ್ಲ. ಅದನ್ನು ಸಂಗ್ರಹಿಸಬೇಕಾಗುತ್ತದೆ. ಹೇಗೆ ಕ್ರೋಢೀಕರಿಸುವುದು ಎಂದು ನೀವು ಕೇಳಬಹುದು. ಹಿಂದೆ ಹೇಳಿದ್ದೀರಿ. ಸುಮಾರು 20 ಸಾವಿರ ಹುದ್ದೆಗಳನ್ನು ರದ್ದು ಮಾಡುತ್ತೇವೆ ಎಂದು ಯಾವುದೂ ಮಾಡಲಿಲ್ಲ. ವಿಭಾಗಾಧಿಕಾರಿಗಳ ಕಛೇರಿ ರದ್ದು ಮಾಡಿ ಎಂದು ನಮ್ಮ ಸರ್ಕಾರ ಇದ್ದಾಗಲೇ ಹೇಳಿದ್ದೆವು. ಅದಕ್ಕೆ ತಾವು ಬಂದ ಮೇಲೆ ಏನೂ ಮಾಡಲಿಲ್ಲ ಅವು ಹಾಗೇ ಇವೆ ಆಮೇಲೆ ಸಹಕಾರ ಇಲಾಖೆಯಲ್ಲಿ ಇದ್ದ ನಾಲ್ಕು ಜಂಟಿ ರಿಜಿಸ್ಟ್ರಾರ್ ಹುದ್ದೆಗಳನ್ನು ಇವತ್ತು 10 ಮಾಡಿದ್ದೀರಿ, ತಮ್ಮ ಉದ್ದೇಶ ಈಡೇರಿದ್ದರೆ ಇವರನ್ನು ತೆಗೆದುಬಿಡಿ. ಕಡಿಮೆ ಮಾಡಿ ಹುದ್ದೆಗಳನ್ನು ನೀವು ಕಡಿಮೆ ಮಾಡಿದರೆ ಖಂಡಿತ ನೀವು ಅಲ್ಲಿ ರೊಕ್ಕ ಉಳಿಸಬಹುದು. ಕರೆಸಿರಿ ಎಲ್ಲಾ ನೌಕರಿದಾರರನ್ನು, ಎಲ್ಲರೂ ಕೂತುಕೊಳ್ಳೋಣ. ಅವರೂ ಈ ರಾಜ್ಯದ ರೈತರ ಮಕ್ಕಳೇ ಅವರಿಗೆ ಪಗಾರವೇ ಸಿಗಲಿಲ್ಲವೆಂದರೆ ಏನು ಮಾಡುತ್ತಾರೆ ಆ ಕಾರಣದಿಂದ ಅಲ್ಲಿ ಕಟ್ ಮಾಡಿ ರೈತರಿಗೆ ಕೊಡಿರಿ. ಇಲ್ಲದಿದ್ದರೆ ಅನ್ನವಿಲ್ಲದ ನೀರಿಲ್ಲದ ಎಲ್ಲಾ ಪರಿಸ್ಥಿತಿಯೂ ರೈತರಿಗೆ ಆಗುತ್ತದೆ. ಇದರಲ್ಲಿ ದಿಟ್ಟ ನಿಲುವನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ.ಆರ್. ಸಿಂಧ್ಯಾ : ನಾನು ಮೊನ್ನೆ ಮಾತನಾಡುವಾಗ ಬಜೆಟ್ ಇದು ಸರ್ಕಾರದ ಬೊಗಳೆ ಭಾಷಣ ಎಂದು ಹೇಳಿದಾಗ ತಮ್ಮನ್ನು ವಿನಂತಿಸಿಕೊಂಡು ಅವರು ಕಡತದಿಂದ ಕಿತ್ತು ಹಾಕಿಸಿದರು. ಕಾಗೋಡು ತಿಮ್ಮಪ್ಪ ಬಹಳ ಆವೇಶಕ್ಕೂ ಒಳಗಾಗಿದ್ದರು. ನಾನು ಏಕೆ ಆ ಶಬ್ದ ಉಪಯೋಗಿಸಿದೆ ಎಂದರೆ ಕಳೆದ ಮೂರು ವರ್ಷದಿಂದ ನಿಮ್ಮ ಸರ್ಕಾರ ಏನು ಹೇಳಿ ಕೊಂಡು ಬಂದಿದೆ; ನಾವು ಹುದ್ದೆಗಳನ್ನು ಕಡಿಮೆ ಮಾಡುತ್ತೇವೆ, ವಿಭಾಗಾಧಿಕಾರಿ ಹುದ್ದೆಗಳನ್ನು ರದ್ದು ಮಾಡುತ್ತೇವೆ, ಇನ್‌ಫ್ಯಾಕ್ಟ್ ಈ ಸಾರಿ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಸರ್ಕಾರಿ ನೌಕರರಿಗೂ ಪ್ರೈವೇಟ್ ಸೆಕ್ಟಾರಿನಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತೇವೆ ಎಂದಿದ್ದೀರಿ. ಇದು ಮುಖ್ಯಮಂತ್ರಿಗಳ ಭಾಷಣ. ಸಹಕಾರ ಸಚಿವರು ಏನು ಮಾಡಿದ್ದಾರೆಂದರೆ ಜಂಟಿ ರಿಜಿಸ್ಟ್ರಾರ್‌ಗಳ 10 ಪೋಸ್ಟ್‌ಗಳನ್ನು ಹೊಸದಾಗಿ ಇಡೀ ರಾಜ್ಯದಲ್ಲಿ ಸೃಷ್ಟಿಸಿದ್ದಾರೆ. ಬಡ್ತಿ ನೀಡುವುದಿದ್ದರೆ

ಅದು ಬೇರೆ ವಿಚಾರ. ಒಬ್ಬ ಜಂಟಿ ರಿಜಿಸ್ಟ್ರಾರ್‌ಗೆ ಅಂದರೆ ಒಂದು ಕಾರು, ಅದಕ್ಕೆ ಬೇಕಾದ ಸಿಬ್ಬಂದಿ ಅಂದರೆ ಒಬ್ಬ ಜಂಟಿ ರಿಜಿಸ್ಟ್ರಾರ್ ಪೋಸ್ಟ್ ವರ್ಷಕ್ಕೆ ಕನಿಷ್ಠ 15 ಲಕ್ಷ ರೂಪಾಯಿ ಖರ್ಚಾಗುತ್ತದೆ. 10 ಹುದ್ದೆಗಳು ಅಂದರೆ ಒಂದೂವರೆ ಕೋಟಿ ರೂಪಾಯಿ ವೆಚ್ಚ ಇದು ಅನಾವಶ್ಯಕವಲ್ಲವೆ ಇದು? ಕ್ರೊಸ್ಕರ ನಾನು ಆ ಪದ ಉಪಯೋಗಿಸಿದ್ದು.

ಶ್ರೀ ಕಾಗೋಡು ತಿಮ್ಮಪ್ಪ : ಆ ಸನ್ನಿವೇಶದಲ್ಲಿ ಆ ಭಾವನೆಗಳನ್ನು ರೂಪಿಸಿಕೊಂಡು ಹೇಳಿದಂಥ ಧಾಟಿ ಇತ್ತಲ್ಲ, ಅದು ಯಾರನ್ನಾದರೂ ಸ್ವಲ್ಪ ಕೆರಳಿಸುವ ಸ್ವರೂಪದಲ್ಲಿತ್ತು. ಅದೇ ಧಾಟಿಯಲ್ಲಿ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಈಗ ಆ ಪದ ಬಳಸಲಿಲ್ಲವಲ್ಲಾ. ಈಗ ಜಂಟಿ ರಿಜಿಸ್ಟ್ರಾರ್ ಹುದ್ದೆ ಇಂಪಾರ್ಟೆಂಟ್ ಎಂದು ಸೃಷ್ಟಿಸಿದ್ದೀರಲ್ಲಾ ಯಾವ ಕನ್‌ಸಿಡರೇಷನ್‌ಗಾಗಿ ಹಾಗೆ ಮಾಡಿದಿರಿ? ಯಾವ ಪುರುಷಾರ್ಥಕ್ಕೆ ಮಾಡಿದಿರಿ? ಒಂದು ಕಡೆ ಇದನ್ನು ಮಾಡುವುದು. ಇನ್ನೊಂದು ಕಡೆ ಇಲ್ಲ, ನಾವು ಪೋಸ್ಟ್‌ಗಳನ್ನು ರದ್ದುಮಾಡುತ್ತೇವೆಂದು ಭಾಷಣ ಮಾಡುವುದು ಈ ದ್ವಂದ್ವ ಏಕೆ? ಎಷ್ಟು ನಾಲಗೇಲಿ ಮಾತನಾಡುತ್ತಿದ್ದೀರಿ ಎಂದು ನಾನು ಕೇಳಿದ್ದು ಅಷ್ಟೇ.

ಶ್ರೀ ಬಿ.ಎನ್. ಬಚ್ಚೇಗೌಡ : ಸಹಕಾರ ಸಚಿವರು ಅಂದರೆ ಸೂಪರ್ ಮುಖ್ಯಮಂತ್ರಿ ಇದ್ದಂತೆ ಅವರೇನು ಬೇಕಾದ್ದು ಮಾಡಿದರೂ ನಡಿಯುತ್ತದೆ. ಆದರೆ ಕಾಗೋಡು ತಿಮ್ಮಪ್ಪನವರು ಹಾಗೆ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಪಾಟೀಲರೇ, ದಯವಿಟ್ಟು ತಾವು ಮುಂದುವರೆಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪಾಟೀಲರ ಕಾಲದಲ್ಲೇನಾರೂ ಪ್ರಸ್ತಾವನೆ ಇದ್ದು ಈಗ ಅಪ್ರೂವಲ್ ಆಗಿರಬಹುದೇ.

ಶ್ರೀ ಎಸ್.ಎಸ್. ಪಾಟೀಲ್ : ನಾವು ರದ್ದು ಮಾಡಲು ಹೊರಟಿದ್ದೆವು. ಪ್ರಸ್ತಾವನೆ ತಂದಿದ್ದರೂ ನಾನು ಯಾವುದೂ ಒಪ್ಪಲಿಲ್ಲ. ಆಮೇಲೆ ಡೈರೆಕ್ಟರನ್ನು ತೆಗೆದು ರಿಜಿಸ್ಟ್ರಾರ್‌ರನ್ನೇ ಎರಡಕ್ಕೂ ಮಾಡಿದ್ದೇನೆ ಹಾಗೇ ಎಲ್ಲಾ ಜಂಟಿ ನಿಬಂಧಕರ ಹುದ್ದೆಗಳನ್ನೂ ರದ್ದುಮಾಡಲು ನಿರ್ಣಯ ಮಾಡಿದ್ದೆವು. ಎಲ್ಲಾ ಇಲಾಖೆಗಳ ವಿಭಾಗೀಯ ಮಟ್ಟದ ಹುದ್ದೆಗಳ ರದ್ದತಿಗೆ ನಿರ್ಣಯ ಮಾಡಿದ್ದೆವು. ಹಾಗೇ ತಾವು ಮಾಡಿದ್ದರೆ ಬಜೆಟ್ ಹೀಗಿರುತ್ತಿರಲಿಲ್ಲ. 5 ಸಾವಿರ ಕೋಟಿ ರೂ. ರಾಜಸ್ವ ಕೊರತೆ ಇದೆ ಎನ್ನುತ್ತೀರಲ್ಲಾ 6 ಸಾವಿರ ಕೋಟಿ ರೂ. ಆಗುತ್ತದೆ. ಏಳು ಸಾವಿರ ಕೋಟಿ ಆಗುತ್ತದೆ ಬೇಕಾದರೆ, ತೋರಿಸಿ ಹೇಳುತ್ತೇವೆ. ನಿಮ್ಮ ಹಣಬರಹ ಏನಿದೆ, ರಾಜಸ್ವ ಕೊರತೆ ಏನಿದೆ; ಇಡಿ ರೈತ ಎಲ್ಲಿ ಹೋಗುತ್ತಾನೆ, ನಿಮ್ಮ ಗತಿ ಏನಾಗುತ್ತದೆ? ನಮ್ಮ ಗತಿ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ, ಒಂದು ದಿವಸ ಪ್ರತ್ಯೇಕ ಚರ್ಚೆ ಇಡಿರಿ. ಮುಂದೆ ಬರುವವರ ಗತಿಯಂತೂ ದೇವರೇ ಗತಿ. ನೀವು 54 ಸಾವಿರ ಕೋಟಿ ರೂ. ಸಾಲ ಮಾಡಿ ಹೋದರೆ ಮುಂದೆ ಬರುವವರ ಗತಿಯೇನು? ನಮ್ಮ ಉತ್ಪಾದನೆಯ ಬಡ್ಡಿಯಷ್ಟು ನಮ್ಮ ರಾಜಸ್ವ ಬರುತ್ತದ, ನಾವು ಹೇಗೆ ಮಾಡಬೇಕು?

ಅಧ್ಯಕ್ಷರು : ನೀವು ಸರ್ಕಾರಕ್ಕೆ ಬರಲೇ ಬೇಡಿ. ನಿಮಗೆ ಅಷ್ಟು ತೊಂದರೆಯಾದರೆ ಏಕೆ ಬರುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಸಾಲ ಮಾಡಿ ತುಪ್ಪ ತಿನ್ನತಕ್ಕಂಥ ಅಭ್ಯಾಸವನ್ನು ಹಚ್ಚಿಸಿಬಿಟ್ಟರು, ನಮ್ಮ ಎಸ್.ಎಸ್. ಪಾಟೀಲ್‌ರವರು ಈಗ ಅಭ್ಯಾಸ ಬೆಳೆದ ಮೇಲೆ ಬಿಡುವುದಕ್ಕೆ ಹೇಗೆ ಬರುತ್ತದೆ ಸ್ವಾಮಿ?

ಶ್ರೀ ಎಸ್.ಎಸ್. ಪಾಟೀಲ್ : ಖರ್ಗೆಯವರೇ, ತಿಮ್ಮಪ್ಪನವರೇ, ಮೊದಲು ಏನೇನು ಮಾತನಾಡಿದ್ದೀರಿ ಎಂಬುದು ಗೊತ್ತೋ? ನಮ್ಮನ್ನು ರೈತ ವಿರೋಧಿಗಳು ಎಂದು ಹೇಳಿದಿರಿ. ನಾವು ರೈತರಿಗೆ ಬಡ್ಡಿ ಮನ್ನಾ ಮಾಡಿದೆವು. ಅವರಿಗೆಲ್ಲರಿಗೂ ಕೊಟ್ಟೆವು. ರೈತನಿಗಾಗಿ ಏನು ಮಾಡಿದಿರಿ? ಅಧ್ಯಕ್ಷರೇ, ಒಳಗೆ ನಿಮಗೂ ಇದೆ ಇವರೇ ಬರಲಿ ಎಂದು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಿಮಗೂ ನೋವಾಗಿದೆ. ಏಕೆಂದರೆ 300 ಕೋಟಿ ರೂಪಾಯಿಗಳನ್ನು ಮಂಡ್ಯದಂಥ ಮುಂದುವರೆದಂಥ ಜಿಲ್ಲೆಗೆ ಕೊಟ್ಟು ಕೋಲಾರದಂಥ ಜಿಲ್ಲೆಗೆ ಕೊಟ್ಟಿಲ್ಲವೆಂದರೆ ನಿಮಗೆ ಎಷ್ಟು ನೋವಾಗಿರಬಹುದು. ಅಲ್ಲಿ ಕುಳಿತುಕೊಂಡು ಹೇಳುವುದಕ್ಕಾಗುವುದಿಲ್ಲ. ಏನು ಮಾಡುವುದು? ಅನಿವಾರ್ಯ ಆದರೆ ನಿಷ್ಠೂರವಾಗಿ ಕೆಲವು ಸಲ ಹೇಳಬೇಕಾಗುತ್ತದೆ. ನೀವು ಅಲ್ಲಿ ಕುಳಿತಿರುವುದು ಪಕ್ಷಾತೀತ. ನಮ್ಮ ತಪ್ಪಿದ್ದರೆ ಹೇಳಿ. ಅವರ ತಪ್ಪಿದ್ದರೆ ಹೇಳಿ. ಇದು ಸರಿಯೇ, ಮೂರು ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು? ಐದು ಸಾವಿರ ಕಿಲೋಮೀಟರ್ ರಸ್ತೆ ಅವರಲ್ಲಿದದ್ದೆ ಮೂರೂವರೆ ಸಾವಿರ ಕಿಲೋಮೀಟರ್ ಈಗಾಗಲೇ ಟಾರ್ ರಸ್ತೆಯಾಗಿದೆ. ಅದನ್ನು ಸಿಮೆಂಟ್ ರಸ್ತೆ ಮಾಡುತ್ತೀರಾ? ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ, ಮೊನ್ನೆ ಮಾಗಡಿಗೆ ಹೋಗಿದ್ದೆ. ಅಲ್ಲಿನ ಶಾಸಕರು ಈಗ ಇಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ದೇವೇಗೌಡರು ನಾವು ಅಡ್ಡಾಡಿದೆವು. ಅಲ್ಲಿ ಎತ್ತಿನ ಗಾಡಿಗಳೂ ಕೂಡ ಓಡಾಡುವುದುಕ್ಕೆ ಆಗುವುದಿಲ್ಲ. ಹಾಗಿವೆ ಅಲ್ಲಿನ ರಸ್ತೆಗಳು ನಮ್ಮ ಉತ್ತರ ಕರ್ನಾಟಕ ಇರಲಿ. ಮಾನ್ಯ ಮುಖ್ಯ ಮಂತ್ರಿಗಳು ತಾವೆಲ್ಲಾ ಓಡಾಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಹೋಗಿ ನೋಡಿ ಆ ಮಾಗಡಿ ರೋಡನ್ನು ನಾನು ನೊಂದ ಮನಸ್ಸಿನಿಂದ ಮತ್ತು ಪ್ರಾಮಾಣಿಕವಾಗಿ ಹೇಳುತ್ತೇನೆ, ನಾವೆಲ್ಲಾ ಕುಳಿತುಕೊಂಡು ದಕ್ಷಿಣ ಕರ್ನಾಟಕ ಎಲ್ಲಾ ಅಭಿವೃದ್ಧಿಯಾಗಿ ಬಿಟ್ಟಿದೆ ಎಂದು ಮಾತನಾಡುತ್ತೇವೆ. ಮಾಗಡಿ ಅಂತಹ ಒಂದು ತಾಲ್ಲೂಕಿನಲ್ಲಿ ಹೋಗಿ ನೋಡಿದರೆ ನಮ್ಮ ಗುಲ್ಬರ್ಗ ಮತ್ತು ಮುಂಡರಗಿಗಿಂತ ಕೆಟ್ಟದ್ದು ಇದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ನೋಡಿಲ್ಲವೇ? ಇದು ನಮ್ಮ ಪ್ರಶ್ನೆ ಇರುವುದು. ಎಲ್ಲಿ ಹಿಂದುಳಿದಿದೆ, ಅಲ್ಲಿ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ನೂರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರಲ್ಲಾ, ನೂರು ಕೋಟಿ ರೂಪಾಯಿಗಳಿಗೆ ಎಷ್ಟು ಕಿಲೋ ಮೀಟರ್ ರಸ್ತೆಯಾಗುತ್ತದೆ. ನಬಾರ್ಡ್ ಲೆಕ್ಕದ ಪ್ರಕಾರ ಐದು ಲಕ್ಷ ರೂಪಾಯಿಗಳಂತೆ ಒಂದು ಕಿಲೋ ಮೀಟರ್ ಎಂದು ತೆಗೆದುಕೊಂಡರೂ ಒಂದು ಕೋಟಿ ರೂಪಾಯಿಗೆ 20 ಕಿಲೋ ಮೀಟರ್ ಆಗುತ್ತದೆ. 100 ಕೋಟಿ ರೂಪಾಯಿಗಳಿಗೆ ಎರಡು ಸಾವಿರ ಕಿಲೋಮೀಟರ್ ಆಗುತ್ತದೆ. ನೂರು ಕೋಟಿ ರೂಪಾಯಿ ಹಾಕಿದರೆ ಇಡೀ ಮಂಡ್ಯ ಜಿಲ್ಲೆಯ ಎಲ್ಲಾ ಕಡೆ ಟಾರ್ ರೋಡ್ ಆಗುತ್ತದೆ. ಮತ್ತೆ ಇನ್ನೆಲ್ಲಿ ಮಾಡುತ್ತೀರಿ? ಅವರ ಕೈಯಲ್ಲಿ ಕೊಡುವುದಕ್ಕಾಗುವುದಿಲ್ಲ. ನಮಗೆ ಗೊತ್ತಿದೆ. ಸುಮ್ಮನೆ ಹೇಳಿದದಾರೆ. ಇವೆಲ್ಲಾ ಸ್ಲೋಗನ್ ಇಟ್ಟಿರುವುದು 4 ಕೋಟಿ ರೂಪಾಯಿ. ಆ 4 ಕೋಟಿಯೂ ಬಿಡುಗಡೆಯಾಗುವುದಿಲ್ಲ. ನಿಮಗೆ ಒಂದು ಉದಾಹರಣೆಯನ್ನು ಹೇಳಿಬಿಡುತ್ತೇನೆ. ಈ ಸರ್ವ ಶಿಕ್ಷಣ ಅಭಿಯಾನ ಎಂದು ಹೇಳಿ ಅದಕ್ಕೆ ಕೇಂದ್ರ ಸರ್ಕಾರದವರು 28 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣವನ್ನೂ ಬಳಸಿ ಕೊಳ್ಳುತ್ತಾರೆ. ನೌಕರದಾರರಿಗೆ ಪಗಾರವನ್ನು

ಕೊಡುತ್ತಾರೆ. ಎಲ್ಲಿ ಅಭಿವೃದ್ಧಿ ಆಗುವುದು? ಕೋಲಾರದಲ್ಲಿ ನಿಮಗೆ ಹೇಗೆ ನೀರು ಬರುವುದು? ಕುಡಿಯುವುದಕ್ಕೆ ನೀರು ನಮಗೂ ನಿಮಗೂ ಇಲ್ಲದಂತಾಗುತ್ತದೆ. ಇಂಥ ಸ್ಥಿತಿಯನ್ನು ಈ ಸರ್ಕಾರ ಮಾಡುತ್ತದೆ. ಈ ಕಾರಣದಿಂದ ಹೇಳುತ್ತಿದ್ದೇನೆ, ಈಗಲೇ ಎಚ್ಚರಿಕೆಯಾಗಿರಿ ಎಂದು. ನೀವು ಇನ್ನೆಷ್ಟು ದಿವಸ ಇರುತ್ತೀರೋ ಏನೋ ಗೊತ್ತಿಲ್ಲ. ಇನ್ನೂ ಎರಡೂವರೆ ವರ್ಷ ಇರುತ್ತೀರಿ; ಇರಲಿ ನೀವು ಹೋಗುವುದು ನಮಗೆ ಬೇಕಾಗಿಲ್ಲ. ಆಗಿಂದಾಗ್ಗೆ ಚುನಾವಣೆಗಳನ್ನು ಮಾಡಿದರೆ ದೇಶ ಹಾಳಾಗಿ ಹೋಗುತ್ತದೆ. ಅದನ್ನು ನಾವು ಒಪ್ಪಿವುದಿಲ್ಲ. ಆದರೆ ನಾನು ಹೇಳುವುದು, ಈಗಿನಿಂದಲೇ ಪ್ಲಾನ್ ಮಾಡಿಕೊಳ್ಳಿ. ಮುಂದೆ ನೀವು ಬರಬಹುದು, ಇನ್ನೊಬ್ಬರು ಬರಬಹುದು. ಯಾರೇ ಬಂದರೂ ಕೂಡ ಈ ರಾಜ್ಯ ಉಳಿಯಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಷ್ಟು ದಿವಸ ಇರುತ್ತಾರೋ ಎಂದು ಈಗಲೇ ಶಾಪ ಹಾಕುತ್ತಿದ್ದಾರೆ. ನಮ್ಮದೇನಾದರೂ ಆಗಲಿ. ನೀವಂತೂ ಸುಧಾರಿಸಿ ಕೊಳ್ಳುವುದು ಅಥವಾ ಚೇತರಿಸಿ ಕೊಳ್ಳುವುದು ಸಾಧ್ಯವೇ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಇದು ನಮ್ಮ ಶಾಪವಲ್ಲ. ರೈತರ ಶಾಪ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಈಗಲೇ ಗೆಲುವಿನ ಹುರುಪಿನಲ್ಲಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ನಾವೇನೂ ಆ ಗೆಲುವು ಸೋಲಿಗೆ ಅಂಜೇ ಇಲ್ಲ. ನಮಗೆ ಸೋತು ಗೊತ್ತಿದೆ. ಗೆದ್ದೂ ಗೊತ್ತಿದೆ. ಬಜೆಟ್‌ನಲ್ಲಿ ಇವರು ಆದ್ಯತಾ ವಲಯಗಳು ಎಂದು ಹೇಳಿದ್ದಾರೆ. ಯಾವುದು ಆದ್ಯತಾ ವಲಯ? ಗ್ರಾಮೀಣಾಭಿವೃದ್ಧಿ ಹೋದ ಸಲ ಇವರ ಪ್ಲಾನ್ ಎಂಟು ಸಾವಿರ ಕೋಟಿ ರೂ. ಇದ್ದರೆ ಈ ಸಲ 8600-8700 ಕೋಟಿ ರೂ. ಏನೋ ಮಾಡಿದ್ದಾರೆ. ಹೋದ ಸಲ 297 ಕೋಟಿ ರೂಪಾಯಿಗಳನ್ನು ಗ್ರಾಮೀಣಾಭಿವೃದ್ಧಿಗೆಂದು ಇಟ್ಟಿದ್ದರೆ ಈ ಸಲ 236 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ನೀವು ಹಳ್ಳಿಯ ಅಭಿವೃದ್ಧಿಯನ್ನು ಮಾಡುತ್ತೀರಾ? ತಾವೇ ಹೇಳಿ. ನೊಂದ ಮನಸ್ಸಿನಿಂದ ಹೇಳಿ. ಇವರ ಕೈಯಲ್ಲಿ ಮಾಡುವುದಕ್ಕಾಗುವುದಿಲ್ಲ. ಮತ್ತೆ ಕಡಿಮೆ ಮಾಡುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹಾಳಾಗಿ ಹೋಗಿದೆ. ಇವರಿಗೆ ಬರೀ ನಗರ ಪ್ರದೇಶಗಳೇ ಕಾಣುತ್ತಿವೆಯೇ? ಸಿಟಿಯಲ್ಲೂ ಏನೂ ಇಲ್ಲ. ಸುಮ್ಮನೆ ಬಾಯಿಲ್ಲಿ ಹೇಳುತ್ತಾರೆ ಅಷ್ಟೆ. ಶಕ್ತಿ ಮೂಲಗಳೆಂದರೆ ಏನು? 945 ಕೋಟಿ ರೂಪಾಯಿಗಳನ್ನು ಇಟ್ಟಿದ್ದನ್ನೂ 892 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಅದರಲ್ಲೂ ಕೂಡ ಇಳಿಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶಕ್ತಿ ಮೂಲಗಳೆಂದರೆ ಜೆ.ಹೆಚ್. ಪಟೇಲರ ಭಾಷೆಯಲ್ಲಿ ಹೇಳಬೇಕಾದರೆ ಅದು ಷಾಕ್ ಕೊಡುವ ಡಿಪಾರ್ಟ್‌ಮೆಂಟ್ ಎರಡರ ಬಗ್ಗೆ ಅವರು ಹೇಳಿದರು. ಒಂದು ಎಕ್ಸೈಸ್ ಇಲಾಖೆ. ಕಿಕ್ ಕೊಡುವ ಡಿಪಾರ್ಟ್‌ಮೆಂಟ್ ಇನ್ನೊಂದು ಶಕ್ತಿ ಮೂಲವೆಂದರೆ ಷಾಕ್ ಕೊಡುವ ಡಿಪಾರ್ಟ್‌ಮೆಂಟ್.

ಶ್ರೀ ಎಸ್.ಎಸ್. ಪಾಟೀಲ್ : ಕೈಗಾರಿಕೆ ಖನಿಜಗಳಿಗೆ 277 ಕೋಟಿ ರೂ. ಇದ್ದುದ್ದನ್ನು 209 ಕೋಟಿ ರೂಪಾಯಿ ಮಾಡಿದ್ದಾರೆ. ಶಿಕ್ಷಣ, ಕ್ರೀಡೆ, ಕಲೆ, ಸಂಸ್ಕೃತಿ ಇವುಗಳಿಗೆ 544 ಕೋಟಿ ರೂ.ಗಳನ್ನು ಹೋದ ಸಲ ಇಟ್ಟಿದ್ದರೆ ಈ ವರ್ಷ 463 ಕೋಟಿ ರೂ.ಗೆ ಇಳಿಸಿದ್ದಾರೆ. ನೂರು

ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆ. ಶಿಕ್ಷಣ, ಕಲೆ, ಸಂಸ್ಕೃತಿ ಇವುಗಳು ಬಹಳ ಮಹತ್ವದ್ದು ಇದೆ. ಇದಕ್ಕೂ ಕಡಿಮೆ ಮಾಡಿದರು. ಇನ್ನು ಆರೋಗ್ಯ. ನಮ್ಮ ಮಾನ್ಯ ಮಿತ್ರರು ನಿನ್ನೆ ಮಾತನಾಡುವಾಗ ಎಲ್ಲಾ ಡಾಕ್ಟರ್‌ಗಳನ್ನು ತುಂಬಿದ್ದಾರಂತೆ, ಎಲ್ಲಾ ಆಸ್ಪತ್ರೆಗಳೂ ಉದ್ಧಾರವಾಗಿವೆಯಂತೆ. ಎಲ್ಲಾ ಔಷಧಿಗಳೂ ಹೆಚ್ಚಾಗಿವೆಯೆಂತೆ ಎಂದು ಹೇಳಿದರು. ನಮಗಾದರೂ ಕಳುಹಿಸಿ. ಇಲ್ಲಿ ಆರೋಗ್ಯದ ಬಗ್ಗೆ ಎಷ್ಟು ಕಡಿಮೆ ಮಾಡಿದ್ದಾರೆ ಎಂದರೆ ಇವತ್ತು ಆರೋಗ್ಯದ ಬಗ್ಗೆ ಎಷ್ಟು ಮಹತ್ವ ಇದೆ ಎನ್ನುವುದೇ ಗೊತ್ತಿಲ್ಲವೇ? ಹಳ್ಳಿಗಾಡಿನಲ್ಲಿ ಎಷ್ಟು ತೊಂದರೆ ಇದೆ? ಒಬ್ಬ ಡಾಕ್ಟರೂ ಇಲ್ಲ, ನರ್ಸ್ ಇಲ್ಲ. ಔಷಧಿಗಳೇ ಇಲ್ಲ. ಆದರೆ ಮಾಡಿರುವುದೇನೆಂದರೆ ಹೋದ ಸಲ 268 ಕೋಟಿ ರೂ. ಇಟ್ಟಿದ್ದರೆ ಈ ವರ್ಷ 192 ಕೋಟಿ ರೂ.ಗೆ ಇಳಿಸಿದ್ದಾರೆ. ಆಮೇಲೆ ನೀರು ಸರಬರಾಜು ಕುಡಿಯುವ ನೀರಿನ ಬಗ್ಗೆ ಭಾರಿ ಹಣ ಕೊಡುತ್ತೇವೆ, ಹಾಗೆ ಹೀಗೆ ಎಂದೆಲ್ಲಾ ಹೇಳುತ್ತಾರೆ. ಹೋದ ವರ್ಷ ಇಟ್ಟಿದ್ದೇ ಇವರಿಗೆ ಕೊಡಲಿಕ್ಕಾಗಲಿಲ್ಲ. 610 ಕೋಟಿ ರೂ.ಗಳನ್ನು ಹೋದ ವರ್ಷ ಇಟ್ಟಿದ್ದರೆ ಈ ಸಲ 529 ಕೋಟಿ ರೂ.ಗೆ ಇಳಿಸಿದ್ದಾರೆ. ಇವೆಲ್ಲಾ ಆದ್ಯತಾ ವಲಯಗಳು. ಪ್ರತಿ ದಿವಸ ಬೇಕಾಗಿರುವಂಥವು. ಆಮೇಲೆ ನಮ್ಮ ಕಾಗೋಡು ತಿಮ್ಮಪ್ಪ ನವರ ಖಾತೆ, ತಾವು ನೋಡಿದ್ದೀರೋ ಇಲ್ಲವೋ? ಎಷ್ಟು ಕಡಿಮೆ ಮಾಡಿದ್ದಾರೆ, ನೀವು ಹೇಳಬೇಕು. ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ ಎಂದು ಹೇಳಿ 127 ಕೋಟಿ ರೂ.ಗಳನ್ನು ಹೋದ ಸಲ ಇಟ್ಟಿದ್ದರೆ ಅದನ್ನು 94 ಕೋಟಿ ರೂ.ಗೆ ಇಳಿಸಿದ್ದಾರೆ. ನೋಡಿ ಹೇಗಿದೆ? ಕಾರ್ಮಿಕರಿಗೆ ಉದ್ಯೋಗ ಕೊಡುವುದಕ್ಕೆ 1880 ಕೋಟಿ ರೂ.ಗಳನ್ನು ಇಟ್ಟಿದ್ದರೆ ಈ ಸಾರಿ 1530 ಕೋಟಿ ರೂ.ಗಳಿಗೆ ಇಳಿಸಿದ್ದಾರೆ. ಆದ್ಯತಾ ವಲಯಗಳಿಗೆಲ್ಲಾ ಕಡಿಮೆ ಮಾಡಿದ್ದಾರೆ. ಸಾಮಾನ್ಯ ಸೇವೆಗಳಿಗೆ ಕಡಿಮೆ ಮಾಡಿದ್ದಾರೆ. ಪ್ಲಾನ್ ಸೈಜ್‌ಗೆ ಮಾತ್ರ ಹೆಚ್ಚು ತೋರಿಸುತ್ತಾರೆ. ಈ ರೀತಿಯಾದರೆ ಗ್ರಾಮೀಣಾಭಿವೃದ್ಧಿ ಆಗುವ ಬಗೆ ಹೇಗೆ? ಇವರ ಕಡೆಯಿಂದ ಆಗುವುದಕ್ಕೆ ಸಾಧ್ಯವಿಲ್ಲ. ಈ ಕಾರಣದಿಂದ ನಾನು ಇವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ನೀವು ಈಗಾಗಲೇ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡು ಮುಖ್ಯಮಂತ್ರಿಗಳು ಮಾಡಬೇಕಾಗುತ್ತದೆ. ಉದಾ:ಗೆ ಕೇರಳ ಮುಖ್ಯಮಂತ್ರಿಗಳು ತೆಗೆದುಕೊಂಡಿರುವುದನ್ನು ನೋಡಿ. ಇವರ ಸರ್ಕಾರ ಬಹಳ ಒಳ್ಳೆಯದು ಇದೆಯೆಂದು ಇವರು ಹೇಳುತ್ತಾರೆ. ಬಹಳ ಚೆಂದಾಗಿದೆಂದು ಹೇಳಿದ್ದಾರೆ. ಆ ಶಬ್ದ ನಮಗೆ ಹೇಳುವುದಕ್ಕೆ ಬರುವುದಿಲ್ಲ. ಶಬ್ದ ಮಾತ್ರ ಬಹಳ ಸುಂದರವಾಗಿರುತ್ತವೆ. "ಕರ್ನಾಟಕ ರಾಜ್ಯವು ಆರ್ಥಿಕ ಕೌಶಲ್ಯಕ್ಕೆ ರಾಷ್ಟ್ರೀದಲ್ಲಿಯೇ ಖ್ಯಾತಿ ಗಳಿಸಿದೆ" ಎಂದು ಪತ್ರಿಕೆಗಳಲ್ಲಿ ಬಂದಿದೆ. ಇನ್ನು ಒಂದು ಆದರೆ ವರ್ಷ, ಎರಡು ವರ್ಷದಲ್ಲಿ ಪಗಾರ ಕೊಡಲು ಸಹ ಹಣ ಇಲ್ಲದಂತಾಗುತ್ತದೆ. ಎರಡೇ ವರ್ಷ ಕಾಯ್ದೆ ನೋಡಿ ಈಗಲೇ ಪಗಾರವನ್ನು ಕೊಟ್ಟಿಲ್ಲ. ನಮ್ಮ ಕಡೆಗೆ ಕೆಲವು ಅರ್ಜಿಗಳೆಲ್ಲಾ ಬಂದಿವೆ. ಮೂರು-ನಾಲ್ಕು ತಿಂಗಳಿಂದ ಪಗಾರ ಬಂದಿಲ್ಲವೆಂದು ಅರ್ಜಿಗಳು ಬಂದಿವೆ. ಈ ರೀತಿಯಾದರೆ ರಾಜ್ಯದ ಅಭಿವೃದ್ಧಿಯನ್ನು ಹೇಗೆ ಸರಿ ಮಾಡುತ್ತೀರಿ? ರೈತರನ್ನೇನು ಉಳಿಸುತ್ತೀರಿ? ಆ ಕಾರಣದಿಂದ ಈಗಲೇ ಎಚ್ಚರವಾಗಿ ಪ್ರತಿಯೊಂದು ಹಂತದಲ್ಲೂ ಕೂಡ ಕಟ್ ಮಾಡಿ. ಆಮೇಲೆ ಇವರು ಮಿತವ್ಯಯ ಸಾಧಿಸುವುದಿಲ್ಲ ಎಂದು ನಾನು ಹಿಂದೆ ಹೇಳಿದ್ದೆ. 43 ಜನ ಮಂತ್ರಿಗಳು ಏಕೆ ಬೇಕು? ಆರ್ಥಿಕ ಪರಿಸ್ಥಿತಿ ಸರಿ ಇದ್ದರೆ ನೂರು ಮಂದಿ ಮಾಡಿಕೊಳ್ಳಿ. ಬೇಡ ಎನ್ನುವುದಿಲ್ಲ. ಮಂತ್ರಿಗಳಿಗೆ ಭತ್ಯೆ ಕೊಡುವುದಕ್ಕೆ ರೊಕ್ಕ ಇಲ್ಲದಿರುವ ಸ್ಥಿತಿ ಇರುವಾಗ ಜಿಲ್ಲೆಗೊಬ್ಬರು ಮಂತ್ರಿಗಳು ಸಾಕು. ಒಬ್ಬರು ಮುಖ್ಯಮಂತ್ರಿ ಸಾಕು. ಆಮೇಲೆ ಎನ್‌ಜಿಇಎಫ್‌ಗೂ

ಅಧ್ಯಕ್ಷರನ್ನು ಮಾಡಿದ್ದಾರೆಂದು ಕಾಣುತ್ತದೆ. ಮಾನ್ಯ ತಿಮ್ಮಪ್ಪನವರಿಗೆ ಗೊತ್ತು. ಅದನ್ನು ಆಚೆ ಕಡೆ ಮುಚ್ಚುವುದಕ್ಕೆ ಹೊರಟು ಈಚೆ ಕಡೆ ಅಧ್ಯಕ್ಷರನ್ನು ಮಾಡಿದ್ದಾರೆ. ಆಮೇಲೆ ಅವರೆಲ್ಲಾ ಕ್ಯಾಬಿನೆಟ್ ರ್‍ಯಾಂಕ್ ಎಲ್ಲಾ ಕ್ಯಾಬಿನೆಟ್ ರ್‍ಯಾಂಕ್ ಎಲ್ಲರೂ ಕ್ಯಾಬಿನೆಟ್ ಮಿನಿಸ್ಟರ್ಸ್ ಕೆಂಪು ದೀಪ ಏನು ಇದೆಯಲ್ಲಾ, ಶಾಸಕರೊಬ್ಬರನ್ನು ಬಿಟ್ಟು ಎಲ್ಲರೂ ಹಚ್ಚಿಕೊಳ್ಳುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಎಂಎಲ್‌ಎ ವಿತ್ ಕ್ಯಾಬಿನೆಟ್ ರ್‍ಯಾಂಕ್ ಎಂದು ಕೊಟ್ಟು ಬಿಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ : ಎಲ್ಲಾ ಆಡಳಿತ ಪಕ್ಷದ ಶಾಸಕರನ್ನು ವಿತ್‌ಔಟ್ ಪೋರ್ಟ್ ಫೋಲಿಯೋ ಮಂತ್ರಿಗಳನ್ನಾಗಿ ಮಾಡಿಬಿಟ್ಟರೆ ಇನ್ನೂ ಒಳ್ಳೆಯದಾಗುತ್ತದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೇ, ನಿಮ್ಮ ಸರ್ಕಾರವಿದ್ದಾಗ ಎಷ್ಟು ಜನ ಮಂತ್ರಿಗಳನ್ನಾಗಿ ಮಾಡಿದ್ದಿರಿ, ಎಷ್ಟು ಜನ ಬೋರ್ಡ್ ಛೇರ್ಮೆನ್‌ಗಳನ್ನಾಗಿ ಮಾಡಿದ್ದಿರಿ. ಮಾತನಾಡಬೇಕಾದರೆ ನೈತಿಕವಾಗಿ ತಮಗೆ ಬೆಂಬಲವಿರಬೇಕು. ನಿಮ್ಮ ಸರ್ಕಾರದಲ್ಲಿ ನೀವು ಆಡಳಿತ ಮಾಡಿಬಿಟ್ಟಿರಿ. ನಿಮಗೆ ಬೇಕಾದವರನ್ನೆಲ್ಲಾ ನೇಮಕ ಮಾಡಿಕೊಂಡುಬಿಟ್ಟಿರಿ. ಅಧಿಕಾರವನ್ನೂ ಅನುಭವಿಸಿಬಿಟ್ಟಿರಿ. ಈಗ ಬೇರೆಯವರು ಬೋರ್ಡ್‌ಗೆ, ಕಾರ್ಪೋರೇಷನ್‌ಗೆ ಅಧ್ಯಕ್ಷರನ್ನು ಮಾಡಿದರೆ ನಿಮಗೆ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಯಾವುದೇ ವಿಷಯ ಪ್ರತಿಪಾದನೆ ಮಾಡ ಬೇಕಾದರೂ ನೈತಿಕವಾಗಿ ಬೆಂಬಲವಿರಬೇಕು.

ಅಧ್ಯಕ್ಷರು : ಮಾನ್ಯ ಪಾಟೀಲರೇ, ಈಗಾಗಲೇ 20 ನಿಮಿಷವಾಯಿತು.

10.50 ಪಿ.ಎಂ.

ಶ್ರೀ ಎಸ್.ಜಿ. ನಂಜಯ್ಯನ ಮಠ್: ನಿಮಗೆ ಮಾತನಾಡಲು 99 ಬೋರ್ಡ್‌ಗಳನ್ನು ಮಾಡಿದ್ದೀರಿ. ನಿಮ್ಮ ಕಾಲದಲ್ಲಿ 500 ಜನರನ್ನು ಬೋರ್ಡ್ ಕಾರ್ಪೋರೇಷನ್‌ಗೆ ಡೈರೆಕ್ಟರ್ ಮಾಡಿದರು. ನಿಮಗೆ ಮಾತನಾಡಲು ಯಾವ ನೈತಿಕ ಹಕ್ಕು ಇದೆ? ಆಗ ಆರ್ಥಿಕ ಪರಿಸ್ಥಿತಿ ಬಗ್ಗೆ ಗಮನಕ್ಕೆ ಬರಲಿಲ್ಲ. ಇದು ಆರ್ಥಿಕ ಪರಿಸ್ಥಿತಿ ಸರ್ಕಾರ ದಿವಾಳಿ ಆಗಿದೆ ಎನ್ನುವುದು ನಿಮ್ಮ ಗಮನಕ್ಕೆ ಬರಲಿಲ್ಲ?

(ಗೊಂದಲ)

ಶ್ರೀ ಅಮರೇಗೌಡ ನಿಂಗನಗೌಡ ಬಯ್ಯಾಪುರ್: ಟ್ರೆಷರಿ ಬ್ಯಾನ್ ಆಗಿರಲಿಲ್ಲ. ಇವರ ಕಾಲದಲ್ಲಿ ಟ್ರೆಷರಿ ಎಷ್ಟು ದಿವಸ ಬ್ಯಾನ್ ಆಗಿದೆ ಎಂದು ಕೇಳಿ.

(ಗೊಂದಲ)

ಶ್ರೀ ಎಸ್.ಜಿ. ನಂಜಯ್ಯನಮಠ್: ಇವರು ವಿಧವಾ ವೇತನ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ಈಗಾಗಲೇ ನಿಮ್ಮ ಸಮಯದಲ್ಲಿ 20 ನಿಮಿಷ ಆಗಿದೆ. ಇನ್ನು ಹತ್ತು ನಿಮಿಷ ಮಾತನಾಡಲು ಅವಕಾಶ ಕೊಡುತ್ತೇನೆ. ಅರ್ಧ ಗಂಟೆ ಆಯಿತು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಆ ಇಂಟರ್‌ಫಿಯರೆನ್ಸ್ ಆದದ್ದನ್ನು ಲೆಕ್ಕ ಇಡಿ. ಇಲ್ಲದೇ ಹೋದರೆ ನಾನೇನು ಮಾಡಲಿ?

ಅಧ್ಯಕ್ಷರು : ನೀವು ಇಂಟರ್‌ಫೆಯರ್ ಆಗುವ ಹಾಗೆ ಮಾತನಾಡುತ್ತೀರಲ್ಲಾ?

ಶ್ರೀ ಎಸ್.ಎಸ್. ಪಾಟೀಲ್ : ಮತ್ತೆ ನಾನು ಮಾತನಾಡಬೇಕಲ್ಲಾ. ನೀವು ಹಾಗೆ ಹೀಗೆ ಎಂದು ಹೇಳಿಕೊಂಡು ಕುಳಿತರೆ ನಾವು ಶಂಖ ಹೊಡೆಯುವುದಕ್ಕೆ ಬಂದಿದ್ದೇವಾ ಇಲ್ಲಿಗೆ?

ಅಧ್ಯಕ್ಷರು : ನೀವು ಮುಂದುವರಿಸಿ.

ಶ್ರೀ ಎಸ್.ಎಸ್. ಪಾಟೀಲ್ : ಅವರೇನು ಹೇಳುತ್ತಾರಲ್ಲಾ, ನಿಮ್ಮ ಕಾಲದಲ್ಲಿ ಇತ್ತು. ನೀವೂ ಹಾಗೆಯೇ ಮಾಡಿದ್ದೀರಿ, ಎಂದು ನಮ್ಮ ಕಾಲಕ್ಕೆ ಇಷ್ಟು ಕಷ್ಟ ಇದ್ದಿಲ್ಲ. ಆದರೂ ಕೂಡ ಮಾಡಿದ್ದು ಸರಿ ಎಂದು ನಾನು ಹೇಳುವುದಿಲ್ಲ. ನಾವು ಹಾಗೆ ಮಾಡಿದ್ದಕ್ಕೇನೇ ನಮ್ಮನ್ನು ಆಚೆ ಕಡೆಗೆ ಕಳುಹಿಸಿ ಕಡೆಗೆ ನಿಮ್ಮನ್ನು ಕೂರಿಸಿದ್ದಾರೆ. ನಮ್ಮನ್ನು ಈಚೆ ಕಡೆಗೆ ಕೂರಿಸಿದ್ದಾರೆ. ನಾವು ಸುಧಾರಿಸುತ್ತೇನೆಂದು ಹೇಳಿ ಅಧಿಕಾರಕ್ಕೆ ಬಂದಿದ್ದೀರಿ. ಇಷ್ಟೆಲ್ಲಾ ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದ್ದೀರಲ್ಲಾ, ಮಾಡಿದ್ದೀರಾ? ಇದನ್ನು ಹೇಳುತ್ತಿದ್ದೇನೆ, ಉಳಿಸಿ. ಇದೆಲ್ಲಾ ಕಟ್ ಮಾಡಬೇಕಾಗುತ್ತದೆ. ಮಂತ್ರಿಗಳನ್ನು ಕಡಿಮೆ ಮಾಡಿ. ಇದ್ದನ್ನು ಇದ್ದ ಹಾಗೆ ಹೇಳಬೇಕಾಗುತ್ತದೆ. ಯಾವುದು ಅವಶ್ಯಕವೋ ಅದನ್ನು ಮಾಡಿ. ಖಂಡಿತವಾಗಿ ಹೇಳುತ್ತೇನೆ, ಇವತ್ತು ಏನಾದರೂ ಸುದೈವದಿಂದ ನಿಮ್ಮ ಆಶೀರ್ವಾದದಿಂದ ಮುಂಡಿಸಲು ನಮ್ಮ ಮಂತ್ರಿ ಮಂಡಲ ಇದ್ದರೆ 27ಕ್ಕಿಂತ ಹೆಚ್ಚು ಜನರನ್ನು ಮಂತ್ರಿಗಳಾಗಿ ಮಾಡುವುದಿಲ್ಲವೆಂದು ಇವತ್ತೇ ಘೋಷಣೆ ಮಾಡುತ್ತೇನೆ. ನಾನು ಯಾರು ಮುಖ್ಯ ಮಂತ್ರಿ ಆಗುತ್ತಾರೆ ಅವರಿಗೆ ಹೇಳುತ್ತೇನೆ. ನಾವು ಯಾರಾದರೂ ತ್ಯಾಗ ಮಾಡುತ್ತೇವೆ. ಸುದೈವದಿಂದ ತಮ್ಮ ಆಶೀರ್ವಾದದಿಂದ ನಾವು ಅಧಿಕಾರಕ್ಕೆ ಬಂದರೆ, 27 ಜನ ಮಂತ್ರಿಗಳು ಒಬ್ಬರು ಮುಖ್ಯಮಂತ್ರಿಗಳು ಬಿಟ್ಟು ಜಾಸ್ತಿ ಮಾಡುವುದಿಲ್ಲ ಎಂದು ಇವತ್ತು ಘೋಷಣೆ ಮಾಡುತ್ತೇನೆ.

ಅಧ್ಯಕ್ಷರು : ನನ್ನ ಆಶೀರ್ವಾದ ಏಕೆ?

ಶ್ರೀ ಎಸ್.ಜಿ. ನಂಜಯ್ಯನಮಠ್ : ಹಗಲು-ಗನಸು ಕಾಣುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಭಗವಂತನ ಆಶೀರ್ವಾದದಿಂದ ಗೆದ್ದು ಬಂದರೆ.

ಅಧ್ಯಕ್ಷರು : ಭಗವಂತನ ಆಶೀರ್ವಾದ ಎಂದು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ತಮ್ಮ ಸ್ಥಾನ ಭಗವಂತನ ಸ್ಥಾನ.

ಶ್ರೀ ಜೆ.ಟಿ. ಪಾಟೀಲ್ : ತಿರುಕನ ಕನಸು, ಹಗಲು ಗನಸು.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ರೈತರಿಗೆ ಒಳ್ಳೆಯದು ಮಾಡಬೇಕು. ನಮ್ಮ ಮಾರ್ಕೆಟಿಂಗ್ ಮಿನಿಸ್ಟರ್ ಇಲ್ಲ. ಇದು ನಗೆ ಅಥವಾ ಹುಡುಗಾಟಕೆ ಮಾತಲ್ಲ. ರೈತ ಬಹಳ ಕಷ್ಟದಲ್ಲಿದ್ದಾನೆ. ಆಮೇಲೆ ಅವನಿಗೆ ಬಂದ ಮಾಲು ಮಾರಾಟ ಆಗುವುದಿಲ್ಲ. ಧಾರಣೆ ಇಲ್ಲ. ಇನ್‌ಶ್ಯೂರೆನ್ಸ್ ವಿಚಾರ ನಿನ್ನೆ ಹೇಳಿದ್ದೆ, ಮಾನ್ಯ ಮಂತ್ರಿಗಳು ಇಲ್ಲ. ಅವರು ಬರೆದು ಕೊಳ್ಳುತ್ತಾರೆಂದು ಇಲ್ಲ, ನೀವಾದರೂ ಬರೆದುಕೊಳ್ಳಿ. ಥ್ರೆಶೋಲ್ಡ್ ಯೀಲ್ಡ್ ಎಷ್ಟಿದೆ ಎಲ್ಲಾ

ಇದರಲ್ಲಿ ಹಚ್ಚಿರಿ. ಪ್ರತಿಯೊಂದು ಪಂಚಾಯಿತಿಯಲ್ಲಿ ಹಚ್ಚಿರಿ ಈ ಭಾಗದ್ದು ಎಷ್ಟು ಇದೆ ಎಂದು ಹಚ್ಚಿರಿ. ಇಲ್ಲದಿದ್ದರೆ ಆ ಇನ್‌ಶ್ಯೂರೆನ್ಸ್ ಕಂಪನಿಯವರು ಮೋಸ ಮಾಡುತ್ತಾರೆ. ಇನ್‌ಶ್ಯೂರೆನ್ಸ್ ಪೂರ್ತಿ ನಿಮಗೆ ಸಿಗುವುದಿಲ್ಲ. ಖಂಡಿತವಾಗಿ ಅವರು ಮೋಸ ಮಾಡುತ್ತಾರೆ. ಥ್ರೆಶೋಲ್ಡ್ ಯೀಲ್ಡ್ ಎಷ್ಟು ಇದೆ ಎಂದು ನೀವು ಯಾರಾದರೂ ಮಂತ್ರಿಗಳು ಗೊತ್ತಿದ್ದರೆ ಹೇಳಿ. ಯಾರಿಗಾದರೂ ಗೊತ್ತಿದೆಯೇ ಹೇಳಿ? ನಿಮ್ಮ ಥ್ರೆಶೋಲ್ಡ್ ಯೀಲ್ಡ್ ಎಷ್ಟು ಇದೆ ಎಂದು ಯಾರಿಗಾದರೂ ತಿಳಿದಿದ್ದರೆ ಹೇಳಿ? ಆದ ಏನು ಮಾಡುತ್ತೀರಿ? ಇನ್‌ಶ್ಯೂರೆನ್ಸ್ ರೈತರಿಗೆ ಸಿಗದಿದ್ದರೆ ಏನು ಮಾಡುವುದು? ಹೇಗೆ ಹಚ್ಚುವುದು? ಎಲ್ಲಿಂದ ಬರುವುದು? ಆ ಕಾರಣದಿಂದ ನಾನು ನಿನ್ನೆ ಹೇಳಿದೆ, ತಾವೂ ಹೇಳಿದಿರಿ. ತಮ್ಮ ಭಾಷೆ ನಮಗೆ ಬರುವುದಿಲ್ಲ, ನಾವು ರೆವಿನ್ಯೂ ಸರ್ಕಲ್ ಎಂದು ಹೇಳುತ್ತೇವೆ. ನೀವು ಹೋಬಳಿ ಎಂದು ಹೇಳುತ್ತೀರಿ. ಯಾವ ಹೋಬಳಿಯಲ್ಲಿ ಹಚ್ಚಿದ್ದಾರೆ ಹೇಳಿ ಬಿಡಿ? ನಿಮ್ಮ ಒಂದು ಹೋಬಳಿಯಲ್ಲಿ ಥ್ರೆಶೋಲ್ಡ್ ಯೀಲ್ಡ್ ಎಷ್ಟು ಇದೆ? ಯಾವ ಹೋಬಳಿಯಲ್ಲಿ ಹಚ್ಚಿದ್ದಾರೆ ಹೇಳಿ. ಅದಕ್ಕೆ ದಯವಿಟ್ಟು ತೀವ್ರದಲ್ಲಿಯೇ ಹಚ್ಚಬೇಕು. ಈ ಸಲ ಇನ್‌ಶ್ಯೂರೆನ್ಸ್ ಸಿಗದಿದ್ದರೆ ಜನ ಕೇಳುವುದಿಲ್ಲ. ರೈತರು ಬಹಳ ಕಷ್ಟದಲ್ಲಿದ್ದಾರೆ. ದಯವಿಟ್ಟು ತಾವೆಲ್ಲರೂ ಪ್ರಯತ್ನ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಎಪಿಎಂಸಿಗಳು ಇದ್ದಾವೆ. ಎಪಿಎಂಸಿ ಹಣ ಯಾರದ್ದು? ರೈತರ ಹಣ ತೆಗೆದುಕೊಳ್ಳಿ ಹಣ, ಸುಗೀವಾಜ್ಞೆ ಹೊರಡಿಸಿ ಬೇಡ ಎಂದು ಹೇಳುವುದಿಲ್ಲ. ರೈತರಿಗೆ ಕೊಡಿ. ನೌಕರದಾರರಿಂದ ಹಣ ಕಟ್ ಮಾಡಿ, 15-20 ಪರ್ಸೆಂಟ್ ಕಟ್ ಮಾಡಿ. ನಮ್ಮದೂ ಅಷ್ಟನ್ನು ಮೊದಲು ಕಟ್ ಮಾಡಿ. ಮೊದಲು ಮಂತ್ರಿಗಳನ್ನು ಕಡಿಮೆ ಮಾಡಿಕೊಳ್ಳಿ. ನಾವು ಕಡಿಮೆ ಮಾಡಿಕೊಂಡರೆ ಆಗ ನೌಕರದಾರರನ್ನು ಕೇಳುವುದಕ್ಕೆ ಬರುತ್ತದೆ. ಕಟ್ ಮಾಡಿ, ಒಂದು ಸಾವಿರ ಎರಡು ಸಾವಿರ ಕೋಟಿ ರೂಪಾಯಿ ರೈತರಿಗೆ ಕೊಡಿ. ಅವನು ಬೆಳೆದು ಕೊಡುತ್ತಾನೆ. ಮುಂದಿನ ವರ್ಷ ನಿಮ್ಮ ಉತ್ಪನ್ನ ಜಾಸ್ತಿ ಆಗುತ್ತದೆ. ನಿಮಗೆ ರಾಜಸ್ವ ಕಡಿಮೆ ಆಗಲು ಕಾರಣ ಏನು ಎಂದರೆ ಬೆಳೆ ಕಡಿಮೆ ಆಯಿತು. ರೈತನ ಉತ್ಪನ್ನ ಕಡಿಮೆ ಆಯಿತು. ತಂದು ಹಾಕುವುದು ಕಡಿಮೆ ಆಯಿತು. ಆದರಿಂದ ಟ್ಯಾಕ್ಸ್ ಬರುವುದು ಕಡಿಮೆ ಆಯಿತು. ಈ ಕಾರಣದಿಂದ ನಾನು ಈ ಎಲ್ಲಾ ಸಲಹೆಗಳನ್ನು ಮಾಡುತ್ತೇನೆ. ಇನ್ನು ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಬಂದರು. ಅವರು ಬರಲಿ ಎಂಬ ಕಾರಣದಿಂದ ಗ್ರಾಮೀಣ ಅಭಿವೃದ್ಧಿ ವಿಚಾರ ಹೇಳದೆ ಇದ್ದೆ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಒಂದು ಪ್ರಶ್ನೆ ಕೇಳಿದ್ದೆ. ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್, ಗ್ರಾಮ ಪಂಚಾಯತಿಗಳಲ್ಲಿ ಪರೋಕ್ಷವಾಗಿ ಸದಸ್ಯರೇ ಕಾಮಗಾರಿಗಳನ್ನು ಮಾಡುತ್ತಿರುವುದು ಹಾಗೂ ಈ ಕಾಮಗಾರಿಗಳು ಕಳಪೆ ಮಟ್ಟದಲ್ಲಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಮಾಡಿದ್ದೆ. "ಇಲ್ಲ" ಎಂದು ಅವರು ಹೇಳಿದ್ದಾರೆ. ನಿಮ್ಮ ಗಮನಕ್ಕೆ ಬಂದಿಲ್ಲವೇ? ಕಳಪೆ ಮಟ್ಟದ ಕಾಮಗಾರಿ ಆಗಿರುವುದು ನಿಮ್ಮ ನಜರಿಗೆ ಬಂದಿಲ್ಲ? ಸದಸ್ಯರು ಇಂಡೈರೆಕ್ಟಾಗಿ ಕೆಲಸ ಮಾಡುವುದು ನಿಮ್ಮ ನಜರಿಗೆ ಬಂದಿಲ್ಲವಾ? ಪ್ರಾಮಾಣಿಕವಾಗಿ ಹೇಳಿ "ಇಲ್ಲ" ಎಂದು ಉತ್ತರ ಕೊಟ್ಟಿದ್ದೀರಿ. ಅಧಿಕಾರಿಗಳು ಬರೆದು ಕಳುಹಿಸುತ್ತಾರೆ. ನೀವು ಒಂದು ಸಹಿ ಮಾಡಿ ಕಳುಹಿಸುತ್ತೀರಿ. ಆಮೇಲೆ ಮುಂದಿನ ವಿಚಾರ ಹೇಳುತ್ತೇನೆ. ಗಾಬರಿ ಆಗುವಂತಹ ವಿಚಾರವನ್ನು ಮುಂದೆ ಹೇಳುತ್ತೇನೆ. ಇದನ್ನು ತಪ್ಪಿಸಲು ಎಲ್ಲಾ ಕೆಲಸಗಳನ್ನು ಟೆಂಡರ್ ಕರೆದು ಉತ್ತಮ ಗುಣ ಮಟ್ಟದ ಕೆಲಸ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ? ಏಕೆಂದರೆ ಮಾನ್ಯ ಯಾವಗಲ್ ಅವರ ಅಧ್ಯಕ್ಷತೆಯಲ್ಲಿ

ಮಾಡಿದ್ದಂತಹ ಕಮಿಟಿಯಲ್ಲಿ ನಾವು ಈ ವಿಚಾರವನ್ನು ಹೇಳಿದ್ದೆವು. ಇದರ ಮುಖಾಂತರ ಇಲ್ಲೊಂದು ಗಾಬರಿ ಹುಟ್ಟಿಸುವಂತಹ ವಿಚಾರ ಇದೆ. ನಾನು ಓದುತ್ತೇನೆ. ಮೊನ್ನೆ ನಮ್ಮ ಗದಗ್ ಜಿಲ್ಲೆಯ ರೋಣ್ ತಾಲ್ಲೂಕಿನಲ್ಲಿ ನಡೆದಂತಹ ವಿಚಾರ. "ಜಿಲ್ಲಾ ಸದಸ್ಯರಿಂದ ಗುತ್ತಿಗೆದಾರನ ಮೇಲೆ ಹಲ್ಲೆ" ಜಿಲ್ಲಾ ಪಂಚಾಯತ್‌ಯ ಸದಸ್ಯರು ತಮ್ಮ ಬೆಂಬಲಿರೊಡನೆ ಸೇರಿಕೊಂಡು ತಾಲ್ಲೂಕು ಪಂಚಾಯತ್‌ಯ ಕಿರಿಯ ಅಭಿಯಂತರರ ಮನೆಯ ಮೇಲೆ ಕಲ್ಲು ತೂರಾಟ ನಡೆಸಿದ್ದಲ್ಲದೇ ಗುತ್ತಿಗೆದಾರನೊಬ್ಬನ ಮೇಲೆ ತೀವ್ರವಾದ ಹಲ್ಲೆ ನಡೆಸಿದ ಘಟನೆ ಗುರುವಾರ ಸಂಜೆ ರೋಣದಲ್ಲಿ ಜರುಗಿದೆ. ಇಂಥವನಿಗೆ ಕೊಡು, ನಾವು ಹೇಳಿದ ಹಾಗೆ ಮಾಡು, ನನಗೆ ಇಷ್ಟು ಪರ್ಸೆಂಟೇಜ್ ಕೊಡು ಎಂದು ಅದೆಲ್ಲವನ್ನೂ ಇಂಜಿನಿಯರ್‌ಗೆ ಹೇಳುವುದು. ಇದೆಲ್ಲಾವನ್ನೂ ಬರೆದಿದ್ದಾರೆ ಪತ್ರಿಕೆಯಲ್ಲಿ. ಅಂದರೆ ಅವರಿಗೆ ಹೊಡೆದರು. ಅವರೆಲ್ಲಾ ಜೈಲಿಗೆ ಹೋಗಿದ್ದಾರೆ ಹೊಡೆದವರು, ಮೆಂಬರ್ ತಪ್ಪಿಸಿಕೊಂಡಿದ್ದಾನೆ. ಇದು ನಡೆಯತಕ್ಕಂಥ ವ್ಯವಹಾರ ನಿಮ್ಮದು. ಇದನ್ನು ನೋಡಿದರೆ ಹೇಗೆ ತಪ್ಪಿಸುತ್ತೀರಿ? ನಾವು ಕಮಿಟಿಯಲ್ಲಿ ಅದನ್ನೇ ಹೇಳಿದ್ದೇವೆ. ಇಲ್ಲಿ ಹೇಳಿದ್ದಾರೆ, ಕಾಮಗಾರಿ ಮುಖ್ಯ ಗುತ್ತಿಗೆದಾರನ ಕೊಲೆ ವಿಫಲ ಪ್ರಯತ್ನ ಕೊಲೆಯ ಮಟ್ಟಕ್ಕೆ ಹೋಗಿದ್ದಾರೆ. ಇದನ್ನು ಹೇಗೆ ತಪ್ಪಿಸುತ್ತೀರಿ? ಈಗೇನು ಜಿಲ್ಲಾ ಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ಏನು ದುಡ್ಡು ಕೊಡುತ್ತೇವೆ, ತಾವು ದುಡ್ಡು ಕೊಡುತ್ತಿದ್ದೀರಿ. ನಿಜವಾಗಿಯೂ ಕಳೆದ ಸಲ ತಾವು ಹೆಚ್ಚಿಗೆ ಮಾಡಿದ್ದೀರಿ, ಸಂತೋಷ ಈ ಸಲ ಮಾಡಲಿಲ್ಲ, ಮಾಡತ್ತೇವೆಂದು ಹೇಳಿದ್ದೀರಿ ಮಾಡುವುದಕ್ಕೆ ಆಗಿಲ್ಲ. ಅದು ಇರಲಿ, ಆ ಮಾತು ಬೇರೆ. ಆದರೆ ಕೊಟ್ಟ ದುಡ್ಡನ್ನು ನಾವು ಸಫಲವಾಗಿ ಬಳಸಿದರೆ ಹತ್ತು ವರ್ಷದಲ್ಲಿ ಈ ಗ್ರಾಮೀಣ ಪ್ರದೇಶವೆಲ್ಲಾ ಸ್ವಚ್ಛವಾಗುತ್ತವೆ. ಆ ಕಾರಣದಿಂದ ನೀವು ದಯವಿಟ್ಟು ಇದಕ್ಕೇನು ಕ್ರಮ ಕೈಗೊಳ್ಳುತ್ತೀರಿ? ಇದೆಲ್ಲಾ ಗೊತ್ತಿರುವ ಮಾತಿದೆ. ಇಂಡೈರೆಕ್ಟಾಗಿ ಅವರೇ ಕೆಲಸ ಮಾಡುತ್ತಾರೆ. ನೋಡುವವರು ಕೆಲಸ ಮಾಡಬಾರದು, ಕೆಲಸ ಮಾಡುವವರು ನೋಡಬಾರದು. ಆ ಕಾರಣದಿಂದ ಅಲ್ಲಿ ಯಾರೂ ಹೋಗಿ ನೋಡುವವರಿಲ್ಲ, ಕೇಳುವವರು ಇಲ್ಲ. ಅವನು ಇನ್ನೂ ಕಾಲಿಡುವುದರಲ್ಲಿ ಇಲ್ಲಿ ಕೆಲಸ ಮಾಡಿ ಬಿಟ್ಟಿರುತ್ತಾನೆ. ಏನು ಒಂದು ರೂಪಾಯಿ ಕೆಲಸ 50 ಪೈಸೆ 40 ಪೈಸೆಯಲ್ಲಿ ಮಾಡಿ ರೊಕ್ಕ ತೆಗೆದುಕೊಂಡಿರುತ್ತಾನೆ. ಇದರಿಂದ ಹೊಡೆದಾಟ. ಇದರ ಬಗ್ಗೆ ನೀವು ವರದಿ ತರಿಸಿಕೊಂಡು ನಾಳೆ ಉತ್ತರ ಹೇಳಿ ಏನಾಗಿದೆ ಎಂದು. ಇದರ ಪೂರ್ಣ ಚಿತ್ರವನ್ನು ಉತ್ತರದಲ್ಲಿ ಹೇಳಬೇಕು. ರೋಣ ತಾಲ್ಲೂಕ್‌ನಲ್ಲಿ ಏನೋಬ್ಬ ಗುತ್ತಿಗೆದಾರರನ್ನು ಹೊಡೆದಿದ್ದಾರೆ, ಆ ಇಂಜಿನಿಯರ್ ಅವರನ್ನು ಹೊಡಿದಿದ್ದಾರೆ ಆಮೇಲೆ ಅಲ್ಲಿಗೆ ಬಂದವರನ್ನು ಹೊಡೆದಿದ್ದಾರೆ. ಹೊಡೆದು ಎಲ್ಲರೂ ಅರೆಸ್ಟಾಗಿ ಜೈಲಿಗೆ ಬಿದ್ದಿದ್ದಾರೆ. ಯಾವ ಕಾರಣಕ್ಕಾಗಿ ನಿಮ್ಮ ಕಲಸ ಹಂಚಿಕೆಯಿಂದ ಇದು ಆಗಿದೆ ನಾನು ಹೇಳದವನಿಗೆ ಕೆಲಸ ಕೊಡಬೇಕು, ನನಗೆ ಇಷ್ಟು ಪರ್ಸೆಂಟ್ ಕೊಡಬೇಕು. ನನಗೆ ಏನೋ ಆಗಬೇಕು. ಇವೆಲ್ಲಾ ವಿಚಾರ ಇದೆ. ನಮ್ಮ ರೋಣದಲ್ಲಿ ಇದೆ. ಇದರಂತೆ ರಾಜ್ಯದ ತುಂಬಾ ನಡೆದಿವೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ತಾವು ಕ್ರಮ ತೆಗದುಕೊಳ್ಳಬೇಕು ಸುಮ್ಮನೆ "ಇಲ್ಲ" ಎಂದು ಹೇಳಿ ಉತ್ತರ ಕೊಟ್ಟರೆ ಅಲ್ಲ. ಸುಮ್ಮನೇ ಇಲ್ಲ ನಮಗೆ ಗೊತ್ತಿಲ್ಲ ಎಂದು ಒಂದು ಮಾತು ಹೇಳಿ ಬಿಟ್ಟರೆ ಹೇಗೆ? ನಿಮಗೆ ಹೀಗೆ ನಡೆದಿದೆ ಎನ್ನುವುದು ಗೊತ್ತಿದೆ. ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವಾ? ಹೀಗೆ ನಡೆದಿದೆ ಎನ್ನುವುದು ತಮಗೆ ಗೊತ್ತಿದೆ. ಮಾನ್ಯ ಮಂತ್ರಿಗಳಿಗೆ ಈ ಎಲ್ಲಾ ಇಂಡೈರೆಕ್ಟ್ ಕೆಲಸ ಮಾಡುವುದು ಗೊತ್ತಿಲ್ಲವಾ?

ಶ್ರೀ ಎಂ.ವೈ. ಘೋರ್ಪಡೆ: (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಅವರ ಆಪ್ತರು ಇದ್ದರೆ ಕೆಲಸ ಮಾಡಬಾರದು ಎಂದು ಹೇಳಿ ಕಾನೂನು ಇರುವುದು. ಅದರ ಪ್ರಕಾರ ಜನರು ನಡೆದುಕೊಳ್ಳುತ್ತಾರೋ ಇಲ್ಲವೋ ಎಂದು ನೋಡಲಿಕ್ಕೆ ತಾವೆಲ್ಲರೂ ಇದ್ದೀರಿ. ಆದಕಾರಣ ನಾನು ಇಲ್ಲಿ ಕುಳಿತುಕೊಂಡು ನನಗೆ ಗೊತ್ತಿದೆ ಎಂದು ಕೇಳಿದರೆ ನ್ಯಾಯವಾದದ್ದು ಅಲ್ಲ. ಪಾರದರ್ಶಕವಾಗಿ ಕೆಲಸಗಳು ನಡೆಯಲಿ ಎಂಬುದೇ ನಮ್ಮ ಉದ್ದೇಶವಿದೆ. ಪಾರದರ್ಶಕತೆ ಇಲ್ಲದೇ ಇದ್ದರೆ ಈ ರೀತಿ ಆಗುತ್ತವೆ. ಮೊದಲು ಎಲ್ಲಾ ಕೆಲಸ ಟೆಂಡರ್ ಬೇಸಿಸ್ ಮೇಲೆ ಇರಬೇಕು ಎಂದು ಇತ್ತು. ಟೆಂಡರ್ ಬೇಸಿಸ್ ಮೇಲೆ ಇದ್ದಾಗ ಇಂಥದ್ದು ಆಗಲಿಕ್ಕೆ ಕಡಿಮೆ ಅವಕಾಶ ಇತ್ತು. ಅದರ ವಿರುದ್ಧ ಕೂಡ ಜನ ಮಾತನಾಡಿದರು. ಟೆಂಡರ್ ಇರುವುದರಿಂದ ತಕ್ಷಣ ಟೆಂಡರ್ ಕರೆಯಲಿಕ್ಕೆ ಆಗುವುದಿಲ್ಲ. ಯಾವ ಕೆಲಸವೂ ಹಳ್ಳಿಗಳಲ್ಲಿ ನಡೆಯುತ್ತಿಲ್ಲ ಎಂಬ ಕೂಗು ಎಲ್ಲಾ ಕಡೆಗಳಿಂದ, ಎಲ್ಲಾ ಪಕ್ಷಗಳಿಂದ ಬಂತು. ಆ ಮೇಲೆ ಇದೇ ಕಾರಣಕ್ಕಾಗಿ ಐದು ಲಕ್ಷದ ರೂ ವರೆಗೆ ಟೆಂಡರ್ ಕರೆಯಬೇಕಾದ್ದು ಇಲ್ಲ ಎಂದು ಹೇಳಿ ನಮ್ಮ ಸರ್ಕಾರ ಒಂದು ನಿರ್ಧಾರಕ್ಕೆ ಬಂತು. ಈ ನಿರ್ಧಾರಕ್ಕೆ ಬಂದಮೇಲೆ ಈ ರೀತಿ ಆಪ್ತರು ಕೆಲಸ ಮಾಡುತ್ತಾರೆಂದು ಹೇಳಿ ತಾವು ದೂರು ಹೇಳುವುದಾದರೆ ಯಾವ ಪದ್ಧತಿಯನ್ನೂ ನಾವು ಅನುಸರಿಸಬೇಕು ಎಂಬುದನ್ನು ತಾವು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಯಾವ ನೀತಿ ಅನುಸರಿಸಬೇಕು ಎಂದು ಹೇಳುವುದು ಯಾರೋ ಒಬ್ಬ ಹೊಸದಾಗಿ ಬಂದ ಮಂತ್ರಿ ಆಗಿದ್ದರೆ ನಾನು ಹೇಳಬಹುದು. ನಮ್ಮಲ್ಲಿ ಒಂದು ಗಾದೆ ಇದೆಯಲ್ಲಾ. "ಆರು ಆಡಗಿತು, ಮುಂದೆ ಮೂರು ಹೊಡೆದು ಹಾಕಿ ಮುರಕ ಬರೆದ ಹಾಗೆ ಆಗುತ್ತದೆ" ಘೋರ್ಪಡೆಯವರಿಗೆ ಹೇಳಿದರೆ ಹಾಗೆ ಆಗುತ್ತದೆ. ನೀವು ಹಿರಿಯ ಸಚಿವರು ಇದ್ದೀರಿ. ನೀವು ಆರ್ಥಿಕ ಸಚಿವರಾಗಿ ಹೋದವರು. ಈ ರಾಜ್ಯದಲ್ಲಿ ಏನು ನಡೆಯುತ್ತದೆ ಎಂಬುದು ಗೊತ್ತಿದೆ. ದೇವರಾಜ್ ಅರಸ್ ಅವರ ಕಾಲದಲ್ಲಿ ಇದ್ದವರು ನಿಮಗೆ ಅನುಭವ ಇದೆ ಎಂದು ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ. ನಿಮಗೆ ಗೊತ್ತಿದ್ದರೂ ಸುಳ್ಳು ಹೇಳಿದ ಹಾಗೆ ಆಗುತ್ತದೆ. ಪ್ರಾಮಾಣಿಕವಾಗಿ ಹೇಳಿರಿ ಎಂದು ಹೇಳಲಿಕ್ಕೆ ಹೊರಟಿದ್ದೇನೆ. ನಿಮ್ಮ ಮನಸ್ಸಿನಲ್ಲಿ ತಪ್ಪು ಹೇಳಿದ ಹಾಗೆ ಆಗುತ್ತದೆ. ತಾವು ಗೊತ್ತಿದ್ದು ಹೇಳದಿದ್ದರೆ ನೀವು ಆತ್ಮವಂಚನೆ ಮಾಡಿಕೊಂಡು ಹೇಳಿದ ಹಾಗೆ ಆಗುತ್ತದೆ, ಈ ಕಾರಣದಿಂದ ಹೇಳುತ್ತೇನೆ. ನಿಮಗೆ ಗೊತ್ತಿದೆ. ಆದರೆ ಹೇಳಲಿಕ್ಕೆ ಆಗುವುದಿಲ್ಲ ಎಂದು ಹೇಳಿಲ್ಲ ಎಂದು ಹೇಳಿದರು. ನನಗೆ ಗೊತ್ತಿದೆ, ಆದರೆ ಉತ್ತರದಲ್ಲಿ ಹೇಳುವುದಕ್ಕೆ ಆಗುವುದಿಲ್ಲ, ಆ ಕಾರಣದಿಂದ ಬರೆದಿದ್ದೇನೆ ಎಂದು ಹೇಳಿ. ಇದನ್ನು ಒಪ್ಪಿಕೊಳ್ಳೋಣ. ಇದು ನನಗೆ ಗೊತ್ತಿಲ್ಲ, ಇದು ನನಗೆ ತಿಳಿದೇ ಇಲ್ಲ ಎಂದು ಹೇಳಿದರೆ, ಇದು ಎಲ್ಲರಿಗೂ ತಿಳಿದಂತಹ ಸಾರ್ವತ್ರಿಕ ಸತ್ಯವಾದಂತಹ ಮಾತು. ಆಮೇಲೆ ತಾವು ಹೇಳಿದಿರಿ.

ಶ್ರೀ ಡಿ.ಆರ್. ಪಾಟೀಲ್: ನಿಮ್ಮ ಕಾಲದಲ್ಲಿ ಆಗಿದ್ದನ್ನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಇವರಿಗೆ ಒಂದು ಹುಚ್ಚು ಹಿಡಿದು ಬಿಟ್ಟಿದೆ. ಏಕೆಂದರೆ ನಿಮ್ಮ ಕಾಲದಲ್ಲಿ ಆಗಿದ್ದಿಲ್ಲವೇನು ಎಂದು ಹೇಳಿತ್ತಾರೆ. ಏನು ನಾವೆಲ್ಲಾ ಬಸವಣ್ಣನವರ ಕಾಲದಲ್ಲಿ ಇದ್ದೇವೇನು? ನಾನು ಇಲ್ಲ ಎಂದು ಹೇಳಲೇ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ತುಂಡು ಗುತ್ತಿಗೆ ತಂದವರೇ ನೀವು.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಬಂದ್ ಮಾಡಿದರೂ ನಾವು.

ಶ್ರೀ ಡಿ.ಆರ್. ಪಾಟೀಲ್ : ಅದನ್ನು ಹಾಳು ಮಾಡಿದವರು ನೀವು.

ಶ್ರೀ ಎಸ್.ಎಸ್. ಪಾಟೀಲ್: ನಾವು ಹಾಳು ಮಾಡಿದ್ದೇವೆಂದು ನೀವೂ ಹಾಳು ಮಾಡವವರು ಇದ್ದಿರೇನು?

(ಗೊಂದಲ)

ಶ್ರೀ ಚಂದ್ರಣ್ಣ : ಅದಕ್ಕೇ ನಾವು ಇಲ್ಲಿದ್ದೇವೆ.

ಅಧ್ಯಕ್ಷರು: ನೀವು ಛೇರ್‌ಗೆ ಅಡ್ರೆಸ್ ಮಾಡಿ ಮಾತನಾಡಿ. ತಾವು ಮಾತನಾಡುವುದಕ್ಕೆ ಪ್ರಾರಂಭಿಸಿ 35 ನಿಮಿಷ ಆಯಿತು.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ನಾನು ಈಗ ಬಹುಶಃ ಹೇಳಿದೆನೆಲ್ಲಾ ರಸ್ತೆ ರಿಪೇರಿ ವಿಚಾರ. ನಮ್ಮವೂ ಹಾಗೆಯೇ ಆಗಿವೆ. ಇವರಂತೂ ನಬಾರ್ಡ್‌ನಿಂದ ರಸ್ತೆ ಮಾಡಿದರು. ನಬಾರ್ಡ್‌ನಿಂದ ದುಡ್ಡು ಖರ್ಚು ಮಾಡಿ ರಸ್ತೆ ಅವನು ಮಾಡಿದರೆ ಆ ರಸ್ತೆಗಳಿಗೆ ರಿಪೇರಿ ಮಾಡಲು ರೊಕ್ಕ ಇಲ್ಲ ನೀವು ರಿಪೇರಿಗೂ ರೊಕ್ಕಇಟ್ಟಿದ್ದೇವೆಂದು ಹೇಳಿದಿರಿ ಒಂದು ಕಿಲೋ ಮೀಟರ್‌ಗೆ 7690 ರೂಪಾಯಿ ಇಟ್ಟಿದ್ದೀರಿ. ಅಂದರೆ, ಒಂದು ಕಿಲೋಮೀಟರ್‌ಗೆ ಸುಮಾರು ಎಂಟು ಸಾವಿರ ರೂಪಾಯಿಗಳಷ್ಟು ಹಣವನ್ನು ನಿಗದಿಪಡಿಸಿದ್ದು, ಈ ಹಣವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದರೂ ಇನ್ನೂ ಬಿಡುಗಡೆ ಮಾಡಿರುವುದಿಲ್ಲ. ಹಣ ಬಿಡುಗಡೆಯಾಗದಿದ್ದರೆ ರಸ್ತೆ ದುರಸ್ತಿ ಮಾಡುವುದಾದರೂ ಹೇಗೆ? ನಬಾರ್ಡ್ ನೆರವಿನಿಂದ ನಿರ್ಮಿಸಿರುವ ರಸ್ತೆಗಳೂ ಸಹ ಹಾಳಾಗಿ ಹೋಗುವುದರಿಂದ ದಯವಿಟ್ಟು ದುರಸ್ತಿ ಕಾರ್ಯ ಕೈಗೊಳ್ಳಬೇಕು. ತಾವು ಹಿರಿಯ ಸಚಿವರಾಗಿರುವುದರಿಂದ ತಮಗೆ ಒಂದು ಮಾತನ್ನು ಹೇಳುತ್ತಿದ್ದೇನೆ: ಏನೆಂದರೆ, ಕೇಂದ್ರ ಸರ್ಕಾರದವರು ನೀಡಿರುವ ಅನುದಾನದಲ್ಲಿ 250 ಕೋಟಿ ರೂಪಾಯಿಗಳಷ್ಟು ಹಣವನ್ನು ಬಳಸಿಕೊಂಡಿರುವುದಿಲ್ಲವೆಂದು ನಿನ್ನೆ ಹೇಳಿರುವುದನ್ನು ಕೇಳಿದ್ದೇನೆ. ಈ 250 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಿಲ್ಲ. ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿರುವ ಹಣ ಎಲ್ಲೆಲ್ಲಿ ಬಳಕೆಯಾಗದೆ ಉಳಿದಿದೆ ಎಂಬುದರತ್ತ ತಾವು ಗಮನಹರಿಸಬೇಕು. 250 ಕೋಟಿ ರೂಪಾಯಿಗಳೆಂದರೆ ಇದೇನೂ ಸಣ್ಣ ಅಂಕಿಯಲ್ಲ. ಈ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನವರು ನಿಮ್ಮ ಚೀಫ್ ಸೆಕ್ರೆಟರಿಯವರಿಗೆ ಹೇಳಿ ಕಳುಹಿಸಿದ್ದಾರೆ. ಈ ಕಾರಣದಿಂದಲಾದರೂ ತಾವು ಇತ್ತ ಗಮನಹರಿಸಬೇಕಾಗುತ್ತದೆ. ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯಗಳಲ್ಲೊಂದು. ಈ ಸರ್ಕಾರ ಏನು ಮಾಡುತ್ತಿದೆಯೆಂದರೆ, ಇವೊತ್ತು ಕುಡಿಯುವ ನೀರಿನ ಎಲ್ಲಾ ಯೋಜನೆಗಳಿಗೂ ಜನರು ಹತ್ತು ಪರ್ಸೆಂಟ್‌ನಷ್ಟು ಹಣವನ್ನು ತುಂಬಬೇಕೆಂದು ಹೇಳುತ್ತಿದೆ. ನನ್ನ ಕ್ಷೇತ್ರದಲ್ಲಿ ಸುಮಾರು 2 ಕೋಟಿ 33 ಲಕ್ಷ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡಿದ್ದು, ಅಲ್ಲಿ ಲಭ್ಯವಾಗುವ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದರಿಂದ ಜನರಿಗೆ ಕುಡಿಯುವ ನೀರು ಲಭ್ಯವಿಲ್ಲದಂತಾಗಿದೆ. ಯೋಜನೆ ಅನುಷ್ಠಾನಗೊಳಿಸಲು ಜನರಿಗೆ ಶೇಕಡ 10ರಷ್ಟು ಹಣ ತುಂಬಿಕೊಂಡಿರೆಂದು ಕೇಳಿದರೆ ಅವರು

ಹಣವನ್ನು ಎಲ್ಲಿಂದ ತುಂಬಿಕೊಡುತ್ತಾರೆ? ಈ ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಇಂತಹ ಯೋಜನೆಗಳಿಗೆ ಉಚಿತವಾಗಿ ಗ್ರಾಂಟ್ ನೀಡುತ್ತಿತ್ತು. ಇಡೀ ರಾಜ್ಯಾದ್ಯಂತ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಜನರು ಶೇಕಡ ಹತ್ತರಷ್ಟು ಹಣವನ್ನು ತುಂಬುವುದಕ್ಕಾಗುವುದಿಲ್ಲ. ತಾವು ನೀಡಿರುವ ಉತ್ತರದಲ್ಲಿ ಪರಿಶೀಲಿಸಲಾಗುವುದು ಎಂದು ತಿಳಿಸಿರುವುದರಿಂದ ದಯವಿಟ್ಟು ಪರಿಶೀಲಿಸಿ ಜನರಿಗೆ ಕೂಡಲೇ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಶೇಕಡ ಹತ್ತರಷ್ಟ ಹಣವನ್ನು ಜನರು ತುಂಬಲು ಸಾಧ್ಯವೆಂದು ಎಲ್ಲಾ ಕ್ಷೇತ್ರಗಳ ಶಾಸಕರು ಪಕ್ಷಾತೀತವಾಗಿ ಹೇಳಿಬಿಡಲಿ. ಒಂದು ವೇಳೆ ಆ ರೀತಿ ಯಾರಾದರೂ ಹೇಳಿದಲ್ಲಿ ಅವರಿಗೇ ಕೊಟ್ಟುಬಿಡಿ. ಇದು ಯಾರಿಂದಲೂ ಸಾಧ್ಯವಿಲ್ಲ. ಈ ಕಾರಣಕ್ಕಾಗಿ ಶೇಕಡ ಹತ್ತರಷ್ಟು ಹಣವನ್ನು ಜನರು ತುಂಬಬೇಕೆಂದು ಏನು ಹೇಳಿದ್ದಾರೆ, ಅದನ್ನು ಕಡಿಮೆಮಾಡಬೇಕು. ನಿಮ್ಮ ಸಚಿವ ಸಂಪುಟದ ಸದಸ್ಯರೊಬ್ಬರು ಇತ್ತೀಚೆಗೆ ನೀಡಿರುವ ಹೇಳಿಕೆಯನ್ನು ಗಮನಿಸಬೇಕು. "ಭ್ರಷ್ಟಾಚಾರದ ವಿಕೇಂದ್ರೀಕರಣ ಗ್ರಾಮೀಣಾಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡುವ ಶೇಕಡ 80 ರಷ್ಟು ಹಣ ಸೋರಿಕೆಯಾಗಿ ಕೇವಲ 15 ರಷ್ಟು ಮಾತ್ರ ಅಭಿವೃದ್ಧಿಗಾಗಿ ವ್ಯಯವಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಸ್ವತಃ ರಾಜ್ಯದ ಒಬ್ಬ ಸಚಿವರೇ ಒಪ್ಪಿಕೊಂಡಿದ್ದಾರೆ. ತುಮಕೂರು ಜಿಲ್ಲೆ ಮಧುಗಿರಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಭಾಗವಹಿಸಿದ ಉನ್ನತ ಶಿಕ್ಷಣ ಸಚಿವರಾದ ಡಾ॥ ಜಿ. ಪರಮೇಶ್ವರರವರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದುಡಿಯುತ್ತಿರುವ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಆತ್ಮವಿಮರ್ಶೆ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ". ಅವರು ಸುಳ್ಳು ಹೇಳಿಲ್ಲ ಹಾಗೂ ಅವರು ಹೇಳಿರುವುದು ತಪ್ಪು ಎಂದೂ ಹೇಳಿವುದಿಲ್ಲ. ಈ ಹೇಳಿಕೆ ಕುರಿತು ತಾವು ಏನು ಹೇಳುತ್ತೀರಿ? ಈ ವಿಚಾರ ತಮಗೆ ಗೊತ್ತಿಲ್ಲವೆಂದು ಹೇಳುತ್ತೀರಾ? ಇದು ಸಚಿವರಿಗೆ ಗೊತ್ತಾದದ್ದು ಹೇಗೆ? ಕ್ಯಾಬಿನೆಟ್‌ನಲ್ಲಿರುವವರಿಗೆ ಇದು ಗೊತ್ತಾಗಬೇಕಲ್ಲಾ. ಎಲ್ಲಾ ಕೆಟ್ಟದ್ದನ್ನು ಹೇಳದೆ ಇನ್ನೂ ಒಂದೆರಡು ಒಳ್ಳೆಯ ವಿಚಾರಗಳನ್ನೂ ಹೇಳಬೇಕಾಗುತ್ತದೆ.

ಶ್ರೀ ಎಂ.ವೈ.ಘೋರ್ಪಡೆ: ನಮ್ಮ ಮಂತ್ರಿಗಳು, ಶಾಸಕರುಗಳು ಏನು ಹೇಳುತ್ತಿದ್ದಾರೆಂದರೆ, ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಬಹಳಷ್ಟು ಸೋರಿಹೋಗುತ್ತಿತ್ತು. ಈಗ ಅದು ಕಡಿಮೆಯಾಗಿದೆಯೆನ್ನುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಇನ್ನು ಬಹಳ ಮಹತ್ವವೆನಿಸಿರುವ ಶಿಕ್ಷಣವನ್ನು ಕುರಿತು ಹೇಳಬೇಕಾಗುತ್ತದೆ. "ಕೇರಿ ಕೇರಿಗೂ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯುವ" ಕುರಿತಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಉತ್ತರ ನೀಡಿದ್ದಾರೆ. ಕರ್ನಾಟಕ ಇಂಗ್ಲೇಂಡ್ ಆಗಿದೆಯೇ? ಅಯ್ಯೋ ಶಿವಾ! ನಿಮ್ಮನ್ನು ಹೇಳುವವರು, ಕೇಳುವವರು ಯಾರೂ ಇಲ್ಲವೇ? ಶಿಕ್ಷಣ ಸಚಿವರು ಈ ರೀತಿ ಹೇಳಿರುವುದಕ್ಕೆ ನಿಮಗೆ ಸಿಟ್ಟು ಬರುವುದಿಲ್ಲವೇ?

ಶ್ರೀ ಕೆ.ಎಚ್. ರಂಗನಾಥ್: ಸಿಟ್ಟು ಏಕೆ ಬರಬೇಕು?

ಶ್ರೀ ಎಸ್.ಎಸ್. ಪಾಟೀಲ್: ತಾವು ಪ್ರಾಂಜಲ ಮನಸ್ಸಿನಿಂದ ಹೇಳಬೇಕು. ನೀವು ಇದನ್ನು ಒಪ್ಪುತ್ತೀರಾ? ಈ ರಾಜ್ಯದಲ್ಲಿ ಕೇರಿ ಕೇರಿಗೂ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯುತ್ತೀರಾ? ಮೊದಲು ನೀವು ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿದ್ದರೂ ಈಗ ನಿಮಗೆ ಇಂಗ್ಲೀಷ್ ಭಾಷೆ

ಬರುವುದಿಲ್ಲವೇ? ತಾವು ಪ್ರಾಮಾಣಿಕವಾಗಿ ಹೇಳಬೇಕು. ನಾವು ಕನ್ನಡ ಮಾಧ್ಯಮದಲ್ಲಿ ಏಳನೇ ತರಗತಿವರೆಗೆ ಓದುವ ತನಕ ನಮಗ್ಯಾರಿಗೂ ಇಂಗ್ಲೀಷ್ ಅಂಕೆಗಳಾಗಲೀ, ಅಕ್ಷರಗಳಾಗಲೀ ಗೊತ್ತಿರಲಿಲ್ಲ. ಅದೇ ರೀತಿ ನೀವೂ ಕಲಿತಿದ್ದೀರಿ. ನಿಮಗೆ ಈಗ ಇಂಗ್ಲೀಷ್ ಬರುವುದಿಲ್ಲವೇ? ಕೇರಿ ಕೇರಿಗೂ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲಾಗುವುದೆಂದು ಶಿಕ್ಷಣ ಸಚಿವರಾದ ಶ್ರೀ ಹೆಚ್. ವಿಶ್ವನಾಥ್‌ರವರು ಹೇಳಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲ್ ಅವರಿಗೆ ಕನ್ನಡದ ಮೇಲಿನ ವ್ಯಾಮೋಹ ಕಂಡು ನಮಗೂ ಸಂತೋಷವಾಗಿದೆ. ಆದರೆ, ಆಂಗ್ಲ ಭಾಷೆಯ ಮೇಲೆ ವಿರೋಧ ಬೇಡ. ಆಂಗ್ಲ ಭಾಷೆಯನ್ನು ವಿರೋಧಿಸಿದಂತೆ ಮಾತನಾಡುವುದು ಬೇಡ. ಎಲ್ಲಾ ಭಾಷೆಗಳನ್ನು ಕಲಿಯುವುದರಲ್ಲಿ ತಪ್ಪೇನೂ ಇಲ್ಲ. ನಾವೂ ಕೋಲಾರದವರಾಗಿದ್ದು ನೂರಕ್ಕೆ ನೂರರಷ್ಟು ನಮಗೆ ಕನ್ನಡ ಬರುತ್ತದೆ. ಬದಲಿಗೆ ಬೇರೆ ಭಾಷೆ ಕಲಿಯಬಾರದು, ಮಾತನಾಡಬಾರದೆನ್ನುವ ಅಂಧತ್ವವೇನಿದೆ, ದಯವಿಟ್ಟು ಈ ಅಂಧತ್ವವನ್ನು ಯಾರೂ ಬೆಳೆಸಿಕೊಳ್ಳಬಾರದು.

ಶ್ರೀ ಎಸ್.ಎಸ್. ಪಾಟೀಲ್ : ಇಂಗ್ಲೀಷ್ ಭಾಷೆ ಬರಬಾರದು, ಅದನ್ನು ಗೇಲಿ ಮಾಡಬೇಕೆಂದು ನಾನು ಹೇಳಿದೆನೇ? ಅದನ್ನು ಕಲಿಯಬಾರದೆಂದು ಹೇಳಿದೆನೇ? ಮಾನ್ಯ ಹಿರಿಯ ಸಚಿವರಾದ ಶ್ರೀ ರಂಗನಾಥ್‌ರವರಿಗೆ ಏನು ಹೇಳಿದೆ? ನೀವು ಪ್ರಾರಂಭದಿಂದ ಏಳನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ಓದಿದ್ದರೂ ನಿಮಗೆ ಈಗ ಇಂಗ್ಲೀಷ್ ಬರುವುದಿಲ್ಲವೇ ಎಂದು. ಇಂಗ್ಲೀಷ್ ಬೇಕು. ಆದರೆ, ಕನ್ನಡ ಭಾಷೆಯನ್ನು ಹಾಳು ಮಾಡಿ ಇಂಗ್ಲೀಷ್ ಭಾಷೆಯನ್ನು ಕಲಿಯಬಾರದು. ಇಂಗ್ಲೀಷ್ ಬೇಕೇ ಬೇಕು, ಅದು ಅಂತರಾಷ್ಟ್ರೀಯ ಭಾಷೆ. ಕನ್ನಡ ಭಾಷೆ ಉಳಿಯಬೇಕು. ಇಂಗ್ಲೀಷ್ ಕಲಿಯುವ ವ್ಯಾಮೋಹದಿಂದ ಕನ್ನಡ ಇಂದು ಹಾಳಾಗಿ ಹೋಗಿದೆ.

ಅಧ್ಯಕ್ಷರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಆಂಗ್ಲ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲಾಗುವುದೆಂದು ಹೇಳಿದ್ದಾರಷ್ಟೆ. ಇನ್ನೂ ಪ್ರಾರಂಭ ಮಾಡಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರು ಅಷ್ಟು ಜವಾಬ್ದಾರಿ ತೆಗೆದುಕೊಂಡರೆ ಸಾಕು. ನಮಗೆ ಈ ಬಗ್ಗೆ ಖಾತರಿಯಾಯಿತು. ಆದರೆ ಸಾಹಿತಿಗಳು ಹೇಳಿದ್ದರಿಂದ ಮುನ್ನೂರು ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯುವುದಕ್ಕೆ ಮುಖ್ಯಮಂತ್ರಿಗಳು ಸ್ಟೇ ಕೊಟ್ಟರು.

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ತಮ್ಮ ಗಮನಕ್ಕೆ ಒಂದು ವಿಷಯ ತರುವುದೇನೆಂದರೆ, ನನಗೆ ಗೊತ್ತಿರುವಂತೆ ಧಾರವಾಡ, ಬಿಜಾಪುರ, ಬೆಳಗಾಂ ಕಡೆಗಳಲ್ಲಿ ಗಂಡಿಗೆ ಮದುವೆ ಮಾಡಲು ಹೆಣ್ಣು ಹುಡುಕಲು ಹೊರಟರೆ ಇಂಗ್ಲೀಷ್ ಓದಿದವರಿಗೆ ಮಾತ್ರ ಹೆಣ್ಣು ಕೊಡುತ್ತಾರೆ. ಕನ್ನಡ ಭಾಷೆಯಲ್ಲಿ ಕಲಿತಿರುವ ಒಬ್ಬರಿಗೂ ಹೆಣ್ಣು ಕೊಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ರೈತರ ಗಂಡು ಮಕ್ಕಳಿಗೆ ಲಗ್ನ ಮಾಡಬೇಕೆಂದರೆ ಇವೊತ್ತು ಹೆಣ್ಣು ಸಿಗುವುದಿಲ್ಲ. ಏಕೆಂದರೆ, ಒಕ್ಕಲುತನದಲ್ಲಿ ಏನಿದೆ? ತಿನ್ನಲು ಕೂಳಿಲ್ಲ, ಕುಡಿಯಲು ನೀರಿಲ್ಲ. ಮತ್ತೇನು ಮಾಡುವುದು?

ಶ್ರೀ ಕೆ.ಎಚ್. ರಂಗನಾಥ್ : ಮೊದಲು ನಾನು ಕೇಳಿರುವುದಕ್ಕೆ ಉತ್ತರ ಹೇಳಿ. ತಾವು ದಾರಿ ತಪ್ಪಿಸಿ ಏನೇನೋ ಮಾತನಾಡಬೇಡಿ. ರಾಯಚೂರು, ಗುಲ್ಬರ್ಗಾ, ಬೀದರ್ ಕಡೆಗಳಲ್ಲಿ ಕನ್ನಡದಲ್ಲಿ ಓದಿರುವ ಗಂಡುಗಳಿಗೆ ಹೆಣ್ಣು ಕೊಡುತ್ತಾರೆಯೇ?

ಶ್ರೀ ಎಸ್.ಎಸ್. ಪಾಟೀಲ್ : ಅವರು ಹೆಣ್ಣು ಕೊಡುವುದಿಲ್ಲವೆಂದರೆ ಬಂದ್ ಮಾಡೋಣವೇ? ಕೊಡಬಾರದೆಂದು ಆದೇಶ ಹೊರಡಿಸೋಣವೇ! ಇಂಗ್ಲೀಷ್ ಬಾರದಿರುವ ಯಾರಿಗೂ ಹೆಣ್ಣು ಕೊಡತಕ್ಕದ್ದಲ್ಲವೆಂದು ಆದೇಶ ಹೊರಡಿಸಿಬಿಡಿ! ಇಂಗ್ಲೀಷ್ ಬಾರದಿರುವ ಯಾರಿಗೂ ಹೆಣ್ಣು ಕೊಡಬಾರದೆಂಬುದು ವಿಶ್ವನಾಥರ ಆದೇಶ! ಅದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ಕನ್ನಡ ಉಳಿಸಿ, ಕನ್ನಡ ಬೆಳೆಸಿ, ಇಂಗ್ಲೀಷ್ ಕಲಿಸಿ; ಬೇಡವೆಂದು ಹೇಳುವುದಿಲ್ಲ. ನನ್ನ ಮಾತನ್ನು ನೀವು ತಪ್ಪಾಗಿ ಅರ್ಥೈಸಿಕೊಂಡು ಹೇಳುತ್ತಿದ್ದೀರಿ. ಇವೊತ್ತು ಇಂಗ್ಲೀಷ್ ಬೇಕು, ಇದು ಅಂತರರಾಷ್ಟ್ರೀಯ ಭಾಷೆಯಾಗಿದ್ದು ಬೇಕಾಗುತ್ತದೆಂದು ಹೇಳುತ್ತೇನೆ. ಜರ್ಮನಿಯವರಿಗೆ ಮತ್ತು ರಷ್ಯಾದವರಿಗೆ ಇಂಗ್ಲೀಷ್ ಬರುವುದಿಲ್ಲ. ಹಾಗೆಂದು ಆ ದೇಶ ಉದ್ಧಾರವಾಗಿಲ್ಲವೇ? ನಮಗೆ ಇಂಗ್ಲೀಷ್ ಬಳುವಳಿಯಾಗಿ ಬಂದಿದೆ. ಇತ್ತೀಚೆಗೆ ತುಮಕೂರಿನಲ್ಲಿ ಜರುಗಿದಂಥ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ।। ಯು.ಆರ್. ಅನಂತಮೂರ್ತಿಯವರು ಮಾತನಾಡುತ್ತಾ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸದಿದ್ದರೆ ಅದು ಕೇವಲ ಅಡಿಗೆ ಮನೆಯ ಭಾಷೆಯಾಗಿ ಉಳಿಯುತ್ತದೆ. ಎಂದಿದ್ದಾರೆ. ಆದರೆ, ಕನ್ನಡ ಇವೊತ್ತು ಅಡಿಗೆ ಮನೆ ಭಾಷೆಯಾಗಿಯೂ ಉಳಿದಿಲ್ಲ. ಅಲ್ಲಿಯೂ ಇಂಗ್ಲೀಷ್ ತನ್ನ ಅಧಿಪತ್ಯ ಸ್ಥಾಪಿಸಿದೆ. ನಿಮಗೆ ಹೇಳಬೇಕೆಂದರೆ, ನಿಮ್ಮ ಮೊಮ್ಮಕ್ಕಳು ನಿಮ್ಮನ್ನು ಅಜ್ಜನೆಂದು ಕರೆಯುವುದಿಲ್ಲ. ನನಗೂ ನನ್ನು ಮೊಮ್ಮಕ್ಕಳು ಅಜ್ಜನೆಂದು ಕರೆಯುವುದಿಲ್ಲ. ಮೊಮ್ಮಕ್ಕಳು ಡ್ಯಾಡಿ, ಮಮ್ಮಿ ಅಂಕಲ್, ಆಂಟಿ ಎಂದೇ ಕರೆಯುತ್ತಾರೆ. ಕನ್ನಡ ಭಾಷೆ ಅಡಿಗೆ ಮನೆಯಲ್ಲೂ ಉಳಿಯುವುದಿಲ್ಲ. ಕೇರಿ ಕೇರಿಗೂ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯುವ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಏನು ಹೇಳಿದ್ದಾರೆ, ಇರುವ ಕನ್ನಡ ಮಾಧ್ಯಮ ಶಾಲೆಗಳು ಸರಿಯಾಗಿ ನಡೆದಿರುವುದರಿಂದ ಮೊದಲು ಅದನ್ನು ಸರಿಪಡಿಸಿ. ಮಕ್ಕಳಿಗೆ ಶಾಲೆಯಲ್ಲಿ ಸರಿಯಾಗಿ ಕಲಿಸಿ. ಇಲ್ಲವೆಂದರೆ, ಕನ್ನಡ ಶಾಲೆಗಳಲ್ಲವನ್ನೂ ಆಂಗ್ಲ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಿಬಿಡಿ. ಮಾನ್ಯ ರಂಗನಾಥ್‌ರವರೇ, ನಾನು ನೋವಿನಿಂದ ಹೇಳುತ್ತಿದ್ದೇನೆ, ತಮಗೂ ಇದರ ನೋವಿದೆ ಇಂಗ್ಲೀಷ್ ಅನ್ನು ಕಲಿಯಬೇಕು ಇಲ್ಲವೆಂದು ನಾನು ಹೇಳುವುದಿಲ್ಲ ಆದರೆ ಇಂಗ್ಲೀಷ್ ಕಲಿಸುವ ರೀತಿ ಇದಲ್ಲ. ಮಾನ್ಯ ಶಾಸಕರೂ ಕೆಲವರು ಇಂಗ್ಲೀಷ್ ಕಲಿಯಲು ಪ್ರಯತ್ನಿಸುತ್ತಿದ್ದಾರೆ. ಮಾನ್ಯ ಸದಸ್ಯರಾದ ರವೀಂದ್ರನಾಥ್‌ರವರಿಗೆ ಮೊದಲು ಸರಿಯಾಗಿ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಈಗ ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ನಾವು ಕರ್ನಾಟಕದಲ್ಲಿ ಹುಟ್ಟಿದ್ದೇವೆ. ನಾವೆಲ್ಲಾ ಕನ್ನಡಮ್ಮನ ಮಕ್ಕಳು ಕನ್ನಡವನ್ನು ಕಲಿಯಬೇಕಾಗುತ್ತದೆ. ಇನ್ನು ಸಣ್ಣ ನೀರಾವರಿ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ. ಈ ಸಣ್ಣ ನೀರಾವರಿಗೆ ಹೆಚ್ಚು ಒತ್ತು ಕೊಟ್ಟಿಲ್ಲ. ನನ್ನ ಕ್ಷೇತ್ರದ ಹೂಲಿಗುಡ್ಡದಲ್ಲಿ ಒಂದು ನೀರಾವರಿ ಯೋಜನೆ ಕೈಗೊಳ್ಳಲು ಮಾನ್ಯ ಮಂತ್ರಿಗಳು ಪ್ರಯತ್ನಿಸುತ್ತಿದ್ದರೆ ಅದಕ್ಕೆ ಕೆಲವರು ಇಲ್ಲಸಲ್ಲದ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಏನು ಹೇಳಿದ್ದಾರೆಂದರೆ "ಕಾಗೆ ಒಂದಗಳು ಕಂಡರೆ ಕರೆಯದೇ ತನ್ನ ಬಳಗವನೆಲ್ಲವ, ಕೋಳಿ ಒಂದು ಗುಟುಕ ಕಂಡರೆ ಕೂಗಿ ಕರೆಯದೇ ತನ್ನ ಬಳಗವನೆಲ್ಲವ" ಈ ಕಾರಣದಿಂದ ಎಲ್ಲರೂ ಕೂಡಿಕೊಂಡು

ಹೋಗಬೇಕಾಗುತ್ತದೆ. ಬರಗಾಲದಲ್ಲಿ ಬಿದ್ದಿರುವ ಕೊಪ್ಪಳ, ಮುಂಡರಗಿ ಹಾಗೂ ಹಡಗಲಿ ತಾಲ್ಲೂಕಿನ ಜನರಿಗೆ ಒಂದು ಹೊತ್ತು ಊಟ ಮಾಡುವುದಕ್ಕೆ ಅವಕಾಶ ಮಾಡಿಕೊಡಿರೆಂದು ಕೇಳುತ್ತಿದ್ದೇವೆ. ನಿಮಗೆ ಕೆಟ್ಟದನ್ನು ಮಾಡಿ ನಮಗೆ ಕೊಡಿಯೆಂದು ಕೇಳುವುದಿಲ್ಲ ನಿಮಗಿರುವ ಹೆಚ್ಚಿನ ನೀರನ್ನು ನಮಗೆ ಕೊಡಿಯೆಂದು ಕೇಳುತ್ತಿದ್ದೇವೆ. ದಯವಿಟ್ಟು ಅದಕ್ಕೆ ಯಾರೂ ಅಡ್ಡಿ ಮಾಡಬೇಡಿ. ಇನ್ನು ಸಣ್ಣ ನೀರಾವರಿಯ ಬಗ್ಗೆ ಆ ದೇವರಿಗೇ ಗೊತ್ತು. ಈ ಬಜೆಟ್‌ನಲ್ಲಿ ಕೆಲವು ಒಳ್ಳೆಯ ಅಂಶಗಳನ್ನೂ ಹೇಳಿದ್ದಾರೆ. ಆರೋಗ್ಯದ ಬಗ್ಗೆ ಹೇಳುವುದಾದರೆ, ಬಳ್ಳಾರಿಗೆ ತಾವೇನು ಹೆಚ್ಚಿನ ಅಭಿವೃದ್ಧಿಯನ್ನೇನು ಕೊಡುತ್ತೀರಿ, ಇಲ್ಲಿ ನೋಡಿ ಸಂತಾನ ಅಭಿವೃದ್ಧಿಯಲ್ಲಿ ಬಳ್ಳಾರಿಗೆ ಅಗ್ರಪಟ್ಟ, ಇವರು ರಾಷ್ಟ್ರವಿರೋಧಿಗಳು, ಅದಕ್ಕಾಗಿ ಮೂರು ಸಾವಿರ ಕೋಟಿ ರೂ. ಹೀಗಾದರೆ ದೇಶ ಉಳಿಯುತ್ತದೆಯೇ? ಜನಸಂಖ್ಯೆ ಹೆಚ್ಚಾಗಿರುವುದರಿಂದ ಈ ಪರಿಸ್ಥಿತಿಯಾಗಿದೆ. ಆದ್ದರಿಂದ ಅವರೂ ಜನಸಂಖ್ಯೆಯನ್ನು ನಿಯಂತ್ರಣ ಮಾಡಬೇಕು. ಏಡ್ಸ್‌ನ ಬಗ್ಗೆ ಅರಿವು ಇರಬೇಕು, ವೈದ್ಯರುಗಳಿಲ್ಲದಿರುವ ಬಗ್ಗೆ ನೋಡಬೇಕು. ಮಾನ್ಯ ಅರಣ್ಯ ಸಚಿವರೇ, ನಾವು ತಮ್ಮಿಂದಲೇ ಉದ್ಧಾರವಾಗಬೇಕು. ನಾವು ಅರಣ್ಯದಿಂದಲೇ ಉದ್ಧಾರವಾಗಬೇಕು. ಅರಣ್ಯಕ್ಕಾಗಿ ಈಗ ಏನೇನೂ ಇಟ್ಟಿಲ್ಲ. ಅರಣ್ಯೀಕರಣ ಮಾಡುತ್ತಲೇ ಇಲ್ಲ. ಅರಣ್ಯ ಹೋದರೆ ಕುಡಿಯುಲು ನೀರಿಲ್ಲ. ಮಳೆ ಇಲ್ಲ, ಬೆಳೆ ಇಲ್ಲ ದೇಶ ಹಾಳಾಗಿ ಹೋಗುತ್ತದೆ. ಉಸಿರಾಟದ ತೊಂದರೆಯಿಂದ ಸಾಯುತ್ತೇವೆ. ಇಂಥ ಸ್ಥಿತಿಯಲ್ಲಿ ಅರಣ್ಯ ಇಲಾಖೆಯ ಬಗ್ಗೆ ಒಂದೂ ವಿಚಾರವನ್ನು ಹೇಳಿಲ್ಲ. ಆ ಬಜೆಟ್‌ನಲ್ಲಿ ಇದಕ್ಕಾಗಿ ಎಷ್ಟು ಹಣ ಹೆಚ್ಚು ಮಾಡಿದ್ದೇವೆ, ಎಷ್ಟು ಕೊಟ್ಟಿದ್ದೇವೆ ಎಂಬ ಬಗ್ಗೆ ಹೇಳಿಯೇ ಇಲ್ಲ. ಆದ್ದರಿಂದ ಇದರ ಬಗ್ಗೆ ತಾವು ಗಮನಹರಿಸಬೇಕು. ಗಂಗೂಬಾಯಿ ಹಾನಗಲ್ ಬಗ್ಗೆ, ಕೆ.ಹೆಚ್. ಪಾಟೀಲರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ನಿಜವಾಗಿ ನನಗೆ ಬಹಳ ಸಂತೋಷವಿದೆ. ಕೆ.ಹೆಚ್. ಪಾಟೀಲರಿಗೆ ಮಾಡಿದ ಬಗ್ಗೆ ನನ್ನ ವಿರೋಧವಂತೂ ಇಲ್ಲ, ಆದರೂ ಒಂದು ವಿಚಾರವನ್ನು ನೆನಪು ಮಾಡುತ್ತೇನೆ. ಈ ವಿಧಾನಸೌಧವನ್ನು ಕಟ್ಟಿದವರು ಕೆಂಗಲ್ ಹನುಮಂತಯ್ಯನವರು; ಈಗಿನ ಮುಖ್ಯಮಂತ್ರಿಯವರಿರಬಹುದು, ಜೆ.ಹೆಚ್. ಪಟೇಲರಿರಬಹುದು, ಎಲ್ಲರೂ ಒಳ್ಳೊಳ್ಳೆಯ ಕೆಲಸವನ್ನು ಮಾಡಿ ಹೋಗಿರಬಹುದು. ಆದರೆ ಇದನ್ನು ಕಟ್ಟಿದವರು ಯಾರು ಎಂದರೆ ಹನುಮಂತಯ್ಯನವರು ಎಂದು ಹೇಳಬೇಕಾಗುತ್ತದೆ. ಹಾಗೆಯೇ, ಈ ರಾಜ್ಯದಲ್ಲಿ ಸಹಕಾರಿ ಕ್ಷೇತ್ರವನ್ನು ಸ್ಥಾಪನೆ ಮಾಡಿದಂಥವರು ಸಿದ್ದನಗೌಡರ್‌ರವರು ಅವರ ನೆನಪನ್ನು ಮರೆಯಲು ಆಗುವುದಿಲ್ಲ ಅವರ ಹೆಸರಿನಲ್ಲಿ ಒಂದು ಪೀಠವನ್ನು ಮಾಡಲು ನಾವು ಹೊರಟಿದ್ದೆವು, ಅದನ್ನು ಮಾಡುವ ಮೊದಲು ನಮ್ಮ ಸರ್ಕಾರ ಹೋಯಿತು. ದಯಮಾಡಿ ಅದನ್ನೂ ಚಾಲು ಮಾಡಬೇಕು. ಕೆ.ಹೆಚ್. ಪಾಟೀಲರ ಪೀಠವನ್ನು ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಸಿದ್ದನಗೌಡರ್‌ರವರದ್ದಕ್ಕೂ ಆದ್ಯತೆ ಕೊಟ್ಟು ಚಾಲು ಮಾಡಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ತಾವು ಸಹಕಾರಿ ಸಚಿವರಾಗಿದ್ದಾಗ ಇದನ್ನೇಕೆ ಮಾಡಲಿಲ್ಲ? ನಾವು ಆಗ ಏನಾದರೂ ವಿರೋಧ ಮಾಡಿದ್ದೆವಾ? ಈಗ ತಮಗೆ ಇದರ ಬಗ್ಗೆ ಜ್ಞಾಪಕ ಬರುತ್ತಿದೆಯಲ್ಲಾ, ತಾವೇ ಸಹಕಾರಿ ಸಚಿವರಾಗಿದ್ದಾಗ ಜ್ಞಾಪಕ ಬರಲಿಲ್ಲವೇ? It is very bad.

ಶ್ರೀ ಎಸ್.ಎಸ್. ಪಾಟೀಲ್ : ನಾವು ಅದರ ಬಗ್ಗೆ ನೆಲಮಂಗಲದಲ್ಲಿ ಅಡಿಗಲ್ಲನ್ನು

ಹಾಕಿ ಕೆಲಸವನ್ನು ಪ್ರಾರಂಭ ಮಾಡಿದೆವು. ಅದನ್ನು ಮಾಡುವ ಮೊದಲು ನಮ್ಮ ಸರ್ಕಾರ ಹೋಯಿತು. ನಮ್ಮ ಸರ್ಕಾರ ಹೋದಮೇಲೆ ತಾವು ಬಂದಿರಿ, ಬಂದಮೇಲೆ ಅದನ್ನು ಮುಂದುವರೆಸಲಿಲ್ಲ. ಅದನ್ನೂ ಮುಂದುವರೆಸಿಯೆಂದು ಹೇಳುತ್ತಿದ್ದೇನೆ. ಕೆ.ಹೆಚ್. ಪಾಟೀಲರದನ್ನು ಈ ಕಡೆ ಮಾಡಿ, ಆ ಕಡೆ ಸಿದ್ದನಗೌಡರದನ್ನೂ ಮುಂದುವರೆಸಿ. ಇದು ನನ್ನ ವಾದ. ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ಸೇವೆ ಮಾಡಿದಂಥವರು ಅವರು. ಕೊನೆಯದಾಗಿ, ಈ ರಾಜ್ಯವನ್ನು ಉಳಿಸಬೇಕಾದರೆ ನಿನ್ನೆ ಹೇಳಿದ್ದೆನಲ್ಲಾ "ಯಾದಾಯದಾ ಅಧರ್ಮಸ್ಯ ಗ್ಲಾನಿರ್ಭವತಿ ಭಾರತ" ಎಂಬಂತೆ ಆ ಪರಮಾತ್ಮ ಪುನಃ ಹುಟ್ಟಿ ಬರಬೇಕಾಗುತ್ತದೆ, ಹಾಗಾದರೆ ಈ ರಾಜ್ಯ ಉಳಿಯುತ್ತದೆ, ಇಲ್ಲದಿದ್ದರೆ ಈ ರಾಜ್ಯ ಉಳಿಯುವುದಿಲ್ಲ, ಇಡೀ ರಾಜ್ಯವಲ್ಲ ದೇಶವೇ ಹತ್ತಿ ಉರಿಯುತ್ತದೆ. ಒಲೆಹತ್ತಿ ಉರಿದರೆ ನಿಲಬಹುದಲ್ಲದೇ ಧರೆಹತ್ತಿ ಉರಿದರೆ ನಿಲಬಹುದೇನಯಾ? ಏರಿ ನೀರುಂಬೊಡೆ, ಬೇಲಿ ಪೈರು ಮೇಯ್ದಿರೆ, ತಾಯಿಯ ಮೇಲೆ ಹಾಲೇ ಕೊಲುವಡೆ ಇನ್ನಾರಿಗೆ ದೂರಲಿ ಕೂಡಲ ಸಂಗಮ ದೇವಾ ಎಂದು ಹೇಳುತ್ತಾರೆ ಬಸವಣ್ಣನವರು ಸರ್ಕಾರ ತಾಯಿ ಇದ್ದಂತೆ, ಇದರ ಹಾಲೇ ವಿಷವಾಗಿದೆ. ಹೀಗಾದರೆ ಬದುಕುವುದು ಹೇಗೆ? ಆ ಕಾರಣದಿಂದ ಇದನ್ನು ಉಳಿಸಬೇಕೆಂದರೆ ಖಂಡಿತವಾಗಿ ಆ ಪರಮಾತ್ಮ ಪುನಃ ಹುಟ್ಟಿ ಬರಬೇಕು, ಹುಟ್ಟಿ ಬರಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸಿ ಇವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿ ಎಂದು ಹೇಳಿ, ಈ ಬಜೆಟ್‌ನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್): ಮಾನ್ಯ ಅಧ್ಯಕ್ಷರೆ, ಇಂದಿನ ಹಣಕಾಸಿನ ಇತಿಮಿತಿಗಳಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಾಕಷ್ಟು ಒತ್ತು ಕೊಟ್ಟು ಜನಪರ ಆಯವ್ಯಯವನ್ನು ಮಂಡಿಸಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರನ್ನು ಸಾಕಷ್ಟು ಪತ್ರಿಕೆಗಳು, ಜನರು ಹೊಗಳುತ್ತಿದ್ದಾರೆ. ಆದರಿಂದ ನನಗೆ ಬಹಳ ಸಂತೋಷವಾಗಿದೆ, ನಾನೂ ಅದನ್ನು ಸ್ವಾಗತ ಮಾಡುತ್ತಿದ್ದೇನೆ. ಎಲ್ಲರೂ ಇವತ್ತು ರೈತನ ಪರಿಸ್ಥಿತಿಯನ್ನು ನೋಡಿ ಚಿಂತಿತರಾಗಿದ್ದಾರೆ. ನಾವೆಲ್ಲಾ ರೈತ ಕುಟುಂಬದಿಂದ ಬಂದಂಥವರು. ಈ ಪರಿಸ್ಥಿತಿಗೆ ಬರಲು ಏನೇನು ಕಾರಣ ಎಂಬುದನ್ನು ನಾವೆಲ್ಲರೂ ಅವಲೋಕನ ಮಾಡಿ ಕೊಳ್ಳಬೇಕಾಗಿದೆ. ನಮ್ಮ ಮೊದಲಿದ್ದ ಕೃಷಿ ಪದ್ಧತಿಯೇನಿತ್ತು ಅದನ್ನು ಬಿಟ್ಟು ಪಾಶ್ಚಾತ್ಯ ವಿಜ್ಞಾನಿಗಳ ಪ್ರಭಾವಕ್ಕೆ ಒಳಗಾಗಿ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಉಪಯೋಗ ಮಾಡಿಕೊಳ್ಳುವಂಥ ಪದ್ಧತಿಯನ್ನೇನು ನಾವು ಜಾರಿಗೆ ತಂದೆವು ಇದರಿಂದ ಈ ಪರಿಸ್ಥಿತಿಗೆ ಬಂದಿದ್ದೇವೆಂದು ಎಲ್ಲರೂ ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವಂಥ ಸ್ಥಿತಿ ಬಂದಿದೆ. ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಉಪಯೋಗ ಮಾಡಿಕೊಂಡು ನಮ್ಮ ಮಣ್ಣಿನ ಫಲವತ್ತತೆಯನ್ನು ಹಾಳು ಮಾಡಿದ್ದೇವೆ. ಮೊದಲು ನಮ್ಮ ಮಲಪ್ರಭಾ ನೀರಾವರಿ ಪ್ರದೇಶದೊಳಗೆ ಒಂದು ಎಕರೆಗೆ 20 ಕ್ವಿಂಟಲ್ ವರಲಕ್ಷ್ಮಿ ಹತ್ತಿ ಬರುತ್ತಿತ್ತು. ಆದರೆ ಈಗ 3 ಕ್ವಿಂಟಲ್ ಬರುತ್ತದೆ. ಮೊದಲೇನು ರಾಸಾಯನಿಕ ಗೊಬ್ಬರ ಹಾಕುತ್ತಿದ್ದರೋ ಅದಕ್ಕಿಂತ ಹೆಚ್ಚು ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕವನ್ನು ಹಾಕಬೇಕು. ಸರ್ಪ್ಲಸ್ ಜನರೇಷನ್ ಆಗಲಾರದಂಥ ಕೃಷಿ ಪದ್ಧತಿಯನ್ನು ನಾವು ಹುಟ್ಟುಹಾಕಿಬಿಟ್ಟಿದ್ದೇವೆ. ಅದನ್ನೇ ಬೆಳೆಸುತ್ತಿದ್ದೇವೆ, ಇಷ್ಟು ಬುದ್ಧಿ ಬಂದರೂ ಪರ್ಯಾಯ ವ್ಯವಸ್ಥೆಯನ್ನು ಪ್ರೊಪಗೇಟ್ ಮಾಡುವಂಥ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ನಿಜವಾಗಿಯೂ ಇದು ಬಹಳ ದುರ್ದೈವ. ನಾವೆಲ್ಲರೂ ಸರ್ಕಾರದ ಮೇಲೆ ಒತ್ತಡ ತಂದು ಇದನ್ನು ಬದಲಾವಣೆ

ಮಾಡಲು ಪ್ರಯತ್ನ ಮಾಡಬೇಕು. ಇವತ್ತು ಈ ಸರ್ಕಾರ ತನ್ನ ಕೈಯಲ್ಲಿ ಇರತಕ್ಕ ಕೃಷಿಕರಿಗೆ ಅವರ ಉತ್ಪಾದನೆ ಹೆಚ್ಚು ಮಾಡಲು ಏನು ಮಾಡಬೇಕು? ಕೃಷಿಕರ ಬೆಳೆ ಮಾರಾಟ ಮಾಡಲು ಏನು ಮಾಡಬೇಕು? ಮಾರಾಟ ಸರಿಯಾಗದಿದ್ದರೆ ಅವರ ಉತ್ಪಾದನೆ ಸರಿಯಾಗದಿದ್ದರೆ ಏನು ಮಾಡಬೇಕು? ಇವೆಲ್ಲಾ ದೃಷ್ಟಿಕೋನದಿಂದ ಬಹಳಷ್ಟು ಯೋಜನೆಗಳನ್ನು ಕಳೆದ ಎರಡೂ, ಎರಡೂವರೆ ವರ್ಷಗಳಿಂದ ಜಾರಿಗೊಳಿಸುತ್ತಿದ್ದೇವೆ. ನಮ್ಮ ಸರ್ಕಾರ ಬಂದಮೇಲೆ ನೀರಾವರಿಗೆ ಹೆಚ್ಚು ಒತ್ತು ಕೊಟ್ಟಿದ್ದೇವೆ, ಕೆರೆ ಹೂಳು ತೆಗೆಯಲು ಹೆಚ್ಚು ಒತ್ತು ಕೊಟ್ಟಿದ್ದೇವೆ, ಇದರಿಂದ ಉತ್ಪಾದನೆಯನ್ನು ಹೆಚ್ಚು ಮಾಡಲು ಅನುಕೂಲತೆಯಾಯಿತು. ನಮ್ಮ ಬರಪೀಡಿತ ಪ್ರದೇಶಗಳಿಗೆ ಜಲಾನಯನ ಪ್ರದೇಶವನ್ನು ಹೆಚ್ಚು ಮಾಡಬೇಕು. ಅದಕ್ಕೆ ಹೆಚ್ಚಿನ ಸಂಪನ್ಮೂಲವನ್ನು ನಾವು ರೂಢಿಸಿಕೊಳ್ಳಬೇಕೆಂದು ಒಂದು ಸೆಪರೇಟ್ ಡೈರೆಕ್ಟರೇಟ್‌ನ್ನೇ ಮಾಡಿ ಜಲಾನಯನ ಅಭಿವೃದ್ಧಿ ಕೆಲಸದಲ್ಲಿ ವಿಶ್ವಬ್ಯಾಂಕ್‌ನ ಅಸಿಸ್ಟೆನ್ಸ್ ಅನ್ನೂ ಪಡೆದುಕೊಂಡು ಯೋಜನೆಗಳ ಅನುಷ್ಠಾನಗೊಳಿಸುತ್ತಿದ್ದೇವೆ. ಇದು ರೈತರಿಗೆ ಅನುಕೂಲವಾಗುವಂಥ ಕೆಲಸವಲ್ಲವೆ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್‌ನ ಅಸಿಸ್ಟೆಂನ್ಸ್ ಬರಲಿಲ್ಲ. 470 ಕೋಟಿ ರೂ. ಬರುತ್ತದೆಂದು ಕಳೆದ ಆಯವ್ಯಯದಲ್ಲೂ ಹೇಳಿದ್ದರು ಈ ಸಲವೂ ಹೇಳಿದ್ದಾರೆ. ಆ 470 ಕೋಟಿ ರೂ. ಬಂದಿಲ್ಲ, ತಾವು ಅಭಿವೃದ್ಧಿ ಗೊಳಿಸಲಾಗಿದೆಯೆಂದು ಹೇಳುತ್ತಿದ್ದಿರಿ. ಕೆರೆಗಳ ಹೂಳು ತೆಗೆಯುವುದು, ಅಭಿವೃದ್ಧಿ ಪಡಿಸುವುದಕ್ಕೆ 18 ಕೋಟಿ ರೂ. ಕೊಟ್ಟರು, ಕಳೆದ ವರ್ಷ ಅದನ್ನೂ ಕೊಟ್ಟಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ವಿಶ್ವಬ್ಯಾಂಕ್‌ನಿಂದ ಅಸಿಸ್ಟೆಂನ್ಸ್ ಪಡೆದುಕೊಳ್ಳಬೇಕಾದರೆ ಬಹಳ ಟೈಮ್ ಲ್ಯಾಗ್ ಇರುತ್ತದೆ. ಈ ಮುಖ್ಯಮಂತ್ರಿಗಳು ಉಳಿದ ಮುಖ್ಯಮಂತ್ರಿಗಳಂತೆ ಕೇವಲ ಕಾರ್ಯ ಕ್ರಮಗಳನ್ನು ಘೋಷಣೆ ಮಾಡಲಿಲ್ಲ. ಇವರು ಕಾರ್ಯಕ್ರಮ ಘೋಷಣೆ ಮಾಡಿದ ಮೇಲೆ ಅದಕ್ಕೆ ಬೇಕಾದಂಥ ಸಂಪನ್ಮೂಲಗಳನ್ನು ರೂಢಿಸುವ ಕೆಲಸವನ್ನು ಮೊದಲು ಮಾಡಿದರು, ಅದಕ್ಕೆ ಬೇಕಾಗಿರುವಂಥ ಎಲ್ಲಾ ಹಣಕಾಸು ಸಂಸ್ಥೆಗಳಿಂದ ಹಣವನ್ನು ಜೋಡಿಸಿಟ್ಟಿದ್ದಾರೆ. ಅದು ಬರುತ್ತದೆ. ಈ ವರ್ಷ ಎಲ್ಲಾ ಕಡೆ ಕೆಲಸ ಪ್ರಾರಂಭವಾಗುತ್ತದೆ. ನಮ್ಮ ಅಧಿಕಾರದ ಅವಧಿ ಇನ್ನೂ ಎರಡೂವರೆ ವರ್ಷಗಳಿದೆ. ಆ ಎರಡೂವರೆ ವರ್ಷಗಳಲ್ಲಿ ನಾವು ಏನೇನು ಕೆಲಸ ಮಾಡಬೇಕೆಂದಿದ್ದೇವೋ ಅದೆಲ್ಲವನ್ನೂ ಮಾಡುತ್ತೇವೆ. ಮುಂದೆ ಮತ್ತೆ ಐದು ವರ್ಷ ಅಧಿಕಾರ ಪಡೆದುಕೊಂಡು ನಾವು ಬರುತ್ತೇವೆ. ಆದ್ದರಿಂದ ಉತ್ಪಾದನೆ ಹೆಚ್ಚು ಮಾಡುವಂಥ ಕೆಲಸವನ್ನು ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡುತ್ತಿದೆ. ಉತ್ಪಾದನೆ ಹೆಚ್ಚಾದಮೇಲೆ ಬೆಳೆ ಬಂದಿದ್ದನ್ನು ಮಾರಾಟ ಮಾಡುವಾಗ ಏನಾದರೂ ಬೆಲೆ ಕುಸಿತವಾದರೆ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಬೇಕೆಂದು ಸುಮಾರು ನಾಲ್ಕು ನೂರು ಕೋಟಿ ರೂಪಾಯಿ ಆವರ್ತ ನಿಧಿಯನ್ನು ರೂಡಿಸಿದ್ದಾರೆ, ಅದನ್ನು ಸಾವಿರ ಕೋಟಿ ರೂ.ಗೆ ಮಾಡಬೇಕೆಂಬ ಹಂಬಲ ನಮ್ಮ ಸರ್ಕಾರಕ್ಕಿದೆ. ತಾವೂ ಕೂಡ 25 ಕೋಟಿ ರೂ. ಆವರ್ತ ನಿಧಿ ಮಾಡಬೇಕೆಂದು ಹೇಳಿದ್ದಿರಿ. ಆದರೆ ಆಗ ತಮಗೆ ಮಾಡಲು ಆಗಲಿಲ್ಲ. ನಾವು ತಮಗಿಂತ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡುತ್ತೇವೆ ಎಂಬುದನ್ನು ತಾವೆಲ್ಲರೂ ಅಪ್ರೀಷಿಯೇಟ್ ಮಾಡಬೇಕು. ಬೆಳೆ ಸಾಲದ ಬಗ್ಗೆ ಹೇಳುವುದಾದರೆ, ಅಪೆಕ್ಸ್ ಬ್ಯಾಂಕ್‌ನಿಂದ ನೇರ ಸಾಲವನ್ನು ಕೊಡಬೇಕು ಆದರೆ ಅದು ಆಗುವುದಿಲ್ಲವೆಂದು ಅವರು ಹೇಳಿದರು. 1904ರಲ್ಲಿ

ಸಹಕಾರಿ ಚಳುವಳಿ ಹುಟ್ಟು ಪಡೆಯಿತು, ಈಗ 2002, ಅಂದರೆ 98 ವರ್ಷವಾಯಿತು. ಪತ್ತಿನ ಸಹಕಾರಿ ಸಂಘಗಳನ್ನು ಪ್ರಾರಂಭ ಮಾಡಿಯೇ ಈ ಚಳುವಳಿಯ ಮೂವ್‌ಮೆಂಟ್ಸ್ ಸ್ಟಾರ್ಟ್ ಆಯಿತು. 98 ವರ್ಷದಲ್ಲಿ ಈ ಚಳುವಳಿ ಮಾಡಿದ ಸಾಧನೆ ಏನೆಂದರೆ, 17 ಪರ್‌ಸೆಂಟ್ ರೈತರಿಗೆ ಬೆಳೆ ಸಾಲ ಕೊಡುತ್ತಿತ್ತು. ಉಳಿದ 83 ಪರ್‌ಸೆಂಟ್ ರೈತರಿಗೆ ಸಹಕಾರಿ ಚಳುವಳಿಯ ಮೂಲಕ ಬೆಳೆ ಸಾಲ ದೊರೆಯುತ್ತಿಲ್ಲ. ಅದೂ ಕೂಡ ಬೆಳೆ ಸಾಲ ಸಿಗುವುದು ನಮ್ಮಂಥ ಗೌಡರಿಗೆ, ಶಾನುಭೋಗರಿಗೆ, ದೊಡ್ಡವರಿಗೆ, ಬಡವರಿಗಂತೂ ಅದು ಸಿಗುತ್ತಿಲ್ಲ. ಆದ್ದರಿಂದ ನಾವು ರೈತ ಸ್ವಸಹಾಯ ಸಂಘಗಳನ್ನು ರಚನೆ ಮಾಡಿ ಸಮಾಜದ ಎಲ್ಲಾ ವರ್ಗದ ಜನರಿಗೆ ಸಾಲ ಸಿಗುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದನ್ನು ತಾವೆಲ್ಲರೂ ಹೊಗಳಬೇಕಿತ್ತು. ಕೊನೆಯ ಪಕ್ಷ ಸಿಂಧ್ಯಾರವರಾದರೂ ಹೊಗಳಬೇಕಿತ್ತು, ಹಿಂದುಳಿದ ವರ್ಗದವರ ಬಗ್ಗೆ, ಪರಿಶಿಷ್ಟ ಜಾತಿ, ಪಂಗಡದವರ ಬಗ್ಗೆ, ಮೈನಾರಿಟಿಯವರ ಬಗ್ಗೆ ಸಾಕಷ್ಟು ಕಳಕಳಿ ಇರಂಹತಕ್ಕೆ ಜನರು ಈ ವ್ಯವಸ್ಥೆಯ ಬಗ್ಗೆ ಹೊಗಳಬೇಕಾಗಿದೆ.

11.20 ಪಿ.ಎಂ.

ರೈತ ಸ್ವಸಹಾಯ ಸಂಘದ ಮುಖಾಂತರ ಅಪೆಕ್ಸ್ ಬ್ಯಾಂಕಿನಿಂದ ನೇರವಾಗಿ ರೈತರಿಗೆ ಸಾಲ ಕೊಡುವಂತಹ ವ್ಯವಸ್ಥೆ ಬಲಗೊಂಡಲ್ಲಿ ಇನ್ನು ಐದು ವರ್ಷಗಳಲ್ಲಿ ಮೆಜಾರಿಟಿ ರೈತರಿಗೆ ಈ ವ್ಯವಸ್ಥೆ ಮುಖಾಂತರ ಸಾಲ ಸಿಗುವಂತಾಗುತ್ತದೆ. ಸಹಕಾರಿ ಸಂಘಗಳು ನಮ್ಮಂತಹವರು ಕಪಿ ಮುಷ್ಟಿಯಲ್ಲೇ ಇವೆ. ಇದು ನಮಗೂ ಗೊತ್ತಿದೆ. ನಿಮಗೂ ಗೊತ್ತಿದೆ. ನಾವು ಅದನ್ನು ಬಿಟ್ಟು ಕೊಡುವುದಿಲ್ಲ. ಅಲ್ಲಿ ಮೀಸಲಾತಿ ಬರಲಿಲ್ಲ ಎಂದರೆ, ಅವರನ್ನು ಅಲುಗಾಡಿಸಲು ಯಾರಿಗೂ ಕೂಡ ಸಾಧ್ಯವಾಗುವುದಿಲ್ಲ. ಹಾಗಾಗಿ ಅವರು ತಮಗೆ ಬೇಕಾದವರಿಗಷ್ಟೇ ಸಾಲ ಕೊಡುವಂತಹ ಒಂದು ವ್ಯವಸ್ಥೆ ಇವತ್ತು ಸಮಾಜದೊಳಗೆ ಇದೆ. ಇದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗಿದೆ. ಸಂಸ್ಥೆ ನಿಮ್ಮ ಕೈಯಲ್ಲಿರಲಿ, ನಮ್ಮ ಕೈಯಲ್ಲಿರಲಿ ನಾವು ಮಾಡುವ ಕೆಲಸ ಇದೇ. ಇದು ಬದಲಾಗಿ ಇವತ್ತು ಕೃಷಿಕರು, ಹಿಂದುಳಿದರು, ಹರಿಜನರು, ಗಿರಿಜನರು, ಮೈನಾರಿಟೀಸ್, ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಬಂದ್‌ಮೇಲೆ ಬಹಳಷ್ಟು ಮಂದಿ ಕೃಷಿಕರಾಗಿದ್ದಾರೆ. ಅವರಿಗೆ ಈ ಸಾಲದ ವ್ಯವಸ್ಥೆ ಬೇಕಾಗಿದೆ. ಆದರೆ ಅವರಿಗೆ ಸಾಲ ಸಿಗುತ್ತಿಲ್ಲ. ಅವರೆಲ್ಲಾ ಪ್ರೈವೇಟ್ ಮೂಲಗಳಿಂದ ಶೇ. 36-60ರ ದರದಲಲಲಿ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಬದಲು ಮಾಡಬೇಕಾಗದರೆ ಇಂತಹ ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕು. ಅಪೆಕ್ಸ್ ಬ್ಯಾಂಕಿನಿಂದ ನೇರವಾಗಿ ಸಾಲ ಕೊಟ್ಟರೆ ಡಿ.ಸಿ.ಸಿ ಬ್ಯಾಂಕಿಗೆ ಏನು ತೊಂದರೆಯಾಗುತ್ತದೆ? ಬೆಳೆ ಸಾಲ ಎಂಬುದು ಈಗಾಗಲೇ ಕನ್ಸೆಷನಲ್ಲಿ ಫೈನಾನ್ಸ್ ಎಂದು ತಾವು ಹೇಳುತ್ತೀರಿ. ನಾವು ಹೈಕಾಸ್ಟ್ ಮನಿ ತಂದು ಇವರಿಗೆ ಬೆಳಎ ಸಾಲ ಕೊಡುತ್ತಿದ್ದೇವೆ ಎಂದು ನೀವು ಹೇಳುತ್ತೀರಿ. ಆ ರೀತಿ ನೀವು ಕೊಡಬೇಡಿ. ನೀವು ಹೈಕಾಸ್ಟ್ ಮನಿ ತೆಗೆದುಕೊಂಡು ಹೈಯರ್ ಕಾಸ್ಟ್‌ಗೇ ಸಾಲ ಕೊಡಿ. ಕನ್ಸೆಷನಲ ರೇಟ್ಸ್‌ಗೆ ಕೊಡುವುದಕ್ಕೆ ನಾವು ಅಪೆಕ್ಸ್ ಬ್ಯಾಂಕಿನಿಂದ ನೇರವಾಗಿ ಪಡೆದುಕೊಳ್ಳುವಂತಹ ವ್ಯವಸ್ಥೆ ಮಾಡಬೇಕು. ಅಪೆಕ್ಸ್ ಬ್ಯಾಂಕ್ ಅದಕ್ಕೆ ಸಂಪನ್ಮೂಲವನ್ನು ರೂಢಿಸಿಕೊಳ್ಳುವುದಕ್ಕೆ ಸಾಧ್ಯವಿದೆ, ಅದಕ್ಕೆ ಆ ಶಕ್ತಿ ಇದೆ. ಅದನ್ನು ದಯವಿಟ್ಟು ಮಾಡಬೇಕು. ಯಾವಾಗಲೂ ಶಕ್ತಿ ಇರುವವರು ಅಬಲರ ಸಲುವಾಗಿ ಪ್ರಯತ್ನ ಮಾಡಬೇಕಾಗುತ್ತದೆ. ಈಗಾಗಲೇ ನಾವು ಪಿ.ಎಲ್.ಡಿ ಬ್ಯಾಂಕ್ ಮುಖಾಂತರ ಲಾಂಗ್

ಟರ್ಮ್ ಲೋನ್ಸ್ ಅನ್ನು ಟೂ ಟೈಯರ್‌ನಲ್ಲೇ ಕೊಡುತ್ತಿದ್ದೇವೆ. ನೇರವಾಗಿ ಅಪೆಕ್ಸ್ ಬ್ಯಾಂಕಿನಿಂದ ಪ್ರೈಮರಿ ಬ್ಯಾಂಕಿಗೇ ಇದು ಹೋಗುತ್ತದೆ. ಅದು ಶಾರ್ಟ್ ಟರ್ಮ್ ಲೋನಿಗೂ ಬರಲಿ ಎಂದು ನಾವು ಸರ್ಕಾರದ ಮೇಲೆ ಒತ್ತಡ ತಂದೆವು. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಒಪ್ಪಿಕೊಂಡು ಈ ವರ್ಷ ಅದನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿರುವುದನ್ನು ನಾವೆಲ್ಲರೂ ಸ್ವಾಗತ ಮಾಡಬೇಕು. ನಮ್ಮ ಗೌಡರು ಅದನ್ನು ಬೈದಾಗ ನಿಜವಾಗಿಯೂ ನನಗೆ ಬಹಳ ನೋವಾಯಿತು. ಅವರು ಹಿರಿಯ ಸಹಕಾರಿಗಳು. ಸಾಕಷ್ಟು ಅನುಭವ ಇರುವವರು. ಅವರು ಅದನ್ನು ಒಪ್ಪಿ ಸ್ವಾಗತ ಮಾಡಬೇಕಾಗಿತ್ತು.

ಶ್ರೀ ಎಸ್.ಎಸ್. ಪಾಟೀಲ್ : ನಾನು ಅದನ್ನು ಸ್ವಾಗತ ಮಾಡಿದ್ದೇನೆ. ಅದನ್ನು ಆಚರಣೆಗೆ ತರಬೇಕಾದರೆ ಏನು ಮಾಡಬೇಕು ಎಂದು ಹೇಳಿದ್ದೇನೆ. ಇನ್ನೂ 600 ಕೋಟಿ ರೂ.ಗಳು ಇದನ್ನು ಆಚರಣೆಗೆ ತರಲು ಬೇಕಾಗುತ್ತದೆ ಎಂದು ನಾನು ಹೇಳಿದ್ದೇನೆಯೇ ಹೊರತು ಅದನ್ನು ಬೇಡ ಎಂದು ನಾನು ಹೇಳಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಅದಕ್ಕೆ ಅಷ್ಟೊಂದು ಹಣ ಬೇಕಾಗುವುದಿಲ್ಲ. ನೀವು 1600 ಕೋಟಿ ರೂ. ಬೆಳೆ ಸಾಲ ಇದೆ ಎಂದು ಹೇಳಿದಿರಿ. 2-3 ಪರ್ಸೆಂಟ್ ಬಡ್ಡಿ ಕಡಿಮೆ ಮಾಡಬೇಕಾದರೆ 48 ಕೋಟಿ ರೂ.ಗಳು ಮಾತ್ರ ಬೇಕಾಗುತ್ತದೆ, ಅದಕ್ಕಿಂತ ಹೆಚ್ಚೇನೂ ಬೇಕಾಗಿಲ್ಲ. ಆ ಒಂದು ದಿಟ್ಟ ನಿರ್ಧಾರವನ್ನು ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಾಗ ಸಹಕಾರಿ ಚಳುವಳಿಯಲ್ಲಿ ಕೆಲಸ ಮಾಡುವವರೆಲ್ಲರೂ ಒಪ್ಪಿ ಅವರಿಗೆ ಸಹಾಯ ಮತ್ತು ಮಾರ್ಗದರ್ಶನ ಮಾಡಬೇಕು. ಅಂದಾಗ ಮಾತ್ರ ಇಂತಹ ಕ್ರಾಂತಿಕಾರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಿಕ್ಕೆ ಸಾಧ್ಯವಾಗುತ್ತದೆ. ಇದು ದಯವಿಟ್ಟು ಆಗಬೇಕು. ಈಗ ರೈತ ಮಿತ್ರ ಕೇಂದ್ರ ಮುಖಾಂತರ ಒಂದು ಸಿಂಗಲ್ ವಿಂಡೋ ಕಾನ್ಸೆಪ್ಟ್‌ನೊಳಗೆ ರೈತನಿಗೆ ಎಲ್ಲಾ ಮಾಹಿತಿ ಲಭ್ಯವಾಗಬೇಕು. ಅವನಿಗೆ ಎಲ್ಲಾ ಹೊಸ ಟೆಕ್ನಾಲಜಿ, ಲ್ಯಾಬ್ ಟು ಬ್ಯಾಂಡ್ ಪ್ರೋಗ್ರಾಮ್ಸ್ ಇವೆಲ್ಲಾ ಪೂರ್ತಿ ಅನುಷ್ಠಾನಗೊಳ್ಳಬೇಕು ಎನ್ನುವಂತಹ ದೃಷ್ಟಿಯಿಂದ ಹೋಬಳಿಗೊಂದು ರೈತ ಮಿತ್ರ ಕೇಂದ್ರಗಳನ್ನು ಮಾಡಿ ಅದರ ಮುಖಾಂತರ, ಇನ್ನು ಮೇಲೆ ಅಲ್ಲಿ ಕಂಪ್ಯೂಟರ್ ಅನ್ನು ಇಟ್ಟು, ಗಣಕೀಕರಣ ವ್ಯವಸ್ಥೆಯಿಂದ ಈಗೇನು ರೈತರಿಗೆ ಲ್ಯಾಂಡ್ ರೆಕಾರ್ಡ್ಸ್ ಸಿಗುತ್ತವೋ, ಅವೆಲ್ಲಾ ಸಿಗುವಂತಹ ವ್ಯವಸ್ಥೆ ಮಾಡಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ. ಅದನ್ನು ನಾವು ಒಪ್ಪಬೇಕಾಗುತ್ತದೆ. ಬೆಳೆದ ಮಾಲಿಗೆ ಸರಿಯಾಗಿ ಬೆಲೆ ಇಲ್ಲದಾಗ ಆವರ್ತ ನಿಧಿಯನ್ನು ಒಂದು ಸಾವಿರ ಕೋಟಿ ರೂ.ಗಳಿಗೆ ಏರಿಸಬೇಕು ಅನ್ನುವುದನ್ನು ನಾವೆಲ್ಲರೂ ಒಪ್ಪಬೇಕಾಗುತ್ತದೆ. ತಾವು ಇದ್ದಾಗಲೂ ಸಹ ಬೆಳೆ ವಿಮೆ ಮಾಡಿದ್ದಿರಿ. ಆದರೆ ಅದು ಬಹಳ ಅಲ್ಪ ಪ್ರಮಾಣದ್ದಾಗಿತ್ತು. ಇವತ್ತು ಅದು ಬಹಳ ಬೃಹತ್ ಪ್ರಮಾಣದಲ್ಲಿ ಜನರಿಗೆ ಸಿಗುವಂತಹ ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ. ಸುಮಾರು 100 ಕೋಟಿ ರೂ.ಗಳನ್ನು ಬೆಲೆ ವಿಮೆ ಪ್ರೀಮಿಯಮ್ ತುಂಬಲಿಕ್ಕಾಗಿಯೇ ತೆಗೆದಿಟ್ಟಿರುವುದನ್ನು ನಾವೆಲ್ಲರೂ ಒಪ್ಪಬೇಕಾಗುತ್ತದೆ. ಇದರ ಜೊತೆಗೆ ಇಷ್ಟೆಲ್ಲಾ ಮಾಡಿದರೂ ಸಹಿತ ನಿರಂತರವಾಗಿ ರೈತ ಮಾರುಕಟ್ಟೆ ವ್ಯವಸ್ಥೆಯೊಳಗೆ ಶೋಷಣೆಗೆ ಒಳಗಾಗುತ್ತಿದ್ದಾನೆ. ಆ ಮಾರುಕಟ್ಟೆ ವ್ಯವಸ್ಥೆ ಅನುಭವಿಸಿದವರಿಗೆ ಅದು ಗೊತ್ತಾಗುತ್ತದೆ. ಪ್ರತಿ ವರ್ಷ 700-800 ಕೋಟಿ ರೂ.ಗಳ ಹಣವನ್ನು ಗೈರು ಕಾನೂನಾಗಿ ದಲ್ಲಾಳಿಗಳು ರೈತರಿಂದ ವಸೂಲಿ ಮಾಡುತ್ತಾರೆ.

ಇದನ್ನು ನಿಲ್ಲಿಸುತ್ತೇನೆ ಎನ್ನುವಂತಹ ಒಂದು ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದ ಮುಖಾಂತರ ನಮಗೆ ಹೇಳಿದ್ದಾರೆ. ಅದನ್ನು ನಾವು ಒಪ್ಪಬೇಕಾಗುತ್ತದೆ, ಅದನ್ನು ನಾವು ಶ್ಲಾಘನೆ ಮಾಡಬೇಕಾಗುತ್ತದೆ. ಶೋಷಣಾ ರಹಿತ ಮಾರುಕಟ್ಟೆ ವ್ಯವಸ್ಥೆ, ಉತ್ಪಾದನೆಗೆ ಬೇಕಾಗ್ತವಂತಹ ಎಲ್ಲಾ ಭೌತಿಕ ಸೌಕರ್ಯಗಳನ್ನು ಒದಗಿಸುವುದು ಮತ್ತು ಕ್ರೆಡಿಟ್ ಅನ್ನು ಸಕಾಲಿಕವಾಗಿ ಕಡಿಮೆ ರೇಟ್‌ನಲ್ಲಿ ಸಿಗುವಂತೆ ಮಾಡುವಂತಹ ಈ ಕಾರ್ಯಕ್ರಮಗಳನ್ನು ನಾವು ರೈತರಾಗಿ ಒಪ್ಪಲಿಲ್ಲ ಎನ್ನುವುದಾದರೆ ಮತ್ಯಾರು ಇದನ್ನು ಒಪ್ಪುವುದಿಲ್ಲ. ಟೀಕೆ ಮಾಡುವುದೆಂದರೆ, ಯಾವಾಗಲೂ ಎಲ್ಲವನ್ನೂ ಟೀಕೆ ಮಾಡಬಾರದು. ಹೊಸ ವ್ಯವಸ್ಥೆಯನ್ನೇನು ಹುಟ್ಟು ಹಾಕುತ್ತೇವೆಯೋ ಅದನ್ನು ಸ್ವಾಗತ ಮಾಡಬೇಕಾಗುತ್ತದೆ. ಅಂತಹ ಒಂದು ಹೊಸ ವ್ಯವಸ್ಥೆಯನ್ನೂ ಹುಟ್ಟು ಹಾಕಿರುವುದನ್ನು ನಾವು ಒಪ್ಪುತ್ತೇವೆ. ಕಾಫಿ ಮಂಡಳಿ, ರೇಷ್ಮೆ ಮಂಡಳಿ ಸ್ಥಾಪನೆಯಾಗಿರುವುದರಿಂದ ಆ ಬೆಳೆಗಾರರ ಹಿತರಕ್ಷಣೆ ಮಾಡುವುದರಲ್ಲಿ ಸಾಕಷ್ಟು ಅನುಕೂಲವಾಗಿದೆ ಎನ್ನುವುದನ್ನು ಕಂಡುಕೊಂಡು ನಮ್ಮ ಉತ್ತರ ಕರ್ನಾಟಕದ ಮಳೆ ಆಶ್ರಿತ ಕೃಷಿ ಮಾಡುವಂತಹ ಜನರ ಅನುಕೂಲಕ್ಕಾಗಿ ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಜನರಿಗಾಗಿ ತೊಗರಿ ಮಂಡಳಿ ರಚನೆ ಮಾಡಲು ನಿರ್ಧರಿಸಿರುವುದನ್ನು ನಾವು ಶ್ಲಾಘನೆ ಮಾಡುತ್ತೇವೆ. ಇದರಿಂದ ನಮಗೆ ಸಾಕಷ್ಟು ಅನುಕೂಲವಾಗುತ್ತದೆ. ಹೀಗೆ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಕಮಾಡಿಟಿ ಮಂಡಳಿಗಳನ್ನು ಮಾಡಬೇಕು. ನಮ್ಮ ಕಡೆಯಲ್ಲಿ ಮೆಣಸಿನಕಾಯಿ ಬೆಳೆಗಾರರು ಸಾಕಷ್ಟು ಇದ್ದಾರೆ. ಸ್ಪೈಸ್ ಬೋರ್ಡ್ ಎಂಬುದನ್ನೇನಾದರೂ ಕರ್ನಾಟಕದಲ್ಲಿ ಮಾಡಿ, ಮೆಣಸಿನಕಾಯಿ ಬೆಳೆಗಾರರ ಹಿತರಕ್ಷಣೆ ಮಾಡಲಿಕ್ಕೆ ಸಾಧ್ಯವಾದರೆ, ಅದನ್ನೂ ಮಾಡಬೇಕೆಂದು ಕೋರುತ್ತೇನೆ. ರೈತನ ಆತ್ಮಹತ್ಯೆಗೆ ಕಾರಣವೇನು ಎನ್ನುವುದರ ಬಗ್ಗೆ ನಾವೆಲ್ಲರೂ ಚಿಂತನೆ ಮಾಡುತ್ತಿದ್ದೇವೆ. ಒಂದು ಮಾತನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ನಮ್ಮ ಕೃಷಿ ಪದ್ಧತಿ, ನೀರಾವರಿಯಿಂದ ಮೊದಲು 2-3 ವರ್ಷ ಈಗಿದ್ದ ಪದ್ಧತಿಯ ಪ್ರಕಾರ ನಾವೇನು ಸಾಕಷ್ಟು ಆದಕೂಡಲೇ, ದುರ್ದೈವದಿಂದ ಅವನ ಜೀವನ ಶೈಲಿ ಬಹಳಷ್ಟು ಬದಲಾಗಿ ಬಿಡುತ್ತದೆ. ಬಹಳಷ್ಟು ಅನಾವಶ್ಯಕವಾದ ಖರ್ಚುಗಳನ್ನು ಆತ ಆಗ ರೂಢಿಸಿಕೊಳ್ಳುತ್ತಾನೆ. ಚಟದಿಂದಾಗಲೀ, ದುಂದುಗಾರಿಕೆಯಿಂದಾಗಲೀ ಅಥವಾ ಈ ನಮ್ಮ ಚುನಾವಣಾ ವ್ಯವಸ್ಥೆಯಿಂದಾಗಲೀ ಬಹಳಷ್ಟು ತನ್ನ ಹಾಸಿಗೆ ಇದ್ದಷ್ಟು ಕಾಲು ಚಾಚುವಂತಹ ಸ್ವಭಾವವನ್ನೇ ಅವನು ಮರೆತು ಬಿಡುತ್ತಾನೆ. ಹಾಸಿಗೆ ದಾಟಿ ಕಾಲು ಚಾಚುವಂತಹ ಒಂದು ಸ್ವಭಾವವನ್ನು ನಾವು ರೂಢಿಸಿಕೊಳ್ಳುತ್ತೇವೆ. ಮುಂದೆ ಉತ್ಪಾದನೆ ಕಡಿಮೆಯಾದಾಗ ಇದನ್ನು ಹೊಂದಾಣಿಕೆ ಮಾಡಿಕೊಳ್ಳುವುದು ಬಹಳಷ್ಟು ತ್ರಾಸಾಗುತ್ತದೆ. ಆದಕ್ಕಾಗಿ ನಾವು ಅವನಿಗೆ ಹೊಸ ದಾರಿಯನ್ನು ತೋರಿಸಬೇಕು. ಹೊಸ ದಾರಿ ಎಂದರೆ, ಸಾವಯುವ ಕೃಷಿ ಮಾಡುವುದೇ ಒಂದು ಹೊಸ ದಾರಿ. ಕಳೆದ ಮೂವತ್ತು ವರ್ಷಗಳಲ್ಲಿ ಧಾರವಾಡ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ನಿರಂತರವಾಗಿ ಆದರ ಬಗ್ಗೆ ಪ್ರಯೋಗ ಮಾಡಿ ನೋಡಿದ್ದಾರೆ. ಅವರ ಪ್ರಯೋಗದ ಪ್ರತಿಫಲ ಏನೆಂದರೆ, ಸಾವಯುವ ಕೃಷಿಯನ್ನು ನಾವು ಮಾಡುತ್ತಿದ್ದಲ್ಲಿ ನಮ್ಮ ಯೀಲ್ಡ್ ಹೆಚ್ಚಾಗುತ್ತಾ ಹೋಗುತ್ತದೆ. ನಮ್ಮ ಇನ್‌ಪುಟ್ ಕಾಸ್ಟ್ ಕಡಿಮೆಯಾಗುತ್ತದೆ. ನಮ್ಮ ಸರ್‌ಪ್ಲಸ್ ಜನರೇಷನ್ ಜಾಸ್ತಿಯಾಗುತ್ತದೆ ಎನ್ನುವಂತಹ ಡಾಕ್ಯುಮೆಂಟ್ಸ್ ಅವರ ಬಳಿ ಇದೆ. ಆದರೂ ಸಹಿತ ಇವತ್ತಿಗೂ ಸಾವಯುವ ಕೃಷಿಗೆ ಮಾಡುವುದೇ ಒಂದು ಹೊಸ ದಾರಿ. ಕಳೆದ ಮೂವತ್ತು ವರ್ಷಗಳಲ್ಲಿ ಧಾರವಾಡ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ

ನಿರಂತರವಾಗಿ ಅದರ ಬಗ್ಗೆ ಪ್ರಯೋಗ ಮಾಡಿ ನೋಡಿದ್ದಾರೆ. ಅವರ ಪ್ರಯೋಗದ ಪ್ರತಿಫಲ ಏನೆಂದರೆ, ಸಾವಯುವ ಕೃಷಿಯನ್ನು ನಾವು ಮಾಡುತ್ತಿದ್ದಲ್ಲಿ ನಮ್ಮ ಯೀಲ್ಡ್ ಹೆಚ್ಚಾಗುತ್ತಾ ಹೋಗುತ್ತದೆ. ನಮ್ಮ ಇನ್‌ಪುಟ್ ಕಾಸ್ಟ್ ಕಡಿಮೆಯಾಗುತ್ತದೆ. ನಮ್ಮ ಸರ್‌ಪ್ಲಸ್ ಜನರೇಷನ್ ಜಾಸ್ತಿಯಾಗುತ್ತದೆ ಎನ್ನುವಂತಹ ಡಾಕ್ಯುಮೆಂಟ್ಸ್ ಅವರ ಬಳಿ ಇದೆ. ಆದರೂ ಸಹಿತ ಇವತ್ತಿಗೂ ಸಾವಯವ ಕೃಷಿಗೆ ಒತ್ತು ಕೊಡದೇ, ರಾಸಾಯನಿಕ ಗೊಬ್ಬರವನ್ನು ಕ್ರಿಮಿ ನಾಶಕವನ್ನು ಉಪಯೋಗ ಮಾಡುವಂತಹ ಕೃಷಿಗೆ ಹೆಚ್ಚು ಒತ್ತು ಕೊಡುವಂತಹ ಪರಿಸ್ಥಿತಿ ಏನಿದೆಯೋ, ಇದನ್ನು ಬದಲು ಮಾಡಿಸಬೇಕು ಎನ್ನುವಂತಹ ಮಾತನ್ನು ನಾವು ಒಪ್ಪಿಕೊಳ್ಳಬೇಕು. ಅದರ ಜೊತೆಗೆ ನಾವು ದುಶ್ಚಟಕ್ಕೆ ಬಲಿ ಬೀಳುವುದು ಕಡಿಮೆಯಾಗಬೇಕು. ಇವತ್ತು ಪ್ರತಿ ಗ್ರಾಮಗಳಲ್ಲಿ ಸಾರಾಯಿ ಮಾರಾಟ ಮಾಡುವವರಿಗೆ, ಬ್ರಾಂದಿ ಮಾರಾಟ ಮಾಡುವವರಿಗೆ ನಾವು ಬಹಳಷ್ಟು ಸ್ಕೋಪ್ ಕೊಡುತ್ತಿದ್ದೇವೆ. ಇದು ಹೋಗಬೇಕು. ನಾವು ಹೇಳುವುದೇ ಬೇರೆ. ನಿಮಗೆ ಸರ್ಕಾರದ ಮಟ್ಟದಲ್ಲಿ ಬಂದ್ ಮಾಡಲಿಕ್ಕೆ ಸಾಧ್ಯವಾಗಲಿಲ್ಲವೆಂದರೂ ಪರವಾಗಿಲ್ಲ, ಮಾನ್ಯ ಘೋರ್ಪಡೆ ಸಾಹೇಬರು ಗ್ರಾಮ ಪಂಚಾಯಿತಿ ಮಟ್ಟದೊಳಗಾದರೂ, ಜನ ಎಲ್ಲಿ ಅಪೇಕ್ಷೆ ಪಡುತ್ತಾರೋ ಅಲ್ಲಿ ಪ್ರಾಹಿಬಿಷನ್ ತರುವಂತಹ ವ್ಯವಸ್ಥೆಯನ್ನು ತಾವು ಮಾಡಿ. ಗ್ರಾಮೀಣ ಜನರ ಬದುಕು ಸುಧಾರಿಸಬೇಕೆಂದರೆ, ಗ್ರಾಮೀಣ ಜನರಲ್ಲಿ ಉಳಿತಾಯ ಬೆಳೆಯ ಬೇಕೆಂದರೆ, ಅವರು ಸರ್ಕಾರದ ಈ ಎಲ್ಲಾ ಯೋಜನೆಗಳ ಲಾಭವನ್ನು ಪಡೆದುಕೊಂಡು ತಮ್ಮ ಕುಟುಂಬವನ್ನು, ತಮ್ಮ ಸಮಾಜವನ್ನು ಬೆಳೆಸಬೇಕೆಂದರೆ, ಈ ಅನಾಶ್ಯಕ ಖರ್ಚುಗಳನ್ನು ಮಾಡುವುದನ್ನು ನಾವು ನಿಲ್ಲಿಸಬೇಕು. ಟೆಂಪರನ್ಸ್ ಬೋರ್ಡ್ ಕುಡಿಯುವುದು ಕೆಟ್ಟದ್ದು ಎಂದು ಅವರಿಗೆ ಬುದ್ಧಿ ಹೇಳಿ ನೀವು ಕುಡಿಯುವುದನ್ನು ಬಿಡಿಸಿರಿ ಎಂದು ಹೇಳುತ್ತದೆ. ಸ್ವಾಮಿ, ಬೆಂಕಿಯ ಮಗ್ಗುಲಿಗೆ ಬೆಣ್ಣೆ ಸವರಿ ಇಟ್ಟು, ಬೆಣ್ಣೆ ಕರಗಬಾರದು ಎಂದರೆ ಹೇಗೆ?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈ ಅಭಿಪ್ರಾಯ ಏನಿದೆ ಅದು ದೇಶದ ದೃಷ್ಟಿಯಿಂದ ಬಹಳ ಒಳ್ಳೆಯದು. ಅದರೆ ಅದರಲ್ಲಿ ಕಷ್ಟ ಏನೆಂದರೆ ಕೆಲವೇ ಪಂಚಾಯಿತಿಗಳಲ್ಲಿ ಪ್ರೊಹಿಬಿಷನ್ ತರಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಹೆಸರನ್ನು ಅವರು ಇಲ್ಲಿ ಪ್ರಸ್ತಾಪ ಮಾಡಿರುವುದರಿಂದ, ನನ್ನ ಅನುಭವನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಇರತಕ್ಕಂಥ 25 ಪಂಚಾಯಿತಿಗಳಲ್ಲಿ ನಾವು ಯುನಾನಿಮಸ್ ರೆಸಲ್ಯೂಷನ್ಸ್ ಅವರ ಕಡೆಯಿಂದ ಮಾಡಿಸಿದೆವು. ಅವರೇ ಅದನ್ನು ಮಾಡಿದರು. ನಮ್ಮ ಊರಿನಲ್ಲಿ ಸಾರಾಯಿ ಮಾರಾಟ ನಿಷೇಧ ಎಂಬ ನಿರ್ಣಯವನ್ನು ಅವರೇ ಮಾಡಿದರು. 25 ಪಂಚಾಯಿತಿಗಳಲ್ಲಿ ಅಂತಹ ನಿರ್ಣಯ ಅಂಗೀಕರಿಸಿ ಕೆಲವು ತಿಂಗಳವರೆಗೆ ಆ ಪ್ರಯೋಗವನ್ನು ಮಾಡಿ ನೋಡಿದೆವು. ಕಾನೂನು ಪ್ರಕಾರವಾಗಿ ಎಲ್ಲಿ ಪಂಚಾಯಿತಿ ವಿರೋಧ ಮಾಡುತ್ತದೋ ಅಲ್ಲಿ ಸಾರಾಯಿ ಅಂಗಡಿ ತೆಗೆಯಬಾರದೆಂದೇ ಇದೆ. ಅದರೆ ದುರ್ದೈವದಿಂದ ಅದು ಯಶಸ್ವಿಯಾಗಿ ನಡೆಯಲಿಲ್ಲ. ಏಕೆಂದರೆ, ಸುತ್ತಲ ಎಲ್ಲಾ ಕಡೆಯ ಪ್ರದೇಶಗಳಿಂದಲೂ ಬಂದು ಅಲ್ಲಿ ಅನ್ಯಾಯವಾದಂತಹ ಮಾರಾಟ ನಡೆಸಿದರು. ಆದ್ದರಿಂದ ಅದನ್ನು ಕೈಬಿಡಬೇಕಾಯಿತು. ಕೆಲವೇ ಪಂಚಾಯಿತಿಗಳಲ್ಲಿ ಪ್ರೊಹಿಬಿಷನ್ ಯಶಸ್ವಿಯಾಗಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆದಕಾರಣ ಪಂಚಾಯಿತಿಗಳು ಆ ನಿರ್ಧಾರಕ್ಕೆ ಬಂದರೂ ಕೂಡ ಆದರಿಂದ ಆಗುವಂತಹ ಅನಾಹುತವನ್ನು ನಿಲ್ಲಿಸಲಿಕ್ಕೆ ಆಗುತ್ತದೋ

ಇಲ್ಲವೋ ಎನ್ನುವಂತಹ ಅನುಮಾನ ನನ್ನ ಮನಸ್ಸಿನಲ್ಲಿದೆ. ಆದರೂ ಕೂಡ ಮಾನ್ಯ ಡಿ.ಆರ್. ಪಾಟೀಲರು ಏನೆಂದರೂ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೋ ಅದಕ್ಕೆ ನನ್ನ ಸಂಪೂರ್ಣವಾದ ಸಹಮತಿ ಇದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಘೋರ್ಪಡೆ ಸಾಹೇಬರು ತಮ್ಮ ಸಹಮತ ವ್ಯಕ್ತ ಮಾಡಿದ್ದಾರೆ. ಈಗ ಸಂಡೂರು ಗದಗ್ ಮತ್ತು ಬೆಳ್ತಂಗಡಿ ಈ ಮೂರು ತಾಲ್ಲೂಕುಗಳಲ್ಲಿ ಸಾರಾಯಿ ಅಂಗಡಿ ತೆರೆಯುವುದನ್ನು ನಾವು ನಿಷೇಧ ಮಾಡಿಸಿದೆವು. ಆದರೆ ಪ್ರಾಹಿಬಿಷನ್ ಇಂಟ್ರಡ್ಯೂಸ್ ಮಾಡಿಲ್ಲ. There is a difference between opening of liquor shops and introducing prohibition. If you introduce prohibition, drunkenness becomes a crime, then we can tackle them properly. I an demanding introduction of prohibition in the panchayats wherever they demand, wherever they demand, why do you want to obstruct? Why don't you give them that permission? You have lot of trust in the Grama Sabha and Grama Panchayat system. Why don't you give them full freedom. Let them decide and let them enforce also.

Sri. M.Y. Ghorpade :- What he is saying is Introduce prohibition, not just stopping of Sarai Angadi. ಕೆಲವೇ ಕಡೆ ಪ್ರೊಹಿಬಿಷನ್ ತರುವುದಕ್ಕೆ ಆಗುತ್ತದೆ ಇಲ್ಲವೆಂಬುದನ್ನು ನಾವು ಪರಿಶೀಲಿಸುತ್ತೇವೆ.

Sri K. Srinivasa Gowda Kuduvanahalli : Drinks are good, drunkers are bad.

ಅದನ್ನು ನೀವು ಹೇಳಿ, ಮೊದಲು ಡ್ರಂಕರ್ಸ್ ಕಡಿಮೆ ಮಾಡುವುದನ್ನು ಕಲಿಯಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ : ಮಾನ್ಯ ಪಾಟೀಲರು ಎತ್ತಿದ ವಿಷಯ ಬಹಳ ಒಳ್ಳೆಯದು. ಆದರೆ ಇವತ್ತು ಜನ ಪ್ರತಿನಿಧಿಗಳು ಶರಾಬು ಅಂಗಡಿ ನಡೆಸುವಾಗ, ಕಳ್ಳ ಶರಾಬನ್ನು ವ್ಯಾಪಾರ ಮಾಡುವಾಗ ನೀವು ಪ್ರಾಹಿಬಿಷನ್ ಹೇಗೆ ತರುತ್ತೀರಿ? ಪ್ರಾಹಿಬಿಷನ್ ತಂದರೆ ಆ ಏರಿಯಾದಲ್ಲಿ ಬೇರೆ ಕಡೆಯಿಂದ ಕಳ್ಳ ಸರಾಯಿ ತಂದು ಮಾರಾಟ ಮಾಡುತ್ತಾರೆ. ಜನಪ್ರತಿನಿಧಿಗಳು ಅಂದರೆ ಕೆಲವರಿಗೆ, ಇದು ಪ್ರೊಟೆಕ್ಷನ್. ಅವರ ಒಂದು ಸ್ಥಾನ ಏನಿದೆ ಅವರಿಗೆ ಪ್ರೊಟೆಕ್ಷನ್ ಎಂದು ನಾನು ಭಾವಿಸುತ್ತೇನೆ. ಇಲ್ಲದಿದ್ದರೆ ನಮ್ಮ ಕಡೆ ಅನೇಕ ಕೇಸ್ ಆಗಿದೆ. ಇದನ್ನು ತೆಗೆದು ನೋಡಿದರೆ ಅವರು ಜನ ಪ್ರತಿನಿಧಿ ಆಗುವುದಕ್ಕೆ ಅನರ್ಹರಾಗುತ್ತಾರೆಂಬುದು ನನ್ನ ಅಭಿಪ್ರಾಯ.

ಶ್ರೀ ಡಿ.ಆರ್. ಪಾಟೀಲ್ : ಮೊದಲು ಆ ಪ್ರಸಂಗ ಇರುತ್ತಿತ್ತು, ಇವತ್ತು ಪಂಚಾಯತ್ ಮಟ್ಟದಲ್ಲಿ ಹೆಣ್ಣು ಮಕ್ಕಳ ಸಂಘಟನೆ ಸಾಕಷ್ಟು ಆಗುತ್ತಿದೆ. ಬಹಳ ಕಡೆ ಹೆಣ್ಣು ಮಕ್ಕಳು ನಾವು ಸಾರಾಯಿ ಕುಡಿಯುವುದನ್ನು ಬಿಡಿಸಬೇಕೆಂದು ಡಿಮಾಂಡ್ ಮಾಡುತ್ತಿದ್ದಾರೆ. ನಾವು ಜನರಿಗೆ ಈ ಅಧಿಕಾರ ಕೊಡಬೇಕು. Prohibition Act is a State Act. It is not a Central Act. Whatever amendment we can bring, we can definitely bring in.

ಅದಕ್ಕೆ ದಯವಿಟ್ಟು ಘೋರ್ಪಡೆ ಸಾಹೇಬರಂತರಹವರು ಇರುವಾಗ ಇದು ಆಗಲಿಲ್ಲ ಎಂದರೆ, ಇನ್ನು ದೇವರೇ ಗತಿ. ಇದಕ್ಕೆ ತಾವು ಸಹಮತ ವ್ಯಕ್ತ ಮಾಡಿದಾಗ, ಇದಕ್ಕೆ ಬೇಕಾದ ಕಾನೂನನ್ನು ಬದಲಾವಣೆ ಮಾಡುವ ಜವಾಬ್ದಾರಿ ತಮ್ಮ ಮೇಲೆ ಇದೆ. ಅದನ್ನು ತಾವು ದಯವಿಟ್ಟು ಮಾಡಬೇಕು. ಗ್ರಾಮೀಣ ಅಭಿವೃದ್ಧಿ ಆಗಬೇಕೆಂದರೆ, ಬಡ ಜನರ ಅಭಿವೃದ್ಧಿ ಆಗಬೇಕೆಂದರೆ, ಅವರನ್ನು ದುಶ್ಚಟದಿಂದ ದೂರ ಮಾಡಲಿಲ್ಲವೆಂದರೆ ಏನೂಆಗುವುದಿಲ್ಲ. ಅವರು ಏನು ದುಡಿಯುತ್ತಾರೆ ಅದನ್ನೆಲ್ಲಾ ಕುಡಿಯುವುದಕ್ಕೆ ಹಾಳು ಮಾಡುತ್ತಾರೆ. ಸರ್ಕಾರದ ಯೋಜನೆ ಲಾಭ ಯಾರಿಗಾದರೂ ಆಗುತ್ತಿದ್ದರೆ ಅದು ಹೆಚ್ಚು ಈ ಸಾರಾಯಿ ಅಂಗಡಿ ನಡೆಸುವವರಿಗೆ ಮತ್ತು ಲಿಕ್ಕರ್ ಲಾಬಿಯವರಿಗೆ ಲಾಭ ಇದೆ. ಜನಸಾಮಾನ್ಯರಿಗಿಂತ ಈ ಜನರಿಗೆ ಹೆಚ್ಚು ಲಾಭ ಇದೆ. ಇದು ಬದಲಾಗಲೇಬೇಕು. ದಯವಿಟ್ಟು ಇದನ್ನು ನೀವು ತಂದರೆ ನಮಗೆ ಸಾಕಷ್ಟು ಉಪಕಾರ ಮಾಡಿದ ಹಾಗಾಗುತ್ತದೆ. You leave it to their wisdom. They will definitely do that. If they fail, then we can definitely bring back. ನಾವು ಪ್ರಯೋಗ ಮಾಡದೇ ಈ ಜವಾಬ್ದಾರಿಯನ್ನು ಅವರಿಗೆ ಕೊಡದೇ ನಾವು ಮಾಡುವುದು ಬೇಡವೆಂದು ಹೇಳುವುದು ತಪ್ಪಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ನನ್ನ ಸಲಹೆ ಏನೆಂದರೆ, ನಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಈ ವಿಷಯ ನೀವು ಪ್ರಸ್ತಾಪ ಮಾಡುವುದು ಒಳ್ಳೆಯದು.

ಶ್ರೀ ಡಿ.ಆರ್. ಪಾಟೀಲ್ : ಪಾರ್ಟಿ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡುತ್ತೇನೆ. ನೀವು ಎಲ್ಲಾ ಕಡೆ ಪ್ರಾಹಿಬಿಷನ್ ತೆಗೆದುಕೊಂಡು ಬನ್ನಿ ಎಂದು ನಾನು ಹೇಳುತ್ತಿಲ್ಲ. ಎಲ್ಲಿ ಜನ ಅಪೇಕ್ಷೆಪಡುತ್ತಾರೆ ಅಲ್ಲಿ ಮಾಡುವುದಕ್ಕೆ ಎಮ್‌ಎಲ್‌ಎಗಳಿಗೆ ಕೇಳುತ್ತೇನೆಂದರೆ ನಾವು ನಾನು ಹೇಳಬೇಕು? If people want, give it.

ಶ್ರೀ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಮ್ಮ ಗೌಡರು ಪ್ರಾಹಿಬಿಷನ್ ಎಂದು ಹೇಳುತ್ತಾರೆ, ಸರ್ಕಾರ ಹರಾಜು ಮಾಡುವಾಗ ಸನ್ಮಾನ್ಯ ಘೋರ್ಪಡೆಯವರು ಹೇಗೆ ಪ್ರಾಹಿಬಿಷನ್ ಮಾಡುವುಕ್ಕಾಗುತ್ತದೆ? It is against the law and Act. ಸರ್ಕಾರಕ್ಕೆ ಒತ್ತಾಯ ಮಾಡಿ. ಹರಾಜು ಮಾಡುವುದು ಬಿಡಿಸಿ. ಹರಾಜು ಮಾಡುವುದು ಈ ಕಡೆ ಪ್ರಾಹಿಬಿಷನ್ ತರುವುದು ಎಂದರೆ ಏನು ನಿಮ್ಮ ಅರ್ಥ? ಈ ಕಡೆ ಕಾನೂನು ಮಾಡುತ್ತೀರಿ, ಆ ಕಡೆ ಕಾನೂನು ಮುರಿಯಿರಿ ಎಂದು ಹೇಳುತ್ತೀರಿ. ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತದೆ ಎಂದು ತಾವೇ ಹೇಳುತ್ತೀರಿ. ದ್ವಿಮುಖ ಯೋಚನೆ ಮಾಡುವುದು ಸರಿಯಾದ ವಿಚಾರ ಅಲ್ಲ. ಇದು ಈ ಸಭೆಯಲ್ಲಿ ಚರ್ಚೆ ಮಾಡತಕ್ಕಂಥದ್ದು.

ಶ್ರೀ ಡಿ.ಆರ್. ಪಾಟೀಲ್ : ಸರ್ಕಾರ ಇರುವುದು ಸಮಾಜದ ಅಭಿವೃದ್ಧಿಗೆ, ಸರ್ಕಾರಕ್ಕೆ ಆದಾಯ ಹೆಚ್ಚಾಗಬೇಕೆಂದು ಹೇಳಿ ಸಮಾಜವನ್ನು ಹಾಳು ಮಾಡಿ ವ್ಯಕ್ತಿಗಳನ್ನು ಹಾಳು ಮಾಡಿ ಸರ್ಕಾರಕ್ಕೆ ಆದಾಯ ಮಾಡಿಕೊಂಡು ಮಾಡುವುದು ಏನಿದೆ? ಸರ್ಕಾರದ ಆದಾಯದ ಬಗ್ಗೆ ನಾವು ಬಹಳ ಚಿಂತನೆ ಮಾಡಬಾರದು. ಕುಟುಂಬದ ಆದಾಯದ ಬಗ್ಗೆ ಚಿಂತನೆ ಮಾಡಬೇಕು. ಸಮಾಜದ ಆದಾಯದ ಬಗ್ಗೆ ಚಿಂತನೆ ಮಾಡಬೇಕು. ಸಮಾಜ ಮತ್ತು ಕುಟುಂಬ ಉಳಿದರೆ ಮಾತ್ರ ಸರ್ಕಾರ, ಇಲ್ಲದಿದ್ದರೆ ಅಂತಹ ಸರ್ಕಾರ ತೆಗೆದುಕೊಂಡು ಏನು ಮಾಡಬೇಕು? ಎಲ್ಲಾ ಕಡೆ ಮಾಡಿ ಎಂದು ಹೇಳುವುದಿಲ್ಲ. ಎಲ್ಲಿ ಜನ ಅಪೇಕ್ಷೆ ಪಡುತ್ತಾರೆ ಅಲ್ಲಿ ಮಾಡಿ ಎಲ್ಲಿ

ಕೊಡುವುದಿಲ್ಲ ಅಲ್ಲಿ ಚಾಲೂ ಮಾಡಿ ಅವರಿಗೆ ಸಾಕಷ್ಟು ಕೊಡಿ. ಅವರು ಇವತ್ತು 10 ರೂಪಾಯಿ ಕುಡಿಯುತ್ತಿದ್ದರೆ, 100 ರೂಪಾಯಿಯಷ್ಟು ಕುಡಿಯಲಿ. ಅವರು ಲಗೂ ಕುಡಿದು ಹಾಳಾಗಲಿ. ಕುಡುಕರು ಲಗೂ ಹಾಳಾದಷ್ಟು ಆ ಕುಟುಂಬಕ್ಕೆ ಒಳ್ಳೆಯದು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಡಿ.ಆರ್. ಪಾಟೀಲರು ಹೇಳುವುದನ್ನು ಸ್ವಾಗತ ಮಾಡುತ್ತೇನೆ. ಟೋಟಲ್ ಪ್ರಾಹಿಬಿಷನ್ ಅವರು ಏನು ಹೇಳುತ್ತಿದ್ದಾರೆ, ಅದು ಒಳ್ಳೆಯ ಸಲಹೆ. ಸರ್ಕಾರ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದು.

ಶ್ರೀ ಡಿ.ಆರ್. ಪಾಟೀಲ್ : ದಯವಿಟ್ಟು ನಮಗೆ ಆಪ್‌ಷನ್ ಕೊಡು.

ಶ್ರೀ ಮಾನ್ಯ ಸದಸ್ಯರು : ಗದಗ್ ಸಂಡೂರು ಮತ್ತು ಬೆಳ್ತಂಗಡಿಯಲ್ಲಿ ಇದರಿಂದ ಆಗಿದ್ದು ಏನೆಂದರೆ, ಆದಾಯ ಕಡಿಮೆ ಆಗುವುದರ ಜೊತೆಗೆ ಕುಡಿಯುವವರ ಸಂಖ್ಯೆ ಜಾಸ್ತಿಯಾಯಿತು. ಸ್ಮಗ್ಲ್ ಮಾಡಿದ ಸಾರಾಯಿಯನ್ನು 100 ರೂಪಾಯಿಗೆ ಮಾರಿದರು. ಆ ಅವಧಿಯಲ್ಲಿ ಕುಡುಕರ ಸಂಖ್ಯೆ ಜಾಸ್ತಿಯಾಯಿತು. ಆಗ ನಾನು ತಾಲ್ಲೂಕು ಪಂಚಾಯಿತಿ ಅಧ್ಯಕ್ಷನಾಗಿದ್ದಾಗ ಘೋರ್ಪಡೆಯವರ ಕ್ಷೇತ್ರದಲ್ಲಿ ನಾವು 25 ಪಂಚಾಯಿತಿಗಳಲ್ಲಿ ಇದನ್ನು ಬಂದ್ ಮಾಡಿಸಿದ್ದೆವು. ಕುಡುಕರ ಸಂಖ್ಯೆ ಜಾಸ್ತಿಯಾಗಿರುವುದನ್ನು ನಮ್ಮ ಅನುಭವದಿಂದ ನಾವು ಪಡೆದು ಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಡಿ.ಆರ್. ಪಾಟೀಲರನ್ನು ನಾನು ನಿಜವಾಗಿ ಅಭಿನಂದಿಸುತ್ತೇನೆ. ಕಾರಣ ಇಷ್ಟೆ. ಇಡೀ ರಾಷ್ಟ್ರಕ್ಕೆ ಸಂಬಂಧಿಸಿದಂತಹ ಸಮಸ್ಯೆಯನ್ನು ಅವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನನಗೆ ಜ್ಞಾಪಕ ಇರುವ ಹಾಗೆ 1983 ರಲ್ಲಿ 1985 ರಲ್ಲಿ ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದ ಸನ್ನಿವೇಶದಲ್ಲಿ ನಮ್ಮ ರಾಜ್ಯದ ಗೌರವಾನ್ವಿತ ನಾಯಕರಾದ ಮಾನ್ಯ ಘೋರ್ಪಡೆಯವರು ಸಂಡೂರು ಕ್ಷೇತ್ರದ ಶಾಸಕರಾಗಿದ್ದರು. ಆ ಸನ್ನಿವೇಶದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಸಂಡೂರಿನಲ್ಲಿ ಎಲ್ಲೆಲ್ಲಿ ಪಂಚಾಯಿತಿಗಳು ಒಪ್ಪುವುದಿಲ್ಲ ಅಲ್ಲಿ ಎಲ್ಲವನ್ನು ಸಹ ನಿಲ್ಲಿಸಬೇಕು. ಸರ್ಕಾರ ಇದನ್ನು ಬ್ಯಾನ್ ಮಾಡಬೇಕು. ಆ್ಯಕ್ಷನ್ ಮಾಡಲೇಬಾರದು ಎಂದು ಬಹಳಷ್ಟು ಸಾರಿ ಒತ್ತಾಯ ಮಾಡಿದ್ದರು. ಎಷ್ಟರಮಟ್ಟಿಗೆ ಫಲ ಕೊಟ್ಟಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ಇದು ಒಂದು ಎರಡನೆಯದಾಗಿ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಸಹಿತ ಅನೇಕ ಮಠಾಧಿಪತಿಗಳು ಸಮಾಜದ ಬಗ್ಗೆ ಕಳಕಳಿ ಇರತಕ್ಕಂಹ ಮಠಾಧಿಪತಿಗಳು ರಾಜ್ಯದಲ್ಲಿ ಸಾರಾಯಿಯನ್ನು ಅಟ್ ಎನಿ ಕಾಸ್ಟ್ ಸೇಲ್ ಮಾಡಬಾರದು. ಸೇಲ್ ಮಾಡುವುದನ್ನು ನಿಲ್ಲಿಸಬೇಕು. ಕೊನೇ ಪಕ್ಷ ಸಾರಾಯಿ ಆದರೂ ನಿಲ್ಲಿಸಬೇಕೆಂಬ ಒತ್ತಾಯವನ್ನು ಮಾಡಿದರು. ಆ ಸಂದರ್ಭದಲ್ಲಿ ಸಿದ್ಧರಾಮಯ್ಯನವರು ಹಣಕಾಸು ಮಂತ್ರಿಗಳಾಗಿದ್ದರು. ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದರು. ಆ ಸಮಿತಿ ಸದಸ್ಯನಾಗಿ ನಾನೂ ಸಹ ಇದ್ದೆ. ಇಡೀ ದೇಶವನ್ನು ನಾವು ಪ್ರವಾಸ ಮಾಡಿದೆವು. ಗುಜರಾತ್, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ದೆಹಲಿ ಎಲ್ಲಾ ಕಡೆ ಹೋಗಿ ಬಂದೆವು, ಶಂಕರ್‌ಸಿಂಗ್ ವಾಘೇಲ ಗುಜರಾತಿನ ಮುಖ್ಯಮಂತ್ರಿ ಆಗಿದ್ದರು. ಗುಜರಾತ್ ಗಾಂಧಿ ನಾಡು ಎಂಬುದು ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರೆಲ್ಲರಿಗೂ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸಬರಮತಿ ಆಶ್ರಮದ ಪಕ್ಕದಲ್ಲಿ ಹೊಳೆ ಹರಿಯುತ್ತದೆ. ಅಲ್ಲಿರತಕ್ಕಂತಹ ಮುಖ್ಯ ಮಂತ್ರಿಗಳು ನಾವು ಹೋದ ತಕ್ಷಣ ಸಮಿತಿಯ ಸದಸ್ಯರಿಗೆ ಬಹಳ

ಗೌರವದಿಂದ ಕಂಡು ನೀವು ಹೋಗಿ ಎಲ್ಲಾ ನೋಡಿಕೊಂಡು ಬನ್ನಿ, ಗಾಂಧಿನಗರ ಹಾಗೂ ಗುಜರಾತಿನ ಹಳ್ಳಿಗಳನ್ನು ನೋಡಿ ಎಂದು ಹೇಳಿದರು. ಎರಡು ದಿನ ಸಮಯ ಕೊಟ್ಟರು. ನಾವು ಹೋಗಿ ಎಲ್ಲಾ ಪರಿಸ್ಥಿತಿಯನ್ನು ನೋಡಿಕೊಂಡು ಬಂದೆವು. 1947ರ ನಂತರ ಇದುವರೆಗೂ ಸಹಿತ ಅಲ್ಲಿ ಪ್ರಾಹಿಬಿಷನ್ ಇಂಪ್ಲಿಮೆಂಟ್ ಮಾಡಿದ್ದಾರೆ. ವಾಘೇಲರವರು ಏನು ಹೇಳಿದರು ಎಂದರೆ, ಬೆಂಗಳೂರಿನಿಂದ ಇಲ್ಲಿಯವರೆಗೆ ಏಕೆ ಬಂದಿರಿ, ಒಂದು ಡಿಸ್ಟಿಲರಿ 20 ಡಿಸ್ಟಿಲರಿಗೋ 3.0 ಡಿಸ್ಟಿಲರಿಗೋ ಪರ್ಮಿಷನ್ ಕೊಟ್ಟಿದ್ದೀರಿ. ಅಲ್ಲಿ ಹೋಗಿ ನೋಡಿಕೊಂಡು ಬನ್ನಿ ಹೊಳೆನಲ್ಲಿ ಒಂದು ನಾಲ್ಕು ನಾಲ್ಕು ಅಡಿಗೆ ಒಂದು ಇಲ್ಲಿಸಿಟ್ ಡಿಸ್ಟಿಲರಿ ಇದೆ. ಇಲ್ಲಿ ಇರುವಷ್ಟು ಕಳ್ಳಬಟ್ಟಿ ರಾಷ್ಟ್ರದಲ್ಲಿ ಎಲ್ಲಿಯೂ ಕೂಡ ಇಲ್ಲ ಎನ್ನತಕ್ಕಂತಹ ಮಾತನ್ನು ಹೇಳಿದರು. ಇದು ವಾಸ್ತವಾಂಶ. ಆದ್ದರಿಂದಾಗಿ ಏನು ಮಾನ್ಯ ಜೆ.ಹೆಚ್ ಪಟೇಲರು ರಾಜ್ಯದ ಜನತೆ ಮುಂದೆ ಒಂದು ಸಲಹೆ ಇಟ್ಟಿದ್ದರು. ನಾವು ಇದರ ಬಗ್ಗೆ ಬಹಳ ಧೀರ್ಘವಾಗಿ ಯೋಚನೆ ಮಾಡಬೇಕು. You have given up that now. We are in a situation now wherein we are expecting about Rs. 2,000 crores. ಎರಡು ಸಾವಿರ ಕೋಟಿ ರೂಪಾಯಿಗಳ ಆದಾಯವನ್ನು ನಾವು ಸರ್ಕಾರಕ್ಕೆ ಎಕ್ಸ್‌ಪೆಕ್ಟ್ ಮಾಡುತ್ತಿದ್ದೆವು. ಇದರಲ್ಲಿ ಐಎಮ್‌ಎಫ್‌ಎಲ್ ಸೇರುತ್ತದೆ. ಸಾರಾಯಿ ಸೇರುತ್ತದೆ. ಮೊನ್ನೆ ನೀರಾ ಬಗ್ಗೆ ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿಯಲ್ಲಿ ಚರ್ಚೆ ಮಾಡಬೇಕಾಗಿತ್ತು, ಇದರ ಬಗ್ಗೆ ನೀವು ಚರ್ಚೆ ಮಾಡಲಿಲ್ಲ. ಅಡಲ್ಟ್ರೇಷನ್ ಮಾಡಿ ನೀರಾ ಮಾಡತಕ್ಕಂಥದ್ದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ, ಮೊದಲು ಹೆಂಡ ಎಂದು ಹೇಳಿ ಅದಕ್ಕೆ ಸಿ.ಹೆಚ್ 4 ಹಾಕಿ ಮಾಡುತ್ತಿದ್ದರು. ಅದನ್ನೇ ನೀರಾಗೆ ಸಹಿತ ಮಾಡುತ್ತಿದ್ದಾರೆಂದೂ ಸಹ ಆಪಾದನೆ ಬಂದಿದೆ. ಆದರೆ ನಮ್ಮ ಸಲಹೆ ಏನು ಎಂದರೆ ಆಲ್ಕೋಹಾಲ್ ಕಂಟೆಂಟ್ ಕಡಿಮೆ ಇರತಕ್ಕಂಥ ಒಂದು ಚೀಪ್ ಲಿಕ್ಕರ್‌ನ್ನು ಹೆಲ್ತ್ ಅಪ್‌ಸೆಟ್ ಆಗದೇ ಇರುವುದಕ್ಕೆ ಏನಾದರೂ ಮಾಡುವುದಕ್ಕೆ ಸಾಧ್ಯ ಎನ್ನತಕ್ಕಂಥ ಒಂದು ಹೊಸ ಪಾನ ಸಂಯಮದ ನೀತಿಯನ್ನು ರಾಜ್ಯದಲ್ಲಿ ತರಬೇಕಾಗಿದೆ. ಇದರ ಬಗ್ಗೆ ಚಿಂತನೆ ಮಾಡಬೇಕಾದ್ದು ಬಹಳ ಅವಶ್ಯಕತೆ ಇದೆ. ಹಳ್ಳಿಗಳಲ್ಲಿ ಸಾರಾಯಿ ಸಂಸ್ಕೃತಿ ಪ್ರಾರಂಭವಾಗಿ ಸಾಯಂಕಾಲ 4 ಗಂಟೆಯ ನಂತರ ಇದು ಹೆಚ್ಚಾಗುತ್ತಿದೆ. ಇದಕ್ಕೆಲ್ಲಾ ನಮ್ಮ ವ್ಯವಸ್ಥೆ ಕೂಡ ಕಾರಣವಾಗಿದೆ. ರಾಜಕೀಯ ಪಕ್ಷಗಳು, ಚುನಾವಣಾ ಪದ್ಧತಿ, ನಾವು ಯಾವ ರೀತಿ ಅಪಹಾಸ್ಯವಾಗಿದ್ದೇವೆ, ವಸ್ತು ಸ್ಥಿತಿಯಲ್ಲಿ ನಾವೇನು ಮಾಡುತ್ತೇವೆ ಎಂಬ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ. ಆದರೂ ಕೂಡ ಇದನ್ನು ಸರಿ ಮಾಡುವುದಕ್ಕೆ ಒಂದಲ್ಲ ಒಂದು ಹೊಸ ನೀತಿಯನ್ನು ತರಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಪ್ರಸ್ತಾಪ ಮಾಡಿಲ್ಲ. ಆದರೆ ತಾವು ಮಾಡಿದ್ದೀರಿ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡುವುದು ಬಹಳ ಸೂಕ್ತವೆಂದು ಹೇಳಿ ನಾನು ಸಲಹೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಇದರ ಬಗ್ಗೆ ಪ್ರಸ್ತಾಪಿಸುತ್ತಾ ನಾನು ಹೇಳಿದ್ದು ಏನೆಂದರೆ, ಇಂದು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿ ಮತ್ತು ಗ್ರಾಮ ಸಭೆಗೆ ವಿಶೇಷವಾಗಿ ಅಧಿಕಾರವನ್ನು ಕೊಡಬೇಕೆಂದು ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ. ಫೋರ್ಪಡೆ ಸಾಹೇಬರು ಈ ನಿಟ್ಟಿನಲ್ಲಿ ಬಹಳಷ್ಟು ಸಲಹೆಗಳನ್ನು ಅಳವಡಿಸಿಕೊಂಡಿದ್ದಾರೆ. ಆದರೆ ಬದಲಾವಣೆಯನ್ನು ತರುವಾಗ ಈ ಅಧಿಕಾರವನ್ನು ಗ್ರಾಮ ಪಂಚಾಯಿತಿಗೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಆದರೆ ತಾವು ಹೇಳಿದ್ದರ ಬಗ್ಗೆ ನಾನು ಹೇಳುವುದೇನೆಂದರೆ ಪ್ರೊಹಿಬಿಷನ್

ಎನ್‌ಫೋರ್ಸ್ ಮಾಡುವ ಅಧಿಕಾರ ಸ್ಟೇಟ್ ಲೆವಲ್‌ನಲ್ಲಿ ಏನಿದೆ ಅದನ್ನು ಪಂಚಾಯತ್ ಲೆವಲ್‌ಗೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಸ್ಟೇಟ್ ಲೆವಲ್‌ನಲ್ಲಿ ಇದ್ದಾಗ ಏನಾಗುತ್ತದೆ ಎಂಬುದು ನಮಗೆ ಗೊತ್ತಿದೆ, ಪ್ರೊಹಿಬಿಷನ್ ಏಕೆ, ಕಳ್ಳಭಟ್ಟಿಯನ್ನೇ ನಿಲ್ಲುಸುವುದಕ್ಕೆ ನಿಮಗೆ ಆಗುವುದಿಲ್ಲ, ಇನ್ನು ಪ್ರೊಹಿಬಿಷನ್ ಹೇಗೆ ನಿಲ್ಲಿಸುತ್ತೀರಿ? ಆದರೆ ನಾವು ಪಂಚಾಯಿತಿಯವರು ನಿಲ್ಲಿಸುತ್ತೇವೆ, ನಾವು ಗ್ರಾಮ ಸಭಾದವರು ನಿಲ್ಲಿಸುತ್ತೇವೆ. ಏಕೆಂದರೆ ಇವೊತ್ತಿನ ವ್ಯವಸ್ಥೆಯೊಳಗೆ people can misguide Court. But, people cannot misguide a Grama Sabha or a Grama Sabha. It is very easy to misguide Courts. ಅದಕ್ಕೆ ಅವರು ಸಾಕಷ್ಟು ಬುದ್ಧಿವಂತ ವಕೀಲರನ್ನು ಉಪಯೋಗ ಮಾಡಿಕೊಳ್ಳುತ್ತಾರೆ ಮತ್ತು ತಮಗೆ ಬೇಕಾದ ಅನುಕೂಲಕರವಾದ ನಿರ್ಣಯಗಳನ್ನು ಕೋರ್ಟ್‌ನಲ್ಲಿ ಪಡೆದುಕೊಳ್ಳುವಂಥ ಶಕ್ತಿ ಅವರಿಗೆ ಇದೆ. ಆದರೆ ಆ ಶಕ್ತಿ ಇವೊತ್ತು ದೈವದ ವಿರುದ್ಧ ಸಾಧ್ಯವಿಲ್ಲ. ಗ್ರಾಮ ಸಭೆಯ ವಿರುದ್ಧ ಸಾಧ್ಯವಿಲ್ಲ, ಗ್ರಾಮ ಪಂಚಾಯಿತಿಯ ವಿರುದ್ಧ ಸಾಧ್ಯವಿಲ್ಲ. ಅದಕ್ಕೋಸ್ಕರವೇ ನಾನು ಹೇಳುವುದೇನೆಂದರೆ ಆ ಎನ್‌ಫೋರ್ಸ್‌ಮೆಂಟ್ ಅಧಿಕಾರವನ್ನು ನೀವು ಪಂಚಾಯತಿಯವರಿಗೆ ಕೊಟ್ಟು ನೋಡಿ. ನೀವು ರಾಜ್ಯ ಮಟ್ಟದ ನಾಯಕರು ಇದರಲ್ಲಿ ಸೋತಿದ್ದೀರಿ. ನೀವು ಅದರೊಳಗೆ ಕೈ ಎತ್ತಿದ್ದೀರಿ. ಆದುದರಿಂದ ಸ್ಥಳೀಯ ನಾಯಕರಿಗೆ ಆ ಅಧಿಕಾರವನ್ನು ಕೊಟ್ಟು ನೋಡಿ. ಅದರಲ್ಲೂ ಫೆಯಿಲ್ಯೂರ್ ಅದರೆ ಆಮೇಲೆ ಇದ್ದೇ ಇದೆ, ನೀವು ಹೇಳಿದ ಹಾಗೆ ನಾವು ಕೇಳೋಣ. ಆದುದರಿಂದ ಪಂಚಾಯಿತಿಗೆ ಅಧಿಕಾರವನ್ನು ಕೊಡುವ ಬದಲಾವಣೆಯನ್ನು ಮಾಡಿ ಎಂದು ನಾನು ಹೇಳಬಯಸುತ್ತೇನೆ. ಹಿಂದೆ ಸಾರಾಯಿ ಅಂಗಡಿಯನ್ನು ಮಾತ್ರ ಮುಚ್ಚುವುದನ್ನು ಮಾಡಲಾಯಿತು. ಪ್ರೊಹಿಬಿಷನ್ ಎನ್‌ಫೋರ್ಸ್ ಮಾಡುವ ಅಧಿಕಾರವನ್ನು ನಾವು ಪಂಚಾಯಿತಿಗೆ ಆಗ ಕೊಡಲಿಲ್ಲ. ಆಗಲೀ ಪಂಚಾಯಿತಿಗಳಿಗೆ ಈ ಅಧಿಕಾರವನ್ನು ಕೊಟ್ಟಿದ್ದರೆ, definitely it would have been a successful thing. ಆದುದರಿಂದ ಅದನ್ನು ಈಗಲಾದರೂ ಮಾಡಬೇಕೆಂದು ಮಾನ್ಯ ಪೋರ್ಪಡೆ ಸಾಹೇಬರ ತಲೆಯೊಳಗೆ ಈ ವಿಚಾರ ತುಂಬಿದ್ದೇನೆ. ಅವರು ಏನು ಮಾಡುತ್ತಾರೋ ಏನೋ ನನಗೆ ಗೊತ್ತಿಲ್ಲ. ನಮಗೆ ನಿಜವಾಗಲು ಜನಸಾಮಾನ್ಯರ ಬಗ್ಗೆ ಕಳಕಳಿ ಇತ್ತು ಎಂದರೆ ಈ ಅಧಿಕಾರವನ್ನು ಪಂಚಾಯತಿಗೆ ಕೊಡಲೇಬೇಕೆಂಬ ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ. ಆ ನಿರ್ಧಾರವನ್ನು ಬಹುತೇಕ ಮುಂದಿನ ಪಂಚಾಯತ್ ಕಾನೂನಿನ ಬದಲಾವಣೆಯಲ್ಲಿ ಮಾನ್ಯ ಪೋರ್ಪಡೆ ಸಾಹೇಬರು ತರುತ್ತಾರೆ ಎನ್ನುವಂಥ ಭರವಸೆಯಂತೂ ನನಗೆ ಇದೆ. ಬಹುತೇಕ ನಿರಾಸೆ ಮಾಡುವುದಿಲ್ಲವೆನ್ನುವುದು ನನಗೆ ಗೊತ್ತಿದೆ. ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ನಮ್ಮ ಸರ್ಕಾರ ಸಾಕಷ್ಟು ಬದಲಾವಣೆಗಳನ್ನು ಜನಪರವಾಗಿ ತರುತ್ತಿದೆ. ನಮ್ಮ ಸಿಂಧ್ಯಾ ಸಾಹೇಬರ ಸರ್ಕಾರ ಇದ್ದಾಗ ಪಂಚಾಯತ್ ಅನುದಾನ ಒಂದು ರೂ ಲಕ್ಷ ಇದ್ದುದನ್ನು ಒಂದೂಕಾಲು ಲಕ್ಷ ರೂ. ಮಾಡಿದರು. ಇವರು 5 ವರ್ಷದ ಅಧಿಕಾರಾವಧಿಯಲ್ಲಿ ಇಷ್ಟೇ ಹೆಚ್ಚು ಮಾಡಿದ್ದು. ಆದರೆ ತದನಂತರ ಬಂದಿರುವ ನಮ್ಮ ಸರ್ಕಾರದ ಅವಧಿಯಲ್ಲಿ ಈಗ ಆ ಅನುದಾನ ಮೂರೂವರೆ ಲಕ್ಷಕ್ಕೆ ರೂ.ಗೆ ತರಲಾಗಿದೆ. ಈ ವರ್ಷ ನಾನು ಲೆಕ್ಕ ಹಾಕಿ ನೋಡಿದ್ದೇನೆ, ಸುಮಾರು 9 ಲಕ್ಷ ರೂ.ಗಳು ಪ್ರತಿ ಗ್ರಾಮ ಪಂಚಾಯಿತಿಗೆ ಸಿಗುತ್ತದೆ. ಆ ಹಣ ಎಸ್.ಜೆ.ಆರ್.ವೈ ನಿಂದಾಗಲಿ, ನೇರವಾಗಿ ಅನುದಾನವನ್ನು ಗ್ರಾಮ ಪಂಚಾಯತಿಗೆ ಕೊಡುವುದರಿಂದಾಗಲಿ, ಒಟ್ಟಾರೆ 9 ಲಕ್ಷ ರೂಪಾಯಿ ಪ್ರತಿ ಗ್ರಾಮ ಪಂಚಾಯಿತಿಗೆ ಪ್ರತಿ ವರ್ಷ ಸಿಗುತ್ತದೆ. ಅದರ ಸದ್ವಿನಿಯೋಗ ಆದರೆ

ನಿಜವಾಗಿಯೂ ಬಹಳಷ್ಟು ಗ್ರಾಮೀಣ ಸೌಲಭ್ಯಗಳನ್ನು ನಾವು ಪಡೆದುಕೊಳ್ಳುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ಅದಕ್ಕೇ ನಾನು ಘೋರ್ಪಡೆ ಸಾಹೇಬರಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ಆಗಲೇ ಎಸ್.ಎಸ್. ಪಾಟೀಲರು ಈ ವಿಷಯವನ್ನು ಪ್ರಸ್ತಾಪಿಸಿದ್ದರು. ಈಗ 5 ಲಕ್ಷ ರೂ. ಗಳವರೆಗಿನ ಕೆಲಸವನ್ನು ತುಂಡು ಗುತ್ತಿಗೆಯ ಮೂಲಕ ಮಾಡಿದ್ದರಿಂದ ಈಗ ಎಲ್ಲಾ ಗ್ರಾಮ ಪಂಚಾಯತಿ ಮಟ್ಟದಲ್ಲಿಯೇ ಕೆಲಸ ತುಂಡು ಗುತ್ತಿಗೆಯ ಮುಖಾಂತರ ಆಗುತ್ತಿದೆ. ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ಕೆಲಸ ಬಹುತೇಕ ತುಂಡು ಗುತ್ತಿಗೆ ಮುಖಾಂತರ ಆಗುತ್ತದೆ. ಅದು ಕೆಲಸ ಮಾಡಿಸುವವರಿಗೆ ಗೊತ್ತು ಮತ್ತು ಕೆಲಸ ಮಾಡುವವರಿಗೆ ಗೊತ್ತು. ಸಮಾಜಕ್ಕೆ ಅದು ಗೊತ್ತೇ ಆಗುವುದಿಲ್ಲ. ಈಗ 5 ಲಕ್ಷ ರೂ.ಗಳವರೆಗೆ ಟೆಂಡರ್ ಕರೆಯಬಹುದು ಅಥವಾ ಬಿಡಬಹುದು, ಅದಕ್ಕೆ ಆಪ್‌ಷನ್ ಇದೆ. ಇದರರ್ಥ ನಾವು ಟೆಂಡರ್ ಕರೆಯಬಾರದು ಎಂದಲ್ಲ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಕರೆದೇ ಕೆಲಸವನ್ನು ಮಾಡಿಸಬೇಕು ಎಂಬ ಸರ್ಕಾರಿ ಆದೇಶವನ್ನು ಕಳುಹಿಸಿದರೆ ಒಳ್ಳೆಯದು ಇಲ್ಲದಿದ್ದರೆ ನಾವು ಜಿಲ್ಲಾ ಪಂಚಾಯತಿಯವರು, ಜಿಲ್ಲಾ ಪಂಚಾಯತಿಯಲ್ಲಿಯೇ ನಾವು ಒಂದು ಠರಾವು ಮಾಡಿಕೊಳ್ಳುತ್ತೇವೆ, ಅದನ್ನಾದರೂ ತಾವು ಬೆಂಬಲಿಸಿದರೆ ಒಳ್ಳೆಯದು. ಒಟ್ಟಿನಲ್ಲಿ ಟೆಂಡರ್ ಮುಖಾಂತರ ಇದು ಆಗಬೇಕು. ಏಕೆಂದರೆ ಹಿಂದಿನ ಸರ್ಕಾರವಿದ್ದಾಗ ತುಂಡು ಗುತ್ತಿಗೆಯನ್ನು ಜಾರಿಗೆ ತರಲಾಯಿತು. ಈ ತುಂಡು ಗುತ್ತಿಗೆ ಜಾರಿಗೆ ಬಂದಮೇಲೆ ಎಸ್.ಆರ್. ರೇಟ್ ಬಗ್ಗೆ ಅನಾಲಿಸಿಸ್ ನೋಡಿದರೆ ಕಳೆದ ಏಳೆಂಟ್ ವರ್ಷದಲ್ಲಿ ಈ ಎಸ್.ಆರ್ ರೇಟ್ ಎಷ್ಟು ಹೆಚ್ಚಾಗಿದೆ ಎಂಬುದನ್ನು ತಾವು ನೋಡಬೇಕು. ತುಂಡು ಗುತ್ತಿಗೆಯನ್ನು ಎಸ್.ಆರ್. ರೇಟ್‌ಗೆ ಕೊಡುವುದು, ಸಾಕಷ್ಟು ಲಾಭ ಕಂಟ್ರಾ ್ಯಕ್ಟರ್‌ಗೆ ಆಗಬೇಕು ಕಂಟ್ರಾ ್ಯಕ್ಟರ್‌ಗೆ ಲಾಭವಾದರೆ ಕೆಲಸವನ್ನು ಕೊಡುವ ಇಂಜಿನಿಯರ್‌ಗೂ ಲಾಭವಾಗುತ್ತದೆ, ಆ ಕೆಲಸವನ್ನು ಆ ಕಂಟ್ರಾ ್ಯಕ್ಟರ್‌ಗೆ ಕೊಡಿಸುವ ರಾಜಕಾರಣಿಗೂ ಲಾಭವಾಗುತ್ತದೆ. ಇದರಿಂದಾಗಿ ಈ ಒಂದು ವ್ಯವಸ್ಥೆಯನ್ನು ಹದಗೆಡಿಸಲಾಗಿದೆ. ಇವೊತ್ತು ಸರ್ಕಾರ ಏನು ರೊಕ್ಕ ಖರ್ಚು ಮಾಡುತ್ತದೆ ಗ್ರಾಮೀಣಾಭಿವೃದ್ಧಿ ಸಲುವಾಗಿ ಅದರಲ್ಲಿ ಬಹಳಷ್ಟು ಸದ್ವಿನಿಯೋಗ ಆಗಲಾರದ ವ್ಯವಸ್ಥೆಯನ್ನು ನಾವು ರೂಪಿಸಿದ್ದೇವೆ. ಇದನ್ನು ಪ್ರಾಮಾಣಿಕವಾಗಿ ನಾವೆಲ್ಲರೂ ಒಪ್ಪಬಹುದು. ಇದು ಬದಲಾಗಬೇಕು. ಬದಲಾಗುವುದು ಬಹಳ ಹಗುರವಿದೆ, ನೀವು ಆ ಕೆಲಸ ಮಾಡಿದರೆ ಬದಲಾಗುತ್ತದೆ ಹಗಲೆಲ್ಲಾ ಟೆಂಡರ್ ಕರೆಯ ಬೇಕಾದರೆ ಅಡ್ವರ್ಟೈಸ್‌ಮೆಂಟ್‌ಗೆ ಕಾಸ್ಟ್ ಖರ್ಚಾಗುತ್ತದೆ ಎಂದು ಟೆಂಡರ್ ವ್ಯವಸ್ಥೆಯನ್ನು ಒಪ್ಪದವರು ನಿಮಗೆ ಹೇಳಬಹುದು. ಒಮ್ಮೆ ನೀವು ಹುಲಕೋಟಿ ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುವಂಥ ಕಂಟ್ರಾ ್ಯಕ್ಟರ್ ಯಾರು ಎಂದು ಒಮ್ಮೆ ರಿಜಿಸ್ಟರ್ ಮಾಡಿಸಿಬಿಡಿ. ಅವರು ಐವತ್ತು ಮಂದಿ ಬರಲಿ, ನೂರು ಮಂದಿ ಬರಲಿ, ಒಮ್ಮೆ ರಿಜಿಸ್ಟ್ರೇಷನ್‌ನೊಳಗೆ ಆ ಕಂಟ್ರಾ ್ಯಕ್ಟರ್ ಬಂದರೆ ಮುಂದೆ ನಮಗೇನು ನೀವು ಟೆಂಡರ್ ಕರೆಯುವುದು ಬೇಕಾಗಿಯೇ ಇಲ್ಲ. ಎಲ್ಲಾ ಕಂಟ್ರಾ ್ಯಕ್‌ರ್‌ಗಳಿಗೆ ನೀವು ಟೆಂಡರ್ ಫಾರ್ಮ್ ಕಳುಹಿಸಿಬಿಟ್ಟರೆ ಆಯಿತು. ಇಂಥ ಕೆಲಸವಿದೆ ಇಷ್ಟು ಎಸ್ಟಿಮೇಟ್ ಇದೆ, ನೀವು ಕಾಂಪಿಟಿಟೀವ್ ಆಗಿ ಪಾರ್ಟಿಸಿಪೇಟ್ ಮಾಡಿರಿ ಎಂದು ಹೇಳಿದರಾಯಿತು. ನೀವು ಕಾಂಪಿಟಿಷನ್‌ಗೆ ಓಪನ್ ಮಾಡಿದರೆ ಎಸ್.ಆರ್. ರೇಟ್‌ಗಿಂತ ಕಡಿಮೆಯಲ್ಲಿಯೇ ಕಂಟ್ರಾ ್ಯಕ್ಟ್ ಸಾಕಷ್ಟು ಆಗುತ್ತದೆ. ಇದರಿಂದ ಜನರಿಗೂ ಕೂಡ ಎಷ್ಟು ಹಣ ಎಂಥ ಕೆಲಸಕ್ಕೆ

ಮೀಸಲಾಗಿಟ್ಟಿದ್ದಾರೆ ಎನ್ನುವುದು ಜನರಿಗೂ ಕೂಡ ಗೊತ್ತಾಗುತ್ತದೆ. ಸಮುದಾಯಕ್ಕೆ ಗೊತ್ತಾಗುತ್ತದೆ, ನಂತರ ಅದರ ಪರಿವೀಕ್ಷಣೆ ಪ್ರಾರಂಭವಾಗುತ್ತದೆ. ಅದನ್ನು ಗ್ರಾಮಸಭೆಯಲ್ಲಿ ವರದಿ ಒಪ್ಪಿಸಬೇಕೆಂದು ನೀವು ಹೇಳುತ್ತೀರಿ. ಗ್ರಾಮಸಭಾದೊಳಗೆ ಪೋಸ್ಟ್‌ಮಾರ್ಟಂ ಆಗುತ್ತದೆ.

ಶ್ರೀ ಎಂ.ಫೈ. ಫೋರ್ಪಡೆ : ಈಗ ತಾವೇನು ಹೇಳುತ್ತಿದ್ದೀರಿ ಅದೇ ರೀತಿ ಈ ಸರ್ಕಾರ ಅಧಿಕಾರಕ್ಕೆ ಬಂದಾಗ ಇತ್ತು. ಅದನ್ನು ಏಕೆ ಬದಲಾಯಿಸಿದಿರಿ?

ಶ್ರೀ ಡಿ.ಆರ್. ಪಾಟೀಲ್ : ಏನೋ ಒಟ್ಟಿನಲ್ಲಿ ಬದಲಾಯಿಸಲಾಯಿತು. ಬದಲಾಯಿಸಿದ ಕಾನೂನಿನೊಳಗೆ ಏನು ಮಾಡಬೇಕು ಎನ್ನುವಂಥ ಸಲಹೆಯನ್ನು ನಾನು ತಮಗೆ ಕೊಟ್ಟೆ. ಆದುದರಿಂದ ದಯವಿಟ್ಟು ಅದನ್ನು ಬದಲಾವಣೆ ಮಾಡಬೇಕು. ಈಗ ತಾವು ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತಿಗಳನ್ನು ಸಾಕಷ್ಟು.

ಶ್ರೀ ವೈ.ಕೆ. ರಾಮಯ್ಯ : ದಯವಿಟ್ಟು ಮಾನ್ಯ ಸದಸ್ಯರು ಕ್ಷಮಿಸಬೇಕು. ತಮಗೆ ಮಾತನಾಡಲು ಕಡಿಮೆ ಸಮಯ ಇದ್ದರೂ ನಾನು ಮಧ್ಯೆ ಮಾತನಾಡಬೇಕಾಗಿದೆ. ಮಾನ್ಯ ಉಪಾಧ್ಯಕ್ಷರೆ, ಪಕ್ಷಾತೀತವಾಗಿ ಶಾಸಕರೆಲ್ಲರಿಗೂ ಈ ಒಂದು ಸಮಸ್ಯೆಯನ್ನು ಒಂದು ತೊಂದರೆ ಎಂದು ಹೇಳಬೇಕೋ ಅಥವಾ ಕಷ್ಟ ಎಂದು ಹೇಳಬೇಕೋ ನನಗೆ ಗೊತ್ತಿಲ್ಲ. ಆ ಕಷ್ಟ ಏನೆಂದರೆ ಈಗ ಗ್ರಾಮ ಪಂಚಾಯತಿಗಳಿಗೆ, ಜಿಲ್ಲಾ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಅಧಿಕಾರವನ್ನು ಹೆಚ್ಚಿಗೆ ಕೊಡಬೇಕು ಮತ್ತು ಹಣವನ್ನು ಹೆಚ್ಚಿಗೆ ಕೊಡಬೇಕು ಮತ್ತು ವಿಕೇಂದ್ರೀಕರಣ ಮಾಡಬೇಕು ಎನ್ನುವುದನ್ನು ನಾನೂ ಕೂಡ ತಾತ್ವಿಕವಾಗಿ ಒಪ್ಪುವ ವಿಷಯ. ಆದರೆ ಈ ವಿಕೇಂದ್ರೀಕರಣ ಮಾಡಿದಂಥ ಅಧಿಕಾರ ಮತ್ತು ಹಣ, ಈ ಎರಡರಲ್ಲೂ ಅಧಿಕಾರ ಹೇಗೆ ಚಲಾಯಿಸಲ್ಪಡುತ್ತಿದೆ ಮತ್ತು ಕೋಟ್ಯಾಂತರ ರೂಪಾಯಿ ಹಣ ಹೇಗೆ ಸದ್ವಿನಿಯೋಗವಾಗುತ್ತಿದೆ ಎನ್ನುವುದರ ಬಗ್ಗೆ ನಾನು ಪಾಟೀಲರು ಹೇಳಿದ ಮಾತಿಗೆ ಧ್ವನಿಗೊಡಿಸುತ್ತಿದ್ದೇನೆ. ನನ್ನ ಸಲಹೆ ಇಷ್ಟೆ, ನೀವು ಮೂರೂವರೆ ಲಕ್ಷ ರೂಪಾಯಿ ಪಂಚಾಯಿತಿಗೆ ಕೊಡಿ, ಆದರೆ ಪಂಚಾಯಿತಿ ಮಟ್ಟದಲ್ಲಿಯೇ ಕಂಟ್ರಾ ್ಯಕ್ಟರ್‌ಗಳನ್ನು ರಿಜಿಸ್ಟ್ರೇಶನ್ ಮಾಡಿಸಿ, ಅವರ ಮಧ್ಯದಲ್ಲಿಯೇ ನೀವು ಕಂಟ್ರಾ ್ಯಕ್ಟ್ ಕೊಡಿ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಕಂಟ್ರಾ ್ಯಕ್ಟರ್‌ಗಳವರನ್ನೇ ರಿಜಿಸ್ಟ್ರೇಶನ್ ಮಾಡಿಸಿ ರಾಜ್ಯ ಮಟ್ಟದಲ್ಲಿ ಬೇಡ. ಅವರಿಗೇ ಕಾಂಟ್ರ್ಯಾಕ್ಟರ್ ಕೊಡಿ. ಅದೇ ರೀತಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕೂ ಪಂಚಾಯಿತಿ ಕಂಟ್ರಾ ್ಯಕ್ಟರ್‌ಗಳನ್ನೆ ರಿಜಿಸ್ಟ್ರೇಷನ್ ಮಾಡಿಸಿ. ಅವರಿಗೇ ಕಂಟ್ರಾ ್ಯಕ್ಟ್ ಕೊಡಿ. ಇದ್ಯಾವುದಾದರೂ ಒಂದು ಒಳ್ಳೆಯ ಬದಲಾವಣೆಯಾದ ವ್ಯವಸ್ಥೆಯನ್ನು ಈ ದೇಶದಲ್ಲಿ ತರಲೇಬೇಕಾಗುತ್ತದೆ. ಏಕೆಂದರೆ ಈ ಅಧಿಕಾರಿಗಳನ್ನೆಲ್ಲಾ ಈ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗೆ ಕೊಟ್ಟು, ಹಣವೆಲ್ಲವನ್ನೂ ಈ ಸಂಸ್ಥೆಗಳಿಗೆ ಕೊಟ್ಟು ನಾವು ಹಳ್ಳಿಗಳಿಗೆ ಹೋದರೆ ವಿದ್ಯುಚ್ಛಕ್ತಿ ಬಗ್ಗೆ, ಕುಡಿಯುವ ನೀರಿನ ಬಗ್ಗೆ, ಪಂಚಾಯಿತಿ ಅಧ್ಯಕ್ಷರ ಮನೆ ಮುಂದೆ ಇರುವ ಕೊಳಕು ನೀರಿನ ಬಗ್ಗೆಯೂ ಕೂಡ ಶಾಸಕರುಗಳನ್ನೇ ಬೈಯ್ಯುತ್ತಾರೆ. ತಮಗೂ ಕೂಡ ಇದರ ಅನುಭವವಾಗಿರಬಹುದು. ಆದುದರಿಂದ ತಾವೂ ಕೂಡ ಇದರ ಬಗ್ಗೆ ಹೇಳಬೇಕಾಗುತ್ತದೆ. ಸ್ವಾಮಿ, ಅಧಿಕಾರವೆಲ್ಲವನ್ನೂ ಅವರಿಗೆ ಕೊಟ್ಟಿದ್ದೀರಿ ಮತ್ತು ಹಣವೆಲ್ಲವನ್ನೂ ಅವರಿಗೆ ಕೊಟ್ಟಿದ್ದೀರಿ. ಆದರೆ ವಿದ್ಯುಚ್ಛಕ್ತಿ ಸಮಸ್ಯೆ ಬಗ್ಗೆ ನಾವು ನಾವು ಯೋಚನೆ ಮಾಡಬೇಕಾಗುತ್ತದೆ. I can understand. ಈಗ ಕುಡಿಯುವ

ನೀರಿನ ಬಗ್ಗೆ practically the MLA's have no role. ಏಕೆಂದರೆ ಮಂಜೂರು ಮಾಡುವವರು ಜಿಲ್ಲಾ ಪಂಚಾಯಿತಿಯವರು, ಮೇನ್‌ಟೇನ್ ಮಾಡುವವರು ತಾಲ್ಲೂಕು ಪಂಚಾಯಿತಿಯವರು, ದುಡ್ಡು ಖರ್ಚು ಮಾಡುವವರು ಪಂಚಾಯತಿಯವರು. What is that we should do? ನಾವೇನು ಮಾಡಬೇಕು?

ಅಧ್ಯಕ್ಷರು : ಜನ ಬಂದು ಕೇಳುವುದು ನಮ್ಮನ್ನು.

ಶ್ರೀ ವೈ.ಕೆ. ರಾಮಯ್ಯ : ಬರೀ ಜನರು ನಮ್ಮನ್ನು ಬಂದು ಕೇಳುವುದಲ್ಲ, ನನ್ನ ಭಾಷೆಯಲ್ಲಿ ಹೇಳಬೇಕೆಂದರೆ ಬೈಯ್ಯುವುದು. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರುಗಳು ಮೂರು ಜನರೂ ಸೇರಿಕೊಂಡು ನಮ್ಮನ್ನು ಬೈಯುತ್ತಿರುತ್ತಾರೆ. ನಾನು ಇದನ್ನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಬಹುಶಃ ಇದೇ ಕಷ್ಟ ಬೇರೆ ಪಕ್ಷದ ಶಾಸಕರುಗಳಿಗೂ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಫೋರ್ಪಡೆ ಸಾಹೇಬರೆ, ನೀವು ಅಧಿಕಾರವನ್ನು ಹಂಚಿ, ಅದಕ್ಕೆ ತಾತ್ವಿಕವಾಗಿ ನನ್ನ ಒಪ್ಪಿಗೆ ಇದೆ. ಹಣವನ್ನು ನೀವು ಎಲ್ಲವನ್ನು ಅವರಿಗೇ ಕೊಟ್ಟುಬಿಡಿ, 10ನೇ ಫೈನಾನ್ಸ್ ದುಡ್ಡು, 11ನೇ ಫೈನಾನ್ಸ್ ದುಡ್ಡು ಎಲ್ಲವನ್ನೂ ಅವರ ಮುಂದೆಯೇ ಹಾಕಿದ್ದೇವೆ. ಅದೇ ರೀತಿ ಇ.ಎ.ಎಸ್.ಹಣ, ಫ್ಲಡ್ ರಿಲೀಫ್ ಹಣ ಎಲ್ಲವೂ ಅವರ ಮುಂದೆಯೇ ಇದೆ.

11.50 ಪಿ.ಎಂ.

ಡ್ರಾಟ್ ರಿಲೀಫ್ ಅವರ ಮುಖಾಂತರ ಆಗುತ್ತದೆ. ಕುಡಿಯುವ ನೀರೂ ಕೂಡ ಅವರ ಮುಖಾಂತರ ಆಗುತ್ತದೆ. ಮತ್ತು ನಾವು ಹಳ್ಳಿಗಳಿಗೆ ಹೋದರೆ ಎಲ್ಲಾ ಸಮಸ್ಯೆಯನ್ನು ನಮ್ಮ ಮುಂದೆ ತಂದಿಡುತ್ತಾರೆ. ಅಧಿಕಾರವನ್ನು ಅವರಿಗೆ ಕೊಡುತ್ತೀರಿ, ಹಣವನ್ನು ಅವರಿಗೆ ಕೊಡುತ್ತೀರಿ, ಆದರೆ ಜವಾಬ್ದಾರಿಯನ್ನು ಅಂದರೆ ಅಕೌಂಟ ಬಿಲಿಟಿಯನ್ನು ಮಾತ್ರ ನಮಗೆ ಕೊಡುತ್ತೀರಿ. ಆದುದರಿಂದ ಈ ವಿಷಯದಲ್ಲೆ ನನ್ನ ಬೇರೆ ಸ್ನೇಹಿತರ ಅಹವಾಲು ಇದೆ ಎಂದು ಭಾವಿಸಿಕೊಳ್ಳುತ್ತೇನೆ. ಹಣ ಕೊಟ್ಟಿರುವುದು ಸದುಪಯೋಗ ಆಗುತ್ತಿದೆಯೇ? ಅಧಿಕಾರವನ್ನೂ ಎಲ್ಲಾ ಅವರಿಗೆ ಕೊಟ್ಟು, ಹಣ ಎಲ್ಲಾ ಅವರಿಗೆ ಕೊಟ್ಟು, ಜವಾಬ್ದಾರಿಯನ್ನು ನಮಗೆ ಕೊಟ್ಟರೆ ನಾವೇನು ಮಾಡೋಣ ಸ್ವಾಮಿ? ಇದು ದಿನನಿತ್ಯ ನಾವು ಅನುಭವಿಸುವಂತಾದ್ದು. ಚೇರ್‌ಮನ್ ಮನೆ ಮುಂದೆ ಇರುವ ಚರಂಡಿ ಕೊಳೆಯುತ್ತಿರುವುದನ್ನು ನಮಗೆ ಜವಾಬ್ದಾರಿ ಮಾಡುತ್ತಾರೆ. Electricity, I can understand. Major Irrigation, I can understand. State Highways, I can understand. ಪಂಚಾಯಿತಿಯವರು ಕೆ.ಇ.ಬಿಗೆ ಡೆಪಾಸಿಟ್ ಕಟ್ಟುವುದಿಲ್ಲ. ಅದಕ್ಕೆ ಎಂ.ಎಲ್.ಎ.ರವರನ್ನು ಚೇರ್‌ಮನ್ ಜೊತೆಯಲ್ಲಿ ನಿಂತುಕೊಂಡು ಬೀದಿಯಲ್ಲಿ ಬಯ್ಯುವುದು. ಇದು ಅತ್ಯಂತ ಗಂಭೀರವಾದಂತಹ ಪ್ರಶ್ನೆ ಇದೆ. ಮಾನ್ಯ ಫೋರ್ಪಡೆಯವರು ಹಿರಿಯರು, ತಾವು ಅಧಿಕಾರ ಕೊಡಿ ತೊಂದರೆ ಇಲ್ಲ, ಹಣನೂ ಕೊಡಿ At the same time, you must make them accoutable. You must make them responsible and you should relieve us. ನಮ್ಮನ್ನು ಹಣದಿಂದ ಹಾಗೂ ಅಧಿಕಾರದಿಂದ ಹೇಗೆ ರಿಲೀವ್ ಮಾಡಿದರೋ ಹಾಗೆ ಜವಾಬ್ದಾರಿಯಿಂದಲೂ ರಿಲೀವ್ ಮಾಡುವುದಕ್ಕೆ ದಯಮಾಡಿ ತಾವು ಸಹಾಯ ಮಾಡಬೇಕೆಂದು ನಾನು ಈ ಸಭೆಯಲ್ಲೆ ಎಲ್ಲರ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ವೈ ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸ್ನೇಹಿತರು ಹೇಳಿದ ಹಾಗೆ ಅದರ ಬಗ್ಗೆ ಸಾಕಷ್ಟು ಅನುಭವವಿದೆ. ಆದರೆ ಪಂಚಾಯತ್ ರಾಜ್ ತತ್ವದ ಬಗ್ಗೆ ಒಂದೆರಡು ಮಾತನ್ನು ನಾನು ಈ ಸಂದರ್ಭದಲ್ಲೆ ಹೇಳದೆ ಹೋದರೆ ತಪ್ಪಾಗುತ್ತದೆ. ಈ ವಿಕೇಂದ್ರೀಕರಣದ ಉದ್ದೇಶ ಏನೆಂದರೆ ಗ್ರಾಮ ಮಟ್ಟವಾಗಲಿ, ತಾಲ್ಲೂಕು ಮಟ್ಟವಾಗಲಿ ಹಾಗೂ ಜಿಲ್ಲಾ ಮಟ್ಟವಾಗಲಿ, ಯಾವ ಹಂತದಲ್ಲಿ ಯಾವ ಕೆಲಸ ಮಾಡುವುದಕ್ಕೆ ಹಾಗೂ ಮಾಡಿಸುವುದಕ್ಕೆ ಸಾಧ್ಯ ಅದು ಆ ಮಟ್ಟದಲ್ಲಿ ಆಗಬೇಕು. ಅಂದರೆ ಗ್ರಾಮ ಮಟ್ಟದಲ್ಲಿ ಆಗುವ ಕೆಲಸ ಅನಾವಶ್ಯಕವಾಗಿ ತಾಲ್ಲೂಕು ಮಟ್ಟಕ್ಕೆ ಅಥವಾ ಜಿಲ್ಲಾ ಮಟ್ಟಕ್ಕೆ ಅಥವಾ ರಾಜ್ಯ ಮಟ್ಟಕ್ಕೆ ಹೋಗಬಾರದು. ಅದೇ ರೀತಿ ರಾಜ್ಯಮಟ್ಟದಲ್ಲಿ ಆಗುವ ಕೆಲಸವನ್ನು ಕೇಂದ್ರದವರು ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ಇದು ವಿಕೇಂದ್ರೀಕರಣದ ಮೂಲಭೂತವಾದಂತಹ ತತ್ವ. ಅದರ ಪ್ರಕಾರ ಅದಕ್ಕೆ ಬೇಕಾಗುವಂತಹ ಸಿಬ್ಬಂದಿ ಮತ್ತು ಹಣದ ವ್ಯವಸ್ಥೆಯನ್ನು ನಾವು ಮಾಡುತ್ತಾ ಹೋಗಬೇಕಾಗುತ್ತದೆ. ದಿವಂಗತ ರಾಜೀವ್‌ಗಾಂಧಿಯವರು ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಮಾಡುವುದಕ್ಕೆ ಹೊರಟಾಗ ಇದೇ ಮಾತು ಬಂತು ಶಾಸಕರು ಏನು ಮಾಡಬೇಕೆಂದು ಅವರು ಹೇಳಿದರು. ಚರಂಡಿ ರಿಪೇರಿ ಮಾಡುವ ಕೆಲಸ ಮಾಡುವುದಕ್ಕೆ ಇಷ್ಟಪಡುವುದಾದರೆ ಆ ಮಟ್ಟದಲ್ಲೆ ಆರಿಸಿ ಬನ್ನಿ. ಈ ಪಾರ್ಲಿಮೆಂಟ್‌ಗೆ, ಅಸೆಂಬ್ಲಿಗೆ ನೀವು ಹಾಗಬೇಕಾದ್ದು ಇಲ್ಲ, ಈ ಮಾತು ನಿಷ್ಠುರವಾಗಿ ಅವರು ಹೇಳಬೇಕಾಯಿತು. ಶಾಸಕರಾಗಲಿ ಯಾರೇ ಆಗಲಿ, ಯಾವ ಮಟ್ಟದಲ್ಲಿ ಅವರು ಸೇವೆ ಮಾಡುವುದಕ್ಕೆ ಇಷ್ಟಪಡುತ್ತಾರೆ, ಆ ಮಟ್ಟದಲ್ಲಿ ಅವರು ಆರಿಸಿ ಬರುವುದು ಒಳ್ಳೆಯದು. ಇಲ್ಲದೇ ಹೋದರೆ ಪಾರ್ಲಿಮೆಂಟ್ ಮಟ್ಟಕ್ಕೆ ಆರಿಸಿ ಹೋಗಿ ನಾವು ಚರಂಡಿ ರಿಪೇರಿ, ಕುಡಿಯುವ ನೀರಿನ ಜವಾಬ್ದಾರಿಯನ್ನು ನಾವು ಅಲ್ಲಿಂದ ನಿರ್ವಹಿಸುತ್ತೇವೆ ಎಂದರೆ ಅದು ಅಷ್ಟು ಸಮಂಜಸ ಇರುವುದಿಲ್ಲ. ನಾನೇ ಇಲ್ಲಿ ಶಾಸಕನಾಗಿ ಮಂತ್ರಿಯಾಗಿ ಪ್ರತಿಯೊಂದು ಜವಾಬ್ದಾರಿ, ಅದು ಕುಡಿಯುವ ನೀರಾಗಲಿ, ರಸ್ತೆಯಾಗಲಿ ನನ್ನ ತಲೆ ಮೇಲೆ ತೆಗೆದುಕೊಳ್ಳುವುದಾದರೆ ಅದು ಪ್ರಾಕ್ಟಿಕಲ್ ಆಗುವುದಿಲ್ಲ. ಆದುದರಿಂದ ನಾವು ಅಪವಾದಕ್ಕೆ ಗುರಿಯಾಗುತ್ತೇವೆ ಮತ್ತು ಜನಕ್ಕೂ ಸಮಾಧಾನ ಆಗುವುದಿಲ್ಲ ಒಬ್ಬರು ಅಧಿಕಾರ ತೆಗೆದುಕೊಂಡು ಇನ್ನೊಬ್ಬರಿಗೆ ಅಧಿಕಾರ ಕೊಡುವ ಪ್ರಶ್ನೆ ಇಲ್ಲ. ಯಾವ ಹಂತದಿಂದ ನಾವು ಅಧಿಕಾರ ಹಂಚಬೇಕು ಹಣ ಹಂಚಬೇಕು, ಅದನ್ನು ಮಾಡಿದ್ದೇವೆ. ಶಾಸಕರಾಗಲಿ, ಎಂ.ಪಿ. ಗಳಾಗಲಿ ಮಂತ್ರಿಗಳಾಗಲಿ ಈ ವ್ಯವಸ್ಥೆಗೆ ಪೂರಕವಾಗಿ ಕೆಲಸ ನಾವು ಮಾಡಬೇಕೇ ಹೊರತು, ನಾವು ಬೇರೆ, ಈ ವ್ಯವಸ್ಥೆ ಬೇರೆ ಎನ್ನುವಂತಹ ಭಾವನೆಯನ್ನು ಈವತ್ತು ನಾವು ನೋಡುತ್ತಿದ್ದೇವೆ. ಇದರಿಂದ ಒಂದು ವಿರುದ್ಧ ವಾತಾವರಣ ಹುಟ್ಟುತ್ತಿದೆ. ಅದನ್ನು ಹೋಗಲಾಡಿಸುವುದು ಪಂಚಾಯತ್ ರಾಜ್ಯದ ದೃಷ್ಟಿಯಿಂದ ಬಹಳ ಮಹತ್ವದ್ದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು : ಎಲ್ಲಾ ಪಕ್ಷದ ಶಾಸಕರು ಅವರವರ ಪಕ್ಷದ ಪ್ರಣಾಳಿಕೆಯನ್ನು ಜನರ ಮುಂದೆ ಇಟ್ಟು ಹೋಗುತ್ತಾರೆ. ಆದರೆ ಪಂಚಾಯಿತಿಗೆ ಹಾಗೂ ತಾಲ್ಲೂಕು ಸಮಿತಿ ಸದಸ್ಯರಿಗೆ ಪ್ರಣಾಳಿಕೆ ಇರುವುದಿಲ್ಲ. ಜನ ನಮ್ಮ ಹತ್ತಿರ ಬರುತ್ತಾರೆ. ಅವರ ಹತ್ತಿರ ಹೋಗುವುದೇ ಇಲ್ಲ. ಇದನ್ನು ನಾವೆಲ್ಲಾ ಶಾಸಕರು ಅನುಭವಿಸುತ್ತಿದ್ದೇವೆ. ಇದನ್ನು ನಾನು ಎಲ್ಲಾ ಶಾಸಕರ ಪರವಾಗಿ ಹೇಳುತ್ತಿದ್ದೇನೆ. ಅದಕ್ಕೇನು ಹೇಳುತ್ತೀರಿ?

ಶ್ರೀ ವೈ.ಕೆ. ರಾಮಯ್ಯ : ನಾನು ಮೊದಲೇ ಹೇಳಿದ್ದೇನೆ, ತಾತ್ವಿಕವಾಗಿ ವಿಕೇಂದ್ರೀಕರಣಕ್ಕೆ ನಾನು ವಿರೋಧ ಅಲ್ಲ. ಸಂವಿಧಾನ 72 ಹಾಗೂ 73ರ ಅಮೆಂಡ್‌ಮೆಂಟ್ ಮಾಡುವಂತಹ ಸಂದರ್ಭದಲ್ಲಿ ಏನು ವಾದ ವಿವಾದ ನಡೆಯಿತು ಎಂಬುದು ನಮಗೂ ಸಹ ಅರಿವಿದೆ. ಪ್ರಶ್ನೆ ಇರುವುದು ಇಷ್ಟೆ. ನಾನು ಏರುವ ಎತ್ತರಕ್ಕೆ ನೀನು ಏರಬಲ್ಲೆಯೂ, ನಾನು ಮುಳುಗುವ ಆಳಕ್ಕೆ ನೀನು ಮುಳುಗಬಲ್ಲೆಯೂ ಎಂದಿದೆ. ಮಾನ್ಯ ಪೋರ್ಪಡೆಯವರಂಥ ಹಿರಿಯರು, ಅವರು ಏರುವ ಎತ್ತರಕ್ಕೆ ನಾನು ಏರಲು ಆಗದೆ ಇದ್ದರೂ ಅವರು ಮುಳುಗೆಂದಾಗ ನನಗೆ ಮುಳುಗುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಇದೆ. ಈಗ ಪ್ರಶ್ನೆ ಇರುವುದು it is true. The legislators duty is only to make a legislation. ಅದನ್ನು ದಯಮಾಡಿ ಎಲ್ಲಾ ಜಿಲ್ಲೆಗೂ ಹೋಗಿ ಹೇಳಿಬಿಡಿ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಪಂಚಾಯಿತಿಗಳಿಗೆ ಸದಸ್ಯರ ಸಭೆ ಕರೆದು, ನೀವು ಪತ್ರಿಕೆಗೆ ಕೊಡಿ, ಎಂ.ಎಲ್.ಎ ಗಳಿಗೆ ಲೆಜಿಸ್ಲೇಷನ್ ಮಾಡುವುದಷ್ಟೇ ಕೆಲಸ, ಕಾನೂನಿಗೆ ಕೈಯೆತ್ತುವುದು ಅಷ್ಟೇ ಸೀಮಿತವಾದುದು ಎಂದು. ಸ್ವಾಮಿ, ಒಂದು ಉದಾಹರಣೆ ಹೇಳಿದರೆ ಅವರಿಗೆ ಅರಿವು ಆಗುತ್ತದೆ ಎಂದು ಕಾಣುತ್ತದೆ. ಒಂದು ಅಸ್ಪಶ್ಯರ ಕಾಲೋನಿಯಲ್ಲಿ ಮೂರು ದಿವಸದ ಹಿಂದೆ ಆದಂತಹ ಒಂದು ಘಟನೆಯನ್ನು ಹೇಳುತ್ತೇನೆ. ಅಲ್ಲಿ ಬೀದಿ ದೀಪಹಾಕಿಲ್ಲವೆಂದು ನಮ್ಮನ್ನು ಬೀದಿಯಲ್ಲಿ ನಿಲ್ಲಿಸಿಕೊಂಡು ಹರಾಜು ಹಾಕುತ್ತಾರೆ. ನಾವು ಎಷ್ಟೆಲ್ಲಾ ಹಗಲು ರಾತ್ರಿ ಶ್ರಮಪಟ್ಟರೂ ನಮ್ಮನ್ನು ಬೀದಿಯಲ್ಲಿ ನಿಲ್ಲಿಸಿ ಹರಾಜು ಹಾಕುತ್ತಾರೆ. ನಾನು ಎಲ್ಲಾ ಪಂಚಾಯಿತಿಗಳಿಗೂ ಕಾಗದ ಬರೆದು ನಿಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾವ್ಯಾವ ಪ್ರದೇಶಕ್ಕೆ ಬೀದಿ ದೀಪ ಬೇಕಾಗಿದೆ, ದಯಮಾಡಿ ಒಂದು ರೆಸಲ್ಯೂಷನ್ ಮಾಡಿಕೊಡಿ ಎಂದು ಕೇಳಿದ್ದೇನೆ. ಆದರೆ, ಅದರ ಕಾರ್ಯದರ್ಶಿಗಳಾಗಲಿ ಅಥವಾ ಅಧ್ಯಕ್ಷರಾಗಲಿ ಮಾಡುವುದಿಲ್ಲ. They don't care. ನಾನೇನು ಮಾಡಬೇಕು? ಅಲ್ಲಿ ಒಂದು ಕಾನೂನು ಇದೆ. ಪಂಚಾಯಿತಿಯವರು ಕೆ.ಇ.ಬಿಯದು ಪೇಮೆಂಟ್ ಮಾಡಬೇಕು. ಅವರು ಬಿಲ್ ತುಂಬಬೇಕಾಗಿದೆ. ಅದು ತಮಗೂ ಅನುಭವ ಬಂದಿದೆ. ಆ ಬಿಲ್ ತುಂಬಬೇಕಾಗಿರುವುದರಿಂದ a resolution from Panchayat is mandatory. ಆದರೆ ಪಂಚಾಯಿತಿ ಸೆಕ್ರೆಟರಿ ಹಾಗು ಚೇರ್‌ಮೆನ್ ಇಬ್ಬರು ನಿಲ್ಲಿಸಿಕೊಂಡು ನಮ್ಮನ್ನು ಕಾಲೋನಿಯವರ ಕಡೆಯಿಂದ ಬಯ್ಯಿಸುತ್ತಾರೆ. ಆದರೆ ರೆಸಲ್ಯೂಷನ್ ಮಾಡಿ ಕಳುಹಿಸುವುದಿಲ್ಲ. ಏನು ಮಾಡಬೇಕು? ನನ್ನ ಪ್ರಶ್ನೆ ಇಷ್ಟೆ. ತಾತ್ವಿಕವಾಗಿ ಅವರಿಗೆ ಅಧಿಕಾರ ಕೊಟ್ಟಿರುವುದಕ್ಕೆ ನನ್ನ ಅಭ್ಯಂತರ ಇಲ್ಲ. But, how much they are accountable? How much they are workable? ಎಷ್ಟುಮಟ್ಟಿಗೆ ಅವು ಕೆಲಸ ಮಾಡುತ್ತಿವೆ? ಅದಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಅವರಿಗೆ ಇನ್ನೂ ಅಧಿಕಾರ ಕೊಡಿ, ಹಣ ಕೊಡಿ, ನನಗೆ ಸಂತೋಷ. ಅದನ್ನು ನಾವೇ ವಿರೋಧ ಮಾಡುವಷ್ಟು ನೀಚತನಕ್ಕೆ ನಾವು ಹೋಗುವುದಿಲ್ಲ. I fully agree with you. ಅವರಿಗೆ ಇನ್ನು ಅಧಿಕಾರ ಕೊಡಬೇಕಾಗುತ್ತದೆ. ಡೆಲ್ಲಿಯಲ್ಲಿ ಅಧಿಕಾರವನ್ನು ಹಾಗೂ ಹಣವನ್ನು ಹಂಚಬೇಕಾಗುತ್ತದೆ. ಇಲ್ಲಿ ಪಂಚಾಯಿತಿಗಳಲ್ಲಿ ಹಂಚಿಕೊಂಡರೆ ಏನಾಗುತ್ತದೆ? ಆದುದರಿಂದ ನಾನು ಮತ್ತೆ ಒಂದು ಬಾರಿ ಎಲ್ಲರ ಪರವಾಗಿ ಒತ್ತಾಯ ಮಾಡಿ ಹೇಳುತ್ತಿದ್ದೇನೆ, ಅವರಿಗೆ ಅಧಿಕಾರವನ್ನು ಹಾಗೂ ಹಣವನ್ನು ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಆ ಸಂಸ್ಥೆಗಳು ಎಷ್ಟರಮಟ್ಟಿಗೆ ತಮ್ಮ ಕೆಲಸವನ್ನು ಮಾಡುತ್ತಿವೆ? ಎಷ್ಟರಮಟ್ಟಿಗೆ ನೀವು ಕೊಟ್ಟಂತಹ ದುಡ್ಡು ಸದುಪಯೋಗವಾಗುತ್ತಿದೆ ಎನ್ನುವಂತಹ ಪ್ರಶ್ನೆಯನ್ನು

ನಾವು ನೀವು ಜನರಿಗೆ ಹೇಳಬೇಕಾಗುತ್ತದೆ. ಇನ್ನು ಎರಡನೆಯದಾಗಿ ನಮಗೆ ಉಪಕಾರ ಮಾಡಬೇಕಾಗುತ್ತದೆ, ಅದೇನೆಂದರೆ ಯಾವುದಾದರೂ ಒಂದು ಲೆವಲ್‌ನಲ್ಲಿ ಎಂ.ಎಲ್.ಎ.ಗಳ ಕೆಲಸ ಏನಿದ್ದರೂ ಕಾನೂನು ಮಾಡುವುದಷ್ಟೆ. ಅವರಿಗೆ ಬೇರೆ ಕೆಲಸ ಏನೂ ಇಲ್ಲವೆಂದು ಹೇಳಿಬಿಟ್ಟರೆ ನಾವು ಆರಾಮಾಗಿ ಬೆಂಗಳೂರಿನಲ್ಲಿ ಇರುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಾ ಕೆಲಸವನ್ನು ಎಂ.ಎಲ್.ಎಗಳೇ ಮಾಡಬೇಕೆಂದು ಜನ ತಿಳಿದುಕೊಂಡಿದ್ದಾರೆ. ಅದು ತಮಗೂ ಅನುಭವವಾಗಿದೆ ಎಂದು ಹೇಳಿದ್ದೀರಿ. ಜನ ಎಲ್ಲಾ ಎಂಎಲ್ಎ ರವರನ್ನು ಕೇಳುತ್ತಾರೆ. ಒಂದು ಮನೆ ಮುಂದೆ ಪಂಪ್ ಕೆಟ್ಟರೆ ಏನು ಕಳುಹಿಸಿದ್ದೇವೆ. ಆದರೂ ಪಂಪ್ ರಿಪೇರಿ ಮಾಡಿಸಿಲ್ಲ ಎಂದು ನಮಗೆ ಬೈಯುತ್ತಾರೆ. ಇನ್ನು ತಾವು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆಂದು ಹೇಳಿದಿರಿ. ಇನ್ನೂ ಕೆಲವು ಆದೇಶ ಬಂದಿದೆ ಏನೆಂದರೆ ತಾಲ್ಲೂಕು ಪಂಚಾಯತ್‌ನವರು ಸ್ಟಾಂಪ್ ಡ್ಯೂಟಿ ಠರಾವನ್ನು ಮಾಡಿದ್ದು ಅದು ಜಿಲ್ಲಾ ಪಂಚಾಯತ್‌ಗೆ ಪರ್ಮಿಷನ್‌ಗೆ ಏಕೆ ಹೋಗಬೇಕು? ಹಾಗೆ ಆದೇಶ ಬಂದಿದೆ. ನೀವು ಅಧಿಕಾರ ವಿಕೇಂದ್ರೀಕರಣದಲ್ಲಿ ಇವರು ಮಾಡಿದ್ದನ್ನು ಅವರು ತಿದ್ದಿ ಕಳುಹಿಸುತ್ತಾರೆ. ಸರ್ಕಾರ ಬಂದ ಮೇಲೆ ನಿಮ್ಮ ಆದೇಶ ಬಂದಿದೆ. ಅಲ್ಲಿ ವಿಕೇಂದ್ರೀಕರಣ ಆಗಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಯಾವುದು ತಾಲ್ಲೂಕು ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯ ಅದನ್ನು ಜಿಲ್ಲಾ ಮಟ್ಟದಲ್ಲಿ ಮಾಡಬೇಕಾದ್ದಿಲ್ಲ. ತದ್ವಿರುದ್ಧವಾಗಿ ಏನಾದರೂ ಆರ್ಡರ್ ಇದ್ದರೆ ಅದನ್ನು ಸರಿ ಮಾಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ : ಮೂರು ತಿಂಗಳಿಗೆ ಒಂದು ಸಾರಿ 20 ಪಾಯಿಂಟ್ ಪ್ರೋಗ್ರಾಂ ಎಂದು ಎಂ.ಎಲ್.ಎಗಳನ್ನು ರಿವ್ಯೂ ಮಾಡುತ್ತಿದ್ದಿರಿ. ಆದರೆ ಈಗ ಅದನ್ನು ತೆಗೆದು ಹಾಕಿಬಿಟ್ಟಿರಿ. ಕರೆಯುವುದೇ ಇಲ್ಲ. ಅದನ್ನು ವಿತ್‌ಡ್ರಾ ಮಾಡಿಕೊಂಡು ಬಿಟ್ಟಿದ್ದೀರಿ.

ಶ್ರೀ ಡಿ.ಆರ್. ಪಾಟೀಲ್ : ಜನರೆಲ್ಲರೂ ಎಂ.ಎಲ್.ಎ ಗಳದ್ದೇ ಜವಾಬ್ದಾರಿ ಎಂದು ಹೇಳುವುದಕ್ಕೆ ಕಾರಣ ಇದೆ.

ಅಧ್ಯಕ್ಷರು : ತಾವು ಬೇಗನೆ ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್ : ತಾವು ನನಗೆ ಟೈಮ್ ಕೊಡಬೇಕು. First time I am speaking in this House. ಕಳೆದ ಎರಡು ವರ್ಷಗಳಿಂದ ನಾನು ಮಾತನಾಡೇ ಇಲ್ಲ. ನಮ್ಮ ಪಕ್ಷದವರು ನನಗೆ ಟೈಮ್ ಕೊಡುತ್ತಾರೆ. Please allow me. ಸಮಾಜ, ಶಾಸಕರೇ ಎಲ್ಲಾ ಕೆಲಸ ಮಾಡಿಸುತ್ತಾರೆ ಎಂದು ತಿಳಿದುಕೊಂಡಿರುವುದರಲ್ಲಿ ತಪ್ಪಿಲ್ಲ. ಈ ವ್ಯವಸ್ಥೆಯಲ್ಲಿ ಕೆಲಸವಾಗುವುದು ಅಧಿಕಾರಗಳ ಮುಖಾಂತರ, ಆ ಅಧಿಕಾರಗಳನ್ನು ಅಲ್ಲಿ ತರುವವರು ನಾವು. ಅವರು ನಮ್ಮ ಮಾತು ಕೇಳುತ್ತಾರೆ. ಅದಕ್ಕೆ ನೀವು ಶಾಸಕರಿಗೆ ಹೇಳಿ ಎಂದರೆ ಆ ಕೆಲಸವಾಗುತ್ತದೆ ಎಂದು ಅಪೇಕ್ಷೆ ಪಡುತ್ತದೆ ಸಮಾಜ. ಆ ಅಧಿಕಾರ ಕಳಚಿ ಹೋಯಿತೆಂದರೆ, ಯಾರ್‍ಯಾರಿಗೆ ಯಾವ ಜವಾಬ್ದಾರಿ ಇದೆ ಎಂದುಬುದನ್ನು ಅವರು ನೋಡುತ್ತಾರೆ. ಒಬ್ಬ ಕುಡುಕ ಸಹ ತನಗೆ ಕುಡಿಯುವುದು ಬೇಕಾದರೆ ಔಷಧದ ಅಂಗಡಿಗೆ ಹೋಗಿ ಕೇಳುವುದಿಲ್ಲ. ವೈನ್ ಅಥವಾ ಬ್ರಾಂಡಿ

ಅಂಗಡಿಗೆ ಹೋಗಿ ಕೇಳುತ್ತಾನೆ. ನೀವು ಹಾಗೆ ತಪ್ಪು ತಿಳಿದುಕೊಳ್ಳಬೇಡಿ. ಎಲ್ಲಿ ಏನು ಸಿಗುತ್ತದೆ ಅದನ್ನು ಕೇಳುತ್ತಾನೆ. ಈಗ ಅಧಿಕಾರ ನಮ್ಮ ಕಡೆ ಕೇಂದ್ರೀಕೃತ ಮಾಡಿಕೊಂಡಿದ್ದೇವೆ. ಈ ಆಫೀಸರ್‌ಗಳನ್ನು ಟ್ರಾನ್ಸ್‌ಫರ್ ಮಾಡುವುದನ್ನು ನಮ್ಮ ಕೈಯಲ್ಲಿ ಇಟ್ಟುಕೊಂಡು ಅದನ್ನು ನಾವು ಕೇಂದ್ರೀಕೃತ ಮಾಡಿಕೊಂಡಿದ್ದೇವೆ. ಇದು ಬದಲಾಯಿತೆಂದರೆ ಸಮಾಜಕ್ಕೆ ಇವರ ಕೈಯಲ್ಲಿ ಅಧಿಕಾರವಿಲ್ಲವೆಂದು ಗೊತ್ತಾಗುತ್ತದೆ. ನಾನು ಹೇಳುವಂಥಾದ್ದು ನಿಮಗೆ ಅನುಭವಕ್ಕೆ ಬಂದಿದೆಯೋ, ಇಲ್ಲವೋ, ಗೊತ್ತಿಲ್ಲ. ಈಗ ಬಹಳಷ್ಟು ಗ್ರಾಮೀಣ ಭಾಗಗಳಲ್ಲಿ ಕಾರ್ಯಕ್ರಮಗಳಿಗೆ ಜನರು ನಮಗಿಂತ ಹೆಚ್ಚು ಎಂ.ಪಿ.ಗಳನ್ನು ಇಲ್ಲಿಯವರೆಗೂ ಕರೆಯುತ್ತಿದ್ದರು. ಈ ರೀತಿ ಏಕೆ ಮಾಡುತ್ತಿದ್ದರೆಂದರೆ ಅವರು ಎಂ.ಪಿ. ಫಂಡ್ ಕೊಡುತ್ತಾರೆ, ಅವರು ಬಂದರೆ ಏನಾದರೂ ಅನೌನ್ಸ್ ಮಾಡುತ್ತಾರೆ ಎಂದು ಈ ಎಂ.ಎಲ್.ಎ.ಗಳ ಹತ್ತಿರ ಏನೂ ಫಂಡ್ ಇಲ್ಲವೆಂಬುದು ಜನರಿಗೆ ಗೊತ್ತಿದೆ, ನಮಗೆ ಜವಾಬ್ದಾರಿಗಳು ಕಡಿಮೆ ಇದೆಯೆಂಬುದು ಅವರಿಗೆ ಗೊತ್ತಿದೆ. ನಾನು ಈಗ ಹೇಳುವಂತಹ ವಿಚಾರ ಮಾನ್ಯ ಎಸ್.ಎಸ್. ಪಾಟೀಲ್‌ರವರಿಗೂ ಗೊತ್ತಿರಬಹುದು, ಮೊನ್ನೆ ನಡೆದಂತಹ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ಗದಗ್ ಜಿಲ್ಲೆಯಲ್ಲಿ 8-10 ದಿವಸಕ್ಕೆ ಒಮ್ಮೆ ಕುಡಿಯುವ ನೀರು ಬರುತ್ತಿತ್ತು. ಆಗ ಯಾರೂ ಕುಡಿಯುವ ನೀರಿನ ಇಷ್ಯೂ ಮಾಡಲಿಲ್ಲ ನನಗೆ. ಅದು ಮುನಿಸಿಪಾಲಿಟಿಯವರ ಕೆಲಸ ಎಂಬುದು ಜನರಿಗೂ ಗೊತ್ತಿದೆ, ಆದರೆ ಒಂದು ಹೇಳುತ್ತಿದ್ದರು ನನಗೆ ಈ ಸಲ ಏನಾದರೂ ಮಾಡಿ ನೀವು ಅಧಿಕಾರಕ್ಕೆ ಬಂದಾಗ ಕುಡಿಯುವ ನೀರಿನ ವ್ಯವಸ್ಥೆ ಪೂರ್ತಿ ಬದಲಾವಣೆ ಮಾಡಿ, ನಮಗೆ ಪ್ರತಿನಿತ್ಯ, ಎರಡು ದಿವಸಕ್ಕೊಮ್ಮೆ ನೀರು ಸಿಗುವಂತೆ ಮಾಡಿ ಗೌಡರೇ, ಎಂದು ಹೇಳುತ್ತಿದ್ದರು. ಅವರಿಗೆ ನಮ್ಮ ರೋಲ್ ಏನು ಎಂಬುದನ್ನು ತಿಳಿದಿಲ್ಲವೆಂಬುದನ್ನು ನಾವು ತಿಳಿದು ಕೊಂಡಿದ್ದೇವಲ್ಲಾ, ಅದು ಬಹಳ ತಪ್ಪು. ನಮ್ಮ ರೋಲ್ ಏನೆಂಬುದು ಜನರಿಗೆ ಪಕ್ಕಾಗೊತ್ತಿದೆ: ಅದಕ್ಕೆ ನಾವು ಸ್ವಲ್ಪ ಅವಕಾಶವನ್ನು ಕೊಡಬೇಕಷ್ಟೆ.

ಶ್ರೀ ಎಸ್.ಎಸ್. ಪಾಟೀಲ್ : ಅವರು ನಿಮ್ಮನ್ನು ಏಕೆ ಕೇಳಲಿಲ್ಲವೆಂದರೆ ನೀವು ಕಾಂಗ್ರೆಸ್ ಪಕ್ಷ ಬಿಟ್ಟು ನಿಲ್ಲಿರಿ, ಆಗ ನಿಮಗೆ ಅನುಭವವಾಗುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ನೀವು ತಪ್ಪು ತಿಳಿದುಕೊಂಡಿದ್ದೀರಿ, ನಮ್ಮ ಓಟರ್ಸ್ ಬಹಳ ದಡ್ಡರು ಎಂದು ನೀವು ತಿಳಿದುಕೊಂಡಿದ್ದೀರಿ, ಅವರು ದಡ್ಡರಲ್ಲ. ಆ ರೀತಿ ಅವರು ಇದ್ದಿದ್ದರೆ ಐದು ವರ್ಷಗಳಗೊಮ್ಮೆ ಅಧಿಕಾರವನ್ನು ಬದಲಾವಣೆ ಮಾಡುತ್ತಿರಲಿಲ್ಲ. ಇಲ್ಲಿ ಓಟರ್ಸ್ ದಡ್ಡರಲ್ಲ, ಇಲ್ಲಿ ನಾವು ದಡ್ಡರು, ನಾವು ಅವರನ್ನು ದಡ್ಡರು ಎಂದು ತಿಳಿದುಕೊಂಡಿದ್ದೇವಲ್ಲಾ, ನಾವು ದಡ್ಡರು, ಆದುದರಿಂದ ತಾವು ಹಾಗೆ ಮಾಡಬೇಡಿ, ಮತ್ತೆ ಹಾಗೆ ತಿಳಿದುಕೊಳ್ಳಲು ಹೋಗಬೇಡಿ. ಇನ್ನು ಮಾನ್ಯ ಘೋರ್ಪಡೆಯವರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವುದಕ್ಕೆ ಒಂದು ಸಮಿತಿಯನ್ನು ರಚಿಸಿ ಆ ಸಮಿತಿಯಿಂದ ಒಂದು ವರದಿಯನ್ನು ತೆಗೆದುಕೊಂಡಿದ್ದಾರೆ. ಆ ವರದಿಯನ್ನು ನಾನು ಓದಿದ್ದೇನೆ, ಅದು ಬಹಳಷ್ಟು ಅನುಕೂಲಕರ ಆಗುತ್ತದೆ. ದಯವಿಟ್ಟು ಆ ಅಧಿಕಾರವನ್ನು ಆ ವ್ಯವಸ್ಥೆಗೆ, ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳನ್ನು ಮಾಡುವುದು ಜಿಲ್ಲಾ ಪಂಚಾಯತ್ ವ್ಯವಸ್ಥೆಗೆ, ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಮಾಡುವಂತಹ ಕೆಲಸವನ್ನು ತಾಲ್ಲೂಕು ಪಂಚಾಯತ್‌ಗೆ, ಹಾಗೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಾಡುವಂತಹ ಕೆಲಸಗಳನ್ನು ಗ್ರಾಮ ಪಂಚಾಯತ್ ವ್ಯವಸ್ಥೆಗೆ ನೀವು ಅಧಿಕಾರವನ್ನು

ಕೊಡಿ, ಅದಕ್ಕೆ ಬೇಕಾಗುವಂತಹ ಹಣಕಾಸನ್ನು ಅವರಿಗೆ ನೇರವಾಗಿ ರಿಲೀಸ್ ಮಾಡಿ, ಮತ್ತು ಆ ಹಂತದಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳನ್ನು ಕಂಟ್ರೋಲ್ ಮಾಡುವಂತಹ ಅಧಿಕಾರವನ್ನು ಅವುಗಳಿಗೆ ಕೊಡಿ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳು ಯಾರೇ ಇರಲಿ, ಅವರು ಟೀಚರ್ ಇರಲಿ, ಡಾಕ್ಟರ್ ಆಗಲಿ, ಅಥವಾ ಪಶು ವೈದ್ಯರಾಗಲಿ, ಅವರನ್ನು ಎಲ್ಲರನ್ನೂ ಕಂಟ್ರೋಲ್ ಮಾಡುವಂಥ ಅಧಿಕಾರವನ್ನು ಅವರಿಗೇ ಬಿಡಬೇಕು. ಆಗ ಮಾತ್ರ ಎಲ್ಲಾ ಸರ್ವೀಸ್‌ಗಳನ್ನು ಸರಿಯಾಗಿ ಜನರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಇದನ್ನು ದಯವಿಟ್ಟು ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ನಮ್ಮ ಶಿಕ್ಷಣ ಸಚಿವರು ಎಸ್‌ಟಿಎಂಸಿ ಮುಖಾಂತರ ಈ ಅಧಿಕಾರವನ್ನು ಪಾಲಕರಿಗೆ ಕೊಡುವಂತಹ ಒಂದು ಕ್ರಾಂತಿಕಾರರ ಬದಲಾವಣೆಯನ್ನು ತಂದು ಬಹಳಷ್ಟು ಶೈಕ್ಷಣಿಕ ರಂಗದಲ್ಲಿ ಬದಲಾವಣೆಯನ್ನು ತರುತ್ತಿದ್ದಾರೆ. ಈಗ "ಪಾಲಕರ ಸಮಿತಿ" ಎಂದು ಬಂದಮೇಲೆ ಬಹಳಷ್ಟು ಕಡೆಗಳಲ್ಲಿ ರಿಪೇರಿ ಕೆಲಸಗಳ ಖರ್ಚು ಬರೇ ಖರ್ಚು ಬೀಳುವುದಿಲ್ಲ. ಸ್ವಲ್ಪ ಮಟ್ಟಿಗೆ ಕೆಲಸ ಆಗುತ್ತಿದೆ, ಮತ್ತೆ ಹಾಜರಾತಿಯು ಬಹಳಷ್ಟು ಸುಧಾರಣೆಯಾಗಿದೆ, ಡ್ರಾಪ್‌ಔಟ್ಸ್ ಬಹಳಷ್ಟು ಕಡಿಮೆಯಾಗಿದೆ. ಇವತ್ತು ನಮ್ಮ ಸರ್ಕಾರವೂ ತಂದಂಥ ಈ ಶೈಕ್ಷಣಿಕ ಕಾರ್ಯಕ್ರಮಗಳಿಂದ ಅಂದರೆ ಅದು ಚಿಣ್ಣರ ಅಂಗಳವಿರಲಿ, ದತ್ತು ಯೋಜನೆ ಇರಲಿ, ಸಮುದಾಯದತ್ತ ಶಾಲೆ ಇರಲಿ, ಸರ್ವ ಶಿಕ್ಷಣ ಅಭಿಯಾನವಿರಲಿ, ಇದರ ಮುಖಾಂತರ ಏನು ಒಂದು ಬದಲಾವಣೆಯನ್ನು ಪ್ರೈಮರಿ ಮತ್ತು ಸೆಕೆಂಡರಿ ವ್ಯವಸ್ಥೆಯಲ್ಲಿ ತರುತ್ತಿದ್ದಾರೆ. ಅದರಿಂದ ಡ್ರಾಫ್‌ಔಟ್ಸ್ ಬಹಳಷ್ಟು ಕಡಿಮೆಯಾಗುತ್ತಿದೆ. ಒಟ್ಟು ಪ್ರೈಮರಿ ಸ್ಕೂಲ್‌ಗಳಲ್ಲಿ 10.6 ಲಕ್ಷ ಡ್ರಾಫ್‌ಔಟ್ಸ್ ಇದೆಯಂತೆ, ಅದರಲ್ಲಿ ಆರೂವರೆ ಲಕ್ಷ ಇರುವಂಥಾದ್ದು ಈಗ ಏಳು ಹಿಂದುಳಿದ ಈಶಾನ್ಯ ಜಿಲ್ಲೆಗಳು ಎಂದು ಏನು ಮಾಡಿದ್ದಾರೆ, ಇಲ್ಲಿ ಆರೂವರೆ ಲಕ್ಷ ಜನರು ಇದ್ದಾರೆ, ಇದರಲ್ಲಿ ನಾಲ್ಕೂವರೆ ಲಕ್ಷ ಎಸ್.ಸಿ.ಎಸ್.ಟಿ, ಮತ್ತೆ ಮೈನಾರಿಟಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಇದೆ, ಇದು ಶೇಕಡಾ 26ರಷ್ಟು ಇತ್ತು. New that has been reduced to 20% ಈ ಎಲ್ಲಾ ಬದಲಾವಣೆಗಳನ್ನು ತಂದಿದ್ದರಿಂದ ಶೇಕಡಾ 6ರಷ್ಟು ಬದಲಾವಣೆಯಾಗಿದೆ. ಇಂತಹ ವಿಚಾರಗಳಲ್ಲಿ ಜನರು ಪಾಲ್ಗೊಳ್ಳುವಂಥಾದರೆ ಮಾತ್ರ ನಾವು ವ್ಯವಸ್ಥೆಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಇಲ್ಲದಿದ್ದರೆ ವ್ಯವಸ್ಥೆಯನ್ನು ಸುಧಾರಣೆ ಮಾಡಲು ಸಾಧ್ಯವಾಗುವುದಿಲ್ಲ. ಮಾನ್ಯ ಎಸ್.ಎಸ್. ಪಾಟೀಲ್‌ರವರು ಒಂದು ಮಾತನ್ನು ಹೇಳಿದರು, ಅದು ಏನೆಂದರೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಶೇಕಡಾ 10 ಹಣವನ್ನು ಜನರು ಹಾಕಬೇಕೆಂದರೆ ಆಗುವುದಿಲ್ಲ. ಶೇಕಡಾ 100 ರಷ್ಟು ಸರ್ಕಾರವೇ ಕೊಡಬೇಕೆಂದರು. ಇದಕ್ಕೆ ನನ್ನ ಸಹಮತವಿಲ್ಲ, ಭಿನ್ನಮತವಿದೆ. ನಾವು ಇಲ್ಲಿ ಜನರು ಪಾಲ್ಗೊಳ್ಳುವುದಕ್ಕೆ ಎನ್‌ಶ್ಯೂರ್ ಮಾಡಿದೆವೆಂದರೆ ಯಾವ ಯೋಜನೆಗೆ ಸರ್ಕಾರದಿಂದ ಎಷ್ಟು ಹಣ ಬರುತ್ತದೆಂಬುದು ಜನರಿಗೆ ಗೊತ್ತಿದೆ. ನಮ್ಮ ಊರಿಗೆ ಎಷ್ಟು ಹಣ ಬರುತ್ತದೆ, ಯಾವ್ಯಾವ ಯೋಜನೆಗಳ ಮುಖಾಂತರ ಬರುತ್ತದೆಂಬುದು ನಮಗೆ ಗೊತ್ತಾಗುತ್ತದೆ. ಏಕೆಂದರೆ ಪ್ರತಿಯೊಂದರಲ್ಲೂ ನನ್ನ ಪಾಲು ಇರುತ್ತದೆ, ಆದುದರಿಂದ ಕೆಲಸ ಏನಾಗುತ್ತದೆ ಎಂಬುದು ನನಗೆ ಗೊತ್ತಾಗುತ್ತದೆ. ಈಗ ಇರುವಂತಹ ವ್ಯವಸ್ಥೆಯಲ್ಲಿ ಅಲ್ಲಿ ಏನು ಕೆಲಸ ಮಾಡದಿದ್ದರೂ ಖರ್ಚು ಆಗುವಂತಹ ವ್ಯವಸ್ಥೆ ಇದೆ, ಆ ರೀತಿಯಲ್ಲಿ ಖರ್ಚು ಹಾಕುತ್ತಾರೆ, ಮಾಡುತ್ತಾರೆ. ಇದು ಬಂದ್ ಆಗಬೇಕಾದರೆ ಜನರ ಸಹಭಾಗಿತ್ವ ಬಹಳಷ್ಟು ಅವಶ್ಯಕತೆ ಇದೆ. ಅದುದರಿಂದ ಇಲ್ಲಿ ಸಹಭಾಗಿತ್ವವನ್ನು ತರಲೇಬೇಕು,

ಟೆಂಡರ್ ಪದ್ಧತಿಯನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ, ಜಿಲ್ಲಾ ಪಂಚಾಯತ್ ಮಟ್ಟದಲ್ಲಿ, ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಜಾರಿ ಗೊಳಿಸಲೇಬೇಕು. ಆ ರೀತಿ ಮಾಡುವಾಗ ಮಾತ್ರ ಬದಲಾವಣೆಯಾಗುತ್ತದೆ, ಅನುಕೂಲವಾಗುತ್ತದೆ ಇಲ್ಲದಿದ್ದರೆ ಸರ್ಕಾರ ಕೊಡುವಂತಹ ಹಣ ಪೋಲಾಗಿ ಹೋಗುತ್ತದೆಂಬುದನ್ನು, ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗುತ್ತದೆ. ಇನ್ನು ನಮ್ಮ ಸರ್ಕಾರ ಮಾಡಿದಂತಹ ದೊಡ್ಡ ಕೆಲಸವೆಂದರೆ ಆಶ್ರಯ ಯೋಜನೆ, ಎಲ್ಲರೂ ಪಕ್ಷ ಭೇದ ಮರೆತು ಈ ಯೋಜನೆಯನ್ನು ಹೊಗಳುತ್ತಾರೆ. ಈ "ಆಶ್ರಯ ಯೋಜನೆ" ಯಲ್ಲಿ ಸಾಕಷ್ಟು ಪರಿಣಾಕಾರಿಯಾದ ಕೆಲಸ ಈ ಸರ್ಕಾರದಲ್ಲಿ ಆಗಿದೆಯೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. "ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಮುಖಾಂತರ ಅದರ ಚೇರ್ಮನ್‌ರಾದಂತಹ ಮಾನ್ಯ ಖಮರುಲ್ ಇಸ್ಲಾಂರವರು, ಮ್ಯಾನೇಜಿಂಗ್ ಡೈರೆಕ್ಟರ್ ಆದಂತಹ ಶ್ರೀ ಶ್ರೀಶೈಲಂರವರು, ಇವರನ್ನು ನಾವು ಎಷ್ಟು ಶ್ಲಾಘನೆ ಮಾಡಿದರೂ ಅದು ಕಡಿಮೆ ಎಂದು ಹೇಳುತ್ತೇನೆ. ಇದಕ್ಕೆ ಬೇಕಾದಂತಹ ಹಣಕಾಸನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೊಂದಿಸಿ ಇಟ್ಟಿದ್ದಾರಲ್ಲಾ, ಅವರಿಗೆ ನಾವೆಲ್ಲರೂ ಚಿರಋಣಿಯಾಗಿರುತ್ತೇವೆ. ಇದರಲ್ಲಿ ಈ ಪಕ್ಷದ, ಮತ್ತೆ ಆ ಪಕ್ಷಗಳ ಸದಸ್ಯರು ಇರುತ್ತೇವೆ, ಇಲ್ಲಿ ಸೂರು ಇಲ್ಲದವರಿಗೆ ಸೂರು ಕೊಡುತ್ತೇವೆ ಇನ್ನು ಐದು ವರ್ಷಗಳಲ್ಲಿ ಕೊಡುತ್ತೇವೆ, ಇಲ್ಲ ಇನ್ನು ಮುಂದಿನ ಹತ್ತು ವರ್ಷಗಳಲ್ಲಿ ಗ್ಯಾರಂಟಿಯಾಗಿ ಸೂರು ಇಲ್ಲದವರಿಗೆ ಸೂರು ಇಲ್ಲದವರಿಗೆ ಸೂರು ಸಿಗುತ್ತದೆಂಬ ಭರವಸೆಯನ್ನು ಮೂಡಿಸುವಲ್ಲಿ ನಾವೆಲ್ಲರೂ ಯಶಸ್ವಿಯಾಗಿದ್ದೇವೆ. ಇವತ್ತು ಗ್ರಾಮೀಣ ಭಾಗದಲ್ಲಿ, ನಗರ ಪ್ರದೇಶಗಳಲ್ಲಿ ನಮ್ಮ ಶ್ರೀ ಸಿರಾಜ್ ಶೇಖರ್‌ರವನ್ನು, ಗಂಡಸಿ ಶಿವರಾಂರವರನ್ನು, ಮತ್ತೆ ದಾವಣಗೆರೆಯ ಶಾಸಕರಾದಂತಹ ಎಸ್.ಎಸ್. ಮಲ್ಲಿಕಾರ್ಜುನ್‌ರವರನ್ನು ಎಷ್ಟು ಶ್ಲಾಘನೆ ಮಾಡಿದರೂ ಕಡಿಮೆಯಾಗುತ್ತದೆ. ಅವರು ನಮಗೆಲ್ಲರಿಗೂ ಸ್ಫೂರ್ತಿ ಬರುವಂತಹ ಸಾಧನೆಯನ್ನು ಮಾಡಿದ್ದಾರೆ. ಇವರ ಜೊತೆಗೆ ಅಲ್ಲಿಯ ಅಧಿಕಾರಿಗಳು ದಾವಣಗೆರೆಯ ಮಾನ್ಯ ಶಿವರಾಂ, ಜಿಲ್ಲಾಧಿಕಾರಿ, ಬಿಜಾಪುರ ಜಿಲ್ಲೆಯ ಜಿಲ್ಲಾಧಿಕಾರಿಯಾದಂತಹ ಮಾನ್ಯ ರಾಕೇಶ್ ಸಿಂಗ್ ಆಗಲಿ, ಗದಗ್ ಜಿಲ್ಲೆಯ ಜಿಲ್ಲಾಧಿಕಾರಿಯಾದ ಶ್ರೀ ವಿ.ಆರ್. ಪಾಟೀಲರವರಾಗಲಿ, ಅಥವಾ ಜಿಲ್ಲಾ ಪಂಚಾಯತ್‌ನ ಮುಖ್ಯಾಧಿಕಾರಿಗಳು ಇವರುಗಳನ್ನು ಸಾಕಷ್ಟು ಶ್ಲಾಘನೆ ಮಾಡಲು ಸಾಕಷ್ಟು ಅರ್ಹತೆಯನ್ನು ಪಡೆದುಕೊಂಡಿದ್ದಾರೆ. ಇವತ್ತು "ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್"ನವರು ನಮ್ಮ ಎಂ.ಎಲ್.ಎಗಳಲ್ಲಿ ಒಬ್ಬರಿಗೊಬ್ಬರು ಕಾಂಪಿಟೇಷನ್ ಮಾಡುವಂತಹ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಆ ಕಾಂಪೆಟೀಟವ್ ಸ್ಪಿರಿಟಿನಿಂದ ನಾವೆಲ್ಲರೂ ಕೆಲಸ ಮಾಡುತ್ತಿರುವುದರಿಂದ ಈ ರೀತಿ ಆಗಾಧವಾದಂತಹ ಬದಲಾವಣೆಯನ್ನು ಇವತ್ತು ತರುವುದಕ್ಕೆ ಸಾಧ್ಯವಾಗಿದೆ. ಎಲ್ಲರೂ "ಆಶ್ರಯ ಯೋಜನೆ" ಮನೆಗಳ ಹಣ ವಸೂಲಾತಿಗೆ ಹೋದರೆ ದುಡ್ಡೇ ಬರುವುದಿಲ್ಲವೆಂಬುದನ್ನು ಎಲ್ಲರೂ ಹೇಳುತ್ತಿದ್ದರು. ಮಾನ್ಯ ಎಸ್.ಎಸ್. ಪಾಟೀಲ್‌ರವರು ಸಾಕ್ಷಿ ಇದ್ದಾರೆ, ಮೊನ್ನೆ ನನ್ನ ಕ್ಷೇತ್ರದಲ್ಲಿ ನಮ್ಮ ಹುಲಿಕೋಟೆ ಗ್ರಾಮ ಪಂಚಾಯತ್‌ನಲ್ಲಿ ಸುಮಾರು ಒಂಭತ್ತು ಲಕ್ಷ ರೂಪಾಯಿಗಳು ರಿಕವರಿಯಾಯಿತು, ಇಷ್ಟು ಹಣ ರಿಕವರಿಯಾದರೆ ಸರ್ಕಾರದಿಂದ ಅದಕ್ಕೆ ಮೂರು ಲಕ್ಷ ಆರವತ್ತು ಸಾವಿರ ರೂಪಾಯಿಗಳು ಗ್ರಾಮ ಪಂಚಾಯತ್‌ಗೆ ತಿರುಗಿ ಬರುತ್ತದೆ. If recovery is more than 80%, 40% will be given back to the Panchayat for development of work in that Ashraya Colony or any other work. ನಾವು ಶೇಕಡಾ 40ರಷ್ಟು

ಹಣವನ್ನು ರಿಕವರಿ ಮಾಡಿಕೊಟ್ಟಾಗ ನಮಗೆ ಹಣ ಬರುತ್ತದೆಂದರೆ ಜನರು ನಿಜವಾಗಿ ಹಣವನ್ನು ಕೊಡುತ್ತಾರೆ, ಇಲ್ಲಿ ಜನರಿಗೆ ಈ ಡೆಲಿವರಿ ಸಿಸ್ಟಂ ಏನು ಇದೆ, ಅದು ಪಾರದರ್ಶಕವಾಗಿರಬೇಕು, ಇದು ಬಹಳ ಪ್ರಾಮಾಣಿಕವಾಗಿರಬೇಕು, ಸರ್ಕಾರ ಕೊಡುವಂತಹ ಪ್ರತಿ ಪೈಸೆಯೂ ಜನರಿಗೆ ನೇರವಾಗಿ ಮುಟ್ಟುತ್ತದೆಂಬುದು ಖಾತರಿಯಾಯಿತೆಂದರೆ ಆ ಸಾಲವನ್ನು ಮರುಪಾವತಿ ಮಾಡುವಂತಹ ಜವಾಬ್ದಾರಿಯನ್ನು ಜನರು ಹೋರುತ್ತಾರೆ. ಇದು ನಮ್ಮ ಅನುಭವವಾಗಿದೆ, ಗದಗ್ ತಾಲ್ಲೂಕಿನಲ್ಲಿ ಆದಂತಹ ಈ ಬದಲಾವಣೆಯನ್ನು ನೋಡಿ ಗ್ರಾಮೀಣ ಬ್ಯಾಂಕಿನ ಚೇರ್ಮನ್‌ರವರು ನನ್ನ ಕ್ಷೇತ್ರದಲ್ಲಿ ಸುಮಾರು 1,600 ಮನೆಗಳಿಗೆ ನೇರವಾಗಿ ಸಾಲವನ್ನು ಕೊಡಲು ಮುಂದೆ ಬಂದಿದ್ದಾರೆ. ಇಲ್ಲಿ ಸರ್ಕಾರದ ಗ್ಯಾರಂಟಿ ಬೇಕಾಗಿಲ್ಲ, ರಿಕವರಿ ಮಾಡುವಂತಹ ತಲೆನೋವು ಇಲ್ಲ. ಆಶ್ರಯ ಯೋಜನೆಗೆ ನಮ್ಮ ಗ್ರಾಮೀಣ ಬ್ಯಾಂಕ್‌ನವರು ಸಾಲವನ್ನು ಕೊಡಲು ಮುಂದೆ ಬಂದಿದ್ದಾರೆ, ಮತ್ತೆ ಕಾರ್ಪೊರೇಷನ್ ಬ್ಯಾಂಕ್‌ನವರೂ ಸಹ ಮನೆಗೆ ಸಾಲವನ್ನು ಕೊಡಲು ಮುಂದೆ ಬಂದಿದ್ದಾರೆ, ನಮ್ಮ ನಗರ ಪ್ರದೇಶದಲ್ಲಿ ಆಶ್ರಯ ಯೋಜನೆಗೆ ಅವರೇ ಹಣವನ್ನು ಸಾಲವಾಗಿ ಕೊಡಲು ಮುಂದೆ ಬಂದಿದ್ದಾರೆ. ಇಲ್ಲಿ ಸಿಟಿಗಳಲ್ಲಿ ಸಬ್ಸಿಡಿ ಇಲ್ಲ, ಬೇಕಾದಷ್ಟು ಮನೆಗಳನ್ನು ನಾವು ಕಟ್ಟಿಸಬಹುದು. ಈ ಸಾಧನೆ, ಈ ವಿಶ್ವಾಸ ಮೂಡಬೇಕಾದರೆ ಜನರು ಹಣವನ್ನು ಮರಳಿ ಕೊಡಬೇಕೆಂಬ ಸ್ವಭಾವ ಅವರಿಗೆ ಇದೆ. ನಮ್ಮ ಕಡೆ ಹಿಂದೆ ಹಿರಿಯರು ಹೇಳುತ್ತಿದ್ದರು. ಏನಾದರೂ ಸತ್ತರೆ ನನ್ನ ಏನಿದೆ ಪಾಲು ಏನಿದೆ ಅದನ್ನು ಪಟ್ಟಿ ಮಾಡಿ ನಾನು ಇಷ್ಟು ಸಾಲ ತಂದಿದ್ದೇನಿ, ಇದನ್ನು ತೀರಿಸಬೇಕಪ್ಪಾಎಂದು ತನ್ನ ಮಕ್ಕಳಿಗೆ ಮರಿ ಮಕ್ಕಳನ್ನು ಕೂರಿಸಿಕೊಂಡು ಈ ಯಜಮಾನ ಹೇಳುತ್ತಿದ್ದ. ಇವತ್ತು ಆ ಸಂಸ್ಕೃತಿಯನ್ನು ಹಾಳು ಮಾಡಿದಂತಹ ಶ್ರೇಯಸ್ಸು ನಮ್ಮ ಎಸ್.ಎಸ್. ಪಾಟೀಲ್‌ರವರು ಪಕ್ಷಕ್ಕೆ ಬರುತ್ತದೆ. ಇವರು ಸಾಲ ಮನ್ನಾ ಮಾಡಿದೆ, ಬಡ್ಡಿ ಮನ್ನ ಮಾಡಿದೆ ಎಂದು ಹೇಳಿದ್ದಾರಿಂದ ಯಾರು ರೆಗ್ಯುಲರ್ ಆಗಿ ಪೇಮೆಂಟ್ ಮಾಡುತ್ತಿದ್ದರು ಅವರು ಪೇಮೆಂಟ್ ಮಾಡಲಾರದಂತೆ ಇವರು ಮಾಡಿದರು. ಪೇಮೆಂಟ್ ಮಾಡುವುದೇ ತಪ್ಪು, ಸಾಲ ಮರಳಿ ಕೊಡುವುದೇ ತಪ್ಪು ಎನ್ನುವಂಥ ಸಂಸ್ಕೃತಿಯನ್ನು ಹುಟ್ಟು ಹಾಕಿದ ಶ್ರೇಯಸ್ಸು ಈ ನಮ್ಮ ಜನತಾದಳದ ನಾಯಕರಿಗೆ ಸಲ್ಲಬೇಕು. ಈ ಸಮಾಜವನ್ನು ಆದರಿಂದ ಹಾಳು ಮಾಡಿದರು. ಈ ಮಾತು ನಿಮಗೆ ಚುಚ್ಚು ಮಾತು ಆಗುತ್ತದೆ. ಇನ್ನು ಪ್ರಾಂಪ್ಟ್ ಆಗಿ ಪೇಮೆಂಟ್ ಮಾಡಿದರವರಿಗೆ ಕನ್‌ಸಿಷನ್ ಕೊಡುತ್ತೇವೆಂದರು; ಅದನ್ನು ಒಪ್ಪುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕೈಗಾರಿಕೋದ್ಯಮಿಗಳಿಗೆ ಟ್ಯಾಕ್ಸ್ ಹಾಲಿಡೇ ಕೊಡಬಹುದು. ಆದರೆ ರೈತರಿಗೆ ಬಡ್ಡಿ ಮನ್ನಾ ಮಾಡಬಾರದೇ? ಕೈಗಾರಿಕೋದ್ಯಮಿಗಳಿಗೆ ಫ್ರೀ ಲ್ಯಾಂಡ್‌ನ್ನು ಕೊಡುತ್ತಾರೆ ಬನ್ನಿ ಎಂದು ಹೇಳಿ, ಆದರೆ ರೈತರಿಗೆ ಕೊಡುವುದಕ್ಕಾಗುವುದಿಲ್ಲ? ಇದು ನಮಗೂ ಮತ್ತು ಅವರಿಗೂ ಇರುವ ವ್ಯತ್ಯಾಸವಿಷ್ಟೆ.

ಶ್ರೀ ಎಸ್.ಎಸ್. ಪಾಟೀಲ್: ಇವರ ತಮ್ಮ ಆಗ ವಿರೋಧಪಕ್ಷದ ನಾಯಕರಾಗಿದ್ದರು, ನನಗೆ ರೈತ ವಿರೋಧಿ ಮಂತ್ರಿಗಳೆಂದು ಹೇಳಿದರು. ಸಾಲ-ಬಡ್ಡಿ ಮನ್ನಾ ಮಾಡುವುದು ಬಹಳ ಕೆಟ್ಟ ಸಂಪ್ರದಾಯವೆಂದು ನಾನು ಭಾಷಣ ಮಾಡಿದ್ದೆ. ಆಗ ನಾನು ಕೌನ್ಸಿಲ್‌ನಲ್ಲಿ ಹೇಳಿದ್ದೆ, ಅದು ಇನ್ನೂ ಕಡತದಲ್ಲಿದೆ. ಅದಕ್ಕೆ ಇವರ ತಮ್ಮ ರೈತವಿರೋಧಿ ಮಂತ್ರಿಗಳೆಂದು ನನಗೆ ಹೇಳಿದ್ದರು. ಈಗ ನಿಮ್ಮದೂ ಹಾಗೆಯೇ ಆಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ನಮ್ಮ ತಮ್ಮ ಜೀತದಾಳು ಅಲ್ಲರಿ? ನಮ್ಮ ತಮ್ಮನಿಗೊಂದು ಅಭಿಪ್ರಾಯವಿರುತ್ತದೆ. ನನಗೊಂದು ಅಭಿಪ್ರಾಯವಿರುತ್ತದೆ. ಅಭಿಪ್ರಾಯ ಸ್ವಾತಂತ್ರ್ಯವನ್ನು ನಾವು ನಮ್ಮ ನಮ್ಮ ಸ್ವಂತರನ್ನಾಗಿಟ್ಟು ಕೊಂಡಿದ್ದೇವೆ. ನಮ್ಮ ತಮ್ಮ ನನ್ನ ವಿರುದ್ಧ ಮಾತು ಎಕ್ಸ್‌ಪ್ರೆಸ್ ಮಾಡಬಾರದು ಎಂದು ನಾನು ಏನೂ ಹೇಳುವುದಿಲ್ಲ. ಇಲ್ಲ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದೇನೆ. ಇದು ನನ್ನ ತಮ್ಮನ ಅಭಿಪ್ರಾಯವಲ್ಲ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹಳ ಮಹತ್ವದ ಪ್ರಶ್ನೆಗಳನ್ನು ಮಾನ್ಯ ಪಾಟೀಲರು ಎತ್ತಿದ್ದಾರೆ. ಇದರ ಬಗ್ಗೆ ನಾನು ಒಂದು ಸಲಹೆಯನ್ನು ನೀಡುವುದಕ್ಕೆ ಇಷ್ಟಪಡುತ್ತೇನೆ. ಆಶ್ರಯ ಮನೆಗಳನ್ನು ಕಟ್ಟುವಾಗ ನಾವು ಸೇವಿಂಗ್ಸ್‌ನ ಜೊತೆಗೆ ಮಾಡಬೇಕೆಂದು ಹೇಳಿದರೆ, ಸಾಕಷ್ಟು ಜನರು ಮುಂದೆ ಬರುತ್ತಾರೆ. ಹೌಸಿಂಗ್ ವತಿಯಿಂದ ಇವರು ಪಂಚಾಯಿತಿ ಆಶ್ರಯವೆಂದು ಹೆಸರಿಟ್ಟು ಮಾಡಿದರು, ಅದನ್ನು ನಾವು ನಮ್ಮ ನಮ್ಮ ತಾಲ್ಲೂಕಿನಲ್ಲಿ ಮಾಡಿದ್ದೇವೆ. ಪಾವರ್ಟಿ ಲೈನ್‌ಗಿಂತ ಕೆಳಗಡೆ ಇರತಕ್ಕಂತಹವರು ಏನಾದರೂ ಒಂದು ದಿನಕ್ಕೆ 5 ರೂಪಾಯಿ ಉಳಿತಾಯವನ್ನು ಮಾಡುವುದಾದರೆ ಒಂದು ತಿಂಗಳಿಗೆ 150 ರೂಪಾಯಿಗಳನ್ನು ಉಳಿತಾಯ ಮಾಡುವುದಾದರೆ ಈ 18 ವರ್ಷದಲ್ಲಿ ಅದು 20,000 ರೂಪಾಯಿಗಳಿಗಿಂತ ಜಾಸ್ತಿಯಾಗುತ್ತದೆ. ಈ ರೀತಿಯಾಗಿ ಉಳಿತಾಯ ಮಾಡುವಂತಹ ಕ್ರಮ ಅವರುಗಳು ಅನುಸರಿಸಿದ್ದೇ ಆದರೆ ಅವರಿಗೆ 20,000 ರೂಪಾಯಿಗಳಲ್ಲಿ ಆಶ್ರಯ ಮನೆ ಕಟ್ಟಿಕೊಡುವ ಬಗ್ಗೆ ಏನು ಆಕ್ಷೇಪಣೆಯಿಲ್ಲ. ಸೆಲ್ಫ್ ಫೈನಾನ್ಸಿಂಗ್ ಎಂದು ಇದೆ. ನಮ್ಮ ಸರ್ಕಾರ ಇದರ ಬಗ್ಗೆ ಸಮಗ್ರವಾದಂತಹ ಒಂದು ಪಾಲಿಸಿಯನ್ನು ತಯಾರು ಮಾಡುತ್ತಿದ್ದೇವೆಂದು ಹೇಳಿ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದರು. ಸಮಗ್ರವಾದಂತಹ ಒಂದು ಹೌಸಿಂಗ್ ಪಾಲಿಸಿಯನ್ನು ಅನೌನ್ಸ್ ಮಾಡುವಾಗ ದಯವಿಟ್ಟು ಇದನ್ನು ಗಮನದಲ್ಲಿಟ್ಟುಕೊಳ್ಳಿ. ಪಾವರ್ಟಿ ಲೈನ್‌ನ ಕೆಳಗಡೆ ಯಾರು ಇದ್ದಾರೆಂಬುದು ಎಲ್ಲರಿಗೂ ಗೊತ್ತಿರುತ್ತದೆ. ಅದು ಗ್ರಾಮಸಭೆಯಲ್ಲಿ ಗೊತ್ತಾಗಬೇಕಾಗುತ್ತದೆ, ಇದರ ಬಗ್ಗೆ ಎಲ್ಲರಿಗೂ ಗೊತ್ತಿರುತ್ತದೆ. ಅದು ಪಾವರ್ಟಿಲೈನ್‌ಗಿಂತ ಕಡಿಮೆ ಇರಬೇಕು, ಇದರ ಜೊತೆಗೆ ದಿನಕ್ಕೆ 5 ರೂಪಾಯಿಗಳನ್ನು ಉಳಿತಾಯ ಮಾಡಬೇಕು. ಇದರ ಬಗ್ಗೆ ಬಹಳ ಅನುಕೂಲವಾಗಿದೆ, ಸಂಡೂರುನಲ್ಲಾಗಲಿ, ಕೂಡ್ಲಿಗಿಯಲ್ಲಿ ಆಗಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅವರುಗಳು ಮುಂದೆ ಬರುತ್ತಿದ್ದಾರೆ. ಏಕೆಂದರೆ ಅವರುಗಳಿಗೆ ಯಾರೂ ಲಂಚ ಕೊಡಬೇಕಾಗಿಲ್ಲ ಇದರ ಬಗ್ಗೆ ಯಾರ ಮುಖಾಂತರವಾಗಿ ಹೋಗಬೇಕಾದ್ದಿಲ್ಲ. ಅವರ ಹೆಸರಿನಲ್ಲಿ ಒಂದು ಅಕೌಂಟನ್ನು ಓಪನ್ ಮಾಡಿದಾಗ, ಆ ಅಕೌಂಟ್‌ನಲ್ಲಿ 3-4 ತಿಂಗಳು ಕಾಲ ಉಳಿತಾಯ ಮಾಡಿ ತೋರಿಸುವುದಾದರೆ ಅವರುಗಳಿಗೆ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಉದ್ದೇಶವೇನಿದೆ, ಎಲ್ಲರಿಗೂ ಮನೆಗಳು ಸಿಗಬೇಕು, ಇವತ್ತು ಈ ಉದ್ದೇಶವನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿದೆ. ಬಿಲೋ ಪಾವರ್ಟಿಲೈನ್‌ನಲ್ಲಿತಕ್ಕಂತಹವರು ಸೇವಿಂಗ್ಸ್‌ನ್ನು ಅವರು ಮಾಡುವುದಾದರೆ, ಅವರುಗಳು ಅಕೌಂಟನ್ನು ಓಪನ್ ಮಾಡಿ, ಅವರುಗಳ ಹೆಸರಿನಲ್ಲಿ ಮನೆಗಳನ್ನು ಕಟ್ಟಿಕೊಡುವುದಕ್ಕೆ ಒಪ್ಪುವುದಾದರೆ ಎಷ್ಟೋ ಕ್ರಮದಲ್ಲಿರತಕ್ಕಂತಹ ಜಗಳಗಳು ಮಾಯವಾಗುತ್ತವೆ, 5 ವರ್ಷದಲ್ಲಿ ಕರ್ನಾಟಕದ ಎಲ್ಲಾ ಹಳ್ಳಿಗಳಲ್ಲೂ ಗುಡಿಸಲುಗಳಿಲ್ಲದಿರುವಂತಹ ಹಳ್ಳಿಗಳನ್ನು ನಾವು ತಯಾರು ಮಾಡುವುದಕ್ಕೆ

ಸಾಧ್ಯವಿದೆ. ಅಷ್ಟು ಹಣಕಾಸಿನ ಶಕ್ತಿ ಈ ದೇಶಕ್ಕೆ ಇದೆ, ಅದರ ಬಗ್ಗೆ ಸರಿಯಾದಂತಹ ಕ್ರಮವೇನಿದೆ, ಅದನ್ನು ಅನುಸರಿಸಬೇಕಾಗುತ್ತದೆ. ಅಂತಹ ಸರಿಯಾದಂಥ ಕ್ರಮವನ್ನು ಅನುಸರಿಸುವಂತಹ ಕಾಲ ಈಗ ಬಂದಿದೆ ಎಂದು ಹೇಳಿ, ವಿಶ್ವಾಸದಿಂದ ಸುದೈವದಿಂದ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ಈ ಘೋಷಣೆಯನ್ನು ಸ್ಪಷ್ಟವಾಗಿ ಮಾಡಿದರೆ ಸಾವಿರಾರು ಜನರು ತಮ್ಮ ತಮ್ಮ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ, ಈ 20,000 ರೂಪಾಯಿಗಳನ್ನು ಕೊಟ್ಟರೆ, 25,000 ರೂಪಾಯಿ ಒಳಗಡೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಸ್ವಂತ ಮನೆಯನ್ನು ಕಟ್ಟಿಕೊಳ್ಳುವಾಗ ಸ್ವಂತವಾಗಿ ಲೇಬರ್ ಕೊಟ್ಟು ಕಟ್ಟುತ್ತಾರೆ. ಸೇವಿಂಗ್ಸ್ ಕಾನ್ಸೆಪ್ಟ್‌ನಿಂದ ಅಂದರೆ ರಿಪೇಮೆಂಟ್ ಕಾನ್ಸೆಪ್ಟ್‌ನಿಂದ ಇದನ್ನು ಮಾಡಲಿಕ್ಕೆ ಸಾಧ್ಯವಿದೆ. ಸೇವಿಂಗ್ಸ್ ಕಾನ್ಸೆಪ್ಟ್‌ನಲ್ಲಿ ರಿಪೇಮೆಂಟ್ ಕಾನ್ಸೆಪ್ಟ ಅಡಕವಾಗಿದೆ. ಇವತ್ತು ಸರ್ಕಾರ ಬೇರೆ ಬೇರೆ ವಿಷಯಗಳಲ್ಲಿ ಸಬ್ಸಿಡಿಯನ್ನು ಕೊಡುತ್ತಿದೆ. ಇನ್ನು 5-10 ವರ್ಷಗಳಾದರೆ ಸಬ್ಸಿಡಿಯ ಅವಶ್ಯಕತೆ ಇರುವುದಿಲ್ಲ. ಆದರೆ ಈ ಸಾಲವನ್ನು ಏನು ಪಡೆಯುತ್ತೇವೆ ಅದನ್ನು ರಿಪೇಮೆಂಟ್ ಮಾಡುವಂಥ ಶಕ್ತಿ ಅದರಲ್ಲಿ ಅಡಕವಾಗಿರಬೇಕು. ಸೇವಿಂಗ್ಸ್ ಮಾಡುವಂತಹ ಕ್ರಮವೇನಿದೆ ಅದಕ್ಕೆ ಸೇರಿಸಿದರೆ ಆವಾಗ ಇಟ್ ಬಿಕಮ್ಸ್ ಎ ಸೆಲ್ಫ್‌ರಿಲೈಯನ್ಸ್ ಸೆಲ್ಫ್‌ಫೈನಾನ್‌ಸಿಂಗ್ ಸ್ಕೀಮ್ ಅದರಲ್ಲಿ ದುರ್ಬಲವರ್ಗದವರು ಇದ್ದರೆ ಅವರಿಗೂ ಸ್ವಲ್ಪ ವರ್ಷಗಳಲ್ಲಿ ಸಬ್ಸಿಡಿಯನ್ನು ಕೊಡಬೇಕೆಂದರೆ ಅದರ ಬಗ್ಗೆ ನನ್ನದೇನೂ ಆಕ್ಷೇಪಣೆಯಿಲ್ಲ. ಈ ಸೆಲ್ಫ್ ಫೈನಾನ್‌ಸಿಂಗ್ ಸೇವಿಂಗ್ಸ್ ಮತ್ತು ರಿಪೇಮೆಂಟ್ to be tagged to House Contruction. ಇದನ್ನು ಮಾಡಿದರೆ ಒಂದು ಕ್ರಾಂತಿಕಾರಕವಾದಂತಹ ರೀತಿಯಲ್ಲಿ ನಾವು ಬಡಜನರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಿದೆ, ಅಂತಹ ಒಂದು ಸ್ಪಷ್ಟವಾದಂತಹ ಒಂದು ಧೋರಣೆ ಸರ್ಕಾರದ ವತಿಯಿಂದ ಬರುತ್ತದೆಂದು ನಾನು ನಿರೀಕ್ಷೆ ಮಾಡಿದ್ದೇನೆ.

Sri Gumarul Islam (Minister for Housing) :- The Hon'ble Chief Minister has announced that very shortly Housing Policy will be announced. The Hon'ble Minister for Rural Development has given very valuable suggestion. I will take up their issue for consideration. Hon. Member Sri D.R. Patil has very well expressed about recovery mechanism and to see that this scheme is ther for a longer time. We have taken on trial basis about 38,000 houses in 130 gramas in Hulkoti, Sadalga and in 13 districts. Now Grameena Banks are coming forward. The hon. member said that recovery position is much better in Sadaraga and other places that means people are having faith in the Scheme. That believe in the recovery and make the repayment. Only thing is we have to get their confidence, The suggestion given by our hon. experienced minister, I will definitely take up for consideration before announcing this.

ಶ್ರೀ ಎಸ್.ಎಸ್. ಪಾಟೀಲ್ : ತಾವು ಏನೀಗ ಹೇಳಿದರಲ್ಲಾ, ನಾವು ಆ ರೀತಿಯಾಗಿ ತುಂಬಿಸಲಿಕ್ಕೆ ಹತ್ತಿದ್ದೇವೆ. ಇದರ ಬಗ್ಗೆ ಬಹಳಷ್ಟು ಶಾಸಕರು ತುಂಬಿಸಲಿಕ್ಕೆ ಹತ್ತಿದ್ದಾರೆ. ತಮ್ಮಿಂದ

ಆ ಸ್ಕೀಮ್ ಬಂದಾಗಿದೆ ಎಂದು ಆದೇಶ ಬಂದಿದೆ. ಇದರಿಂದಾಗಿ ತೊಂದರೆಯಾಗಿದೆ. ತಮ್ಮಿಂದ ಆದೇಶ ಬಂದಿದೆ, ಜನರು ಅದನ್ನು ತುಂಬಲಿಕ್ಕೆ ಹತ್ತಿದರು, ಇಲ್ಲಾ ನಾವು ನವಗ್ರಾಮ ಯೋಜನೆಯನ್ನು ಮಾಡಿದ್ದೇವೆ. ಆಗ ತುಂಬಿದವರಿಗೆ ನಾವು ಕೊಡುವುದಿಲ್ಲವೆಂದು ಹೇಳಿಬಿಟ್ಟಿರಿ.

ಶ್ರೀ ಖಮರುಲ್ಲಾ ಇಸ್ಲಾಂ : ಸನ್ಮಾನ್ಯ ಅಧ್ಯಕ್ಷರೇ, Samething has been given in other name. Some it is cluster of houses - minimum houses will be 20. We will give some infrastructure also.

ಶ್ರೀ ಎಸ್.ಎಸ್. ಪಾಟೀಲ್ : ಈಗ ಯಾರು ತುಂಬುವುದಕ್ಕೆ ಪ್ರಾರಂಭ ಮಾಡಿದ್ದಾರೆ, ಅವರಿಗಾದರೂ ಕೊಡಬೇಕಲ್ಲಾ, ಜನರು ನಮ್ಮನ್ನು ಕೇಳುತ್ತಿದ್ದಾರೆ.

ಶ್ರೀ ಖಮರುಲ್ಲಾ ಇಸ್ಲಾಂ : ಅಧ್ಯಕ್ಷರೇ, That also we will take up, only on trial basis. Under a different name, the same scheme is taken up.

ಶ್ರೀ ಎಸ್.ಎಸ್. ಪಾಟೀಲ್ : ಇವೆಲ್ಲಾ ಮೂರು ಹಳ್ಳಿಗೆ ಎಂದು ಕೊಡುತ್ತೀರಿ, ಆಗ ಏನಾಗುತ್ತದೆಂದರೆ, ಒಂದೊಂದು ಹಳ್ಳಿಯಲ್ಲಿ 100 ರಿಂದ 200 ಮಂದಿ ತುಂಬಿದ್ದಾರೆ, ಅವರು ಮೊದಲು ಅಲ್ಲಿ ಮಾಡಿಕೊಂಡರುವಾಗ ನಾವು ತುಂಬಿಸಿದಕೂಡಲೇ ಇಲ್ಲವೆಂದು ಹೇಳುತ್ತೀರಿ. ಬೇರೆ ಬೇರೆ ಎಂಎಲ್‌ಎಗಳು ಪಕ್ಷಾತೀತವಾಗಿ ತುಂಬಿಸಿದ್ದಾರೆ.

ಶ್ರೀ ಖಮರುಲ್ಲಾ ಇಸ್ಲಾಂ : ಅಧ್ಯಕ್ಷರೇ, out of the more quota, 40% will be given. It has been announced in the budget.

ಶ್ರೀ ಎಸ್.ಎಸ್. ಪಾಟೀಲ್ : ಪೂರ್ವದಲ್ಲಿ ಯಾರ್ಯಾರು ಹಣವನ್ನು ಕಟ್ಟಿದ್ದಾರೋ ಅವರಿಗಾದರೂ ಕೊಡಿ ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ : ಈಗ ಜಾಗವಿಲ್ಲವೆಂದು ಯಾರಿಗೆ ತೊಂದರೆಯಾಗಿದೆಯೋ ಅವರಿಗೆ ಅಲ್ಲಿ ಮನೆಯನ್ನು ಕೊಡಬೇಕಾಗುತ್ತದೆ, ಇವರು ಎಲ್ಲಿ ಕೊಡುತ್ತಾರೆ 50 ಮನೆಗಳು, ಕ್ಲಸ್ಟರ್ ಆಫ್ ಹೌಸ್, ಅಲ್ಲಿಗೆ ಶಿಫ್ಟ್ ಮಾಡವುದಕ್ಕಾಗುವುದಿಲ್ಲ.

ಶ್ರೀ ಖಮರುಲ್ಲಾ ಇಸ್ಲಾಂ : ಅವರಿಗೆ ಕೊಡುತ್ತಾರೆ, ನೋ ಪ್ರಾಬ್ಲಮ್.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅವರಿಗೆ ಎಲ್ಲಿ ಸ್ಥಳವಿದೆಯೋ ಅಲ್ಲಿ ಕೊಡುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಡಿ.ಆರ್. ಪಾಟೀಲರು ಈ ಪಕ್ಷದವರು ಬಹಳ ರಿಪೇಮೆಂಟ್ ಪದ್ಧತಿಯನ್ನು ಕೆಡಿಸಿಬಿಟ್ಟರು ಎಂದು ಹೇಳಿದರು. ಈ ರಾಷ್ಟ್ರದಲ್ಲಿ, ಈ ರಾಜ್ಯದಲ್ಲಿ ಬಹುಶಃ ತಾವು ಆಗ ಅರ್ಥಸಚಿವರಾಗಿದ್ದೀರಿ. ಇದು ಕಾಂಗ್ರೆಸ್ ಒಡೆದ ಮೇಲೆ ಈ ಕೆಟ್ಟಪದ್ಧತಿ ಶುರುವಾಯಿತು. ಇದು ನಮ್ಮ ಕಡೆಯಿಂದ ಆಗಿದ್ದಲ್ಲ, ನೀವು ಏನು ಸುಮ್ಮಸುಮ್ಮನೆ ರೊಕ್ಕ ಹಂಚಿ ಹೋಗಿದ್ದಿರಿ, ನಾವು ಬ್ಯಾಂಕ್ ಮುಳುಗಿಹೋಗಿತ್ತದೆಂದು, ಅವತ್ತು ಮನ್ನಾ ಮಾಡಿದೆವು.

ಶ್ರೀ ಹೆಚ್.ಕೆ. ಪಾಟೀಲ್(ಜಲಸಂಪನ್ಮೂಲ ಸಚಿವರು) : 1980ರಲ್ಲಿ ಕಾಂಗ್ರೆಸ್ ವಿಭಜನೆಯಾದ ಮೇಲೆ ಬಡವರ ಬಗ್ಗೆ ವಿಶೇಷವಾಗಿ ಇರತಕ್ಕಂಥ ಜ್ಞಾನ ಬಂದಿದ್ದು ಬಡವರಿಗೆ ಸಾಲ ಸಿಗುವುದಕ್ಕೆ ಹತ್ತಿದ್ದು ಕಾಂಗ್ರೆಸ್ ಒಡೆದ ಮೇಲೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು.

12.20 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್ : ಸಾಲ ತೆಗೆದುಕೊಂಡವರು ತಿರುಗಿ ಕೊಡಬಾರದು ಎಂದು ಕಲಿಸಿದವರೇ ನೀವು, ನಾವಲ್ಲ. ಬರ ಬಂದು ರೈತರು ಬಹಳ ಕಷ್ಟದಲ್ಲಿದ್ದಾರೆ, ಮಳೆ ಇಲ್ಲ, ಬೆಳೆ ಇಲ್ಲ ಎಂದು ರೈತರಿಗಷ್ಟೇ ಬಿಟ್ಟಿದ್ದೇವೆ. ನೀವು ಇಂಡಸ್ಟ್ರಿಯಲಿಸ್ಟ್‌ಗಳಿಗೆ ಖಾಯಂ ಆಗಿ ಬಿಡುತ್ತಿದ್ದೀರಿ. ನೀವು ಒಬ್ಬ ರೈತರ ಮಗನಾಗಿ, ರೈತರಿಗೆ ಬಿಟ್ಟಿದ್ದರ ಬಗ್ಗೆ ಮಾತನಾಡಬಾರದು.

ಶ್ರೀ ಡಿ.ಆರ್. ಪಾಟೀಲ್ : ಸಾಲ ತೆಗೆದುಕೊಂಡೆ ಎಂದರೆ ಅದನ್ನು ತಿರುಗಿ ಕೊಡಬೇಕು ಎನ್ನುವಂಥ ರೈತ ನಾನು.

ಶ್ರೀ ಎಸ್.ಎಸ್. ಪಾಟೀಲ್ : ತಿರುಗಿ ಕೊಡುವಂಥ ಶಕ್ತಿಯನ್ನು ಅವರಿಗೆ ಕೊಡಬೇಕಲ್ಲವೇ?

ಶ್ರೀ ಡಿ.ಆರ್. ಪಾಟೀಲ್ : ಆ ಶಕ್ತಿಯನ್ನು ತುಂಬಿ ಎಂದು ಹೇಳಿ. ಆದರೆ ಸಾಲ ಮರುಪಾವತಿ ಮಾಡುವುದು ಬೇಡ ಎಂದು ಹೇಳಬೇಡಿ. ಆ ಶಕ್ತಿಯನ್ನು ತುಂಬಲಿಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೆರೆಗಳ ಹೂಳನ್ನು ಎತ್ತಿಸುತ್ತಿದ್ದೇವೆ, ಸಣ್ಣ ನೀರಾವರಿ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದೇವೆ. ಅದನ್ನು ಮಾಡುತ್ತೇವೆ. ಆದರೆ ಸಾಲ ಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕು ಎನ್ನುವುದು ಬೇಡ. ಅದೂ ಸಹ ಹೀಗೆ ಮನ್ನಾ ಮಾಡುವುದು ಯಾರಿಗೆಂದರೆ ಶ್ರೀಮಂತ ರೈತರಿಗೆ. ಆ ಸೊಸೈಟಿಯೊಳಗೆ ನಾವು ಬಡ ರೈತರ ಕಾಲನ್ನೂ ಇಡಿಸಿಲ್ಲ. 5 ವರ್ಷಗಳ ಕಾಲ ಅಧಿಕಾರದಲ್ಲಿ ಇಲ್ಲದಿದ್ದಾಗ, ಸಾಲ ತೆಗೆದುಕೊಳ್ಳುವುದು, ನಂತರ ಅಧಿಕಾರಕ್ಕೆ ಬಂದಾಗ ಸಾಲ ತೆಗೆದುಕೊಂಡಿದ್ದನ್ನು ನಾವೇ ಮನ್ನಾ ಮಾಡಿಕೊಂಡು ಕುಳಿತುಬಿಡುವುದು. ನಾವು ಇದನ್ನೊಂದು ಪರಿಪಾಠವನ್ನಾಗಿ ಮಾಡಿಕೊಂಡಿದ್ದೇವೆ. ಇದು ಬದಲಾಗಬೇಕು. ಇದು ಬದಲಾಗಲಿಲ್ಲ ಎಂದರೆ ನಾವು ಕ್ರೆಡಿಟ್ ಸಿಸ್ಟಂ ಅನ್ನು ಹಾಳು ಮಾಡಿದ ಹಾಗೆ ಆಗುತ್ತದೆ. ಈಗ ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ಮಂದಿ ಖಾಸಗಿ ಲೇವಾದೇವಿಯವರು ಬಂದಿದ್ದಾರೆ. ಶೇ. 3, 4, 6ರಷ್ಟು ಬಡ್ಡಿ ಕೊಟ್ಟು ಅದೇ ರೈತರು ಅವರಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಈ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದವರು ಯಾರು? ತಾತ್ಪೂರ್ತಿಕ ಲಾಭಕ್ಕಾಗಿ, ನಿಮಗೆ ರಾಜಕೀಯ ಲಾಭವಾಗುತ್ತದೆ ಎಂದು ತಿಳಿದುಕೊಂಡು ನೀವು ಬಡ್ಡಿ ಮನ್ನಾ, ಅಸಲು ಮನ್ನಾ ಮಾಡಿದಿರಿ. ಅದೇ ದೊಡ್ಡ ತಪ್ಪು ನೀವು ಮಾಡಿದ್ದು. ತಪ್ಪು ಮಾಡಿದ್ದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಅದನ್ನು ನಾನಂತೂ ಒಪ್ಪುತ್ತೇನೆ. ಅಸಲು ಮತ್ತು ಬಡ್ಡಿ ಮನ್ನಾ ಮಾಡುವುದರಿಂದ ಇವತ್ತು ಹಳ್ಳಿಗಳಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ಇದಕ್ಕೆ ಇದೂ ಒಂದು ಕಾರಣ. ಕ್ರೆಡಿಟ್ ಸಿಸ್ಟಂ ಹಾಳಾಗಿದೆ. ಆದರೆ ಜನಾರ್ಧನ

ಪೂಜಾರಿಯವರು ಆರ್ಥಿಕ ಸಚಿವರಾಗಿದ್ದಾಗ ಅವರು ಮೇಳಗಳನ್ನು ಮಾಡಿ ಸಾಲ ಕೊಟ್ಟಿದ್ದರಲ್ಲಿ ಒಂದು ರೂಪಾಯಿಯೂ ವಾಪಸ್ಸು ಬರಲಿಲ್ಲ.

ಶ್ರೀ ಯು.ಆರ್. ಸಭಾಪತಿ : ಸಭಾಪತಿ ಒಂದು ರೂಪಾಯಿಯೂ ವಾಪಸ್ಸು ಬರಲಿಲ್ಲವೆಂದು ಯಾರು ಹೇಳಿದರು. ಮಹಿಳೆಯರಿಗೆ ಸಾಲ ಕೊಟ್ಟಿದ್ದರಲ್ಲಿ ಶೇ. 80ರಷ್ಟು, ಪುರುಷರಿಗೆ ಕೊಟ್ಟಿದ್ದರಲ್ಲಿ ಶೇ. 60 ರಷ್ಟು ವಾಪಸ್ಸು ಬಂದಿದೆ. ಬಡವರಿಗೆ ಸಾಲ ಕೊಟ್ಟಾಗ, ಇಡೀ ಬ್ಯಾಂಕ್ ದಿವಾಳಿಯಾಗುತ್ತದೆ ಎಂದು ಹೇಳಿದವರು ನೀವು. ಒಂದು ರೂಪಾಯಿಯೂ ಬರಲಿಲ್ಲವೆಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಆ ಸಿಸ್ಟಂ ಅನ್ನು ಹಾಳು ಮಾಡಿದ್ದರಲ್ಲಿ ಎಲ್ಲಾ ಪಕ್ಷದವರೂ ಭಾಗಿಗಳು. ಇದರಿಂದ ತೊಂದರೆಯಾಗಿರತಕ್ಕಂಥಾದ್ದು ರೈತರಿಗೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿಗೆ ಬಂದಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಆಶ್ರಯ ಯೋಜನೆಯಲ್ಲಿ ಬಡವರಿಗೆ ಮನೆ ಕಟ್ಟಿಸಿಕೊಡುವ ರೀತಿಯಲ್ಲಿ ಮಧ್ಯಮ ವರ್ಗದವರ ಸಲುವಾಗಿ ಹೌಸಿಂಗ್ ಬೋರ್ಡ್ ಮುಖಾಂತರ 1900 ಕೋಟಿ ರೂ.ಗಳ ಒಂದು ಬೃಹತ್ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಹಿಂದೆ ಅದು ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿತ್ತು. ನಮ್ಮ ಮುಖ್ಯಮಂತ್ರಿಗಳು, ಈ ಬಜೆಟ್‌ನಲ್ಲಿ ಅದನ್ನು ಹೋಬಳಿ ಮಟ್ಟಕ್ಕೆ ಒಯ್ಯಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದನ್ನು ಕೇವಲ ಹೋಬಳಿ ಮಟ್ಟದಲ್ಲಿ ಮಾತ್ರವಲ್ಲ, ದೊಡ್ಡ ದೊಡ್ಡ ಗ್ರಾಮದವರೂ ಅಪೇಕ್ಷೆಪಟ್ಟರೆ ಅಲ್ಲಿಯೂ ಮಾಡಿ. ಇದಕ್ಕೆ ನೀವು ನಮಗೆ ಸಬ್ಸಿಡಿ ಕೊಡಬೇಡಿ, ಇದಕ್ಕಾಗಿ ನಮಗೆ ರಿಯಾಯಿತಿ ದರದಲ್ಲಿ ಸಾಲ ಕೊಡಿ ಎಂದು ನಾವು ಕೇಳುವುದಿಲ್ಲ. ಆದರೆ ಹೌಸಿಂಗ್ ಬೋರ್ಡ್‌ನವರು ಸಾಲದ ವ್ಯವಸ್ಥೆಯನ್ನು ಮಾಡಿ, ಮನೆ ಕಟ್ಟಿಸಿ ಕೊಡುವ ಕೆಲಸವನ್ನು ಎಲ್ಲಾ ಕಡೆಗೂ ಅಂದರೆ ಎಲ್ಲೆಲ್ಲಿ ಅಪೇಕ್ಷೆಪಡುತ್ತಾರೆ, ದುಡ್ಡು ತುಂಬಲು ಎಲ್ಲೆಲ್ಲಿ ಮುಂದೆ ಬರುತ್ತಾರೆ, ಎಲ್ಲೆಲ್ಲಿ ಆ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾರೆ, ಆ ಎಲ್ಲಾ ಗ್ರಾಮಗಳಲ್ಲೂ ಸಹ ಮಧ್ಯಮ ವರ್ಗದವರ ಹೌಸಿಂಗ್ ಬೇಡಿಕೆಯನ್ನು ಈಡೇರಿಸಲಿಕ್ಕಾಗಿ ಈ ಯೋಜನೆಯನ್ನು ವಿಸ್ತರಿಸಬೇಕು ಎಂದು ನಾನು ಮುಖ್ಯಮಂತ್ರಿಗಳಿಗೆ ಮತ್ತು ಹೌಸಿಂಗ್ ಬೋರ್ಡ್‌ನವರಿಗೆ ಈ ವೇದಿಕೆ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಉತ್ತರ ಕರ್ನಾಟಕದ ಜನತೆಗೆ ಒಂದು ಆಶ್ವಾಸನೆಯನ್ನು ನೀಡಿತ್ತು. ಅದೇನೆಂದರೆ, ಉತ್ತರ ಕರ್ನಾಟಕ ಹಿಂದುಳಿದಿದ್ದು, ಆ ಹಿಂದುಳಿದಿರುವಿಕೆಗೆ ಕಾರಣವನ್ನು ಕಂಡುಕೊಂಡು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಆ ಗ್ಯಾಪ್ ಅನ್ನು ತುಂಬಲು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಅವುಗಳನ್ನು ಹಾಕಿಕೊಂಡು, ಅನುಷ್ಠಾನ ಮಾಡುತ್ತೇವೆ ಎನ್ನುವ ಭರವಸೆಯನ್ನು ನಾವು ನಮ್ಮ ಪ್ರಣಾಳಿಕೆಯಲ್ಲಿ ಕೊಟ್ಟಿದ್ದೆವು. ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ಉತ್ತರ ಕರ್ನಾಟಕ ಹಿಂದುಳಿದಿದೆ ಎನ್ನುವುದನ್ನು ನೀವು ಒಪ್ಪಲೇ ಇಲ್ಲ. ನಾವು ಏನೇ ಹೇಳಿದರೂ ಸಹ, ಆಗ ಈ ಕಡೆ ಕುಳಿತಿದ್ದಂಥವರೆಲ್ಲಾ ಅದು ಹಿಂದುಳಿದಿಲ್ಲ ಎನ್ನುವ ಮಾತನ್ನೇ ಹೇಳುತ್ತಿದ್ದರು. ಮಾನ್ಯ ಸದಸ್ಯರಾದ ಬೆಲ್ಲದವರು ಅದಕ್ಕೆ ಸಾಕ್ಷಿಯಾಗಿದ್ದಾರೆ. ಹಿಂದುಳಿದಿದೆ ಎನ್ನುವುದನ್ನು ನಾವು

ಪ್ರಾಂಜಲವಾಗಿ ಒಪ್ಪಿದ್ದೇವೆ. ಆ ಪ್ರಕಾರ ಹಿಂದುಳಿದಿರುವ ಆ ಭಾಗವನ್ನು ಅಭಿವೃದ್ಧಿಪಡಿಸಬೇಕು ಎಂದು ಅದಕ್ಕೆ ಬೇಕಾಗುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಕ್ಕಾಗಿ ಬಹುತೇಕ ಅಭಿವೃದ್ಧಿಪರ ಇಲಾಖೆಗಳಲ್ಲಿ ಬಹಳಷ್ಟು ಇಲಾಖೆಗಳನ್ನು ಆ ಭಾಗದವರಿಗೆ ನಮ್ಮ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಆರ್.ಡಿ.ಪಿ.ಆರ್. ನಗರಾಭಿವೃದ್ಧಿ ಇಲಾಖೆ, ಹೌಸಿಂಗ್, ಆರೋಗ್ಯ, ಪಿ.ಡಬ್ಲ್ಯೂ.ಡಿ. ಇರಿಗೇಷನ್, ಫುಡ್ ಅಂಡ್ ಸಿವಿಲ್ ಸಪ್ಲೈಸ್, ಸ್ಮಾಲ್ ಸ್ಕೇಲ್, ಮೀಡಿಯಂ ಸ್ಕೇಲ್ ಹಾಗೂ ಮೇಜರ್ ಸ್ಕೇಲ್ ಇಂಡಸ್ಟ್ರಿ, ಇವುಗಳಿಗೆಲ್ಲಾ ಸಂಬಂಧಿಸಿದ ಪೋರ್ಟ್‌ಫೋಲಿಯೋಗಳನ್ನು ಅಲ್ಲಿನ ನಾಯಕರುಗಳಿಗೆ ಕೊಟ್ಟು, ನಿಮ್ಮ ನಿಮ್ಮ ಇಲಾಖೆಯ ಮುಖಾಂತರ, ಅಲ್ಲಿನ ಜನಗಳಿಗೆ ಏನೇನು ಸೌಕರ್ಯಗಳನ್ನು ಮಾಡಬೇಕೋ ಅದನ್ನು ಮಾಡಿ ಎಂದು ಒಂದು ವ್ಯವಸ್ಥೆಯನ್ನು ರೂಪಿಸಿದ್ದಕ್ಕಾಗಿ, ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ : ಇಷ್ಟೊಂದು ಇಲಾಖೆಗಳನ್ನು ಆ ಭಾಗದವರಿಗೆ ಕೊಟ್ಟಿದ್ದಾರೆ ಎಂದು ಹೇಳಿದಿರಿ. ಆ ಇಲಾಖೆಗಳಿಂದ ಅಲ್ಲಿ ಏನೇನು ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನೂ ದಯವಿಟ್ಟು ತಿಳಿಸಿ. ನಮ್ಮ ಜನತೆಗೆ ಗೊತ್ತಾಗಲಿ.

ಶ್ರೀ ಡಿ.ಆರ್. ಪಾಟೀಲ್ : 2,200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬೀದರ್‌ನಿಂದ ಶ್ರೀ ರಂಗಪಟ್ಟಣದವರೆಗೆ ರಸ್ತೆಯನ್ನು ಮಾಡುತ್ತಿದ್ದೇವಲ್ಲಾ, ಅದು ಎಲ್ಲಿದೆ, ಉತ್ತರ ಕರ್ನಾಟಕದಲ್ಲೋ, ದಕ್ಷಿಣ ಕರ್ನಾಟಕದಲ್ಲೋ? ಉತ್ತರ ಕರ್ನಾಟಕದಲ್ಲಿ ಈಗ ಸಾಕಷ್ಟು ನೀರಾವರಿ ಯೋಜನೆಗಳು ಬರುತ್ತಿವೆಯಲ್ಲಾ, ಅದರಿಂದ ಯಾರಿಗೆ ಲಾಭವಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್ : ಹಿಂದಿನಿಂದ ನಡೆದುಕೊಂಡು ಬರುತ್ತಿರುವಂಥ ಯೋಜನೆಗಳಿಗೆ ಬಗ್ಗೆ ಹೇಳುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರ ಬಂದಾಗ ನೀವು ಮಾನ್ಯ ದೇವೇಗೌಡರನ್ನು ನೆನೆಸಿಕೊಳ್ಳಬೇಕು. ನೀವು ಅದನ್ನು ಮುಂದುವರೆಸಿಕೊಂಡು ಹೋಗಿರಬಹುದು, ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪ್ರಾರಂಭ ಮಾಡಿದವರು ಮಾನ್ಯ ದೇವೇಗೌಡರು. ಆಲಮಟ್ಟಿ ಯೋಜನೆಯನ್ನು ಚಾಲೂ ಮಾಡಿದವರು ಮಾನ್ಯ ದೇವೇಗೌಡರು. ಅದಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಅದನ್ನು ನೀವು ನೆನೆಸಿಕೊಳ್ಳಬೇಕು. ಅವುಗಳನ್ನು ಈಗ ನೀವು ಮುಂದುವರೆಸಿದ್ದೀರಿ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಿಮ್ಮ ಮಂತ್ರಿಗಳು ಬಂದು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಅದನ್ನೂ ನಾವು ಇಲ್ಲವೆನ್ನುವುದಿಲ್ಲ. ಎಲ್ಲವನ್ನೂ ನಾವು ಟೀಕೆ ಮಾಡಲು ಹೋಗುವುದಿಲ್ಲ.

ಶ್ರೀ ಪಿ.ಹೆಚ್. ಪೂಜಾರ್ : ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ವಿಶೇಷ ಕಳಕಳಿ ಇದೆ. ಅದನ್ನು ನಾವು ಅಪ್ರಿಷಿಯೇಟ್ ಮಾಡಲೇಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ದೇವೇಗೌಡರನ್ನು ನೆನೆಸಿಕೊಳ್ಳಬೇಕು ಎಂದು ಎಸ್.ಎಸ್. ಪಾಟೀಲರು ಹೇಳಿದರು. ಮಾನ್ಯ ದೇವೆಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯದ ಸೇವೆಯನ್ನು ಸಾಕಷ್ಟು ಮಾಡಿದ್ದಾರೆ. ಅದನ್ನು ನಾವು ಒಪ್ಪುತ್ತೇವೆ. ಆದರೆ ಯಾವ ಯೋಜನೆಗೆ ಯಾರನ್ನು ನೆನೆಸಿಕೊಳ್ಳಬೇಕು ಎನ್ನುವುದನ್ನು ಆ ಯೋಜನೆಗಳ ಫಲಾನುಭವಿಗಳಾದ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಉತ್ತರ ಕರ್ನಾಟಕದ ಅತ್ಯಂತ ಪ್ರತಿಷ್ಠಿತ

ಯೋಜನೆಯಾಗಿರತಕ್ಕಂಥ ಕೃಷ್ಣಾ ಮೇಲ್ದಂಡೆ ಯೋಜನೆ ಬರಲು ಕಾರಣರಾದವರಲ್ಲಿ ಪ್ರಥಮರು ನಿಜಲಿಂಗಪ್ಪನವರು ಎನ್ನುವುದನ್ನು ನಾವು ನೀವು ಒಪ್ಪಲೇಬೇಕು. ನಾವು ಆ ಯೋಜನೆಗಳ ಡ್ರಾಯಿಂಗ್‌ಗಳನ್ನು ತೆಗೆದು ಇಟ್ಟಿದ್ದೆವು. ಆದರೆ ಹಣ ಇರಲಿಲ್ಲ. ಆ ಯೋಜನೆಗೆ ಅಗತ್ಯವಾದ ಹಣವನ್ನು ಕ್ರೋಢೀಕರಣ ಮಾಡಲಿಕ್ಕಾಗಿ ಕೃಷ್ಣಾ ಭಾಗ್ಯ ಜಲ ನಿಗಮವನ್ನು ಸ್ಥಾಪನೆ ಮಾಡಿದೆವು. ಸನ್ಮಾನ್ಯ ಮೊಯ್ಲಿಯವರ ಸರ್ಕಾರವಿದ್ದಾಗ, ಇಂದಿನ ಮುಖ್ಯಮಂತ್ರಿಗಳಾಗಿರತಕ್ಕಂಥವರು ಆಗ ಉಪ ಮುಖ್ಯಮಂತ್ರಿಗಳಾಗಿದ್ದರು. ಆ ಕಾಲದಲ್ಲಿ ಕೃಷ್ಣ ಭಾಗ್ಯ ಜಲ ನಿಗಮ ಸ್ಥಾಪನೆಯಾಯಿತು. ಅದು ಸ್ಥಾಪನೆಯಾಗಿದ್ದರಿಂದಲೇ, ಕೃಷ್ಣಾ ಮೇಲ್ದಂಡೆ ಯೋಜನೆಯ ನಮ್ಮ ಕನಸು ಸಾಕಾರಗೊಳ್ಳುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮೊಟ್ಟ ಮೊದಲಿಗೆ, ಕೃಷ್ಣಾ ಯೋಜನೆಗೆ ಮತ್ತು ಆಲಮಟ್ಟಿ ಯೋಜನೆಗೆ ಹೆಚ್ಚು ಹಣ ಇಟ್ಟಂಥವರು ಯಾವ ಸರ್ಕಾರದವರು ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಅದು ಬಂದ್ ಆಗಿ ಹೋಗಿತ್ತು. ನಮ್ಮ ಪಕ್ಷದಲ್ಲಿದ್ದಂಥವರು ಈಗ ನಿಮ್ಮ ಪಕ್ಷಕ್ಕೆ ಬಂದಿದ್ದಾರೆ. ಅವರು ಆಗ ಮಂತ್ರಿಗಳಾಗಿದ್ದರು. ಅವರು ಇದಕ್ಕೆ ಕ್ಯಾಬಿನೆಟ್‌ನಲ್ಲಿ ವಿರೋಧ ಮಾಡಿದರು. ಇದಕ್ಕಾಗಿಯೇ ನಾನು ಪಾರ್ಟಿ ಬಿಟ್ಟು ಹೊರಗೆ ಹೋಗಿದ್ದೆ. ಆ ಕಾರಣದಿಂದ ನಾನು ಇದನ್ನು ಮಾಡೇ ತೀರುತ್ತೇನೆ ಎಂದು ಹೇಳಿದ ದೇವೇಗೌಡರು, ಅದನ್ನು ಐದು ವರ್ಷಗಳಲ್ಲಿ ಮುಗಿಸಬೇಕು ಎಂದು ಯೋಜನೆ ಹಾಕಿಕೊಂಡು ಅದಕ್ಕೆ ಹಣವನ್ನು ಇಟ್ಟೆವು. ಅಂದರೆ ಅದಕ್ಕೆ ಚಾಲನೆ ಕೊಟ್ಟಂಥವರು ಮಾನ್ಯ ದೇವೇಗೌಡರು.

ಶ್ರೀ ಹೆಚ್.ಕೆ. ಪಾಟೀಲ್ : ಎಸ್.ಎಸ್. ಪಾಟೀಲರಿಗೆ ನೆನಪಿರಬೇಕು. ಯಾವ ಪ್ರಮಾಣದಲ್ಲಿ ಚಾಲನೆಯಿತ್ತು ಎಂದರೆ ಬರೀ 300 ಕೋಟಿ ರೂಪಾಯಿಗಳನ್ನು ಕೃಷ್ಣಾ ಕಣಿವೆ ಯೋಜನೆಗಳಿಗೆ ಒದಗಿಸಬೇಕು (ಕೇವಲ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಲ್ಲ) ಎಂದು ರೆಸೊಲ್ಯೂಷನ್ ಮಾಡಬೇಕು ಎಂದು ಪಕ್ಷದವರೆಲ್ಲಾ ಒಂದು ದೊಡ್ಡ ಅಲೆಯನ್ನು ಎಬ್ಬಿಸಿದರು. ಅವರ ಒಟ್ಟು ರಾಜಕೀಯ ಇಚ್ಛಾಶಕ್ತಿಯೇ ಅಷ್ಟು ಇತ್ತು. ಆದರೆ ನಮ್ಮ ಸರ್ಕಾರ 2,790 ಕೋಟಿ ರೂಪಾಯಿಗಳನ್ನು ಯಾವ ಸದ್ದುಗದ್ದಲವಿಲ್ಲದೇ ಒದಗಿಸಿದೆ. ಅದರಲ್ಲಿ 2000 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಕೃಷ್ಣಾ ಯೋಜನೆಗಳಿಗೇ ಹೋಗುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ಆಲಮಟ್ಟಿ ಯೋಜನೆ ಸುಪ್ರೀಂ ಕೋರ್ಟಿನಿಂದ ಸ್ಟೇ ಆಗುವವರೆಗೆ, ಗೇಟ್ ಹಚ್ಚುವವರೆಗೆ ತಂದವರು ಯಾರು? ನೀವು ಏನು ಕೆಲಸ ಮಾಡಿದಿರಿ. ನಾವು ಗೇಟ್ ಸಹಿತ ಎಲ್ಲವನ್ನೂ ರೆಡಿ ಮಾಡಿ ಇಟ್ಟಿದ್ದೆವು. ಅದನ್ನು ನೀವು ಸುಮ್ಮನೆ ಹಚ್ಚಿದಿರಿ ಅಷ್ಟೇ. ನೀವೂ ಮಾಡಿದ್ದೀರಿ. ಕೃಷ್ಣಾ ಅವರ ಸರ್ಕಾರ ಏನೂ ಮಾಡಿಲ್ಲ ಎಂದು ನಾವು ಹೇಳುವುದಿಲ್ಲ. ಆದರೆ ಅದನ್ನು ಪ್ರಾರಂಭ ಮಾಡಿದವರು ನಾವು ಎನ್ನುವುದನ್ನು ನೀವು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಿ. ಅದನ್ನು ನೀವು ಮುಂದುವರೆಸಿದಿರಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಹೆಚ್.ಕೆ. ಪಾಟೀಲ್ : ಇದರಲ್ಲಿ ಯಾರೂ ಶಹಭಾಸ್‌ಗಿರಿಯನ್ನು ಪಡೆಯತಕ್ಕದ್ದಲ್ಲ. ಏಕೆಂದರೆ ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ಅದೂ ಆ ಕರ್ತವ್ಯವನ್ನು ಬಹಳ ನಿಧಾನವಾಗಿ ಮಾಡಿದ್ದೇವೆ. ಇವತ್ತು ಬಹಳ ತಡವಾಗಿದ್ದಕ್ಕೆ ಎಲ್ಲರೂ ಜವಾಬ್ದಾರರು ಹೌದು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದ ಮೇಲೆ ಅದಕ್ಕೆ ಹೆಚ್ಚು ಒತ್ತನ್ನು ಕೊಟ್ಟು, ಚಾಲನೆಯನ್ನು ಕೊಟ್ಟರು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದನ್ನು ತಾವು ಮುಂದುವರೆಸಿಕೊಂಡು ಹೋಗಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ, ತಾವೂ ಕೂಡ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ.

ಶ್ರೀ ಎನ್.ಎಸ್. ಬೋಸರಾಜು : ರಾಯಚೂರು ಜಿಲ್ಲೆಯಲ್ಲಿ 345 ಕಿ.ಮೀ ರಸ್ತೆಯ ಕೆಲಸಕ್ಕೆ ಮೊಟ್ಟಮೊದಲ ಸಾರಿ ವಿಶ್ವಬ್ಯಾಂಕ್ ಇಂಪ್ರೂವ್‌ಮೆಂಟ್‌ಸ್ಕೀನ ಸಹಾಯ ಫಸ್ಟ್ ಟೈಮ್ ಸಿಕ್ಕಿರುವ ವಿಚಾರ ಈಗಾಗಲೇ ಅವರ ಗಮನದಲ್ಲಿದೆ. ಆದರೆ 1987ರಲ್ಲಿ ಅಂದಿನ ಇರಿಗೇಷನ್ ಮಿನಿಸ್ಟರ್ ರಾಯಚೂರು ಜಿಲ್ಲೆಗೆ ಜಿಲ್ಲಾ ಪಂಚಾಯತ್ ಚುನಾವಣೆ ಬರುತ್ತದೆಂದು ಸುಮಾರು 26 ಕಲ್ಲುಗಳನ್ನು ಹಾಕಿದರು. ಇವತ್ತಿನವರೆಗೂ ಒಂದು ಯೋಜನೆಯೂ ಕೂಡ ಆಗಲಿಲ್ಲ. 26 ಕಲ್ಲುಗಳನ್ನು ಹಾಕಿ ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ಒಂದೇ ದಿವಸದಲ್ಲಿ ಶ್ರೀಮಾನ್ ದೇವೇಗೌಡರು ಬಂದು 1987ರಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಗೆ ಒಂದು ವಾರಕ್ಕೆ ಮುಂಚೆ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆವರೆಗೂ 26 ಯೋಜನೆಗಳಿಗೆ ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ಅದರಲ್ಲಿ ಒಂದು ಯೋಜನೆಯಾದರೂ ಆಯಿತೆಂದು ಮಾನ್ಯ ಹಂಪನಗೌಡರು ಹೇಳಲಿ. ಇವತ್ತು ಅದರ ಬಗ್ಗೆ ರೆಕಾರ್ಡ್ ಇದೆ, ಇವತ್ತಿನ ದಿವಸ ಈ ಸರ್ಕಾರ 345 ಕಿ.ಮೀ ರಸ್ತೆಯ ಕೆಲಸವನ್ನು ವಿಶ್ವಬ್ಯಾಂಕ್ ಇಂಪ್ರೂವ್‌ಮೆಂಟ್ ಸ್ಕೀಂ ಸಹಾಯದಿಂದ ತೆಗೆದುಕೊಂಡಿದೆ. ಪ್ರಧಾನಮಂತ್ರಿಯಾಗಿ ಬಂದು ಮೂರು ಕಡೆ ರೈಲ್ವೆ ಲೈನ್‌ಗೆ ಶಂಕುಸ್ಥಾಪನೆ ಮಾಡಿದ್ದಾರೆ. ಆದರೆ ರೈಲ್ವೆ ಲೈನು ಆಗಿಲ್ಲ.

ಶ್ರೀ ಪಿ.ಹೆಚ್. ಪೂಜಾರ್ : ಇವತ್ತಿನವರೆಗೆ ಪೂರ್ಣ ಕೆಲಸ ಮುಗಿಲಿಲ್ಲ, ಈಗ ನಾಲ್ಕೈದು ವರ್ಷಗಳಿಂದ ಅದಕ್ಕೆ ಚಾಲನೆ ಸಿಕ್ಕಿದೆ. ಯಾವ ಸರ್ಕಾರಗಳು ಬಂದರೂ ಅಷ್ಟೆ, ಎಲ್ಲಾ ಸರ್ಕಾರಗಳು ಅಧಿಕಾರಕ್ಕೆ ಬಂದಾಗಲೂ ಮಾಡಿದ್ದು ಇದು, ಅದು ಪ್ರಾರಂಭವಾಗಿ 37 ವರ್ಷಗಳಾಯಿತು. ಅದು ಇಲ್ಲಿಯವರೆಗೂ ಮುಗಿದಿಲ್ಲ. ಈಗೇನೋ ಅದಕ್ಕೆ ಚಾಲನೆ ಸಿಕ್ಕಿದೆ, ಸವಾಧಾನವಾಗಿ ಒಂದು ವಿಸ್ವಾಸಕ್ಕೆ ಮಾಡುತ್ತಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್ : ನಿಮ್ಮ ನಾಯಕರು ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿ 50 ವರ್ಷ ಇದ್ದರಲ್ಲಾ ಎಷ್ಟು ಮಾಡಿದ್ದೀರಿ? 1957ರಿಂದ ರಾಮಕೃಷ್ಣ ಹೆಗಡೆಯವರೇ ಅಧಿಕಾರದಲ್ಲಿದ್ದರು 1969ಕ್ಕೆ ಮೊದಲು ನೀವಿದ್ದಿರಿ ಎನ್ನುವುದು ಮರೆತಂತೆ ಕಾಣುತ್ತದೆ. ಆಗ ನೀವೇ ಬಹಳ ವರ್ಷ ಅಧಿಕಾರದಲ್ಲಿದ್ದಿರಿ, ಅದನ್ನು ನೋಡಿಯೇ ಜನರು ಅಧಿಕಾರವನ್ನು ಕೊಟ್ಟಿರುವುದು.

ಶ್ರೀ ಅರಗ ಜ್ಞಾನೇಂದ್ರ : ಸಂವೃದ್ಧಿಯಾಗಿದೆ ಎಂದು ಜನಕ್ಕೆ ಭ್ರಮೆ ಬರುವ ಹಾಗೆ ಇದೆ. ಈ ಸವಾಲು ಮತ್ತು ಪ್ರತಿ ಸವಾಲನ್ನು ಬಿಟ್ಟು ಪ್ರಮಾಣಿಕವಾಗಿ ಏನಾದರೂ ಕೆಲಸವನ್ನು ಮಾಡೋಣ. ಈ ಸವಾಲು ಮತ್ತು ಪ್ರತಿ ಸವಾಲುಗಳಿಂದ ಬಗ್ಗೆ ಸಂವೃದ್ಧಿಯಾಗಿಲಿಲ್ಲ.

ಉಪಾಧ್ಯಕ್ಷರು : ಮಾನ್ಯ ಪಾಟೀಲರೆ, ತಾವು ಮಾತನಾಡುವುದಕ್ಕೆ ಇನ್ನೆಷ್ಟು ಸಮಯಬೇಕು. ಆದಷ್ಟು ಸವಾಲು ಮತ್ತು ಪ್ರತಿಸಾಲನ್ನು ಬಿಡಿ, ನೇರವಾಗಿ ಪ್ರಸ್ತಾಪ ಮಾಡಿ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಸದಸ್ಯರಾದ ಶ್ರೀ ಜ್ಞಾನೇಂದ್ರರವರಿಗೆ ಏನು ತೊಂದರೆ ಎಂದರೆ, ಇಷ್ಟು ವರ್ಷ ಅವರು ಏನೋ ಮಾಡಿ ನಗರ ಪ್ರದೇಶದೊಳಗೆ ಅಧಿಕಾರಕ್ಕೆ ಬರುತ್ತಿದ್ದರು, ಈ ಸಾರಿ ಆ ನಗರ ಪ್ರದೇಶದ ಜನರೂ ಸಹ ಅವರ ಕೈಯನ್ನು ಬಿಟ್ಟರು. ನಮ್ಮ ಮುಖ್ಯಮಂತ್ರಿಗಳ ಮೇಲೆ, ನಮ್ಮ ಸರ್ಕಾರದ ಮೇಲೆ ಭರವಸೆಯನ್ನಿಟ್ಟು, ಅವರೂ ಸಹ ಕೈಬಿಟ್ಟಿದ್ದಾರೆ, ಹೀಗಾಗಿ ಅವರು ನಮ್ಮನ್ನು ಬೈಯಬೇಕು, ಅವರನ್ನೂ ಸಹ ಬೈಯಬೇಕು ಖಾಯಂ ಆಗಿ ಅವರಿಗೆ ಬೈಯ್ಯುವುದೇ ಕೆಲಸವಾಗಿರುತ್ತದೆ. ಅವರಿಗೆ ಒಮ್ಮೆಯಾದರೂ ಜವಾಬ್ದಾರಿ ಸಿಗುವುದೇ ಇಲ್ಲ. ಅದಷ್ಟು ಅವರಿಗೆ ಗೊತ್ತಿದೆ.

ಶ್ರೀ ಅರಗಜ್ಞಾನೇಂದ್ರ : ಪಾಪ ನಿಮ್ಮ ಗತಿಯೇನು?

ಶ್ರೀ ಡಿ.ಆರ್. ಪಾಟೀಲ್ : ಗುಜರಾತ್‌ನಲ್ಲಿ ನಿಮ್ಮ ಸರ್ಕಾರ ಇದೆ, ಬೇರೆ ಬೇರೆ ರಾಜ್ಯಗಳಲ್ಲಿ ನಿಮ್ಮ ಸರ್ಕಾರಗಳಿವೆಯಲ್ಲಾ, ಅವರು ಏನು ಮಾಡಿದ್ದಾರೆ ಅದರ ಹತ್ತು ಪಟ್ಟು ನಾವು ಜನರ ಪರವಾಗಿ ಮಾಡಿದ್ದೇವೆ.

ಶ್ರೀ ಅರಗಜ್ಞಾನೇಂದ್ರ : ಎಷ್ಟು ದೇಶವನ್ನು ಆಳಿದ್ದೀರಿ ನೀವು? ಜನರು ನಿಮ್ಮನ್ನು ಎಲ್ಲೆಲ್ಲಿ ಕೈಬಿಟ್ಟಿದ್ದಾರೆ, ನೀವು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದರೆ ಈ ದೇಶದಲ್ಲಿ ನೀವು ಅಜರಾಮರವಾಗಿ ಆಡಳಿತವನ್ನು ಮಾಡಬೇಕಾಗಿತ್ತು. ಹಾಗೆ ಆಗಲಿಲ್ಲ ನಿಮ್ಮದು.

ಶ್ರೀ ಎನ್.ಎಸ್. ಭೋಸರಾಜು: ನಿಮ್ಮದು ಏನು ಪರಿಸ್ಥಿತಿ ಇದೆಯೆಂದು ತಿಳಿದುಕೊಳ್ಳಿರಿ.

ಶ್ರೀ ಡಿ.ಆರ್. ಪಾಟೀಲ್ : ಈ ಪ್ರಶ್ನೆ ಬಂದಿದ್ದು, ಉತ್ತರ ಕರ್ನಾಟಕ ಹಿಂದುಳಿದೆ ಎನ್ನುವುದನ್ನು ಆಗಿನ ಸರ್ಕಾರ ಒಪ್ಪಿದ್ದಿಲ್ಲ. ನಮ್ಮ ಸರ್ಕಾರವು ಒಪ್ಪಿತ್ತು. ಗೌಡರೆ, ಐ ಡೋಂಟ್ ಈಲ್ಡ್, ನೀವು ಮುಂದೆ ಮಾತನಾಡಬಹುದು.

ಉಪಾಧ್ಯಕ್ಷರು : ಪದೇ ಪದೇ ಇಂಟ್ರಪ್ಷನ್ ಮಾಡಬೇಡಿ. ಪದೇ ಪದೇ ಇಂಟ್ರಪ್ಷನ್ ಮಾಡಿದರೆ ಹೇಗೆ? ಅವರು ಮಾತನಾಡಬೇಕೋ ಬೇಡವೋ, ನೀವು ಮಾತನಾಡುವ ಹೊತ್ತಿಗೆ.

ಶ್ರೀ ಡಿ.ಆರ್. ಪಾಟೀಲ್ : ಐ ಆ್ಯಮ್ ನಾಟ್ ಈಲ್ಡಿಂಗ್, ಐ ಡೋಂಟ್ ಈಲ್ಡ್, ಲೆಟ್ ಅಸ್ ಮಿ ಸೀರಿಯಸ್ ಫಾರ್ ಸಮ್‌ಟೈಮ್. ನೇತೃತ್ವದೊಳಗಡೆ ಒಂದು ಸಮಿತಿಯನ್ನು ನೇಮಿಸಿ ಏನೇನು ಕೆಲಸಗಳನ್ನು ಮಾಡಬೇಕೆಂಬುದರ ಬಗ್ಗೆ ಅವರ ರಿಪೋರ್ಟ್‌ನ್ನು ನಾವು ಕೇಳಿದ್ದೇವೆ. ಈಗಾಗಲೇ ಅವರೊಂದು ಇಂಟರಿ ರಿಪೋರ್ಟ್‌ನ್ನು ಕೊಟ್ಟಿದ್ದಾರೆ, ಆ ಇಂಟರಿವ್ಸ್ ರಿಪೋರ್ಟಿನ ಫಲವಾಗಿಯೇ ಹಿಂದುಳಿದ 7 ಜಿಲ್ಲೆಗಳೊಳಗೆ ಒಂದು ಸೆಫರೇಟ್ ಡೈರೆಕ್ಟ್‌ರೇಟ್ ನಮ್ಮ ಸರ್ಕಾರವು ಮಾಡಿತು. ಇದನ್ನು ತಾವು ಶ್ಲಾಘನೆ ಮಾಡಿದ್ದಿರಾ? ಇದನ್ನು ತಾವು ಶ್ಲಾಘನೆ ಮಾಡಲೇ ಇಲ್ಲ, ಅದನ್ನು ಮಾಡಬೇಕಾಗಿತ್ತು, ಅದರ ಬಗ್ಗೆ ಮೊದಲು ಹಂಪನಗೌಡರು ಮಾಡಬೇಕಾಗಿತ್ತು.

ಉಪಾಧ್ಯಾಕ್ಷರು : ಮಧ್ಯೆ ಮಧ್ಯೆ ನೀವು ಎದ್ದು ಈ ರೀತಿಯಾಗಿ ಯಾರೂ ಮಾತನಾಡಬಾರದು. ಅವರು ಮಾತನಾಡುವುದಕ್ಕೆ ಬಿಡಬೇಕು.

ಶ್ರೀ ಡಿ.ಆರ್. ಪಾಟೀಲ್ : ಆ ಏಳು ಜಿಲ್ಲೆಗಳಿಗೆ ಶಿಕ್ಷಣ ಇಲಾಖೆಯ ಅನುದಾನದೊಳಗೆ 50 ಪರ್ಸೆಂಟ್ ಹಣವನ್ನು ಮೀಸಲಿಡುತ್ತಾರೆ. ಇದು ಉತ್ತರ ಕರ್ನಾಟಕದ ಅಭಿವೃದ್ಧಿಯಲ್ಲವೇನು? ನನ್ನ ಭಾಷಣವಾದ ಮೇಲೆ ತಾವು ಮಾತನಾಡಿ, ಈಗ ಮಾತನಾಡುವುದು ಬೇಡ. ನಾನು ಸಾಕಷ್ಟು ಸಲ ಈಲ್ಡ್ ಆಗಿದ್ದೇನೆ. ಉತ್ತರ ಕರ್ನಾಟಕದೊಳಗಡೆ ಅನ್ಯಾಯವಾಗಿದೆ ಎಂದು ನೀವು ಒಪ್ಪಿದ್ದೇ ಅಲ್ಲ, ನಾವು ಒಪ್ಪುತ್ತೇವೆ. ಇದರ ಬದಲಾವಣೆಯನ್ನು ತಾವು ಒಪ್ಪುತ್ತೀರಾ? ಇವೆಲ್ಲವೂ ಅಸೆಂಬ್ಲಿ ರೆಕಾರ್ಡ್ಸ್ ಮೇಲೆಯೇ ಇದೆ. ಅನ್ಯಾಯ ಮಾಡಿದ್ದೀರೆಂದು ಹೇಳಿದಾಗ, ಅನ್ಯಾಯವಾಗಿಲ್ಲ, ಏನೇನು ಹಂಚಿಕೆಯಾಗಿದೆ ಎಂಬುದರ ಬಗ್ಗೆ ಲೆಕ್ಕ ಕೊಡುತ್ತೇನೆಂದು ಹೇಳಿದಿರಿ. ಏನೂ ಲೆಕ್ಕವನ್ನು ಕೊಡಲಿಲ್ಲ, ಶ್ವೇತಪತ್ರವನ್ನು ಕೊಡಲಿಲ್ಲ, ನಾವು ಒಪ್ಪಿದ್ದೇವೆ, ಅದರ ಪ್ರಕಾರ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದೇವೆ. ಅವುಗಳನ್ನು ಅನುಷ್ಠಾನಗೊಳಿಸುತ್ತಿದ್ದೇವೆ, ಇನ್ನು ಎರಡೂವರೆ ವರ್ಷವಾದ ಮೇಲೆ ನಿಮಗೆ ಗೊತ್ತಾಗುತ್ತದೆ. ಉತ್ತರ ಕರ್ನಾಟಕದ ಜನ ಯಾರಿಗೆ ಮತವನ್ನು ಕೊಡುತ್ತಾರೆ? ಯಾವ ವರ್ಷಕ್ಕೆ ಮತನ್ನು ಕೊಡುತ್ತಾರೆಂಬುದು ನಿಮಗೆ ಗೊತ್ತಾಗುತ್ತದೆ. ಇದೇ ರೀತಿಯಾಗಿ ನಮ್ಮ ಸರ್ಕಾರ ಮುಂದುವರಿಯಿತೆಂದರೆ 5 ವರ್ಷಗಳಾದ ಮೇಲೆ ನೀವೇನೋ ಕನಸು ಕಾಣುತ್ತಿದ್ದಿರಲ್ಲಾ, ಅದು ಕನಸಾಗಿಯೇ ಉಳಿಯುತ್ತದೆ, ನೀವು ಅಲ್ಲಿಯೇ ಕುಳಿತುಕೊಳ್ಳುತ್ತೀರಿ, ನಾವು ಇಲ್ಲಿಯೇ ಕುಳಿತುಕೊಳ್ಳುತ್ತೇವೆ. ಇದು ಮಾತ್ರ ಶಾಶ್ವತವೆನ್ನುವುದನ್ನು ನೀವು ನೆನಪಿನಲ್ಲಿಡಬೇಕು.

ಶ್ರೀ ಹಂಪನಗೌಡ ಬಾದರ್ಲಿ : ಕೆಎಸ್‌ಆರ್‌ಟಿಸಿ ಬಸ್‌ಗಳು ಒಂದು ಸಂಬಂಧಪಟ್ಟಂತೆ ಊರಿನಿಂದ ಮತ್ತೊಂದು ಊರಿಗೆ ಯಾವ ರೀತಿಯಾಗಿ ಓಡಾಡುತ್ತವೆ. ಆ ರೀತಿ ಎರಡು ಶಾಲೆಗಳಿಗೆ ಸುಮಾರು 6 ಆದೇಶಗಳಾಗಿದೆ. ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ, ಇನ್ನೊಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ. ಶಿಕ್ಷಣ ಇಲಾಖೆಯ ಬಗ್ಗೆ ಇವರು ಹೇಳುತ್ತಿದ್ದಾರೆ. ನಾನು ಬಿಸಿ ಊಟದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬಿಸಿ ಊಟ ಹೇಗೆ ಆಗಿದೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ದೇವದುರ್ಗ ತಾಲ್ಲೂಕಿಗೆ ಬಂದು ಅರಕೆರೆ ಗ್ರಾಮದಲ್ಲಿ ಉದ್ಘಾಟನೆ ಮಾಡಿದರು. ಅವತ್ತಿನ ದಿವಸ ಆ ಕಾರ್ಯಕ್ರಮದಲ್ಲಿ ಆಹಾರದ ಪಟ್ಟಿಯನ್ನು ಮಾಡಿದ್ದರು. ಒಳ್ಳೊಳ್ಳೆಯ ಒಂದು ಮೃಷ್ಠಾನ ಭೋಜನದ ಪಟ್ಟಿಯನ್ನು ಮಾಡಿದ್ದರು, ಜಾಮೂನು ಜಹಂಗೀರ್ ಎಂದು ಮಾಡಿದ್ದರು. ಮಕ್ಕಳೆಲ್ಲರೂ ರಾಜ್ಯ ಸರ್ಕಾರ ಈ ರೀತಿಯಾಗಿ ಬಿಸಿ ಊಟವನ್ನು ಕೊಡುತ್ತಾರೆಂದು ತಿಳಿದುಕೊಂಡಿದ್ದರು. ಇವರು ಆರಂಭಶೂರರಾಗಿದ್ದಾರೆ, ಅಂದು ಪಟ್ಟಿ ಮಾಡಿದ್ದು ಇವತ್ತಿನವರೆಗೆ ಅದು ಪ್ರಾರಂಭವಾಗಲೇ ಇಲ್ಲ. ಇವತ್ತಿಗೂ ಕೂಡ ಏಳು ಜಿಲ್ಲೆಗಳಲ್ಲಿ ಬಿಸಿ ಊಟದ ಕಾರ್ಯಕ್ರಮ ನಡೆದಿಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಈ ಸರ್ಕಾರ ಅಂದರೆ ನಾವು ಯಾರೂ ಬಿಸಿ ಜಹಂಗೀರ್ ಕೊಡುತ್ತೇವೆಂದು ಹೇಳಿಲ್ಲ. ಬಿಸಿ ಜಾಮೂನು, ಬಿಸಿ ಅಥವಾ ಬಿಸಿ ತುಪ್ಪವನ್ನು ನಿಮ್ಮ ಬಾಯಿಗೆ ಬಿಡುತ್ತೇವೆಂದು ಹೇಳಿಲಿಲ್ಲ. ಜಹಂಗೀರ್ ಕೊಡುತ್ತೇವೆಂದು ಯಾರೂ ಪ್ರಸಿದ್ಧ ಪತ್ರಿಕೆಯಲ್ಲಿ ಈ ಸುದ್ದಿ ಹೊರಡಿಸಿಲಿಲ್ಲ.

ಶ್ರೀ ಎಸ್.ಎಸ್. ಭೋಸರಾಜು: ಈ ಕಾರ್ಯಕ್ರಮವನ್ನು ಮುಕ್ತವಾಗಿ ಎಲ್ಲರೂ ಒಳ್ಳೆಯ ಕಾರ್ಯಕ್ರಮವೆಂದು ಹೇಳಿದ್ದೇವೆ. ಅನ್ನ ಮತ್ತು ಬಿಸಿ ಸಾಂಬಾರನ್ನು ಹಾಕತಕ್ಕಂತಹ ಕಾರ್ಯಕ್ರಮ ಅಂದಿದ್ದೇವೆ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರುಗಳು ಯಾವುದಾದರೂ ಒಂದು ಕಾರ್ಯಕ್ರಮವನ್ನು ಸದುದ್ದೇಶದಿಂದ ಪ್ರಾಮಾಣಿಕತೆಯಿಂದ ಆ ಕಾರ್ಯಕ್ರಮಗಳು ನಮ್ಮ ರಾಜ್ಯದ ವಂಚಿತ ಬಡಜನಗಳ ಕಲ್ಯಾಣಕ್ಕೋಸ್ಕರ, ಯಾವುದೇ ಸರ್ಕಾರವಾಗಿರಲಿ, ಆ ಕಾರ್ಯಕ್ರಮ ಯಾವುದೇ ಭಾಗದಿಂದ ಉದ್ಭವವಾಗಿರಲಿ, ಆ ಕಾರ್ಯಕ್ರಮದಲ್ಲಿ ನ್ಯೂನತೆಗಳಿದ್ದರೆ, ಅದರಲ್ಲಿ ಕೊರತೆಗಳಿದ್ದರೆ, ಆ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಅರ್ಥ ಪೂರ್ಣವಾಗಿ ಫಲಭರಿತವಾಗಿ ನಾವು ಅನ್ವಯ ಮಾಡಲಿಕ್ಕೆ ಮಾನ್ಯ ಸದಸ್ಯರು ಕೊಡತಕ್ಕಂತಹ ಎಲ್ಲಾ ಸಲಹೆಗಳನ್ನು ಕೂಡ ಅತ್ಯಂತ ವಿನೀತರಾಗಿ ನಾವು ಸ್ವೀಕರಿಸುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ನಮ್ಮ ಸರ್ಕಾರದಲ್ಲಿ ಒಂದು ಲೋಪವಿತ್ತೆಂದು ನಾನು ಒಪ್ಪಿಕೊಳ್ಳುತ್ತೇನೆ. ನಾವು ಏನು ಮಾಡುತ್ತೇವೆ ಅದನ್ನು ನಿಮ್ಮಷ್ಟು ಪ್ರಚಾರ ಮಾಡುವುದಿಲ್ಲ. ಜನರನ್ನು ಮರಳು ಮಾಡುವುದರೊಳಗೆ ನೀವು ಎರಡೂ ಪಕ್ಷದವರು ಏನಿದ್ದೀರಲ್ಲಾ ಭಾರಿ ಬುದ್ಧಿವಂತರು, ನಾವು ದಡ್ಡರು ನೀವು ಸ್ವಲ್ಪ ಕೆಲಸ ಮಾಡಿರುತ್ತೀರಿ ಆದರೆ ....

ಶ್ರೀ ಆರಗ ಜ್ಞಾನೇಂದ್ರ : ಅವರ ಮಾತಿನ ಧಾಟಿಯನ್ನು ಬೇರೆ ಮಾಡದೆ ಹೋದರೆ ಇದು ಹೀಗೆಯೇ ಆಗುತ್ತದೆ, ಆ ಕಡೆ ಈ ಕಡೆ ಈ ಸವಾಲು ಪ್ರತಿ ಸವಾಲು ಇದ್ದೇ ಇರುತ್ತದೆ ಇದರಿಂದ ಏನೂ ಪ್ರಯೋಜನವಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಇವರು ಏನು ಹೇಳುತ್ತಾರೆಂದರೆ, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಹುಟ್ಟು ಹಾಕಿದವರೇ ನಾವು, ಎಲ್ಲರಿಗೂ ಮೀಸಲಾತಿಯನ್ನು ಕೊಟ್ಟವರೇ ನಾವು ಎಂದು ಜನಗಳ ಎದುರಿಗೆ ಹೇಳುತ್ತಾರೆ. ಆ ಪಂಚಾಯತ್ ರಾಜ್ ವ್ಯವಸ್ಥೆ ಎಂಥದ್ದು ಇವರು ಹುಟ್ಟು ಹಾಕಿದ್ದು? ನಾನು ಮಾನ್ಯ ನಜೀರ್ ಸಾಹೇಬರ ಹತ್ತಿರ ಮಾತನಾಡಿದ್ದೆ ಸಾಹೇಬ್ರೇ ಪಾಪ್ಯುಲೇಷನ್ ಏನಿದೆ that must be reflected in power sharing ಎಂದು ಅವರಿಗೆ ಹೇಳಿದ್ದೆ, ನಜೀರ್ ಸಾಹೇಬರಿಗೆ ಇವರು ಎಷ್ಟು ಸಮೀಪದಲ್ಲಿ ಇದ್ದರೋ ನಾನೂ ಕೂಡ ಅಷ್ಟೇ ಸಮೀಪದಲ್ಲಿದ್ದೆ. ಅದಕ್ಕೆ ಅವರು I will try ಎಂದು ನನಗೆ ಹೇಳಿದ್ದರು. ನಂತರ ಅವರು ಫೇಲಾದಾಗ ನಾವು ಹೀಗೆ ಏಕೆ ಆಯಿತು ಎಂದು ಕೇಳಿದೆವು, ಆಗ ಅವರು ಆಯ್ಯೋ ಅದನ್ನು ಮಾಡುವುದಕ್ಕೆ ಹೋಗಿದ್ದರೆ ನಮ್ಮ ಪಾರ್ಟಿಯೊಳಗೆ ಒಪ್ಪುತ್ತಿರಲಿಲ್ಲ, ಅದಕ್ಕೆ ಮೊದಲು ಪಂಚಾಯತ್ ರಾಜ್ ವ್ಯವಸ್ಥೆ ಬರಲಿ ಎಂದರು. ಈ ವ್ಯವಸ್ಥೆ ಬಂದನಂತರ ಅವರು ಏನು ಮಾಡಿದರು? ಪಾಟೀಲ್‌ರು ಕುಲಕರ್ಣಿಯವರ ವ್ಯವಸ್ಥೆಯಾಯಿತು. ಬಲಿಷ್ಠ ವರ್ಗಗಳಿಗೆ ಆ ಸಂಸ್ಥೆಗಳನ್ನು ಅವರು ಕೊಟ್ಟರು. ನಾವು ಏನು ಮಾಡಿದೆವು ಎಂದರೆ ಸಾಮಾನ್ಯ ಜನಗಳಿಗೆ ಅದನ್ನು ಕೊಟ್ಟೆವು, ಪಾಟೀಲ್‌ರ ಮನೆಯಲ್ಲಿರುವ ತೋಟಿ-ತಳವಾರರು ಇರುತ್ತಾರಲ್ಲಾ ಅವರಿಗೆ ನಾವು ಅಧಿಕಾರ ಕೊಟ್ಟೆವು. ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಕೊಟ್ಟಂಥ ಕೀರ್ತಿ ಯಾರಿಗೆ ಬರಬೇಕು? ನೀವೇ ಹೇಳಿ, ಅದು ಕಾಂಗ್ರೆಸ್ ಪಕ್ಷಕ್ಕೆ ಬರಬೇಕೋ? ಇವರಿಗೆ ಬರಬೇಕೋ? ಈ ಮೀಸಲಾತಿ ಘಟನಾ ತಿದ್ದುಪಡಿಯನ್ನು ರಾಜ್ಯ ಸಭೆಯಲ್ಲಿ ಒಂದು ಮತದಿಂದ ಸೋಲಿಸಿದಂಥ ಈ ಮಹಾನುಭಾವರು, ಮೀಸಲಾತಿಯನ್ನು ನಾವು ತಂದೆವು ಎಂದು ಹೇಳುತ್ತಾರೆ, ಹೇಳುವುದರಲ್ಲಿ

ಎಷ್ಟು ಬಡತನ! ಇವರಿಗೆ ಸುಳ್ಳು ಹೇಳುವುದಕ್ಕೆ ನಾಚಿಗೆ ಬರುವದಿಲ್ಲವೆ? ಬೇಕಾದ್ದು ಹೇಳುತ್ತಾರೆ, ನಂತರ ಹೆಣ್ಣು ಮಕ್ಕಳಿಗೆ ಅಧಿಕಾರ ನಾವು ಕೊಟ್ಟೆವು ಎಂದು ಹೇಳುತ್ತಾರೆ. ಮೀಸಲಾತಿಯನ್ನು ತಂದಂಥವರು ನಾವು, ಜನಪರ ಕಾರ್ಯಕ್ರಮಗಳನ್ನು ತಂದಂಥವರು ನಾವು, ಜನರ ಸಮೀಪ ಹೋಗುವವರು ನಾವು, ನೀವು ಏನೋ ಸ್ವಲ್ಪ ಅಲ್ಲಲ್ಲಿ ಟಿಂಕರಿಂಗ್ ಎಫೆಕ್ಟ್ ಮಾಡಿರುತ್ತೀರಿ, ಅದನ್ನೇ ಬಾರಿ ಹೇಳಿಕೊಂಡು ಓಡಾಡುತ್ತೀರಿ, ನಾವು ಹೇಳುವುದಕ್ಕೆ ಏಕೆ ಹೆದರುತ್ತೇವೆಯೋ ಗೊತ್ತಿಲ್ಲ, ನಾವು ಹೇಳುವುದು ಕಡಿಮೆ ಹಾಗೂ ನಮ್ಮ ಬಗ್ಗೆ ಪತ್ರಿಕೆಯವರು ಬರೆಯುವುದೂ ಕಡಿಮೆ ಎಂದು ನಮಗೆ ಒಮ್ಮೊಮ್ಮೆ ಅನ್ನಿಸುತ್ತದೆ. ನಮ್ಮ ಪಕ್ಷ ಜನರಿಗೆ ಸಮೀಪವಾಗಿ ಇರುವಂಥ ಕೆಲಸ ಮಾಡಿದಷ್ಟು ನಿಮ್ಮ ಪಕ್ಷ ಮಾಡಿಲ್ಲ ಸಾಹೇಬ್ರೇ ನೀವು ಇದನ್ನು ದಯವಿಟ್ಟು ಒಪ್ಪಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪತ್ರಿಕಾ ಮಾಧ್ಯಮದವರ ಬಗ್ಗೆ ನೀವು ಏಕೆ ಈ ರೀತಿ ಮಾತನಾಡುತ್ತೀರಿ, ಎಷ್ಟೊಂದು ನಿಷ್ಕರುಣೆಯಿಂದ ಮಾತನಾಡುತ್ತೀರಿ, ಇಂಡಿಯಾ ದೇಶದ ಬೆಸ್ಟ್ ಚೀಫ್ ಮಿನಿಸ್ಟರ್ ಶ್ರೀ ಎಸ್.ಎಂ. ಕೃಷ್ಣ ಎಂದು ಬರೆದಿರುತ್ತಾರೆ, ನಿನ್ನೆ ಮಂಡ್ಯದವರು ಮಂಡ್ಯದವರಿಗೆ ಅನ್ಯಾಯ ಮಾಡಿದ್ದಾರೆಂದು ವರ್ಲ್ಡ್ ನಂಬರ್ ಒನ್ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇನ್ನೇನು ಬೆರೆಯಬೇಕು ಎನ್ನುವುದು ಅರ್ಥವಾಗುತ್ತಿಲ್ಲ ಇಂದ್ರ, ಚಂದ್ರ, ದೇವೇಂದ್ರ, ಎಂದು ಬರೆಯಬೇಕಾ? ಇನ್ನೇನೆಂದು ಬರೆಯಬೇಕು ದಯಮಾಡಿ ಹೇಳಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಸಿಂಧ್ಯಾ ಸಾಹೇಬರೇ ಕೇಳಿ ನಮ್ಮ ಪತ್ರಿಕಾ ಮಿತ್ರರು ಇದ್ದಾರೆ ಅವರ ತಲೆಯೊಳಗೆ ಪಂಚಾಯತ್ ರಾಜ್ ಬಗ್ಗೆ ಏನು ಕಲ್ಪನೆ ಇದೆ ಅವರನ್ನು ಕೇಳಿ. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಹಾಗೂ ಮಾನ್ಯ ನಜೀರ್‌ಸಾಬ್‌ರವರೇ ತಂದಿದ್ದು. ಬಹಳಷ್ಟು ಕ್ರಾಂತಿಕಾರಕ ಬದಲಾವಣೆ ತಂದಿದ್ದು ಎಂದು ಅವರು ಹೇಳುತ್ತಾರೆ. ಪಂಚಾಯತ್ ರಾಜ್ ವ್ಯವಸ್ಥೆ ಎಂದರೆ ಗೌಡರಿಗೆ, ಶಾನುಭೋಗರಿಗೆ ಅಧಿಕಾರ ಕೊಡುವುದು ಅಲ್ಲ, ಆಗ ನೀವು ಅದೇನು ಬೋರ್ಡ್ ಹಾಕಿದ್ದರಲ್ಲಾ "ಜನತೆಯ ಅಧಿಕಾರ ಜನತೆಗೆ ಜನತೆ ಎಂದರೆ ಯಾರು? ಯಾರು ಎಂಬುದನ್ನು ನೀವೇ ಹೇಳಿ. ಯಾರು ಇಲ್ಲಿಯವರೆವಿಗೂ ಅವಕಾಶ ವಂಚಿತರಾಗಿದ್ದರೋ, ಯಾರು ಎಂದೂ ಪಂಚಾಯತ್ ಛೇರ್ಮನ್ ಆಗಲಿಕ್ಕೆ ಕನಸಿನಲ್ಲಿ ಸಾಧ್ಯವಿಲ್ಲವೆಂದು ಎಣಿಸಿದ್ದರೋ, ಅವರಿಗೆ ಅಧಿಕಾರ ನೀವು ಕೊಟ್ಟಿದ್ದರೆ ನಾವು ಒಪ್ಪುತ್ತಿದ್ದೆವು. ಆ ಅಧಿಕಾರ ತರುವಂಥ ಘಟನಾ ತಿದ್ದುಪಡಿಯನ್ನು ಒಂದು ಮತದಿಂದ ತಾವು ಸೋಲಿಸಿದಿರಿ. ರಾಜ್ಯ ಸಭೆಯಲ್ಲಿ ನೀವು ಅವರು ಕೂಡಿಕೊಂಡು ಒಂದು ಮತದಿಂದ ಸೋಲಿಸಿದಿರಿ. ಇದನ್ನು ನಾವು ಯಾರೂ ಮರೆಯತಕ್ಕದ್ದಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ನಮ್ಮ ಪಕ್ಷದ ಶಾಸಕಾಂಗ ಪಕ್ಷದ ನಾಯಕನಾಗಿ ರೆಕಾರ್ಡ್ಸ್‌ನ್ನು ಕ್ಲೀನಾಗಿ ಈಡಬೇಕಾಗುತ್ತದೆ, ಆ ದೃಷ್ಟಿಯಿಂದ ನಾನು ಮಧ್ಯ ಪ್ರವೇಶಿಸಬೇಕಾಗಿದೆ, otherwise I would not have intervened. This is a continuous process. ರಾಮಕೃಷ್ಣ ಹೆಗಡೆಯವರು ಹಾಗೂ ನಜೀರ್‌ಸಾಬ್‌ರವರು ಈ ನಿಟ್ಟಿನಲ್ಲಿ ಒಂದು ದೊಡ್ಡ ಹೆಜ್ಜೆಯನ್ನಿಟ್ಟಿದ್ದಾರೆ. ನಂತರದಲ್ಲಿ ಮಾನ್ಯ ಫೋರ್ಪಡೆಯವರು ಇಟ್ಟಿದ್ದಾರೆ. ಸಂವಿಧಾನದಲ್ಲಿ ಬದಲಾವಣೆ ಮಾಡಿದಂಥ ಕೀರ್ತಿ ಶ್ರೀಮಾನ್ ರಾಜೀವ್‌ಗಾಂಧಿಯವರಿಗೆ ಹೋಗಬೇಕು ಎನ್ನುವುದನ್ನು ಯಾರೂ ಸಹಿತ ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಆದರೆ, ಅದೇ ದೃಷ್ಟಿಯಲ್ಲಿ

ತಾವೇನು ಹೇಳುತ್ತಿದ್ದೀರಿ. ತಮ್ಮ ಕಣ್ಣು ಕಾಣಿಸಿದರೆ, ಕಿವಿ ಕೇಳಿಸಿದರೆ, ಒಂದು ವಿಷಯವನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಜಿಲ್ಲಾ ಪಂಚಾಯತ್‌ನಲ್ಲಿ ಅಧಿಕಾರ, ತಾಲ್ಲೂಕು ಬೋರ್ಡ್‌ನಲ್ಲಿ ಅಧಿಕಾರ, ಪುರಸಭೆಗಳಲ್ಲಿ ಅಧಿಕಾರ, ನಗರ ಸಭೆಗಳಲ್ಲಿ ಅಧಿಕಾರ "ಎ" ವರ್ಗಕ್ಕೆ ಯಾರು ಸೃಷ್ಟಿ ಮಾಡಿದವರು? ಯಾವ ವರ್ಗದ ನಾಯಕರುಗಳ ಬಗ್ಗೆ ತಾವು ಮೂವತ್ತು ವರ್ಷ ಭಾಷಣ ಮಾಡಿಕೊಂಡು, ಹಿಂದುಳಿದ ವರ್ಗದವರ ಬಗ್ಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆ, ವಿರೋಧ ಮಾಡುತ್ತಾರೆಂದು ಹೇಳಿಕೊಂಡು ನೀವು ಏನು ಅಧಿಕಾರಕ್ಕೆ ಬರುತ್ತಿದ್ದೀರಿ, ಅಂಥ ವರ್ಗದ ಜನ ಅಧಿಕಾರದಲ್ಲಿದ್ದಾಗ, ನೀವು ಗೌಡರು, ಪಾಟೀಲರು, ಎಂದು ಹೇಳಿದಿರಿ. ಈ ಪಾಟೀಲ್ ಮತ್ತು ಗೌಡ ಅಧಿಕಾರದಲ್ಲಿದ್ದಾಗಲೇ ಕರ್ನಾಟಕದಲ್ಲಿ ಮೀಸಲಾತಿ ಕಾನೂನು ಅನ್ನು ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನವನ್ನು ಕೊಟ್ಟಿರತಕ್ಕಂಥದ್ದನ್ನು ತಾವು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಅದರಿಂದಾಗಿ, ಇದು ಒಂದು ಪ್ರಗತಿಪರವಾದಂಥ ಒಂದು ಹೆಜ್ಜೆ ಎಂದು ಹೇಳಿ ಅಷ್ಟಕ್ಕೆ ನಿಲ್ಲಿಸಿ.

ಶ್ರೀ ಡಿ.ಆರ್. ಪಾಟೀಲ್: ಇಲ್ಲ. ಸಿಂಧ್ಯಾರವರ ಜೊತೆಗೆ ನನ್ನ ಭಿನ್ನಮತ ಇದೆ.

ಶ್ರೀ ಬಿ. ರಮಾನಾಥ್ ರೈ : ಇದಕ್ಕೆ ಯಾರು ಮೂಲ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಹಾತ್ಮಾ ಗಾಂಧಿ.

ಶ್ರೀ ಡಿ.ಆರ್. ಪಾಟೀಲ್ : ದಯಮಾಡಿ ಮಾನ್ಯ ಸಿಂಧ್ಯಾರವರು ಕೇಳಬೇಕು, ಘಟನಾ ತಿದ್ದುಪಡಿಯಾಗಿದ್ದು ಎಸ್‌ಸಿ ಎಸ್‌ಟಿ ಜನಾಂಗದವರಿಗೆ ಮೀಸಲಾತಿಯನ್ನು ಮಾಡಲಿಕ್ಕೆ ಘಟನಾ ತಿದ್ದುಪಡಿಯಿದೆ. ಮಹಿಳೆಯವರಿಗೆ ಮೀಸಲಾತಿಯನ್ನು ಮಾಡಲಿಕ್ಕೆ ಘಟನಾ ತಿದ್ದುಪಡಿಯಿದೆ. ಹಿಂದುಳಿದ ವರ್ಗದವರಿಗೆ ಮೀಸಲಾತಿ ಮಾಡಲಿಕ್ಕೆ ಅಷನ್ ಇದೆ. ನಮ್ಮ ಸರ್ಕಾರ ಇತ್ತು ಎಂದು ಹೇಳಿ ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಮಾಡುವುದಕ್ಕೆ ಸಾಧ್ಯವಾಯಿತು. ಇದರ ಇತಿಹಾಸ ಬೇಕಾದರೆ ನೀವು ನೋಡಿ. ನಿಮ್ಮ ಸರ್ಕಾರ ಇದ್ದರೆ ಹಿಂದೆ ನಜೀರ್ ಸಾಬ್ ಹೇಗೆ ಸೋತಿದ್ದರೋ ಹಾಗೆ ಅವರು ಅವತ್ತೂ ಸೋಲುತ್ತಿದ್ದರು. ಹಿಂದುಳಿದ ವರ್ಗದವರಿಗೆ ಒಮ್ಮೆ ಮೀಸಲಾತಿಯನ್ನು ಕಲ್ಪಿಸಿದ ಮೇಲೆ ಅದೇ ದಾರಿಯಲ್ಲಿ ನೀವು ಮುಂದುವರಿಯಬೇಕಾಯಿತು. ಅದನ್ನು ರಿವರ್ಸ್ ಮಾಡುವ ಅಧಿಕಾರ ಯಾರಿಗೂ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸುಳ್ಳು ಹೇಳುವುದಕ್ಕೆ ಒಂದು ಇತಿಮಿತಿ ಇರಬೇಕಾಗುತ್ತದೆ ಇದು ಯಾವುದೂ ಇವರಿಗೆ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಯಾರು ಸುಳ್ಳು ಹೇಳಿದ್ದಾರೆ? ನಾನು ಸುಳ್ಳು ಹೇಳಿದ್ದೇನೆಂದು ಮಾನ್ಯ ಸಿಂಧ್ಯಾರವರು ಹೇಳಲಿ.

ಉಪಾಧ್ಯಕ್ಷರು : ಮಾನ್ಯ ಪಾಟೀಲರೇ, ಅದಷ್ಟು ಸಂಕ್ಷಿಪ್ತವಾಗಿ ಬೇಗ ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್ : ವಾಸ್ತವ ಸ್ಥಿತಿಯನ್ನು ತಾವು ಎಲ್ಲರೂ ಒಪ್ಪಬೇಕು. ಇವರು ಬಂದು ಮಾಡಿದ್ದೇ "ಎ" ವರ್ಗ ಮಾಡಿದರು, ಒಂದು ಸ್ಟೆಪ್ ಮುಂದಿಟ್ಟರಿ. ನಾನು ಇದನ್ನು ಒಪ್ಪುತ್ತೇನೆ. ಆದರೆ ಎಸ್‌ಸಿಯವರಿಗೆ ಎಸ್‌ಟಿಯವರಿಗೆ ಕನಿಷ್ಠ 18 ಪರ್ಸೆಂಟ್ ಕನಿಷ್ಠ

3 ಪರ್ಸೆಂಟ್ ಎಂದು ನಾವೇನು ಮೀಸಲಾತಿ ಮಾಡಿದ್ದೆವು, ಆ ಕನಿಷ್ಟ ಅನ್ನುವ ಪದವನ್ನು ಇವರು ತೆಗೆದರು. ಹಾಗಾಗಿ ಕೆಲವು ತಾಲ್ಲೂಕಿನೊಳಗೆ ಎಸ್‌ಟಿಯವರು ಯಾವ ಗ್ರಾಮ ಪಂಚಾಯಿತಿಯಲ್ಲೂ ಛೇರ್ಮನ್ ಆಗಲಿಕ್ಕೆ ಸಾಧ್ಯವಾಗಿಲ್ಲ. ನಾವು ಇದ್ದಾಗ ಪ್ರತಿ ತಾಲ್ಲೂಕಿಗೆ ಒಬ್ಬ ಎಸ್‌ಟಿ ಯವನು ಗ್ರಾಮ ಪಂಚಾಯಿತಿಯ ಛೇರ್ಮನ್ ಆಗುವುದಕ್ಕೆ ಅವಕಾಶವಿತ್ತು. ನೀವು ಇದನ್ನು ತಪ್ಪಿಸಿದಿರಿ, ಇದು ಇತಿಹಾಸ ನೀವು ಇದನ್ನು ಒಪ್ಪಲೇಬೇಕು. ಜನರ ಸಮೀಪ ಹೋಗುವಂಥ ಕೆಲಸ ಇದು.

ಶ್ರೀ ಬಿ. ಸೋಮಶೇಖರ್ : ನಾನು ಏನು "ಎ" ವರ್ಗಕ್ಕೆ ಮೀಸಲಾತಿಯನ್ನು ರೊಟೇಷನ್ ಪ್ರಕಾರ ಕೊಡಬೇಕು, 20 ತಿಂಗಳಿಗೆ ಒಂದು ವರ್ಗಕ್ಕೆ ಒಂದು ಸಾರಿಯಾದರೂ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಎಂಬುದಾಗಿ ಕೊಡಬೇಕು ಎಂದು ಮಾಡಿದ್ದೆವು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಂದಂಥ ಜಿಲ್ಲೆಯಿಂದ ಬೇಕಾದರೆ ಮಾಹಿತಿ ತರಿಸಿಕೊಂಡು ನೋಡಿ, ಆ ಒಂದು ರೊಟೇಷನ್ ಆಗಿದೆಯೇ ಎಂಬುದು ಗೊತ್ತಾಗುತ್ತದೆ. ಜನರಲ್ ಇದ್ದದ್ದು ಮತ್ತೆ ಜನರಲ್, ಯಾವ ಸಾಮಾಜಿಕ ನ್ಯಾಯ ಕೊಟ್ಟಿದ್ದೀರಿ, ನಿಮ್ಮ ಮುಖ್ಯಮಂತ್ರಿಯವರ ಜಿಲ್ಲೆಯಲ್ಲಿ? ಬೇಕಾದರೆ ಮಾಹಿತಿ ತರಿಸಿಕೊಂಡು ನೋಡಿ ನೀವೇ ಯೋಚಿಸಿ. ಏಳು ತಾಲ್ಲೂಕಿನಲ್ಲಿ ಯಾವ ವರ್ಗ ಹಿಂದೆ ಇತ್ತು ಮತ್ತೆ ಯಾವ ವರ್ಗಕ್ಕೆ ಕೊಟ್ಟಿದ್ದೀರಿ, ಜಿಲ್ಲಾ ಪಂಚಾಯತ್‌ನಲ್ಲಿ ಯಾವ ವರ್ಗ ಇತ್ತು ಯಾವ ವರ್ಗಕ್ಕೆ ಪುನಃ ಕೊಟ್ಟಿದ್ದೀರಿ. ಇದನ್ನು ನೋಡಿದರೆ ಆಗ ಗೊತ್ತಾಗುತ್ತದೆ ಸಾಮಾಜಿಕ ನ್ಯಾಯ ಯಾವುದು ಎಂದು?

ಶ್ರೀ ಡಿ.ಆರ್. ಪಾಟೀಲ್ : ತಾವು ಐದು ವರ್ಷಗಳ ಕಾಲ ಮಂತ್ರಿಯಾಗಿದ್ದೀರಲ್ಲಾ ಆಗ ನೀವು ಏನೇನು ಮಾಡಿದಿರಿ ಎಂಬುದರ ಬಗ್ಗೆ ಮಾಹಿತಿ ತರಿಸಿ ನೋಡಿ, ನಿಮಗೂ ಗೊತ್ತಾಗುತ್ತದೆ. ಆ ರೊಟೇಷನ್ ಹೇಗೆ ಹೊಂದಿಸಬೇಕು ಎಂಬುದು ನಿಮಗೆ ಗೊತ್ತಿತ್ತು.

ಶ್ರೀ ಎಸ್.ಎಸ್. ಪಾಟೀಲ್ : ಪಾಪ ಅವರು ಗಟ್ಟಿ ಮಂತ್ರಿಯಾಗಿರುವುದರಿಂದ ಇಷ್ಟಾಗಿದೆ,

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದಕ್ಕೆಲ್ಲಾ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. ಒಂದು ಉದಾಹರಣೆ ಕೊಡುತ್ತೇನೆ ತಾವು ದಯಮಾಡಿ ಕೇಳಿ. ಒಂದು ಪರ್ಟಿಕ್ಯೂಲರ್ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿಯ ಅಧ್ಯಕ್ಷರ ಸ್ಥಾನ "ಎ" ವರ್ಗಕ್ಕೆ ಮೊದಲು 20 ತಿಂಗಳು ಮೀಸಲಾತಿಯಾಗಿತ್ತು. ಅದರಲ್ಲಿ 10-10, ತಿಂಗಳು ರಾಜಕೀಯ ಅನುಕೂಲಕ್ಕೆ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರ ಸ್ಥಾನ "ಎ" ವರ್ಗ ಅದಕ್ಕೆ ಬರುವುದಕ್ಕೆ ಸಾಧ್ಯವೇ ಇರಲಿಲ್ಲ. ಆದರೂ ಮೊದಲಿಗೆ "ಎ" ವರ್ಗವನ್ನು 20 ತಿಂಗಳು ರಿಸರ್ವ್ ಮಾಡಿದರು. ಹತ್ತು ಹತ್ತು ತಿಂಗಳು ಇಬ್ಬರು ಹೆಣ್ಣು ಮಕ್ಕಳಿದ್ದರು, "ಎ" ವರ್ಗದಲ್ಲಿದ್ದು ಗೆದ್ದರು ಹತ್ತು ಹತ್ತು ತಿಂಗಳು ಉಪಾಅಧ್ಯಕ್ಷರಾಗಿದ್ದರು. ಈಗ ಏನು ಮಾಡಿದ್ದಾರೆಂದರೆ, ಉಪಾಧ್ಯಕ್ಷರ ಸ್ಥಾನವನ್ನು ಮತ್ತೆ ಮಹಿಳಾ 'ಎ' ವರ್ಗಕ್ಕೆ ರಿಸರ್ವ್ ಮಾಡಿದ್ದಾರೆ, ಏಕೆಂದರೆ ಮೆಜಾರಿಟಿ ಇಲ್ಲ. 'ಎ' ವರ್ಗಕ್ಕೆ ರಿಸರ್ವ್ ಮಾಡಿ, ಅಧ್ಯಕ್ಷರಾಗಿದ್ದವರು ಪುನಃ ಅವರೇ ಉಪಾಧ್ಯಕ್ಷರಾಗಿ ಮುಂದುವರಿತಕ್ಕಂಥ ಹೀನಾಯವಾದ ಪರಿಸ್ಥಿತಿಯನ್ನು ತಂದಿತಕ್ಕಂಥವರು ನೀವು ತತ್ವ ಮಾತನಾಡುವುದಕ್ಕೆ ಹೋಗುತ್ತೀರಿ, ಏಕೆ ಸ್ವಾಮಿ ಇವೆಲ್ಲಾ ಮಾತನಾಡುತ್ತೀರಿ?

ಶ್ರೀ ಡಿ.ಆರ್. ಪಾಟೀಲ್ : ಈ ಸಣ್ಣ ಲೋಪದೋಷಗಳು ನಿಮ್ಮ ಸರ್ಕಾರ ಇದ್ದಗಲೂ ಕೂಡ ಸಾಕಷ್ಟು ಆಗಿವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಡಿ.ಆರ್. ಪಾಟೀಲ್‌ರವರು ಲೋಪ ಇದೆ ಎಂದರೂ ಕೂಡ ಹೆಚ್ಚಿನ ಧ್ವನಿಯಲ್ಲಿ ಮಾತನಾಡುತ್ತಾರೆ, ಆ ಲೋಪವನ್ನು ಸರಿಪಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿ.

12.50 ಪಿ.ಎಂ.

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ ಹಾಗೂ ಬಂದರುಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಹಿಂದುಳಿದ ವರ್ಗದವರಿಗೆ ಯಾರು ಸಹಾಯ ಮಾಡಿದ್ದಾರೆ ಎನ್ನತಕ್ಕಂಥದ್ದು ರಾಜ್ಯದ ಜನತೆಗೆ ಗೊತ್ತು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಚರ್ಚೆಯ ಮಧ್ಯೆ ಪ್ರವೇಶ ಆಗಬಾರದೆಂದು ನನ್ನ ಉದ್ದೇಶವಾಗಿತ್ತು. ಆದರೆ, ಮಾನ್ಯ ಸಿಂಧ್ಯಾರವರು ಇಷ್ಟೊಂದು ವ್ಯಾಖ್ಯಾನ ಮಾಡಿರತಕ್ಕಂಥ ಪರಿಸ್ಥಿತಿಯನ್ನು ನೋಡಿ, ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗಾಗಲೇ ಹಲವಾರು ವರ್ಷಗಳಾಗಿರುವುದರಿಂದ ಕೆಲವೊಂದು ವಿಷಯಗಳನ್ನು ನಾನು ಮರೆತಿರಬಹುದು. ಹಾಗೆಯೇ ನೀವೂ ಕೂಡ ಮರೆತಿರಬಹುದು. ಆದರೆ, ನಾನು ಮಂತ್ರಿಯಾಗಿರುವುದರಿಂದ ಆಗ ಏನು ಆಯಿತು ಎನ್ನತಕ್ಕಂಥದ್ದು ಚೆನ್ನಾಗಿ ಗೊತ್ತಿದೆ. ನೀವು ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ 1983ರ ಆ್ಯಕ್ಟ್‌ನ್ನು ಮಾಡಿದಿರಿ. ಆದರೆ, ಅದು 1987ರಲ್ಲಿ ಅನುಷ್ಠಾನಕ್ಕೆ ಬಂತು. ಅದು ಪ್ರಗತಿಪರ ಆ್ಯಕ್ಟ್ ಎಂದು ನಾವು ಈಗಲೂ ಕೂಡ ಹೇಳುತ್ತೇನೆ. ಏಕೆಂದರೆ, ಅಧಿಕಾರ ಮತ್ತು ಸಿಬ್ಬಂದಿ ವರ್ಗ ಹಾಗೂ ಹಣ ಕೊಡತಕ್ಕಂಥ ವ್ಯವಸ್ಥೆಯನ್ನು ಆಗ ನೀವು ಜಿಲ್ಲಾ ಮಟ್ಟದಲ್ಲಿ ಮಾಡಿದಿರಿ. ಅದನ್ನು ನಾವು ಇವೊತ್ತು ಕೂಡ ಸ್ವಾಗತ ಮಾಡುತ್ತೇವೆ. ಹಾಗೆಯೇ, ತಾವು ತಾಲ್ಲೂಕು ಬೋರ್ಡ್‌ನ್ನು ಬಲಪಡಿಸುವಲ್ಲಿ ಮತ್ತು ಜಿಲ್ಲಾ ಪಂಚಾಯತ್ ಬಲಪಡಿಸಿ ಅವರಿಗೆ ಅಧಿಕಾರ ಕೊಡುವಾಗ ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಸಂಸ್ಥೆಯನ್ನು ರದ್ದು ಮಾಡಿದ್ದೀರಿ. ಸನ್ಮಾನ್ಯ ದೇವರಾಜ ಅರಸುರವರು ಇದ್ದಾಗ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬೋರ್ಡ್ ಅಂದರೆ ಎಲೆಕ್ಟೆಡ್ ಬಾಡಿ ಇತ್ತು. ಅದನ್ನು ತಾವು ರದ್ದು ಮಾಡಿದ್ದೀರಿ. ಎಲೆಕ್ಟೆಡ್ ಬಾಡಿಯನ್ನು ರದ್ದು ಮಾಡಿ ಮತ್ತೆ ಗ್ರಾಮಪಂಚಾಯತಿಗಳನ್ನು ಗ್ರೂಪ್ ಪಂಚಾಯಿತಿ ಎಂದು ಮಾಡಿ ಮತ್ತೆ ಮಂಡಲ್ ಪಂಚಾಯತಿಗಳೆಂದು ಮಾಡಿದ್ದೀರಿ. ಸನ್ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಎಸ್‌ಸಿ ಎಸ್‌ಟಿ ಮತ್ತು ಹೆಣ್ಣುಮಕ್ಕಳಿಗೆ ಅಷ್ಟೇ ಅಲ್ಲದೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಮಾಡತಕ್ಕಂಥ ಒಂದು ಸ್ಪಷ್ಟವಾದ ನಿರ್ಧಾರವನ್ನು ನಮ್ಮ ಕಾಂಗ್ರೆಸ್ ಸರ್ಕಾರ ತೆಗೆದುಕೊಂಡಿದೆ. ಏಕೆಂದರೆ ಸಂವಿಧಾನದ ಪ್ರಕಾರ ಅಮೆಂಡ್‌ಮೆಂಟ್ ಮಾಡಲಾಗಿದೆ. ಇದರಲ್ಲಿ ಬಿಸಿಎಂಸಿ ವರ್ಗದವರಿಗೆ ಮೀಸಲಾತಿ ಕೊಡತಕ್ಕಂಥ ಆಪ್‌ಶನ್ ಅನ್ನು ನಾವು ಉಪಯೋಗ ಮಾಡಿದ್ದೇವೆ. ಆದರೆ ನೀವು ಏನು ಮಾಡಿದಿರಿ ಎಂದರೆ, ಬಿಸಿಎಂಸಿ ವರ್ಗದಲ್ಲಿ ಎರಡು ಭಾಗ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದಿರಿ. ತಾವು ತಪ್ಪು ತಿಳಿಯಬಾರದು. ಆ ಸಂದರ್ಭದಲ್ಲಿ

ಚುನಾವಣೆಯನ್ನು ಹಾಕುವ ಉದ್ದೇಶದಿಂದ ಮಾಡಿದ್ದು. ಅದಕ್ಕೆ ನಾನು ರಾಜೀನಾಮೆ ಕೊಟ್ಟಿರತಕ್ಕಂಥದ್ದು ತಮಗೆ ಗೊತ್ತು. ಬ್ಯಾಕ್‌ವರ್ಡ್ ಕ್ಲಾಸ್ ವರ್ಗವನ್ನು 'ಎ' ಮತ್ತು 'ಬಿ' ಎಂದು ಎರಡು ವರ್ಗಗಳಾಗಿ ಮಾಡಲಾಯಿತು. 'ಬಿ' ವರ್ಗದಲ್ಲಿ ಮುಂದುವರಿದ ವರ್ಗಗಳಾದಂಥ ಲಿಂಗಾಯಿತರು ಮತ್ತು ಜೈನರು ಹಾಗು ಕುರಬರನ್ನು ಸೇರಿಸಲಾಯಿತು. ಉಳಿದ ಹಿಂದುಳಿದ ವರ್ಗದವರನ್ನು 'ಎ' ವರ್ಗದಲ್ಲಿ ಸೇರಿಸಲಾಯಿತು. ಹಿಂದೆ ಇದ್ದಂಥ ಜಾತಿಗಳಿಗೆ ಎಷ್ಟರಮಟ್ಟಿಗೆ ನ್ಯಾಯ ಅಥವಾ ಅನ್ಯಾಯವಾಗಿದೆ ಎನ್ನತಕ್ಕಂಥದನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಗುಂಪು ಏನಿದೆ ಅದನ್ನು 'ಎ' ಮತ್ತು 'ಬಿ' ಎಂದು ವರ್ಗ ಮಾಡಿರತಕ್ಕಂಥದ್ದು ಅನಾವಶ್ಯಕವಾಗಿತ್ತು. ಇದರಿಂದ ಯಾರಿಗೂ ಕೂಡ ಹಿತವಾಗಿಲ್ಲ. ಹಾಗೆಯೇ ಮುಂದುವರಿದ ವರ್ಗದವರಿಗೂ ಕೂಡ ಯಾವುದೇ ರೀತಿಯ ಎಂಬುದನ್ನು ತೋರಿಸಿ ಕೊಡಲಿಕ್ಕೆ ಸಾಧ್ಯವಿದೆ. ಆದರೆ ಈ ವಿಷಯದ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಿಂಧ್ಯರವರು ರೊಟೇಶನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ದಯವಿಟ್ಟು ತಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಐದು ವರ್ಷಕ್ಕೊಂದು ಸಾರಿ ರೊಟೇಷನ್ ಆಗಬೇಕೆಂದು ಸಂವಿಧಾನಕ್ಕೆ ಅಮೆಂಡ್‌ಮೆಂಟ್ ಆಗಿದೆ. ಅದು ನ್ಯಾಯವಾಗಿತ್ತು. ಅದೇ ರೀತಿ 5 ವರ್ಷಕ್ಕೊಂದು ಸಾರಿ ರೊಟೇಷನ್ ಆಗಬೇಕೆಂದು 1983ರ ನಿಮ್ಮ ಕಾನೂನಿನಲ್ಲಿ ಕೂಡ ಇತ್ತು. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಚುನಾವಣೆ ಮಾಡಿದರು. ಆ ಸಂದರ್ಭದಲ್ಲಿ ಕೂಡ 20 ತಿಂಗಳು ಎಂದು ಇರಲಿಲ್ಲ. ಆಗಲೂ ಕೂಡ 5 ವರ್ಷ ಎಂದು ಇತ್ತು. ಹಾಗೆಯೇ ನಮ್ಮ ಕಾನೂನಿನಲ್ಲಿ ಅಂದರೆ, 1993ರ ಪಂಚಾಯತ್ ರಾಜ್ ಆ್ಯಕ್ಟ್‌ನಲ್ಲಿಯೂ ಕೂಡ ಐದು ವರ್ಷಕ್ಕೆ ಒಂದು ಸಲ ರೊಟೇಷನ್ ಇರಬೇಕೆಂದು ಇತ್ತು. ನಮ್ಮ ಕಾನೂನು ಎಂದು ನಾನು ಏತಕ್ಕೆ ಹೇಳಿದೆ ಎಂದರೆ, ಆ ಸಂದರ್ಭದಲ್ಲಿ ನಾನು ಮಂತ್ರಿಯಾಗಿದ್ದರಿಂದ ನಮ್ಮ ಕಾನೂನು ಎಂದು ಹೇಳಿದೆನೆಷ್ಟೆ. ಇದು ಎಲ್ಲರಿಗೂ ಸಂಬಂಧಪಟ್ಟಂಥ ಕಾನೂನು ನನ್ನ ಸ್ವಂತ ಕಾನೂನು ಅಲ್ಲ. ಇದರಲ್ಲಿ ಕೂಡ ಐದು ವರ್ಷಕ್ಕೊಂದು ರೊಟೇಷನ್ ಎಂದು ಇತ್ತು. ಆದರೆ, ಏಕಾಏಕಿ 1997ರಲ್ಲಿ ನಿಮ್ಮ ಸರ್ಕಾರ ಇದ್ದಾಗ ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ರೊಟೇಷನ್‌ಗಳನ್ನು 20 ತಿಂಗಳೆಂದು ಮಾಡಿದರು. ಎಸ್‌ಸಿ ಮತ್ತು ಎಸ್‌ಟಿಯವರಿಗೆ ಮತ್ತು ಹೆಣ್ಣುಮಕ್ಕಳಿಗೆ ಹಾಗೂ ಬೇರೆ ವರ್ಗದವರಿಗೆ ಐದು ವರ್ಷಕ್ಕೆ ಒಂಪದು ಸಾರಿ ರೊಟೇಟ್ ಆಗತಕ್ಕಂಥ ಪದ್ಧತಿ ಇತ್ತು. ಆದರೆ, ಇದನ್ನು 20 ತಿಂಗಳಿಗೆ ಒಂದು ಸಲ ಆಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ನೀವು ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ. ನೀವು ಅದನ್ನು ಅನುಷ್ಠಾನ ಮಾಡಿದ ಮೇಲೆ ನಾವು ಡೀಟೇಲ್ ಆಗಿ ರೂಲ್ಸ್ ಮಾಡಿದೆವು. ಏಕೆಂದರೆ, ಒಂದೇ ಕ್ಯಾಟಗರಿಯವರು ಪುನಃ ಪುನಃ ಬರಬಹುದು ಎನ್ನತಕ್ಕಂಥ ದೃಷ್ಟಿಯಿಂದ ಮಾಡಿದೆವಷ್ಟೆ. ಒಂದು ಕಡೆ ಹೆಣ್ಣು ಮಕ್ಕಳು ಇದ್ದರೆ ಮತ್ತೆ ಹೆಣ್ಣು ಮಕ್ಕಳು ಬರಬಾರದೆಂದು ಹಾಗೂ ಬಿಸಿಎಂಸಿ ವರ್ಗದವರೂ ಕೂಡ ಮತ್ತೆ ರೊಟೇಷನ್ ಆಗಬಾರದೆಂದು ಮಾಡಲಾಗಿತ್ತು. ಆದರೆ, ಎಸ್‌ಸಿ : ಎಸ್‌ಟಿ ವರ್ಗದವರನ್ನೂ ಜನಸಂಖ್ಯೆ ಆಧಾರದ ಮೇಲೆ ಒಂದು ಪಟ್ಟಿ ಮಾಡಿ, ಕಡಿಮೆ ಜನಸಂಖ್ಯೆ ಇರತಕ್ಕಂಥ ಕ್ಷೇತ್ರಕ್ಕೆ ಕೊಡಬೇಕೆಂದು ಹೇಳಿ ಮಾಡಲಾಗಿತ್ತು. ಆದರೆ, ಆ ಸಂದರ್ಭದಲ್ಲಿ ಬಹಳಷ್ಟು ನಿಷ್ಠೂರವಾಗುವ ಪರಿಸ್ಥಿತಿ ಬಂತು. ಆದರೂ ಕೂಡ ನಾವು ಕಟ್ಟುನಿಟ್ಟಾಗಿ ರೂಲ್ಸ್ ಮಾಡಿದ್ದೇವೆ. ಇವತ್ತಿನ ದಿವಸ ರಾಜಕೀಯವಾಗಿ ನಮಗೆ ಅವರು ಬೇಕು ಇವರು ಬೇಕು ಎನ್ನತಕ್ಕಂಥದ್ದು ಇದೆ. ಮತ್ತು ರಿಸರ್ವೇಷನ್ಸ್

ಹಾಗೂ ರೊಟೇಷನ್ಸ್ ಪ್ರಕಾರ ಆ ಕ್ಯಾಟಗರಿಗೆ ಕೊಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಪ್ರಶ್ನೆ ಬಂದಾಗ, ಪಾರ್ಟಿ ಮತ್ತು ವ್ಯಕ್ತಿ ದೃಷ್ಟಿಯಿಂದ ನೋಡಿದರೆ, ಅದಕ್ಕೆ ಸ್ವಾಭಾವಿಕವಾಗಿ ಘರ್ಷಣೆ ಉಂಟಾಗುತ್ತಿದೆ. ಈ ಒಂದು ಕಾರಣಕ್ಕೋಸ್ಕರವೇ ಇದನ್ನು ಚುನಾವಣೆ ಆಯೋಗಕ್ಕೆ ನಾವು ಬಿಟ್ಟಿದ್ದೆವು. ಅದೇ ರೀತಿ ನೀವೂ ಕೂಡ ಚುನಾವಣೆ ಆಯೋಗಕ್ಕೆ ಬಿಟ್ಟಿದ್ದಿರಿ. ಚುನಾವಣೆ ಆಯೋಗದವರ ಹತ್ತಿರವೇ ಇದ್ದಿದರೆ ಬಹಳ ಚೆನ್ನಾಗಿರುತ್ತಿತ್ತು ಎಂದು ಈಗ ಬಹಳಷ್ಟು ಜನ ಶಾಸಕರು ಹೇಳುತ್ತಿದ್ದಾರೆ. ಈಗ ಸುಮ್ಮನೆ ನಿಷ್ಠೂರ ಆಗತಕ್ಕಂಥ ಕೆಲಸವಾಗಿದೆ. ಆದ್ದರಿಂದ ಎಲ್ಲಿಯವರೆಗೆ ನಮ್ಮ ಜವಾಬ್ದಾರಿ ನಮ್ಮ ಕಡೆ ಇರುತ್ತದೆ ಅಲ್ಲಿಯವರೆಗೆ ನಾವು ಕಾನೂನಿ ಪ್ರಕಾರ ನಿರ್ವಹಣೆ ಮಾಡುತ್ತೇವೆ. ಅದಕ್ಕೋಸ್ಕರ ನಾವು ಇವತ್ತು ಮಾಡಿದ್ದೇವೆ. ಇವತ್ತಿನ ದಿವಸ ಚುನಾವಣೆ ಆಗಿದ್ದರೂ ಕೂಡ ಇದುವರೆಗೂ ಒಂದು ಕಂಪ್ಲೇಟ್ ಕೂಡ ಬಂದಿಲ್ಲ. ನಾವು ನಿಯಮಾವಳಿ ಪ್ರಕಾರ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಇರುವಾಗ ತಾವು ಏನೋ ಯದ್ವಾತದ ನಡೆದಿದೆ ಎನ್ನತಕ್ಕಂಥ ಅರ್ಥದಲ್ಲಿ ಬರುವ ರೀತಿಯಲ್ಲಿ ಮಾತನಾಡಿದರೆ, ನಾನು ಅದನ್ನು ಪಡಿಸಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಸರ್ಕಾರದ ಅವಧಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಹಾಗೂ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿ ಆಗಿದ್ದಂಥ ಸಂದರ್ಭದಲ್ಲಿ ಮಾಡಿರತಕ್ಕಂಥ ಪ್ರಗತಿಪರ ವಿಚಾರಗಳನ್ನು ತಾವು ಸ್ವಾಗತ ಮಾಡಿದ್ದೀರಿ. ಅದನ್ನು ನಾವು ಮೆಚ್ಚುತ್ತೇವೆ. ಆದರೆ ಅದೇ ಸಂದರ್ಭದಲ್ಲಿ ನಾನು ಏಕೆ ಯದ್ವಾತದ್ವ ಎಂದು ಹೇಳಿದೆ ಎಂದರೆ, ತಾವು ಏನು ಹೇಳಿದ್ದೀರಿ, ಅದರ ಪ್ರಕಾರವಾಗಿ ನಡೆದಿಲ್ಲ ನಾನು ಸತ್ಯವಾದ ಉದಾಹರಣೆಯನ್ನು ಕೊಟ್ಟಿದ್ದೇನೆ. ತಾಲ್ಲೂಕು ಹೆಸರನ್ನು ಈಗ ಹೇಳಬೇಕೆ? ಯಾರೋ ಒಬ್ಬ ರಾಜಕೀಯ ಮುಖಂಡರನ್ನು ರಾಜಕೀಯವಾಗಿ ಸಂತೃಪ್ತಿಪಡಿಸಬೇಕು ಎನ್ನತಕ್ಕಂಥ ಒಂದೇ ದೃಷ್ಟಿಯಿಂದ ಇದು ಆಗತಕ್ಕದ್ದು. ಇದಕ್ಕೆ ತಾವು ಏನು ಹೇಳುತ್ತೀರಿ? 20 ತಿಂಗಳ ಅವಧಿಯವರೆಗೆ ಅಧ್ಯಕ್ಷರಾಗಿದ್ದವರು ಮತ್ತೆ ಅದೇ ಬಾಡಿಯಲ್ಲಿ ಕಂಟನ್ಯುಯಸ್ ಆಗಿ ಉಪಾಧ್ಯಕ್ಷರಾಗಿರತಕ್ಕಂಥದ್ದು ಸರಿಯೆ?

ಶ್ರೀ ಎಂ.ವೈ. ಘೋರ್ಪಡೆ : ಆ ರೀತಿ ಆಗಲಿಕ್ಕೆ ಸಾಧ್ಯ ಇದೆ. ಅಧ್ಯಕ್ಷರಾಗಿರುವಂಥವರು ಉಪಾಧ್ಯಕ್ಷರಾಗಬಾರದೆಂದು ಮತ್ತು ಉಪಾಧ್ಯಕ್ಷರಾಗಿರತಕ್ಕಂಥವರು ಅಧ್ಯಕ್ಷರಾಗಬಾರದೆಂದು ಕಾನೂನು ಪ್ರಕಾರ ನಿಷೇಧ ಇಲ್ಲ. ಅಂದಮಾತ್ರಕ್ಕೆ ಯಾವುದೇ ಒಂದು ನಿಯಮಾವಳಿಯನ್ನು ಉಲ್ಲಂಘನೆ ಮಾಡಲಾಗಿದೆ ಎಂದು ಹೇಳುವುದು ಸರಿಯಲ್ಲ. ಇವತ್ತಿನ ದಿವಸ ಎಸ್‌ಸಿ:ಎಸ್‌ಟಿ ಮೀಸಲಾತಿಯಲ್ಲಿ ನಾವು ಕೈ ಹಾಕುವುದಕ್ಕೂ ಕೂಡ ಜಾಗವಿಲ್ಲ. ಏಕೆಂದರೆ, ಯಾವ ಕ್ಷೇತ್ರದಲ್ಲಿ ಈ ಸಲ ಎಸ್‌ಸಿ ಅಥವಾ ಎಸ್‌ಟಿ ಮಾಡಬೇಕು ಎನ್ನತಕ್ಕಂಥದ್ದು ಇರುತ್ತದೆ. ಆದ್ದರಿಂದ ಅಲ್ಲಿ ಭಿನ್ನಾಭಿಪ್ರಾಯದ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೆ, ಹಿಂದುಳಿದ ವರ್ಗದ ಸೀಟ್‌ನ್ನು ಹಂಚುವುದರಲ್ಲಿ ನಿರ್ದಿಷ್ಟವಾಗಿ ಇಲ್ಲ. ಇದರಲ್ಲಿ ಸ್ವಲ್ಪ ಡಿಸ್‌ಕ್ರಿಷನ್ ಇದೆ. ಆ ಡಿಸ್‌ಕ್ರಿಷನ್‌ಅನ್ನು ಯಾರಾದರೂ ಉಪಯೋಗ ಮಾಡಿರಬಹುದು. ಆದರೆ ಕಾನೂನಿಗೆ ವಿರುದ್ಧವಾಗಿ ಹೋಗತಕ್ಕಂಥದನ್ನು ಯಾರು ಮಾಡಿಲ್ಲ. ಈ ಸಲ ಮಾಡಿರತ್ಕಕಂಥದ್ದರಲ್ಲಿ ತಾವು ಒಂದು ತಪ್ಪನ್ನು ತೋರಿಸುವುದಕ್ಕೆ ಆಗುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಒಂದು ವೇಳೆ ಅಂತಹ ಉದಾಹರಣೆಗಳು ಏನಾದರೂ ಇದ್ದರೆ ತಾವು ತಿಳಿಸಬೇಕು. ಏಕೆಂದರೆ ನಮಗೆ ಸಂಪೂರ್ಣವಾದ ವಿಶ್ವಾಸ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರಾಗಿರತಕ್ಕಂಥವರು ಉಪಾಧ್ಯಕ್ಷರಾಗಬಾರದೆಂದು ಕಾನೂನು ಇಲ್ಲವಲ್ಲಾ. ಆದ್ದರಿಂದ ಕಾನೂನು ಪ್ರಕಾರವಾಗಿ ಮಾತನಾಡಿದಾಗ, ತಾವು ಹೇಳತಕ್ಕಂಥದ್ದು ಸರಿಯಾಗಿದೆ. ಆದ್ದರಿಂದ, ಚರ್ಚೆ ಏಕೆ ಮಾಡಬೇಕು?

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಅಧ್ಯಕ್ಷರಾಗಿರತಕ್ಕಂಥವರು ಉಪಾಧ್ಯಕ್ಷರಾಗಬಾರದೆಂದು ಕಾನೂನಿನಲ್ಲಿ ಇಲ್ಲ. ಆದರೆ, ನೈತಿಕವಾಗಿ ಅದು ಸರಿಯಾದುದ್ದು ಅಲ್ಲ ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಅದೇ ಕ್ಯಾಟಗರಿಯವರು ಬರಬೇಕೆಂದು ಇರುವಾಗ ಆ ಸಂದರ್ಭದಲ್ಲಿ ಅದೇ ಕ್ಯಾಟಗರಿಯಲ್ಲಿ ಒಬ್ಬರೇ ಇರುತ್ತಾರೆ ಒಂದೊಂದು ಸಲ. ಅಂತಹ ಪ್ರಸಂಗ ಬಂದಾಗ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಸ್ಥಾನವನ್ನು ಅವರಿಗೆ ಕೊಡಲೇಬೇಕಾಗುತ್ತದೆ. ಬೇರೆಯವರು ಇರಲಿಕ್ಕೆ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಪ್ರಕೃತನೋ ಅಪ್ರಕೃತನೋ ಗೊತ್ತಿಲ್ಲ, ಅಧ್ಯಕ್ಷರಾದವರು ಉಪಾಧ್ಯಕ್ಷರಾಗಬಾರದು, ಉಪಾಧ್ಯಕ್ಷರಾದವರು ಅಧ್ಯಕ್ಷರಾಗಬಾರದೆಂದು ಏನೂ ಇಲ್ಲ, ಆಗಬಹುದು. ನಮ್ಮ ಅನುಭವದಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಮಂತ್ರಿ ಮಂಡಲದ ಸಚಿವರಾಗುತ್ತಾರೆ. It is the question of convenience. There are no conventions; There is no legal bar. That is the only thing. It is left to the...

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಕೇಳಿ ಸಾರ್. ಒಂದು ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಗೆ ಒಂದು ಪೊಲಿಟಿಕಲ್ ಪಾರ್ಟಿಯ ಸಿಂಬಲ್ ಮೇಲೆ ನಾವು ಕಂಟೆಸ್ಟ್ ಮಾಡತಕ್ಕಂಥದ್ದು. ಅಧ್ಯಕ್ಷರ ಸ್ಥಾನ "ಎ" ವರ್ಗದ ಮಹಿಳೆಗೆ ರಿಸರ್ವ್ ಆಗಿರುತ್ತದೆ. ಅವರು 20 ತಿಂಗಳ ಅವಧಿಗೆ ಅಧ್ಯಕ್ಷರಾಗಿರುತ್ತಾರೆ. ಅದು ಆದ ತಕ್ಷಣವೇ ಆ ಜಿಲ್ಲೆಯ ಸೆಂಟರ್ ತೆಗೆದುಕೊಂಡು ನೀವು ರೊಟೇಟ್ ಮಾಡುತ್ತೀರಿ. ರೊಟೇಟ್ ಮಾಡತಕ್ಕಂಥ ಸನ್ನಿವೇಶದಲ್ಲಿ ವೈಸ್ ಪ್ರೆಸಿಡೆಂಟ್‌ರನ್ನು ಆ ಪರ್ಟಿಕ್ಯುಲರ್ ತಾಲ್ಲೂಕಿನಲ್ಲಿ ಮತ್ತೆ ಲೇಡಿಗೆ ರಿಸರ್ವ್ ಮಾಡುತ್ತಾರೆ. ಪ್ರೆಸಿಡೆಂಟ್ ಆಗಿದ್ದವರೇ ಮತ್ತೆ ವೈಸ್ ಪ್ರೆಸಿಡೆಂಟ್ ಆಗಿದ್ದಾರೆ. ಇದನ್ನು ನೀವು ಪೊಲಿಟಿಕಲ್ ಕನ್ವೀನಿಯನ್ಸ್ ಅನ್ನು ಸೂಟ್ ಮಾಡಲಿಕ್ಕೋಸ್ಕರವಾಗಿ ಅಥವಾ ಇಂಡಿವಿಜ್ಯುವಲ್ ಸೂಟ್‌ಗೆ ಕನ್ವೀನಿಯನ್ಸ್ ಅನ್ನು ಸೂಟ್ ಮಾಡಲಿಕ್ಕೋಸ್ಕರವಾಗಿ ನಾವು ಇದನ್ನು ಮಾಡುತ್ತೇವೆ ಎನ್ನುವುದನ್ನು ಹೇಳುವುದಾದಲ್ಲಿ we have nothing to argue. But I appreciate the frankness of yours. ಇದನ್ನು ನೀವು ಹೇಳಿದ್ದೀರಿ. ನಾನು ಅದನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಇದರ ಬಗ್ಗೆ ಅಷ್ಟೇ ಹೇಳುವುದಕ್ಕೆ ಸಾಧ್ಯ. ಆದರೆ ನಾನು ಏನು ಹೇಳುತ್ತಿರುವುದೆಂದರೆ, ಬ್ಯಾಕ್‌ವರ್ಡ್ ಕ್ಲಾಸಿಗೆ 'ಎ' ವರ್ಗಕ್ಕೆ ರಿಸರ್ವೇಶನ್ ಎನ್ನುವುದರ ಬಗ್ಗೆ ಹೇಳುವಾಗ, ತಾವು ಇರಲಿಲ್ಲ. ಮಾನ್ಯ ಡಿ.ಆರ್. ಪಾಟೀಲ್‌ರವರು ಈ ಸರ್ಕಾರ ಹಿಂದುಳಿದ ವರ್ಗದವರ ಪರವಾಗಿ ಏನೂ ಮಾಡಿಲ್ಲ

ಎನ್ನುವ ಅರ್ಥದಲ್ಲಿ ವಾದ ಮಾಡಿರುವುದರಿಂದ 'ಎ' ವರ್ಗ ಸೃಷ್ಟಿಯಾಗಿರುವುದೇ ನಮ್ಮ ಕಾಲದಲ್ಲಿ ಎನ್ನುವ ಮಾತನ್ನು ನಾನು ಹೇಳಿದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದು, ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವ್ ಮಾಡುವುದು ರಾಜ್ಯ ಸರ್ಕಾರಕ್ಕೆ ಆಪ್ಷನ್ ಇತ್ತು ಘಟನೆದೊಳಗೆ ನಮ್ಮ ಸರ್ಕಾರ ಬಂತು ಎಂದು ಹೇಳಿ ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವೇಷನ್ ಮಾಡಿತು. ನಿಮ್ಮ ಸರ್ಕಾರ ಇದ್ದರೆ ಅದನ್ನು ಮಾಡುತ್ತಿರಲಿಲ್ಲವೆಂದು ನಾನು ಹೇಳಿದೆ. ಅದನ್ನು ನಜೀರ್ ಸಾಹೇಬರು ಒಪ್ಪಿದ್ದರು. He could not reflect that population into powersharing. He pleaded his inability. ಅದನ್ನು ನಾನು ಹೇಳಿದೆ. ಮುಂದೆ ನೀವು ದಾರಿ ಮುನ್ನೆಡೆದಿರಿ, ಪರವಾಗಿಲ್ಲ. ಒಂದು ಮಾತನ್ನು ಮಾತ್ರ ಈ ರಾಜ್ಯದ ಜನ ನೆನಪಿಡುತ್ತಾರೆ. ತತ್ವಕ್ಕಾಗಿ ಅಧಿಕಾರವೇನಾದರೂ ಕಳೆದುಕೊಂಡರೆ ಕಾಂಗ್ರೆಸ್‌ನವರು ಕಳೆದುಕೊಳ್ಳುತ್ತಾರೆ. ಆದರೆ ಜನತಾದಳದವರು ಎಂದೂ ಅಧಿಕಾರ ಮಾತ್ರ ಯಾವ ತತ್ವಕ್ಕೂ ಕಳೆದುಕೊಳ್ಳುವುದಿಲ್ಲ, ಬೇಕಾದರೆ ತತ್ವವನ್ನು ಬಲಿಕೊಟ್ಟು ಅಧಿಕಾರವನ್ನು ಹಿಡಿಯಲಿಕ್ಕೆ ಪ್ಲಾನ್ ಮಾಡುತ್ತಾರೆ ಎನ್ನುವುದು ಅದನ್ನು ಮಾತ್ರ ಜನ ಬರೋಬರಿ ತಿಳಿದುಕೊಂಡಿದ್ದಾರೆ. ನೀವು ಒಂದಾಗಿ ಏನಾದರೂ ಬದಲಾವಣೆಗೆ ಬರುತ್ತದೆಂದು ತಿಳಿದುಕೊಂಡಿರುತ್ತೀರಲ್ಲಾ ಆ ಕನಸು ನನಸಾಗುವುದು ಬಹಳ ದೂರ ಇದೆ. ನೀವು ಹುಷಾರಾಗಿ ಆ ಸ್ಟೆಪ್‌ನ್ನು ಇಡಬೇಕಾಗುತ್ತದೆ. ನಿಮ್ಮ ಇನ್ನೊಬ್ಬ ಧುರೀಣರು ಕೇಂದ್ರ ಸರ್ಕಾರದಲ್ಲಿ ಇನ್ನೂ ಸಚಿವರಾಗಿಯೇ ಕುಳಿತಿದ್ದಾರೆ. ಅದಕ್ಕಾಗಿ ಜನರಿಗೆ ಮೋಸ ಮಾಡುವುದಕ್ಕಾಗುವುದಿಲ್ಲ. ನೀವು ಮೋಸ ಮಾಡುತ್ತಿದ್ದಿರಿ; ಯಾವಾಗ ಎಲ್ಲಿಯವರೆಗೆ ಆ ಜನರಿಗೆ ತಿಳುವಳಿಕೆ ಇರಲಿಲ್ಲ: ಆಗ ಮೋಸ ಮಾಡುವುದಕ್ಕೆ ಸಾಧ್ಯವಿತ್ತು. ಈಗ ಎಲ್ಲಾ ಕುಟುಂಬದೊಳಗೆ ಅಕ್ಷರ ಬಲ್ಲವರು ಇದ್ದಾರೆ. ಸುಶಿಕ್ಷಿತರು ಇದ್ದಾರೆ. ಅವರು ನಮ್ಮ ಎಲ್ಲಾ ಚಲನವಲನಗಳನ್ನು ಸರಿಯಾಗಿ ತಿಳಿದುಕೊಳ್ಳುತ್ತಾರೆ. ಅವರನ್ನು ಮೋಸ ಮಾಡುವುದಕ್ಕೆ ಇನ್ನು ಮುಂದೆ ಆಗುವುದಿಲ್ಲವೆನ್ನುವುದನ್ನು ನಾವು ಗಮನದಲ್ಲಿಟ್ಟುಕೊಂಡು ಹೆಜ್ಜೆ ಇಟ್ಟರೆ ಬಹಳ ಒಳ್ಳೆಯದೆನ್ನುವ ಮಾತನ್ನು ಹೇಳುತ್ತೇನೆ. ಈ ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕಾಗಿ ಹೈಕೋರ್ಟ್ ಪೀಠವನ್ನು ಕೊಡುವಲ್ಲಿ, ಗದಗ್-ಸೊಲ್ಲಾಪುರ ರೈಲು ಮಾರ್ಗವನ್ನು ಕೊಡುವಲ್ಲಿ, ಗಂಗೂಬಾಯಿ ಹಾನಗಲ್‌ರವರ ಪೀಠ, ವಾಲ್ಮೀಕಿ ಪೀಠ, ಕೆ.ಹೆಚ್. ಪಾಟೀಲರವರ ಪೀಠವನ್ನು ಕೊಡುವಲ್ಲಿ, ಧಾರವಾಡದಲ್ಲಿ ಜೈವಿಕ ತಂತ್ರಜ್ಞಾನ ಸಂಸ್ಥೆಯನ್ನು ಕೊಡುವುದರಲ್ಲಿ ಸಾಕಷ್ಟು ಅನುಕೂಲತೆಗಳನ್ನು ಆ ಭಾಗದ ಜನರಿಗೆ ಕಲ್ಪಿಸಿಕೊಟ್ಟಿದ್ದಾರೆ. ಇದಕ್ಕೆಲ್ಲಾ ಮಿಗಿಲಾಗಿ ಸುಮಾರು 1200 ಕೋಟಿ ರೂಪಾಯಿಗಳಲ್ಲಿ ಉತ್ತರ ಕರ್ನಾಟಕದ 11 ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಜಲ ನಿರ್ಮೂಲನೆ ಯೋಜನೆಯು ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಮಾಡುವಂಥ ಒಂದು ಮಹತ್ವಾಕಾಂಕ್ಷೆಯ ಯೋಜನೆಯನ್ನು ಈ ಸರ್ಕಾರ ಅನುಷ್ಠಾನಗೊಳಿಸುತ್ತಿದೆ. ಇದನ್ನು ಆ ಭಾಗದ ಜನರು ಎಂದೂ ಮರೆಯುವುದಿಲ್ಲವೆನ್ನುವುದನ್ನು ಮುಂದಿನ ಚುನಾವಣೆಗಳು ತಮಗೆ ತಿಳಿಸುತ್ತವೆ. ಇಷ್ಟು ಹೇಳಿ ಸಾಕಷ್ಟು ಸಮಯವನ್ನು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ತನ್ನ ಆಯವ್ಯಯವನ್ನು ಮಂಡನೆ ಮಾಡುವುದು ಎಂದು ಹೇಳಿದರೆ ಆ ಸರ್ಕಾರಕ್ಕೆ ಒಳಪಟ್ಟಂಥ ಜನ ರಾಜ್ಯದ ಜನ ಬಹಳ ಕುತೂಹಲದಿಂದ ನಿರೀಕ್ಷೆ ಮಾಡುತ್ತಿರುತ್ತಾರೆ. ಯಾವ ಅಭಿವೃದ್ಧಿ ಕಾರ್ಯಗಳು ಆಗುತ್ತಿವೆ, ಯಾವುದರ ಮೇಲೆ ತೆರಿಗೆ ಹೊರೆ ಜಾಸ್ತಿಯಾಗುತ್ತದೆ, ಏನೆಲ್ಲಾ ವ್ಯತ್ಯಾಸಗಳು ಆಗುತ್ತವೆಂದು ನೋಡುತ್ತಾರೆ. ಎರಡು ನಿರೀಕ್ಷೆಗಳನ್ನು ಮಾಡಿರುತ್ತಾರೆ. ನಮ್ಮ ಆದಾಯದಲ್ಲಿ ಸರ್ಕಾರಕ್ಕೆ ಒಂದಿಷ್ಟು ಕೊಡಬೇಕು ಎನ್ನುವುದು ಒಂದು ಆತಂಕವಾದರೆ ಎರಡನೆಯದಾಗಿ ನಮ್ಮ ರಾಜ್ಯದ ಅಭಿವೃದ್ಧಿ ಯಾವ ದಿಕ್ಕಿನಿಂದ ಹೋಗುತ್ತಿದೆ ಎನ್ನುವುದ ಜನರಿಗೆ ಒಂದು ಸಂಭ್ರಮ; ಒಟ್ಟಾರೆ ಈ ಎರಡು ಅಭಿಪ್ರಾಯಗಳನ್ನು ಮೂಡಿಸತಕ್ಕಂಥ ಮಹತ್ತರವಾದಂಥ ಒಂದು ಸಂಗತಿ ರಾಜ್ಯದ ಅಥವಾ ಕೇಂದ್ರದ ಒಂದು ಬಜೆಟ್‌ನ್ನು ಹೊರಗೆ ತರುವಾಗ ಜನ ನಿರೀಕ್ಷೆ ಮಾಡುತ್ತಿರುತ್ತಾರೆ. ಆದರೆ ಈ ರಾಜ್ಯ ಸರ್ಕಾರ ಬಂದನಂತರ ಎರಡು-ಮೂರು ಬಜೆಟ್‌ಗಳನ್ನು ಈಗಾಗಲೇ ಮಂಡನೆ ಮಾಡಿರುತ್ತಾರೆ. 2002-03 ನೇ ಸಾಲಿನ ಬಜೆಟ್‌ನ್ನು ಇವತ್ತು ಮಂಡನೆ ಮಾಡಿದೆ. ಈ ಬಜೆಟ್ ಮಂಡನೆ ಮಾಡಿದ ತಕ್ಷಣ ಮಾಧ್ಯಮಗಳಲ್ಲಿ ಒಂದಿಷ್ಟು ಹೊಗಳಿಕೆ ಮತ್ತು ಪ್ರಚಾರಗಳು ಬರಬೇಕು ಎನ್ನುವ ಒಂದು ವ್ಯವಸ್ಥಿತವಾದ ಪ್ರಯತ್ನವನ್ನು ಬಹಳ ವಿಶೇಷವಾಗಿ ಮಾಡಿದಂತೆ ಇತ್ತು. ಅದಕ್ಕಾಗಿ ಮಾಡಿದಂಥ ಪ್ರಯತ್ನವನ್ನು ಬಹುಶಃ ಬಜೆಟ್‌ನ್ನು ತಯಾರು ಮಾಡಲಿಕ್ಕಾಗಿ ಇನ್ನೊಂದಿಷ್ಟು ಪ್ರಯತ್ನಗಳನ್ನು ಶ್ರಮ ಹಾಕಿ ಮಾಡಿದ್ದರೆ ಇನ್ನೊಂದಿಷ್ಟು ಉತ್ಕೃಷ್ಟವಾಗಿ ಚೆನ್ನಾಗಿ ಈ ಬಜೆಟ್‌ನ್ನು ಹೊರಗೆ ತರಬಹುದು ಎನ್ನುವುದು ನನ್ನ ಅನಿಸಿಕೆಯಾಗಿದೆ. ಕಳೆದ ಬಜೆಟ್‌ಗೆ ಅಲ್ಲಿಷ್ಟು ಇಲ್ಲಿಷ್ಟು ತೇಪೆ ಹಾಕಿ ಇದನ್ನು ಮಾಡುವ ಪ್ರಯತ್ನವಾಗಿದೆ ಎನ್ನುವುದು ನಮ್ಮ ಅನಿಸಿಕೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈಗಾಗಲೇ ಎಲ್ಲರೂ ಕೂಡ ಹೇಳಿದ್ದಾರೆ, ಯಾವ್ಯಾವುದಕ್ಕೆ ಕಡಿಮೆಯಾಗಿದೆ ಎನ್ನುವುದನ್ನು ಹೇಳಿದ್ದಾರೆ, ಗ್ರಾಮೀಣ ಅಭಿವೃದ್ಧಿ ಇರಬಹುದು, ವಿಶೇಷ ಪ್ರದೇಶದ ಅಭಿವೃದ್ಧಿ ಯೋಜನೆಗಳು ಇರಬಹುದು, ಶಕ್ತಿ ಮೂಲಗಳು ಇರಬಹುದು, ಕೃಷಿ ಮೂಲಗಳು ಇರಬಹುದು, ಕೈಗಾರಿಕೆಗಳು ಇರಬಹುದು. ಶಿಕ್ಷಣ, ಕ್ರೀಡೆ, ಕಲೆ, ಆರೋಗ್ಯ, ನೀರು ಸರಬರಾಜು, ನೈರ್ಮಲ್ಯ, ವಾರ್ತಾ ಮತ್ತು ಪ್ರಚಾರ, ಇದೆಲ್ಲದಕ್ಕೂ ಕಡಿಮೆ ಹಣ ತೊಡಗಿಸಲಾಗಿದೆ. ನಮ್ಮ ನಾಯಕರು ಹೇಳಿದ ಹಾಗೆ, ಒಂದು ದೊಡ್ಡ ಶಬ್ದವನ್ನು ಮಾತನಾಡಿದ್ದಕ್ಕೆ ಅದರ ಬಗ್ಗೆ ಬಹಳ ಚರ್ಚೆಯಾಯಿತು. ಮಾನ್ಯ ಅಧ್ಯಕ್ಷರು ಆ ಪದ ಒಳ್ಳೆಯ ಸದಭಿರುಚಿಯ ಪದ ಅಲ್ಲವೆಂದು ಹೇಳಿದರು. ಅದನ್ನು ಒಂದು ಹಂತದಲ್ಲಿ ತೆಗೆದು ಹಾಕಲಾಯಿತು. ಮಾನ್ಯ ಭೈರೇಗೌಡರು ಇದು ಮಹಾ ಮೋಸ ಎನ್ನುವ ಪದವನ್ನು ಬಳಕೆ ಮಾಡಿದರು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಕುಳಿತಂಥ ನಮ್ಮ ಅನಿಸಿಕೆ ಅಲ್ಲ, ಇಡೀ ಬಜೆಟ್‌ನಲ್ಲಿ ಏನೆಲ್ಲಾ ಇದೆ ಎನ್ನುವುದನ್ನು ನೋಡಿರತಕ್ಕಂಥ ಜನರ ಅನಿಸಿಕೆ ಇದು. ಪ್ರತಿ ವರ್ಷ ಬಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಬರುತ್ತಿತ್ತು. ಈ ಸಾಲಿನಲ್ಲಿ ಎಷ್ಟು ಕೊಟ್ಟಿದ್ದೇವೆ, ಹಿಂದಿನ ಸಾಲಿನಲ್ಲಿ ಎಷ್ಟು ಕೊಡಲಾಗಿತ್ತು, ಈ ಸಾಲಿನಲ್ಲಿ ಎಷ್ಟು ತೆರಿಗೆಯನ್ನು ಹಾಕಿದ್ದೇವೆ, ಹಿಂದಿನ ಸಾಲಿನಲ್ಲಿ ಆ ವಸ್ತುವಿನ ಮೇಲೆ ಎಷ್ಟು ತೆರಿಗೆ ಇತ್ತು. ಈ ಎರಡನ್ನೂ ಕೊಡುತ್ತಿದ್ದರು. ಎರಡನ್ನೂ ನೋಡಿಕೊಂಡು ತಕ್ಷಣ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಬಾರದು, ಏಕೆಂದರೆ ಈ ಸಲದ ಬಜೆಟ್ ಸರಿಯಾಗಿಲ್ಲ ಎನ್ನುವ ಒಂದು ಆತಂಕದ ಸ್ಥಿತಿಯಲ್ಲಿ ಬಜೆಟ್ ಮಂಡನೆ ಮಾಡಿದ ಸರ್ಕಾರವೇ ಇತ್ತು. ಹೀಗಾಗಿ ಇವತ್ತಿನ ಬಜೆಟ್‌ನ್ನು ತಕ್ಷಣವೇ ಒಂದಿಷ್ಟು ಜನ ಹೊಗಳಿದರು. ಕೃಷಿಗೆ ಬಹಳ ದೊಡ್ಡ ಆದ್ಯತೆಯನ್ನು

ಕೊಟ್ಟಿದ್ದೇವೆ, ಎಂದರು. ಆಮೇಲೆ ನೋಡಿದರೆ ಕೃಷಿಗೆ ಕಡಿಮೆ, ಬೇರೆ ಬೇರೆ ಉದ್ಯಮಕ್ಕೆ ಹಾಗೂ ವಿದ್ಯುತ್‌ಗೆ ಕೊಟ್ಟಿದ್ದೇವೆ ಎಂದು ಒಳ್ಳೊಳ್ಳೆಯ ಶಬ್ದಗಳನ್ನು ಈ ಸರ್ಕಾರ ಕಳೆದ ಬಜೆಟ್‌ನಲ್ಲಿ ಅಷ್ಟೆ, ಈ ಸಲದ ಬಜೆಟ್‌ನಲ್ಲಿಯೂ ಕೂಡ ಬಳಸಿದ್ದಾರೆ ಅಷ್ಟೆ. ಕಳೆದ ಸಾಲಿನ ರಾಜ್ಯಪಾಲರ ಭಾಷಣದಲ್ಲೂ ಅಷ್ಟೆ, ಇದಕ್ಕೂ ಕೂಡ ಅಷ್ಟೆ. ದೊಡ್ಡ ದೊಡ್ಡ ಪದಗಳನ್ನು ಬಹಳ ಚೆನ್ನಾಗಿ ಬಳಕೆ ಮಾಡಿದ್ದಾರೆ, ಈ ಬಜೆಟ್ ಮಂಡನೆ ಮಾಡಿರತಕ್ಕಂಥ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಪದಗಳ ಬಳಕೆ ಬಹಳ ಚೆನ್ನಾಗಿ ಗೊತ್ತಿದೆ. ಅನೇಕ ವರ್ಷಗಳಿಂದ ಎಲ್ಲಾ ಸ್ಥಾನಮಾನಗಳನ್ನು ಅನುಭವಿಸಿರತಕ್ಕಂಥ, ಸಾರ್ವಜನಿಕ ಜೀವನದಲ್ಲಿ ಅನೇಕ ವರ್ಷಗಳಿಂದ ಇರುವುದರಿಂದ ಜನರನ್ನು ಯಾವ ರೀತಿಯಾಗಿ ಮರಳು ಮಾಡಬಹುದು, ತತ್‌ಕ್ಷಣವಾಗಿ ಜನ ಯಾವ ರೀತಿಯಾಗಿ ಹೊಗಳುವಂತೆ ಮಾಡಬಹುದು ಎಂಬ ಒಂದು ಕಲೆ ಬಹುಶಃ ಅವರಿಗೆ ಕರಗತವಾಗಿದೆ. ಈ ಹಂತದಲ್ಲಿ ಒಳ್ಳೊಳ್ಳೆಯ ಶಬ್ದಗಳನ್ನು ಹಾಕಿ, ಸಾಕಷ್ಟು ಹೆಚ್ಚು ಪೇಜ್‌ಗಳು ಬರುವ ಹಾಗೆ ನೋಡಿಕೊಂಡು ಒಳ್ಳೆಯ ಪರಿಣಾಮಕಾರಿಯಾದ ಬಜೆಟ್ ಎನ್ನುವ ರೀತಿಯಲ್ಲಿ ಅದನ್ನು ಓದುವಂಥ ಪ್ರಯತ್ನವನ್ನು ಮಾಡಿದರು. ಇವತ್ತು ಏನು ಹೇಳುತ್ತಾರರೋ ಅದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಕಳೆದ ಎರಡೂವರೆ ವರ್ಷಗಳಿಂದ ಈ ಸರ್ಕಾರ ಬಂದ ಆದಿಯಿಂದಲೂ ಕೂಡ ಒಂದು ಶಬ್ದವನ್ನು ಹೇಳುತ್ತಲೇ ಇದ್ದಾರೆ. ಕೆರೆ ಹೂಳೆತ್ತುವ ಕಾರ್ಯಕ್ರಮ, ಅದಕ್ಕೆ "ಕೆರೆ ಕಾಯಕ"ವೆಂದು ಹೇಳಿದರು. ಹೂಳೆತ್ತುವುದಕ್ಕೆ ರೈತರ ಸಹಯೋಗವೆಂದು ಹೇಳಿದರು. ಬೇರೆ ಬೇರೆ ಎಲ್ಲದರಲ್ಲೂ ಕೂಡ ಹೇಳಿದರು. ಅದನ್ನು ಇವತ್ತಿನವರೆಗೂ ಕೂಡ ಮಾಡುವುದಕ್ಕಾಗಲಿಲ್ಲ, ಇವತ್ತಿಗೂ ಕೂಡ ಪ್ರಚಾರವನ್ನು ಪಡೆಯುತ್ತಿದ್ದಾರೆ. ಇದರ ಬಗ್ಗೆ ನಾನು ಮೊನ್ನೆ ದಿನ ಪ್ರಸ್ತಾಪ ಮಾಡಿದ್ದೇನೆ. ಒಂದು ಕೆರೆಯ ಹೂಳೆತ್ತುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನೇ ಕರೆದುಕೊಂಡು ಹೋಗಿ ಅಲ್ಲಿ ಬಹಳ ದೊಡ್ಡ ಸಭೆಯನ್ನು ಮಾಡಿ ಇರುವಂತಹ ದಂಡೆಯನ್ನು ಒಡೆದುಹಾಕಿ ಆ ಜನರು ಹೇಗೆ ಬೊಬ್ಬೆಯನ್ನು ಇಡುತ್ತಿದ್ದಾರೆ ಎಂದು ಹೇಳಿ ಯಾವ ಪೂರ್ವ ತಯಾರಿ ಇಲ್ಲದೆ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತಾರೆ. ಅದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಇವತ್ತು ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುವಂತಹದ್ದು, ಮತ್ತು ಅದನ್ನು ಮಾಡುವುದಕ್ಕೆ ಆಗದೇ ಇರುವಂತಹದ್ದು ಈ ಒಂದು ಸರ್ಕಾರದ ಕಳೆದ ಎರಡು ವರ್ಷಗಳ ಆಡಳಿತದಲ್ಲಿ ನಾವು ನೋಡಿದ್ದೇವೆ. ಇವತ್ತು ಅನೇಕ ಜನ ಸದಸ್ಯರು ಮಾತನಾಡಿದ್ದಾರೆ, ಎಲ್ಲವನ್ನೂ ಕೂಡ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಾವು ಸಾಕಷ್ಟು ಹಣಕಾಸು ಲಭ್ಯವಾಗುತ್ತದೆಂದು ನಾವು ನಿರೀಕ್ಷೆಯನ್ನು ಮಾಡಿದ್ದೆವು. ಆದರೆ ಹಿಂದಿನ ವರ್ಷಗಳ್ಳಲಿ ಸರ್ಕಾರದವರು ಮಾಡಿರುವುದನ್ನು ನೋಡಿದರೆ ಇವರು ಹಣದ ಸಂಗ್ರಹವನ್ನೇ ಮಾಡಲಿಲ್ಲ. ಒಂದು ಸರ್ಕಾರದವರು ಬಜೆಟ್‌ನ್ನು ತಯಾರು ಮಾಡಬೇಕಾದರೆ ಸಂಪನ್ಮೂಲಗಳ ಕ್ರೋಢೀಕರಣ ಬಹಳ ಅಗತ್ಯವಾಗಿರುತ್ತದೆ. ಇವತ್ತು ಸೇಲ್ಸ್‌ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಹತ್ತಾರು ಸಾವಿರ ಕೇಸುಗಳು ಪ್ರಕರಣಗಳಿದ್ದರೂ ಕೂಡ ಒಂದನ್ನೂ ಕೂಡ ಇತ್ಯರ್ಥ ಮಾಡಲಿಲ್ಲ. ಅದನ್ನು ಪ್ರತಿ ತಿಂಗಳು ಕುಳಿತು ರಿವ್ಯೂ ಮಾಡಿ, ಯಾವ ಕಾರಣಕ್ಕಾಗಿ ಅದನ್ನು ಡಿಸ್‌ಪೋಸ್ ಮಾಡುವುದಕ್ಕಾಗಲಿಲ್ಲ; ವಸೂಲಿ ಮಾಡುವುದಕ್ಕಾಗಲಿಲ್ಲ, ಇದನ್ನು ಕೇಳುವಂತಹ ವ್ಯವಧಾನಗಳು ಇಲ್ಲ. ಇವತ್ತು ನಾನೂ ಕೂಡ ಪಬ್ಲಿಕ್ ಅಕೌಂಟ್ಸ್ ಕಮಿಟಿಯ

ಛೇರ್‌ಮನ್ ಆಗಿ ಅದನ್ನೆಲ್ಲಾವನ್ನೂ ಕೂಡ ರಿವ್ಯೂ ಮಾಡಿದ್ದೇನೆ. ಇವತ್ತು ಸೇಲ್ಸ್‌ಟ್ಯಾಕ್ಸ್ ವಸೂಲಾತಿ ಕೆಲಸ ಮಂದಗತಿಯಿಂದ ಸಾಗುತ್ತಿದೆ, ಅದರಲ್ಲಿರುವಂತಹ ಅಧಿಕಾರಿಗಳು ಬೇಕಾದಷ್ಟು ಕೇಸುಗಳನ್ನು ಸಮಯ ನಿಗಧಿಯನ್ನು ಮಾಡದೆಯೇ ಸುಮಾರು 10 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಕಳೆದ ಅನೇಕ ವರ್ಷಗಳಿಂದ ಸರ್ಕಾರಕ್ಕೆ ಬರತಕ್ಕಂತಹದ್ದು ಇವತ್ತು ಅಲ್ಲಿಯೇ ನಿಂತುಹೋಗಿದೆ. ಇದನ್ನು ವಸೂಲಿ ಮಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಸರಿಯಾದಂತಹ ಬಿಗಿಯಾದಂತಹ ನಿಯಂತ್ರಣವನ್ನು ಹಾಕದೆಹೋದರೆ, ಕಡಿವಾಣವನ್ನು ಹಾಕದೆಹೋದರೆ, ಅಂತಹ ಒಂದು ಸೇಲ್ಸ್ ಟ್ಯಾಕ್ಸ್‌ನ ಅಧಿಕಾರಿಗಳು ಯಾರು? ಯಾವ್ಯಾವ ಅಧಿಕಾರಿಗಳು ಅದನ್ನು ರಿವ್ಯೂ ಮಾಡುತ್ತಿದ್ದಾರೆ ಅವರ ಹತ್ತಿ ಎಷ್ಟೆಷ್ಟು ಕೇಸ್‌ಗಳು ಇದೆ, ಅದನ್ನು ತಕ್ಷಣ ಇತ್ಯರ್ಥಪಡಿಸುವುದಕ್ಕಾಗಿ ಒಂದು ಟೈಮ್ ಬೌಂಡ್ ಪ್ರೋಗ್ರಾಮನ್ನು ಇವರು ಹಾಕದೆಹೋದರೆ ಆಗುವುದಿಲ್ಲ. ಅವರು ಇನ್ನೂ ಕೂಡ ಏನೂ ಮಾಡುವುದಕ್ಕೆ ಸಾಧ್ಯವಾಗಲೇ ಇಲ್ಲ. 500 ಕೋಟಿ ರೂಪಾಯಿಗಳು ಇವತ್ತೂ ಕೂಡ ಕಳೆದ ಒಂದು ವರ್ಷದಲ್ಲಿ ಅವರಿಂದ ವಸೂಲಿಯಾಗುವಂತಹದ್ದು ಆಗದೇ ಇದ್ದಿದ್ದರಿಂದ ಇವತ್ತು ಕೊರತೆ ಬಜೆಟ್‌ನ್ನು ನೀಗಿಸುವುದಕ್ಕೆ ಅವರಿಗೆ ಸಾಧ್ಯವಾಗಲೇ ಇಲ್ಲ.

ಹಾಗೆಯೇ ಅಬ್ಕಾರಿಯ ಬಗ್ಗೆ ಹೇಳಬೇಕೆಂದರೆ, ಅದರ ಬಗ್ಗೆ ನಾನು ಹೇಳುವಂತಹ ಅವಶ್ಯಕತೆಯೇ ಇಲ್ಲ, ಇದರ ಬಗ್ಗೆ ಎಲ್ಲರೂ ಕೂಡ ಹೇಳುತ್ತಾರೆ. ಇದಕ್ಕೊಂದು ರಾಜಕೀಯ ಬದ್ಧತೆ ಬೇಕಾಗುತ್ತದೆ. ಇವತ್ತು ಒಬ್ಬನ ಹೆಸರಿನಲ್ಲಿ ಹರಾಜಿಗೆ ನಿಲ್ಲುತ್ತಾನೆ, ವೆಂಡರ್ ಆಗುತ್ತಾನೆ, ಇನ್ನೊಬ್ಬರು ಕಾರು ಡ್ರೈವರ್‌ನ ಹೆಸರಿನಲ್ಲಿ, ಅಡಿಗೆಯವನ ಹೆಸರಿನಲ್ಲಿ ಯಾರ್ಯಾರದೋ ಹೆಸರಿನಲ್ಲಿ ಹರಾಜಿನಲ್ಲಿ ಭಾಗವಹಿಸುತ್ತಾರೆ. ಇವತ್ತು ಅವರುಗಳೆಲ್ಲರೂ ಹರಾಜಿನಲ್ಲಿ ನಿಂತು ಬಿಡ್ ಮಾಡಿ, ಅವರುಗಳು ಇವತ್ತು ಹಣಕ್ಕೆ ಕೈಎತ್ತಿ ಹೋಗುವಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರದವರು ನಿಯಂತ್ರಣವನ್ನು ಹಾಕುವರೆಲ್ಲಿ ಅದರ ಕಂಟ್ರೋಲ್ ಅಬ್ಕಾರಿ ದೊರೆಗಳದು ಎನ್ನುವಂತಹ ಮಟ್ಟದಲ್ಲಿ ಇವತ್ತು ಇದೆ. ಇವತ್ತು ಅವರುಗಳು ಹೇಳಿ ಕೇಳಿ ರಾಜಾಕಾರಣಕ್ಕೂ ಕೂಡ ಇಳಿಯುತ್ತಿದ್ದಾರೆ. ಇನ್ನೇನು ಆಗುತ್ತದೆಯೋ ಗೊತ್ತಿಲ್ಲ, ಒಬ್ಬೊಬ್ಬ ದೊರೆಯು ಒಂದೊಂದು ಜಿಲ್ಲೆಯಿಂದ ಆಯ್ಕೆಯಾಗಿ ನಾಳೆ ಅಧಿಕಾರಕ್ಕೆ ಬಂದು ಕುಳಿತು ಅವರದೇ ಒಂದು ಸಮ್ರಾಜ್ಯ ಮಾಡಿದರೂ ಕೂಡ ಆಶ್ಚರ್ಯಪಡಬೇಕಾದಂತಹ ಅವಶ್ಯಕತೆ ಇಲ್ಲ. ಹೀಗೆ ಅವರ ಮೇಲೆ ಕಡಿವಾಣವನ್ನು ಹಾಕಿ ನಿಯಂತ್ರಣ ಮಾಡದೆ ಹೋದರೆ ಆ ದುಷ್ಪರಿಣಾಮವನ್ನು ನಾವು ಎದುರಿಸು ಬೇಕಾಗುತ್ತದೆ. ನಮ್ಮ ಖಜಾನೆಯು ಖಾಲಿಯಾಗಿದೆ, ನಮಗೆ ಖರ್ಚಿಗೆ ಹಣವಿಲ್ಲ, ಜಮ ಬರದೇ ಇರುವುದರಿಂದಾಗಿ ಖರ್ಚು ಮಾಡುವುದಕ್ಕೆ, ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಸೆಕೆಂಡ್ಸ್, ಥರ್ಡ್, ಫೋರ್ಥ ಇದನ್ನೆಲ್ಲವನ್ನೂ ಹೇಳುತ್ತಲೇ ಹೋದರೆ ಇವತ್ತು ಅದನ್ನು ಉದ್ದಕ್ಕೆ ಹೇಳುತ್ತಲೇ ಹೋಗಬೇಕಾಗುತ್ತದೆ. ಹಳ್ಳಿಹಳ್ಳಿಯಲ್ಲಿ ಒಂದೊಂದು ಅಂಗಡಿಗಳಲ್ಲಿ ಮನೆನೆಗಳಲ್ಲಿ ಮಾರಾಟವಾಗುತ್ತಿದೆ, ಇದರ ಬಗ್ಗೆ ಯಾರೂ ಕೂಡ ನೋಡುತ್ತಿಲ್ಲ. ತೆರಿಗೆ ತಪ್ಪಿಸುವಂತಹದ್ದು ಮತ್ತು ಯಾವುದೋ ಸ್ಪಿರಿಟ್‌ಗಳಿಗೆ ಬಣ್ಣವನ್ನು ಹಾಕಿ ಮಾರತಕ್ಕಂಥದ್ದು ನಡೆಯುತ್ತಿದೆ. ಇವರುಗಳು ಜನರ ಆರೋಗ್ಯವನ್ನು ಹಾಳು ಮಾಡುವುದರ ಜೊತೆಗೆ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡತಕ್ಕಂತಹ ಕೆಲಸ, ನಡೆಯುತ್ತಿದೆ. ಯಾವುದು ಅಂಗಡಿಗಳಲ್ಲಿ

ಅಧಿಕೃತವಾಗಿ ಮಾರಾಟವಾಗುತ್ತಿದೆ, ಅದರ ಹತ್ತು ಪಟ್ಟು ಅನಧಿಕೃತವಾಗಿ ಎಕ್ಸೈಸ್ ಇವತ್ತು ಮಾರಾಟವಾಗುತ್ತಿದೆ. ಇದನ್ನು ತಪ್ಪಿಸುವಂತಹ ಒಂದು ಕಾರ್ಯಕ್ರಮ ರಾಜ್ಯ ಸರ್ಕಾರದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಆಗಿಲ್ಲ. ಈಗಲಾದರೂ ಇದಕ್ಕೆ ಬಿಗಿಯಾದಂತಹ ಕಡಿವಾಣವನ್ನು ಹಾಕಿ, ಒಳ್ಳೆಯ ಸ್ಕ್ವಾಡ್‌ಗಳನ್ನು ಮಾಡಿ, ಅದಕ್ಕಾಗಿ ಸರಿಯಾದಂತಹ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಇವತ್ತು ನಮ್ಮ ತಾಲ್ಲೂಕಿನಲ್ಲಿ ಎಕ್ಸೈಸ್ ಇನ್ಸ್‌ಪೆಕ್ಟರ್‌ಗಳಿದ್ದಾರೆ, ಅವರುಗಳು ಯಾರ ಜೀಪಿನಲ್ಲಿ ಹೋಗುತ್ತಾರೆಂಬುದು ಗೊತ್ತೇ? ಹಗಲುಹೊತ್ತಿನಲ್ಲಿ ಕಂಟ್ರಾಕ್ಟ್‌ದಾರನ ಜೀಪ್‌ನಲ್ಲಿ ಹೋಗಿ ಮಾರಾಟ ಮಾಡಿ ಬರುತ್ತಾರೆ. ರಾತ್ರಿ ರೈಡ್‌ಗೆ ಹೋಗುವುದು ಅವರದೇ ಜೀಪು. ಇವತ್ತು ತಾಲ್ಲೂಕಿನ ಕಂಟ್ರಾಕ್ಟರ್ಸ್‌ಗಳ ವೆಂಡರ್‌ಗಳೇ ಡೂಪ್ಲಿಕೇಟ್ ಕೊಟ್ಟೆಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ. ಇವರನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಇವತ್ತು ನಮ್ಮ ಪೊಲೀಸ್ ಅಧಿಕಾರಿಗಳು ಪ್ರವಾಸ ಮಾಡಬೇಕೆಂದರೆ, ತಾಲ್ಲೂಕು ಎಕ್ಸೈಸ್ ಕಂಟ್ರಾಕ್ಟ್‌ದಾರರುಗಳು ಕಾರನ್ನು ಕೊಡಬೇಕು, ಯಾರ್‍ಯಾರೋ ದೊಡ್ಡ ಅಧಿಕಾರಿಗಳು ಬಂದಿದ್ದಾರೆಂದರೆ ತಾಲ್ಲೂಕಿನ ಎಕ್ಸೈಸ್ ಕಂಟ್ರಾಕ್ಟ್‌ದಾರರುಗಳು ಊಟವನ್ನು ಹಾಕಬೇಕು. ಮರ್ಜಿ ಮಾಡಬೇಕು, ಅವರುಗಳಿಗೆ ವಾಹನಗಳನ್ನು ಒದಗಿಸಿಕೊಡಬೇಕು. ಒಟ್ಟಾರೆ ನಮ್ಮ ಇಡೀ ತಾಲ್ಲೂಕಿನ ಎಲ್ಲಾ ಕಾರ್ಯಕ್ರಮಗಳನ್ನು ನಡೆಸುವವರು ಅಬ್ಕಾರಿ ಕಂಟ್ರಾಕ್ಟದಾರರುಗಳಾಗಿದ್ದಾರೆ. ಹಾಗಾಗಿ ನಾವುಗಳು ಅವರಿಂದ ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ಅವರುಗಳು ಡೂಪ್ಲಿಕೇಟ್ ಕೊಟ್ಟೆಗಳನ್ನು ಮಾಡಿ ಮಾರಾಟ ಮಾಡತಕ್ಕಂಥದನ್ನು ಹಿಡಿಯಲಿಕ್ಕೂ ಸಾಧ್ಯವಾಗುವುದಿಲ್ಲ. ವ್ಯಾಪಾರಕ್ಕೆ ನಿಯಂತ್ರಣವನ್ನೇ ಹಾಕಲಿಲ್ಲ. 7 1/2 ಮತ್ತು 8 ರೂಪಾಯಿಗಳಿಗೆ ಮಾಡುವಂತಹ ಒಂದು ಪ್ಯಾಕೆಟ್ ಇವತ್ತು 11 1/2 ರೂಪಾಯಿಗಳಿಗೆ ಸೇಲ್ ಆಗುತ್ತಿದೆ. ನೂರಾರು ಕೋಟಿ ರೂಪಾಯಿಗಳ ಹೆಚ್ಚಿಗೆ ಆದಾಯ ಆ ವೆಂಡರ್‌ಗಳಿಗೆ ಬರುತ್ತಿದೆ. ಆದರೆ ಸರ್ಕಾರಕ್ಕೆ ಆದಾಯ ಕಡಿಮೆ ಬರುತ್ತಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪಮೊಯಿಲಿಯವರು ಹೇಳಿರತಕ್ಕಂಥದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಎಕ್ಸೈಸ್ ಮಂತ್ರಿಗಳು ಮೊಯಿಲಿಯವರ ಹೇಳಿಕೆಯನ್ನು ನಿರಾಕರಿಸಿದರು, ನಿಮ್ಮ ಸರ್ಕಾರದ ಮಾಜಿ ಮುಖ್ಯಮಂತ್ರಿಗಳಾದರವರು 2000 ಕೋಟಿ ರೂಪಾಯಿಗಳು ಸೋರಿಕೆಯಾಗುತ್ತಿದೆ ಎಂದು ಹೇಳಿಕೆಯನ್ನು ಕೊಟ್ಟರು. ಅದು 2000 ಕೋಟಿ ರೂಪಾಯಿಗಳಲ್ಲ ಅದೆಷ್ಟೋ ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿ ಎಂದರೆ ಅದನ್ನು ಅವರು ಹೇಳುವುದಿಲ್ಲ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ಹಿಂದಿನ ಪ್ರಕರಣಕ್ಕೆ ಸಂಬಂಧಪಟ್ಟ ರೀತಿಯಲ್ಲಿ 2-3 ಜನ ಅಧಿಕಾರಿಗಳು ಹಣವನ್ನು ಕೊಟ್ಟಿದ್ದಾರೆಂದು ಹೇಳಿದರೆ ಆ ಫೈಲನ್ನು ಅವರು ಮಂಡನೆ ಮಾಡುವುದಿಲ್ಲ. ಅದು ಈ ಕಮಿಟಿಗೇ ಬರುವುದಿಲ್ಲ, ಇಷ್ಟೊಂದು ವ್ಯವಸ್ಥಿತವಾಗಿ ಆ ಎಕ್ಸೈಸ್ ಲಾಬಿ ನಮ್ಮ ಸರ್ಕಾರವನ್ನು ನಡೆಸುತ್ತಿದೆ, ಅದು ಸರ್ಕಾರದ ಮೇಲೆ ನಿಯಂತ್ರಣವನ್ನು ಹಾಕುತ್ತಿದೆ ಸರ್ಕಾರದ ಅಧಿಕಾರಿಗಳ ಮೇಲೆ ನಿಯಂತ್ರಣವನ್ನು ಹಾಕುತ್ತಿದೆ ಎಂದರೆ, ಈ ದೇಶದ ಭವಿಷ್ಯ, ಈ ರಾಜ್ಯದ ಭವಿಷ್ಯ ಇದೆ ಎಂದು ನಾವು ಹೇಳುವುದಕ್ಕಾಗುತ್ತದೆಯೇ? ಹಾಗಾಗಿ ಯಾವ ಆದಾಯದ ಮೂಲಗಳು ಇವೆ, ಇದನ್ನು ನಾವು ಗಟ್ಟಿ ಮಾಡದೆ ಹೋದರೆ, ಸರ್ಕಾರವನ್ನು ನಡೆಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಬದ್ಧತೆಯನ್ನು ಮಾಡಿ ನಿಷ್ಠೂರವಾಗಿ ವಸೂಲಿಯನ್ನು ನಾವು ಮಾಡದೆಹೋದರೆ, ಖಂಡಿತವಾಗಿಯೂ ನಾವು ಸರ್ಕಾರವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ನಾವು ಹಿಂದಿನ ಸಾರಿ ಹೇಳಿದ್ದೆವು. ಈ ಅಕ್ರಮ-ಸಕ್ರಮ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಹಳ್ಳಿಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಯಾವ್ಯಾವ ಮನೆಗಳಿಗೆ ಇನ್ನೂ ಕೂಡ ಹಕ್ಕುಪತ್ರಗಳಿಲ್ಲ, ಅವರುಗಳು ಎಲ್ಲೆಲ್ಲೋ ಮನೆಗಳನ್ನು ಕಟ್ಟಿಕೊಂಡಿದ್ದರು ಇವತ್ತು ಆಶ್ರಯ ಮನೆಗಳನ್ನು ಕೊಡಬೇಕೆಂದರೆ, ಅವರ ಹತ್ತಿರ ಹಕ್ಕುಪತ್ರಗಳಿಲ್ಲ, ಯಾವುದೇ ದಾಖಲಾತಿಗಳಿಲ್ಲ, ಪಂಚಾಯಿತಿ ಡಿಮ್ಯಾಂಡ್‌ಗಳೂ ಕೂಡ ಇರಲಿಲ್ಲ. ಹಾಗಾಗಿ ಅದನ್ನು ಸಕ್ರಮಗೊಳಿಸುತ್ತೇವೆಂಬ ಯೋಜನೆಗಳನ್ನು ಹಾಕಿ ಅರ್ಜಿಯನ್ನು ಕಾಲ್‌ಫಾರ್ ಮಾಡಿದರು. ಹಿಂದೆ ಮಾಜಿ ಮಂತ್ರಿಗಳಾಗಿದ್ದಂತಹ ಶ್ರೀ ಸೋಮಶೇಖರ್‌ರವರು ಕಂದಾಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾಡಿದ್ದರು. ಅದು ಅವರ ಕಾಲದಿಂದ ಬಂದಂತಹ ಯೋಜನೆಯಾಗಿದೆ. ಅದು ಜಾರಿಗೆ ಬಂದಾಗ ನಾವು ತಿಳಿದುಕೊಂಡಿದ್ದೆವು ಇದು ಒಳ್ಳೆಯ ಯೋಜನೆ ಜಾರಿಗೆ ಬಂದಿದೆ. ಆದರೆ ಇವತ್ತು ಏನಾಗಿದೆ, 30x40ರ ಸೈಟಿಗೆ ಹಕ್ಕುಪತ್ರವನ್ನು ಪಡೆಯಬೇಕಾದರೆ 2500 ಮತ್ತು 3000 ರೂಗಳನ್ನು ಬಡವರು ಕೊಡಬೇಕಾಗುತ್ತದೆ. ಇದರ ಬಗ್ಗೆ ಅನೇಕ ಸಾರಿ ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಹೇಳಿದ್ದೇನೆ, ಅವರು ಆ ಖಾತೆಯನ್ನು ಯಾವ ರೀತಿಯಾಗಿ ನಿರ್ವಹಿಸುತ್ತಿದ್ದಾರೆ ನನಗಂತೂ ಗೊತ್ತಿಲ್ಲ. ಅವರಿಗೆ ಯಾವುದೇ ಒಂದು ಸಲಹೆಯನ್ನು ಕೊಟ್ಟರೂ ಕೂಡ ಅದು ಅವರ ಮನಸ್ಸಿಗೆ ಹೋಗದೆ ಇದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಇವತ್ತು ಸಾವಿರಾರು ಜನರು ಹಕ್ಕುಪತ್ರಗಳನ್ನು ಪಡೆಯುತ್ತಿಲ್ಲ, ಹಕ್ಕುಪತ್ರಗಳನ್ನು ಬರೆದಿಟ್ಟಿದ್ದಾರೆ ಆದರೂ ಪಡೆಯುತ್ತಿಲ್ಲ. ಅವರಿಗೆ ಹಣವನ್ನು ಕಟ್ಟುವುದಕ್ಕೆ ಆಗುತ್ತಿಲ್ಲ. ಒಬ್ಬ ಕೂಲಿಕಾರರು, ಒಬ್ಬ ಕೃಷಿಕ, ದಲಿತ, 2000 ರೂ.ಗಳಿಂದ 2500 ರೂ.ಗಳವರೆಗೆ ಕಟ್ಟಿ ಹಕ್ಕುಪತ್ರವನ್ನು ಪಡೆಯುವುದಕ್ಕೆ ಆಗುತ್ತಿಲ್ಲ. ಅವನು ಕೊಂಡುಕೊರತೆ ಆಗುತ್ತದೆ. ಆಶ್ರಯ ಹಕ್ಕುಪತ್ರದಲ್ಲಿ ಯಾವ ರೀತಿಯಾಗಿ ಉಚಿತವಾಗಿ ಹಕ್ಕುಪತ್ರವನ್ನು ಹಂಚುತ್ತಿದ್ದಾರೆ, ಆ ರೀತಿಯಾಗಿ ಇವತ್ತು ಬಿಪಿಎಲ್‌ನಲ್ಲಿತಕ್ಕಂಥವರಿಗೆ ಕೂಡ ಉಚಿತವಾಗಿಯಾದರೂ ಹಕ್ಕುಪತ್ರವನ್ನು ಕೊಡಬೇಕು. ಈ ಬಜೆಟ್‌ನಲ್ಲಿಯಾದರೂ ಕೂಡ ತಾವು ಘೋಷಣೆ ಮಾಡಬಹುದು ಎಂದು ನಾನು ಅಂದುಕೊಂಡಿದ್ದೆ. ಅಂಥವನ್ನು ತಾವು ಘೋಷಣೆ ಮಾಡಿಲಿಲ್ಲ, ಉಚಿತವಾಗಿ ಕೊಡುತ್ತೇನೆಂದು ಹೇಳಲೇ ಇಲ್ಲ, ಇದರಿಂದಾಗಿ ನಿಮ್ಮ ಬೊಕ್ಕಸಕ್ಕೆ ನಷ್ಟವಾಗುತ್ತಿರಲಿಲ್ಲ, ಸಾಕಷ್ಟು ಆದಾಯ ಬರುತ್ತದೆ. ಯಾರು ಹೆಚ್ಚು ಆರ್ಥಿಕವಾಗಿ ಸಬಲರು ಅವರು ಈ ಹಕ್ಕುಪತ್ರವನ್ನು ಇವತ್ತು ಪಡೆಯುವಂತಹ ಸಂದರ್ಭದಲ್ಲಿ ಅವರುಗಳು ಕಟ್ಟುತ್ತಿದ್ದಾರೆ. ಇದರಿಂದಾಗಿ ಸಾಕಷ್ಟು ಆದಾಯಗಳು ಬರುತ್ತಿದೆ. ಆದರೆ ಯಾರು ಬಡವರು ಇದ್ದಾರೆ, ಅವರಿಗೆ ನೀವು ರಿಯಾಯಿತಿಯನ್ನು ಘೋಷಣೆ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಆರಗಜ್ಞಾನೇಂದ್ರರವರು ಹೇಳಿರುವುದು ನನಗೆ ಬಹಳ ಸಂತೋಷವಾಗಿದೆ. ಅನಧಿಕೃತವಾದಂತಹ ಭೂಮಿಯನ್ನು ಅಧಿಕೃತವಾಗಿ ಸಾಗುವಳಿಗೆ ಕೊಡತಕ್ಕಂಥದ್ದು ಸೆಕ್ಷನ್-94 B. of the Land Revenue Act. ಮತ್ತೆ ಸರ್ಕಾರಿ ಜಮೀನಿನಲ್ಲಿ ಹಾಗೂ ಖಾಸಗಿ ಜಮೀನಿನಲ್ಲಿ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿರುವಂತಹ ಬಡವರು, ಸರ್ವೆ ನಂಬರ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರತಕ್ಕಂತಹ ತಿದ್ದುಪಡಿ 94(ಸಿ) ಎಂದು. ಈ ಮೂರು ತಿದ್ದುಪಡಿಗಳನ್ನು ತಂದು

ಎಷ್ಟೋ ಬಡಾವಣೆಗಳು ಅನಧಿಕೃತವಾಗಿ ಹಳ್ಳಿಗಳಲ್ಲಿ ಬಂದು ಬಿಟ್ಟಿವೆ. ಅದಕ್ಕೆ ವಿದ್ಯುಚ್ಛಕ್ತಿ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಕುಡಿಯುವ ನೀರಿನ ಸೌಲಭ್ಯವನ್ನು ಕೊಡುವುದಕ್ಕೆ ಆಗುತ್ತಿಲ್ಲ. ಕಾರಣವೇನೆಂದರೆ, ಆ ಎಲ್ಲಾ ಮನೆಗಳು ಅನಧಿಕೃತವಾಗಿ ಕಟ್ಟಿರತಕ್ಕಂಥದ್ದು ಆಗಿದೆ. ಅದಕ್ಕಾಗಿ ನಮ್ಮ ಸರ್ಕಾರದಲ್ಲಿದ್ದಾಗ ತಿದ್ದುಪಡಿಯನ್ನು ತಂದು ಅನಧಿಕೃತವಾಗಿ ಸಾಗುವಳಿಯನ್ನು ಮಾಡತಕ್ಕಂತಹವರಿಗೆ ಕಾಲವನ್ನು ವಿಸ್ತರಣೆಯನ್ನು ಮಾಡಿದ್ದೆವು. ಮಾನ್ಯ ಸದಸ್ಯರಾದ ಅರಗಜ್ಞಾನೇಂದ್ರರವರು ಪ್ರಸ್ತಾಪ ಮಾಡಿದ ಹಾಗೆ, ಆ ಬಡವರು ಹಣವನ್ನು ಕಟ್ಟಬೇಕೆಂದರೆ ಅವರಿಗೆ ಆಗುವುದಿಲ್ಲ. ಹಣವನ್ನು ಕಟ್ಟಬೇಕೆಂಬ ನಿಬಂಧನೆಯನ್ನು ಯಾರೂ ಸಕ್ರಮವನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ನಾವು ಒಂದು ಸರ್ಕುಲರ್‌ನ್ನು ಹೊರಡಿಸಿದ್ದೆವು. ನಮ್ಮ ಸರ್ಕಾರದವರು ಈ ಹಣವನ್ನು ಯಾರೂ ವಸೂಲು ಮಾಡುವುದಕ್ಕೆ ಹೋಗಬೇಡಿ, ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂನಲ್ಲಿ ನೀವು ಕಲೆಕ್ಟ್ ಮಾಡಿಕೊಳ್ಳಬಹುದು. ಮೊದಲು ನೀವು ಸಾಗುವಳಿ ಚೀಟಿಯನ್ನು ಕೊಡಬೇಕು; ಹಕ್ಕುಪತ್ರವನ್ನು ಕೊಡಬೇಕು ಎಂದು ನಾವು ಸುತ್ತೋಲೆಯನ್ನು ಹೊರಡಿಸಿದ್ದೆವು. ಆದರೆ ದುರ್ದೈವ ಈ ಸರ್ಕಾರ ಮತ್ತೆ ಅದನ್ನು ಹಿಂತೆಗೆದು ಕೊಂಡು ದುಡ್ಡು ಕಟ್ಟಿಸಿಕೊಂಡೇ ಕೊಡಬೇಕೆಂದರೆ ಬಡವರು ಯಾರೂ ಕಟ್ಟುವುದಕ್ಕೆ ಬರುತ್ತಿಲ್ಲ. ಹೀಗಾಗಿ ಈ ಎಲ್ಲಾ ಕಾರ್ಯಕ್ರಮಗಳೆಲ್ಲಾ ಕಾನೂನಿಗೆ ಏನೋ ತಿದ್ದುಪಡಿಯನ್ನು ತಂದಿದ್ದರೂ ಕೂಡ ಸರಿಯಾಗಿ ಸಮರ್ಪಕವಾಗಿ ಆಗುತ್ತಿಲ್ಲ. ಅದರ ಬಗ್ಗೆ ಇವತ್ತೂ ಕೂಡ ಸರ್ಕಾರಕ್ಕೆ ಹೇಳುತ್ತಿದ್ದೇನೆ, ನಮ್ಮ ಸರ್ಕಾರದಲ್ಲಿ ಏನು ಹೊರಡಿಸಿದ್ದೆವು ಈ ಹಣವನ್ನು ಬಡವರಿಗೆ ಮೊದಲೇ ಕೇಳಬೇಡಿ, ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂನಲ್ಲಿ ನೀವು ಕಲೆಕ್ಟ್ ಮಾಡಿಕೊಳ್ಳಿ. ಮೊದಲು ಹಕ್ಕುಪತ್ರವೇ ಆಗಲಿ, ಸಾಗುವಳಿ ಚೀಟಿಯಾಗಲಿ ಕೊಡಿ ಎಂದು ಏನು ಮಾಡಿದ್ದೇವೆ, ಮತ್ತೆ ಅದನ್ನು ಪರಿಗಣಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

1.20 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಏಕೆಂದರೆ ಒಂದೊಂದು ತಾಲ್ಲೂಕಿನಲ್ಲಿ ಆರೇಳು ಸಾವಿರ ಹಕ್ಕುಪತ್ರಗಳನ್ನು ವಿತರಣೆ ಮಾಡಿದ್ದಾರೆ. ಅದರಲ್ಲಿ ರಿಯಾಯಿತಿ ಮಾಡಿದರೆ ಎರಡು ಸಾವಿರ ಜನರಿಗೆ ಮಾಡಬಹುದು. ಆರ್ಥಿಕವಾಗಿ ದುರ್ಬಲವರ್ಗದವರು ಎಲ್ಲೋ ಸರ್ಕಾರಿ ನೆಲದಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಅವರಿಗೆ ನಾವು ಹಕ್ಕುಪತ್ರ ಕೊಟ್ಟರೆ ಆಶ್ರಯ ಮನೆ ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಬಡತನ ರೇಖೆಗಿಂತ ಕೆಳಗೆ ಇರತಕ್ಕಂವರಿಗೆ ಕೊಡಿಯೆಂದು ಹೇಳುತ್ತೇನೆ. ಆರ್ಥಿಕವಾಗಿ ಸಬಲರಾಗರತಕ್ಕವರಿಗೆ ಕೊಡಿಯೆಂದು ನಾನು ಹೇಳುವುದಿಲ್ಲ. ದಯಮಾಡಿ ಆ ನಿಟ್ಟಿನಲ್ಲಿ ಘೋಷಣೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಯಾರು ನಿಮಗೆ ಕಾಂಗ್ರೆಸ್ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ, ಆ ಜನ ತಲಾತಲಾಂತರದಿಂದ ಕಾಂಗ್ರೆಸ್ ಪಕ್ಷದ ಓಟುದಾರರು ಎಂದು ಏನು ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದರು, ಅಂತಹವರಿಗೆ ರಿಯಾಯಿತಿ ಸಿಗುತ್ತದೆ. ಈ ಸಂದರ್ಭದಲ್ಲಿಯಾದರೂ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಘೋಷಣೆ ಮಾಡಿದರೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ತಮಗೆ ನೆನೆಪು ಮಾಡಿಕೊಡುತ್ತೇನೆ. ಕೇಂದ್ರದಿಂದ ಬರತಕ್ಕಹಣವನ್ನು ಸದುಪಯೋಗ ಮಾಡಿಕೊಂಡರೆ ಬಹಳ

ಕೆಲಸ ಮಾಡಬಹುದು. ಎಷ್ಟು ಹಣ ಬರುತ್ತದೆ ಅದನ್ನು ತೆಗೆದುಕೊಳ್ಳಿ. ಬರಪೀಡಿತ ಪ್ರದೇಶಗಳಿಗೆ ಹಣ ಕೊಡಬೇಕೆಂದು ಕೇಂದ್ರಕ್ಕೆ ನೀವು ಹೋದಿರಿ, ನಾವೂ ಹೋಗಿದ್ದೇವೆ. ನೀವು ಕೇಳಿದ್ದು 50 ಸಾವಿರ ಟನ್ ಅಕ್ಕಿಯನ್ನು; ಅಷ್ಟು ಧಾನ್ಯ ಕೊಟ್ಟರೆ ಕೊಡಿ ಇಲ್ಲದಿದ್ದರೆ ಬೇಡ ಎಂದಿರಿ. ಅವರು ಒಂದು ಲಕ್ಷ ಟನ್ ತೆಗೆದುಕೊಂಡು ಹೋಗಿಯೆಂದು ಕೊಟ್ಟರು. ಅದನ್ನು ಖರ್ಚು ಮಾಡಿ ಮತ್ತೆ ಬನ್ನಿ ಅಂದರು. ನೀವು ಖರ್ಚು ಮಾಡಿದ್ದು ಎಷ್ಟು? ಹಣ ಇಲ್ಲದಿರುವ ಕಡೆ ಕೊಡಿಯೆಂದು ಕೇಳುತ್ತೀರಿ. ಇರುವ ಕಡೆ ತೆಗೆದುಕೊಂಡು ಸುಸೂತ್ರವಾಗಿ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಇದು ಏಕೆ ಆಗಲಿಲ್ಲ? ಯಾವ ಅಧಿಕಾರಿ ಮಾಡಲಿಲ್ಲ? ಅವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ನಮ್ಮ ಪಕ್ಕದ ಆಂಧ್ರಪ್ರದೇಶದಲ್ಲಿ ನನಗೆ ಸಿಕ್ಕಿದ ಅಂಕಿ ಅಂಶಗಳ ಪ್ರಕಾರ 16 ಲಕ್ಷ ಟನ್ ಧಾನ್ಯವನ್ನು ಪಡೆದು ಖರ್ಚು ಮಾಡಿದ್ದಾರೆಂದರೆ ನೀವು ಒಂದು ಲಕ್ಷ ಟನ್ ಕೂಡ ಮಾಡಲಿಕ್ಕೆ ಖರ್ಚು ಆಗಲಿಲ್ಲವೆಂದರೆ ಏನು ಹೇಳಬೇಕು? ಎಲ್ಲಿ ಬರ ಇದೆ ಅಲ್ಲಿ ಕಾಮಗಾರಿ ಕೆಲಸಗಳಿಗೆ ಕೇಂದ್ರದವರು ಹಣ ಕೊಡುತ್ತಾರೆ, ಅದನ್ನು ನಿಮಗೆ ಹಂಚುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಕಾಮಗಾರಿಯನ್ನು ಏಕೆ ಮಾಡುವುದಕ್ಕಾಗುವುದಿಲ್ಲ? ನಿಮಗೇನು ತೊಂದರೆಯಿದೆ? ಕೇಂದ್ರದವರು ಹಣ ಕೊಡಲಿಲ್ಲವೆಂದು ಬೊಬ್ಬೆ ಹಾಕುತ್ತೀರಿ. ಕೊಟ್ಟಿದ್ದನ್ನು ಖರ್ಚು ಮಾಡುವುದಕ್ಕೆ ತದ್ವಿರುದ್ಧ ರೀತಿಯಲ್ಲಿ ಮಾಡಿದ್ದೀರಿ. ಸಿಎಜಿ ವರದಿ ನನ್ನ ಹತ್ತಿರ ಇದೆ. ವಿವರವಾಗಿ ಯಾವ್ಯಾವ ಇಲಾಖೆಗಳು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿಲ್ಲ ಯಾವ್ಯಾವ ಇಸವಿಯಲ್ಲಿ ಖರ್ಚು ಮಾಡಲಿಲ್ಲವೆಂಬುದನ್ನು ಯಾರು ಕಣ್ಣೆತ್ತಿ ನೋಡದೇ ಇದ್ದಾರೆ ಏನು ಮಾಡುವುದು? ಸಿಎಜಿ ವರದಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಬರುತ್ತದೆ. ಕೋಟಿಗಟ್ಟಲೆ ಹಣವನ್ನು ಹೊಡೆದಿದ್ದಾರೆ. ಒಬ್ಬೊಬ್ಬ ಮಂತ್ರಿಗಳು ಕೂತು ಎಲ್ಲೆಲ್ಲಿ ಅವ್ಯವಹಾರ ಆಗಿದೆ, ಯಾವ ಅಧಿಕಾರಿ ಅವ್ಯವಹಾರ ಮಾಡಿದ್ದಾರೆಂದು ನೋಡುವವರು ಯಾರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮುಂದೆ ರಿವ್ಯೂಗೆ ಬಂದಾಗ ಆ ಅಧಿಕಾರಿ ನಿವೃತ್ತಿಯಾಗಿರುತ್ತಾನೆ. ಆತನ ಪೆನ್‌ಷನ್‌ನಲ್ಲಿ ಕೂಡ ಹಿಡಿಯುವ ಹಾಗೆ ಇಲ್ಲ. ಮೂರು ವರ್ಷಗಳಾದ ಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ತಿಂದು ಕೈತೊಳೆದುಕೊಳ್ಳುತ್ತಾರೆ. ಆದ್ದರಿಂದ ಎಲ್ಲಿ ಸೋರಿಕೆಯಾಗುತ್ತದೆ ಅದನ್ನು ನೋಡುವುದಕ್ಕೆ ಆಗದಿದ್ದರೆ ಬಂದಿರತಕ್ಕ ಹಣವನ್ನು ಸದ್ವಿನಿಯೋಗ ಮಾಡುವುದಕ್ಕೆ ಆಗದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ನಾವು ಆಯವ್ಯಯ ಮಂಡನೆ ಮಾಡಬಹುದು ಅದರಿಂದ ಜನರಿಗೆ ಖುಷಿ ಕೊಡಬಹುದು. ಆ ಮೇಲೆ ಅಭಿವೃದ್ಧಿ ಆಗಲಿಲ್ಲ ಏನು ಮಾಡುವುದು ಎಂದು ಹೇಳುವುದು ಆಗುತ್ತದೆ. ಎಷ್ಟರಮಟ್ಟಿ ಆದಾಯದ ಕೊರತೆಯಾಗಿದೆಯೆಂದು ನಾನು ಹೇಳಿದರೆ ನಿಮಗೆ ಸಿಟ್ಟು ಬಂತು. ಕೆಲವು ಮಂತ್ರಿಗಳಿಗೆ ಸಿಟ್ಟು ಬಂತು, ಶಿಕ್ಷಣ ಇಲಾಖೆಯಲ್ಲಿ ಹೈನುಗಾರಿಕೆ ಇಲಾಖೆಯಲ್ಲಿ, ಇತರೆ ಇಲಾಖೆಗಳಲ್ಲಿ ಎರಡು-ಮೂರು ತಿಂಗಳುಗಳಿಂದ ಸಂಬಳವನ್ನು ಕೊಟ್ಟಿಲ್ಲ. ಈಗ ನಾವು ಮಾರ್ಚ್ ಕೊನೆಯಲ್ಲಿದ್ದೇವೆ, ಶಿಕ್ಷಕರಿಗೆ ಇವತ್ತಿಗೂ ಕೂಡ ಸಂಬಳವನ್ನು ಕೊಟ್ಟಿಲ್ಲ. ಮೊನ್ನೆ ನಾನು ಹೇಳಿದ ಮೇಲೆ ಒಂದು ವಾರದಲ್ಲಿ ಹರಿಬರಿನಲ್ಲಿ ಸಂಬಳ ಬಿಡುಗಡೆಯಾಗುತ್ತದೆಂದು ನಾನು ಅಂದುಕೊಂಡಿದ್ದೆ. ಆ ರೀತಿಯಾಗಲಿಲ್ಲ, ವೆಟರ್‌ನರಿ ಡಾಕ್ಟರ್‌ಗಳಿಂದ ಹಿಡಿದು ಜವಾನ್‌ನವರೆಗೆ ಸಂಬಳ ಆಗದಿದ್ದರೆ ಅವರು ಹೇಗೆ ಕೆಲಸ ವಜಾಡಿಬಹುದು? ಇಂತಹ ಒಂದು ಪರಿಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ. ಸರ್ಕಾರ ಯಾವ ಸ್ಥಿತಿಯಲ್ಲಿ ಆರ್ಥಿಕವಾಗಿದೆ, ಎಂಬುದನ್ನಲ್ಲ ತಿಳಿಸಿದರೆ ಜನ ನಿಮ್ಮನ್ನು ಕ್ಷಮಿಸುವುದಿಲ್ಲ ವೆಂಬುದು ನನ್ನ ಅನಿಸಿಕೆ. ನೀವು ಅಧಿಕಾರಕ್ಕೆ ಬಂದಾಗ ಹೇಳಿದಿರಿ, ಕಳೆದ ವರ್ಷ ಘೋಷಣೆ

ಮಾಡಿದಿರಿ 50 ಲೀಟರ್ ನೀರನ್ನು ಪ್ರತಿಯೊಬ್ಬರಿಗೂ ಕೊಡುತ್ತೇವೆಂದು. ಇವತ್ತು ಬರ ಕುಡಿಯುವ ನೀರು ಕೊಡಲಿಕ್ಕೆ ಜಿಲ್ಲಾಧಿಕಾರಿಗಳ ಹತ್ತಿರ ಹಣವಿಲ್ಲ. ನಮ್ಮದು ತೀರ್ಥಹಳ್ಳಿ ತಾಲ್ಲೂಕೂ ಕೂಡ ಬರಪೀಡಿತ ಪ್ರದೇಶಕ್ಕೆ ಸೇರಿದೆ. ಇವತ್ತು ಮಲೆನಾಡಿನ ತಾಲ್ಲೂಕು ಬರಪೀಡಿತ ಪ್ರದೇಶಕ್ಕೆ ಸೇರಿದೆಯೆಂದು ಹೇಳಲಿಕ್ಕೆ ಬಹಳ ದುಃಖವಾಗುತ್ತದೆ. ಅಂತರ್ಜಲ ಸಾಕಷ್ಟು ಕೆಳಗಡೆ ಹೋಗಿ ಬಹಳಷ್ಟು ಹಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಹಳ್ಳಿಗಳಲ್ಲಿ 5-10 ಮನೆಗಳು ಎಲ್ಲೋ ಕಾಡಿನ ನಡುವೆ ಇರುತ್ತವೆ. ಎರಡು-ಮೂರು ಕಿಲೋಮೀಟರ್ ಹೋಗುವಂತಹ ದುಸ್ಥಿತಿಯಲ್ಲಿ ನಾವಿದ್ದೇವೆ. ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದೆ. ಬರಪೀಡಿತ ಪ್ರದೇಶವೆಂದು ನಮ್ಮದು ಸೇರಿದೆ. ನೀವು ಏನು ಮಾಡುತ್ತೀರಿ ಎಂದು ಕೇಳಿದೆ. ನಮ್ಮ ತಾಲ್ಲೂಕಿನಲ್ಲಿಯೂ ಸಹ ಒಂದು ಸಮಿತಿ ಮಾಡಿದ್ದೇವೆ. ಪ್ರತಿ ವಾರ ಮೀಟರ್‌ಗೆ ಸೇರುತ್ತಾರೆಂದು ಹೇಳುತ್ತಾರೆ. ಎಲ್ಲೆಲ್ಲಿ ಕುಡಿಯುವ ನೀರಿನ ಕಷ್ಟವಿದೆ, ಅಲ್ಲಿ ಕೆಲಸ ಶುರು ಮಾಡಲಿಕ್ಕೆ ನಿಮ್ಮ ಹತ್ತಿರ ಹಣವಿಲ್ಲ. ಪುಗಸಟ್ಟೆ ಪಟೇಲರನ್ನು ಮಾಡಿದರೆ ಏನು ಪ್ರಯೋಜನ? ಬರಕಾಮಗಾರಿಯನ್ನು ಮಾಡಲಿಕ್ಕೆ ನಿಮ್ಮಲ್ಲಿ ಹಣವಿಲ್ಲ. ಇವತ್ತಿನವರೆಗೆ ಪ್ರತಿಯೊಬ್ಬರಿಗೆ 50 ಲೀಟರ್ ನೀರನ್ನು ಒದಗಿಸುವುದಕ್ಕೆ ನಿಮಗೆ ಆಗಲಿಲ್ಲ. ಜಿಲ್ಲಾಧಿಕಾರಿಗಳ ಹತ್ತಿರ ಹಣವಿಲ್ಲ ಇದರ ಬಗ್ಗೆ ತಾವು ಗಮನಹರಿಸದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ. ಇರತಕ್ಕ ಬಾವಿ ಮತ್ತು ಬೋರ್‌ವಲ್‌ಗಳನ್ನು ಡೀಸಿಲ್ಟ್ ಮಾಡಿ ಸರಿ ಮಾಡಿದರೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಕುಡಿಯುವ ನೀರು ಕೊಡುವುದಕ್ಕಾಗುವುಲ್ಲ. ರಿಪೇರಿ ಮತ್ತು ಮೇಂಟೆನೆನ್ಸ್ ಮಾಡುವುದಕ್ಕೆ ಕೂಡ ಆಗುವುದಿಲ್ಲ. ಇರತಕ್ಕ ಕುಡಿಯುವ ನೀರಿನ ಯೋಜನೆಗಳನ್ನು ಸರಿ ಮಾಡಲಿಕ್ಕೆ ಆಗುವುದಿಲ್ಲ. ವರ್ಲ್ಡ್ ಬ್ಯಾಂಕ್ ಸ್ಕೀಮ್‌ಗಳಿಗೆ ಜನತಾದಳ ಸರ್ಕಾರವಿದ್ದಾಗಲೇ ಟೆಂಡರ್ ಮಾಡಿದರು. ನಮ್ಮ ಕ್ಷೇತ್ರದಲ್ಲಿ ವರ್ಲ್ಡ್‌ಬ್ಯಾಂಕ್ ಸ್ಕೀಮ್‌ಗಳು ಬಂದು ಹತ್ತು-ಹನ್ನೆರಡು ವರ್ಷಗಳಾಯಿತು. ಒಂದು ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಲಿಲ್ಲ. ಯಾರ್‍ಯಾರು ಅಧಿಕಾರಿಗಳು ಏನೇನೋ ಮಾಡಿ ತಿಂದುಕೊಂಡು ಹೋದರು. ಇವತ್ತು ನೀವು ಹಣಕಾಸು ಒದಗಿಸಿ ಅದನ್ನು ಸರಿ ಮಾಡಿಸಲಿಕ್ಕೆ ಆಗಲಿಲ್ಲ. ಇನ್ನು ಲೋಕೋಪಯೋಗಿ ಕಾಮಗಾರಿ ಮಾಡಲಿಕ್ಕೆ ಹುಡ್ಕೋ ಮತ್ತು ಬೇರೆ ಬೇರೆ ನೆರವಿನಿಂದ ಓಡಿಆರ್ ಮತ್ತು ಎಂಆರ್‌ಡಿಗಳ ಮೇಂಟೆನೆನ್ಸ್‌ಗೆ ಪ್ಯಾಕೇಜ್ ಟೆಂಡರ್‌ಗಳನ್ನು ಕರೆದರು. ಪ್ಯಾಕೇಜ್ ಟೆಂಡರ್ ಅಂದರೆ ಅದು ಭ್ರಷ್ಟಾಚಾರದ ಕೇಂದ್ರೀಕರಣ ಲೋಕಲ್‌ನಲ್ಲಿ ಇರತಕ್ಕ ಜ್ಯೂನಿಯರ್ ಇಂಜನಿಯರ್‌ಗಳು ಪರ್ಸೆಂಟೇಜ್ ಎಂದು ತೆಗೆದುಕೊಳ್ಳುತ್ತಿದ್ದ ಈಗ ಅದೇನೂ ಇಲ್ಲ. ಬೆಂಗಳೂರಿನಲ್ಲಿ ಎಲ್ಲಾ ಕೊಟ್ಟು ಹೋಗಬೇಕು, ಅಲ್ಲಿ ಯಾರಿಗೂ ಏನೂ ಸಿಗುತ್ತಿಲ್ಲ. ಅಲ್ಲಿ ರಸ್ತೆ ನೋಡುವುದಕ್ಕೆ ಅವಕಾಶವೇ ಇಲ್ಲ. ಮಾನ್ಯ ಸಾರಿಗೆ ಮಂತ್ರಿಗಳು ನನ್ನನ್ನು ನೋಡುತ್ತಿದ್ದಾರೆ. ಆ ರಸ್ತೆಗಳಲ್ಲಿ ಅವರ ಬಸ್ ಅನ್ನು ಓಡಿಸಿದರೆ ಹೇಗೆ ದುರಸ್ತಿಯಾಗುತ್ತದೆಂದು ಅಂದಾಜು ಮಾಡುತ್ತಿರಬಹುದು. ಅವರ ಬಸ್‌ಗಳು ಓಡಾಡುವ ರಸ್ತೆಯಲ್ಲಿ ಹೊಂಡ ಇರುವುದಿಲ್ಲ. ಹೊಂಡದಲ್ಲೇ ರಸ್ತೆಗಳಿದ್ದಾವೆ. ಇವತ್ತು ನಮ್ಮ ಕ್ಷೇತ್ರದಲ್ಲಿ ಆ ಪರಿಸ್ಥಿತಿ ಇದೆ. ಚಿಕ್ಕಮಗಳೂರು ಕ್ಷೇತ್ರದಲ್ಲಿ ಏನಾಗಿದೆಯೋ ನನಗೆ ಗೊತ್ತಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಮಹಾರಾಷ್ಟ್ರದಿಂದ ಒಬ್ಬ ಮಹಾಶಯ ಬಂದು ಟೆಂಡರ್ ತೆಗೆದುಕೊಂಡಿದ್ದಾನೆ. ಈವತ್ತೂ ಕೂಡ ಮಾಡಲಿಕ್ಕೆ ಆಗಲಿಲ್ಲ. ಇಡೀ ರಾಜ್ಯದ ಅನೇಕ ಕ್ಷೇತ್ರಗಳಲ್ಲಿ ಹೊಂಡದ ರಸ್ತೆಯನ್ನು ಮುಚ್ಚುವ ಕೆಲಸ ಆಗಲಿಲ್ಲ. ಹಣ ಖರ್ಚಾಗಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ, ಅವರ

ಮೇಲೆ ನಿಯಂತ್ರಣ ಇಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಇದೆಲ್ಲಾ ಬರುತ್ತದೆ. ಅಂತಹವರ ಮೇಲೆ ನಿಯಂತ್ರಣ ಇಲ್ಲ. ಅವರ ಬಸ್ಸಿನಲ್ಲಿ ಕುಳಿತು ಆ ರಸ್ತೆಯಲ್ಲಿ ಗರ್ಭಿಣಿ ಹೆಂಗಸು ಹೋದರೆ ಹೋಗುವಷ್ಟರಲ್ಲಿ ಹೆರಿಗೆಯಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) : ಮಾನ್ಯ ಸದಸ್ಯರು ಹೇಳಿದ್ದೆಲ್ಲಾವನ್ನು ಕೇಳಿದ್ದೇನೆ. ನಮ್ಮ ಕ್ಷೇತ್ರದ ರಸ್ತೆಗಳೆಲ್ಲಾ ಅಭಿವೃದ್ಧಿಯಾಗಿವೆ, ಎಲ್ಲಾ ಗುಂಡಿ ಮುಚ್ಚಿದ್ದೇವೆಂದು ಹೇಳಿದರೆ, ಇವರ ಕ್ಷೇತ್ರದ ಗುಂಡಿಗಳನ್ನು ಮುಚ್ಚಿಲ್ಲ ಎಂದು ಹೇಳಿದರು. ಅದಕ್ಕೆ ಕಾರಣವೇನು ಅನ್ನುವುದರ ಬಗ್ಗೆ ನಮಗೆ ಅನುಮಾನವಾಗುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ : ಏನು ಕಾರಣ ಎಂಬುದರ ಬಗ್ಗೆ ಎನ್‌ಕ್ವಾಯರಿ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ವಿರೋಧ ಪಕ್ಷದಲ್ಲಿರುವವನು ನಾನು ಒಬ್ಬನೇ. ಉಳಿದವರೆಲ್ಲರೂ ನಿಮ್ಮ ಪಕ್ಷದವರೇ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಕಳೆದ ಸಾಲಿನಲ್ಲೂ ಕೂಡ ನಾವಿಬ್ಬರೂ ಶಾಸಕರಾಗಿದ್ದೆವು. ಈಗಲೂ ನಾವಿಬ್ಬರೂ ಶಾಸಕರಾಗಿದ್ದೇವೆ. ಒಂದು ಸತ್ಯವನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಕಳೆದ ಎರಡು ವರ್ಷಗಳಿಂದ ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಾವು ಗೌರವವಾಗಿ ಓಡಾಡತಕ್ಕ ಪರಿಸ್ಥಿತಿ ಇದೆ. ರಸ್ತೆಗಳ ಬಗ್ಗೆ ಅಂತೂ ದಯಮಾಡಿ ತಾವು ಅಪಸ್ವರ ಎತ್ತುವ ಹಾಗೇ ಇಲ್ಲ. ಪಕ್ಷಾತೀತವಾಗಿ ಎಲ್ಲರೂ ಕೂಡ ಇದನ್ನು ಒಪ್ಪುತ್ತಾರೆ. ರಸ್ತೆಗಳ ವಿಚಾರದಲ್ಲಿ ನಮ್ಮ ಸಾಧನೆ ಅದ್ವಿತೀಯ. ಕಳೆದ ಐದು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಓಡಾಡುವುದಕ್ಕೆ ಆಗುತ್ತಿರಲಿಲ್ಲ. ನಮ್ಮ ಕ್ಷೇತ್ರದಲ್ಲಿ ಒಂದು ರಸ್ತೆಯೂ ಕೂಡ ಸುಧಾರಣೆಯಾಗಿರಲಿಲ್ಲ. ಆದರೆ ಇವತ್ತು ರಸ್ತೆಗಳ ಸುಧಾರಣೆಯ ಬಗ್ಗೆ ಮಾನ್ಯ ಬಚ್ಚೇಗೌಡರೂ ಸಹ ಒಪ್ಪಿಕೊಳ್ಳುತ್ತಾರೆ. ರಸ್ತೆಗಳ ಬಗ್ಗೆ ನಮ್ಮ ಸಾಧನೆ ಅದ್ವಿತೀಯ. ಅದರ ಬಗ್ಗೆ ತಾವು ಮಾತನಾಡತಕ್ಕದ್ದು ಸೂಕ್ತ ಅಲ್ಲ ಎಂದು ನಾನು ಭಾವಿಸಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ರಸ್ತೆ ಚೆನ್ನಾಗಿದೆಯೆಂದು ನೋಡುವುದಕ್ಕೆ ನಾವು ಬೆಂಗಳೂರಿಗೇ ಬರಬೇಕು. ದಯವಿಟ್ಟು ನಮ್ಮ ಕ್ಷೇತ್ರಕ್ಕೆ ಬನ್ನಿ.

ಶ್ರೀ ಬಿ. ರಮಾನಾಥ್ ರೈ : ಬಸ್‌ಗಳು ಓಡಾಡುವುದಕ್ಕೆ ರಸ್ತೆಗಳು ಇಷ್ಟರವರೆಗೆ ಚೆನ್ನಾಗಿರಲಿಲ್ಲ. ಈಗ ಎಷ್ಟು ಚೆನ್ನಾಗಿ ಬಸ್ಸುಗಳು ಓಡಾಡುತ್ತಿವೆಯೆಂಬುದು ತಮಗೆ ಗೊತ್ತಿರಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ರಸ್ತೆಗಳು ಎಷ್ಟು ಕೆಟ್ಟಿವೆ ಎನ್ನುವುದನ್ನು ನೋಡುವುದಕ್ಕೆ ಮಾನ್ಯ ಫೋರ್ಷಡೆಯವರ ಕ್ಷೇತ್ರಕ್ಕೆ ಹೋಗಿ ಬಂದರೆ ಆಗ ನಿಮಗೆ ಗೊತ್ತಾಗುತ್ತದೆ.

ಶ್ರೀ ಬಿ. ರಮಾನಾಥ್ ರೈ : ಈ ರಾಜ್ಯದ ಚರಿತ್ರೆಯಲ್ಲಿ ಇಷ್ಟು ಸುಸೂತ್ರವಾಗಿ ರಸ್ತೆಗಳಾಗಿರತಕ್ಕದ್ದು ಈಗಲೇ ಎಂಬುದ್ನು ನಾವೆಲ್ಲಾ ಒಪ್ಪಿಕೊಳ್ಳಲೇಬೇಕಾಗುತ್ತದೆ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಅವರು ಇವತ್ತು, ನಿನ್ನೆಯಿಂದ ಹೀಗೆ ಆಗಿಬಿಟ್ಟಿದ್ದಾರೆ. ಅಧ್ಯಕ್ಷರೇ, ಈಗ ಏನಾಗುತ್ತಿದೆ ಎಂದರೆ, ಅವರು ಒಂದು ವಿಚಾರವನ್ನು ಹೇಳಿದರು. ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಬಂದರಂತೆ. ತೂದೂರಿನಿಂದ ಮುಂದುಗಡೆ ಸರಿ ಇರಬಹುದು.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ರಾತ್ರಿಯಿಂದ ಬದಲಾವಣೆಯಾಗಿದ್ದಾರೆ ಎಂದು ಹೇಳಿದ್ದಾರೆ. ಅದೇನೆಂದು ಗೊತ್ತಾಗಲಿಲ್ಲ.

(ಗೊಂದಲ)

ಶ್ರೀ ವಿ. ಪಾಪಣ್ಣ : ಬದಲಾವಣೆಯಾಗುವುದಲ್ಲ. ನನ್ನ ಕ್ಷೇತ್ರದಲ್ಲಿ ಚೆನ್ನಾಗಿ ಆಗಿದೆ. ಗುಣಕ್ಕೆ ಏಕೆ ಮತ್ಸರ? ಚೆನ್ನಾಗಿ ಆಗಿದ್ದರೆ ಒಪ್ಪಿಕೊಳ್ಳಬೇಕು ಎಂದು ಹೇಳದ್ದೇನೆ. ಅಷ್ಟೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ ಅಹಮದ್ (ಸಾರಿಗೆ ಸಚಿವರು) : ಸುಬ್ಬಾರೆಡ್ಡಿಯವರೇ, ಬೆಂಗಳೂರಿನ ರಸ್ತೆಗಳು ಅಭಿವೃದ್ಧಿಯಾಗಿಲ್ಲವೆ? ನೀವು ಎದ್ದುನಿಂತು ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಡಿ.ಆರ್. ಪಾಟೀಲರು ಮಾತನಾಡುವಾಗಲೂ ಹೀಗೆ ಮಾಡಿ ಎರಡು ಗಂಟೆ ಕಾಲ ಸವಾಲು-ಪ್ರತಿಸವಾಲು ಆಗಿದೆ. ನಾನು ಈ ಸದನದ ಅಮೂಲ್ಯ ಸಮಯವನ್ನು ಹಾಳು ಮಾಡುವುದಕ್ಕೆ ತಯಾರಿಲ್ಲ ಏಕೆಂದರೆ ನಮಗೆ ಮಾತನಾಡಲಿಕ್ಕೆ ಇರತಕ್ಕಂಥಾದ್ದೇ ಸಂಜೆವರೆಗೆ. ಎಲ್ಲಾ ಸದಸ್ಯರುಗಳೂ ಮಾತನಾಡಬೇಕು ಎಂದು ತುದಿಗಾಲಲ್ಲಿ ನಿಂತಿದ್ದಾರೆ. ಹಾಗಾಗಿ ಅವರಿಗೆ ಸಮಯಾವಕಾಶ ಕೊಡುವ ದೃಷ್ಟಿಯಿಂದ ನಾನು ಮಾತನಾಡಿ ಮುಗಿಸುತ್ತೇನೆ. ಇವತ್ತು ಮಾನ್ಯ ಲಿಂಗಪ್ಪನವರು ಹೇಳಿದರು. ಸ್ವಾಮಿ, ಅದು ಸರಿಯಾಗಿದ್ದರೆ ನನ್ನದೇನೂ ತೊಂದರೆ ಇಲ್ಲ. ನಾನು ವಿರೋಧ ಪಕ್ಷದಲ್ಲಿದ್ದೇನೆ ಎನ್ನುವ ಮಾತ್ರಕ್ಕೆ ದುರುದ್ದೇಶಪೂರ್ವಕವಾಗಿ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿಲ್ಲ. ನಿಮ್ಮ ಒಳ್ಳೆಯ ಕೆಲಸಗಳನ್ನು ನಾನು ಅಭಿಮಾನದಿಂದ ಮೆಚ್ಚುತ್ತೇನೆ.

ಶ್ರೀ ಬಿ.ರಮಾನಾಥ ರೈ : ಇತ್ತೀಚೆಗೆ ಚಿಕ್ಕಮಗಳೂರಿನಿಂದ ಮಂಗಳೂರಿಗೆ ಬಂದಿದ್ದೀರಾ? ಆ ರಸ್ತೆಗಳು ಹೇಗೆ ಇಂಪ್ರೂವ್ ಆಗಿವೆ, ಗೊತ್ತಾ?

ಶ್ರೀ ಅರಗ ಜ್ಞಾನೇಂದ್ರ : ರೈ ರವರೇ, ದಯವಿಟ್ಟು ತಾವು ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಯಿಂದ ಕುಂದಾಪುರ ಮಾರ್ಗವಾಗಿ ಮೇಲಕ್ಕೆ ಹೋಗಬೇಕು. ನಮ್ಮ ಶ್ರೀನಿವಾಸ ಶೆಟ್ಟರು ಸದನಕ್ಕೆ ಬರಲಿಲ್ಲ. ಅವರ ಕುಂದಾಪುರ ತಾಲ್ಲೂಕಿನಲ್ಲಿ ರಸ್ತೆಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ನೋಡಬೇಕು. ನೀವು ಅಲ್ಲಿಗೆ ಬರುವ ಹಾಗೇ ಇಲ್ಲ. ನೀವು ಹೋಗಲಿಲ್ಲವೆಂದು ಕಾಣಿಸುತ್ತದೆ. ಮಾನ್ಯ ಶ್ರೀನಿವಾಸಶೆಟ್ಟರು ನಮ್ಮ ಕುಂದಾಪುರ ತಾಲ್ಲೂಕಿನ ಮಾನ್ಯ ಶಾಸಕರು ಈ ಸಾರಿ ಅಧಿವೇಶನದಲ್ಲಿ ಪ್ರತಿಭಟನಾರ್ಥವಾಗಿ ಅವರು ಬರಲಿಲ್ಲ. ಅವರ ಕ್ಷೇತ್ರದ ರಸ್ತೆಗಳು ಅಷ್ಟು ಕೆಟ್ಟುಹೋಗಿವೆ. ಮಾನ್ಯ ರೈಯವರು, ಹೋದರೆ ನಿಮ್ಮ ತೂಕ ಸ್ವಲ್ಪ ಕಡಿಮೆಯಾಗಬಹುದು. ನಿಮ್ಮ ತೂಕ ಇಳಿಸಬೇಕೆಂದು ವೈದ್ಯರು ಹೇಳುತ್ತಿದ್ದಾರೆ. ಅಲ್ಲಿ ಹೋಗುವುದರಿಂದ ನಿಮಗೆ ಖಂಡಿತವಾಗಿಯೂ ಒಳ್ಳೆಯ ವ್ಯಾಯಾಮ ಆಗುತ್ತದೆ.

ಶ್ರೀ ಬಿ. ರಮಾನಾಥ ರೈ : ನಾನು ಹೇಳಿದ್ದು ಚಿಕ್ಕಮಗಳೂರಿನಿಂದ ಮಂಗಳೂರಿಗೆ ಬನ್ನಿ ಎಂದು;

ಶ್ರೀ ಅರಗ ಜ್ಞಾನೇಂದ್ರ : ಅದು ನ್ಯಾಷನಲ್ ಹೈವೇ ಸ್ವಾಮಿ. ಕೇಂದ್ರ ಸರ್ಕಾರ ಕೊಟ್ಟಿದೆ, ನೀವು ಮಾಡಿಸುತ್ತೀರಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಇವರು ಹೀಗೆ ಹೇಳುವಾಗ ನನಗೆ ಅನ್ನಿಸುತ್ತದೆ. ಏನೆಂದರೆ ಒಂದು ಶಾಲೆಗೆ ಇನ್‌ಸ್ಪೆಕ್ಟರ್ ಹೋದರಂತೆ. ಮೇಸ್ಟ್ರು ಹೇಗೆ ಪಾಠ ಮಾಡಿರಬಹುದು ಎಂದು ಇನ್‌ಸ್ಪೆಕ್ಷನ್ ಮಾಡಲು ಪ್ರಾರಂಭಿಸಿದರು. ಹಿಂದುಗಡೆ ಕುಳಿತಿದ್ದ ಹುಡುಗನಿಗೆ ಐದೊಂದ್ಲಿ ಮಗ್ಗಿ ಕೇಳಿದರಂತೆ. ಐದೈದ್ಲಿ ಎಷ್ಟಪ್ಪ ಅಂತ ಕೇಳಿದರೆ ಆತ 'ಹತ್ತು' ಎಂದು ಹೇಳಿದನಂತೆ. 5x5 ಎಷ್ಟು ಎಂದು ಕೇಳಿದರೆ ಆತ ಹತ್ತು ಎಂದು ಹೇಳಿದ. ಹಿಂದುಗಡೆ ಕುಳಿತಿದ್ದವನು ದಡ್ಡ ಹುಡುಗನೆಂದು ತಿಳಿದು ಅವರು ಮಧ್ಯದಲ್ಲಿರುವ ಹುಡುಗನನ್ನು ಕೇಳೋಣವೆಂದು ಆತನನ್ನು ಕೇಳಿದಾಗ ಅವನು ಹನ್ನೆರಡು ಎಂದು ಹೇಳಿದ. ಕೊನೆಗೆ ಮುಂದಿನ ಸಾಲಿನಲ್ಲಿ ಕುಳಿತಿದ್ದವನಿಗೆ ಐದೈದ್ಲಿ ಎಷ್ಟಪ್ಪ ಎಂದು ಕೇಳಿದಾಗ ಆತ ಇಪ್ಪತ್ತು ಎಂದು ಹೇಳಿದನಂತೆ. ಏನ್ರಿ ಮೇಸ್ಟ್ರೆ, ಏಕೆ ಹೀಗೆ ಪಾಠ ಮಾಡಿದ್ದೀರಿ. ಮಕ್ಕಳಿಗೆ ಲೆಕ್ಕ ಸರಿಯಾಗಿ ಏಕೆ ಕಲಿಸಲಿಲ್ಲ ಎಂದು ಮೇಸ್ಟ್ರಿಗೆ ಅವರು ಜೋರು ಮಾಡಿದರು. ಆಗ ಮೇಸ್ಟ್ರು ಹೇಳಿದರಂತೆ ಸ್ವಾಮಿ, ನಾನು ಈ ಶಾಲೆಗೆ ಬರುವಾಗ ಹುಡುಗರು ಐದೈದ್ಲಿ 2 ಅಂತ ಹೇಳುತ್ತಿದ್ದರು. ಈಗ ಅವರನ್ನು ಹೊಡೆದು ಸರಿಮಾಡಿದ್ದರಿಂದ ಐದೈದ್ಲಿ 20 ಅನ್ನುವಷ್ಟರಮಟ್ಟಿಗೆ ಬಂದಿದ್ದಾರೆ ಎಂದು ಆತ ಹೇಳಿದನಂತೆ. ಹೀಗೆ ನೀವು ಹೇಳುವುದಾದರೆ ಅಡ್ಡಿ ಇಲ್ಲ. ನಾನು ಹೇಳುವುದಾದರೆ ನಿಮ್ಮ ಸರ್ಕಾರ ಬಂದಮೇಲೆ ನಾವು ಸರಿ ಮಾಡುತ್ತೇವೆ, ಎಲ್ಲಾ ರಸ್ತೆಗಳನ್ನು ಓಡಾಡಲಿಕ್ಕೆ ಯೋಗ್ಯವನ್ನಾಗಿ ಮಾಡುತ್ತೇವೆ ಎಂದು ನಿಮ್ಮ ಪ್ರಣಾಳಿಕೆಯಲ್ಲಿ ಹೇಳಿ ನೀವು ಅಧಿಕಾರಕ್ಕೆ ಬಂದಮೇಲೆ ಎಲ್ಲಾ ಸರಿಯಾಗಬೇಕು ಎಂದು ಹೇಳುವವನು ನಾನು. ಈಗ ನಿಮ್ಮ ಹಣದಿಂದ ಏನೂ ಮಾಡಲಿಲ್ಲ ನೀವು. ಎಲ್ಲದಕ್ಕೂ ಕೂಡ ಸಾಲ ತಂದಿರಿ. ನಬಾರ್ಡ್ ವರ್ಲ್ಡ್ ಬ್ಯಾಂಕ್ ಹುಡ್ಕೋದಿಂದ ಸಾಲ ಇಲ್ಲದೇ ಹೋಗಿದ್ದರೆ ನೀವು ರಸ್ತೆಗಳನ್ನು ಮಾಡುವ ಹಾಗಿಲ್ಲ.

ಗೊಂದಲ

ಶ್ರೀ ಬಿ. ರಮಾನಾಥ ರೈ: ನ್ಯಾಷನಲ್ ಹೈವೇ ಬಗ್ಗೆ ಹೇಳುತ್ತೀರಿ. ಆದರೆ ಬೇರೆ ರಸ್ತೆಗಳೂ ಸಹ ಸ್ವಲ್ಪ ಸುಧಾರಣೆಯಾಗಿವೆ, ಹೌದಾ?

Sri. S. Suresh Kumar :- We prefer a sleeping Ramanath Rai than a Disturbing Ramanath Rai.

ನೀವು ನಿದ್ದೆ ಮಾಡುತ್ತಾ ಇದ್ದರೇ ಒಳ್ಳೆಯದು.

ಶ್ರೀ ಅರಗ ಜ್ಞಾನೇಂದ್ರ : ಸ್ವಾಮಿ, ನನ್ನ ತೀರ್ಥಹಳ್ಳಿ ಕ್ಷೇತ್ರದಿಂದ ಎರಡನೇ ಸಾರಿ ಗೆದ್ದು ಬರಬೇಕಾದರೆ ಬಹಳ ಕಷ್ಟ ಇತ್ತು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ನೀವು ಹಣ ಕೊಟ್ಟರೂ ಕೂಡ ಸಮಯಕ್ಕೆ ಸರಿಯಾಗಿ ಕೆಲಸ ಆಗುತ್ತಿಲ್ಲ. ನೀವು ಸರಿಯಾಗಿ ನಿಯಂತ್ರಣ ಮಾಡದೇ ಇದ್ದರೆ ನಾವು ಏನು ಮಾಡಬೇಕು? ಈಗ ಪ್ಯಾಕೇಜ್ ಟೆಂಡರ್ ಕೊಟ್ಟಿದ್ದೀರಿ,. ಆ ಮನುಷ್ಯ ಕೆಲಸ ಮಾಡಿದ್ದಾನೆಯೇ ಎಂದು ನೋಡಿಕೊಳ್ಳುವವರು ಯಾರು?

ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರನ್ನು ಕೇಳಿದರೆ ಅವರು ಹೇಳುತ್ತಾರೆ ಏನೆಂದರೆ ನಾವು ನೋಡಬಹುದು ಅಷ್ಟೆ. ಆ ಮೇಲೆ ಅವನ ಮೇಲೆ ನಮಗೆ ಏನೂ ನಿಯಂತ್ರಣ ಇಲ್ಲವೆಂದು ಅವರು ಹೇಳುತ್ತಾರೆ. ನನಗೂ ಅದಕ್ಕೂ ಸಂಬಂಧವಿಲ್ಲವೆಂದು ಅವರು ಹೇಳುತ್ತಾರೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ನಮಗೂ ಕೂಡ ನಿಯಂತ್ರಣ ಇಲ್ಲವೆಂದು ಹೇಳುತ್ತಾರೆ. ಅದು ಎಷ್ಟು ಎಂದು ಅಳತೆ ಮಾಡಿ ಬಿಲ್ ಮಾಡುವುದನ್ನು ಒಂದು ಇಂಜಿನಿಯರಿಂಗ್ ಸಂಸ್ಥೆಗೆ ವಹಿಸಿದ್ದಾರೆ. ಒಬ್ಬ ಟೇಪ್ ಹಿಡಿದುಕೊಂಡು ಇರುತ್ತಾನೆ. ಒಂದು ಹೊಂಡವನ್ನು ಮುಚ್ಚಿದಕೂಡಲೇ ಅವನು ಟೇಪ್‌ನಲ್ಲಿ ಅಳೆಯುವುದು. ಇದು ಯಾವ ತರಹ ಎಂಬುದು ನಮಗೆ ಗೊತ್ತಿಲ್ಲ. ಅಂತೂ ಹಾಗೇ ಇವೆ ನಿಮ್ಮ ರಸ್ತೆಗಳು. ನಿಮ್ಮ ಪಿ.ಡಬ್ಲ್ಯೂಡಿ ಮಂತ್ರಿಗಳಿಗೆ ಒಳ್ಳೆಯ ಪತ್ರಿಕಾ ಪ್ರಚಾರ ಕೊಟ್ಟಿದ್ದಾರೆ. ನಾನೂ ಕೂಡ ಬಹಳ ಸಂತೋಷ ಪಟ್ಟಿದ್ದೇನೆ. ನಾವೆಲ್ಲಾ ಜನಪ್ರತಿನಿಧಿಗಳಿಗೆ ಕೆಟ್ಟ ಹೆಸರು ಬರುವುದು ಹೇಗೆ ಎಂದರೆ ಕುಡಿಯುವ ನೀರು ಇಲ್ಲದಿದ್ದರೆ, ಶಾಲೆಗೆ ಮೇಸ್ಟ್ರು ಇಲ್ಲದಿದ್ದರೆ ರಸ್ತೆಗಳಿಗೆ ದುರಸ್ತಿ ಇಲ್ಲದಿದ್ದರೆ ಒಳ್ಳೆಯ ಶಾಸಕ, ಕೆಟ್ಟ ಶಾಸಕ ಎಂದು ಇದರಿಂದ ಜನರು ನಿರ್ಧಾರ ಮಾಡುತ್ತಾರೆ. ಆದ್ದರಿಂದ ಇವತ್ತು ರಸ್ತೆಗಳು ಸರಿಯಾಗಿ ಇಲ್ಲದಿದ್ದರೆ ಸರ್ಕಾರಕ್ಕೆ ನೇರವಾಗಿ ಜನರ ಶಾಪ ಬರುತ್ತದೆ. ನಿಮ್ಮ ಹತ್ತಿರ ಹಣ ಇಲ್ಲದಿದ್ದರೆ ಅಡ್ಡಿಯಿಲ್ಲ. ಆದರೆ ಹಣ ಕೊಟ್ಟಿದ್ದನ್ನು ಕೂಡ ಉಪಯೋಗಿಸಿ ನೀವು ಮಾಡಿಸುವ ಕೆಲಸವನ್ನು ಮಾಡಿಸದೇ ಹೋದರೆ ತುಂಬಾ ಕಷ್ಟವಾಗುತ್ತದೆ.

ಶ್ರೀ ಸಿ. ಭೈರೇಗೌಡ : ಹೋದಸಾರಿ ಮಾನ್ಯ ಸದಸ್ಯರು ರಸ್ತೆಗಳ ಬಗ್ಗೆ ಹೇಳಿದ್ದಾರೆ. ಹೋದಸಾರಿ ಮಾನ್ಯ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರ ಅವರು ಮುಖ್ಯಮಂತ್ರಿಗಳು ನಮ್ಮ ತಾಲ್ಲೂಕಿನ ಅಳಿಯಂದಿರು, ರಸ್ತೆಗಳು ಸರಿಯಿಲ್ಲವೆಂದು ಹೇಳಿದ್ದರು. ತಾವು ಅವರಿಗೆ ಜ್ಞಾಪಿಸಿದ್ದೀರಿ. ಆ ರಸ್ತೆಗಳೇನಾದರೂ ರಿಪೇರಿ ಆಯಿತೇ ಅಥವಾ ಅದೇ ಪರಿಸ್ಥಿತಿಯಲ್ಲಿ ಇದೆಯಾ? ಅದು ಏನು ಅಂತ ಸ್ವಲ್ಪ ಹೇಳಿದರೆ ತಾಲ್ಲೂಕಿನ ಅಳಿಯಂದಿರಿಗೆ ಯಾವ ರೀತಿ ನಿಮ್ಮ ತಾಲ್ಲೂಕಿನ ಮೇಲೆ ವಿಶ್ವಾಸ ಇದೆ, ಮಮತೆ ಇದೆ ಎಂಬುದನ್ನು ತೋರಿಸುತ್ತದೆ. ಅದು ಏನಾಗಿದೆ ಎಂದು ಸ್ವಲ್ಪ ನಮ್ಮ ಗಮನಕ್ಕೆ ತನ್ನಿ.

ಶ್ರೀ ಅರಗ ಜ್ಞಾನೇಂದ್ರ : ನನಗೆ ಒಂದು ಭರವಸೆ ಇದೆ. ಈ ಸಾರಿ ಹೆಚ್ಚು ಹಣವನ್ನು ಮಂಡ್ಯಕ್ಕೆ ಕೊಟ್ಟಿದ್ದಾರೆ. ಮುಂದಿನ ಸಾರಿ ನಮ್ಮ ಶಿವಮೊಗ್ಗ ಜಿಲ್ಲೆಗೆ ಕೊಡಬಹುದು ಎಂದು ಏಕೆಂದರೆ ಅವರದ್ದು ಮೊದಲು ಆಗಬೇಕು, ಮೊದಲು ನಮ್ಮ ಕ್ಷೇಮ. ಆಮೇಲೆ ನಮ್ಮ ತವರೂರಿನ ಕ್ಷೇಮ ಇರಲಿ ಎಂದು ಅವರು ನಿರ್ಧಾರ ಮಾಡಬಹುದು ಎಂಬ ನಂಬಿಕೆ ನನಗೆ ಇದೆ. ಹಾಗಾಗಿ ನಾನೇನೂ ಹೆಚ್ಚು ಹೇಳುವುದಕ್ಕೆ ಹೋಗುವದಿಲ್ಲ. ಅದನ್ನು ಅವರು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಆದ್ದರಿಂದ ಮುಂದಿನಸಾರಿ ನನ್ನ ಕ್ಷೇತ್ರಕ್ಕೆ ಹಣ ಚೆನ್ನಾಗಿ ಬರಬಹುದು ಎಂದು ನಾನು ನಿರೀಕ್ಷೆ ಮಾಡಿದ್ದೇನೆ. ಬರಲಿ ಎಂದು ನಾನು ಹಾರೈಸುತ್ತೇನೆ. ಬಹಳ ಬೇಗ ಹೊಂಡಗುಂಡಿಗಳು ಮುಚ್ಚುವಂತಾಗಲಿ ಎಂದು ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ : ಈ ಸಾರಿ ಹೊಂಡ-ಗುಂಡಿಗೆ ಬಂದಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ : ಇನ್ನೊಂದು ಅವಶ್ಯಕತೆ ಇರತಕ್ಕದ್ದು ನಮ್ಮ ಶಕ್ತಿ ಮೂಲಗಳು. ಅದಕ್ಕೂ ಕೂಡ ಈ ಸಾರಿ ಬಜೆಟ್‌ನಲ್ಲಿ ಅತ್ಯಂತ ಹಣದ ಕೊರತೆ ಇದೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೆ.ಪಿ.ಟಿ.ಸಿ.ಎಲ್. ಹುಚ್ಚು ಕುದುರೆ ರೀತಿಯಲ್ಲಿ ಓಡುತ್ತಿದೆ.

ಅದಕ್ಕೆ ಯಾರು ಕಡಿವಾಣ ಹಾಕಬೇಕು? ಎಲ್ಲಿ ಹೇಗೆ ನಿಲ್ಲಿಸಬೇಕೆಂದು ಯಾರಿಗೂ ಕೂಡ ಗೊತ್ತಾಗುವುದಿಲ್ಲ. ಅವರು ಮಾಡಿದ್ದೇ ಮಾಡೋದು. ಅವರು ಮಾಡುವಂಥ ಅವ್ಯವಹಾರಗಳಿಗೆಲ್ಲಾ ನಮ್ಮ ಬಳಕೆದಾರರು ಏನಿದ್ದಾರೆ, ಅವನ ಮೇಲೆ ಚಪ್ಪಡಿ ಎಳೆಯುವಂಥ ಕೆಲಸ ಇವತ್ತು ನಡೆಯುತ್ತಿದೆ. ಮೊನ್ನೆ ಕೂಡ ಮಾತನಾಡುವಂಥ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಊರೂರುಗಳಲ್ಲಿ ಮೈಕುಗಳಲ್ಲಿ ಕೂಗುತ್ತಿದ್ದಾರೆ ನಿಮ್ಮನ್ನು ಜೈಲಿಗೆ ಹಾಕಿಸುತ್ತೇವೆ ಎಂದು. ಆರನೇ ತಾರೀಖಿನ ನಂತರ ಜೈಲಿಗೆ ಹಾಕಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಎಷ್ಟು ಜೈಲುಗಳಿವೆಯೋ ನನಗೆ ಗೊತ್ತಿಲ್ಲ. ಜನರನ್ನು ಜೈಲಿಗೆ ಹಾಕಿಸುವ ಮೊದಲು ಅದನ್ನು ಒಂದು ಸಾರಿ ಸರ್ಕಾರಿ ಛತ್ರವಾಗಿ ಮಾಡಿರತಕ್ಕಂಥ ಅದರ ಅಧಿಕಾರಿಗಳು ಏನಿದ್ದಾರೆ, ನಲ್ವತ್ತು ಸಾವಿರ ನೌಕರರಲ್ಲಿ ಎಲ್ಲರ ಬಗ್ಗೆಯೂ ನಾನು ಹೇಳುವುದಿಲ್ಲ. ಅನೇಕರು ಪ್ರಾಮಾಣಿಕರೂ ಇದ್ದಾರೆ. ಕೆಲವರು ಅಪ್ರಮಾಣಿಕರು, ಭ್ರಷ್ಟರು ಇದ್ದಾರೆ. ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ಒಬ್ಬ ಮೀಟರ್ ರೀಡರ್ ಮನೆ ಮೇಲೆ ರೈಡ್ ಮಾಡಿದರೆ ಮೂರು ಕೋಟಿ ರೂಪಾಯಿ ಸಿಗುತ್ತದೆ ಎಂದರೆ ಈ ರಾಜ್ಯದಲ್ಲಿ ಕೆ.ಪಿ.ಟಿ.ಸಿ.ಎಲ್. ಉಳಿಯುತ್ತದೆಯೆ? ಇದು ಯಾವ ಸ್ಥಿತಿಗೆ ಹೋಗಿದೆ? ಇವತ್ತು ಕೆ.ಪಿ.ಟಿ.ಸಿ.ಎಲ್ ಮೇಲೆ ವಜಾ ಹಾಕತಕ್ಕಂಥವರು ಕನ್‌ಸ್ಯೂಮರ್‌ಗಿಂತ ಹೆಚ್ಚು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಭ್ರಷ್ಟರು ಯಾರಿದ್ದಾರೆ ಅವರನ್ನು ನಿಯಂತ್ರಣ ಗೊಳಿಸತಕ್ಕಂಥ ವ್ಯವಸ್ಥೆಯನ್ನು ಇವತ್ತು ಮಾಡಬೇಕಾಗುತ್ತದೆ. ಹಾಗೇನೇ ಇವತ್ತು ಅಕ್ರಮ-ಸಕ್ರಮಗಳು. ಮೊನ್ನೆ ಕೂಡ ನಾನು ಹೇಳಿದ್ದೇನೆ. ಆರನೇ ತಾರೀಖು ಗಡುವನ್ನು ಕೊಟ್ಟಿದ್ದಾರೆ. ಅಕ್ರಮ-ಸಕ್ರಮ ಮಾಡುವ ಮೊದಲು, ಅದನ್ನು ವಿಸ್ತಾರ ಮಾಡಿ ಮಾಡುವ ಮೊದಲು ಸಕ್ರಮವಾಗಿ ಯಾರಿಗೆ ವಿದ್ಯುತ್ ಸಂಪರ್ಕವನ್ನು ಕೊಟ್ಟಿದ್ದಾರೆ, ಅವರಿಗೆ ಟೈಮ್ ಪ್ರೋಗ್ರಾಮ್ ಹಾಕಿ ಅವರಿಗೆ ವಿದ್ಯುತ್ ಸಂಪರ್ಕವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಲಿಲ್ಲ. ಇದರ ಪರಿಣಾಮ ಏನಾಗಿದೆ ಎಂದರೆ ಮೊನ್ನೆ ದಿವಸ ಚನ್ನರಾಯಪಟ್ಟಣ ತಾಲ್ಲೂಕು ಎಂದು ಕಾಣಿಸುತ್ತದೆ. ನಾನು ಪತ್ರಿಕೆಯಲ್ಲಿ ಓದಿದ್ದೇನೆ. ನಾವೆಲ್ಲರೂ ಕೂಡ ಬಹಳ ಯೋಚನೆ ಮಾಡತಕ್ಕಂಥ ಸ್ಥಿತಿ ಬಂದಿದೆ. ಸಕ್ರಮವಾಗಿ ಪಂಪುಸೆಟ್ಟನ್ನು ತೆಗೆದುಕೊಂಡಿರತಕ್ಕಂಥ ಪಂಪ್‌ಸೆಟ್ ಮಾಲೀಕ ಸಂಜೆ ಪವರ್ ಬಂದಾಗ ಅದನ್ನು ಚಾಲೂ ಮಾಡುವುದಕ್ಕೆ ಹೋಗಿದ್ದಾನೆ. ಆದರೆ ಪಂಪ್ ಓಡಲಿಲ್ಲ. ಸುಟ್ಟು ಹೋಯಿತು. ಏನಾಗಿದೆ ಇದು ಏಕೆ ವೋಲ್ಟೇಜ್ ಕಡಿಮೆ ಇದೆಯೆಂದು ಅಣ್ಣತಮ್ಮ ಇಬ್ಬರೂ ಹುಡುಕಿಕೊಂಡು ಹೋಗಿದ್ದಾರೆ. ಕೊಕ್ಕೆ ಹಾಕಿಕೊಂಡು ಸ್ವಲ್ಪ ಮುಂದುಗಡೆ ಹಳ್ಳಿಗಳಲ್ಲಿ ಪಂಪ್‌ಸೆಟ್‌ಗಳನ್ನು ಓಡಿಸುತ್ತಿದ್ದಾರೆ. ಅವರಿಗೂ, ಇವರಿಗೂ ಘರ್ಷಣೆಯಾಗಿದೆ, ನೀವು ಕೊಕ್ಕೆ ಹಾಕಿದ್ದರಿಂದ ನಮ್ಮ ಪಂಪ್‌ಸೆಟ್‌ನ ವೋಲ್ಟೇಜ್ ಕಡಿಮೆಯಾಗಿದೆ ಎಂದು ಗಲಾಟೆಯಾಗಿ ಯಾರು ಸಕ್ರಮವಾಗಿ ವಿದ್ಯುತ್ ತೆಗೆದುಕೊಂಡು ಪಂಪ್‌ಸೆಟ್ ಓಡಿಸುತ್ತಿದ್ದಾನೆ ಅವನನ್ನು ಹೊಡೆದು ಕೊಂದಿದ್ದಾರೆ. ಇದು 18ನೇ ತಾರೀಖಿನ ಪೇಪರ್‌ನಲ್ಲಿ ಬಂದಿದೆ. ಸಕ್ರಮವಾಗಿ ತೆಗೆದುಕೊಂಡಿದ್ದವನು ಸತ್ತುಹೋದ. ಅಕ್ರಮವಾಗಿ ವಿದ್ಯುತ್ ಅನ್ನು ತೆಗೆದುಕೊಂಡಿರುವವರು ಹೊಡೆದು ಸಾಯಿಸಿದರು. ಇಂತಹ ಒಂದು ಪರಿಸ್ಥಿತಿ ಈವತ್ತು ಇದೆ. ಅದನ್ನು ಸರಿ ಮಾಡತಕ್ಕಂಥ ಕೆಲಸ ಇವತ್ತು ಕೆ.ಪಿ.ಟಿ.ಸಿ.ಎಲ್ ಕಡೆಯಿಂದ ನಡೆಯುತ್ತಿದೆ. ಇವತ್ತು ಕೆ.ಪಿ.ಟಿ.ಸಿ.ಎಲ್ ನವರು ರೇಟ್ ಅನ್ನು ಅನೌನ್ಸ್ ಮಾಡಿದ್ದಾರೆ. ಆ ರೇಟನ್ನು ಸರ್ಕಾರ ಒಪ್ಪಿಕೊಂಡರೆ ಬಹುಶಃ ನಾವು ಪಂಪ್‌ಸೆಟ್ ಹಾಕಿಸಿರತಕ್ಕಂಥವರು ಕಿತ್ತುಹಾಕಬೇಕಾಗುತ್ತದೆ. ಇದು ಶಕ್ತಿಯ ಮೂಲ ಅಲ್ಲ,

ಇದು ಜನರನ್ನು ನಿಶ್ಶಕ್ತಿ ಮಾಡುವಂತಹ ಇಲಾಖೆ ಆಗುತ್ತದೆ. ಸಿಕ್ಕಾಪಟ್ಟೆ ರೇಟ್ ಹಾಕಿದ್ದಾರೆ. ಈ ಕೃಷಿ ಪಂಪ್‌ಸೆಟ್ ಇಟ್ಟುಕೊಂಡಿರುವವರಿಗೆ ಎರಡೆರಡು ರೇಟ್ ಮಾಡಿದ್ದಾರೆ. ಮೊನ್ನೆ ದಿನ ಅನೌನ್ಸ್ ಮಾಡಿದ್ದಾರೆ, ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿದ್ಯುತ್ ಸಚಿವರು ಗಮನಿಸಬೇಕಾಗುತ್ತದೆ. ವಾಣಿಜ್ಯ ಬೆಳೆಗಳಿಗೆ ಒಂದು ರೇಟ್, ಆಹಾರ ಬೆಳೆಗಳಿಗೆ ಒಂದು ರೇಟ್ ಇದೆ. ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ, ಇತ್ತೀಚಿಗೆ ಒಂದು ಹೈಕೋರ್ಟ್‌ನ ಆರ್ಡರ್ 1998ರಲ್ಲಿ ಬಂದಿದೆ. ಹೀಗೆ ಎರಡು ಬೆಳೆಗಳನ್ನು ನಿರ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ. ಸೀತಾರಾಂ ಲಾಲ್‌ಬಾಗ್ ರಸ್ತೆ ಬೆಂಗಳೂರು ಎಂಬುವರಿಗೂ ಹಾಗೂ ನಿಮ್ಮ ಇಲಾಖೆಗೆ ನಡೆದಿರುವಂತಹ ವಿಚಾರದಲ್ಲಿ ಹೈಕೋರ್ಟ್‌ನ ತೀರ್ಮಾನ ಬಂದಿದ್ದು, ಅದನ್ನು ತಾವು ಗಮನಿಸಬೇಕು. ಇದರಲ್ಲಿ ರಿಟ್ ಪಿಟಿಷನ್ 3443, 1998ರಲ್ಲಿ ವ್ಯವಸಾಯ ಮತ್ತು ತೋಟಗಾರಿಕೆ ಬೆಳೆಗಳಿಗೆ ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ. ಅದನ್ನೂ ಕೂಡ ಕೃಷಿ ಎಂದು ನಿರ್ಧಾರ ಮಾಡಬೇಕು ಎಂದು ಬಂದಿದೆ. ಮೊನ್ನೆ ದಿವಸ ಮಾನ್ಯ ಸದನಂದಗೌಡರು ಅಡಿಕೆಯ ಬಗ್ಗೆ ಪ್ರಶ್ನೆ ಎತ್ತಿದಾಗ ನಮ್ಮ ತೋಟಗಾರಿಕಾ ಸಚಿವರು ಅಡಿಕೆಯನ್ನು ಆಹಾರ ಬೆಳೆ ಎಂದು ನಿರ್ಧಾರ ಮಾಡಲು ನಾವು ತಯಾರಿಲ್ಲ, ಅದು ವಾಣಿಜ್ಯ ಬೆಳೆಯಾಗುತ್ತದೆ, ಅದನ್ನು ಬೇರೆ ಎಂದು ಪರಿಗಣಿಸಬೇಕಾಗುತ್ತದೆಂದು ಹೇಳಿದರು. ದಯಮಾಡಿ ಈ ಎರಡು ಬೆಳೆಗಳನ್ನು ನಿರ್ಧಾರ ಮಾಡಬಾರದು. ಈ ಕೋರ್ಟ್ ಆದೇಶವನ್ನು ಕೂಡ ಗಮನದಲ್ಲಿಟ್ಟು ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಇಲಾಖೆಯನ್ನು ಏನಾದರೂ ಮಾಡಿ ಸರಿ ಮಾಡುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ನಿಮ್ಮ ಸರ್ಕಾರಕ್ಕೆ ಇದರಿಂದ ಒಳ್ಳೆಯ ಹೆಸರು ಖಂಡಿತವಾಗಿಯೂ ಬರುವುದಿಲ್ಲ. ಇದು ಬೇಕಾಬಿಟ್ಟಿಯಾಗಿ ನಡೆಯುತ್ತದೆ. ಸರಿಯಾಗಿ ವೋಲ್ಟೇಜ್ ಇಲ್ಲ, ಇವತ್ತು ಟಿ.ಸಿ. ಸುಟ್ಟು ಹೋಗುತ್ತಿವೆ ಇದರಿಂದ ಸಾವಿರಾರು ಕೋಟಿ ರೂಪಾಯಿ ಪ್ರತಿನಿತ್ಯ ಹಾನಿಯಾಗುತ್ತಿದೆ. ಈ ನಿಟ್ಟಿನಲ್ಲಿ ವ್ಯವಸ್ಥಿತವಾದಂತಹ ಪ್ರಯತ್ನ ಮಾಡಬೇಕು. ಇನ್ನು ಆರ್‌ಇಸಿ ಪ್ರೋಗ್ರಾಂ ಏನಿದೆ ಅದಕ್ಕೆ ಕೇಂದ್ರ ಸರ್ಕಾರದಿಂದ ರೀಯಿಂಬರ್ಸ್‌ಮೆಂಟ್ ನಿಮಗೆ ಇದೆ. ನಮ್ಮ ತಾಲ್ಲೂಕುಗಳಿಲ್ಲಿ ನಾಲ್ಕು ವರ್ಷದಿಂದ ನಡೆಸುತ್ತಿದ್ದೀರಿ. ನನ್ನ ಕ್ಷೇತ್ರದಲ್ಲಿ 218 ಹಳ್ಳಿಗಳು ಬರುತ್ತವೆ, ಅದರಲ್ಲಿ ಹೊಸನಗರ, ಸಾಗರ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿಗೆ ವಿಸ್ತಾರ ಮಾಡಿದ್ದೀರಿ. ನಾಲ್ಕು ವರ್ಷದಿಂದ ಟೆಂಡರ್ ಕರೆದು ಅದನ್ನು ಮಾಡಿದರೂ ಕೂಡ ಇವತ್ತಿಗೂ ಕೂಡ ಆ ಪ್ರೋಗ್ರಾಂ ಅನ್ನು ಮುಗಿಸುವುದಕ್ಕೆ ಆಗಿಲ್ಲ. ಅದೇ ಟೆಂಡರುದಾರ ಉಡುಪಿ, ಕುಂದಾಪುರ ತಾಲ್ಲೂಕುಗಳಲ್ಲಿ ಮೊನ್ನೆ ಮೊನ್ನೆ ಟೆಂಡರ್ ತೆಗೆದುಕೊಂಡಿದ್ದಾನೆ. ಅವರಿಗೆ ಹಣ ಕೊಡುವುದಿಲ್ಲ. ಈ ಆರ್‌ಇಸಿ ಪ್ರೋಗ್ರಾಂಗಳು ಕಂಪ್ಲೀಟಾಗಿ ಮುಗಿಯುವ ಹಾಗೆ ನೋಡುವುದಿಲ್ಲ. ಇವತ್ತು ನಮ್ಮ ಬೇರೆ ಬೇರೆ ಯೋಜನಾ ಪ್ರದೇಶಗಳು, ಅದು ವರಾಹಿ ಇರಬಹುದು, ಲಿಂಗನಮಕ್ಕಿ ಇರಬಹುದು, ಶರಾವತಿ ವಿದ್ಯುತ್ ಘಟಕ ಇರಬಹುದು ಅಲ್ಲಿ ಮುಳುಗಡೆಯಾಗಿ ತ್ಯಾಗ ಮಾಡಿರತಕ್ಕಂಥ ಜನ ಅಲ್ಲಿ ಇರುವವರು. ಅಂಥಾದ್ದರಲ್ಲಿ ನಮ್ಮ ಹಳ್ಳಿಗಳಲ್ಲಿ ಈ ಆರ್‌ಇಸಿ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಅಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡರೆ ಮೂರಾಲ್ಕು ವರ್ಷದಿಂದ ಇವತ್ತಿಗೂ ಕೂಡ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರಲಿಲ್ಲ. ಇದಕ್ಕೆ ಏನು ಕಾರಣವೆಂಬುದು ಗೊತ್ತಾಗಲಿಲ್ಲ. ನಿಮ್ಮ ಅಧಿಕಾರಿಗಳು ಇದರ ಬಗ್ಗೆ

ಪ್ರಾಮಾಣಿಕವಾಗಿ ಗಮನ ಹರಿಸಲಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಮುಂದೆ ಮುಂದೆ ಹೋದ ಹಾಗೆ ಎಸ್.ಆರ್‌ಗಳು ಚೇಂಜ್ ಆಗುತ್ತದೆ. ಇದಕ್ಕೆ ಎಷ್ಟು ಹಣ ಕೊಟ್ಟರೂ ಕೂಡ ಕಡಿಮೆಯಾಗುತ್ತದೆ. ಆದರಿಂದಾಗಿ ಇದನ್ನು ಗಮನಿಸಬೇಕೆಂದು ನನ್ನ ವಿನಂತಿ. ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ಈಗಾಗಲೇ ಸದಸ್ಯರುಗಳು ಮಾತನಾಡಿದ್ದು, ಅದಕ್ಕೂ ಕೂಡ ಹಣ ಕೊರತೆ ಮಾಡಿದ್ದಾರೆ. ಒಂದೊಂದು ಪಂಚಾಯತ್‌ಗೆ ಮೂರೂವರೆ ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದರು, ಆದರೆ ಅದಕ್ಕೆ ಕೊಡುವ ಹಣ ಎಲೆಕ್ಟ್ರಿಸಿಟಿ ಬಿಲ್‌ಗೆ ಸಾಕಾಗುತ್ತಿಲ್ಲ. ಎಲೆಕ್ಟ್ರಿಸಿಟಿ ಬಿಲ್ ಜಾಸ್ತಿಯಾಗಿದೆ. ಬೇರೆ ಬೇರೆಯಾದಂತಹ ಅನುಷ್ಠಾನಗಳಿಗೆ ಹಣ ಜಾಸ್ತಿಯಾಗಿದೆ. ಇದರ ಪರಿಣಾಮ ಇವರು ಕೊಡುವಂತಹ ಹಣ ಏನೇನು ಸಾಲುವುದಿಲ್ಲ. ಒಂದು ಗಾದೆ ಇದೆಯಲ್ಲಾ ಅಜ್ಜಿ ನೂತಿದ್ದೆಲ್ಲಾ ಮೊಮ್ಮಗನ ಉಡಿದಾರಕ್ಕೆ ಎಂಬ ಪರಿಸ್ಥಿತಿ ಇವತ್ತು ಪಂಚಾಯತ್‌ಗಳಲ್ಲಿ ನಿರ್ಮಾಣವಾಗಿದೆ. ಇವತ್ತು ಕೇಂದ್ರ ಸರ್ಕಾರದಿಂಗ ಕೂಡ ಏಳು ಅಥವಾ ಒಂಬತ್ತು ಲಕ್ಷ ರೂಪಾಯಿ ಬರುತ್ತದೆಂದು ಹೇಳಿದರು. ಸುಮಾರು ಮುಕ್ಕಾಲು ಪಾಲು ಹಣ ಪಂಚಾಯತ್‌ಗಳಿಗೆ ಮಾನ್ಯ ವೆಂಕಯ್ಯ ನಾಯ್ಡುರವರು ಗ್ರಾಮೀಣಾಭಿವೃದ್ಧಿ ಸಚಿವರಾದ ಮೇಲೆ ಸಾಕಷ್ಟು ಹಣ ಅನುದಾನವಾಗಿ ಬರುತ್ತಿದೆ. ಎಸ್‌ಟಿಎಸ್‌ವೈ ಆಗಲಿ, ಎಸ್‌ಜೆಆರ್‌ವೈ ಆಗಲಿ, ಇಎಎಸ್ ಆಗಲಿ ಸಾಕಷ್ಟು ಹಣಕಾಸಿನ ನೆರವು ಹರಿದು ಬರುತ್ತಿದೆ. ಅದನ್ನು ಸದ್ವಿನಿಯೋಗ ಮಾಡುತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನು ಪಂಚಾಯತ್‌ಗಳ ಆಡಿಟ್ ಮಾಡುತ್ತಿಲ್ಲ. ಅನೇಕ ಗ್ರಾಮಪಂಚಾಯತ್‌ಗಳ ಕಾರ್ಯದರ್ಶಿಗಳ ಮೇಲೆ ಹಣಕಾಸಿನ ಆಪಾದನೆ ಇದೆ. 5 ರಿಂದ 8 ವರ್ಷಗಳಾಯಿತು. ಯಾರನ್ನೂ ಕೂಡ ಸಸ್ಪೆಂಡ್ ಮಾಡಲಿಲ್ಲ, ಅಥವಾ ಅವರಿಂದ ಹಣ ವಸೂಲು ಕೂಡ ಮಾಡಿಲ್ಲ. ಅಲ್ಲಿರತಕ್ಕಂಥ ತಾಲ್ಲೂಕು ಪಂಚಾಯತ್ ಎಂಜಿನಿಯರ್ ರೋಗಿ ಎಸ್ಟಿಮೇಟ್ ಮಾಡುತ್ತಾನೆ, ಆತ ಎಷ್ಟಕ್ಕೆ ಎಸ್ಟಿಮೇಟ್ ಮಾಡುತ್ತಾನೆ ಎಷ್ಟಕ್ಕೆ ಬಿಲ್ ಮಾಡುತ್ತಾನೆ. ಎಲ್ಲಾ ಅವರೇ ಲೆಕ್ಕ ಹಾಕಿಕೊಂಡು ಬಿಡುತ್ತಾರೆ ಇದರಿಂದಾಗಿ ಕೊಡತಕ್ಕಂಥ ಹಣ ಗ್ರಾಮಾಂತರ ಪ್ರದೇಶಕ್ಕೆ ಸದ್ವಿನಿಯೋಗ ಆಗುತ್ತಿಲ್ಲ. ಇದರ ಬಗ್ಗೆ ಆಡಿಟ್ ಮಾಡತಕ್ಕಂಥ ಹಾಗೂ ಅವರ ಮೇಲೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳತಕ್ಕಂಥ ಕೆಲಸ ಇವತ್ತು ಆಗಬೇಕಾಗಿದೆ. ಇನ್ನು ಕಾಮಗಾರಿಗಳೂ ಕೂಡ ಸರಿಯಾಗಿ ಅನುಷ್ಠಾನ ಆಗುತ್ತಿಲ್ಲ. ಕಳಪೆ ಕಾಮಗಾರಿಗಳು ಆಗುತ್ತಿವೆ. ತಮಗೆ ಒಂದು ಉದಾಹರಣೆ ಹೇಳಬೇಕೆಂದರೆ ನಾವು ಸಮಿತಿಯಲ್ಲಿ ಕುಳಿತಾಗ ಚರ್ಚೆ ಮಾಡುತ್ತಿದ್ದೆವು. ಪತ್ರಿಕೆಯಲ್ಲಿ ಒಂದು ವಿಚಾರ ಬಂದಿತ್ತು. ಮಾನ್ಯ ಪ್ರಭಾಕರ ಬಂಗೇರ ಅವರು ಇಲ್ಲೇ ಇದ್ದಾರೆ. ಅವರ ಕ್ಷೇತ್ರದಲ್ಲಿ ಆಗಿರುವಂತಹ ಘಟನೆ. ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಧರ್ಮಸ್ಥಳದಲ್ಲಿ ಕುಡಿಯುವ ನೀರು ಒದಗಿಸುವುದಕ್ಕೆ ಒಂದು ಪ್ರಾಜೆಕ್ಟ್‌ನ್ನು ಹಾಕಿಕೊಂಡರು. ಒಂದು ಅಣೆಕಟ್ಟನ್ನು ನೇತ್ರಾವತಿ ನದಿಗೆ ಕಟ್ಟುವ ಕೆಲಸಕ್ಕೆ ಒಂದೂವರೆ ಕೋಟಿ ರೂಪಾಯಿ ವಿನಿಯೋಗ ಮಾಡಿದ್ದಾರೆ. ಅದನ್ನು ಕಟ್ಟಿದರೆ ಮೊನ್ನೆ ಒಡೆದು ಹೋಯಿತು. ಅದು ಎಷ್ಟು ದೊಡ್ಡ ಅನಾಹುತವಾಗುತ್ತಿತ್ತು ಎಂದರೆ ಯಾವಾಗಲೂ ಕೂಡ ಡ್ಯಾಂ ಕೆಳಗಡೆ ಒಂದೂವರೆ ಸಾವಿರ ಜನ ಸ್ನಾನ ಮಾಡುತ್ತಿರುತ್ತಾರೆ. ಆದರೆ ಸುದೈವ ಆವತ್ತು ಡ್ಯಾಂ ಒಡೆದಾಗ ಯಾರೋ ಕೂಗಿಕೊಂಡು ಎಲ್ಲಾ ಸ್ನಾನ ಮಾಡುತ್ತಿದ್ದವರು ಓಡಿ ದಡಕ್ಕೆ ಬಂದರು. ಯಾವುದೇ ಸಾವುನೋವು ಆಗಲಿಲ್ಲ. ಏನಾದರೂ ಹೆಚ್ಚುಕಡಿಮೆಯಾಗಿದ್ದರೆ ಒಂದರಿಂದ ಒಂದೂವರೆ ಸಾವಿರ ಜನ ನೀರಿನಲ್ಲಿ

ಜಲ ಸಮಾಧಿಯಾಗುತ್ತಿದ್ದರು. ಬಹುಶಃ ಅದು ಮಂಜುನಾಥ ಸ್ವಾಮಿಯ ಮಹಿಮೆ ಇರಬಹುದು. ನಾವು ಅಧಿಕಾರಿಯನ್ನು ಕೇಳಿದರೆ ಮಳೆ ಬಂತು ಒಡೆಯಿತು ಎಂದು ಹೇಳುತ್ತಾರೆ. ಬೇಸಿಗೆಯಲ್ಲಿ ಬಂದಂತಹ ಮಳೆಯಿಂದ ಆ ಡ್ಯಾಂ ಒಡೆದು ಹೋದರೆ, ಇವರು ಕಟ್ಟಿರತಕ್ಕಂಥ ರೀತಿ ಏನು? ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ ಬಂಗೇರ ಪತ್ರಿಕಾ ಹೇಳಿಕೆ ಕೊಟ್ಟರು ಹಾಗೂ ಮಾನ್ಯ ಮಂತ್ರಿಗಳಿಗೂ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವರು ರಮಾನಾಥ ರೈ ಅವರೇ ಎಂದು ಕಾಣುತ್ತದೆ. ನಿಮ್ಮ ಕ್ಷೇತ್ರದಲ್ಲಿ ಆಗಿರತಕ್ಕಂಥ ಒಂದು ಘಟನೆ.

ಶ್ರೀ ರಮಾನಾಥ ರೈ : ಸೈಕಲ್ ಮೇಲೆನಿಂದ ಬಿದ್ದರೂ ಉಸ್ತುವಾರಿ ಸಚಿವರೇ ಜವಾಬ್ದಾರಿ ನಮಗೆಲ್ಲಾ ಗ್ರಹಚಾರ.

ಶ್ರೀ ಎಂ. ಮಹಾದೇವ್ : ಉಸ್ತುವಾರಿ ಸಚಿವರ ಕಥೆ ಏನಾಗಿದೆ ಎಂದರೆ ಕುಂತರೂ ನಿಂತರೂ ಎಲ್ಲದ್ದಕ್ಕೂ ಉಸ್ತುವಾರಿ ಸಚಿವರೇ ಜವಾಬ್ದಾರಿ. ಆಕಸ್ಮಾತ್ ಸೈಕಲ್ ಮೇಲಿನಿಂದ ಬಿದ್ದು ಬಿಟ್ಟರೆ, ಅವನನ್ನು ಏಕಪ್ಪ ಬಿದ್ದೆ ಎಂದರೆ ಈ ಉಸ್ತುವಾರಿ ಸಚಿವರಿಂದ ಬಿದ್ದೆ ಎಂದು ಹೇಳುವ ಮಟ್ಟಕ್ಕೆ ಬಂದಿದೆ.

ಶ್ರೀ ಆಗರ ಜ್ಞಾನೇಂದ್ರ : ಉಸ್ತುವಾರಿ ಸಚಿವರು ಎಂದರೆ ಸ್ಥಾನೀಯ ಮಂಡಲೀಕರು ಇದ್ದ ಹಾಗೆ ಎಂದು ನಾವು ತಿಳಿದು ಕೊಂಡಿದ್ದೇವೆ. ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಯುವುದು ಹೀಗೆ ಇದೆ ಹಾಗೆ ಇದೆ ಎಂದು ಗದರಿಸುವುದು ಇದೆಲ್ಲಾ ನಡೆಯುತ್ತಿದೆ ಎಂಬ ಸುದ್ದಿ ಬಂದಿದೆ. ನಿಮಗೆ ಪವರ್ಸ್ ಏನೂ ಕಡಿಮೆ ಆಗಿಲ್ಲ. ಆದರೆ ಆ ಪವರ್ ಅನ್ನು ಚಲಾಯಿಸಬೇಕಷ್ಟೆ. ಈ ರೀತಿಯ ಒಂದು ಕಾಮಗಾರಿ ಆದಾಗ ಅದನ್ನು ಚಲಾಯಿಸದೆ ಹೋದರೆ ಅಧಿಕಾರಿಗಳ ಮೇಲೆ ಕಂಟ್ರೋಲ್ ಇಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಬೇಸಿಗೆ ಮಳೆಗೆ ಆ ಡ್ಯಾಂ ಒಡೆದುಹೋಯಿತು ಎಂದರೆ ನಿಮ್ಮ ಸರ್ಕಾರ ಕೊಟ್ಟಿರತಕ್ಕಂಥ ಎರಡು ಕೋಟಿ ರೂಪಾಯಿ ಹೋಯಿತು ಎಂದಾಗ ಅಲ್ಲಿ ಒಬ್ಬ ಇಂಜಿನಿಯರ್ ಅನ್ನೂ ಕೂಡ ಸಸ್ಪೆಂಡ್ ಮಾಡಲಿಲ್ಲ. ಹಾಗಾದರೆ ಇವರು ಯಾವ ರೀತಿ ಸರ್ಕಾರವನ್ನು ನಡೆಸುವುದಕ್ಕೆ ಆಗುತ್ತದೆ? ಇನ್ನು ಕಳಪೆ ಕಾಮಗಾರಿ ಮಾಡಿರತಕ್ಕಂಥ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆ ಎಂಬುದನ್ನು ನಾವು ನೋಡಬಹುದು. ಇನ್ನು ಪಶುಸಂಗೋಪನಾ ಇಲಾಖೆಯ ಮಾನ್ಯ ಸಚಿವರು ಇಲ್ಲಿ ಇಲ್ಲ. ನಾನು ಹೇಳುತ್ತೇನೆ ಅವರು 2-3 ಸಾರಿ ಪತ್ರಿಕೆಯಲ್ಲಿ ಹೇಳಿದ್ದರು. ನಾವೆಲ್ಲಾ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರು. ಪಶುಸಂಗೋಪನಾ ಇಲಾಖೆ ರೈತರಿಗೆ ಬಹಳ ದೊಡ್ಡ ಸಹಾಯ ಮಾಡತಕ್ಕಂಥ ಇಲಾಖೆ. ಮಾನ್ಯ ಸಚಿವರು, ಒಂದು ಪ್ರತ್ಯೇಕವಾದಂತಹ ವೆಟರಿನರಿ ಯೂನಿವರ್ಸಿಟಿಯನ್ನು ಮಾಡುತ್ತೇವೆಂದು ಹೇಳಿದ್ದರು. ಬಹುಶಃ ಬಜೆಟ್‌ನಲ್ಲಿ ಅದು ಅನೌನ್ಸ್ ಆಗುತ್ತದೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಏನೂ ಆಗಲಿಲ್ಲ. ಇದನ್ನು ಏಕೆ ಹೇಳುತ್ತೇನೆಂದರೆ ವೆಟರಿನರಿ ಇವತ್ತು ಕೃಷಿ ಯೂನಿವರ್ಸಿಟಿಯಲ್ಲಿ ಇದೆ. ಅವರು ಕೃಷಿಗೆ ಹೆಚ್ಚು ಒತ್ತನ್ನು ಕೊಡುತ್ತಾರೆಯೇ ಹೊರತು ವೆಟನರಿಗೆ ಕೊಡುತ್ತಿಲ್ಲ. ಇದರ ಪರಿಣಾಮವಾಗಿ ಹೊಸ ಸಂಶೋಧನೆಗಳು ನಮ್ಮ ರಾಜ್ಯದಲ್ಲಿ ವೆಟರಿನರಿ ಬಗ್ಗೆ ನಡೆಯುತ್ತಿಲ್ಲ.

1.50 ಪಿ.ಎಂ

ಹೀಗಾಗಿ ಒಂದು ಪ್ರತ್ಯೇಕವಾದಂಥ ವಾರ್ಸಿಟಿಯಾದರೆ, ಅನೇಕ ಸಂಶೋಧನಾ ಕೇಂದ್ರಗಳನ್ನು ಇವತ್ತು ತಯಾರು ಮಾಡಿದರೆ, ಈ ಇಲಾಖೆಗೆ ಸಹಕಾರಿಯಾಗುತ್ತದೆ. ಇದಕ್ಕೆ ನೀರು ಕೊಟ್ಟಿರತಕ್ಕ ಹಣ ನೋಡಿದರೆ, ಇದು ಸಂಬಳ ಕೊಡುವುದಕ್ಕಾಗುತ್ತದೆಯೇ ವಿನಹ ಬೇರೆ ಯಾವುದೇ ಕೆಲಸಕಾರ್ಯಗಳಿಗೆ ಆಗುವುದಿಲ್ಲ. ಒಂದು ಜಾನುವಾರಿಗೆ ಔಷಧಿಗೆ 5 ಪೈಸೆ ಬರುತ್ತದೆ. ಈ 5 ಪೈಸೆಯಲ್ಲಿ ಹೇಗೆ ಮಾಡಬಹುದು ಎಂಬುದು ಗೊತ್ತಿಲ್ಲ. ಒಂದು ಹಸುವಿಗೆ ಖಾಯಿಲೆ ಬಂದರೆ ಎಷ್ಟು ಖರ್ಚಾಗುತ್ತದೆಂದು ರೈತರಿಗೆಲ್ಲರಿಗೂ ಸಾಮಾನ್ಯವಾಗಿ ಗೊತ್ತಿದೆ. ಆದರಿಂದಾಗಿ, ಈ ಸಂಶೋಧನೆಗಾಗಲೀ ಅಥವಾ ಬೇರೆಯದಕ್ಕಾಗಲೀ ಏನೂ ಕೊಡಲಿಲ್ಲ. ಹೊಸ ಆಸ್ಪತ್ರೆಗಳ ಮಂಜೂರಾತಿಗೆ ಕೂಡ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈಗಾಗಲೇ ತಾವು ಸಮಯ ಆಗಿದೆ ಎಂದು ಹೇಳುತ್ತಿದ್ದೀರಿ, ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ, ಒಟ್ಟಾರೆ, ಈ ಆಯವ್ಯಯ ಏನಿದೆ, ತಾವು ಸಮಯ ಆಗಿದೆ ಎಂದು ಹೇಳುತ್ತಿದ್ದೀರಿ, ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ, ಇದು ನಿರೀಕ್ಷಿತವಾದಂಥ ಬಜೆಟ್ ಅಲ್ಲ. ಜನರಿಗೆ ಇದು ಖುಷಿ ಕೊಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಾಕಷ್ಟು ಎಕ್ಸರ್‌ಸೈಜ್ ಮಾಡಿದ್ದರೆ, ಒಂದು ಒಳ್ಳೆಯ ಬಜೆಟ್ ಹೊರಕ್ಕೆ ತರಬಹುದಾಗಿತ್ತು. ಅವರು ಸಾಕಷ್ಟು ತೆರಿಗೆಯನ್ನು ಹಾಕಿದ್ದಾರೆ. ವಿಶೇಷವಾಗಿ ಅಡಿಕೆ, ಈ ಅಡಿಕೆ ಬೆಳೆ ಪ್ರದೇಶದಿಂದ ಬಂದಿರತಕ್ಕಂಥವನು ನಾನು. ನಿನ್ನೆ ದಿನ ಮಾನ್ಯ ಸದಾನಂದಗೌಡರೂ ಕೂಡ ಅದನ್ನು ಹೇಳಿದರು. ನಾವೆಲ್ಲಾ ಸೋತು ಸುಣ್ಣವಾಗಿದ್ದೇವೆ. ಮಾನ್ಯ ರಮಾನಾಥ್ ರೈರವರೂ ಕೂಡ ಆ ಪ್ರದೇಶದಿಂದ ಬಂದಿರತಕ್ಕಂಥವರು. ನಿಮ್ಮೆಲ್ಲರ ಇನ್‌ಫ್ಲೂಯೆನ್ಸ್ ಉಪಯೋಗಿಸಿ, 4 ಪರ್ಸೆಂಟ್ ಇದ್ದಂಥ ತೆರಿಗೆ ಹಣವನ್ನು ಒಂದೆರಡು ವರ್ಷದ ಅವಧಿಗೆ ಮನ್ನಾ ಮಾಡಿಸುತ್ತೇವೆಂದು ಮಾಡಿದರೆ ಒಳ್ಳೆಯದು. ಮಾನ್ಯ ಅಧ್ಯಕ್ಷರೇ, ಇವತ್ತು ಒಂದು ಕ್ವಿಂಟಾಲ್ ಅಡಿಕೆಗೆ ಹತ್ತು ಸಾವಿರ ರೂಪಾಯಿಗಳು. ಬೆಳೆದಿರತಕ್ಕಂಥ ರೈತ ಇವತ್ತು ನಾಲ್ಕು ನೂರು ರೂಪಾಯಿಗಳನ್ನು ಕೊಡಬೇಕಾಗಿದೆ. ಇಂಥ ಬೆಳೆ ಬಿದ್ದು ಹೋದಾಗಲೂ ಕೂಡ ನಮ್ಮ ರೈತರಿಂದ 300 ರಿಂದ 400 ರೂಪಾಯಿಗಳನ್ನು ನೀವು ವಸೂಲಿ ಮಾಡುತ್ತಾ ಇದ್ದೀರಿ. ಇದನ್ನು ಯಾವ ಕಾರಣಕ್ಕಾಗಿ ಕೊಡಬೇಕು? ನೀವು ಏನು ಸೌಲಭ್ಯಗಳನ್ನು ಕೊಡುತ್ತಾ ಇದ್ದೀರಿ. ಇವತ್ತು ಅಡಿಕೆ ಧಾರಣೆ ಕುಸಿದು, ದಯನೀಯವಾದಂಥ ಪರಿಸ್ಥಿತಿ ಇದ್ದರೂ ಕೂಡ ನೀವು 4 ಪರ್ಸೆಂಟ್ ತೆರಿಗೆ ಹಣವನ್ನು ಮನ್ನಾ ಮಾಡಿದರೆ, ಇಡೀ ಸಾವಿರಾರು ಕುಟುಂಬಗಳು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದರು. ಅದನ್ನೂ ಕೂಡ ಮಾಡಲಿಲ್ಲ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ, ಇದನ್ನು ಪ್ರಕಟಣೆ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಒಟ್ಟಾರೆ, ಜನರ ನಿರೀಕ್ಷೆಯನ್ನು ಹುಸಿ ಮಾಡಿರತಕ್ಕ ಬಜೆಟ್ ಎಂದು ಈ ಸಂದರ್ಭದಲ್ಲಿ ಹೇಳಿ, ಮಾತನಾಡಲು ಅವಕಾಶ ಮಾಡಿಕೊಟ್ಟಿರುವಂಥ ತಮಗೆ ಧನ್ಯವಾದಗಳನ್ನು ಅರ್ಪಿಸಿ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ (ಕೋಲಾರ): ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಮಂಡನೆ ನೋಡಿ, ಬಹಳ ಚೆನ್ನಾಗಿ ಬರುತ್ತದೆ, ಈ ರಾಜ್ಯದ ಜನತೆಯ ಆಶೋತ್ತರಗಳಿಗೆ ಸ್ಪಂದಿಸುತ್ತಾರೆ ಎನ್ನುವಂಥಾದ್ದನ್ನು ನಾನು ಚಿಂತನೆ ಮಾಡಿದ್ದೆ.

ಆದರೆ, ಅವರ ಬಜೆಟ್ ಮೇಲೆ ನನ್ನ ವಿಹಂಗಮ ನೋಟ ಬೀರಿದ ಮೇಲೆ ನನಗೆನ್ನಿಸಿತು, ಒಬ್ಬ ಅಜ್ಜಿಗೆ ರೇಷ್ಮೆ ಸೀರೆ ಕಟ್ಟಿದರೆ ಎಷ್ಟು ಸುಂದರವಾಗಿ ಕಾಣುತ್ತಾಳೆ, ಆ ತರಹ ಸುಂದರವಾಗಿ ಕಾಣುತ್ತದೆಯೋ ಎಂಬ ಭಾವನೆ ನನ್ನಲ್ಲಿ ಬಂತು. ಇದು ಸುಮಾರು 1375 ಕೋಟಿ ರೂ.ಗಳ ಕೊರತೆ ಬಜೆಟ್. ಮಾನ್ಯ ಮುಖ್ಯಮಂತ್ರಿಗಳು 1963ರಲ್ಲಿ ವಿರೋಧ ಪಕ್ಷದಲ್ಲಿದ್ದಾಗ ಕೆಲವು ವಿಷಯಗಳನ್ನು ಹೇಳಿದರು. ಅದರ ಆದ್ಯತೆಗಳು There are important fronts on which we have to critically examine on the achievements of the State Government. First I would take the Food Production. Secondly, the economic growth. Thirdly, industrial advancement. Unfortunately, on all the three counts, the efforts of the State Government have been frunitiess and have not benefited the common man of the State. ಎಂದು 1963 ರಲ್ಲಿ ಒಬ್ಬ ವಿರೋಧ ಪಕ್ಷದ ಸದಸ್ಯರಾಗಿ ಮಾತನಾಡಿದರು. ಅವರು ಅಂದುಕೊಂಡಿಲ್ಲ, ಅವರಿಗೆ ನಾನು ಮುಖ್ಯಮಂತ್ರಿಯಾಗುತ್ತೇನೆಂಬ ಭಾವನೆ ಇದ್ದಿದ್ದರೆ, ಈ ತರಹ ಮಾತನಾಡುತ್ತಿದ್ದರೋ ಇಲ್ಲವೋ ಎಂಬ ಭಾವನೆ. ಏಕೆಂದರೆ ಅವರ ಭಾಷಣದಲ್ಲಿ ಅಕ್ಷರಗಳ ಮತ್ತು ಪದಗಳ ಸರಮಾಲೆ ಬಹಳ ಸುಂದರವಾಗಿ ಬಂದಿದೆ. ಏಕೆಂದರೆ, ನಾವೆಲ್ಲಾ ಈ ಭಾಗದ ಹಳೇ ಮೈಸೂರಿನವರು. ಕನ್ನಡ ಅಷ್ಟು ಸುಂದರವಾಗಿ ಮಾತನಾಡಲು ಬರುವುದು ಕಡಿಮೆ. ಈ ಮಂಗಳೂರಿನಲ್ಲಿ ಭಾಷೆ ಚೆನ್ನಾಗಿರುತ್ತದೆ. ಅದು ಬಿಟ್ಟರೆ ಶಿವಮೊಗ್ಗದವರ ಭಾಷೆ ಚೆನ್ನಾಗಿರುತ್ತದೆ. ಆದರೆ ಇವರ ಭಾಷೆಯನ್ನು ನೋಡಿ ಮರುಳಾಯಿತೇ ಈ ರಾಜ್ಯದ ಜನಕ್ಕೆ ಎನ್ನುವಂಥ ಭಾವನೆ ನನಗಂತೂ ಬಂದಿದೆ. ಏಕೆಂದರೆ, ಅವರು ಈ ಆಯವ್ಯಯದಲ್ಲಿ ಭಾಷಣದ ಉದ್ದಕ್ಕೂ ಮಾತನಾಡಿದ ರೀತಿಯೇ ಬೇರೆ. ಈಗ ಉದಾಹರಣೆಗೆ, ಇವತ್ತು ನಮ್ಮ ಸೆಂಟ್ರಲ್ ಬಜೆಟ್‌ನ ಮಂತ್ರಿಗಳು ಅವರ ಆದ್ಯತೆಗಳನ್ನು ಹೇಳಿಕೊಂಡು ಹೋಗುತ್ತಾರೆ. ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟಿನಲ್ಲಿ ಏನೇನು ಇರಬೇಕು.

Amedment of the Milk and Milk Products. Removal of Small Scale Industries; Reservation related to various agricultural equipments. Decentralisation of the Export of Agricultural Commodities and Phasing out of remaining export control. Expansion of Future and Forward Trading to cover agriculture.

ಈ ತರಹ ಅದಕ್ಕೆ ಆದ್ಯತೆಗಳು ಎಷ್ಟೆಷ್ಟು ಇಟ್ಟುಕೊಂಡು ಹೋಗಬೇಕೆಂದು ಸೆಂಟ್ರಲ್ ಬಜೆಟ್‌ನಲ್ಲಿ ಆ ಆದ್ಯತೆ ಮೇಲೆ ಹೇಳುತ್ತಾ ಇದ್ದಾರೆ. ಅವರು ಕೆಲವು ಕೋಟಿ ರೂ.ಗಳನ್ನು one time settlement scheme for small loan accounts with outstanding principal balance... ಎಂದು ಎಷ್ಟೋ ಹೇಳಿಕೊಂಡು ಹೋಗಿರುತ್ತಾರೆ. ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್ ರೀಸರ್ಚ್, ಅದಕ್ಕೆ 775 ಕೋಟಿ ರೂ.ಗಳನ್ನು ಇಡುತ್ತೇವೆಂದು ಸೆಂಟ್ರಲ್ ಗವರ್ನಮೆಂಟ್‌ನವರು ಹೇಳುತ್ತಾರೆ. ಆದರೆ, ಇವರು ಯಾವುದಕ್ಕೂ ಒತ್ತು ಕೊಡದೇ, ಇವರದೇ ಆದಂಥ ಭಾಷಣ ಮಾಡಿಕೊಂಡು ಹೋಗಿದ್ದಾರೆ. ಇದರಲ್ಲಿ ಅವರೇ ಹೇಳಿದ ಹಾಗೆ, 1963ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಗಿನ ಸರ್ಕಾರಕ್ಕೆ ಹೇಳುತ್ತಾರೆ. It can be easily explained. I am

remined of the saying that the "people can be fooled for some times and some can be fooled for all times, but all the people cannot be fooled all the times." ಇದು ಮಾನ್ಯ ಮುಖ್ಯಮಂತ್ರಿಗಳು 1963ರಲ್ಲಿ 7ನೇ ತಾರೀಖು ಮಾರ್ಚ್ ತಿಂಗಳಲ್ಲಿ ಮಾಡಿದ ಭಾಷಣ. ಇವತ್ತು ಈ ರಾಜ್ಯದ ಜನತೆಗೆ, ಅದು ಮೋಸವೋ ಮಹಾಮೋಸವೋ ಎಂದು ಹೇಳಲು ಇಚ್ಛಿಪಡದೆ ಏನು ಅವರು ಗುರುತರವಾದಂಥ ದೃಷ್ಟಿ ಇತ್ತು ಬಜೆಟ್ ಮೇಲೆ, ಈ ಬಜೆಟ್ ಮಂಡನೆ ಮಾಡುವಾಗ ಜನಕ್ಕೆ ಏನೇನು ಮಾಡಬೇಕೆನ್ನುವಂಥಾದ್ದು ಹೇಳದೆ ಅವರು ನುಸುಳಿಕೊಡಿದ್ದಾರೆಂಬ ಭಾವನೆ ಎಂದು ನನಗಂತೂ ಅನ್ನಿಸುತ್ತದೆ. ಮಾನ್ಯ ದೇಶಪಾಂಡೆಯವರು, ಈ ಕಡೆ, ಆ ಕಡೆ ಎಲ್ಲಾ ಇದ್ದು ಅವರಿಗೆ ಬಹಳ ಪ್ರಾಕ್ಟೀಸ್ ಆಗಿರುವುದರಿಂದ, ಅವರು ಎಲ್ಲಿ ಹೋದರೂ ಡಿಫೆಂಡ್ ಮಾಡಿಕೊಳ್ಳುತ್ತಾರೆ. ನಮ್ಮಲ್ಲಿದ್ದಾಗ, ನಮ್ಮನ್ನು ಬಹಳ ಚೆನ್ನಾಗಿ ಡಿಫೆಂಡ್ ಮಾಡಿಕೊಳ್ಳುತ್ತಾ ಇದ್ದರು. ಆ ಕಡೆ ಹೋದಾಗ ಅವರನ್ನೂ ಡಿಫೆಂಡ್ ಮಾಡಿಕೊಳ್ಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : 1963ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂಬ ವಿಚಾರ ಹೇಳುತ್ತಿದ್ದೀರಿ. ತಮಗೆ ಗೊತ್ತಿರಬೇಕು, ನೀವು ಇವತ್ತು 21ನೇ ಶತಮಾನದಲ್ಲಿದ್ದೀರಿ. ಈ ಶತಮಾನದಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ಈ ಬದಲಾವಣೆಗಳ ಪ್ರಕಾರ, ನೀವು ನಿಮ್ಮ ನೀತಿಗಳು, ನಿಮ್ಮ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳಲಿಲ್ಲವೆಂದರೆ ಭಾರಿ ಹಿಂದುಳಿಯುತ್ತೀರಿ. ಒಂದು ಕಾಲದಲ್ಲಿ ಅಮೇರಿಕಾಕ್ಕೆ ಹೋಗಬೇಕಾದರೆ 4 ದಿನ 8 ದಿನ ಪ್ರಯಾಣ ಮಾಡಬೇಕಿತ್ತು. ಆದರೆ ಇವನು ನೀವು ಅಮೇರಿಕಾಕ್ಕೆ ಒಂದು ಕ್ಷಣದಲ್ಲಿ ಹೋಗಿಬಿಡುತ್ತೀರಿ. ವಿಶ್ವ ಒಂದು ಸಣ್ಣ ಹಳ್ಳಿಯಾಗಿದೆ. ಅಲ್ಲಿಯೂ ಕಾಂಪಿಟಿಷನ್ ಆಗಬೇಕು. ಅಲ್ಲಿಯೂ ಕ್ವಾಲಿಟಿ ಇರಬೇಕು. ಹಾಗಾಗಿ ಈ ತರಹದ ವಿಚಾರ 1963ರಲ್ಲಿ ಮಾಡಲಿಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ. ಈ ವಿಚಾರವನ್ನು ತಾವು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಅವರ ಭಾಷಣದಲ್ಲಿ ಆದ್ಯತೆಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಮೊದಲನೆಯದಾಗಿ, ಕೃಷಿ ವಲಯಗಳ ಬಗ್ಗೆ ಹೇಳುವಾಗ, "ನಾನು ಈ ವಲಯಗಳಿಗೆ ಸದಾ ಅತಿ ಹೆಚ್ಚು ಆದ್ಯತೆ ನೀಡುತ್ತಿದ್ದೇನೆ" ನಮ್ಮ ಸರ್ಕಾರ ಕೃಷಿಗಾಗಿ 5,100 ಕೋಟಿ ರೂಪಾಯಿಗಳ ವೆಚ್ಚ ಮಾಡುತ್ತಿರುವುದನ್ನು ಮಾನ್ಯ ಸದಸ್ಯರುಗಳು ಮೆಚ್ಚುತ್ತಾರೆಂದು ನಾನು ಭಾವಿಸಿದ್ದೇನೆ ಈ ಮೊತ್ತದಲ್ಲಿ ಸುಮಾರು 2,000 ಕೋಟಿ ರೂ. ವಿದ್ಯುತ್ ಸಹಾಯಧನ 2,900 ಕೋಟಿ ರೂ. ನೀರಾವರಿ ವೆಚ್ಚ ಸೇರಿದೆ. ಕೃಷಿ ಎಂದರೆ ಬರೀ ವಿದ್ಯುತ್‌ಗೆ 2 ಸಾವಿರ ಕೋಟಿ ರೂ. ಸಹಾಯಧನ ಕೊಟ್ಟರೆ ಮುಗಿದುಹೋಯಿತೇ? ಕೃಷಿ ವಲಯಗಳ ಆದ್ಯತೆಗಳ ವಿಷಯದಲ್ಲಿ ನಮ್ಮ ರಾಜ್ಯದ ಬಜೆಟ್‌ಗೂ, ರಾಷ್ಟ್ರದ ಬಜೆಟ್ ಸ್ಪೀಚ್‌ಗೂ ವ್ಯತ್ಯಾಸಗಳೇನು? ಇದರ ವ್ಯತ್ಯಾಸವನ್ನು ನಾನು ಹೇಳುತ್ತಾ ಇದ್ದೇನೆ. ಅವರು ಹೇಳುತ್ತಾರೆ, ಕ್ರಾಪ್ ಇನ್‌ಷೂರೆನ್ಸ್‌ಗೆ ಹೀಗೆ ಮಾಡಿದ್ದೇವೆ, ಇರಿಗೇಷನ್‌ಗೆ ಹೀಗೆ ಮಾಡಿದ್ದೇವೆ, ಅಗ್ರಿಕಲ್ಚರ್ ಎಕ್ಸ್‌ಟೆನ್‌ಷನ್‌ಗೆ ಹೀಗೆ ಮಾಡಿದ್ದೇವೆ. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಶನ್‌ಗೆ ಇಷ್ಟು ಕೋಟಿ ರೂ. ಇಟ್ಟಿದ್ದೇವೆ. ಅಗ್ರಿಕಲ್ಚರ್ ಎಕ್ಸ್‌ಪೋರ್ಟ್‌ಗೆ ಇಷ್ಟು ಕೋಟಿ ರೂ.ಗಳನ್ನು ಇಟ್ಟುಕೊಡಿದ್ದೇವೆ, ರೂರಲ್ ಡೆವಲಪ್‌ಮೆಂಟ್‌ಗೆ ಇಷ್ಟು ಸಾವಿರ ಕೋಟಿ ರೂ.ಗಳನ್ನು ಇಟ್ಟುಕೊಂಡು ಬಂದಿದ್ದೇವೆ. ರೂರಲ್ ಎಲೆಕ್ಟ್ರಿಫಿಕೇಷನ್‌ಗೆ

ಇಪ್ಪು ಸಾವಿರ ಕೋಟಿ ರೂ.ಗಳನ್ನು ಇಟ್ಟು ಕೊಂಡಿದ್ದೇವೆ ರೂರಲ್ ಎಂಪ್ಲಾಯ್ಮೆಂಟ್‌ಗೆ ನಾವು ಈ ತರಹ ಸ್ಕೀಮ್‌ಗಳನ್ನು ಹಾಕಿಕೊಂಡಿದ್ದೇವೆ, ಮೇನೇಜ್‌ಮೆಂಟ್ ಆಫ್ ಫುಡ್ ಎಕಾನಮಿ ಈ ತರಹ ಮಾಡಿಕೊಂಡಿದ್ದೇವೆ, ರೂರಲ್ ಇನ್‌ಸ್ಟ್ರಾಕ್ಚರ್‌ಗೆ ಈ ತರಹ ಮಾಡಿಕೊಂಡಿದ್ದೇವೆ, ಪವರ್ ಸೆಕ್ಟಾರ್‌ನಲ್ಲಿ ಈ ತರಹ ಮಾಡಿಕೊಂಡಿದ್ದೇವೆ, ರೋಡ್ಸ್‌ಗೆ ಈ ತರಹ ಮಾಡಿಕೊಂಡಿದ್ದೇವೆ, - ಮುಂತಾಗಿ ಅವರು ಹೇಳಿಕೊಂಡು ಹೋಗಿದ್ದಾರೆ. ಆದರೆ ನಮ್ಮನ್ನು ತಪ್ಪುದಾರಿಗೆ ಎಳೆಯುವಂತಹ ರೀತಿಯಲ್ಲಿ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದಾರೆ. ಇವೊತ್ತು ಅವರು ಎಲ್ಲಾ ಆದ್ಯತೆಗಳನ್ನು ಮರೆತಿದ್ದಾರೆ. ಚುನಾವಣೆ ಮ್ಯಾನಿಫೆಸ್ಟೋದಲ್ಲಿ ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಬಹಳ ಹೇಳುವುದಿತ್ತು. ಆದರೂ ಅದರಲ್ಲಿ ಕೆಲವನ್ನು ಹೇಳಬಯಸುತ್ತೇನೆ. ಬಹಳ ಮುಖ್ಯವಾಗಿ ಕರೆಂಟ್ ವಿಚಾರದಲ್ಲಿ ನಮ್ಮ ನಾಯಕರಾದಂಥ ಸಿಂಧ್ಯಾರವರು ಮಾತನಾಡಿದ್ದಾರೆ. ಮ್ಯಾನಿಫೆಸ್ಟೋದಲ್ಲಿ ಕರ್ನಾಟಕ ವಿದ್ಯುತ್ ನಿಗಮವು ಸತತವಾಗಿ ಅನುಭವಿಸುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಗ್ರಾಹಕರಿಗೆ ವಿತರಿಸಲಾಗುತ್ತಿರುವ ವಿದ್ಯುತ್ ದರವು ಸಮರ್ಪಕವಾಗಿರುವಂತೆ ದುಬಾರಿಯಾಗದಂತೆ ನೋಡಿಕೊಳ್ಳಲು ಮತ್ತು ವಿದ್ಯುತ್ ಸರಬರಾಜಿನಲ್ಲಿ ಉಂಟಾಗುತ್ತಿರುವ ಏರುಪೇರುಗಳನ್ನು ಸರಿಪಡಿಸಿ, ಪೋಲಾಗುತ್ತಿರುವ ವಿದ್ಯುತ್ ಪ್ರಮಾಣವನ್ನು ಕಡಿಮೆ ಮಾಡಿ, ಉತ್ಪಾದನೆ ಹಾಗೂ ಸರಬರಾಜಿನಲ್ಲಿರುವ ಅವ್ಯವಸ್ಥೆಯನ್ನು ಸರಿಪಡಿಸುವ ಬಗ್ಗೆ ಈಗಾಗಲೇ ಅಸ್ತಿತ್ವದಲ್ಲಿರುವ ರೆಗ್ಯುಲೇಟೆಡ್ ಕಮಿಷನ್‌ಗೆ ಮತ್ತಷ್ಟು ಅಧಿಕಾರವನ್ನು ನೀಡಲಾಗುವುದು ಗ್ರಾಹಕರಿಗೆ ನಿರಂತರ ಮತ್ತು ಉತ್ತಮ ಮಟ್ಟದ ವಿದ್ಯುತ್ ಸರಬರಾಜು ನೀಡುವಂತೆ ಮಾಡಲು ಸಕಲ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಸ್ವಾಮಿ, ನಮಗೆ ಕರೆಂಟ್ ಎಷ್ಟು ಗಂಟೆಗಳ ಕಾಲ ಬರುತ್ತಿದೆ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಿರಿಯ ಸದಸ್ಯರು. ಮಾನ್ಯ ಸಿಂಧ್ಯರವರು ಬಜೆಟ್ ಮೇಲಿನ ಭಾಷಣದಲ್ಲಿ ತುಂಬಾ ಚೆನ್ನಾಗಿ ಹೇಳಿದ್ದಾರೆ. ಇವೊತ್ತು ರಾಜ್ಯದಲ್ಲಿ ಭೀಕರವಾದ ಬರಗಾಲವಿದೆ. ನಮ್ಮ ಡಿಫೆಂಡೆನ್ಸ್ ಹೈಡಲ್ ಮೇಲೆ ಇದೆ. ನಮ್ಮಲ್ಲಿ ಎಲ್ಲಾ ಡ್ಯಾಮ್‌ಗಳು ಖಾಲಿಯಾಗಿವೆ. ಇಂಥ ಪರಿಸ್ಥಿತಿಯಲ್ಲಿ ಯಾರಿದ್ದರೂ ಕೂಡ ಇದು ಕಷ್ಟದ ವಿಚಾರವೆಂದು ಮಾನ್ಯ ಸಿಂಧ್ಯರವರು ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ, ಈ ವಿಚಾರವನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಚುನಾವಣಾ ಪ್ರಣಾಳಿಕೆಯಲ್ಲಿ ಕೊಡುತ್ತೇವೆ ಎಂದು ಹೇಳಿದ್ದೇವೆ. ಆದರೆ ನಿಸರ್ಗ ನಮ್ಮ ಜೊತೆ ಸಹಕಾರ ಮಾಡದಿದ್ದಲ್ಲಿ ಕಷ್ಟವಾಗುತ್ತದೆ. 1985ರಲ್ಲಿ ಕೂಡ ಇಂಥ ಪರಿಸ್ಥಿತಿ ಬಂದಿತ್ತು. ನಿಸರ್ಗದ ಸಹಕಾರವಿಲ್ಲದಿದ್ದರೆ ಯಾರಿಗೂ ಏನೂ ಮಾಡುವುದಕ್ಕಾಗುವುದಿಲ್ಲ. ಆದರೂ ಎಫರ್ಟ್ಸ್ ಮಾಡಬೇಕು. ಈಗ ಡಿಸ್ಟ್ರಿಬ್ಯೂಷನ್ ಸಿಸ್ಟಂ, 100 ಕೆ.ವಿ. ಸ್ಟೇಷನ್ಸ್, ಇನ್‌ಸ್ಟ್ರಕ್ಚರ್ಸ್ ಬಿಲ್ಡ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡಿಲ್ಲದಿದ್ದರೆ ಅದನ್ನು ಹೇಳಿ. ಆ ಕುರಿತು ಸಾಕಷ್ಟು ಪ್ರಯತ್ನಗಳು ಆಗಿವೆ. ವಿದ್ಯುಚ್ಛಕ್ತಿ ಹೈಡಲ್‌ನಲ್ಲಿ ಜನರೇಟ್ ಆಗಬೇಕು. ಅಲ್ಲಿ ನೀರಿಲ್ಲ. ಹಾಗಾಗಿ ಕರೆಂಟ್ ಎಲ್ಲಿಂದ ಬರಬೇಕು? ಇಂತಹ ಪರಿಸ್ಥಿತಿ ಯಾವಾಗಲೂ ನೋಡಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ದೇಶಪಾಂಡೆಯವರು ನಮ್ಮಲ್ಲಿ ಮಂತ್ರಿಗಳಾಗಿದ್ದಾಗ ಇದೇ ತರಹ ಆಗಿತ್ತು. ನದಿಗಳಲ್ಲಿ ನೀರು ಬಂದಿರಲಿಲ್ಲ. ಹೈಡಲ್ ಉತ್ಪಾದನಾ ಘಟಕಗಳಲ್ಲಿನ ಡ್ಯಾಂಗಳು ತುಂಬಿರಲಿಲ್ಲ. ಆಗ ನಮ್ಮ ಸರಕಾರವಿದ್ದಾಗ ನೀವೇ ಫ್ಯಾಕ್ಟರಿಗಳಿಗೆ,

ಪಟ್ಟಣಗಳಿಗೆ ಕರೆಂಟ್‌ನ್ನು ಕಡಿಮೆ ಮಾಡಿ ಹಳ್ಳಿಗಳಿಗೆ ಕೊಟ್ಟಿದ್ದಿರಿ. ಅದನ್ನು ಇವೊತ್ತು ಏಕೆ ಮಾಡುತ್ತಿಲ್ಲ? ಆಂಧ್ರದಿಂದ ಮಹಾರಾಷ್ಟ್ರದಿಂದ ಕರೆಂಟ್‌ನ್ನು ಕೊಂಡು ತಂದು ಹಳ್ಳಿಗಳಿಗೆ ಕೊಟ್ಟಿದ್ದಿರಿ. ಈಗ ಕೇವಲ ಪಾರ್ಟಿ ಬದಲಾಯಿಸಿಕೊಂಡ ತಕ್ಷಣ ಹೇಗೆ ಮಾಡುವುದೇ?

ಶ್ರೀ ಆರ್.ವಿ. ದೇಶಪಾಂಡೆ : ನಾವು ಛತ್ತೀಸ್‌ಗಡದಿಂದ ಕರೆಂಟ್‌ನ್ನು ತರುತ್ತಾ ಇದ್ದೇವೆ ... ಎಲ್ಲಾ ಕಡೆಯಿಂದ ತರುವ ಪ್ರಯತ್ನ ನಡೆಯುತ್ತಿದೆ. ಸೆಂಟ್ರಲ್ ಸೆಕ್ಟಾರ್‌ನಿಂದ ಸೆಂಟ್ರಲ್ ಅಲೋಕೇಷನ್ ಮತ್ತಿತರ ಕಡೆಗಳಿಂದ ಕರೆಂಟ್ ತರುವ ಪ್ರಯತ್ನ ನಡೆಯುತ್ತಿದೆ. ಕರೆಂಟ್ ಕೈಗಾರಿಕೆಗಳಿಗೆ ಬೇಕು, ರೈತರಿಗೆ, ನಾಗರೀಕರಿಗೆ ಬೇಕು, ಎಲ್ಲರಿಗೂ ಬೇಕು. ಹಾಗಾಗಿ ಆ ದಿಕ್ಕಿನಲ್ಲಿ ಎಲ್ಲಾ ಪ್ರಯತ್ನಗಳೂ ನಡೆಯುತ್ತಾ ಇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಉಪಾಧ್ಯಕ್ಷರೇ, ಮಳೆ ಬರಲಿಲ್ಲ, ಡ್ಯಾಂಗಳು ತುಂಬಲಿಲ್ಲ. ಕರೆಂಟ್‌ನ ಉತ್ಪತ್ತಿ ಬಗ್ಗೆ ನಿಮಗೆ ಜೂನ್, ಜುಲೈನಲ್ಲಿಯೇ ಮಾಹಿತಿಗಳು ಸಿಗುತ್ತವೆ. ಸರಕಾರಕ್ಕೆ ಮಾಹಿತಿಗಳು ಸಿಕ್ಕಿದೆ. ಹಿಂಗಾರು ಮಳೆಯು ಹಳೇ ಮೈಸೂರು ಕಡೆಯೇ ಬರುವುದು. ನೀವು ಅಭಾವವನ್ನು ನೋಡಿಕೊಂಡು ಅವೋತ್ತೇ ಛತ್ತೀಸ್‌ಗಡ ಮತ್ತಿತರ ಕಡೆಗಳಿಗೆ ಹೋಗಿ ಪಡೆಯಲು ಪ್ರಯತ್ನಿಸಬಹುದಾಗಿತ್ತು, ಓರಿಸ್ಸಾಗೆ ಹೋಗ ಬಹುದಾಗಿತ್ತು. ಕೇಂದ್ರಕ್ಕೆ ಹೋಗಿ ಈ ತರಹ ಪರಿಸ್ಥಿತಿಯಾಗುತ್ತದೆ, ಸಹಕಾರ ಮಾಡಿ ಎಂದು ಚಿಂತನೆ ಮಾಡಲು ಆಗಲಿಲ್ಲವೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಆಗ ಸಬ್‌ಕಮಿಟಿಯಲ್ಲಿ ತಾವುಗಳೂ ಕೂಡ ಇದ್ದಿರಿ. ಮಾನ್ಯ ಸಿದ್ಧರಾಮಯ್ಯನವರು ಅಧ್ಯಕ್ಷರಾಗಿದ್ದರು. ಅದನ್ನು ತೆಗೆದು ನೋಡಿ. ಕೆಪಿಟಿಸಿಎಲ್‌ಗೆ ರೂರಲ್ ಸಬ್ಸಿಡಿಯಲ್ಲಿ ಪ್ರತಿ ತಿಂಗಳೂ 80 ರಿಂದ 100 ಕೋಟಿ ರೂ.ಗಳವರೆಗೆ ಬಿಡುಗಡೆ ಮಾಡುತ್ತಾ ಇದ್ದೆವು. ಈಗ ನೀವು ಯಾವ ಅಶ್ಯೂರೆನ್ಸ್ ಕೊಟ್ಟಿದ್ದೀರಿ? ಪಿಪಿಎಗಳು ಆದಮೇಲೆ ರೂರಲ್ ಸಬ್ಸಿಡಿಯು 800 ಕೋಟಿ ರೂ.ಗಳಿಂದ 2000 ಕೋಟಿ ರೂ.ಗಳ ವರೆಗೆ ಏರಿದೆ. ಈ 2000 ಕೋಟಿ ರೂ.ಗಳಲ್ಲಿ ನೀವು ಎಷ್ಟು ರಿಲೀಸ್ ಮಾಡಿದ್ದೀರಿ? ಕೇವಲ 800 ಕೋಟಿರೂ.ಗಳಷ್ಟು ಮಾತ್ರ ರಿಲೀಸ್ ಮಾಡಿದ್ದೀರಿ. ಈಗ ಇರತಕ್ಕಂಥಾದ್ದು ಏನು? ಮಾರ್ಚ್, ಏಪ್ರಿಲ್, ಮೇ, ಜೂನ್, ಈ ನಾಲ್ಕು ತಿಂಗಳಲ್ಲಿ ನಿಮ್ಮಲ್ಲಿ ನಾವು ಕೇಳಿದ ಬೇಡಿಕೆಗಳಾದರೂ ಏನು? About Rs. 20 crore for 100 MGWs. What we require is Rs. 120crore for which you yourselves were party for the release of that amount. Why you are not doing it?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಈ ವರ್ಷದ ಅಂದರೆ, ನಾವು ಮುಂಗಡ ಪತ್ರ ಮಂಡಿಸಿದ್ದೇವೆ, ಅಲ್ಲಿ 2300 ಕೋಟಿ ರೂ.ಗಳನ್ನು ಪ್ರೊವಿಷನ್ ಮಾಡಿದ್ದೇವೆ. Current year rural subsidy is going to be about Rs. 2,800 crore. ಏಕೆಂದರೆ ಡಿಫಿಸಿಟ್ ಇದೆ. ನಮ್ಮ ಕಡೆ ವಿದ್ಯುಚ್ಛಕ್ತಿ ಇಲ್ಲ. ಬೇರೆ ಕಡೆಯಿಂದ ವಿದ್ಯುಚ್ಛಕ್ತಿ ತರುತ್ತಾ ಇದ್ದೇವೆ. ಅದಕ್ಕೆ ನಾವು ಹೈರೇಟ್ ಕೊಡುತ್ತಾ ಇದ್ದೇವೆ. ಮಾರ್ಚ್ ಕೊನೆಯೊಳಗೆ ಎಷ್ಟು ಹಣ ರಿಲೀಸ್ ಆಗಿದೆ ಅದರ ವಿವರಗಳನ್ನು ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, I don't know whether you have been properly briefed or not. The fact of the matter is that only you have released so far Rs. 800 crore. This is number one. Number two ನಿಮಗೆ ಕರೆಂಟ್ ಶಾರ್ಟೇಜ್ ಇದೆ ಎಂದು ನವೆಂಬರ್, ಡಿಸೆಂಬರ್‌ನಲ್ಲಿ ಗೊತ್ತಿದ್ದರೂ ಕೂಡ ಇದುವರೆಗೂ 100 ಮೆಗಾವಾಟ್ ಪವರ್‌ಗೆ ಮಾತ್ರ ನೀವು ತೆಗೆದುಕೊಂಡಿದ್ದೀರೇ ಹೊರತು, ಇನ್ನೂ 100 ಮೆ.ವಾ ನೀವು ಛತ್ತೀಸ್‌ಗಡರವರ ಹತ್ತಿರ ತೆಗೆದುಕೊಳ್ಳಲು ನೆಗೋಷಿಯೇಟ್ ಮಾಡುತ್ತಾ ಇದ್ದೀರಿ ಮತ್ತು ಇನ್ನೂ 100 ಮೆ.ವ್ಯಾ.ಗೆ ಓಪನ್ ಟೆಂಡರನ್ನು ಕರೆದಿದ್ದೀರಿ. ಅದನ್ನು ಬಿಟ್ಟರೆ Why you have not done it four months back? Why you made the thousands of farmers' family to suffer?

ಶ್ರೀ ಆರ್.ವಿ. ದೇಶಪಾಂಡೆ : ಛತ್ತೀಸ್‌ಗಡಕ್ಕೆ ಕಳೆದ ಆರು ತಿಂಗಳ ಹಿಂದೆ ಹೋಗಿ, ಚರ್ಚಿಸಿದ್ದೇವೆ. ಕೇರಳ, ಆಂಧ್ರಪ್ರದೇಶ ಮಹಾರಾಷ್ಟ್ರಗಳಿಂದಲೂ ವಿದ್ಯುತ್ ತರಲು ಪ್ರಯತ್ನ ಮಾಡಿದ್ದೇವೆ. We are getting power. Those details if you want, we with give you.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರೂ ಕೂಡ ಇದ್ದಾರೆ. ನೀವು ಡಿಮ್ಯಾಂಡ್ ಸರ್ವೇ ಮಾಡಿದಾಗ ಎಷ್ಟು ಬೇಕಾಗುತ್ತದೆ ಎಂಬುದು ಗೊತ್ತಾಗುತ್ತದೆ. ಪ್ರತಿ ತಿಂಗಳೂ ಡಿಮ್ಯಾಂಡ್ ಸರ್ವೆಯನ್ನು ಮಾಡಬೇಕು; ಎಷ್ಟು ಅವಶ್ಯಕತೆ ಇದೆ ಎಂಬುದನ್ನು ನೋಡಬೇಕು. ಈಗ ಪ್ರತಿದಿನ ಬೇಕಾದುದು ಸುಮಾರು 27000 ಮಿಲಿಯನ್ ಯುನಿಟ್ಸ್. ಆದರೆ ಪ್ರೊಡಕ್ಷನ್ ಇರುವುದು 240000 ಮಿಲಿಯನ್ ಯೂನಿಟ್ಸ್. 3000 ಮಿಲಿಯನ್ ಯೂನಿಟ್ಸ್ ಶಾರ್ಟೇಜ್ ಇದೆ ಎಂಬುದು ನವಗೂ ಅರ್ಥವಾಗುತ್ತದೆ. ಮಾನ್ಯ ದೇಶಪಾಂಡೆಯವರು ನಮಗೆ ತಿಳಿಯದೆ ಇದ್ದಕ್ಕಿದ್ದ ಹಾಗೆ ದಿಢೀರ್ ಆಗಿ ಆಯಿತು ಎಂದು ಹೇಳುತ್ತಾರೆ. ಅದು ತಪ್ಪು. ಈಗ ಓರಿಸ್ಸಾದಿಂದ ಕರೆಂಟ್ ತರಲು ಸಿಸ್ಟಂ ಎಲ್ಲಿದೆ? ಟ್ರಾನ್ಸಿಮಿಷನ್ ಅಲ್ಲಿಂದ ಹೇಗೆ ಆಗುತ್ತದೆ? ಬೆಂಕಿ ಮನೆಗೆ ಅಂಟಿ ಕೊಂಡಾಗ ಬಾವಿ ತೋಡಿದ ಹಾಗೆ ಮಾನ್ಯ ದೇಶಪಾಂಡೆಯವರು ಮಾತನಾಡುತ್ತಿದ್ದಾರೆ. ಅವರು ಹಿರಿಯ ಸಚಿವರಾಗಿ ಈ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ವಿದ್ಯುಚ್ಛಕ್ತಿಯು ಓರಿಸ್ಸಾದಲ್ಲಿ ಸರ್‌ಪ್ಲಸ್ ಇದೆ ಛತ್ತೀಸ್‌ಗಡದಲ್ಲಿ ಸರ್‌ಪ್ಲಸ್ ಇದೆ. ಅಲ್ಲಿಂದ ತರಲು ನೀವುಗಳು ಹೇಳಿದ ಸಮಸ್ಯೆಯಿದೆ. ಟ್ರಾನ್ಸ್‌ಮಿಷನ್‌ಲೈನ್ಸ್‌ನ ಡಿಫಿಕಲ್ಟಿ ಇದೆ. ನೀರಿಲ್ಲದೆ ಪವರ್ ಜನರೇಟ್ ಆಗುವುದಿಲ್ಲ. ಮಳೆ ಆಗಿಲ್ಲ, ಹಾಗಾಗಿ fairness actually they will try to take more.

Sri B.N. Bachhe Gowda : As you feel shortage, you could have foreseen shortage of power. What is the central grid supply?

ಶ್ರೀ ಆರ್.ವಿ. ದೇಶಪಾಂಡೆ : ಸೆಂಟ್ರಲ್‌ನವರನ್ನು ನಾವು ಬ್ಲೇಮ್ ಮಾಡುತ್ತಾ ಇಲ್ಲ. ಮಾನ್ಯ ಸುರೇಶ್ ಪ್ರಭುರವರು ಸೆಂಟ್ರಲ್ ಪವರ್ ಮಿನಿಸ್ಟರ್ ಇಲ್ಲದೆ ಬಂದಾಗ ನಾವೇ ಹೋಗಿ ಮನವಿ ಮಾಡಿಕೊಂಡು ಸೆಂಟ್ರಲ್‌ಗ್ರಿಡ್‌ನಲ್ಲಿ ಸ್ವಲ್ಪ ಸೇವಿಂಗ್ಸ್ ಇದೆ, Please give us ಎಂದು ಕೇಳಿದ್ದೇವೆ He said I will examine it is on record.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಇಲ್ಲಿ ಪವರ್ ಮಿನಿಸ್ಟರ್ ಇದ್ದಾರೆ. ಈ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ ಎಂದು ಕೇಳಿದ್ದೆ. Let there be a white paper. ಶ್ವೇತಪತ್ರವು ಬರಲಿ. on the position of power in the State.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ವಾಸ್ತವಾಂಶಗಳನ್ನು ಮುಚ್ಚಿಡುವುದು ಏಕೆ? ನೀವು ಈ ವಿಷಯವನ್ನೂ ಜೂನ್, ಜುಲೈನಲ್ಲಿಯೇ ಯೋಚನೆ ಮಾಡಬಹುದಾಗಿತ್ತು, ಚಿಂತನೆ ಮಾಡಬಹುದಾಗಿತ್ತು. ಈ ಸಾರಿ ನಮಗೆ ಬೇಸಿಗೆಯಲ್ಲಿ ಕರೆಂಟ್ ಅಭಾವವಾಗುತ್ತದೆ, ಅದನ್ನು ಎದುರಿಸಲು ಏನೇನು ಮಾಡಬೇಕೆಂದು ಯೋಚಿಸಬೇಕಾಗಿತ್ತು. ನೀವು ರೈತರು ಎಲ್ಲಾ ರೀತಿಯಲ್ಲಿ ಸರ್ವನಾಶ ಆದ ಮೇಲೆ ಈವತ್ತು

ಶ್ರೀ ಆರ್.ವಿ. ದೇಶಪಾಂಡೆ : ಜೂನ್‌ನಲ್ಲಿ ಹೇಗೆ ಚಿಂತನೆ ಮಾಡುವುದು? ಆಗ ಮಳೆಗಾಲವಲ್ಲವೇ? ಚಿಂತನೆಯನ್ನು ಸೆಪ್ಟಂಬರ್, ಅಕ್ಟೋಬರ್‌ನಲ್ಲಿ ಮಾಡಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಈಗ, ನೀವು ಹೇಳಿದಂತೆ ಆಗಲಿ. ಈಗ ಸೆಪ್ಟಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ಆಯಿತು. ಇಷ್ಟು ತಿಂಗಳು ನಿಮಗೆ ಸಾಕಾಗುವುದಿಲ್ಲವೇ? ಆಗ ಏನು ಮಾಡುತ್ತಾ ಇದ್ದಿರಿ? ಏಕೆ ನೀವು ಚಿಂತನೆ ಮಾಡಿಲ್ಲ? ಸಂಬಂಧಪಟ್ಟ ಮಂತ್ರಿಗಳು ಹಾಗೂ ಅಧಿಕಾರಿಗಳು ಈ ಬಗ್ಗೆ ಏಕೆ ಯೋಚನೆ ಮಾಡಿಲ್ಲ?

ಇವತ್ತು ನೀವಿದನ್ನು ಬರೀ ಡಿಫೆನ್ಸ್ ಮಾಡಿಕೊಳ್ಳಲು ಹೋಗುವಿರೇ ವಿನಾ ಅವತ್ತು ಯಾಕೆ ಯೋಚನೆ ಮಾಡಲಿಲ್ಲ? ನೀವು ಅದೇ ಮಂತ್ರಿಗಳಾಗಿದ್ದಾಗ ಎಲ್ಲಿಂದಲೋ ಕರೆಂಟ್ ತಂದು ರೈತರಿಗೆ ಕೊಟ್ಟಿರಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ದೇಶಪಾಂಡೆಯವರು ಹಿಂದೆ ಸಚಿವರಾಗಿದ್ದಾಗ ಅನೇಕ ಪ್ರಾಜೆಕ್ಟ್ಸ್‌ಗೆ ಸ್ಟ್ಯಾಚ್ಯುಟರಿ ಕಾಂಪ್ಲಯನ್ಸ್ ಎಲ್ಲಾ ನೀಡಲಾಗಿತ್ತು. ಅದನ್ನೆಲ್ಲಾ ಬಿಟ್ಟು ಹೊಸ ಪ್ರಾಜೆಕ್ಟ್ಸ್‌ಗೆ ಯಾಕೆ ಕೈ ಹಾಕಿದಿರಿ? ಅದನ್ನೇ ಮುಂದುವರೆಸಿಕೊಂಡು ಹೋಗಿದ್ದಾರೆ ಇಷ್ಟು ಹೊತ್ತಿಗೆ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿತ್ತು. ನಿಮಗೆ ಗೊತ್ತಿದೆಯಲ್ಲಾ, ಎಲ್ಲಾ ನಮ್ಮ ಭಾಗದಲ್ಲಿ ಒಂದೆರಡಕ್ಕೆ ಕೊಟ್ಟಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಮೊನ್ನೆ ಕೇಂದ್ರದ ಪವರ್ ಮಿನಸ್ಟ್ ಶ್ರೀ ಸುರೇಶ್ ಪ್ರಭುರವರೂ ಸಹ ಸ್ಟೇಟ್‌ಮೆಂಟ್ ಮಾಡಿದ್ದರು: ಹಲವಾರು ರಾಜ್ಯಗಳಿಗೆ ಪವರ್ ಪ್ರಾಜೆಕ್ಟ್ ಸ್ಯಾಂಕ್ಷನ ಆದುವು. ಮೆಟೀರಿಯಲ್ ಆಗಿದ್ದು ಇಂಪ್ಲಿಮೆಂಟ್ ಆಗಿದ್ದ very few you take TamilNadu, You take Andra; or you take any state.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : ದೀಪಕ್ ಪಾರೇಖ್ ಕಮಿಟಿ ಮಾಡಿ ಎಸ್ಕೋ ಕೊಡುವುದಿಲ್ಲ ಎಂದು ತೀರ್ಮಾನ ಮಾಡಿದರು. ನಿಮಗೆ ಏರ್‌ಪೋರ್ಟ್‌ಗೆ ಗ್ಯಾರಂಟಿ ಕೊಡಲಿಕ್ಕೆ ಆಗುತ್ತದೆ. ಹಿಂದೆ ಕೆಲವು ಪ್ರಾಜೆಕ್ಟ್ಸ್‌ಗೆಲ್ಲಾ ಕೊಟ್ಟಿರಿ. ಉಳಿದ ಪ್ರಾಜೆಕ್ಟ್‌ಗೆ ಸ್ಯಾಚುಟರಿ ಕ್ಲಿಯರೆನ್ಸ್ ತೆಗೆದುಕೊಂಡ ಮೇಲೆ ಏತಕ್ಕೆ ಕೊಡಲಿಕ್ಕಾಗಲಿಲ್ಲ?

ಶ್ರೀ ಕೆ.ಎಂ. ಶ್ರೀನಿವಾಸಗೌಡ ಕುದುವನಹಳ್ಳಿ : ನಿಮ್ಮ ನೀತಿ ಫೇಲ್ ಆಗಿದೆ ಎನ್ನಿರಿ. ರೈತರನ್ನು ಸರ್ವನಾಶ ಮಾಡಿದ್ದೇವೆ ಎನ್ನಿರಿ, ನಿಮ್ಮ ಹತ್ತಿರ ಕಾಸಿಲ್ಲ; ಕಾಸಿದ್ದಿದ್ದರೆ ಕೊಡುಕೊಳ್ಳಬಹುದಾಗಿತ್ತು. ಅದು ಬಿಟ್ಟು ಮಳೆ ಬರಲಿಲ್ಲ ಎನ್ನುತ್ತೀರಿ. ಮಳೆ ಬಂದು ನಿಂತು ಹೋಗಿದ್ದಾಯಿತು. 5 ತಿಂಗಳು ನೀವು ಅದರ ಬಗ್ಗೆ ಯೋಚನೆ ಮಾಡಲಿಲ್ಲ. ನೀವು ನಿದ್ರೆ ಮಾಡಿಕೊಂಡು ಕುಳಿಸಿದ್ದಿರಿ. ನೀವು ಎಚ್ಚೆತ್ತುಕೊಳ್ಳವುದು ಯಾವಾಗ? ಇವತ್ತು ಕೃಷಿ ಸಂಬಂಧಿತ ವಲಯಕ್ಕೆ 5100 ಕೋಟಿ ರೂ. ಕೊಟ್ಟಿದ್ದನ್ನು ಏನು ಮಾಡಿದಿರಿ? ನೀರಾವರಿಗೆ 2900 ಕೋಟಿ, ವಿಮೆಗೆ 120 ಕೋಟಿ ರೂ. ಎನ್ನುತ್ತೀರಿ. ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ನೇರವಾಗಿ ಕೊಡುವುದೇನೋ ಒಳ್ಳೆಯದೇ. ಇದಕ್ಕೆ ಸಹಕಾರ ಸಚಿವರು ಹೇಗೆ ಒಪ್ಪಿಕೊಂಡರೇ ಗೊತ್ತಿಲ್ಲ. ಸಹಕಾರ ಸಚಿವರೇ ಇದಕ್ಕೆ ಹೇಳಬೇಕಾಗುತ್ತದೆ. ಬಹಳ ಡಿಸಿಸಿ ಬ್ಯಾಂಕ್‌ಗಳು ಕಷ್ಟದಲ್ಲಿವೆ ಎಂಬುದು ನಿಜ, ಅವು ವಸೂಲಿ ಮಾಡಿ ಕಟ್ಟಬೇಕು. ಅಷ್ಟೋ ಇಷ್ಟೋ ಚೆನ್ನಾಗಿದ್ದ ಅಪೆಕ್ಸ್ ಬ್ಯಾಂಕ್‌ನ್ನು ಮುಗಿಸುವ ಹುನ್ನಾರ ಹೂಡಿದ್ದೀರಿ ಎಂದು ನೇರವಾಗಿ ನಾವು ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ 29930 ಸಹಕಾರ ಸಂಘಗಳಿವೆ. ಸುಮಾರು 1.83 ಕೋಟಿ ಷೇರದಾರರಿದ್ದಾರೆ. ಸಹಕಾರ ವ್ಯವಸ್ಥೆಯಲ್ಲಿ 20 ಸಾವಿರ ಕೋಟಿ ರೂ ಹಣ ಟ್ರಾನ್ಸಾಕ್ಷನ್ ಆಗುತ್ತಿದೆ. ಅಪೆಕ್ಸ್ ಬ್ಯಾಂಕ್ ಬಿಟ್ಟರೆ ಬೇರೆಲ್ಲೂ ಅದಕ್ಕೆ ಒಂದು ಚುಕ್ಕೆ ಕೂಡ ನೀವು ಇಡಲಿಲ್ಲ. ನಿಮ್ಮ ಬದ್ಧತೆಗಳೇನು? ನಿಮಗೆ ಬದ್ದಂತೆ ಇಲ್ಲವೆಂದು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಕಾವೇರಿ ಕಣಿವೆಗೆ 300 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಹೋದ ರಾಜ್ಯಪಾಲರ ಭಾಷಣದಲ್ಲಿ ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಪಶ್ಚಿಮ ಘಟ್ಟಗಳಿಂದ ಅಥವಾ ನೇತ್ರಾವತಿ ನದಿಯಿಂದ ಹರಿಸುತ್ತೇವೆ, 4 ಕೋಟಿ ರೂ.ಗಳನ್ನು ಇಡುತ್ತೇವೆ ಎಂದು ಹೇಳಿದಿರಿ. ಬರೀ ಹೇಳುವುದು ಬಿಟ್ಟರೆ ಅದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದೀರಾ? ಇವತ್ತೇನೋ ಕೋಲಾರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಮಳೆ ಬಿದ್ದು ಕುಡಿಯುವ ನೀರಿದೆ, ನಿಜ, ಆದರೆ ಕರೆಂಟಿಲ್ಲ. ಕೆರೆಗಳಲ್ಲಿದ್ದ ನೀರನ್ನು ಬಳಸಿ ಎಲ್ಲಾ ಗದ್ದೆ ಮಾಡಿಬಿಟ್ಟರು. ದನಕರುಗಳಿಗೆ ನೀರು ಕುಡಿಸಬೇಕಾದರೆ ಕರೆಂಟು ಬೇಕೇ ಬೇಕು. ರೈತರ ವಿಷಯ ಬಿಡಿ, ಅವರು ಸರ್ವನಾಶವಾಗಿ ಹೋಗಿದ್ದಾರೆ. ಕುಡಿಯುವ ನೀರಿಗಾದರೂ ನೀವು ಆದ್ಯತೆ ಕೊಡದೇ ಇದ್ದರೆ ಏನು ಮಾಡುವುದು? ಇದಕ್ಕೆ ಯೋಚನೆ ಮಾಡದಿದ್ದರೆ ಏನು ಮಾಡುವುದಕ್ಕಾಗುತ್ತದೆ? ಸ್ವಾಮಿ ಈ ಕರೆಂಟ್ ವ್ಯವಹಾರದಲ್ಲಿ ಇವರು ಸಫಲರಾಗಲೇ ಇಲ್ಲವೆಂದು ನಾನಂತೂ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಕೃಷಿಗಾಗಿ ಏನೇನು ಇಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ ಯಾವುದೂ ಸಾಲುವುದಿಲ್ಲ ಬೆಂಬಲ ಬೆಲೆಗಾಗಿ ಅವತ್ತು 100 ಕೋಟಿ ರೂ.ಗಳನ್ನು ಇಡುತ್ತೇವೆ ಎಂದಿರಿ. ಇದುವರೆಗೂ ನೀವು ಅದರಲ್ಲಿ ಖರ್ಚು ಮಾಡಿರುವುದು ಕೇವಲ 30 ಕೋಟಿ ರೂ.ಗಳು ಮಾತ್ರ. ಯಾಕೆ ತಪ್ಪುದಾರಿಗೆ ಎಳೆಯುತ್ತೀರಿ? ಆಗಲಿಲ್ಲ ಅಂದರೆ ಸರ್ಕಾರದಲ್ಲಿ ಹಣವಿಲ್ಲ ಎಂದು ಒಪ್ಪಿಕೊಳ್ಳಿ ತೆರಿಗೆಗಳನ್ನು ನಾವು ಸರಿಯಾಗಿ ವಸೂಲಿ ಮಾಡುತ್ತಿಲ್ಲ ಎನ್ನಿ. ಅವತ್ತು ಕೃಷಿ ಸಚಿವರು ನಮಗೆಲ್ಲಾ ಸಂತೋಷವಾಗುವ ಹಾಗೆ 100 ಕೋಟಿ ರೂ.ಗಳ ಆವರ್ತನಿಧಿ ಇಟ್ಟಿದ್ದೇವೆ ಎಂದು ಹೇಳಿಬಿಟ್ಟರು. ಎಲ್ಲಿದೆ ಸ್ವಾಮಿ 100 ಕೋಟಿ ರೂ.ಗಳು? ನೀವು ಯಾವ ಆದ್ಯತೆಗಳಿಗೆ ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಆ ಆದ್ಯತೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲಿಲ್ಲವೆಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಮತ್ತು ಗ್ರಾಮೀಣ ಅಭಿವೃದ್ಧಿಗೆ ಇವರು ಕೃಷಿಗೆ ಒತ್ತು ಕೊಡುತ್ತೇವೆಂದು ಹೇಳುತ್ತಾರೆ, ಗ್ರಾಮೀಣಾಭಿವೃದ್ಧಿಗೆ ಹೋದವರ್ಷ 3.47 ಇತ್ತು ಈ ಸಾರಿ 2.74 ನೀರು ಭರವಸೆಗಳನ್ನು ಕೊಡುವುದಕ್ಕೂ ಇಲ್ಲಿ ಸರಮಾಲೆಗಳನ್ನು ಪ್ರಿಂಟ್ ಮಾಡುವುದರ ಮಧ್ಯೆ ಇರುವ ವ್ಯತ್ಯಾಸ ಇಲ್ಲಿದೆ. ವಿಶೇಷ ಪ್ರದೇಶ ಯೋಜನೆ, ಹೈದರಾಬಾದ್ ಕರ್ನಾಟಕ ಗಡಿ ಪ್ರದೇಶ, ನಮ್ಮ ಖರ್ಗೆಯವರು ಆ ಭಾಗದಿಂದ ಬಂದವರು. ಹೋದವರ್ಷ 2.56 ಇಟ್ಟಿದ್ದೀರಿ. ಈ ಸಾರಿ 1.99 ಶಕ್ತಿಮೂಲಗಳು ಹೋದವರ್ಷ 11.01 ಈ ಸಾರಿ 10.36, ಕೈಗಾರಿಕೆ ಮತ್ತು ಖನಿಜಗಳು: ಹೋದವರ್ಷ 3.23, ಈ ವರ್ಷ 2.43 - ಎಲ್ಲಿ ನೋಡಿದರೂ ಬರೀ ಪ್ರಚಾರ, ಪ್ರಪಂಚದಲ್ಲಿರುವ ಐಟಿ ಎಲ್ಲಾ ಇಲ್ಲೇ ಬರುತ್ತಿದೆ ಎಂದು ನಿಜ, ನಾನು ಅನೇಕ ದೇಶಗಳಿಗೆ ಹೋದಾಗ ನನ್ನದು ಇಂಡಿಯಾ ಅಥವಾ ಬೆಂಗಳೂರು ಅಂದರೆ ಐಟಿ, ಓ ಎನ್ನುತ್ತಾರೆ. ಆದಕ್ಕೆ ನಿಜವಾಗಿಯೂ ಆದ್ಯತೆ ಸಿಕ್ಕಿದೆ. ಆದರೆ ನಿಮ್ಮ ಬಜೆಟ್‌ನಲ್ಲಿ ಮಾತ್ರ ಹೋದವರ್ಷಕ್ಕಿಂತ ಕಡಿಮೆ ಕೊಟ್ಟಿದ್ದೀರಿ. ಶಿಕ್ಷಣ, ಕ್ರೀಡೆ, ಕಲೆ-ಸಂಸ್ಕೃತಿ ಹೋದ ವರ್ಷ 6.34, ಈ ಸಾರಿ, 5.39 ಆರೋಗ್ಯ ಹೋದ ವರ್ಷ 3.13, ಈ ಸಾರಿ 2.24, ನೀರು ಸರಬರಾಜು ಮತ್ತು ನೈರ್ಮಲ್ಯ - ಹೋದವರ್ಷ 7.10, ಈ ಸಾರಿ 6.15, ಸಮಾಜ ಕಲ್ಯಾಣ ಯಾವ ನಿಮ್ಮ ಪಕ್ಷ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತರುಗಳಿಂದ ಓಟು ಪಡೆದುಕೊಂಡು ಬಂದಿದ್ದೀರಿ. ಅಂತಹ ಇಲಾಖೆಗೂ ಹೋದ ವರ್ಷ 1.49 ಇದ್ದುದ್ದು ಈ ಸಾರಿ 1.10 ಇಟ್ಟಿದ್ದೀರಿ ಇದು ನಿಮ್ಮ ವಿಹಂಗಮ ನೋಟ. ನಾವು ಹುಡುಗರಾಗಿದ್ದಾಗ ನಡೆದಿದ್ದು ಒಂದು ಜ್ಞಾಪಕಕ್ಕೆ ಬರುತ್ತದೆ. ನಾವೆಲ್ಲಾ ಮೊಲದ ಬೇಟೆಗೆ ಹೋಗುತ್ತಿದ್ದೆವು. ಈಗೆಲ್ಲಾ ಬ್ಯಾನ್ ಆಗಿದೆ. ಆಗ ಮೊಲ ಎಲ್ಲಾದರೂ ಪೊದೆಯಲ್ಲಿ ಕಾಣಿಸಿದರೆ ಅದನ್ನು ಹೆಸರಿಸಿ ಕರೆಯೋಲ್ಲ. ತೆಲುಗಿನಲ್ಲಿ ಕುಂದ್ಲಿ ಅನ್ನುತ್ತೇವೆ. ಮೊಲ, ಕನ್ನಡದಲ್ಲಿ ಅದಕ್ಕೆ ಪಾಮು ಪಾಮು ಎಂದರೆ ಹಾವು ಹಾವು ಎನ್ನುತ್ತೇವೆ. ಅದಕ್ಕೇನೋ ಅರ್ಥವಾಗ ಬಿಡುತ್ತದೆ ಅನ್ನುವಂಥ ಭಾವನೆ. ಆ ಬೇಟೆಗಾರಿಗೆ ನಾನೂ ಹೋಗಿದ್ದೇವೆ. ಸುಮಾರು 40 ವರ್ಷಗಳ ಹಿಂದೆ ಆಗ ಎಲ್ಲರಿಗೂ ಅರ್ಥವಾಗುತ್ತದೆ ಅಲ್ಲಿ ಮೊಲ ಇದೆ ಎಂದು ಎಲ್ಲಾ ಬಂದು ಸೇರಿಕೊಳ್ಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಗ ಕಾನೂನಿರಲಿಲ್ಲವೇನು? ಇಲ್ಲದೇ ಇದ್ದರೆ ತಪ್ಪಿ ಹೋಯಿತು ನಿಮ್ಮನ್ನು ಪ್ರಾಸಿಕ್ಯೋಟ್ ಮಾಡುವ ಅವಕಾಶ.

2.20 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್ : ಕಾನೂನು ಹೇಗೆ ಬಳಕೆಯಾಗುತ್ತದೆ ಎನ್ನುವುದಕ್ಕೆ ಒಂದು ಮಾತನ್ನು ಹೇಳುತ್ತೇನೆ. ಇದು ಒಂದು ಪತ್ರಿಕೆಯಲ್ಲಿ ಹಿಂದೆ ಬಂದಿತ್ತು. ಹುಬ್ಬಳ್ಳಿಯಲ್ಲಿ ಅರಣ್ಯ ಇಲಾಖೆಯವರು ಕೌಜುಗ ಪಕ್ಷಿಯನ್ನು ಹಿಡಿದುಕೊಂಡು ತಿನ್ನುವವರಿಗೆ ಮಾರುವುದಕ್ಕೆ ಬರುತ್ತಾರೆ. ಅದಕ್ಕೆ ಅವರ ಮೇಲೆ ಕೇಸ್ ಹಾಕಿದ್ದಾರೆ ಎಂದು ಪತ್ರಿಕೆಯಲ್ಲಿ ಬಂತು. ರಾತ್ರಿ ಐಬಿಯಲ್ಲಿ ಒಬ್ಬ ಮಂತ್ರಿಗಳು ಕುಳಿತುಕೊಂಡು ಆ ಕೌಜುಗವನ್ನೇ ತಿನ್ನುತ್ತಿದ್ದರು. ಇದು ಕಾಯ್ದೆ ಪಾಲನೆ ಮಾಡುವುದು.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ : ಬೇರೆ ದಾರಿಗೆ ಎಳೆಯುವುದಕ್ಕೆ ಏನೇನು ಮಾಡುತ್ತಿದ್ದಾರೆ ಎಂಬುದನ್ನು ತಿಳಿಸಲು ನಾನು ಇದನ್ನು ಹೇಳಿದೆ ಇದನ್ನೂ ಅರ್ಥವಾಗದ ಹಾಗೆ

ಇಡಬೇಕಲ್ಲಾ. ಈ ಸಂದರ್ಭದಲ್ಲಿ ಮೊಲದ ಬೇಟೆ ಘಟನೆ ನನಗೆ ಜ್ಞಾಪಕಕ್ಕೆ ಬಂತು. ಅದೇ ರೀತಿ ಇವತ್ತು ಬಜೆಟ್ ಸಹ ಇದೆ. ನಾನು ಆಗಲೇ ಹೇಳಿದೆ, ಸೆಂಟ್ರಲ್ ಬಜೆಟ್‌ನ್ನು ಯಾವ ರೀತಿ ಮಂಡನೆ ಮಾಡಿದ್ದಾರೆ, ಪ್ರತಿಯೊಂದು ವಿಷಯದಲ್ಲೂ ಕೂಡ ಚೆನ್ನಾಗಿ ಹೇಳಿದ್ದಾರೆ. ನಾನೇನೂ ಅದರ ಬಗ್ಗೆ ಶ್ಲಾಘನೆ ಮಾಡುತ್ತಿಲ್ಲ. ಇದು ಯಾವ ರೀತಿಯಲ್ಲಿ ಮಂಡನೆಯಾಗಬೇಕಾಗಿತ್ತೋ ಆ ರೀತಿ ಮಂಡನೆಯಾಗಿಲ್ಲ ಎನ್ನುವಂಥಕ್ಕೆ ಇವತ್ತು ಈ ಮೊಲದ ಬೇಟೆ ಬಗ್ಗೆ ಹೇಳಿದೆ. ನೀವು ಯೋಜನೆ ಕೂಡ ಮಾಡದೆ ಇವತ್ತು ಎಲ್ಲದಕ್ಕೂ ಮಾಡಿ ಕೊರತೆಯನ್ನು ಕೂಡ 1375 ಕೋಟಿ ರೂಪಾಯಿಗಳೆಂದು ತೋರಿಸಿದ್ದೀರಿ. ನಮ್ಮಲ್ಲಿ ಒಂದು ಗಾದೆ ಇದೆ. "ನಾನೇನೂ ಕಿವಿಯಲ್ಲಿ ಹೂವು ಇಟ್ಟುಕೊಂಡಿಲ್ಲ" ವೆನ್ನುತ್ತಾರೆ. ಅದರಂತೆ ಜನರಿಗೆ ಇವರು ಕಿವಿಯಲ್ಲಿ ಹೂವನ್ನು ಇಡುವ ಕೆಲಸ ಮಾಡಿದ್ದಾರೆ. ಪೆಟ್ರೋಲ್ ಬೆಲೆಯನ್ನು ಯಾವಾಗಲೂ ಕೇಂದ್ರ ಸರ್ಕಾರದವರು ಹೆಚ್ಚು ಮಾಡುತ್ತಿದ್ದರು. ಅವರು ಇವತ್ತು ಕಡಿಮೆ ಮಾಡಿದರೂ ಅದರ ಮೇಲೆ ನೀವು ಮತ್ತೆ ಐದು ಪರ್‌ಸೆಂಟನ್ನು ಹೆಚ್ಚಿಸಿದ್ದೀರಿ. ಸಿಮೆಂಟ್ ಮೇಲೆ ಹೆಚ್ಚಿಸಿದ್ದೀರಿ. ಈ ರೀತಿಯಾದರೆ ಸಾಮಾನ್ಯ ಮನುಷ್ಯರ ಮೇಲೆ ಏನೇನು ಪ್ರಭಾವ ಬೀರುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ. ಡೀಸಲ್ ಇಲ್ಲದೆ ಬಸ್ ಕೂಡ ಓಡಾಡುವುದಿಲ್ಲ. ಬಸ್‌ಗೆ ಬೇಕೇ ಬೇಕು. ಅದನ್ನು ಜಾಸ್ತಿ ಮಾಡುತ್ತೀರಿ. ಇದು ಬಡವರ ಹೊಟ್ಟೆಯ ಮೇಲೆ ಬೀಳುತ್ತದೆ. ಒಂದು ಕಡೆ ಕೇಂದ್ರ ಸರ್ಕಾರದವರು ಗ್ಯಾಸ್ ಬೆಲೆಯನ್ನು ಹೆಚ್ಚಿಸಿಬಿಟ್ಟರು, ಪೆಟ್ರೋಲ್ ಬೆಲೆ ಹೆಚ್ಚಿಸಿಬಿಟ್ಟರು ಎಂದು ಹೇಳುತ್ತಿದ್ದಂಥ ನಿಮ್ಮ ಸರ್ಕಾರ ನೀವೇ ಇದನ್ನು ಏಕೆ ಹೆಚ್ಚಿಸುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಕೈಗಾರಿಕಾ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಕಳೆದ ವರ್ಷ ಸಿಮೆಂಟ್ ಮೇಲೆ ಏನು ಸೇಲ್ಸ್ ಟ್ಯಾಕ್ಸ್ ಇತ್ತು, ಅದಕ್ಕಿಂತ ಸ್ವಲ್ಪ ಹೆಚ್ಚಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ ಸಿಮೆಂಟ್ ಮೇಲೆ ಸೇಲ್ಸ್ ಟ್ಯಾಕ್ಸ್ ಮೇಲೆ ಟರ್ನ್ ಓವರ್ ಇತ್ತು. ಸೇಲ್ಸ್ ಟ್ಯಾಕ್ಸ್ ಸೆಸ್ ಇತ್ತು ರಾ-ಮೆಟೀರಿಯಲ್ ಮೇಲೆ ಎಂಟ್ರಿ ಟ್ಯಾಕ್ಸ್ ಇತ್ತು. ಅದನ್ನೆಲ್ಲಾ ಅಬಾಲಿಷ್ ಮಾಡಿದ್ದೇವೆ. ಹಾಗಾಗಿ ಕ್ಯುಮ್ಯುಲೇಟಿವ್ ಎಫೆಕ್ಟ್‌ನ್ನು ಚೆಕ್ ಮಾಡಿ. ಆಗ ಅದು ಹೆಚ್ಚಾಗಿದೆಯೋ ಕಡಿಮೆಯಾಗಿದೆಯೋ ಎಂಬುದು ನಿಮಗೆ ಗೊತ್ತಾಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ಗೊಬ್ಬರ ಸಂಸ್ಥೆಯ ಅಧ್ಯಕ್ಷನಾಗಿದ್ದೇನೆ. ಟ್ಯಾಕ್ಸ್‌ನ್ನು ನ್ಯಾಫ್ತಾ ಮೇಲೆ ಜಾಸ್ತಿ ಮಾಡಿದ್ದೀರಿ. ನ್ಯಾಫ್ತಾ ಮೇಲೆ ನೀವು ಟ್ಯಾಕ್ಸ್‌ನ್ನು ಹಾಕಿದರೆ ಕರ್ನಾಟಕದಲ್ಲಿ ಎಂ.ಸಿ.ಎಫ್‌ನಲ್ಲಿ ಗೊಬ್ಬರ ಮಾಡುತ್ತಾರೆ. ಇಂಪೋರ್ಟ್ ಮಾಡಿಕೊಂಡು ಮಾಡುವಂಥ ಕಾರ್ಖಾನೆಯವರು ಏನು ಮಾಡುತ್ತಾರೆ: ಈ ಟಾಕ್ಸ್‌ಗಳು ಯಾರ ತಲೆಯ ಮೇಲೆ ಬೀಳುತ್ತದೆ? ರೈತನ ಮೇಲೆ ಬೀಳುತ್ತದೆ. ಇದು ರೈತರ ಸರ್ಕಾರವೆಂದು ಹೇಳುತ್ತೀರಿ. ನ್ಯಾಫ್ತಾ ಮೇಲೆ ಟ್ಯಾಕ್ಸ್‌ನ್ನು ಜಾಸ್ತಿ ಹಾಕುತ್ತೀರಿ. ಒಟ್ಟು ಇವುಗಳು ನಿಮ್ಮ ಕೊರತೆಗಳ ಜೊತೆಗೆ ಇವೆಲ್ಲಾ ಆಗಿದೆ. ಇವೆಲ್ಲಾ ಆದ ಮೇಲೂ ಕೂಡ ವಸೂಲಿ ಕಾರ್ಯಕ್ರಮಗಳನ್ನು ಏನು ಮಾಡಿದ್ದೀರಿ? ಈ ಕೊರತೆಯನ್ನು ಹೇಗೆ ನೀಗಿಸುತ್ತೀರಿ? ಇದರ ಜೊತೆಗೆ ಅಲ್ಯೂಮಿನಿಯಂ ಪಾತ್ರೆಗಳ ಮೇಲೆ ಟ್ಯಾಕ್ಸ್ ಹಾಕಿದ್ದೀರಿ. ಮಡಿಕೆಗಳ ಮೇಲೂ ಹಾಕಿ ಬಿಡಿ ಸ್ವಾಮಿ. ಪಾಪ, ಬಡವರು ಅಲ್ಯೂಮಿನಿಯಂ ಪಾತ್ರೆ ಇಟ್ಟುಕೊಂಡು ಏನೋ ಒಂದಿಷ್ಟು ಬೇಯಿಸಿಕೊಂಡು ತಿನ್ನುತ್ತಾರೆ. ಮಡಿಕೆಗಳ ಮೇಲೂ ಹಾಕಿಬಿಡಿ. ಅದರ ಮೇಲೂ ಒಂದು

ಟ್ಯಾಕ್ಸ್ ಹಾಕಿಬಿಡಿ. ಸಾಮಾನ್ಯವಾಗಿ ಬ್ರೆಡ್, ಬನ್ನು, ಇವುಗಳನ್ನು ಯಾರಾದರೂ ಖಾಯಿಲೆ ಬಂದರೆ ಆಸ್ಪತ್ರೆಗಳಲ್ಲಿದ್ದರೆ ಉಪಯೋಗಿಸುತ್ತಾರೆ.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಹೊಟ್ಟೆ ಹಸಿಯುವಾಗ ಮೊಲ ಆಯಿತು, ಕೌಜುಗ ಆಯಿತು. ಬ್ರೆಡ್ ಆಯಿತು. ಬನ್ನು ಆಯಿತು. ಹೋಗಲಿ ಎಂದರೆ ಹೊರಗಡೆ ಲಾಂಜ್‌ನಲ್ಲಿ ಯುಬಿ ತಿರುಗಾಡುತ್ತಿದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ : ಯುಬಿಗೂ ಬರುತ್ತೇನೆ. ಜಾನ್‌ರವರ ಬಗ್ಗೆಯೂ ಬರುತ್ತೇನೆ. ಎಲ್ಲದಕ್ಕೂ ಬರೋಣ;

ಉಪಾಧ್ಯಕ್ಷರು: ಬೇಗ ಮುಗಿಸಿ. ಆಮೇಲೆ ಬೇಕಾದರೂ ಮಾತನಾಡಬಹುದು. ಈಗ ಮುಗಿಸಿಬಿಡೋಣ. ವರದಿಗಾರರಾದಿಯಾಗಿ ಅರ್ಧ ಗಂಟೆಯಾದರೂ ನಮಗೆ ಊಟಕ್ಕೆ ಬಿಡಿ ಎಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಾರೆ. ಈಗಾಗಲೇ ಅರ್ಧ ಗಂಟೆಗಿಂತ ಜಾಸ್ತಿ, 35 ನಿಮಿಷ ಮಾತನಾಡಿದ್ದೀರಿ. ಎರಡೂವರೆ ಗಂಟೆಗೆ ಕರೆಕ್ಟ್ ಆಗಿ ಮುಗಿಸಿಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಶ್ರೀನಿವಾಸಗೌಡರವರೇ, ಸ್ವಲ್ಪ ಅವಕಾಶ ಕೊಡಿ. ಊಟ ಮಾಡಿ ಬರುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ : ಇನ್ನೂ ಬಹಳ ಹೇಳಬೇಕೆಂದಿದ್ದೆ. ಇನ್ನೇನು ಮಾಡುವುದು? ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಮತ್ತೆ 3-00 ಗಂಟೆಗೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 2-25ಕ್ಕೆ ಮುಂದೂಡಲ್ಪಟ್ಟು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

(ಸದನವು ಪುನಃ ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್ ತಹಸೀಲ್ದಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ವಿತ್ತೀಯ ಕಾರ್ಯಕಲಾಪಗಳು

2002-2003ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಉಪಾಧ್ಯಕ್ಷರೇ, ಈ ಸರ್ಕಾರ ಬಂದ ಮೇಲೆ ಮೂರನೇ ಆಯವ್ಯಯ ಪತ್ರವನ್ನು ಮಂಡಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮೊದಲನೇ ಆಯವ್ಯಯ ಪತ್ರದಲ್ಲಿ ಹೊಸದಾಗಿ ಆಯ್ಕೆಯಾಗಿ ಬಂದಂತಹ ಸರ್ಕಾರದ ಬಗ್ಗೆ ಹೇಳಿಕೊಂಡು, ತಮ್ಮ ಸರ್ಕಾರದ ಆದ್ಯತಾ ವಲಯಗಳನ್ನು ಗುರುತಿಸಿಕೊಂಡು, ಹೊಸ ಸಹಸ್ರಮಾನದಲ್ಲಿ ನಾನು ಈ ಬಜೆಟ್ ಅನ್ನು ಮಂಡಿಸುತ್ತಿದ್ದೇನೆ ಎಂದು ಹೇಳಿದ್ದರು. ನಾವು ಇನ್ನು ಮುಂದೆ ಭರವಸೆಗಳನ್ನು ಕೊಡುವುದಿಲ್ಲ, ಬಹಳಷ್ಟು ಕಾರ್ಯೋನ್ಮುಖರಾಗಿ ಕೆಲಸ

ಮಾಡುತ್ತೇವೆ, ಹಿಂದೆ ಇದ್ದಂತಹವರೆಲ್ಲಾ ಭರವಸೆಗಳನ್ನು ಕೊಟ್ಟುಕೊಂಡು ಬಂದರು, 2001ರಿಂದ ಎಲ್ಲಾ ಕಾರ್ಯಗಳನ್ನು ಸಾಧನೆ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮೊದಲನೇ ಆಯವ್ಯಯದಲ್ಲಿ ಹೇಳಿಕೊಂಡು ಕೆಲವು ಆದ್ಯತಾ ವಲಯಗಳನ್ನು ಗುರುತಿಸಿದ್ದರು. ಕೃಷಿ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ, ರಸ್ತೆಗಳು, ವಸತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ, ಆರೋಗ್ಯ ಪೌಷ್ಠಿಕಾಂಶಗಳು, ಬಡತನ ನಿರ್ಮೂಲನೆ ಮುಂತಾದ ವಿಚಾರಗಳಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಘೋಷಣೆ ಮಾಡಿ, ಇವೆಲ್ಲವುಗಳಿಗೆ ನಾವು ಒತ್ತನ್ನು ಕೊಟ್ಟು ಕಾರ್ಯೋನ್ಮುಖರಾಗುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಮೊದಲ ವರ್ಷದ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಇದಾದ ನಂತರ ಎರಡನೇ ವರ್ಷದ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾವು ಆದ್ಯತಾ ವಲಯಗಳನ್ನು ಗುರುತಿಸಿಕೊಂಡಿದ್ದಾಯಿತು ಭರವಸೆಗಳನ್ನು ಕೊಟ್ಟಿದ್ದಾಯಿತು, ಈಗ ಅವನ್ನು ಸದೃಢಪಡಿಸುತ್ತೇವೆ, ಭದ್ರವಾಗಿ ಸದೃಢವಾಗಿ ಮಾಡುವಂತಹ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳಿದ್ದರು. ಇದು ಬಹಳ ಮುಖ್ಯವಾದ ಮೂರನೇ ವರ್ಷದ ಆಯವ್ಯಯ ಪತ್ರವಾಗದೆ. ಇದರಲ್ಲಿ ನಾವು ಬಹಳಷ್ಟು ನಿರೀಕ್ಷಣೆ ಮಾಡಿದ್ದೆವು. ಬಹಳ ಕಠಿಣವಾದ ಬಜೆಟ್ ಮಾಡುತ್ತಾರೆ, ಸಾಕಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುತ್ತಾರೆ, ತನ್ಮೂಲಕ ಕೊರತೆಯನ್ನು ನೀಗಿಸುತ್ತಾರೆ, ಆದಾಯ ವಲಯದಲ್ಲಿ ಹೆಚ್ಚು ಮಾಡಿಕೊಳ್ಳುತ್ತಾರೆ ಎಂದು ನಾವು ಸಾಕಷ್ಟು ನಿರೀಕ್ಷಣೆ ಮಾಡಿದ್ದೆವು. ಆದರೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಈ ಬಜೆಟ್ ನಮಗೆ ಸಾಕಷ್ಟು ನಿರಾಶೆ ತಂದಿದೆ. ಇದೊಂದು ನಿರಾಶದಾಯಕವಾದ ಬಜೆಟ್ ಅನ್ನು ಇಂದು ಕಂಡಿದ್ದೇವೆ. ಈ ಬಾರಿಯ ಬಜೆಟ್ ಭಾಷಣದಲ್ಲಿ ಹೆಚ್ಚು ತೆರಿಗೆ ಹಾಕಿರುವ ಬಾಬುಗಳ ಬಗ್ಗೆ ನಾವು ಹುಡುಕಬೇಕಾಗಿ ಬಂದಿತು. ಮೊನ್ನೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶೆಟ್ಟರ್‌ರವರು ಮಾತನಾಡುವಾಗ ಇದನ್ನು ಮೋಸ ಎಂದು ಹೇಳಿದರು. ಇದರಲ್ಲಿ ಸಾಕಷ್ಟು ವಿಷಯಗಳು ತಿಳಿಯುವುದಕ್ಕೆ ಸಾಧ್ಯವಾಗಿಲ್ಲ. ಹಿಂದಿನ ಬಜೆಟ್ ಭಾಷಣದಲ್ಲಿ ಈಗ ಇರುವ ತೆರಿಗೆ ಎಷ್ಟು? ಹೆಚ್ಚು ಮಾಡಿರುವ ತೆರಿಗೆ ದರ ಎಷ್ಟು, ಮುಂತಾದ ವಿವರಗಳಿರುತ್ತಿದ್ದವು. ಈ ಬಾರಿಯು ಬಜೆಟ್ ಭಾಷಣದಲ್ಲಿ ಈ ವಿವರಗಳನ್ನು ನೀಡಲಾಗಿಲ್ಲ. ಸುಮಾರು 1772 ಕೋಟಿ ರೂ.ಗಳ ತೆರಿಗೆಯನ್ನು ಹಾಕಲಾಗಿದೆ. ಬಜೆಟ್ ಭಾಷಣದಲ್ಲಿ ವಾಹನ ತೆರಿಗೆ, ಮಾರಾಟ ತೆರಿಗೆ, ಅಬ್ಕಾರಿ ತೆರಿಗೆ ಮತ್ತು ಇತರ ತೆರಿಗೆಗಳು ಎಷ್ಟಾಗಿವೆ ಎಂಬುದರ ಬಗ್ಗೆ ಒಂದು ಕಾಲಂ ಇರುತ್ತಿತ್ತು. ಒಂದು ಪುಟದಲ್ಲಿ ಅವುಗಳ ಬಗ್ಗೆ ನಮೂದಾಗಿರುತ್ತಿತ್ತು. ಈ ಬಾರಿ ಅದು ಇಲ್ಲ, ಅದನ್ನು ಉದ್ದೇಶಪೂರ್ವಕವಾಗಿಯೇ ಕೊಟ್ಟಿಲ್ಲ. ಒಟ್ಟಾರೆಯಾಗಿ ಎಷ್ಟು ಜಾಸ್ತಿಯಾಯಿತು ಎಂದು ನಾವೇ ಊಹೆ ಮಾಡಿಕೊಳ್ಳಬೇಕಾಗಿದೆ. ಇದನ್ನೇ ಮೋಸ ಎಂದು ಮಾನ್ಯ ಶೆಟ್ಟರ್‌ರವರು ಹೇಳಿದ್ದರು. ಮಾನ್ಯ ಮುಖ್ಯಮಂತ್ರಿಗಳು ಒಟ್ಟು ಎಷ್ಟು ತೆರಿಗೆಯನ್ನು ಇವತ್ತು ನಾವು ಜನರ ಮೇಲೆ ಹೇರುತ್ತೇವೆ ಎಂಬುದನ್ನು ಬಜೆಟ್ ಭಾಷಣದಲ್ಲಿ ಕ್ಲಿಯರ್ ಆಗಿ ಹೇಳಿಲ್ಲ. ಈ ಮುಂಗಡ ಪತ್ರದಲ್ಲಿ 1772 ಕೋಟಿ ರೂ.ಗಳಷ್ಟು ತೆರಿಗೆ ಹಾಕಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯದ ವಿತ್ತೀಯ ಕೊರತೆ 550 ಕೋಟಿ ರೂ.ಗಳಾಗಿದೆ, ಕೇಂದ್ರ ಸರ್ಕಾರ ಯೋಜನಾ ಅನುದಾನವನ್ನು ಕಡಿತಗೊಳಿಸಿದ್ದರಿಂದ 650 ಕೋಟಿ ರೂ.ಗಳ ಕೊರತೆ ಉಂಟಾಗಿದೆ ಎಂದು ಹೇಳಿದ್ದಾರೆ. ಎಲ್ಲಾ ಸೇರಿ ಸುಮಾರು 1375 ಕೋಟಿ ರೂ.ಗಳಷ್ಟು ಕೊರತೆ ಇರತಕ್ಕ ಬಜೆಟ್ ಅನ್ನು ಫಿಗರ್ಸ್‌ನಲ್ಲಿ ಮಾನೇಜ್ ಮಾಡಿಕೊಂಡು ಇವರು ತೋರಿಸಿಕೊಂಡಿದ್ದಾರೆ. ಈ ರೀತಿ

ಕೊರತೆಯನ್ನು ತೋರಿಸಿ ಕೊಂಡಿರತಕ್ಕಂಥ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಮಂಡಿಸಿದ್ದಾರೆ. ಇದರಲ್ಲಿ ವಿಶೇಷವಾಗಿ ನಾನು ಡಾ|| ಮಾಲರೆಡ್ಡಿಯವರು ಇದ್ದಾರೆ, ಆರೋಗ್ಯ ಸಚಿವರು ಇರುವಾಗ ಮಾತನಾಡುತ್ತೇನೆ. ಕೆಲವು ಸಚಿವರು ಇರುವುದು ಕಷ್ಟ. ಅವರು ಇರುವಾಗಲೇ ಮಾತನಾಡೋಣ; ಆರೋಗ್ಯ ಕೂಡ ಒಂದು ಆದ್ಯತಾ ವಲಯ. ಈ ಸರ್ಕಾರದಲ್ಲಿ ಆರೋಗ್ಯಕ್ಕೆ ಕೊಟ್ಟಿರುವ ಬಜೆಟ್ ಬಹಳ ಕಡಿಮೆಯಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ 2002-03ರಲ್ಲಿ 192 ಕೋಟಿ, ರೂ.ಗಳು 2.24 ಪರ್ಸೆಂಟ್, ಕಳೆದ ಬಾರಿ ಇದು 265 ಕೋಟಿ ರೂಪಾಯಿ ಇತ್ತು. ಇದಕ್ಕಿಂತ ಮೊದಲು 2001ರಲ್ಲಿ ಇದು 225 ಕೋಟಿ ರೂಪಾಯಿ ಇದ್ದುದ್ದು ಇವತ್ತು 192 ಕೋಟಿ ರೂಪಾಯಿ ಇದೆ ಎಂದರೆ 2.24 ಪರ್ಸೆಂಟ್ ಇದರಲ್ಲಿ ಅಲೋಕೇಷನ್ ಆಗಿದೆ. ಇದು ತಮಗೆ ಗೊತ್ತಿದೆ ಎಂದು ಭಾವಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಬಂದಿದ್ದಾರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ ಬಜೆಟ್ ಬಹಳ ಕಡಿಮೆಯಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಏನು ತಿಳಿಸಿದ್ದಾರೆ, ಇವತ್ತು ಎಲ್ಲರಿಗೂ ಸರ್ವರಿಗೂ ಆರೋಗ್ಯ ಕೊಡುವ ದೃಷ್ಟಿಯಲ್ಲಿ ಆಸ್ಪತ್ರೆಗಳನ್ನು ತಾಲ್ಲೂಕು ಮಟ್ಟದಲ್ಲಿ ಮೇಲ್ದರ್ಜೆಗೇರಿಸಲಾಗುವುದು ಎಂದು ಹೇಳಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಈ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿ, ಹೈಟೆಕ್ ಆಸ್ಪತ್ರೆ ಎಂದು ಮಾಡಿದ್ದರು. ವಿಶ್ವಬ್ಯಾಂಕಿನಿಂದ ಪಡೆದಂತಹ 520 ಕೋಟಿ ರೂಪಾಯಿ ಹಣ ಮತ್ತು ಈಗಾಗಲೇ ನಮ್ಮ ನಾಯಕರಾದ ಮಾನ್ಯ ಸಿಂಧ್ಯರವರು ಒಪೆಕ್ ಆಸ್ಪತ್ರೆ ಬಗ್ಗೆ ಮಾತನಾಡಿದರು. ತಾವು ಸ್ವತಃ ಡಾಕ್ಟರ್ ಆಗಿ ಇದನ್ನು ವಿನಾ ಕಾರಣ ಮುಂದೂಡುತ್ತಿದ್ದೀರಿ. ಇವತ್ತು ನಮ್ಮ ಹೊಸಕೋಟೆ ತಾಲ್ಲೂಕಿನ ಉದಾಹರಣೆ ಕೊಡುತ್ತೇನೆ. ಹೈಟೆಕ್ ಆಸ್ಪತ್ರೆ ಇಲ್ಲ ಸ್ಪೆಷಲಿಸ್ಟ್ ಇಲ್ಲ, ಇವತ್ತಿಗೂ ಎಕ್ಸ್‌ರೇ ಅಪರೇಷನ್ ಮಾಡುತ್ತಿಲ್ಲ, ಬ್ಲಡ್ ಟೆಸ್ಟ್ ಇಲ್ಲ, ಇವತ್ತಿಗೂ ಯೂರಿನ್ ಟೆಸ್ಟ್ ಮಾಡುವುದಿಲ್ಲ, ಯಾವುದೇ ಒಂದು ಸೌಕರ್ಯಕ್ಕೆ ಬೆಂಗಳೂರಿಗೆ ಬರುವುದಾದರೆ ಈ ರೆಫರಲ್ ಸಿಸ್ಟಮ್‌ನಲ್ಲಿ ಏನು ಇಂಪ್ರೂವ್ ಆಯಿತು? ಈ ರೆಫರಲ್ ಸಿಸ್ಟಮ್‌ನಲ್ಲಿ ಏನು ಬಲ ಕೊಡಬೇಕೆಂದು ಹೊಸಕೋಟೆ ಅಥವಾ ಜಿಲ್ಲಾ ಆಸ್ಪತ್ರೆಗಳೇನಿವೆ ಆ ಸಿಸ್ಟಮ್ ಅನ್ನು ನಾವು ಚೆನ್ನಾಗಿ ಮಾಡಬೇಕೆನ್ನುವ ಉದ್ದೇಶ ಇವತ್ತು ಫಲಕಾರಿಯಾಗಲಿಲ್ಲ. ತಾವು ಅದರ ಕಡೆ ಗಮನ ಕೊಡಲಿಲ್ಲ. ಇದು ಮೂರನೇ ವರ್ಷ ಪ್ರತಿ ಸಾರಿ ನಾವು ಪ್ರಶ್ನೆ ಕೇಳುತ್ತೇವೆ. ಡಾಕ್ಟರ್‌ಗಳು ಇಲ್ಲ, ವೈದ್ಯರು ಇಲ್ಲವೆಂದು ತಾವೇ ಒಂದು ಸಾರಿ ಹೇಳಿದ್ದೀರಿ, ವೈದ್ಯರಿಗೆ ಹಾಕಿದರೆ ಅವರು ಹೋಗುವುದಿಲ್ಲ, ಸ್ಪೆಷಲಿಸ್ಟ್ ಹಾಕಿದರೆ ಅವರಿಗೆ ಕೊಡುವ ಸಂಬಳಕ್ಕೆ ಅವರು ಹೋಗುವ ಹಾಗಿಲ್ಲ. ಇರುವುದಾದರೂ ಹೇಳಬೇಕು, ಸತ್ಯ ಹೇಳಬೇಕು. ನಾವು ಸ್ಪೆಷಲಿಸ್ಟ್ ಹಾಕುತ್ತೇವೆ, ಅವರು ಹೋಗುವುದಕ್ಕೆ ತಯಾರಿಲ್ಲ, ಅಥವಾ ಇಂತಹ ಹೈಟೆಕ್ ಆಸ್ಪತ್ರೆ ಸರ್ಕಾರದಲ್ಲಿ ನಾವು ನಿರ್ವಹಿಸುವುದಕ್ಕೆ ಆಗದೇ ಇದ್ದರೆ ನಾವು ಬೇರೆಯವರಿಗೆ ಕೊಡುವುದಕ್ಕೆ ಯೋಜನೆ ಮಾಡಬೇಕು. ಬೇರೆಯವರು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದಾರೆ. ಅಪೋಲೋದವರು ಒಪೆಕ್ ಆಸ್ಪತ್ರೆಯನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದರೆ, ಅದರ ಬಗ್ಗೆ ಏನಾಯಿತು, ನಮಗೆ ಗೊತ್ತಿಲ್ಲ. ಹೊಸಕೋಟೆ ಆಸ್ಪತ್ರೆಯನ್ನು ಮಲ್ಯ ಆಸ್ಪತ್ರೆಯವರು, ನಾರಾಯಣ ಹೃದಯಾಲಯದ ಡಾ|| ದೇವಿಶೆಟ್ಟಿಯವರು ತೆಗೆದುಕೊಳ್ಳುತ್ತಾರೆ. ಅವರಿಗೆ ಕೊಡುವುದಕ್ಕೆ ಸಿದ್ಧರಿದ್ದೀರಾ? ಅವರಿಗೆ ಆಸ್ಪತ್ರೆಗಳು ಬೇಕಾಗಿವೆ. ಎಲ್ಲಿ ಸರ್ಕಾರ ಮ್ಯಾನೇಜ್ ಮಾಡುವುದಕ್ಕೆ ಆಗುವುದಿಲ್ಲ, ಸಾಧ್ಯವಿಲ್ಲ ಇದನ್ನು

ಅರ್ಥಮಾಡಿಕೊಂಡು ಖಾಸಗಿಯವರು ಪ್ರವೇಶ ಮಾಡಿದರೆ, ಅವರಿಗೆ ನಿರ್ವಹಿಸಿಕೊಡುವುದು ಮತ್ತು ಅದನ್ನು ನೋಡುವ ಕಾರ್ಯ ಮಾಡುತ್ತೀರಾ ಎಂಬ ಬಗ್ಗೆ ಘೋಷಣೆ ಮಾಡಬೇಕು. ಇದು ಸರ್ಕಾರ ತೆಗೆದುಕೊಳ್ಳಬೇಕಾದ ತೀರ್ಮಾನ. ನನಗೆ ಬಹಳ ನೋವಾಗುತ್ತದೆ. ತಾವು ಏನು ಅಂದುಕೊಳ್ಳುತ್ತೀರೋ, ಗೊತ್ತಿಲ್ಲ. ತಾವು ಹಿರಿಯರಿದ್ದೀರಿ. ಇದು ಏಕೋ ಬರ ಬರುತ್ತಾ ನಿಮಗೆ ಮ್ಯಾನೇಜ್ ಮಾಡುವುದಕ್ಕೆ ಆಗುವುದೇ ಇಲ್ಲ ಎನ್ನುವ ಮಟ್ಟಕ್ಕೆ ಹೋಗುತ್ತಿದೆ. I don't know why? ತಾವು ಅನೇಕ ಕಡೆ ಇದನ್ನು ಹೇಳಿದ್ದೀರಿ. ತಮ್ಮ ಬಾಯಿಯಿಂದ ಇದನ್ನು ಕೇಳುವುದಕ್ಕೆ ನೋವಾಗುತ್ತದೆ. ಈ ಇಲಾಖೆಗೆ ಶಕ್ತಿ ತುಂಬಿ ಆರೋಗ್ಯ ಕೊಡಬೇಕು, ದೃಢಕಾಯವಾಗಬೇಕೆನ್ನುವ ವ್ಯವಸ್ಥೆಯಲ್ಲಿ ನಾವು ಹಿಂದಕ್ಕೆ ಬರುತ್ತಿದ್ದೇವೆ. ಇದು ಏನು ಪರಿಸ್ಥಿತಿ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ.

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಸಚಿವರು) : 1988ನೇ ಇಸವಿಯಿಂದ ಈ ಸರ್ಕಾರ ಬರುವವರೆಗೆ ಒಂದು ನೇಮಕಾತಿಯನ್ನೂ ಮಾಡಲಿಲ್ಲ. 1988ನೇ ಇಸವಿಯಿಂದ ಪುನಃ ಈ ಸರ್ಕಾರ ಅಧಿಕಾರಕ್ಕೆ ಬರುವವರೆಗೆ ಒಂದೂ ಅಪಾಯಿಂಟ್‌ಮೆಂಟ್ ಇರಲಿಲ್ಲ. ಅದರಲ್ಲಿ ವೈದ್ಯರನ್ನು ಮಾತ್ರ ನೇಮಕ ಮಾಡಿದ್ದರು. 1997ರಲ್ಲಿ 785 ವೈದ್ಯರನ್ನು ನೇಮಕ ಮಾಡಿದ್ದರು. ಅದರಲ್ಲಿ ಎಷ್ಟು ಜನ ವೈದ್ಯರು ರಿಪೋರ್ಟ್ ಮಾಡಿಕೊಂಡಿದ್ದಾರೆ, ಬಿಟ್ಟಿದ್ದಾರೆ ಅದು ಗೊತ್ತಿದೆ. ಎಕ್ಸರೇ ಟೆಕ್ನಿಷಿಯನ್ ನೇಮಕ ಮಾಡಿಲ್ಲ, ಲ್ಯಾಬ್ ಟೆಕ್ನಿಷಿಯನ್ಸ್ ನೇಮಕ ಮಾಡಿಲ್ಲ ಡ್ರೈವರ್ಸ್ ಇಲ್ಲ, ಡ್ರೈವರ್ಸ್ ಇಲ್ಲದೆ 400 ಜೀಪ್ ಬಿದ್ದು ಕೊಳೆಯುತ್ತಿದ್ದವು. ಈ ಸರ್ಕಾರ ಬಂದ ಮೇಲೆ ಆರು ತಿಂಗಳಲ್ಲಿ ಕ್ಯಾಬಿನೆಟ್ ನಿರ್ಣಯ ತೆಗೆದುಕೊಂಡು 1000 ಲ್ಯಾಬ್ ಟೆಕ್ನಿಷಿಯನ್ಸ್, ಅಪಾಯಿಂಟ್ ಮಾಡಿದ್ದೇವೆ, ಎಲ್ಲ ಎಕ್ಸ್‌ರೇ ಟೆಕ್ನಿಷಿಯನ್ಸ್ ಅಪಾಯಿಂಟ್ ಮಾಡಿದ್ದೇವೆ, ಅದರೂ ಕೂಡ ಸರ್ಕಾರದ ಆದ್ಯತೆ ವಲಯ ಪ್ರಾಥಮಿಕ ಆರೋಗ್ಯ ಕೇಂದ್ರ ಇರುವುದರಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗಾಗಿ ಒಂದು ಸಾವಿರಮಂದಿ ಲ್ಯಾಬ್ ಟೆಕ್ನಿಷಿಯನ್ಸ್ ಅನ್ನು ನೇಮಕ ಮಾಡಿದ್ದೇವೆ. ಎಕ್ಸರೇ ಟೆಕ್ನಿಷಿಯನ್ಸ್ ನೇಮಕ ಮಾಡಿದ್ದೇವೆ. ಆದರೆ ಇನ್ನೂ ಸಾಕಷ್ಟು ಪ್ರಮಾಣದಲ್ಲಿ ವೇಕೆನ್ಸಿಗಳು ಇವೆ, ಹೋದ ತಿಂಗಳು ಕ್ಯಾಬಿನೆಟ್ 6000 ಹುದ್ದೆಗಳನ್ನು ನೇಮಕಾತಿ ಮಾಡುತ್ತೇವೆಂದು ಡಿಸಿಷನ್ ತೆಗೆದುಕೊಂಡಿದೆ. ಏಪ್ರಿಲ್ ಕೊನೆಗೆ ಸ್ಟಾಟ್ಯುಟರಿ ರೆಕ್ರೂಟ್‌ಮೆಂಟ್ ಮುಗಿಯುತ್ತದೆ. ರಿಕ್ರೂಟ್‌ಮೆಂಟ್ ರೂಲ್‌ನಲ್ಲಿ ಬದಲಾವಣೆ ಮಾಡಿದ್ದೇವೆ. ಕಾರಣ ಇಷ್ಟೆ, 6000 ಜನರನ್ನು ರಿಕ್ರೂಟ್ ಮಾಡಬೇಕಾದರೆ 64,000 ಅಪ್ಲಿಕೇಷನ್ಸ್ ಕರೆಯಬೇಕಾಗುತ್ತದೆ. ವಿಳಂಬವನ್ನು ಕಡಿಮೆ ಮಾಡುವುದಕ್ಕೆ ಕ್ಯಾಬಿನೆಟ್ ಸೂಕ್ತವಾದ ರೀತಿಯಲ್ಲಿ ನಿಯಮವನ್ನು ಬದಲಾವಣೆ ಮಾಡಿ ಮೆರಿಟ್ ಕಮ್ ರಿಸರ್ವೇಷನ್ ಆಧಾರದ ಮೇಲೆ ನೇಮಕಾತಿ ಮಾಡಿದರೆ ಉತ್ತಮ ಎನ್ನುವ ಉದ್ದೇಶದಿಂದ ಸರ್ಕಾರ ನನಗೆ ತಿಳಿದ ಮಟ್ಟಿಗೆ ಫರ್ಸ್ಟ್ ಅಥವಾ ಸಕೆಂಡ್ ಮೇ ಗೆ ಎಲ್ಲಾ ಕೆಳ ಹಂತದ ಅಪಾಯಿಂಟ್‌ಮೆಂಟ್ ಮುಗಿಯುತ್ತದೆ. ಆಗ ಸಾಕಷ್ಟು ಕೆಲಸ ಮುಗಿಯುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇದನ್ನೂ ಬರೀ ಬಾಯಿಯಲ್ಲಿ ಹೇಳುವುದಕ್ಕಿಂತ ಕಾರ್ಯಗತ ಮಾಡಬೇಕು. ಬರೀ ಹೇಳಿಕೆಗಳನ್ನು ಹೇಳಿಕೊಂಡು ಹೋದರೆ ಇದೇ ಆಗುತ್ತದೆ. ರಾಜ್ಯದಲ್ಲಿ ಹೊಸ ಆಸ್ಪತ್ರೆಗಳನ್ನು ಕೊಡಲಿಲ್ಲ.

ಡಾ|| ಎ.ಬಿ. ಮಾಲಕರೆಡ್ಡಿ : ಇಲ್ಲಿಯವರೆಗೆ ನಾನು ಏನು ಮಾಡಿದ್ದೇವೆ, ಕಾಂಪಿಟಿಷನ್ ಆಗಿ ಕೊಡುವುದು ಆಗಿತ್ತು ನಾನು ಹೆಲ್ತ್ ಮಿನಿಸ್ಟರ್ ಆದೆ, ಇಷ್ಟೊಂದು ಆಸ್ಪತ್ರೆ ಕೊಡುವುದು, ನೀವು ಹೆಲ್ತ್ ಮಿನಿಸ್ಟರ್ ಬಂದಿರಿ ನೀವು ಇಷ್ಟು ಆಸ್ಪತ್ರೆ ಕೊಡುವುದು, ಇದು ಕಾಂಪಿಟಿಷನ್ ಆಗಿ ಹೋಗಿದೆ. ಕಾನೂನುಗಳಿಗೆ ನಿಯಮಗಳಿಗೆ ಮರ್ಯಾದೆ ಇರಬೇಕು. 5, ಕೋಟಿ ಜನಸಂಖ್ಯೆ ಇದೆ 2,441 ಆಸ್ಪತ್ರೆಗಳು ಇವೆ. ದಯಮಾಡಿ ನೋಟ್ ಮಾಡಿಕೊಳ್ಳಿ. ಕೇಂದ್ರ ಸರ್ಕಾರದವರು ನಾವು ಸಹಾಯ ಕೊಡುವುದಿಲ್ಲ ಎಂದು ಹೇಳಿದ್ದಾರೆ ಇದುವರೆಗೆ ಕೇಂದ್ರ ಸರ್ಕಾರ ಪ್ರಾಥಮಿಕ ಮತ್ತು ಉಪ ಆರೋಗ್ಯ ಕೇಂದ್ರಗಳಿಗೆ ಆರ್ಥಿಕ ಸಹಾಯ ಕೊಡುತ್ತಿತ್ತು. ಇಂತಹ ದೊಡ್ಡ ಪ್ರಮಾಣದಲ್ಲಿ ಸಂಪತ್ತು ಇದೆ ಎಂದು ಕಾಣುತ್ತಿದೆ, ಇಷ್ಟೊಂದು ಆಸ್ಪತ್ರೆಗಳನ್ನು ಕೊಡುತ್ತಿದ್ದೀರಿ, ಸರ್ಕಾರದ ನಿಯಮ ಏನಿದೆ, ಕೇಂದ್ರ ಸರ್ಕಾರದ ಡೈರೆಕ್ಷನ್ ಏನಿದೆ, ಅನುಪಾತ 25,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಕೊಡಬೇಕು, ನಮ್ಮಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು 1,683 ಇವೆ, ಆರೋಗ್ಯ ಘಟಕಗಳು 341 ಇವೆ. ಆದರೆ ತಮಿಳುನಾಡಿನಲ್ಲಿ ಏಳು ಕೋಟಿ ಜನಸಂಖ್ಯೆ ಇದೆ, ಪಶ್ಚಿಮ ಬಂಗಾಳದಲ್ಲಿ 7 ಕೋಟಿ ಜನಸಂಖ್ಯೆ ಇದೆ. ಅವರ ಪ್ರಾಥಮಿಕ ಆರೋಗ್ಯ ಕೇಂದ್ರಗಳು 1,103 ಇವೆ. ನಾವು ಐದು ಕೋಟಿ ಜನಸಂಖ್ಯೆ ಇಟ್ಟುಕೊಂಡು 1,683 ಆಸ್ಪತ್ರೆಗಳಿವೆ, ಅವರು ಏಳು ಕೋಟಿ ಜನಸಂಖ್ಯೆ ಇದ್ದು 1,100 ಆಸ್ಪತ್ರೆಗಳು ಇವೆ. ಭಾರತ ಸರ್ಕಾರದ ನಿಯಮ ಏನಿದೆ, ಆ ನಿಯಮದನುಸಾರವಾಗಿ ಸ್ಯಾಂಕ್ಷನ್ ಮಾಡಿದ್ದಾರೆ ಅವರಿಗೆ ಗ್ರಾ್ಯಂಟ್ ಸಿಗುತ್ತದೆ. ನಿಮ್ಮಲ್ಲಿ ಹಣ ಇದೆ ನೀವು ಮಾಡಿಕೊಂಡು ಹೋಗಿ ಎಂದು ಹೇಳುತ್ತಾರೆ. ಇಷ್ಟೊಂದು ಆರೋಗ್ಯ ಕೇಂದ್ರಗಳ ಅವಶ್ಯಕತೆ ಇಲ್ಲ, ಎಕ್ಸೆಪ್‌ಷನ್ ಮಾಡಬಹುದು, ಗುಡ್ಡಗಾಡು ಪ್ರದೇಶಗಳಿಗೆ ಎಕ್ಸೆಪಷನ್ ಮಾಡಬಹುದು ಎಂದು ಹೇಳಿದ್ದಾರೆ. 15, ಸಾವಿರ 12 ಸಾವಿರ ಜನಸಂಖ್ಯೆಗೆ ಕೊಟ್ಟರೆ ಉತ್ತಮ. ಉಳಿದ ಬಯಲು ಪ್ರದೇಶಕ್ಕೆ 25,000 ಜನಸಂಖ್ಯೆಗೆ ಒಂದು ಆರೋಗ್ಯ ಕೇಂದ್ರಬೇಕು. ಎಲ್ಲಾದರೂ ವೇಕೆಂಟ್ ಏರಿಯಾ ತೋರಿಸಿ ಸರ್ಕಾರ ಖಂಡಿತವಾಗಿ ಕನ್‌ಸಿಡರ್ ಮಾಡುತ್ತದೆ.

ಮಾನ್ಯ ಸದಸ್ಯರು : ಆಯುರ್ವೇದಿಕ್ ಆಸ್ಪತ್ರೆ ಆದರೂ ಕೊಡಬೇಕು. ಈಗಿರುವ ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ, ಕೊನೇ ಪಕ್ಷ ಆಯುರ್ವೇದಿಕ್ ಆಸ್ಪತ್ರೆಗಳನ್ನಾದರೂ ಗ್ರಾಮೀಣ ಮಟ್ಟದಲ್ಲಿ ಕೊಡಿ.

ಡಾ|| ಎ.ಬಿ. ಮಾಲಕರೆಡ್ಡಿ : ನಿರಂತರವಾಗಿ 12 ತಿಂಗಳುಗಳಿಂದ ಅಪಾಯಿಂಟ್‌ಮೆಂಟ್ ನಡೆದೇ ಇದೆ. ಆದರೆ ಹಳ್ಳಿಗಳಿಗೆ ಹೋಗಿ ಕೆಲಸ ಮಾಡುವುದಕ್ಕೆ ಯಾರೂ ತಯಾರಿಲ್ಲ ಏನು ಮಾಡುವುದು?

ಶ್ರೀ ಬಿ.ಎನ್. ಬಚ್ಚೇಗೌಡ : ಹಳ್ಳಿಗಳಲ್ಲಿ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಿದ್ದೀರಿ. 6,000 ರೂಪಾಯಿ ಸಂಬಳ ಕೊಡುತ್ತೀರಿ, ಮಾನ್ಯ ಮುಖ್ಯಮಂತ್ರಿಗಳು ಸಾವಿರ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುತ್ತೇವೆಂದು ಹೇಳಿದ್ದಾರೆ.

ಡಾ|| ಎ.ಬಿ. ಮಾಲಕರೆಡ್ಡಿ : ಸ್ಯಾಲರಿ 6,000 ರೂ. ಚಿಲ್ಲರೆ ಇತ್ತು, ಈಗ 7000 ರೂಪಾಯಿ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಡಾಕ್ಟರ್ಸ್‌ಗೆ ಕ್ವಾಟರ್ಸ್ ಇಲ್ಲ, ಅವರಿಗೆ

ಒಂದು ಸಾವಿರ ರೂಪಾಯಿ ಭತ್ಯೆ ಕೊಡುತ್ತಿದ್ದೇವೆ. ಇನ್ನು ಒಂದು ಕ್ರಾಂತಿಕಾರಕವಾದ ನಿರ್ಣಯ ಕ್ಯಾಬಿನೆಟ್ ತೆಗೆದುಕೊಂಡಿದೆ. ಹೊಸಕೋಟೆಯಲ್ಲಿ ಯಾರಾದರೂ ಒಬ್ಬರು ತಜ್ಞರು ಪ್ರೈವೇಟ್ ಪ್ರಾಕ್ಟೀಸ್ ಮಾಡುತ್ತಿದ್ದರೆ ಅವರಿಗೆ 50,60,70 ವರ್ಷ ಆಗಿದ್ದರೂ ಹಾನರರಿಯಾಗಿ ಆ ವೈದ್ಯ ಕೆಲಸ ಮಾಡುವುದಕ್ಕೆ ತಯಾರಿದ್ದರೆ, ಹಿಂದೆ ಹಾನರರಿಯಂ 200 ರೂಪಾಯಿ ತೆಗೆದುಕೊಂಡು ನಾನು ಕೆಲಸ ಮಾಡುತ್ತಿದ್ದೆ, ಈಗ ಸರ್ಕಾರ ಮೂರು ಸಾವಿರ ರೂ.ಗಳನ್ನು ಕೊಡುವುದಕ್ಕೆ ತಯಾರಾಗಿದೆ. ನಾವೂ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಯಾರೂ ತಜ್ಞರು ಅಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಉದಾಹರಣೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅನಸ್ತೇಷಿಯಿಸ್ಟ್ ಇಲ್ಲ; ತಜ್ಞರು ಇಲ್ಲ ವಿಷಯ ತಿಳಿದುಕೊಂಡರೆ ನಿಮಗೆ ಅನುಕೂಲವಾಗುತ್ತದೆ. ಬೆಳಗಾಂ ತಾಲ್ಲೂಕಿನಲ್ಲಿ 28 ಜನ ಡಾಕ್ಟರ್‌ಗಳು ಬಿಟ್ಟು ಹೋದರು. In England they require about 26000 technical personnel in the Health department. ಒಂದೂವರೆ ಸಾವಿರ ಡಾಕ್ಟರ್ ಪೋಸ್ಟ್‌ಗಳನ್ನು ಇಂಡಿಯಾದಲ್ಲಿ ಅಡ್ವರ್ಟೈಸ್ ಮಾಡಿದರು. ಒಂದು ಸಾವಿರ ನರ್ಸಸ್ ಪೋಸ್ಟ್‌ಗಳನ್ನು ಅಡ್ವರ್ಟೈಸ್ ಮಾಡಿದರು. ಅವರೆಲ್ಲಾ ಒಂದೇ ಸಾರಿ ಅಲ್ಲಿಗೆ ಹೋಗುತ್ತಾರೆ. ಏಕೆಂದರೆ ಅವರಿಗೆ ಅಲ್ಲಿ ಹೈಯರ್ ಎಮಾಲ್ಯುಮೆಂಟ್ ಕೊಡುತ್ತಾರೆ. ಅವರು ಹೋಗುತ್ತಾರೆ. The British Parliament has enacted a law that in view of the paucity of the doctors, if a nurse has assisted a cardiac surgeon for more than 15 years, that nurse can undertake the operation because there are no doctors available. Patients have to wait for 2 to 3 years to get operated. ಇಂಗ್ಲೆಂಡಿನಲ್ಲಿ ಒಂದು ಬೈ ಪಾಸ್ ಸರ್ಜರಿ ಮಾಡಬೇಕಾದರೆ ಮೂರು ವರ್ಷಗಳ ಕ್ಯೂ ಇದೆ. That is why they have enacted a law by which a nurse who has put in 15 years of service or has assisted a cardiac surgeon, she can undertake the operation. Then, a nurse who has put in ten years of service, she can give prescription to the patients So, we have to move with the time.

ಶ್ರೀ ಬಿ.ಎನ್. ಬಚ್ಚೇಗೌಡ : ನಾವೂ ಆ ಪರ್ಕ್ಸ್ ಎಲ್ಲವನ್ನೂ ಕೊಡಬೇಕಾಗುತ್ತದೆ. ನಾನು ಹೇಳುವುದೇನೆಂದರೆ ಇಂದು ಸಾಕಷ್ಟು ಮೆಡಿಕಲ್ ಕಾಲೇಜ್‌ಗಳು ಇವೆ. ಈ ಕಾಲೇಜ್‌ಗಳಿಗೆ ಸಾಕಷ್ಟು ವಿದ್ಯಾರ್ಥಿಗಳು ಸೇರುತ್ತಿದ್ದಾರೆ ಮತ್ತು ಪಾಸ್ ಆಗಿ ಹೊರಗೆ ಬರುತ್ತಲೂ ಇದ್ದಾರೆ. ಅವರಿಗೆ Five years they should serve in rural areas ಎಂಬ ಒಂದು ಕಂಡೀಷನ್ ಹಾಕಲೇಬೇಕು. ಆ ಕಂಡೀಷನ್ ಹಾಕುವುದನ್ನು ನೀವು ಇಂಪ್ಲಿಮೆಂಟ್ ಮಾಡಬೇಕು.

ಎ.ಬಿ. ಮಾಲಕರೆಡ್ಡಿ : ಅದರ ಬಗ್ಗೆ ಡಿಫಿಕಲ್ಟೀಸ್ ಏನು ಇದೆ ಎಂಬ ಬಗ್ಗೆ ನಿಮಗೆ ಹೇಳುತ್ತೇನೆ. ಆದರೆ ಬಗ್ಗೆಯೂ ಕೂಡ ಈ ಸರ್ಕಾರ ಚಿಂತನೆ ಮಾಡಿದೆ. ನಾವು ಎಲ್ಲರ ಕಡೆಯಿಂದ ಅಂಡರ್‌ಟೇಕಿಂಗ್ ತೆಗೆದುಕೊಳ್ಳುತ್ತೇವೆ ಎಂದು ಇಟ್ಟುಕೊಳ್ಳಿ, This is a democratic country. Fundamental Rights ಇವೆ. ಒಂದು ವರ್ಷದಲ್ಲಿ ಮೂರು ಸಾವಿರ ಜನರು ಪಾಸ್ ಆಗುತ್ತಾರೆಯಾದ ಕಾರಣ ನಾವು ಯಾರ ಮೇಲೆ ಎನ್‌ಫೋರ್ಸ್ ಮಾಡುವುದಕ್ಕೆ ಆಗುತ್ತದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವೇ ಬಜೆಟ್‌ನಲ್ಲಿ ರೂರಲ್ ಸರ್ವೀಸ್ ಕಂಪಲ್‌ಸರಿ ಮಾಡುತ್ತೇವೆಂದು ಹೇಳಿದ್ದೀರಲ್ಲಾ.

ಡಾ|| ಎ.ಬಿ. ಮಾಲಕರೆಡ್ಡಿ : ನಾವು ಹೇಳಿರುವುದು ಯಾರು ಪೋಸ್ಟ್‌ಗ್ರಾಜ್ಯುಯೇಟ್ ಕೋರ್ಸ್‌ಸ್ ತೆಗೆದುಕೊಳ್ಳುತ್ತಾರೆ. ಅಂಥವರಿಗೆ ಪಿ.ಜಿ. ಕೋರ್ಸ್‌ಗೆ ಅಡ್ಮಿಷನ್ ಸಿಕ್ಕಮೇಲೆ ಒಂದು ವರ್ಷ ಗ್ರಾಮಾಂತರ ಪ್ರದೇಶದಲ್ಲಿ ಹೋಗಿ ಕೆಲಸ ಮಾಡಲೇಬೇಕೆಂದು ಕಂಪಲ್‌ಸರಿಯಾಗಿ ಅಂಡರ್‌ಟೇಕಿಂಗ್ ತೆಗೆದುಕೊಳ್ಳುತ್ತೇವೆ. ಆದರೆ ಮಾನ್ಯ ಬಚ್ಚೇಗೌಡರು ಎಂ.ಬಿ.ಬಿ.ಎಸ್‌ಗೆ ಅಡ್ಮಿಷನ್ ಆಗುವವರಿಂದ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಬಚ್ಚೇಗೌಡ : ನಾನು ಹೇಳುವುದೇನೆಂದರೆ ಎಂ.ಬಿ.ಬಿ.ಎಸ್. ಪಾಸ್ ಮಾಡಿಕೊಂಡು ಹೊರಗೆ ಬಂದ ಡಾಕ್ಟರ್‌ಗಳು ಕಡ್ಡಾಯವಾಗಿ ರೂರಲ್ ಸರ್ವೀಸ್ ಮಾಡಬೇಕೆಂದು ಮಾಡಿ. ಅವರು ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸುವವರೆಗೆ ನಾವು ಕೊಡಬೇಕಾದ ಎನ್.ಓ.ಸಿಯನ್ನು ಕೊಡದೇ ಇದ್ದಾಗ ಅವರು ಕೆಲಸ ಮಾಡಲೇ ಬೇಕಾಗುತ್ತದೆ. ಆಗ ಅವರು ಖಂಡಿತ ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಾರೆ.

ಡಾ|| ಎ.ಬಿ. ಮಾಲಕರೆಡ್ಡಿ : ಒಂದು ವರ್ಷದಲ್ಲಿ ಮೂರು ಸಾವಿರ ವಿದ್ಯಾರ್ಥಿಗಳು ಎಂ.ಬಿ.ಬಿ.ಎಸ್. ಪಾಸ್ ಮಾಡಿಕೊಂಡು ಬರುತ್ತಾರೆ. Whom do you want to requistion? ನನಗೆ ಏತಕ್ಕೆ ಕಡ್ಡಾಯ ಮಾಡುತ್ತೀರಿ. ಅಲ್ಲಿದ್ದಾನಲ್ಲಾ ಅವನಿಗೆ ಕಡ್ಡಾಯ ಮಾಡಿ ಅನ್ನುತ್ತಾನೆ. ಯಾರಿಗೆ ಕಡ್ಡಾಯ ಮಾಡುತ್ತೀರಿ? This is the Practical Difficulty. When I was admitted to the Ist MBBS, even I had also given an undertaking But on whom to enforce? ಆದರೆ ತಜ್ಞರ ಸಲಹೆಯನ್ನು ಪಡೆದುಕೊಂಡು ಪಿ.ಜಿ ಕೋರ್ಸ್ ತೆಗೆದುಕೊಂಡಿರುವವರಿಗೆ ಇದನ್ನು ಎನ್‌ಫೋರ್ಸ್ ಮಾಡಬಹುದು ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಏಕೆಂದರೆ ಆ ರೀತಿ ಅಡ್ಮಿಷನ್ ತೆಗೆದುಕೊಳ್ಳುವವರು ಕಡಿಮೆ ಜನರಿರುತ್ತಾರೆ. ಹೆಚ್ಚು ಎಂದರೆ 200 ರಿಂದ 300 ಜನರಿರುತ್ತಾರೆಯಾದ ಕಾರಣ ಅವರ ಮೇಲೆ ಎನ್‌ಫೋರ್ಸ್ ಮಾಡಬಹುದು. ಅಷ್ಟು ವೇಕೆನ್ಸಿ ನಮಗೆ ಬೇಕಾಗಿರುತ್ತದೆ. ಅವರ ಮೇಲೆ ಎನ್‌ಫೋರ್ಸ್ ಮಾಡಬಹುದು. ಈಗ ನಮಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಿಫಿಕಲ್ಟಿ ಕಡಿಮೆಯಾಗುತ್ತಿದೆ. ಕೇವಲ ಶೇಕಡ 15 ರಿಂದ 20 ವೇಕೆನ್ಸಿ ಇದೆಯಷ್ಟೆ. ಆದರೆ ನಮಗೆ ಡಿಫಿಕಲ್ಟೀಸ್ ಬರುತ್ತಿದ್ದುದ್ದು ಹೊಸಕೋಟೆಯಂಥ ಆಸ್ಪತ್ರೆಯಲ್ಲಿ. ತಮ್ಮ ಸರ್ಕಾರವಿದ್ದಾಗ ತಾವು ಅಂಡರ್‌ಟೇಕಿಂಗ್ ಕೊಟ್ಟಿದ್ದೀರಿ, You have given a sacred undertaking to the World Bank that we will provide specialists in all the taluk Headquarters and district Headquarters you please help us". You have given the undertaking when your government was there. You have availed the funds of Rs. 543 crores. But we are not able to give specialists. That is the difficulty now. The other day, last month, the World Bank Vice-Chairman visited Karnataka. I told him this is the difficulty. Physically we don't have doctors to post them. Then he wanted know what is the procedure adopted for appointment of doctors. I told him, the procedure of appointment is,

appointment made at the PHC level after seven years they have to go to taluk level hospital. Then after 14 years they will go to district hospitals. What he suggested was, at this rate you will not be able to provide specialists to taluk level hospitals. What he suggested was to make hospital appointments. The vice Chairman of the World Bank, he was the Health Minister in Holland it seems. Unless you introduce the system of hosital appointments you will never be able to solve the problem. That is what he was telling.

ಶ್ರೀ ಬಿ. ಸೋಮಶೇಖರ್ : ಅದಕ್ಕೋಸ್ಕರವೇ ಆ ದಿಕ್ಕಿನಲ್ಲಿ ಒಂದು ನಿರ್ಣಯ ಹಿಂದೆ ಇತ್ತು. ಏನೆಂದರೆ ಜಿಲ್ಲಾಧಿಕಾರಿಗಳೇ ಸ್ಥಳೀಯವಾಗಿ ಅವಶ್ಯಕತೆಗಳಿಗನುಗುಣವಾಗಿ available doctors should be appointed on temporary basis ಎಂದು ಮಾಡಿದ್ದರು. ಈಗ ಅದನ್ನೂ ಕೂಡ ತಾವು ತೆಗೆದುಬಿಟ್ಟು ಕೇವಲ ರೆಗ್ಯುಲರ್ ರಿಕ್ರೂಟ್‌ಮೆಂಟ್ ಆಗಬೇಕು ಎಂದು ಮಾಡಿರುವುದರಿಂದ ಇವೊತ್ತು ಸ್ಥಳೀಯವಾಗಿ ತಾಲ್ಲೂಕು ಲೆವಲ್ ಆಸ್ಪತ್ರೆಗೂ ಡಾಕ್ಟರ್ ಯಾರೂ ಸಿಗುತ್ತಿಲ್ಲ. ತಾವು ಅದನ್ನು ಏಕೆ ತೆಗೆದಿದ್ದೀರಿ? ಈಗ ತಾವೇನು ಹಾಸ್ಪಿಟಲ್ ಬೇಸ್ಡ್ ಅಪಾಯಿಂಟ್‌ಮೆಂಟ್ ಬಗ್ಗೆ ಹೇಳಿದಿರಿ ಅದು ತುಂಬಾ ಒಳ್ಳೆಯದು.

ಶ್ರೀ ಬಿ.ಎನ್. ಬಚ್ಚೇಗೌಡ : ಮೊದಲು ಡಿ.ಸಿ.ಯವರೇ ಕೊಡುತ್ತಿದ್ದ ಡಾಕ್ಟರ್‌ನ್ನು ವಾಪಸ್ಸು ಪಡೆದು ಡಿಪಾರ್ಟ್‌ಮೆಂಟ್‌ನಲ್ಲಿಯೇ ರಿಕ್ರೂಟ್‌ಮೆಂಟ್‌ನ್ನು ಮಾಡಿ ಕಳುಹಿಸಬೇಕು ಎಂದು ತೀರ್ಮಾನವಾಗಿದೆ.

Dr. A.B. Maalaka Reddy :- This is to fulfill the undertaking we have given to the Court. Continuously we cannot make contract appointments. Atlease one in a year we are suffered to make regular appointments. To fulfill that requirement, we are making regular appointments and to make way for the regularly appointed doctors, we have temporarily withheld contract appointments. That is all.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸಚಿವರು, ಪ್ಯಾರಲಲ್ ಆಗಿ contract doctors as well as regular appointment doctors ಎರಡೂ ರೀತಿಯಲ್ಲೂ ಹೋಗಬಹುದು, ಇಲ್ಲೂ ಅಪಿಯರ್ ಆಗಬಹುದು, ಇಲ್ಲೂ ಸೆಲಿಕ್ಷನ್ ಆಗುತ್ತದೆ, ನೇಮಕಾತಿ ಆದಾಗ ಅವನು ಎಲ್ಲಿ ಬೇಕೋ ಅಲ್ಲಿ ಆಪ್ಟ್ ಮಾಡಿಕೊಳ್ಳುತ್ತಾನೆ.

ಡಾ|| ಎ.ಬಿ ಮಾಲಕರೆಡ್ಡಿ : ಈಗೇನು ರೆಗ್ಯುಲರ್ ಆಗಿ ನಾವು ಮಾಡಿದ್ದೇವೆ, ಅವರಿಗೆ ಡಿಫಿಕಲ್ಟೀಸ್ ಇದೆ.

ಉಪಾಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, ನಿಮ್ಮ ಭಾಷಣವನ್ನು ಪೂರ್ಣಗೊಳಿಸಿಬಿಡಿ. ಆ ಮೇಲೆ ಉತ್ತರ ಕೊಡುವವರು ಕೊಡುತ್ತಾರೆ. ಅದನ್ನು ಬಿಟ್ಟು ಪ್ರತಿಯೊಂದಕ್ಕೂ ಪ್ರಶ್ನೆಗಳನ್ನೂ ಕೇಳುತ್ತಾ ಹೋಗುತ್ತಿದ್ದರೆ ನಿಮ್ಮ ಟೈಮ್ ಮುಗಿದುಹೋಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸಚಿವರೇ, ವಾಲಂಟರಿಯಾಗಿ ವಿಚಾರಗಳನ್ನು ಹೇಳುವುದಕ್ಕೆ ಪ್ರಾರಂಭ ಮಾಡಿದರು. ಆದುದರಿಂದ ಕೆಲವು ವಿಷಯಗಳು ಈಚೆಗೆ ಬಂದವು. ಏಕೆಂದರೆ ಇದೊಂದು ಮುಖ್ಯವಾದ ಇಶ್ಯೂ. ಆರೋಗ್ಯದ ಬಗ್ಗೆ ತಿಳಿದುಕೊಳ್ಳೋಣ ಎಂದು ನಾನು ಪ್ರಶ್ನೆ ಕೇಳಿದನಷ್ಟೆ. ಈಗ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ವಿದ್ಯುತ್ ಸಮಸ್ಯೆ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಈಗಾಗಲೇ ಈ ವಿಷಯದ ಬಗ್ಗೆ ಚರ್ಚೆ ಆಗಿದೆ. ಇಂದು ಒಟ್ಟು 43 ತಾಲ್ಲೂಕುಗಳು ಕಪ್ಪು ಮತ್ತು ಬೂದು ಪ್ರದೇಶಗಳೆಂದು ಇವೆ. ಈ ಪ್ರದೇಶಗಳ ಬಗ್ಗೆ ಆಯವ್ಯಯದಲ್ಲಿ ವಿದ್ಯುತ್‌ಗೆ ಸಂಬಂಧಪಟ್ಟಂತೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ನಾನು ರಿಪ್ಲೈ ಕೊಡುವಾಗ ಈ ಬಗ್ಗೆ ಹೇಳಿಕೆಯನ್ನು ಸದನದಲ್ಲಿ ಹೇಳುತ್ತೇನೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ 43 ಪ್ರದೇಶಗಳಲ್ಲಿ ಲಕ್ಷಾಂತರ ಬೋರ್‌ವೆಲ್‌ಗಳನ್ನು ಹಾಕಿಕೊಂಡು ನೀರು ಸಿಕ್ಕದೇ ಇರುವವರಿಗೆ ರೆಗ್ಯುಲರೈಸ್ ಮಾಡುವುದಕ್ಕೆ ಒಪ್ಪುತ್ತಿಲ್ಲ. ಇದರ ಬಗ್ಗೆ ನಿಮಗೆ ಹೇಳಿದಾಗ ಉತ್ತರ ಕೊಡುವಾಗ ಹೇಳುತ್ತೇನೆ ಎಂದಿದ್ದೀರಿ. ಇಂಥವರಿಗೆ ರಿಲ್ಯಾಕ್ಸ್ ಮಾಡಿ ಬೂದು ಮತ್ತು ಕಪ್ಪು ಪ್ರದೇಶದಲ್ಲಿ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಒನ್ ಟೈಮ್‌ನಲ್ಲಿ ರೆಗ್ಯುಲರೈಸ್ ಮಾಡುವ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಲಾಗಿದೆ. ಈ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಬೇಕು, ಆದರೆ ಈಗ ಗಣಿ ಸಚಿವರು ಇಲ್ಲ. ಅವರು ಉತ್ತರ ಹೇಳಬೇಕಾಗಿತ್ತು. ಈಗ 43 ಪ್ರದೇಶಗಳು ಕಪ್ಪು ಮತ್ತು ಬೂದು ಪ್ರದೇಶಗಳು ಎಂದು ಏನು ತೀರ್ಮಾನವಾಗಿದೆ ಇದು ಬಹಳ ಹಿಂದೆ ಆದಂಥದ್ದು. ಆದರೆ ಇವೊತ್ತು ಅದರ ಬಗ್ಗೆ ವೈಜ್ಞಾನಿಕವಾಗಿ ತಿಳಿದು ಹೇಳಬೇಕಾಗುತ್ತದೆ. ನಮ್ಮ ಕಡೆಯಲ್ಲೆಲ್ಲಾ ನೀರಿದೆ. ನೀರು ಇರುವ ಕಡೆಗೂ ಇವೊತ್ತು ಡಿಕ್ಲೇರ್ ಮಾಡಿಬಿಟ್ಟಿದ್ದಾರೆ. ಇನ್ನು ಮುಂದೆ ಕೊಡುವುದೇ ಇಲ್ಲ ಎಂದು ತೀರ್ಮಾನವಾಗಿಬಿಟ್ಟಿದ್ದರೆ ಈ 43 ತಾಲ್ಲೂಕಿಗೆ ಕೋಲಾರ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳು ಬರುತ್ತವೆ ಬೆಂಗಳೂರು ಜಿಲ್ಲೆಯಲ್ಲಿ ದೇವನಹಳ್ಳಿ, ಹೊಸಕೋಟೆ, ಕನಕಪುರದಲ್ಲಿರುವ ಎಲ್ಲಾ ತಾಲ್ಲೂಕುಗಳು ಬರುತ್ತವೆ, ತುಮಕೂರು ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳು ಬರುತ್ತವೆ. ಈ ಬಗ್ಗೆ ಕಳೆದ ಬಾರಿಯ ಬಜೆಟ್‌ನಲ್ಲಿ ತಾವು ಏನು ಹೇಳಿದ್ದೀರೆಂದರೆ ಜಲ ಸಂವರ್ಧನೆ ಮತ್ತು ವಾಟರ್ ರೀಚಾರ್ಜ್ ಆಗುವ ದೃಷ್ಟಿಯಿಂದ ಅದಕ್ಕೆ ಸಹಾಯವಾಗಬೇಕೆಂದು ಹೇಳಿ ಅದಕ್ಕೆ 18 ಕೋಟಿ ರೂ.ಗಳನ್ನು ಇಟ್ಟು ಸಹಾಯ ಮಾಡಲಾಗುವುದು ಎಂದು ಹೇಳಿದ್ದೀರಿ. ಆ ಹಣ ಕೇಂದ್ರ ಸರ್ಕಾರದಿಂದ ಬಂದಿದ್ದಿರಬಹುದು ಅಥವಾ ತಾವು ತಮ್ಮ ಸರ್ಕಾರದಿಂದ ಕೊಡುವಂಥದ್ದಿರಬಹುದು, ಅದು ಪರ್ಕೋಲೇಷನ್ ಆಗಿ ನೀರಿನ ಕೆಳಕ್ಕೆ ಹೋಗಿ ಮತ್ತು ರೀಚಾರ್ಜ್ ಆಗಿ ಅನುಕೂಲವಾಗುತ್ತದೆ ಎಂಬ ಈ ಕಾರ್ಯಕ್ರಮಕ್ಕೆ ಹಣವೇ ಬಿಡುಗಡೆಯಾಗಲಿಲ್ಲ. 18 ಕೋಟಿ ರೂ. ಹಣ ಬಿಡುಗಡೆಯೂ ಆಗಲಿ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ನೀರಿನ ಕೆಳಗೆ ಹೋಗಿ ನೀರನ್ನು ಅಭಿವೃದ್ಧಿ ಮಾಡುವಂಥ ಯೋಜನೆ ಏನಿದೆ ಅದಕ್ಕೆ ಹಣ ಕೊಡಲಿಲ್ಲ ಮತ್ತೆ ಈ ಬಾರಿಯೂ ಕೂಡ ಅದರ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ಇವೊತ್ತು ಅದನ್ನು ವಿಶ್ವಬ್ಯಾಂಕ್‌ಗೆ ಕೊಟ್ಟು 470 ಕೋಟಿ ರೂ.ಗಳ ಸ್ಕೀಂ ಮಾಡಿ ಅದು ಬಂದಮೇಲೆ ರಾಜ್ಯದಲ್ಲಿ ಈ ರೀತಿ ನೀರನ್ನು ಅಭಿವೃದ್ಧಿಪಡಿಸುವಂಥದ್ದು, ಚೆಕ್‌ಡ್ಯಾಮ್ಸ್ ಮತ್ತು ಬೇರೆ ಬೇರೆ ರೀತಿಯಲ್ಲಿ ಪ್ರೊಟೆಕ್ಟ್ ಮಾಡಿ ಅದರಲ್ಲಿ ನೀರನ್ನು ಹೆಚ್ಚಿಸುವ ಕಾರ್ಯವನ್ನು ಮಾಡುತ್ತೇವೆ ಎಂದು ಹೇಳಿದ್ದರು. ಅದೂ ಕೂಡ ಯಶಸ್ವಿಯಾಗಿಲ್ಲ. ಪರ್ಕೋಲೇಷನ್

ಸಿಸ್ಟಂನ್ನು ಇಂಪ್ರೂವ್ ಮಾಡುವ ದೃಷ್ಟಿಯಿಂದ ಹಣ ತೊಡಗಿಸಿ ಕೊಳ್ಳುವ ಬಗ್ಗೆ ಹೇಳಲು ಮಾನ್ಯ ಸಚಿವರೂ ಕೂಡ ಈಗ ಇಲ್ಲಿ ಇಲ್ಲ. ಇದರ ಜೊತೆಗೆ ಕಳೆದ ಬಾರಿ ಮತ್ತು ಈ ಬಾರಿಯೂ ತಾವೂ ಹೇಳಿದ್ದೀರಿ. ಏನೆದರೆ 5000 ಕೆರೆಗಳನ್ನು ಹೋಬಳಿ ಮಟ್ಟದಲ್ಲಿ ತೆಗೆದುಕೊಂಡು ಹೂಳು ತೆಗೆಯುವ ಕಾರ್ಯವನ್ನು ಮಾಡಬೇಕು, ಇದಕ್ಕಾಗಿ ಒಂದು ಸಾವಿರ ಕೋಟಿ ರೂ.ಗಳನ್ನು ವಿಶ್ವಬ್ಯಾಂಕ್‌ವರಿಗೆ ಕೇಳಿದ್ದೇವೆ. ಆ ಹಣ ಬಂದಾಗ ಮುಂದಿನ ಐದು ವರ್ಷಗಳಲ್ಲಿ ಜಲ ಸಂವರ್ಧನ ಕಾರ್ಯಕ್ರಮದಲ್ಲಿ ಸಂಘಗಳನ್ನು ಮಾಡಿ ಇಂಪ್ಲಿಮೆಂಟ್ ಮಾಡಲಾಗುವುದು ಎಂದು ಕಳೆದ ಎರಡು ವರ್ಷಗಳಿಂದಲೂ ತಾವು

4.00 ಪಿ.ಎಂ.

ಹೇಳಿಕೊಳ್ಳುತ್ತಾ ಬಂದಿದ್ದೀರಿ. ಹೋದ ಸಲ ಮಳೆ ಬಂತು, ಕೆರೆಗಳಲ್ಲಿ ಹೂಳು ತೆಗೆಯುವುದಕ್ಕೆ ಆಗಲಿಲ್ಲ. ಈ ಸಾರಿ ಬೇಸಿಗೆ ಇತ್ತು, ಬರಗಾಲ ಇರುವುದರಿಂದ ಹೂಳು ತೆಗೆಯುವಂತಹ ಕೆಲಸವನ್ನು ಜೂನ್‌ವರೆಗೆ ಮಾಡಿಸಬಹುದು ಮತ್ತು ಅಲ್ಲಿರತಕ್ಕಂಥ ಸ್ಥಳೀಯರ ಸಹಕಾರದಿಂದ, ಅಲ್ಲಿ ಅವರೂ ಸೇರಿಕೊಂಡು ಆ ಕೆಲಸವನ್ನು ಮಾಡತಕ್ಕಂಥಾದ್ದು ಆಗಬೇಕಾಗಿತ್ತು. ಅದು ಆಗಿಲ್ಲ. ಆ ದೃಷ್ಟಿಯಿಂದ ಅದಕ್ಕೆ ಒತ್ತನ್ನು ಕೊಟ್ಟರೆ ಒಳ್ಳೆಯದು. ಇಲ್ಲದೇ ಇದ್ದರೆ ಇನ್ನೂ ಐದು-ಹತ್ತು ವರ್ಷದಲ್ಲಿ ಕುಡಿಯುವ ನೀರಿಗೆ ಕಷ್ಟವಾಗುತ್ತದೆ ಎಂಬ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅನೇಕ ಕಡೆ ಬೋರ್ ಕೆಳಗಡೆ ಹೋದಷ್ಟು ಬ್ಲಾಕಿಷ್ ವಾಟರ್ ಬರುತ್ತದೆ. ಇನ್ನೂ ಕೆಲವು ಕಡೆ ಫ್ಲೋರೋಸಿಸ್ ಬಂದು ಆ ತರಹ ನೀರು ಬರುತ್ತಿದೆ. ಒಳ್ಳೆಯ ಸರ್ಫೇಸ್ ವಾಟರ್ ಇವತ್ತು ಸಿಗುತ್ತಿಲ್ಲ. ನೀರಿನ ಬಗ್ಗೆ ನಾವು ಹಾಹಾಕಾರವನ್ನು ನೋಡುತ್ತಿದ್ದೇವೆ. ಸರ್ಫೇಸ್ ವಾಟರ್‌ಬೇಕು ಎಂದರೆ ಡ್ಯಾಂನಲ್ಲಿರುವ ನೀರನ್ನೆಲ್ಲಾ ಕುಡಿಯುವ ನೀರಿಗೇ ಉಪಯೋಗಿಸಿಕೊಳ್ಳಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ತಾವು ಕಳೆದ ಎರಡು ವರ್ಷದಿಂದ ಹೇಳಿಕೊಂಡು ಬಂದಿದ್ದೀರಿ. ಅದೇನೆಂದರೆ ಕೆರೆಗಳ ಸಂರಕ್ಷಣೆ ಆಗಬೇಕು. ನಮ್ಮ ರಾಜ್ಯದಲ್ಲಿ ಏನು 45 ಸಾವಿರ ಕೆರೆಗಳು ಇವೆ ಅವುಗಳನ್ನು ಆಯ್ಕೆ ಮಾಡಿಕೊಂಡು ಪ್ರೈಯಾರಿಟಿ ಬೇಸಿಸ್‌ನಲ್ಲಿ ಹೂಳು ತೆಗೆಯುವಂತಹ ಕಾರ್ಯವಾದರೆ ನೀರಿಗೆ ಅನುಕೂಲವಾಗುತ್ತದೆ. ಅದಕ್ಕೆ ತಾವು ಏನು ಆದ್ಯತೆ ಕೊಟ್ಟು ಮಾಡಬೇಕೆಂದು ಹೇಳುತ್ತಿದ್ದೀರಿ, ಆ ಆದ್ಯತಾ ಮಟ್ಟದಲ್ಲೆ ಇದನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತಾ, ಇವತ್ತು ತೋಟಗಾರಿಕೆಯಲ್ಲಿ ಅದರಲ್ಲೂ ಮುಖ್ಯವಾಗಿ ರೇಷ್ಮೆ ನಮ್ಮ ರೈತನಿಗೆ ಬೇಕಾಗಿರತಕ್ಕಂಥಾದ್ದು. ಇವತ್ತು ರೇಷ್ಮೆಯಲ್ಲಿ ಬೈವೋಲ್ಟೇನ್ ಅಭಿವೃದ್ಧಿ ಮಾಡುವುದಕ್ಕೆ ಒತ್ತು ಕೊಡಬೇಕು. ಇವತ್ತು 50 ಸಾವಿರ ಮೆಟ್ರಿಕ್ ಟನ್ ಕೊಡುವಂತಹ ಚೈನಾ ನಂಬರ್-1, ಪ್ರಪಂಚದಲ್ಲಿ ಹೆಚ್ಚು ಉತ್ಪಾದನೆ ಇರತಕ್ಕಂಥ ರೇಷ್ಮೆ ಬರುತ್ತಿರುವುದರಿಂದ ರೈತರಿಗೆ ಬೆಲೆ ಸಿಗದೆ ಇರುವಂತಹ ಪರಿಸ್ಥಿತಿ ಇದೆ. ಚೈನಾ ಸಿಲ್ಕ್ ಇವತ್ತು ಸಾಕಷ್ಟು ಈ ರಾಷ್ಟ್ರದ ಒಳಗಡೆ ಬರುತ್ತಿದೆ. ಅದನ್ನು ತಡೆಯುವಂತಹ ಕಾರ್ಯಕ್ರಮ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವಂಥಾದ್ದು ಆಗಬಹುದು ಮತ್ತು ಎನ್‌ಫೋರ್ಸ್‌ಮೆಂಟ್ ಇಲಾಖೆ ಕೆಲಸ ಮಾಡಿ ಅದನ್ನು ನಿಯಂತ್ರಣ ಮಾಡಿದರೆ, 10 ಸಾವಿರ ಮೆಟ್ರಿಕ್ ಟನ್ ರೇಷ್ಮೆ ಉತ್ಪಾದನೆ ಆಗುತ್ತಿರತಕ್ಕಂಥ ಕರ್ನಾಟಕಕ್ಕೆ ಹೆಚ್ಚು ಹಣವನ್ನು ತೊಡಗಿಸುವಂತಹ ಕೆಲಸವಾಗಬೇಕು. ಆದರೆ ಇದರ ಬಗ್ಗೆ ಏನೂ ಪ್ರಸ್ತಾಪ ಇಲ್ಲ.

ರೇಷ್ಮೆಗೆ ಏನಾದರೂ ವಿಶೇಷವಾಗಿ ಹಣ ಕೊಟ್ಟರೆ ಒಳ್ಳೆಯದು. ಇವತ್ತು ರೈತ ಮನೆ ಕಟ್ಟಿಕೊಳ್ಳುತ್ತಾನೆ ಹಾಗೂ ಅದರಿಂದ ಅವನ ಬದುಕು ಹಸನಾಗುತ್ತದೆ. ಅನೇಕ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿಯಲ್ಲಿ ತೊಡಗಿಸಿರತಕ್ಕಂಥ ಯುವಕರು ಮೇಲೆ ಬರುವಂತಹ ಕಾರ್ಯವಾಗುತ್ತದೆ. ಅದಕ್ಕೆ ಸಬ್ಸಿಡಿ ಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಈ ರೀತಿ ಮಾಡಿದಾಗ ಮಾತ್ರ ಅವನು ಸ್ವಂತ ಉದ್ಯೋಗದಲ್ಲಿ ಬದುಕುವಂತಹ ಮಾರ್ಗ ಆಗುವಂತಹ ಕೆಲಸ ಇವತ್ತು ಆಗಬೇಕಾಗುತ್ತದೆ. ಆದರೆ ಅದಕ್ಕೆ ಏನೂ ಹಣವನ್ನು ತೊಡಗಿಸಿಲ್ಲ. ಮತ್ತು ರೇಷ್ಮೆ ಸಚಿವರು ಇತ್ತೀಚಿನ ಅವರ ಹೇಳಿಕೆಯಲ್ಲಿ ಎನ್‌ಫೋರ್ಸ್‌ಮೆಂಟ್ ಅನ್ನು ಕೆಳಗಡೆ ಮಾತ್ರ ಎಂದರೆ ಎಲ್ಲಿ ಕಕ್ಕೂನ್ ಗೂಡು ತಯಾರಿಕೆ ಮತ್ತು ಬೈವೋಲ್ಟಿನ್ ಏರಿಯಾದಲ್ಲಿ ಮಾತ್ರ ಮಾಡುವಂಥಾದ್ದು, ಹಾಗೂ ಅದಕ್ಕೆ ಮೇಲೆ ಇರತಕ್ಕಂಥ ಸಿಲ್ಕ್ ಎಕ್ಸ್‌ಚೇಂಜ್ ಮತ್ತು ಸಿಲ್ಕ್ ಏರಿಯಾದಲ್ಲಿ ಎನ್‌ಫೋರ್ಸ್‌ಮೆಂಟ್ ಬೇಕಾಗಿಲ್ಲ. ಅದನ್ನು ಉದಾರೀಕರಣ ಮಾಡುವಂತಹ ಉದ್ದೇಶ ಇವತ್ತು ಇರುವಂತಾದ್ದು ಈಗಾಗಲೇ ಮಾನ್ಯ ಸಿಂಧ್ಯರವರು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು ಸಿಲ್ಕ್ ಎಕ್ಸ್‌ಚೇಂಜ್ ಬೇಕು ಇಲ್ಲದೇ ಇದ್ದರೆ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗುತ್ತದೆ ಎಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಕಂಟಿನ್ಯೂ ಮಾಡೋಣ ಸಿಲ್ಕ್ ಎಕ್ಸ್‌ಚೇಂಜ್ ಬೇಕಾಗುತ್ತದೆಂದು ಭರವಸೆ ಕೊಟ್ಟಿದ್ದಾರೆ. ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಇನ್ನು ತೋಟಗಾರಿಕೆ ಉತ್ಪಾದನೆಗಳಾದ ಹಣ್ಣು, ಹೂವು ಮತ್ತು ತರಕಾರಿಯನ್ನು ಬೆಳೆಯುತ್ತಿದ್ದಾನೆ. ಈವತ್ತು ರೈತ ಈ ಲಾಭದಾಯಕ ಕೃಷಿಯನ್ನು ಅವಲಂಬಿಸಿದ್ದಾನೆ. ಅವನಿಗೆ ಮಾರುಕಟ್ಟೆಯಲ್ಲಿ ಹಣ ಸಿಗಬೇಕೆಂದರೆ ಇವತ್ತು ಇರತಕ್ಕಂಥ ಹಾಪ್‌ಕಾಮ್ಸ್‌ನಲ್ಲಿ ವ್ಯವಸ್ಥೆಯಿಲ್ಲಿ ರೈತರು ಬೆಳೆದಿದ್ದುರಲ್ಲಿ ಬೆಳೆ ಒಂದರಿಂದ ಎರಡು ಪರ್ಸೆಂಟ್ ಕೊಂಡುಕೊಳ್ಳುವುದಕ್ಕೆ ಆಗುತ್ತಿಲ್ಲ. ಅದರ ಜೊತೆಗೆ ರೈತನು ಮಧ್ಯವರ್ತಿಗಳಿಗೆ ಹಾಗೂ ದಲ್ಲಾಳಿಗಳಿಗೆ ಸಿಕ್ಕಿಹಾಕಿಕೊಂಡು ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿರುವುದನ್ನು, ಶೋಷಣೆಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಮ್ಮ ತಾಲ್ಲೂಕಿನಲ್ಲಿ ಎನ್‌ಡಿಡಿಬಿವತಿಯಿಂದ ಸುಮಾರು 1500 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರೋಸೆಸಿಂಗ್ ಯೂನಿಟ್ಸ್ ಮಾಡಿ ಹಣ್ಣು ಮತ್ತು ತರಕಾರಿ ಸಂಸ್ಕರಣೆ ಮಾಡುವಂತಹ ವ್ಯವಸ್ಥೆಗೆ ಹಾಗೂ ಕೋಲ್ಡ್ ಸ್ಟೋರೇಜ್ ಮಾಡುವಂತಹ ಬಗ್ಗೆ ಏನೂ ಪ್ರಸ್ತಾಪ ಇಲ್ಲ. ಇವತ್ತು ಕೋಲ್ಡ್ ಸ್ಟೋರೇಜ್‌ಗಳೆಲ್ಲಾ ಮುಚ್ಚಿ ಹೋಗುತ್ತಿದೆ. ಕಾರಣ ಅವರು ವಿದ್ಯುಚ್ಛಕ್ತಿ ಬಿಲ್ ಕಟ್ಟುವುದಕ್ಕಾಗುತ್ತಿಲ್ಲ. ಕೋಲ್ಡ್ ಸ್ಟೋರೇಜ್‌ನಲ್ಲಿ ರೈತರು ಇಡುವಂತಹ ಪದಾರ್ಥಗಳಿಗೆ ಸಬ್ಸಿಡಿ ಕೊಡುತ್ತಿಲ್ಲ. ಇವತ್ತು ಕಮರ್ಷಿಯಲ್ ರೇಟ್ ಹಾಕುತ್ತಿದ್ದಾರೆ. ಅದೇ ರೀತಿ ಹಾಲು ಒಕ್ಕೂಟಗಳು ಆಗುತ್ತಿವೆ. ಇವತ್ತು 13 ಹಾಲು ಒಕ್ಕೂಟಗಳು ಏನಿವೆ ನಮ್ಮ ರಾಜ್ಯದಲ್ಲಿ ಅದರಲ್ಲಿ ಒಟ್ಟು 22 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗಿ ಅದನ್ನು ಸಂಸ್ಕರಣೆ ಮಾಡಿ ಮಾರಾಟವಾಗುತ್ತಿದ್ದು, ಅಲ್ಲಿ ಲಕ್ಷಾಂತರ ರೂಪಾಯಿ ವಿದ್ಯುತ್ ಬಿಲ್ ಅನ್ನು ಕಮರ್ಷಿಯಲ್ ರೇಟ್‌ನಲ್ಲಿ ಕೊಡಬೇಕಾಗುತ್ತದೆ. ಅದನ್ನು ರೈತನು ಬೆಳೆದಂಥ ಉತ್ಪನ್ನಗಳ ರೇಟಿಗೆ ಎನ್ನತಕ್ಕದ್ದು ನಮ್ಮ ಒತ್ತಾಯವಾಗಿದೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಾರಿ ಮಾತನಾಡಿದಾಗ ವೆಟರಿನರಿ ಆಗಬೇಕು ಎಲ್ಲಾ ಅದು ಬಹಳ ಮುಖ್ಯವಾಗಿ ಯೂನಿವರ್ಸಿಟಿ ಮಾಡುತ್ತೇವೆಂದು ಹೇಳಿದ್ದರು. ಅದು ಬಹಳ ಮುಖ್ಯವಾಗಿ ಆಗಬೇಕು. ಎಲ್ಲಾ ಯೂನಿವರ್ಸಿಟಿಗಳು ಇವೆ. ಟೆಕ್ನಿಕಲ್ ಎಜ್ಯುಕೇಷನ್ ಯೂನಿವರ್ಸಿಟಿ ಇದೆ, ಮೆಡಿಕಲ್

ಎಜ್ಯುಕೇಷನ್ ಯೂನಿವರ್ಸಿಟಿ ಇದೆ, ಅಗ್ರಿಕಲ್ಚರ್ ಯೂನಿವರ್ಸಿಟಿ ಇದೆ, ಬೇರೆ ಬೇರೆ ಯೂನಿವರ್ಸಿಟಿಗಳು ಸಾಕಷ್ಟು ಇವೆ. ಈ ಸಲ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡುವುದನ್ನು ಮರೆತಿರಬಹುದು. ವೆಟರಿನರಿ ಯೂನಿವರ್ಸಿಟಿ ಆಗಲೇಬೇಕು. ಆಂಧ್ರಪ್ರದೇಶದಲ್ಲಿ ಇದೆ, ಬೇರೆ ಬೇರೆ ರಾಜ್ಯಗಳಲ್ಲಿ ವೆಟರಿನರಿ ಯೂನಿವರ್ಸಿಟಿ ಇದೆ. ನಮ್ಮಲ್ಲಿರತಕ್ಕಂಥ ಅಗ್ರಿಕಲ್ಚರ್ ಯೂನಿವರ್ಸಿಟಿ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ವೆಟರಿನರಿ ಯೂನಿವರ್ಸಿಟಿ ಮಾಡಬಹುದು. ನಾನೂ ಸಹ ಪಶುಸಂಗೋಪನಾ ಸಚಿವನಾಗಿದ್ದಾಗ ಮಾಡುವುದಕ್ಕೆ ಪ್ರಯತ್ನಪಟ್ಟರೂ ಆಗಲಿಲ್ಲ. ಆ ದೃಷ್ಟಿಯಿಂದ ಇವತ್ತು ವೆಟರಿನರಿ ಯೂನಿವರ್ಸಿಟಿ ಮಾಡವಂತಾದ್ದು ಮತ್ತು ಕೆಲವು ತಾಲ್ಲೂಕುಗಳಲ್ಲಿ ಹಾಗೂ ಜಿಲ್ಲಾ ಮಟ್ಟಗಳಲ್ಲಿ ವೆಟರಿನರಿಗೆ ಅನುಕೂಲವಾಗುವಂತಹ ಪ್ರಸ್ತಾಪವನ್ನು ಈ ಸಾರಿ ಮಾಡಿದ್ದೀರಿ. ಮತ್ತು ಅದಕ್ಕೆ ಕೊಡುವಂತಹ ಹಣ ಬಹಳ ಕಡಿಮೆ ಇದೆ. ಇನ್ನು ಇವತ್ತು ಔಷಧಗಳ ಕೊರತೆ ಇಡೀ ರಾಜ್ಯದಲ್ಲಿ ಇದೆ. ಅಲ್ಲಿ ಟಿಂಚರ್ ಇಲ್ಲ, ಫೆಸ್ಟ್ ಏಡ್ ಇಲ್ಲ, ಮಾತ್ರೆ ಇಲ್ಲ, ಲೈಫ್ ಸೇವಿಂಗ್ ಡ್ರಗ್ಸ್ ಏನೂ ಸಿಗುವುದಿಲ್ಲ. ಆ ಪರಿಸ್ಥಿತಿ ಇದೆ. ಹಾಗೆ ಅನಿಮಲ್ ಹೆಲ್ತ್ ಕವರೇಜ್‌ನಲ್ಲಿ ಅದೇ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಆಸ್ಪತ್ರೆಗಳಲ್ಲಿ ಇವತ್ತು ಔಷಧ ಇಲ್ಲ. ಇವತ್ತು 10 ಕೋಟಿ ರೂಪಾಯಿ ಕೊಡಬೇಕಾಗುತ್ತದೆ ಅಥವಾ 20 ಕೋಟಿ ರೂಪಾಯಿ ಹೆಚ್ಚು ಕೊಡುವಂತಾದ್ದು ಆಗಬೇಕಾದರೆ ಯೋಜನೆಯಲ್ಲಿ ಕಡಿಮೆ ಆಗಿರುವುದನ್ನು ನಾವು ಕಾಣುತ್ತಿದ್ದೇನೆ. ಪ್ರತಿವರ್ಷ ಔಷಧಗಳ ಕೊರತೆ ವೆಟರಿನರಿ ಆಸ್ಪತ್ರೆಗಳಲ್ಲಿ ಕಾಣುವುದನ್ನು ನಾವು ನೋಡುತ್ತಿದ್ದೇವೆ. ಮತ್ತು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ 700ಕ್ಕೂ ಹೆಚ್ಚು ತಮ್ಮ ಕಾಲದಲ್ಲಿ ಏರಿಸಿದ್ದೀರಿ. ಆ ಮೇಲ್ದರ್ಜೆಗೆ ಏರಿಸಿರತಕ್ಕಂಥ ಆಸ್ಪತ್ರೆಗಳಿಗೆ ಮೂಲಭೂತ ಸೌಕರ್ಯಗಳಾದಂತಹ ಡಾಕ್ಟರ್‌ಗಳು, ಪ್ಯಾರಾ ವೆಟರಿನರಿ ಸ್ಟಾಫ್ ಯಾವುದನ್ನೂ ಮಾಡದೆ ಮೇಲ್ದರ್ಜೆಗೇರಿಸುವಂತಹ ಕಾರ್ಯವನ್ನು ಮಾಡುತ್ತಿದ್ದೀರಿ. ಇದು ಪ್ರಯೋಜನ ಆಗುವುದಿಲ್ಲ. ವೆಟರಿನರಿ ಹಾಗೂ ತೋಟಗಾರಿಕೆಗೆ ಹೆಚ್ಚು ಹಣವನ್ನು ಕೊಡಬೇಕು. ಏಕೆಂದರೆ ತಾವು ಭಾಷಣದಲ್ಲಿ ತಿಳಿಸಿದ್ದೀರಿ. ಮುಖ್ಯವಾಗಿ ರೈತ ಸಫರ್ ಆಗುತ್ತಿದ್ದಾನೆ. ಅವನು ಬೆಳೆಯುವಂತಹ ಪದಾರ್ಥಗಳಿಗೆ ಬೆಲೆ ಸಿಗುತ್ತಿಲ್ಲ. ಇದಕ್ಕೆ ಕಾರಣ ನಮ್ಮ ಉದಾರೀಕರಣ. ಆ ಉದಾರೀಕರಣ ನೀತಿಯಿಂದ ನಮ್ಮ ದೇಶಕ್ಕೆ ಬೇರೆ ರಾಷ್ಟ್ರದಿಂದ ಬರತಕ್ಕಂಥ ಆಹಾರ ಪದಾರ್ಥಗಳು ಏನಿವೆ, ಅದರಿಂದ ನಮ್ಮ ರೈತನ ಬೆಳೆಗೆ ಬೆಲೆ ಸಿಗದೆ ಇರುವಂತಹ ಪರಿಸ್ಥಿತಿ ಇದೆ. ಮೊನ್ನೆ ಪತ್ರಿಕೆಯಲ್ಲಿ ಮಾನ್ಯ ವಿತ್ತ ಸಚಿವರಾದ ಯಶವಂತ ಸಿನ್ಹರವರು, ಎಲ್ಲಾ ಪದಾರ್ಥಗಳು ಫ್ರೀ ಟ್ರೇಡ್ ಮೂವ್‌ಮೆಂಟ್‌ನಲ್ಲಿ ಇರಬೇಕು, ಅದಕ್ಕೆ ಸೂಕ್ತ ತಿದ್ದುಪಡಿಗಳನ್ನು ರಾಜ್ಯ ಸರ್ಕಾರ ತರಬೇಕೆಂದು ಹೇಳಿದ್ದಾರೆ ಎಂಬುದನ್ನು ಓದಿದೆ. ನಮ್ಮ ಎಲ್ಲಾ ಆಹಾರ ಪದಾರ್ಥಗಳು ಏನಿವೆ ಅವು ಮುಕ್ತವಾಗಿ ಬೇರೆ ಬೇರೆ ಕಡೆ ಹೋಗುವುದಕ್ಕೆ ನಿಷೇಧ ಮಾಡುವಂತಹ ಕಾರ್ಯವನ್ನು ಮಾಡಬೇಕೆಂದು ಹೇಳಿರುವುದು. ಇನ್ನು ಇಲ್ಲೆ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಹಾಲು ಉತ್ಪಾದನೆ ಏನಿದೆ, ನಮ್ಮ ರಾಜ್ಯದಲ್ಲಿ ಉತ್ಪಾದನೆ ಅಲ್ಲದೆ ಬೇರೆ ರಾಜ್ಯಗಳಿಂದ ಬರತಕ್ಕಂಥ ಹಾಲು ಐದಾರು ಲಕ್ಷ ಲೀಟರ್ ಮಾರಾಟವಾಗುತ್ತಿದೆ. ಒಟ್ಟು 22 ಲಕ್ಷ ಲೀಟರ್ ಉತ್ಪಾದನೆ ಇರುವಂತಹ ನಮ್ಮ ರಾಜ್ಯದಲ್ಲಿ 16 ಲಕ್ಷ ಲೀಟರ್‌ಗೆ ಮಾತ್ರ ಮಾರುಕಟ್ಟೆ ಇದ್ದು, ಇನ್ನು ಆರು ಲಕ್ಷ ಲೀಟರ್ ಹಾಲು ನೀಲಗಿರಿ ಇರಬಹುದು, ಹೆರಿಟೇಜ್ ಇರಬಹುದು ಗುಡ್ ಮಾರ್ನಿಂಗ್ ಇರಬಹುದು ಆರೋಗ್ಯ ಇರಬಹುದು ಇವೆಲ್ಲಾ ಮಾರಾಟ ಮಾಡುತ್ತಿದ್ದಾರೆ. ಅದರ ಮೇಲೆ ಎಂಟ್ರಿ ಟ್ಯಾಕ್ಸ್ ಇಲ್ಲ, ಸೆಸ್ ಇಲ್ಲ. ಇವರು ಇಂದು ಮುಕ್ತವಾಗಿ ಬೆಂಗಳೂರಿಗೆ ಬಂದು ಮಾರಾಟ ಮಾಡಿಕೊಂಡು ನಮ್ಮ

ಒಕ್ಕೂಟಗಳಿಗೆ ಹಾಗೂ ರೈತರಿಗೆ ತೊಂದರೆ ಮಾಡುತ್ತಿದ್ದಾರೆ. ಈರೋಡ್ ಹಾಲು ಎಂದು ಮಾರುತ್ತಿದ್ದಾರೆ. ಕೆಟ್ಟ ಕೆಟ್ಟ ಹಾಲನ್ನು ತಂದು ಕಡಿಮೆ ರೇಟಿಗೆ ಇಲ್ಲಿ ಮಾರುವಂಥ ಕೆಲಸ ನಡೆಯುತ್ತಿದೆ. ನಮ್ಮ ಒಕ್ಕೂಟಗಳನ್ನು ಹಾಳು ಮಾಡುವ ದೃಷ್ಟಿಯಿಂದ ಇದು ಆಗುತ್ತಿದೆ. ಇನ್ನು ಒಂದು ವಿಷಯವನ್ನು ಹೇಳಬೇಕೆಂದರೆ ಕೋಲಾರದ ಹಾಲು ಉತ್ಪಾದರ ಒಕ್ಕೂಟ ರೂ. 7.70 ಪೈಸೆಗೆ ಹೆರಿಟೇಜ್‌ಗೆ ಮಾರಾಟ ಮಾಡುತ್ತಿದ್ದಾರೆ. ನಮ್ಮಲ್ಲಿರುವಂತಹ ಸಹಕಾರಿ ಒಕ್ಕೂಟ ರೈತರಿಗೆ ಎಂಟು ರೂಪಾಯಿಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ, ಹೆರಿಟೇಜ್ ಎನ್ನುವಂತಹ ಖಾಸಗಿಯವರಿಗೆ ರೂ. 7.70 ಪೈಸೆಗೆ ಹಾಲನ್ನು ಮಾರಾಟ ಮಾಡುವಂತಹ ಪರಿಸ್ಥಿತಿಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇವತ್ತು ರೈತರಿಗೆ 8.50 ಪೈಸೆಗಳನ್ನು ಕೊಡಿ ಎಂದರೆ ಕೊಡುತ್ತಿಲ್ಲ. ಇತ್ತೀಚಿಗೆ ಒಂದು ರೂಪಾಯಿಯನ್ನು ಜಾಸ್ತಿ ಮಾಡಿದ್ದಾರೆ, ನಮ್ಮ ಒಕ್ಕೂಟಗಳು ಇಡೀ ರೂಪಾಯಿಯನ್ನು ಅವರ ನಿರ್ವಹಣಾ ವೆಚ್ಚಕ್ಕೆ ಹಾಕಿಕೊಂಡು ರೈತರಿಗೆ ಒಂದು 25 ಪೈಸೆ, 50 ಪೈಸೆಯನ್ನು ಪಾಸು ಮಾಡಲಿಲ್ಲ, ನಾಲ್ಕು ರೂಪಾಯಿಯನ್ನು ಪರ್ ಲೀಟರ್ ನಿರ್ವಹಣಾ ವೆಚ್ಚ ಸಾಗಾಣಿಕೆ ಖರ್ಚು ಎಂದು ಮಾಡುತ್ತಿದ್ದಾರೆ. ಇವರು ರೈತರಿಗೆ ಎಂಟು ರೂ.ಗಳನ್ನು ಒಂದು ಲೀಟರ್‌ಗೆ ಕೊಟ್ಟು ನಾಲ್ಕು ರೂಪಾಯಿಗಳನ್ನು ಕಾರ್ಮಿಕರು, ಮತ್ತು ಇವರಿಗೆ ಬೇಕಾದಂತಹ ಖರ್ಚಿಗೆ ಇಟ್ಟುಕೊಂಡು, ಇವತ್ತು ನಮ್ಮ ಗ್ರಾಹಕರ ತಲೆಯ ಮೇಲೆ 12 ರೂಪಾಯಿ ಎಂದು ಮಾಡಿ ಹಾಲನ್ನು ಮಾರಾಟ ಮಾಡುತ್ತಿದ್ದಾರೆ. ಇಲ್ಲಿ ಇವತ್ತು ಹೆರಿಟೇಜ್‌ನವರಿಗೆ ರೂ. 7.70 ಪೈಸೆಗೆ ಮಾರಾಟ ಮಾಡುತ್ತಿದ್ದಾರೆ, ಅದೇ ಹಾಲನ್ನು ಬೆಂಗಳೂರಿನಲ್ಲಿ ಹೆರಿಟೇಜ್‌ನವನು 13 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾನೆ. ಮಾನ್ಯ ಮುಖ್ಯಮಂತ್ರಿಯವರು ರೈತರಿಗೆ ಒತ್ತು ಕೊಟ್ಟು, ಅವರನ್ನು ಮೇಲೆತ್ತುವಂಥದ್ದು ಮತ್ತು ಆರ್ಥಿಕವಾಗಿ ಶಕ್ತಿ ತುಂಬುವಂತಹ ಕೆಲಸವನ್ನು ಮಾಡಬೇಕು. ಇದು ಮಾನ್ಯ ಮುಖ್ಯಮಂತ್ರಿಯವರಿಗೆ ಕನಕಪುರದ ಚುನಾವಣೆಯಾದ ಮೇಲೆ ಗೊತ್ತಾಗಿದೆ. ನಾವು ಈ ದೇಶದಲ್ಲಿ ಶೇ. 80ರಷ್ಟು ರೈತರು ಇದ್ದಾರೆ, ನಾವು ಅವರ ಪರವಾಗಿ ಇರಬೇಕು ಇವತ್ತು ಅವನ ಪರಿಸ್ಥಿತಿ ಏನಾಗಿದೆ, ಎಂಬುದನ್ನು ನಾವು ಕಳೆದ 2-3 ವರ್ಷಗಳಿಂದ ನೋಡುತ್ತಿದ್ದೇವೆ. ನಾವು ಮಾನ್ಯ ಮುಖ್ಯಮಂತ್ರಿಯವರನ್ನು ಹೈಟೆಕ್ ಚೀಫ್ ಮಿನಿಸ್ಟರ್ ಅಥವಾ ಐ.ಟಿ. ಚೀಫ್ ಮಿನಿಸ್ಟರ್, ಅವರು ಸಾಫ್ಟ್‌ವೇರ್ ಅನ್ನು ಇಂಪ್ರೂವ್ ಮಾಡುತ್ತಿದ್ದಾರೆ. ವಿಶ್ವದ ಮಟ್ಟದಲ್ಲಿ ಬೆಂಗಳೂರನ್ನು ಬಹಳ ಎತ್ತರದ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ, ಗ್ಲೋಬಲೈಜೇಷನ್ ಇಷ್ಯೂನಲ್ಲಿ, ಇವೆಲ್ಲವನ್ನೂ ನೋಡುತ್ತಿದ್ದೆವು. ಅವರಿಗೆ ಕನಕಪುರದ ಚುನಾವಣೆ ಕಣ್ಣು ತೆರೆಸಿತು, ನಾವು ರೈತರನ್ನು ಮರೆತಿದ್ದೇವೆ, ನಾವು ರೈತರ ಕಡೆಗೆ ಸ್ವಲ್ಪ ನೋಡಬೇಕು, ಇಲ್ಲದಿದ್ದರೆ ಅವರು ನಮಗೆ ಪಾಠವನ್ನು ಕಲಿಸುತ್ತಾರೆಂದು ಈ ಸಲಹ ಆಯವ್ಯಯ ಪತ್ರದಲ್ಲಿ ರೈತರ ಹೆಸರನ್ನು ಹೇಳುವ ಮಟ್ಟಿಗಾದರೂ ಮಾಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ತಾವು ಈ ಮಾತನ್ನು ಎದೆ ಮುಟ್ಟಿಕೊಂಡು ಹೇಳುತ್ತೀರಾ? ತಾವು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ್ದಂತಹ ಮೊದಲನೆಯ ಬಜೆಟ್ ಅನ್ನು ಓದಿದ್ದೀರಿ. ಅದರಲ್ಲಿ ಅವರು ಸ್ಥೂಲವಾಗಿ ಏನು ಹೇಳಿದ್ದಾರೆ, ಹಿಂದಿನ ಸರ್ಕಾರ ಏನೇನು ಕೆಲಸಗಳನ್ನು ಮಾಡುತ್ತಿತ್ತು, ಅದು ರೈತರಿಗೆ ಇರಬಹುದು, ಕೈಗಾರಿಕೆಗಳಿಗೆ ಆಗಬಹುದು, ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆ, ಮತ್ತೆ ವ್ಯವಸಾಯಕ್ಕೂ ಆದ್ಯತೆಯನ್ನು ಕೊಡುತ್ತೇವೆ

ಎಂದು ಹೇಳಿದ್ದಾರೆ. ಅದರಂತೆ ಇಂದಿಗೂ ನಡೆಸಿಕೊಂಡು ಬಂದಿದ್ದಾರೆ. ತಾವು ಈಗ ಚುನಾವಣೆಯಾದ ಮೇಲೆ ಸ್ಲೋಗನ್ ಹಚ್ಚಿ ಮಾತನಾಡುತ್ತಿದ್ದೀರಿ. ಮಾನ್ಯ ಬಚ್ಚೇಗೌಡರೇ, ತಾವು ಸ್ವಲ್ಪ ಅಭ್ಯಾಸ ಮಾಡಿ ಮಾತನಾಡಿದ್ದರೆ ಚೆನ್ನಾಗಿತ್ತು ಎಂದು ಅನಿಸುತ್ತಿದೆ. ಹೀಗೆ ಮಾತನಾಡೋಣವೆಂದು ಮಾತನಾಡಿಕೊಂಡು ಮಾತನಾಡುತ್ತಿದ್ದೀರೋ ಯಾರಿಗೆ ಗೊತ್ತು?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ರಂಗನಾಥ್‌ರವರೇ, ತಾವು ನಾನು ಮಾತನಾಡುವಾಗ ಇಲ್ಲಿ ಇರಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ತಾವು ಚುನಾವಣೆ ಬಗ್ಗೆ ಮಾತನಾಡಿರುವಂತಹ ಸಂದರ್ಭದಿಂದ ಇಲ್ಲೇ ಇದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ಈಗ ಬಂದಿರಿ.

ಶ್ರೀ ಕೆ.ಹೆಚ್. ರಂಗನಾಥ್ : ನಾನು 1999ನೇ ಅಕ್ಟೋಬರ್‌ನಿಂದಲೂ ಈ ಸದನದಲ್ಲೇ ಇದ್ದೇನೆ, ಅದಕ್ಕೆ ನಾನು ಹೇಳುತ್ತಿರುವಂಥಾದ್ದು. ತಾವು ಹೋದ ಸಾರಿಯ ಬಜೆಟ್, ಅದರ ಹಿಂದಿನ ಬಜೆಟ್, ಅದು ಎಷ್ಟರಮಟ್ಟಿಗೆ ಕೆಲಸಕ್ಕೆ ಬಂದಿದೆ, ಏನಾಗಿದೆ, ಇದೆಲ್ಲವನ್ನೂ ಅಭ್ಯಾಸ ಮಾಡಿ ಹೇಳಿದಿದ್ದರೆ, ಚೆನ್ನಾಗಿತ್ತು, ಅದನ್ನು ಒಪ್ಪುವಂತಹ ಮಾತು, ತಾವು ರೈತರು ಎಂದರೆ ತಮ್ಮ ಅರ್ಥದಲ್ಲಿ ಯಾವ ರೈತರು ಎಂದು ನಾನು ನಿಮ್ಮನ್ನು ಪ್ರಶ್ನೆಯನ್ನು ಕೇಳುತ್ತೇನೆ. What is the percentage of the marginal farmers? What is the percentage of the small farmers and how have your been able to help them, right from the beginning, tell me. ನಾವು ಮೇಲೆ ಎತ್ತಬೇಕಾದಂಥಾದ್ದು ಯಾರನ್ನು ಎಂಬುದನ್ನು ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಸ್ಮಾಲ್ ಫಾರ್ಮರ್ಸ್ ಹೆಚ್ಚು ಇದ್ದಾರೆ, ಮಾರ್ಜಿನಲ್ ಫಾರ್ಮರ್ಸ್ ಮಧ್ಯೆ ಇರುವಂಥವರು, ರಿಚ್ ಫಾರ್ಮರ್ಸ್ ಕೆಲವರು ಇದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ : ನಾವು ಏನು ಮಾಡಿದ್ದೇವೆ, ಇವತ್ತು ನೀರಾವರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿದ್ದೆವಲ್ಲಾ, how far it is helpful to them, tell me. ಆದರೂ ಕೂಡ ಮಾಡಬೇಕಾಗಿದ್ದು, ಮಾಡಲೇ ಬೇಕಾಗುತ್ತದೆ, ತಾವು ಸ್ವಲ್ಪ ಅಬ್ಜೆಕ್ಟೀವ್ ಆಗಿ ಇರಬೇಕಾಗುತ್ತದೆ, ತಾವು ಸುಮ್ಮನೆ ಚುನಾವಣೆ ಎಂದು ಹೇಳಿದರೆ ಹೇಗೆ? ನಿಮಗೆ ಚುನಾವಣೆಯಲ್ಲಿ ಹೆಚ್ಚು ಏನು ಓಟು ಬಂದಿರುವಂಥಾದ್ದು. ನಿಮಗೆ 50,000 ಓಟು ಬಂದಿರುವಂಥಾದ್ದು, ಅಂದರೆ ನಿಮಗೆ ಬಹಳ ಓಟು ಬಂದಿದೆಯೆ? ನಮ್ಮ ಕಣ್ಣು ತೆರೆಸುವಂತಹ ಓಟು ಆದಾ? ನಾನು ನೀವು ಹೇಳಿದಂಥಾದ್ದಕ್ಕೆ ನಾನು ಹೇಳುತ್ತಿದ್ದೇನೆ, ಇದನ್ನು ನಾನು ಚರ್ಚೆ ಮಾಡುತ್ತಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ಹಿರಿಯರು ಇದ್ದೀರಿ, ನಾನು ತಮ್ಮ ಹತ್ತಿರ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ : ನಾವು ಚುನಾವಣೆಯಿಂದ ಕಣ್ಣು ತೆರೆದಿದ್ದೇವೆ ಎಂದು ಅಲ್ಲ. ಆವತ್ತಿನಿಂದಲೇ ನಮ್ಮ ಸರ್ಕಾರ ಯಾವಾಗ 1947ರ ಆಗಸ್ಟ್ 15ನೇ ತಾರೀಖು ಏನು

ಸರ್ಕಾರ ಕಾಂಗ್ರೆಸ್ ಕಣ್ಣು ತೆರೆದಿದೆ. ಅಂದಿನಿಂದಲೇ ಏನು ಧೋರಣೆ, ಏನು ನಿಲುವು, ಯಾವುದಕ್ಕೆ ಏನೇನು ಮಾಡಿದ್ದೇವೆ ಎಂಬುದನ್ನು ನೋಡುತ್ತಾ ಬನ್ನಿ.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ಹಿರಿಯ ಸಚಿವರಾಗಿದ್ದೀರಿ, ತಮಗೆ ಮೆಚ್ಚುಗೆಯಾಗುವ ಹಾಗೆ, ತಮ್ಮ ಕಿವಿಗೆ ಇಂಪಾಗುವ ಹಾಗೆ ಹೇಳುವುದಕ್ಕೆ ಆಗುವುದಿಲ್ಲ. ನಾವು ವಿರೋಧ ಪಕ್ಷದಲ್ಲಿ ಇರುವಾಗ ಟೀಕೆ ಟಿಪ್ಪಣಿ ಇದ್ದದ್ದೇ,

ಶ್ರೀ ಕೆ.ಹೆಚ್. ರಂಗನಾಥ್ : ಇಲ್ಲಿ ಸಭೆಯಲ್ಲಿ ಮಾತನಾಡುವಾಗ ನಮಗೆ ಇಂಪಾಗುವುದಿಲ್ಲ, ರಾಜ್ಯದಲ್ಲಿರುವಂತಹ ಜನರಿಗೆ ಇಂಪಾಗಬೇಕಾಗುತ್ತದೆ. ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಂತಹ ರೀತಿಯಲ್ಲಿ ಮಾತನ್ನು ಆಡಬೇಕಾಗುತ್ತದೆ. ನನಗೂ, ತಮಗೂ ಇಂಪಾಗುವ ಹಾಗೆ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಈಗ ನಾನು ಅಂಕಿಅಂಶಗಳನ್ನು ಹೇಳುತ್ತೇನೆ, ಕೃಷಿ ವಲಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು 2000-2001ನೇ ಇಸವಿಯಲ್ಲಿ 313 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇದಾದನಂತರ 2001-2002ರಲ್ಲಿ 376 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಸಲ ಚುನಾವಣೆಯಾದ ಮೇಲೆ ನಾನು ಮಾತನಾಡಿದ್ದಕ್ಕೆ ತಮಗೆ ಬೇಸರವಾಯಿತು, ಆಯವ್ಯಯ ಮಂಡಿಸುವುದಕ್ಕೆ ಸ್ವಲ್ಪ ಮುಂಚಿತವಾಗಿ ಈ ಚುನಾವಣೆಯಾಗಿರುವಂಥಾದ್ದು. ಈ ಚುನಾವಣೆಯ ಬಗ್ಗೆ ಸ್ವಲ್ಪ ಆ ಕಡೆ ಇರುವಂಥವರು ತಿಳಿದುಕೊಳ್ಳಬೇಕಾದಂಥಾದ್ದು, this is a turning point in Karnataka politics. ಇದು ಇಲ್ಲಿ ಮುಖ್ಯವಾಗಿ ಆಗಿರುವಂಥಾದ್ದು, ಇಲ್ಲಿ ನೀವೇನು, ನಾವೇನು, ಬಿ.ಜೆ.ಪಿ, ಏನು ಈ ರಾಜ್ಯದಲ್ಲಿ ಎಂಬುದು ಗೊತ್ತಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಬಚ್ಚೇಗೌಡರೇ, ತಾವು ಟರ್ನಿಂಗ್ ಪಾಯಿಂಟ್, ಚುನಾವಣೆ ಎನ್ನುವಂಥಾದ್ದು ನಮಗಿಂತ ಹೆಚ್ಚಾಗಿ ಜನತಾ ದಳ (ಎಸ್)ನವರು ಮತ್ತು ಜನತಾ ದಳ (ಯು)ನವರು ತಿಳಿದುಕೊಳ್ಳಬೇಕು. ಇದನ್ನು ನೀವು ತಿಳಿದುಕೊಳ್ಳದೇ ಹೋದರೆ ಅಧೋಗತಿಗೆ ಹೋಗಿಬಿಡುತ್ತೀರಿ.

ಶ್ರೀ ಎಸ್.ಎಸ್. ಪಾಟೀಲ್ : ನಾವು ಅದನ್ನು ತಿಳಿದುಕೊಂಡೇ ಹೇಳುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್ : ನೀವು ಹಾಗೆ ಅಂದುಕೊಂಡಿದ್ದೀರಿ, ನಿಮ್ಮ ಮನಸ್ಸುಗಳೇ ಒಂದಾಗಿಲ್ಲ. ಇದು ನಮಗೆ ಏನು ತಿಳಿಯುವುದಿಲ್ಲವೇ? ನಾನು ಏನು ಆಡುವ ಹುಡುಗರಾ?

ಶ್ರೀ ಬಿ.ಎನ್. ಬಚ್ಚೇಗೌಡ : ನಾವು ಹೇಳಿದ್ದಕ್ಕೆ 376 ಕೋಟಿ ರೂಪಾಯಿಗಳನ್ನು ಈ ಸಲ 2002-2003ರಲ್ಲಿ 413 ಕೋಟಿ ರೂಪಾಯಿಗಳನ್ನು ಕೊಟ್ಟರು, ಈ ಸಲ ಕೊಟ್ಟಂಥಾದ್ದು ಶೇಕಡಾ 4.81 ಕೊಟ್ಟರು, ಅಲ್ಲಿಗೆ ಕೃಷಿ ವಲಯಕ್ಕೆ ಕೊಟ್ಟಂಥಾದ್ದು ಜಾಸ್ತಿಯಾದಂತೆ ಆಯಿತು. ಮಾನ್ಯ ಮುಖ್ಯಮಂತ್ರಿಯವರು ಬಹಳ ಬುದ್ಧಿವಂತಿಕೆಯಿಂದ ಬಜೆಟ್‌ನಲ್ಲಿ ಕೃಷಿಗಾಗಿ ಐದು ಸಾವಿರ ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ, ಅಂದರೆ ಶೇಕಡಾ 25 ರಷ್ಟು ಕೃಷಿ ವಲಯಕ್ಕೆ ಎಂದು ಹೇಳಿದ್ದಾರೆ. ವಿದ್ಯುತ್ ವಲಯಕ್ಕೆ ಎರಡು ಸಾವಿರ ಕೋಟಿ ರೂಪಾಯಿಗಳ ಸಬ್ಸಿಡಿ ಕೊಟ್ಟಿರುವಂಥಾದ್ದು ಮತ್ತೆ ಎರಡು ಸಾವಿರ ಕೋಟಿ ರೂಪಾಯಿಗಳು ನೀರಾವರಿಗೆ ತೊಡಗಿಸಿರುವಂಥಾದ್ದು. out of Rs. 25,000 crores, 1/4th amount will go to this

sector. ಅಂದರೆ ನಾವು ಎಲ್ಲಾ ಕೃಷಿಗೆ ಬರುತ್ತದೆಂದು ಅಂದುಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲಾ ಚಟುವಟಿಕೆಗಳು ಸೇರಿ ಅಷ್ಟು ಹಣವನ್ನು ನಾವು ಕೊಡುತ್ತಿದ್ದೇವೆಂದು ತಿಳಿಸಿರುವಂಥಾದ್ದು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಇವರು ಶೇಕಡಾ 4.3 ರಷ್ಟು ಕೊಟ್ಟಿರುವಂಥಾದ್ದು ಹೆಚ್ಚಾಯಿತಾ? ನಮ್ಮ ಸರ್ಕಾರವಿದ್ದಾಗ 1999-2000ನೇ ಇಸವಿಯಲ್ಲಿ ಶೇಕಡಾ 5.25 ರಷ್ಟು ಕೊಟ್ಟಿದ್ದೇವೆ. ಈಗ ಅಷ್ಟನ್ನೂ ಕೊಟ್ಟಿಲ್ಲ. ತಾವು ನನ್ನನ್ನು ಕೇಳಿದರೆ ಶೇಕಡಾ 5 ಇದ್ದಂಥಾದ್ದು ಈಗ ಅದು ಶೇಕಡಾ 10ರಷ್ಟು ಆಗಬೇಕಾಗಿತ್ತು. ಅಂದರೆ ನಾವು ಹೇಳುವಂಥಾದ್ದು ಶೇಕಡಾ 5 ಇದ್ದಂಥಾದ್ದು ಈಗ ಎರಡು ವರ್ಷಗಳಾಗಿದೆ ಇದು ಶೇಕಡಾ 10ಕ್ಕೆ ಹೋಗಬೇಕಾಗಿತ್ತು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥ್‌ರವರು ನೀರಾವರಿಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದು ಯಾವ ವರ್ಗದವರಿಗೆ ಅನುಕೂಲವಾಗುತ್ತದೆಂಬುದು ಒಳ್ಳೆಯ ಪ್ರಶ್ನೆ, ಅದರಂತೆ ಕೃಷಿ ಕ್ಷೇತ್ರಕ್ಕೆ ಎಷ್ಟು ಕೊಡುತ್ತಾ ಇದ್ದೀರಿ, ಅದರಲ್ಲಿ ಮಾರ್ಜಿನಲ್ ಫಾರ್ಮರ್ಸ್ ಎಷ್ಟು ಜನರಿದ್ದಾರೆ, ಸ್ಮಾಲ್ ಫಾರ್ಮರ್ಸ್ ಎಷ್ಟು ಜನರಿದ್ದಾರೆ, ಅಗ್ರಿಕಲ್ಚರ್ ಲೇಬರ್ಸ್ ಎಷ್ಟು ಜನರಿದ್ದಾರೆ? ಅದಕ್ಕೆ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಹಾಗೆಯೇ ಹನಿ ನೀರಾವರಿ ಮತ್ತು ಸ್ಪ್ರಿಂಕ್ಲರ್ ಮಾರಾಟದ ಮೇಲಿನ ಮಾರಾಟ ತೆರಿಗೆಯನ್ನು ರದ್ದುಗೊಳಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ. ಈ ಸ್ಪ್ರಿಂಕ್ಲರ್ ಮತ್ತು ಹನಿ ನೀರಾವರಿಯನ್ನು ಎಷ್ಟು ಜನರು ಇಟ್ಟುಕೊಳ್ಳುತ್ತಾರೆ? ಇದನ್ನು ಶೇ. 15ರಿಂದ 16ರಷ್ಟು ಜನರು ಇದನ್ನು ಉಪಯೋಗಿಸಬಹುದು, ಇನ್ನು ಉಳಿದಂತಹ ಶೇಕಡಾ 85 ರಷ್ಟು ಜನರಿಗೆ ಏನು ಕಾರ್ಯಕ್ರಮವಿದೆ. ಇಲ್ಲಿ ತಾವು ಮಾರಾಟ ತೆರಿಗೆ ರದ್ದು ಮಾಡಬೇಕೆಂದು ಇದೆ, ಅಂದಮೇಲೆ ಇದು ಯಾರ ಪರವಾಗಿ ಇರುತ್ತದೆ? ತಾವು ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಿರಿಯ ಸಚಿವರು ಕೃಷಿಯ ವಲಯಕ್ಕೆ ನಾವು ಸಾಕಷ್ಟು ಬೆಂಬಲವನ್ನು ಕೊಡುತ್ತಲೇ ಬಂದಿದ್ದೇವೆಂದು ಹೇಳಿದ್ದಾರೆ. ಇಲ್ಲಿ ರೈತರು ಎಂದರೆ ಯಾರು? ಇದು ನಮಗೆಲ್ಲಾ ಗೊತ್ತಿರುವಂಥಾದ್ದು, ನಾವು ಎಲ್ಲಾ ಸಹ ಅದರಿಂದಲೇ ಬಂದಿರುವಂಥವರು. ಇದೆಲ್ಲಾ ನಮಗೆ ಗೊತ್ತಿರತಕ್ಕಂಥದ್ದೇ. ನಾವೆಲ್ಲಾ ಅದೇ ಬೇಸಿಸ್ ಮೇಲೆ ಬಂದಿರತಕ್ಕಂಥವರು. ಒಳ್ಳೆಯ ಬಟ್ಟೆ ಹಾಕಿರಬಹುದು, ಚೆನ್ನಾಗಿರಬಹುದು, ಆದರೆ ನಮಗೆ ಮೂಲ ಕಸಬು ಅದೇ ಆಗಿರುವಂಥದ್ದು. ಈ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಹಿಳೆಯರು ಬಗ್ಗೆ ಹೇಳುತ್ತಾ, 74512 ಸ್ವಸಹಾಯಕ ಗುಂಪುಗಳು ಇದ್ದು ಸುಮಾರು 10 ಲಕ್ಷದ 38 ಸಾವಿರ ಮಹಿಳೆಯರು ಸದಸ್ಯರಾಗಿದ್ದಾರೆ ಎಂದು ಹೇಳಿದ್ದಾರೆ. ಆ ಸದಸ್ಯರುಗಳ, ತಂಡಗಳ ಫೂಲ್ಡ್ ಮನಿ ಸುಮಾರು 40 ಕೋಟಿ ರೂಪಾಯಿ ಇದೆ. ಆದರೆ ಅವರ ಅಭಿವೃದ್ಧಿಗೆ ಮಾನ್ಯ ಮುಖ್ಯಮಂತ್ರಿ ಅವರು ಒಂದು ಕೋಟಿ ರೂಪಾಯಿ ಸಹ ಕೊಟ್ಟಿಲ್ಲ. ಸಹಾಯಧನ ಎಂದು ಒಂದು ತಂಡಕ್ಕೆ ಐದು ಸಾವಿರ ರೂಪಾಯಿಯಂತೆ 100 ಕೋಟಿ ರೂಪಾಯಿ ಕೊಟ್ಟರೆ, ಆ ತಂಡಗಳು ಆ ಹಣವನ್ನು ರಿವಾಲ್ವಿಂಗ್ ಫಂಡ್ ಎಂದು ಇಟ್ಟುಕೊಂಡು ಅದರಿಂದ ಹೆಚ್ಚು ಅಭಿವೃದ್ಧಿಯಾಗುವಂಥ ದಿಸೆಯಲ್ಲಿ ಆಗುವಂಥ ಕಾರ್ಯ. ಇದನ್ನು ಮೆಚ್ಚುವಂಥದ್ದು. ನಮ್ಮಲ್ಲೆಲ್ಲಾ ಸ್ವಸಹಾಯ ಗುಂಪುಗಳ ಮಹಿಳೆಯರು ಯಾರಿದ್ದಾರೆ ಅವರು ಬಹಳ ಚೆನ್ನಾಗಿ

ಅಭಿವೃದ್ಧಿಯಾಗುವಂಥ ಕಾರ್ಯ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಅದಕ್ಕೆ ಹೆಚ್ಚು ಹಣವನ್ನು ತೊಡಗಿಸುವಂಥ ಕಾರ್ಯ ಆಗಬೇಕಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿ, ಇನ್ನು ನಮ್ಮ ಸಿಟಿಯಲ್ಲಿ 15 ವರ್ಷದಷ್ಟು ಹಳೆಯದಾಗಿರತಕ್ಕಂಥ ವೆಹಿಕಲ್ಸ್‌ನ್ನು ಓಡಾಡಿಸುವ ಹಾಗಿಲ್ಲ. ಓಡಾಡುವ ಹಾಗಿದ್ದರೆ ಅದಕ್ಕೆ ಗ್ರೀನ್ ಟ್ಯಾಕ್ಸ್ ಹಾಕುತ್ತೇವೆಂದು ಹೇಳಿದ್ದಾರೆ. ನಿಷೇಧ ಎಂದು ಮಾಡಿ ವೆಹಿಕಲ್ಸ್ ಸಿಟಿಯೊಳಗೆ ಬರದಿದ್ದ ಮೇಲೆ ಈ ಗ್ರೀನ್ ಟ್ಯಾಕ್ಸ್ ನಮ್ಮ ಸಿಟಿ ಲಿಮಿಟ್‌ಗಿಂತ ಆಚೆ ಓಡಾಡುವವರಿಗೆ ಆಗುತ್ತದೆ. ಈ ಟ್ಯಾಕ್ಸ್‌ನ್ನು ಹಾಕುವುದರಿಂದ ಲಕ್ಷಾಂತರ ವಾಹನಗಳು ಸಿಕ್ಕಿಹಾಕಿಕೊಳ್ಳುತ್ತವೆ. ಈ ಟ್ಯಾಕ್ಸ್‌ನ್ನು ಜಾರಿಗೆ ತರುವ ಮೂಲಕ ನಿಮ್ಮ ಬುದ್ಧಿವಂತಿಕೆ ಹೇಗಿದೆಯೆಂದರೆ, ಇವತ್ತು 7 ವರ್ಷ, 8 ವರ್ಷ ಹಳೆಯದಾಗಿರತಕ್ಕಂಥ ಸಾರಿಗೆ ವಾಹನಗಳು ಬರಬಾರದು, ಅಥವಾ ಸಾರಿಗೇತರ ವಾಹನಗಳು 15 ವರ್ಷ ಹಳೆಯದು ಎಂದು ತಾವು ಏನು ಫಿಕ್ಸ್ ಮಾಡಿದಿರಿ ಇದು ಸೆಂಟ್ರಲ್ ಮೋಟಾರ್ ವೆಹಿಕಲ್ಸ್ ಆ್ಯಕ್ಟ್ ಪ್ರಕಾರ್ ದಿಲ್ಲಿಯಲ್ಲಿ ಏನು ನಿಷೇಧ ಆಗಿದೆ, ಅಂಥ ವೆಹಿಕಲ್ಸ್ ಬರಕೂಡದು ಎಂದು ಏನು ಬ್ಯಾನ್ ಇದೆ, ಅದನ್ನು ಇಲ್ಲಿ ಅಳವಡಿಸುವುದಕ್ಕೆ ಆಗುವುದಿಲ್ಲ. ಅದನ್ನು ತಂದಿರತಕ್ಕಂಥದ್ದು ತಪ್ಪು. ಕೇಂದ್ರ ಮೋಟಾರ್ ವೆಹಿಕಲ್ಸ್ ಆ್ಯಕ್ಟ್‌ನ್ನು ಅಮೆಂಡ್ ಮಾಡದೆ ಇಲ್ಲಿ ನೀವು ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಯವರಿಗೆ ತಪ್ಪು ಮಾಹಿತಿ ಕೊಟ್ಟು ಮಾನ್ಯ ಸಾರಿಗೆ ಸಚಿವರು ಬಜೆಟ್‌ನಲ್ಲಿ ಹೇಳಿಸುತ್ತಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಚ್ಚೇಗೌಡರು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದವರು, ಇಲಾಖೆಯನ್ನು ಸರಿಪಡಿಸುವುದಕ್ಕೆ ಸಾಕಷ್ಟು ಪ್ರಯತ್ನಗಳನ್ನು ತಾವು ಮಾಡಿದಿರಿ. ತಮ್ಮೆಲ್ಲರ ಪ್ರಯತ್ನದ ಜೊತೆಗೆ ನನ್ನ ಪ್ರಯತ್ನವೂ ಹೌದು ಎಂದು ಅನೇಕ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಈ ಹದಿನೈದು ವರ್ಷಗಳಷ್ಟು ಹಳೆಯದಾದ ವಾಹನಗಳನ್ನು ನಾವು ನಿಷೇಧಿಸಲಿಲ್ಲ. ಇದು ಕೇವಲ ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ 15 ವರ್ಷದಷ್ಟು ಹಳೆಯದಾದ ವಾಹನಗಳು ಸಂಚರಿಸುವ ಸಂದರ್ಭದಲ್ಲಿ ಇದರ ಆಗುಹೋಗುಗಳು ಅಂದರೆ ಇದು ಹೊಗೆ ಉಗುಳುವಂಥ ಸ್ಥಿತಿಯಲ್ಲಿ ಇದೆಯೋ ಇಲ್ಲವೋ ಎನ್ನುವುದರ ಬಗ್ಗೆ ಪರಿಶೀಲಿಸಿ ನಂತರವೇ ಇದನ್ನು ನಾವು ತೀರ್ಮಾನ ಮಾಡುತ್ತೇವೆಂದು ಹೇಳಿದ್ದೇವೆ. ದೆಹಲಿಯ ನಗರದಲ್ಲಿ 15 ವರ್ಷ ವಯಸ್ಸು ಆದಂಥ ವಾಹನಗಳನ್ನು ಯಾವುದೇ ಕಾರಣಕ್ಕೂ ನಡೆಸಕೂಡದು ಎಂದು ಒಂದು ನಿರ್ಣಯ ಸುಪ್ರೀಂ ಕೋರ್ಟಿನಲ್ಲಿ ಆಗಿದೆ. ಆ ನಿರ್ಣಯ ಆದಮೇಲೆ ದೆಹಲಿ ಸರ್ಕಾರದವರು ಸುಪ್ರೀಂ ಕೋರ್ಟಿನ ಆದೇಶದಂತೆ ಆ ಭಾಗಕ್ಕೆ ಸೀಮಿತವಾಗಿ ಒಂದು ಕಾನೂನನ್ನು ಅಳವಡಿಸಿಕೊಂಡಿದ್ದಾರೆ. ಇಲ್ಲಿ ಕಾನೂನಿನ ತಿದ್ದುಪಡಿ ತರುವಂಥ ಅಗತ್ಯತೆ ಏಕೆ ಇಲ್ಲವೆಂದು ಹೇಳಿದರೆ, ನಾವು ಕೇವಲ ಬೆಂಗಳೂರು ನಗರ ಬಿಟ್ಟು ಬೇರೆ ನಗರಗಳ ಸಂಚಾರಕ್ಕೆ ಯೋಗ್ಯ.ವಾಗಿರುವಂಥ ವಾಹನಗಳ ಮೇಲೆ ಈ ಹಸಿರು ತೆರಿಗೆಯನ್ನು ವಿಧಿಸುವುದರ ಮುಖಾಂತರ ವಾಹನಗಳ ಸ್ಥಿತಿಗತಿಯ ಮೇಲೆ ತೀರ್ಮಾನ ಮಾಡುವಂಥದ್ದು ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೇಳಿರುವಂಥದ್ದು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ತಪ್ಪು ಮಾಹಿತಿ ಕೊಡುವಂಥ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಎರಡನೆಯದು, ಕಾನೂನಿನ ವಿರುದ್ಧವಾಗಿ ಹೋಗುವಂಥದ್ದಾಗಲೀ, ಅಥವಾ ಕಾನೂನಿಗೆ ತಿದ್ದುಪಡಿ ತರುವಂಥದ್ದಾಗಲಿ ಅದು ತರುವಂಥದ್ದರ ಬಗ್ಗೆಯೂ ತಾವು ಹೇಗೆ ನನಗೆ ಮಾಹಿತಿ ನೀಡುತ್ತಿದ್ದರೋ,

ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದ ಕಾನೂನಿನಲ್ಲಿ ಅವಶ್ಯಕವಾಗಿ ತಿದ್ದುಪಡಿ ತರಬೇಕಾಗುತ್ತದೆ. ಆದರೆ ಇಲ್ಲಿ ಹೊಗೆ ಹೆಚ್ಚಾಗಿ ಉಗುಳುವಂಥ ವಾಹನಗಳನ್ನು ನಗರದ ಸಂಚಾರಕ್ಕೆ ತಡೆಯುವಂಥ ಪ್ರಯತ್ನ ಮಾಡುತ್ತಿದ್ದೇವೆಯೇ ವಿನಃ ಸಂಪೂರ್ಣವಾಗಿ ನಿಷೇಧವನ್ನು ಮಾಡುವಂಥದ್ದರ ಬಗ್ಗೆ ಯಾವುದೇ ಪ್ರಸ್ತಾವನೆಯನ್ನೂ ಇಲ್ಲಿ ತಂದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಪಲ್ಯೂಷನ್‌ನ್ನು ನೋಡುವಂಥದ್ದು, ಹೊಗೆ ಬರುತ್ತದೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಪ್ರತ್ಯೇಕ ಯಂತ್ರ ಇದೆ. ವಾಹನ ಸರಿ ಇದೆಯೋ ಇಲ್ಲವೋ ಎಂದು ನೋಡಿ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡುತ್ತೇವೆ. ಹಾಗೆಯೇ ಎಮಿಷನ್ ಟೆಸ್ಟ್ ಮಾಡುವುದಕ್ಕೆ ಸಾಕಷ್ಟು ಸಾಧನಗಳು ಇವೆ. ಪುನಃ ಈ ಹಸಿರು ತೆರಿಗೆ ಹಾಕುವಂಥ ಯೋಜನೆ ಏಕೆ ಬೇಕು? ಈ ವಿಚಾರವಾಗಿ ಸಂಬಂಧಿಸಿದವರು ಕೋರ್ಟಿಗೆ ಹೋಗುತ್ತಾರೆ. ಅವರು ಸುಮ್ಮನೆ ಬಿಡುವುದಿಲ್ಲ. ಕೋರ್ಟಿಗೆ ಹೋದಾಗ ಈ ವಿಷಯದಲ್ಲಿ ನೀವು ಪ್ರಶ್ನಾತೀತವಾಗಿ ಸಿಕ್ಕಿಹಾಕಿಕೊಳ್ಳುತ್ತೀರಿ. ಇದರ ಬಗ್ಗೆ ಯೋಚನೆ ಮಾಡಿ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗುತ್ತದೆ. ಇವತ್ತು ಮೋಟಾರ್ ವೆಹಿಕಲ್ಸ್ ಇರುವಂಥವರಿಗೆ ನಾನಾ ರೀತಿಯ ಟ್ಯಾಕ್ಸ್‌ನ್ನು ಹಾಕುತ್ತಿದ್ದೀರಿ. ಹಾಗೆಯೇ ಸಿಟಿಯಲ್ಲಿ ಓಡಾಡುತ್ತಿರುವಂಥ ವಾಹನಗಳಿಗೆ ಇವತ್ತು ಸೆಸ್ ಎಂದು ಹಾಕಿ ಅದನ್ನು ವಸೂಲಿ ಮಾಡುತ್ತಿದ್ದೀರಿ. ಈಗಾಗಲೇ ಹೆಲ್ತ್ ಸೆಸ್ ಎಂದು ಆಗಿದೆ, ಲೈಬ್ರರಿ ಸೆಸ್ ಎಂದು ಮಾಡಿದ್ದೀರಿ, ಬೆಗ್ಗರ್ಸ್ ಸೆಸ್ ಎಂದು ಮಾಡಿದ್ದೀರಿ, ಗಾರ್ಬೇಜ್ ಕ್ಲಿಯರೆನ್ಸ್ ಸೆಸ್ ಎಂದು ಆಗಿದೆ ಹೀಗೆ ಸಾಕಷ್ಟು ಸೆಸ್‌ನ್ನು ಹಾಕಿರುವ ಜೊತೆಗೆ ಈಗ ಹಸಿರು ಟ್ಯಾಕ್ಸ್ ಎಂದು ಸಿಟಿ ಒಳಗಡೆ ಇರುವಂಥ ವೆಹಿಕಲ್ಸ್‌ಗೆ 250 ರೂಪಾಯಿ ಮತ್ತು ಸಿಟಿಯಿಂದ ಆಚೆ ಓಡಿಸುವ ವೆಹಿಕಲ್‌ಗೆ 500 ರೂಪಾಯಿ ಕೊಡಬೇಕೆಂದು ಮಾಡಿದ್ದೀರಿ. ಈ ರೀತಿ ಡ್ಯೂಅಲ್ ಆಗಿ ಸಿಕ್ಕಾಬಟ್ಟೆ ಟ್ಯಾಕ್ಸ್ ಹಾಕಿದರೆ ಅವರ ಗತಿ ಏನು? ದಯವಿಟ್ಟು ಇದನ್ನು ಕೈಬಿಡಬೇಕು. ವೆಹಿಕಲ್ಸ್‌ನ್ನು ಸರಿ ಇದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ, ಪರೀಕ್ಷೆ ಮಾಡುವುದಕ್ಕೆ ಸಾಕಷ್ಟು ಬೇರೆ ಬೇರೆ ಸಾಧನಗಳು ಇವೆ. ಈ ಟ್ಯಾಕ್ಸ್ ಬಗ್ಗೆ ಸಾಕಷ್ಟು ವಿರೋಧ ಬರುತ್ತಿರುವುದನ್ನು ನಾನು ಕಂಡಿದ್ದೇನೆ. ಅದರ ಜೊತೆಗೆ, ನಮ್ಮಲ್ಲಿ ಆಲ್ ಇಂಡಿಯಾ ಟೂರಿಸ್ಟ್ ಆಮ್ನಿ ಬಸ್ಸುಗಳು ಸುಮಾರು 2500 ಇದ್ದು ಅವರು ಪಾಯಿಂಟ್‌ಗೆ ಪರ್ ಸೀಟ್‌ಗೆ 1400 ರೂ.ಗಳನ್ನು ಕೊಡುತ್ತಿದ್ದರು. ಇವತ್ತು ಅವರಿಗೆ ಮಾನ್ಯ ಮುಖ್ಯಮಂತ್ರಿಯವರು 2999 ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಅಂದರೆ ಒಂದೇ ಸಲಕ್ಕೆ 120 per cent raise. ನಮ್ಮಲ್ಲಿ ಯಾವುದೂ ಕಾಂಟ್ರಾಕ್ಟ್ ಕ್ಯಾರಿಯೇಜ್ ಇಲ್ಲ. ಇದು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಮಾನ್ಯ ಸಾರಿಗೆ ಸಚಿವರಿಗೆ ಸಹ ಗೊತ್ತಿದೆ. ದಿವಂಗತ ದೇವರಾಜ್ ಅರಸ್ ಅವರು ಆವಾಗ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ನ್ನು ಅಬಾಲಿಷ್ ಮಾಡಿ ಅವು ನಿಂತು ಹೋದವು. ಇವು ಅಂಡರ್ ಅದಿ ಟೂರಿಸ್ಟ್ ಪರ್ಮಿಟ್‌ನಲ್ಲಿ ರಾತ್ರಿ ಹೊತ್ತಿನಲ್ಲಿ ಈ ಬಸ್‌ಗಳು ಓಡಾಟ ಮಾಡುವಂಥದ್ದು. ನಮ್ಮ ಕೆ.ಎಸ್.ಆರ್.ಟಿ.ಸಿಯಲ್ಲಿ ಅಷ್ಟೊಂದು ಬಸ್ಸುಗಳು ಇಲ್ಲ. ಇವತ್ತು 2500 ಬಸ್ಸುಗಳು ಪಾಯಿಂಟ್‌ಟು ಪಾಯಿಂಟ್ ಏನು ಓಡಾಡುತ್ತಿವೆ ಅವರ ಮೇಲೆ ಒಂದೇ ಸಲಕ್ಕೆ ದಿಢೀರ್ ಎಂದು 120 ಪರ್ಸೆಂಟ್ ಅಷ್ಟೊಂದು ಹೆವಿ ಟ್ಯಾಕ್ಸ್ ಹಾಕಿರತಕ್ಕಂಥದ್ದು ಸಮಂಜಸವಲ್ಲ, ಇದನ್ನು ಪುನರ್‌ಪರಿಶೀಲಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ

ಮಾಡಿ, ಈ ಗ್ರೀನ್ ಟ್ಯಾಕ್ಸ್‌ಗೆ this is another problem we are facing. ಇದು ಪರಿಸರಕ್ಕೆ ಬರುತ್ತದೆ. ಏರ್ ಪಲ್ಯೂಷನ್, ಪರಿಸರ, ಗಾಳಿ, ಯಾವುದಕ್ಕಾದರೂ ನೀವು ಗ್ರೀನ್ ಟ್ಯಾಕ್ಸ್ ಹಾಕಬೇಕಾದರೆ ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದೆ. ನೀವು ಇದನ್ನು ಹಾಕುವುದಕ್ಕೆ ಆಗುವುದಿಲ್ಲ. This is against you. ಆ ಟ್ಯಾಕ್ಸ್‌ನ್ನು ನೀವು ಹಾಕುವುದಕ್ಕೆ ಬರುವುದಿಲ್ಲ. That also has to be examined in this.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಶ್ರೀ ಬಚ್ಚೇಗೌಡರು ಹೇಳಿದ ಹಾಗೆ ಕರ್ನಾಟಕ ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರಿಗೆ ನಮ್ಮದೇ ಆದಂಥ ಅನುದಾನವನ್ನು ಅವರಿಗೆ ಬಿಡುಗಡೆ ಮಾಡುತ್ತೇವೆ. ಅದಕ್ಕೇನೂ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯುವಂಥ ಅಗತ್ಯತೆಯಂತೂ ನನಗೆ ಕಂಡುಬಂದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಉಪಾಧ್ಯಕ್ಷರೇ, I am not just questioning you. Kindly examine this position.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಈ ಹಣವನ್ನು ಆ ಇಲಾಖೆಗೆ ಕೊಡುವುದರ ಮುಖಾಂತರ ಬೆಂಗಳೂರು ನಗರದ ಪರಿಸರವನ್ನು ಉತ್ತಮಪಡಿಸುವಂಥದ್ದಕ್ಕೆ ಎಂದು ನಾವು ಹೇಳಿಕೊಂಡಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, ನಾನು ಸಾರಿಗೆ ಸಚಿವನಾಗಿ ಕೆಲಸ ಮಾಡಿದ್ದರಿಂದ ಸ್ವಲ್ಪ ಈ articulated vehicles ಏನಿದೆ, ಅದನ್ನು ಎನ್‌ಕರೇಜ್ ಮ್ಮಾಡಬೇಕೆಂದು ಇರುವುದು. ವೋಲ್ವೋ ಟ್ರಕ್ಸ್ ಅದರ್ ಆರ್ಟಿಕ್ಯುಲೇಟೆಡ್ ವೆಹಿಕಲ್ಸ್ ಏನಿದೆ, ಮಲ್ಟಿ ಆಕ್ಸಿಲ್ ಇರತಕ್ಕಂಥ ಗೂಡ್ಸ್ ವೆಹಿಕಲ್ ಅದರ ಟೈರ್ಸ್‌ನ ಸರ್‌ಫೇಸ್ ರೋಡ್ ಮೇಲೆ ಕರೆಕ್ಟಾಗಿ ಬೀಳುತ್ತದೆಂದು ಹೇಳಿ ಅದನ್ನು ಪ್ರೋತ್ಸಾಹ ಮಾಡಿ ಎಂದು ಹೇಳುವಂಥದ್ದು. ಇದಕ್ಕೆ ಒಂದು ವರ್ಷಕ್ಕೆ ಐದು ಸಾವಿರ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೀರಿ. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ಇದನ್ನು ಪ್ರೋತ್ಸಾಹ ಮಾಡಿ ಎಂದು ಎಲ್ಲಾ ರಾಜ್ಯಗಳಿಗೆ ಸುತ್ತೋಲೆ ಕಳುಹಿಸಿರುವಂಥದ್ದು. ಇಲ್ಲಿ ಆರ್ಟಿಕ್ಯುಲೇಟೆಡ್ ವೆಹಿಕಲ್ಸ್ ಓಡುತ್ತಾ ಇದೆ. ಕೆಲವು ಟ್ರಯಲ್ ಬೇಸಿಸ್‌ನಲ್ಲಿ articulated vehicles are run now-one or two - in Bangalore City. ಅದಕ್ಕೆ ಹೆಚ್ಚು ತೆರಿಗೆಯನ್ನು ಕೊಡುವಂಥ ಕಾರ್ಯವನ್ನು ಇವತ್ತು ಬಜೆಟ್‌ನಲ್ಲಿ ಮಾಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೆ, ಇದು ಈ ರಾಜ್ಯದ ಬೊಕ್ಕಸಕ್ಕೆ ಸಂಬಂಧಪಟ್ಟಂಥ ಒಂದು ವಿಶೇಷವಾದ ವಿಚಾರ ಆಗಿರುವುದರಿಂದ, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ನಮ್ಮ ಸಹೋದ್ಯೋಗಿಗಳಾದ ಶ್ರೀಮಾನ್ ಬಚ್ಚೇಗೌಡರು ಏನು ಹೇಳಿದರು ಅದನ್ನು ಪುಷ್ಟೀಕರಿಸಿ ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕಾಗಿದೆ. ಆಲ್ ಇಂಡಿಯಾ ಪರ್ಮಿಟ್ ಇರತಕ್ಕಂಥ ಟೂರಿಸ್ಟ್ ಆಮ್ನಿ ಬಸ್ಸುಗಳಿಗೆ ನೀವು ಏನು ಟ್ಯಾಕ್ಸ್ ಹಾಕಿದ್ದೀರಿ ಅದು ಗೋವಾದಲ್ಲಿ ಒಂದು ವರ್ಷಕ್ಕೆ ಒಂದು ಸೀಟ್‌ಗೆ 50 ರೂ.ಗಳು ಟ್ಯಾಕ್ಸ್ ಇದೆ.

4.30 ಪಿ.ಎಂ.

ಪಾಂಡಿಚೆರಿಯಲ್ಲಿ ಪರ್ ಕ್ವಾರ್ಟರ್‌ಗೆ 300 ರೂಪಾಯಿ ಇದೆ. ಮಹಾರಾಷ್ಟ್ರದಲ್ಲಿ ಒಂದು ಸಾವಿರ ಇದೆ. ಕೇರಳದಲ್ಲಿ ಒಂದೂವರೆ ಸಾವಿರ ಇದೆ. ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಮಾತ್ರ ಮೂರು ಸಾವಿರ ರೂ. ಇದೆ. ಈಗ ನೀವೂ ಅದನ್ನು ಮೂರು ಸಾವಿರ ರೂ.ಗಳಿಗೆ ತೆಗೆದುಕೊಂಡು ಬಂದಿದ್ದೀರಿ. ಕಾಂಟ್ರಾಕ್ಟ್ ಕ್ಯಾರೇಜ್ ಅಕ್ವಿಸಿಷನ್ ಇಲ್ಲಿ ಆ್ಯಕ್ಟ್ ಇದೆ. ಆಂಧ್ರ ಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಇಲ್ಲ, ಇದನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕು. ಈ ರೀತಿಯ 2,150 ಬಸ್ಸುಗಳು ಪರ್ಮಿಟ್‌ಗಳಲ್ಲಿ ಓಡಾಡುತ್ತಿವೆ. ನೀವು ಒಂದೇ ಬಾರಿಗೆ ಮೂರು ಸಾವಿರಕ್ಕೆ ತೆಗೆದುಕೊಂಡು ಹೋದರೆ, ತಕ್ಷಣವೇ ಅವರು ಆ ಬಸ್ಸುಗಳೆಲ್ಲವೂಗಳಿಗೂ ಟೂರಿಸ್ಟ್ ಬಸ್ಸುಗಳೆಂದು ಪರ್ಮಿಟ್ಟುಗಳನ್ನು ತೆಗೆದುಕೊಳ್ಳುತ್ತಾರೆ. ಮೋಟಾರ್ ವೆಹಿಕಲ್ ಆ್ಯಕ್ಟ್ ಪ್ರಕಾರ ನೀವು ಪರ್ಮಿಷನ್ ಅನ್ನು ಕೊಡಲೇಬೇಕಾಗುತ್ತದೆ. ಆಗ, ಈಗಿರುವಂಥ 2,150 ಬಸ್ಸುಗಳನ್ನು ಕೇವಲ 200 ಬಸ್ಸುಗಳಾಗುತ್ತವೆ. ಈ ವರ್ಷ ತಾವು ಒಂದು ಬಸ್ಸಿಗೆ ಅಡಿಷನಲ್ ಟ್ಯಾಕ್ಸ್ ಎಂದು ಹೆಚ್ಚು ಮಾಡಿರುವಂಥಾದ್ದು 1 ಲಕ್ಷದ 40 ಸಾವಿರ ರೂಪಾಯಿಗಳು. ಇದರಿಂದ ನೀವು ಸುಮಾರು 30 ಕೋಟಿ ರೂ. ಹೆಚ್ಚು ಆದಾಯವನ್ನು ನಿರೀಕ್ಷಿಸುತ್ತಿದ್ದೀರಿ. ಈ ರೀತಿಯಾಗುವುದರಿಂದ, ಆದಾಯ ಹೆಚ್ಚಾಗುವುದರ ಬದಲಾಗಿ ಸುಮಾರು 25 ಕೋಟಿ ರೂ. ಗಳಷ್ಟು ಕಡಿಮೆಯಾಗುತ್ತದೆ. ತಾವು ಅಧಿಕಾರಿಗಳೊಂದಿಗೆ ಇದರ ಬಗ್ಗೆ ದಯವಿಟ್ಟು ಚರ್ಚೆ ಮಾಡಬೇಕು ಎಂದು ಹೇಳಬಯಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಮಲ್ಟಿ ಆ್ಯಕ್ಸಿಲ್ ಗೂಡ್ಸ್ ವೆಹಿಕಲ್‌ಗಳನ್ನು ಎನ್‌ಕರೇಜ್ ಮಾಡಬೇಕೆಂದು ಸರ್ಫೇಸ್ ಟ್ರಾನ್ಸ್ ಪೋರ್ಟ್ ಮಿನಿಸ್ಟ್ರಿಯವರು ರಿಪೀಟೆಡ್ ಆಗಿ ಹೇಳುತ್ತಿದ್ದಾರೆ. ಏಕೆ ಎನ್ನುವುದು ತಮಗೇ ಗೊತ್ತಿದೆ. ನಮ್ಮ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿರತಕ್ಕಂಥ ಬ್ರಿಡ್ಜ್‌ಗಳ ಮೇಲೆ 10-15 ಟನ್ ಕೆಪ್ಯಾಸಿಟಿಗಳವರೆಗೂ ಹೋಗತಕ್ಕಂಥ ಅವಕಾಶವಿದೆ. ಮಂಗಳೂರಿನಿಂದ ಬೆಂಗಳೂರಿಗೆ, ಬಿಜಾಪುರದಿಂದ ಕಾರವಾರಕ್ಕೆ, ಬೆಂಗಳೂರಿನಿಂದ ಚೆನ್ನೈಗೆ ಹೋಗತಕ್ಕಂಥ ರಸ್ತೆಗಳನ್ನು ತಾವು ನೋಡಿರಬಹುದು. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಯ ರಸ್ತೆಗಳ ಅಷ್ಟೊಂದು ಕೆಡುವುದಿಲ್ಲ. ಆದರೆ ಎಂ.ಡಿ.ಆರ್. ರಸ್ತೆಗಳು, ಜಿಲ್ಲಾ ಪರಿಷತ್ತಿನ ರಸ್ತೆಗಳು ಇವುಗಳಲ್ಲಿರತಕ್ಕಂಥ ಎಲ್ಲಾ ಕಲ್ವರ್ಟ್‌ಗಳೂ 1-2 ವರ್ಷಗಳಿಗೇ ಒಡೆದು ಹೋಗುತ್ತಿವೆ. ಏಕೆಂದರೆ, ಅಲ್ಲಿ 40-50 ಟನ್‌ಗಳಷ್ಟು ಗ್ರಾನೈಟ್ ಕಲ್ಲುಗಳು ಅಲ್ಲಿಂದ ಹೋಗುತ್ತಿವೆ. ಈಗಿರತಕ್ಕಂಥವನ್ನು ಚೆಕ್‌ಪೋಸ್ಟ್ ಪದ್ಧತಿಯಿಂದ ಅದನ್ನು ತಡೆಯಲು ಆಗುವುದಿಲ್ಲ. ನಾವೂ ಪ್ರಯತ್ನ ಮಾಡಿದ್ದೇವೆ, ಎಷ್ಟು ಎನ್‌ಫೋರ್ಸ್‌ಮೆಂಟ್ ಮಾಡಿದರೂ ಸಹ ಅದನ್ನು ನಿಲ್ಲಿಸಲು ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ಮಲ್ಟಿ ಆ್ಯಕ್ಸಿಲ್ ಗೂಡ್ಸ್ ವೆಹಿಕಲ್‌ಗಳಿರುವುದು ಬಹಳ ಕಡಿಮೆ. ವೋಲ್ವೋ ಒಬ್ಬರು ಬಿಟ್ಟರೆ ಬೇರೆ ಯಾರೂ ಅದನ್ನು ಮ್ಯಾನ್ಯುಫ್ಯಾಕ್ಚರ್ ಮಾಡುವುದಿಲ್ಲ. ಹೀಗೆ ನೀವು ಒಂದೇ ಬಾರಿಗೆ ಹೆಚ್ಚು ಮಾಡುವುದರಿಂದ ರಿಜಿಸ್ಟ್ರೇಷನ್‌ಗೆ ಬೇರೆ ಕಡೆಗಳಿಗೆ ಹೋಗುತ್ತಾರೆ. ಟ್ಯಾಕ್ಸ್ ಕೊಡುವುದಿಲ್ಲ, ಮಾಮೂಲು ಏನು ಕೊಡಬೇಕೋ, ಅದನ್ನು ಕೊಟ್ಟು ಹೊರಟು ಹೋಗುತ್ತಾರೆ. ಆದ್ದರಿಂದ, ಈ ವೆಹಿಕಲ್‌ಗಳನ್ನು ರ್‍ಯಾಷನ್‌ಲೈಸ್ ಮಾಡುವಾಗ ಎನ್‌ಕರೇಜ್ ಮಾಡಬೇಕು. ಈಗ ನೀವು ಹೆಚ್ಚು ಮಾಡಿರುವುದನ್ನು ರೀಕನ್ಸಿಡರ್ ಮಾಡಬೇಕು ಎನ್ನುವುದನ್ನು ಹೇಳುತ್ತೇವೆ.

ಇನ್ನು, ಕರ್ನಾಟಕದಲ್ಲಿ ಸುಮಾರು 18 ಲಕ್ಷ ಜನ ಟೂ ವೀಲರ್ಸ್ ವೆಹಿಕಲ್‌ಗಳ ಓನರ್‌ಗಳಿದ್ದಾರೆ. ಈಗ ಅದು 20 ಲಕ್ಷ ಆಗಿರಬಹುದು. ನೀವು ಲೈಫ್‌ಟೈಂ ಟ್ಯಾಕ್ಸ್ ಕೊಟ್ಟುಬಿಟ್ಟರೆ, ಮುಂದೆ ವೆಹಿಕಲ್ ಇರುವವರೆಗೆ ಟ್ಯಾಕ್ಸ್ ಕಟ್ಟುವ ಹಾಗೆ ಇಲ್ಲ ಎಂದು ನಾವು ಅವರಿಗೆ ಭರವಸೆ ಕೊಟ್ಟಿದ್ದೇವೆ. ಅಲ್ಲದೆ, ಏರ್ ಪಲ್ಯೂಷನ್‌ಗೆ ಯಾವುದೇ ರೀತಿಯ ಟ್ಯಾಕ್ಸ್ ಹಾಕಲು ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಪವರ್ಸ್ ಇಲ್ಲದೇ ಇರುವಂಥ ಪರಿಸ್ಥಿತಿ ಇದ್ದರೂ ಈಗ ನೀವು ಅವರಿಗೆ ಹೊಸ ಟ್ಯಾಕ್ಸ್ ಹಾಕುತ್ತಿದ್ದೀರಿ. ಒಂದು ಸಾರಿ ಲೈಫ್‌ಟೈಂ ಟ್ಯಾಕ್ಸ್ ಕಟ್ಟಿದರೆ ಮತ್ತೊಂದು ಬಾರಿ ಕಟ್ಟುವ ಹಾಗಿಲ್ಲ ಎಂದು ನಾವು ಅವರಿಗೆ ಅಷ್ಯುರೇನ್ಸ್ ಕೊಟ್ಟಿದ್ದೇವೆ. ಈಗ ಇನ್ನೊಂದು ಸಲ ಟ್ಯಾಕ್ಸ್ ಹಾಕುತ್ತೇವೆ ಎಂದರೆ ಹೇಗೆ ಆಗುತ್ತದೆ? ಇದರಲ್ಲಿರುವ ಲೀಗಲ್ ಆ್ಯಸ್ಪೆಕ್ಟ್ ಅನ್ನು ತಾವು ಎಕ್ಸಾಮಿನ್ ಮಾಡಬೇಕು. ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ, ಯಾರಾದೂ ಕೋರ್ಟಿಗೆ ಹೋದರೆ, ಇದು ಕೋರ್ಟ್ ಮುಂದೆ ನಿಲ್ಲುವುದಿಲ್ಲ.

ಕೊನೆಯದಾಗಿ, ಈ ವರ್ಷ ಕರ್ನಾಟಕದಲ್ಲಿ ನ್ಯೂ ವೆಹಿಕಲ್ಸ್ ರಿಜಿಸ್ಟ್ರೇಷನ್ ಶೇ. 10ರಷ್ಟು ಕಡಿಮೆಯಾಗಿದೆ. ಏಕೆ ಕಡಿಮೆಯಾಗುತ್ತಿದೆ ಎನ್ನುವುದನ್ನು ನೀವು ಎಕ್ಸಾಮಿನ್ ಮಾಡಿಸಬೇಕು. ನನಗೆ ಗೊತ್ತಿರುವ ಹಾಗೆ, ಒಂದೊಂದು ಹೊಸ ಮಾಡೆಲ್ ವೆಹಿಕಲ್‌ಗಳು ಬಂದಾಗಲೂ ಟ್ರಾನ್ಸ್ ಪೋರ್ಟ್ ಕಮಿಷನರ್ ಆಫೀಸ್‌ನಲ್ಲಿ ರಿಜಿಸ್ಟ್ರೇಷನ್‌ಗೆ ಅಪ್ರೂವಲ್ ತೆಗೆದುಕೊಳ್ಳಬೇಕಾಗುತ್ತದೆ. ನಾನು ಸಾರಿಗೆ ಸಚಿವನಾಗಿದ್ದಾಗ ಏನು ಮಾಡಿದ್ದೆ ಎಂದರೆ, ಹೊಸ ಮಾಡೆಲ್ ವೆಹಿಕಲ್‌ಗಳ ರಿಜಿಸ್ಟ್ರೇಷನ್ ಆಟೋಮೆಟಿಕ್ ಆಗಿ ಆಗತಕ್ಕಂಥಾದ್ದನ್ನು ನಾವು ಮಾಡಿದ್ದೆವು. ಮ್ಯಾನುಫ್ಯಾಕ್ಚರರ್ ಹೊಸ ಮಾಡಲ್ ವೆಹಿಕಲ್‌ಗಳನ್ನು ತಯಾರು ಮಾಡಿದ ಮರುದಿನವೇ ಆಟೋಮೆಟಿಕಲಿ ಅವುಗಳ ರಿಜಿಸ್ಟ್ರೇಷನ್ ಮಾಡಬಹುದಾಗಿತ್ತು. ಆದರೆ ಈಗ ಅಪ್ರೂವಲ್‌ಗಾಗಿ ಹೋದ ಫೈಲ್ 6-7 ತಿಂಗಳುಗಳಾದರೂ ಕ್ಲಿಯರೆನ್ಸ್ ಆಗುತ್ತಿಲ್ಲ. ಅದಕ್ಕೋಸ್ಕರವಾಗಿ ರಿಜಿಸ್ಟ್ರೇಷನ್‌ಗಾಗಿ ಬೇರೆ ಕಡೆಗೆ ಹೋಗುತ್ತಿದ್ದಾರೆ. ಬೆಂಗಳೂರಿನವರು ಹೊಸೂರಿಗೆ ಹೋಗಿ ಒಂದೇ ದಿವಸದಲ್ಲಿ ಸುಲಭವಾಗಿ ರಿಜಿಸ್ಟ್ರೇಷನ್ ಮಾಡಿಸಿಕೊಂಡು ಬರುತ್ತಿದ್ದಾರೆ. ನಮ್ಮ ರಾಜ್ಯದ ಸುತ್ತಮುತ್ತಲಿರುವ ಬೇರೆ ಬೇರೆ ಐದು ರಾಜ್ಯಗಳಿಗೆ ಹೋಗುತ್ತಿದ್ದಾರೆ. ರಾಯಚೂರು ಪಕ್ಕದಲ್ಲಿ ಆಂಧ್ರ ಪ್ರದೇಶದ ಒಂದು ಜಿಲ್ಲೆ ಇದೆ, ಆ ಭಾಗದವರು ಅಲ್ಲಿಗೆ ಹೋಗುತ್ತಾರೆ. ಬೆಳಗಾವಿಯವರಿಗೆ ಗೋವಾ ಹತ್ತಿರವಾಗುತ್ತದೆ. ಈ ರೀತಿಯಾಗುತ್ತಿರುವುದರಿಂದ ನಮ್ಮ ರಾಜ್ಯದ ತೆರಿಗೆ ಆ ರಾಜ್ಯಗಳಿಗೆ ಹೋಗುತ್ತಿದೆ. ಆದ್ದರಿಂದ, ನಮ್ಮಲ್ಲಿ ನ್ಯೂ ಮಾಡೆಲ್ ವೆಹಿಕಲ್‌ಗಳು ರಿಜಿಸ್ಟ್ರೇಷನ್‌ಗೆ ಬಂದಾಗ, ಕೂಡಲೇ ರಿಜಿಸ್ಟ್ರೇಷನ್ ಆಗುವಂತೆ ಕ್ರಮ ತೆಗೆದುಕೊಳ್ಳಿ. ನನಗೆ ಗೊತ್ತಿರುವ ಹಾಗೆ ಈ ನ್ಯಾಚುರಲ್ ಗ್ರೋತ್ ಇಡೀ ದೇಶದಲ್ಲಿ ಶೇ. 10-15 ರಷ್ಟು ಟೂ ವೀಲರ್ ಸೇಲ್ಸ್ ಜಾಸ್ತಿಯಾಗುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ನ್ಯೂ ವೆಹಿಕಲ್ ರಿಜಿಸ್ಟ್ರೇಷನ್ ಶೇ. 10ರಷ್ಟು ಕಡಿಮೆಯಾಗಿದೆ. ದಯವಿಟ್ಟು ತಾವು ಇದನ್ನು ಪರಿಶೀಲನೆ ಮಾಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ because this is another A.R. Measures for you, ಏಕೆಂದರೆ, ಇದರಿಂದ ನಮ್ಮ ರಾಜ್ಯಕ್ಕೆ 30 ಕೋಟಿ ರೂಪಾಯಿಗಳು ಬರಲು ಸಾಧ್ಯವಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಮತ್ತು ನನ್ನ ಬಳಿ ಇರುವ ಬೇರೆ ಬೇರೆ ರಾಜ್ಯಗಳಿಂದ ಬಂದಿರುವ ಮಾಹಿತಿ ಪ್ರಕಾರ, ಆಲ್ ಇಂಡಿಯಾ

ಟ್ರಾನ್ಸ್‌ಪೋರ್ಟ್ ವೆಹಿಕಲ್‌ಗಳಿಗೆ ತೆರಿಗೆ ಆಂಧ್ರಪ್ರದೇಶದಲ್ಲಿ ಮೂರೂವರೆ ಸಾವಿರ ರೂಪಾಯಿಗಳಿದ್ದರೆ, ತಮಿಳುನಾಡಿನಲ್ಲಿ ಮೂರು ಸಾವಿರ ರೂಪಾಯಿಗಳು ಇದೆ. ಬೇರೆ ರಾಜ್ಯಗಳಲ್ಲಿ ಕಡಿಮೆ ಇದೆ. ಹೆಚ್ಚು ಆಲ್ ಇಂಡಿಯಾ ಪರ್ಮಿಟ್ ವಾಹನಗಳನ್ನು ಹೊಂದಿರುವಂಥ ರಾಜ್ಯವೆಂದರೆ ಮಹಾರಾಷ್ಟ್ರ. ಅಲ್ಲಿ ಆ ರೀತಿಯ ಮೂರೂವರೆ ಸಾವಿರ ವಾಹನಗಳಿವೆ. ಅಲ್ಲಿ ಒಂದು ಸಾವಿರ ರೂಪಾಯಿ ಟ್ಯಾಕ್ಸ್ ಹಾಕುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ 1,400 ರೂಪಾಯಿಗಳನ್ನು ಪ್ರತಿಯೊಂದು ಸೀಟಿಗೆ ನಾವು ಸಂಗ್ರಹಣೆ ಮಾಡುತ್ತಿದ್ದೇವೆ. 1994ರಿಂದ ಇದನ್ನು ರಿವೈಸ್ ಮಾಡಿರಲಿಲ್ಲ. ಹೋದವರ್ಷ ನಾವು 100 ರೂಪಾಯಿಗಳನ್ನು ಮಾತ್ರ ಹೆಚ್ಚಿಸಿದ್ದೇವೆ. ಆದರೆ ಇವತ್ತಿನ ಖರ್ಚುವೆಚ್ಚಗಳು ಹಾಗೂ ಕೇಂದ್ರ ಸರ್ಕಾರವೂ ಸಹ ಅನೇಕ ವಿಚಾರಗಳನ್ನು ಹೇಳಿರುವುದರಿಂದ ನಾವು ರಸ್ತೆಗಳ ಅಭಿವೃದ್ಧಿಗಾಗಿ ಟ್ಯಾಕ್ಸ್ ಅನ್ನು ಹೆಚ್ಚಿಸಬೇಕಾಗಿದೆ. ತಾವು ಮಲ್ಟಿ ಆ್ಯಕ್ಸಲ್ ವೆಹಿಕಲ್‌ಗಳ ಬಗ್ಗೆ ಹೇಳಿದಿರಿ. ಈ ವೆಹಿಕಲ್‌ಗಳಿಗೆ 1993ರಲ್ಲಿ ತಾವು ಕೇವಲ 300 ರೂಪಾಯಿಗಳನ್ನು ಏರಿಸಿದಿರಿ. ಈ ಸಾರಿ ನಾವು ಆಯವ್ಯಯವನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಪ್ರತಿ 100 ಕೆ.ಜಿ ಮೇಲೆ 25 ರೂಪಾಯಿಗಳನ್ನು ಮತ್ತು 250 ಕೆ.ಜಿ ಮೇಲೆ 50 ರೂಪಾಯಿಗಳನ್ನು ವಿಧಿಸುವ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಜೊತೆಗೆ, ಈಗ ಮಲ್ಟಿ ಆ್ಯಕ್ಸಿಲ್ ವೆಹಿಕಲ್‌ಗಳನ್ನು ವೋಲ್ವೋದವರು ಮಾತ್ರ ತಯಾರು ಮಾಡುತ್ತಿಲ್ಲ. ಟಾಟಾ ಕಂಪನಿಯವರು, ಲೇಲ್ಯಾಂಡ್ ಕಂಪನಿಯವರು, ಸಹ ಮಲ್ಟಿ ಆ್ಯಕ್ಸಲ್ ವೆಹಿಕಲ್‌ಗಳನ್ನು ತಯಾರು ಮಾಡುತ್ತಿದ್ದಾರೆ. ದೇಶದಲ್ಲಿರುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ 48 ಟನ್ ಭಾರ ಹೊರಲು ಅನುಮತಿ ನೀಡಿರುವುದರಿಂದ ಟ್ಯಾಕ್ಸ್‌ನ್ನು ಮಲ್ಟಿ ಆ್ಯಕ್ಸಲ್ ವೆಹಿಕಲ್‌ಗಳಿಗೆ ಜಾಸ್ತಿ ಮಾಡಿಲ್ಲ. ಆದರೆ ನಮ್ಮ ರಾಜ್ಯದಲ್ಲಿರುವಂಥ ಆಲ್ ಇಂಡಿಯಾ ಪರ್ಮಿಟ್ ಹೊಂದಿರುವಂಥ 2,150 ವಾಹನಗಳ ಟ್ಯಾಕ್ಸ್ ಹೆಚ್ಚಾಗಿದೆ ಎಂದು ಅನೇಕ ಸಂಘ ಸಂಸ್ಥೆಗಳು ನನಗೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ನಾನೂ ಸಹ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಂಡಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ನಿರ್ಣಯ ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಒಳ್ಳೆಯ ಕಾರ್ಯ ಆಗಿರುವುದನ್ನು ನಾವು ಸ್ವಾಗತ ಮಾಡಬೇಕು. ಲೋಕೋಪಯೋಗಿ ಇಲಾಖೆಯಿಂದ ರಸ್ತೆಗಳ ಅಭಿವೃದ್ಧಿಯಾಗಿದೆ. ವಿಶ್ವಬ್ಯಾಂಕ್ ಹಾಗೂ ನಾನೂ ಮೂಲಗಳಿಂದ ಹಣವನ್ನು ಪಡೆದು ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿ ಪಡಿಸಿರುವಂಥಾದ್ದು ಆಗಿದೆ. ವಸತಿ ಇಲಾಖೆಯಲ್ಲೂ ಸಹ ಒಳ್ಳೆಯ ಕೆಲಸವಾಗಿದೆ. ಇದುವರೆಗೂ ನಾವು ಕೇಳಿರಲಿಲ್ಲ, ಕಂಡಿರಲಿಲ್ಲ. ಹಾಗೆ ಮಾನ್ಯ ಮುಖ್ಯಮಂತ್ರಿಗಳು ಅವರ ಜಿಲ್ಲೆಯಾದ ಮಂಡ್ಯಕ್ಕೆ 300 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ 40 ಕೋಟಿ ರೂಪಾಯಿಗಳನ್ನು ಈ ವರ್ಷವೇ ನಿರ್ದಿಷ್ಟವಾಗಿ ತೆಗೆದು ಇಟ್ಟಿದ್ದಾರೆ. ನಮ್ಮದು ಬಯಲು ಸೀಮೆ ಪ್ರದೇಶ. ಗಡಿ ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಮಾನ್ಯ ರಮಾನಾಥ ರೈ ಅವರು ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 75 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಖರ್ಗೆಯವರು ಹೇಳಿದರು. ಮಲೆನಾಡು ಅಭಿವೃದ್ಧಿ ಮಂಡಳಿಗೆ ಎಷ್ಟು ಹಣ ಕೊಟ್ಟಿದ್ದಾರೆ ಎನ್ನುವುದನ್ನು ಮಾನ್ಯ ಚಂದ್ರೇಗೌಡರು ಅಲ್ಲಿ ಏನು ಕರಾರುಕ್ಕಾಗಿ ಬಂದಿದೆಯೋ ಇಲ್ಲವೋ ಎಂಬುದನ್ನು ಮಂಡ್ಯ ಜಿಲ್ಲೆಗೆ ಮಾತ್ರ 300 ಕೋಟಿ

ರೂಪಾಯಿಗಳನ್ನು ನಿಗದಿ ಮಾಡಿದ್ದು ಅದರಲ್ಲಿ ಈ ವರ್ಷದ ಬಜೆಟ್‌ನಲ್ಲಿ 40 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದು ಸರಿಯಲ್ಲ. ಎಲ್ಲರೂ ಇದರ ಬಗ್ಗೆ ಕಾಮೆಂಟ್ ಮಾಡುತ್ತಾರೆ. 300 ಕೋಟಿ ರೂಪಾಯಿಗಳನ್ನು ಮುಖ್ಯಮಂತ್ರಿಗಳು ಅವರ ಒಂದು ಜಿಲ್ಲೆಗೇ ತೆಗೆದುಕೊಂಡು ಬಿಟ್ಟರೆ ಹೇಗೆ? ಅವರ ಒಂದು ಜಿಲ್ಲೆ ಅಭಿವೃದ್ಧಿಯಾದರೆ ಇಡೀ ಕರ್ನಾಟಕದ 27 ಜಿಲ್ಲೆಗಳು ಅಭಿವೃದ್ಧಿಯಾದ ಹಾಗೆ ಆಗುತ್ತದೆಯೇ? ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದಾರೆ, ನಾವು ಹೇಗೆ ಹೇಳುವುದು ಎಂದು ಆ ಕಡೆ ಕುಳಿತಿರುವವರಿಗೆ ಭಯ ಇರಬಹುದು, ಅವರಿಗೆ ಧೈರ್ಯವಿಲ್ಲ, ಹೇಗೆ ಹೇಳಬೇಕು ಎಂದು ಇರುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ : ಈ ಬಗ್ಗೆ ಈ ಕಡೆಯ ಬಹಳ ಜನ ಹೇಳಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಂಡ್ಯಾನೂ ಕರ್ನಾಟಕದಲ್ಲಿ ತಾನೇ ಇರುವುದು?

ಶ್ರೀ ಬಿ.ಎನ್. ಬಚ್ಚೇಗೌಡ : ಹೇಳಿದ್ದಾರೆಯೇ, ಒಳ್ಳೆಯದು ಸ್ವಾಮಿ. ಕೆಲವು ಇಲಾಖೆಗಳಿಂದ ಒಳ್ಳೆಯ ಕೆಲಸಗಳಾಗಿವೆ ಎನ್ನುವುದನ್ನು ಹೇಳುತ್ತಿದ್ದೆ, ಮಾನ್ಯ ಅರಣ್ಯ ಸಚಿವರು ಬಿಗಿ ಧೋರಣೆಯನ್ನು ತಾಳಿ ಅರಣ್ಯ ಇಲಾಖೆಯಲ್ಲಿ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಿಸಿದ್ದಾರೆ ಮತ್ತು ಕೃಷಿ ಚಟುವಟಿಕೆಗಳಿಗೆ ನಮ್ಮ ಬಜೆಟ್‌ನಲ್ಲಿ ಆಧ್ಯತೆ ಕೊಟ್ಟಿಲ್ಲವೇ ಎಂದು ಕೇಳಿದರು. ನಮ್ಮಲ್ಲಿರತಕ್ಕಂಥದ್ದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳನ್ನು ಸುತ್ತುವರೆದಿರತಕ್ಕಂಥ ಸಾಫಿಸ್ಟಿಕೇಟೆಡ್ ಐ.ಎ.ಎಸ್ ಲಾಬಿ ಅವರನ್ನು ಈಚೆಗೆ ಬಿಟ್ಟಲ್ಲ ಎನ್ನತಕ್ಕಂಥದ್ದು ನಮ್ಮ ಪ್ರಚಾರದಲ್ಲಿ ಇರತಕ್ಕಂಥದ್ದು. ಈಗ ಅವರು ಈಚೆಗೆ ಬಂದು ನೋಡಿ ಕೃಷಿಗೆ ಆದ್ಯತೆ ಕೊಟ್ಟಿದ್ದಾರೆ ಎಂದು ಹೇಳಿದ್ದಕ್ಕೆ, ಏನ್ರೀ, ಏನೂ ಮಾಡಿಲ್ಲ ಎಂದು ಮಾತನಾಡುತ್ತಿದ್ದೀರಲ್ಲಾ ಎಂದು ಶ್ರೀ ಕೆ.ಹೆಚ್. ರಂಗನಾಥ್ ಅವರಿಗೆ ಕೋಪ ಬಂದುಬಿಟ್ಟಿತು. ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರ ಗಮನಕ್ಕೆ ತರುವುದೇನೆಂದರೆ, ಹೆಚ್ಚು ಹೆಚ್ಚು ಹಾಸ್ಟಲ್‌ಗಳನ್ನು ಕಟ್ಟುವುದರಲ್ಲಿ ಅರ್ಥವಿಲ್ಲ. ಇರತಕ್ಕಂಥ ಹಾಸ್ಟಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಈಗ ಬಹುಶಃ ಒಂದೊಂದು ಹಾಸ್ಟಲ್‌ಗಳಲ್ಲಿ 40 ರಿಂದ 50 ಮಕ್ಕಳು ಇರಬೇಕೆಂದು ನಿಗದಿ ಮಾಡಿದ್ದಾರೆ. ಇದನ್ನು ಹೆಚ್ಚು ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಜಿಲ್ಲಾ ಪಂಚಾಯತ್ ಮೂಲಕ ಶಿಫಾರಸ್ಸು ಮಾಡಿ ಕಳುಹಿಸಿದರೆ ಹಾಸ್ಟಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕೆ ಅಂಥದ್ದೇನೂ ತೊಂದರೆ ಇಲ್ಲ. ಇದರ ಬಗ್ಗೆ ಜಿಲ್ಲಾ ಪಂಚಾಯತ್ ಮೂಲಕ ತಾವೆಲ್ಲಾ ಶಿಫಾರಸ್ಸು ಮಾಡಿ ಕಳುಹಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, 2002-2003ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಉಪಾಧ್ಯಕ್ಷರೆ, ಬಹಳಷ್ಟು ಮಾನ್ಯ ಸದಸ್ಯರುಗಳು ಹೇಳುವುದನ್ನೆಲ್ಲಾ ಹೇಳಿಬಿಟ್ಟಿದ್ದಾರೆ. ಈಗ ಕೆಲವು ಇಂಪಾರ್ಟೆಂಟ್ ಇಶ್ಯೂಸ್‌ನ್ನು ಹೇಳುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಪ್ರಪ್ರಥಮವಾಗಿ Administration and Regulation: about the High Court in North Karnataka congratulate

the Chief Minister for having really allotted Rs. 10 crores for this purpose. ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಆಗಬೇಕೆಂದು ಇಡೀ ಕರ್ನಾಟಕದಲ್ಲಿ ಪ್ರತಿಯೊಬ್ಬರೂ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಈಗ ಅದಕ್ಕೆ 10 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಮೀಸಲಿಟ್ಟಿರುವುದು ನಿಜವಾಗಿಯೂ ಅಭಿನಂದನೆಗೆ ಅರ್ಹವಾಗಿದ್ದು ನಾನು ಅಭಿನಂದಿಸುತ್ತಿದ್ದೇನೆ. ಜೊತೆಗೆ, ಶಾಸಕರಿಗೆ ನಿಧಿ ಏನು ಕೊಟ್ಟಿದ್ದಾರೆ ಅದಕ್ಕೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾವುದೇ ಡೆವಲಪ್‌ಮೆಂಟ್ಸ್ ಆಕ್ಟಿವಿಟೀಸ್ ಮಾಡಬೇಕಾದರೆ, ಒಂದು ಮಿನಿವಾಟರ್ ಸ್ಕೀಂ ಮಾಡಬೇಕಾದರೂ ಕೂಡ ನಾವು ಯೋಜನೆ ಮಾಡುತ್ತಿದ್ದೇವು. ನಮ್ಮ ಕಾರ್ಪೋರೇಷನ್ ಏರಿಯಾದಲ್ಲಿ ನಾವು ಏನೂ ಕೆಲಸ ಮಾಡಿಸುವುದಕ್ಕಾಗುತ್ತಿರಲಿಲ್ಲ. ಸಂಬಂಧಪಟ್ಟ ಕಾರ್ಪೋರೇಟರ್ಸ್ ಅವರಿಗೆ ಏನು ಬೇಕೋ ಆ ಕೆಲಸವನ್ನು ಮಾಡಿಸುತ್ತಿದ್ದರು. ಹಾಗೆಯೇ ಕಾರ್ಪೋರೇಷನ್‌ನಲ್ಲಿ ಫಂಡ್ಸ್ ಸಹ ಸಾಕಷ್ಟು ಇರುತ್ತಿರಲಿಲ್ಲ. ಆದ್ದರಿಂದ ಎಂ.ಎಲ್.ಎ ಫಂಡ್‌ನಲ್ಲಿ 40 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಬಹಳ ಅನುಕೂಲವಾಯಿತು. ಇದನ್ನು 50 ಲಕ್ಷ ರೂಪಾಯಿಗಳಿಗೆ ಆದಷ್ಟು ಬೇಗ ಹೆಚ್ಚಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ನಮ್ಮ ಕೋರ್ಟ್‌ಗಳ ಬಗ್ಗೆ ಹೇಳುವುದಾದರೆ ಸುಮಾರು 20-25 ವರ್ಷಗಳ ಹಿಂದಿನ ಕಾಲದ ಕೋರ್ಟ್ ಕಟ್ಟಡಗಳು ಇದ್ದು ಅವು ಬಹಳ ಜೀರ್ಣಾವಸ್ಥೆಯಲ್ಲಿವೆ. ಅಂಥ ಕಟ್ಟಡಗಳು ಇರುವ ಜಾಗಕ್ಕೆ ನಮ್ಮ ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಕಾನೂನು ಸಚಿವರು ಅನೇಕ ಸಲ ಭೇಟಿ ನೀಡಿದ್ದಾರೆ. ಆ ಹಳೆಯ ಕಟ್ಟಡವನ್ನು ಮಾನ್ಯ ಧರ್ಮಸಿಂಗ್‌ರವರಿಗೆ ತೋರಿಸಿದಾಗ, ಅವರು ಕೂಡಲೇ ಇದನ್ನು ರಿಪೇರಿ ಮಾಡಬೇಕೆಂದು ಡೈರೆಕ್ಷನ್ ಕೊಟ್ಟರು. ಅದಕ್ಕಾಗಿ ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ದಿವಂಗತ ಕೆಂಗಲ್ ಹನುಮಂತಯ್ಯನವರ ವಿಷನ್ ಏನಿತ್ತು ಎಂಬುದನ್ನು ಹೇಳುತ್ತೇನೆ ಅವರು ಮಂತ್ರಿಯಾಗಿ ಇಲ್ಲಿದೆ ಇದ್ದಾಗ ರಾಜಭವನದ ಪಕ್ಕದಲ್ಲಿ ವಾಕ್ ಮಾಡುತ್ತಿದ್ದರು. ಅವಾಗ ನಾನು ಬಂದು ಅವರನ್ನು ಅನೇಕ ಸಲ ಮಾತನಾಡಿಸಿದ್ದೇನೆ. ಹೈಕೋರ್ಟ್ ಹತ್ತಿರದಲ್ಲಿ ಎಲ್ಲಾದರೂ ಒಂದು ಕಡೆ ಕೋರ್ಟ್‌ಗಳ ಸಂಕೀರ್ಣ ಮಾಡಬೇಕೆಂದು ಅವರು ಹೇಳುತ್ತಿದ್ದರು. ಮತ್ತು ಇದು ಅವರ ಉದ್ದೇಶವಾಗಿತ್ತು. ಇದನ್ನು ಎಲ್ಲಿ ಮಾಡುವುದು ಎಂದಾಗ ಸಿಟಿ ಸಿವಿಲ್ ಕೋರ್ಟ್ ಹತ್ತಿರ ಎಲ್ಲಾ ಕೋರ್ಟ್‌ಗಳು ಇರುವ ಹಾಗೆ ಮಾಡೋಣ ಎಂದು ಒಂದು ಐಡಿಯಾ ಇತ್ತು. ಆ ರೀತಿ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಯೋಚನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಬೆಂಗಳೂರಿನಲ್ಲಿ ಎಲ್ಲಾ ಏರಿಯಾದರಲ್ಲಿ ಕೋರ್ಟ್‌ಗಳು ಇವೆ. ಪೀಣ್ಯಾದಲ್ಲಿ ಒಂದು ಕೋರ್ಟ್ ಮಾಡಿದ್ದಾರೆ, ಇಂದಿರಾನಗರದಲ್ಲಿ ಆಡ್ಮಿನಿಸ್ಟ್ರೇಟೀವ್ ಟ್ರಿಬ್ಯುನಲ್ ಕೋರ್ಟ್ ಇದೆ. ಗಾಂಧೀನಗರದಲ್ಲಿ ಲೇಬರ್ ಕೋರ್ಟ್ ಇದೆ. ತಿಂಗಳು ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಕಟ್ಟಡದ ಬಾಡಿಗೆ ಸಲುವಾಗಿ ಕೊಡುತ್ತಿದ್ದಾರೆ. ಅದನ್ನು ಅವಾಯ್ಡ್ ಮಾಡಬಹುದು. ಹಾಗೆಯೇ ಸ್ಕೂಟರ್‌ಗಳಿಗೆ, ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕೂಡ ಸರಿಯಿಲ್ಲ. ಆದ್ದರಿಂದ ಒಂದು ಸಂಕೀರ್ಣ ಮಾಡಬೇಕೆನ್ನುವ ಯೋಜನೆಯನ್ನು ಮಾಡಬೇಕು. ಇದನ್ನು ಹೇಗೆ ಮಾಡುವುದು ಎಂದರೆ, ಇಲ್ಲಿ ಇದ್ದಂಥ ಜೈಲಿನಿಂದ ಅಕ್ಯೂಸ್ಡ್ ಪರ್ಸನ್ಸ್‌ನ್ನು ಓಪನ್ ಜೈಲಿಗೆ ಶಿಫ್ಟ್ ಮಾಡಿದ್ದಾರೆ. All Accused persons are being shifted. ಈಗ ಅಲ್ಲಿ ವೇಕೆಂಟ್ ಇದೆ. ಖಾಲಿ ಇರುವ ಜೈಲು ಸ್ಥಳದಲ್ಲಿ ಹೊಸದಾಗಿ ಕಟ್ಟಡಗಳನ್ನು ಕಟ್ಟಿಸುವ ಅವಶ್ಯಕತೆ ಇಲ್ಲ, ಈಗ ಇರುವ ಕಟ್ಟಡಗಳಲ್ಲಿ ಟೆಂಪರರಿಯಾಗಿ ಅರೇಂಜ್‌ಮೆಂಟ್‌ನ್ನು

ಈ ಲೇಬರ್ ಕೋರ್ಟ್, ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯೂನಲ್ ಕೋರ್ಟ್‌ಗೆ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಈಗ ಪೀಣ್ಯಾದಲ್ಲಿರತಕ್ಕಂಥ ಕೋರ್ಟ್, ಇಂದಿರಾನಗರದಲ್ಲಿರತಕ್ಕಂಥ ಕೋರ್ಟ್, ಹಾಗೂ ಲೇಬರ್ ಕೋರ್ಟ್‌ಗೆ ಈ ಹಳೆಯ ಜೈಲ್‌ನಲ್ಲಿ ಇರುವ ಕಟ್ಟಡಗಳೇ ಸಾಕಾಗುತ್ತದೆ. ಅದರ ಬಗ್ಗೆ ಏನಾದರೂ ಯೋಚನೆ ಮಾಡಿ ದಯವಿಟ್ಟು ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಉಪಾಧ್ಯಕ್ಷರೆ, ಅತೀ ಶೀಘ್ರದಲ್ಲಿಯೇ ಒಂದು ಕಾಂಪ್ಲೆಕ್ಸ್ ತೆಗೆದುಕೊಳ್ಳುತ್ತಿದ್ದೇವೆ. ಬೆಂಗಳೂರಿನಲ್ಲಿರತಕ್ಕಂಥ ಎಲ್ಲಾ ಲೇಬರ್ ಕೋರ್ಟ್‌ಗಳನ್ನು ಒಂದೇ ಕಾಂಪ್ಲೆಕ್ಸ್‌ನಲ್ಲಿ ತರುತ್ತಿದ್ದೇವೆ. ಇದು ಬನ್ನೇರುಘಟ್ಟ ರೋಡ್‌ನಲ್ಲಿ ಇದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ನಮ್ಮೆಲ್ಲರ ವಿರೋಧ ಇದೆ. ಮಾನ್ಯ ಮಂತ್ರಿಗಳು ಈಗ ಹೇಳಿರುವುದು ಒಳ್ಳೆಯದಾಯಿತು. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಕೋರ್ಟ್ ಪೀಣ್ಯದಲ್ಲಿ ಇದೆ. ಈ ರೀತಿ ಬೇರೆ ಬೇರೆ ಕಡೆಯಲ್ಲಿ ಕೋರ್ಟ್‌ಗಳು ಇದ್ದರೆ ವಕೀಲರಿಗೆ ಮತ್ತು ಕಕ್ಷಿದಾರರಿಗೆ ಬಹಳ ತೊಂದರೆ ಆಗುತ್ತದೆ. ಆದ್ದರಿಂದ ಬನ್ನೇರುಘಟ್ಟದಲ್ಲಿ ಮಾಡುವುದರಿಂದ ಪ್ರಯೋಜನವಿಲ್ಲ. ಆದ್ದರಿಂದ ಸೆಂಟ್ರಲ್ ಪ್ಲೇಸ್‌ನಲ್ಲಿ ಎಲ್ಲಾದರೂ ಒಂದು ಕಡೆ ಕಾಂಪ್ಲೆಕ್ಸ್ ಇರಬೇಕೆಂದು ಹೇಳುತ್ತಿದ್ದೇನೆ. ಇನ್ನು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ವಿಸಿಟ್ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾವು ಈಗಾಗಲೇ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಇಲ್ಲಿ ಏನಾಗಿದೆ ಎಂದರೆ ಸಣ್ಣ ಸಣ್ಣ ಕೋರ್ಟ್ ಹಾಲ್‌ಗಳನ್ನು ಡಿವೈಡ್ ಮಾಡುತ್ತಿದ್ದಾರೆ. ಇದರಿಂದ ಆ ಕೋರ್ಟ್ ಹಾಲ್‌ಗೆ ಅಕ್ಯೂಸ್ಡ್ ಒಳಕ್ಕೆ ಹೋಗುವುದಕ್ಕಾಗುವುದಿಲ್ಲ, ವಕೀಲರೂ ಸಹ ಒಳಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಮ್ಯಾಜಿಸ್ಟ್ರೇಟ್‌ರು ಹೇಗೋ ಬಂದು ರೀಚ್ ಆಗಿ ಒಳಗೆ ಕುಳಿತು ಬಿಟ್ಟಿರುತ್ತಾರೆ. ಯಾರೂ ಬರುವುದಕ್ಕೆ ಮುಂಚೆಯೇ ಅವರು ಬಂದು ಒಳಗಡೆ ಕುಳಿತುಬಿಟ್ಟಿರುತ್ತಾರೆ. ಈ ರೀತಿ ಆಗಿರುವುದರಿಂದ ನಮಗೆಲ್ಲಾ ಬಹಳ ತೊಂದರೆಯಾಗಿದೆ. ಇನ್ನು ಬೆಂಗಳೂರು ಒಳ್ಳೆಯ ಸಿಟಿ ಆಗಬೇಕು, ಸಿಂಗಾಪುರ್ ಆಗಬೇಕೆಂದು ಅನೇಕ ಸಲ ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದರು. ನಿಜವಾಗಿ ಕೂಡ we welcome theat suggestion and proposal also. ಇಲ್ಲಿ ಏನಾಗಬೇಕೆಂದರೆ, ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಸಚಿವರಾದ ಶ್ರೀ ಅನಂತ್‌ಕುಮಾರ್ ಅವರು ಇದ್ದಾರೆ. ಬೆಂಗಳೂರಿನಲ್ಲಿ ಮೆಟ್ರೋಟ್ರೈನ್ ಹಾಕದಿದ್ದರೆ ಇಲ್ಲಿ ಪಲ್ಯೂಷನ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಈಗ ಬೆಂಗಳೂರಿನಲ್ಲಿ ಸುಮಾರು 15 ರಿಂದ 16 ಲಕ್ಷ ವೆಹಿಕಲ್ಸ್ ಓಡಾಡುತ್ತಿವೆ. ಹೀಗಾದರೆ ಮುಂದೆ ಬೆಂಗಳೂರಿನಲ್ಲಿ ಓಡಾಡುವುದೇ ಬಹಳ ಕಷ್ಟವಾಗುತ್ತದೆ. Pollution is the highest in Bangalore City. How to put an end to that. ಅದಕ್ಕೆ ದಯವಿಟ್ಟು ತಾವು ಒಂದು ಯೋಚನೆ ಮಾಡಬೇಕು. ಮೆಟ್ರೋ ಟ್ರೈನ್ ಮಾಡಿದರೆ ಬೆಂಗಳೂರು ಜನರಿಗೆ ಬಹಳ ಅನುಕೂಲವಾಗುತ್ತದೆ. ನಾನು ಒಂದು ಸಲ ಲಂಡನ್‌ಗೆ ಹೋದಾಗ 20 ಮೈಲು ದೂರದಲ್ಲಿ ಕಾರನ್ನು ಪಾರ್ಕ್ ಮಾಡಿ ಟ್ರೈನ್‌ನಲ್ಲಿ ಹೋದೆವು. ಸಮಯಕ್ಕೆ ಸರಿಯಾಗಿ ನಾವು ತಲುಪಬೇಕಾದ ಸ್ಥಳಕ್ಕೆ ತಲುಪಿದೆವು. ನಮ್ಮ ಬೆಂಗಳೂರಿನಲ್ಲಿ ಹೈಕೋರ್ಟ್‌ಗೆ ಆಗಲಿ, ವಿಧಾನಸೌಧಕ್ಕೆ ಆಗಲಿ ಅಥವಾ ಸಿಟಿ ಸಿವಿಲ್ ಕೋರ್ಟ್‌ಗೆ ಹೋಗುವುದಕ್ಕೆ ಒಂದು ಮೆಟ್ರೋ ಟ್ರೈನ್ ಸಿಸ್ಟಮ್‌ನ್ನು

ಮಾಡುವುದಕ್ಕೆ ಒಂದು ಪ್ಲಾನ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಶ್ರೀ ಅನಂತ್ ಕುಮಾರ್ ಅವರ ಜೊತೆ ನಾವು ಮಾತನಾಡಿದಾಗ ಅವರು ಇದರ ಬಗ್ಗೆ ನಾನು ಸಿ.ಎಂ. ಅವರ ಜೊತೆ ಮಾತನಾಡಿ ಇದಕ್ಕೆ ಒಂದು ಪ್ಲಾನ್ ಮಾಡದೇ ಇದ್ದರೆ ಆಗುವುದಿಲ್ಲ ಎಂದು ಹೇಳಿದರು. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಗಮನಹರಿಸಿ ಮಾಡಬೇಕು. ಇನ್ನು ಹಳೆಯ ಕೋರ್ಟ್ ಕಟ್ಟಡಗಳ ಬಗ್ಗೆ ಹೇಳುವುದಾದರೆ, ವಕೀಲರು ಚಿಕ್ಕಬಳ್ಳಾಪುರದಲ್ಲಿ ಒಂದು ತಿಂಗಳ ಕಾಲ ಸ್ಟ್ರೈಕ್ ಮಾಡಿದರು. ಅಲ್ಲಿ 115 ವರ್ಷದ ಕಟ್ಟದ ಇದ್ದು at any time it may collapse. ಇದುವರೆಗೆ ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಪೋಸಲ್ ಇಲ್ಲ. ಆದ್ದರಿಂದ ಇದನ್ನು ಅದಷ್ಟು ಬೇಗನೆ ಮಾಡಿಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ತುಮಕೂರಿನಲ್ಲಿ 100 ವರ್ಷದ ಕೋರ್ಟ್ ಕಾಂಪ್ಲೆಕ್ಸ್ ಇದ್ದು ಅದೂ ಕೂಡ ಬಿದ್ದುಹೋಗುವ ಪರಿಸ್ಥಿತಿಯಲ್ಲಿ ಇದೆ. ನಮ್ಮ ಮಾನ್ಯ ಬಚ್ಚೇಗೌಡರ ಮತಕ್ಷೇತ್ರವಾದ ಹೊಸಕೋಟೆಯಲ್ಲಿ ಲ್ಯಾಂಡ್ ಅಕ್ವೈರ್ ಕೂಡ ಆಗಿಲ್ಲ, ಅಲ್ಲಿ ಬಹಳ ಸಣ್ಣ ಕೊಠಡಿಯಲ್ಲಿ ಕೋರ್ಟ್ ಇದೆ. ಆದ್ದರಿಂದ, ಅಲ್ಲಿ ಅದಷ್ಟು ಬೇಗ ಕಟ್ಟಡ ಆಗಬೇಕೆಂದು ಅಲ್ಲಿನ ವಕೀಲರು ಮನವಿ ಕೊಟ್ಟಿದ್ದಾರೆ. ದಯಮಾಡಿ ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಮಂತ್ರಿಗಳು ಅಧಿಕಾರ ನಡೆಸುತ್ತಿದ್ದಾರೋ ಅಥವಾ ಬ್ಯೂರೋಕ್ರಾಟ್ಸ್ ಅಧಿಕಾರ ನಡೆಸುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ, ನಿಜವಾಗಿಯೂ ಇದು ಬಹಳ ದುಃಖಕರವಾದ ಸಂಗತಿಯಾಗಿರುವುದರಿಂದ ನಾನು ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೇಳಬಯಸುತ್ತೇನೆ. ನಮ್ಮ ಕೋರ್ಟ್ ಕಾಂಪ್ಲೆಕ್ಸ್ ಇನ್ಯಾಗುರೇಷನ್ ದಿನ ಮಾನ್ಯ ಮುಖ್ಯಮಂತ್ರಿಗಳು ಐದು ಲಕ್ಷ ರೂಪಾಯಿ ಗ್ರಾಂಟ್ ಕೊಡುತ್ತೇವೆಂದು ಅನೌನ್ಸ್ ಮಾಡಿದರು. ಆ ದಿನ ಮುಖ್ಯ ನ್ಯಾಯಾಧೀಶರು ಹಾಗೂ ಎಲ್ಲಾ ನ್ಯಾಯಾಧೀಶರೂ ಇದ್ದರು. ಆ ದಿನ ಅವರು ಓಪನ್ ಆಗಿ, ಪ್ರತಿ ವರ್ಷ 5 ಲಕ್ಷ ರೂಪಾಯಿ ಬಾರ್ ಅಸೋಸಿಯೇಷನ್‌ಗೆ ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದರು. ಇದರ ಪ್ರಕಾರ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮನವಿ ಕೊಟ್ಟೆವು, ಅವರು ತಕ್ಷಣವೇ ಅದನ್ನು ಕೊಡಿ ಎಂದು ಬರೆದರು. ನಂತರ ಎಫ್‌ಡಿಯಲ್ಲಿ ಆಗುವುದಿಲ್ಲ ಎಂದರು, ಪುನಃ ಲಾ-ಸೆಕ್ರೆಟರಿಯವರು ಒಂದು ಲೆಟರ್ ಬರೆದರು, ಇದು ಮಾನ್ಯ ಮುಖ್ಯಮಂತ್ರಿಗಳು ಮಾತು ಕೊಟ್ಟಿದ್ದಾರೆ ಆ ದಿನ ಮುಖ್ಯ ನ್ಯಾಯಾಧೀಶರು ಹಾಗೂ ಎಲ್ಲಾ ನ್ಯಾಯಾಧೀಶರು ಇದ್ದರು ಇದನ್ನು ಕೊಡಲೇ ಬೇಕು ಎಂಬುದಾಗಿ ಬರೆದರು. ಮೂರು ಸಲ ಲೆಟರ್ ಹೋಗಿ ಬಂದ ಮೇಲೆ ಅವರು ಆಯಿತು ಎರಡು ಲಕ್ಷ ರೂ. ಕೊಡಬಹುದು ಎಂದು ಬರೆದರು. ಬಹುಶಃ ಈಗಿನ ಫೈನಾನ್ಸ್ ಸೆಕ್ರೆಟರಿ ಅಲ್ಲ ಎಂದು ಕಾಣಿಸುತ್ತದೆ, ನಾವು ಪುನಃ ಹೋಗಿ, ನೋಡಿ ಇದು ಮಾನ್ಯ ಮುಖ್ಯಮಂತ್ರಿಗಳು ಓಪನ್ನಾಗಿ ಹೇಳಿಕೆ ಕೊಟ್ಟಿದ್ದಾರೆ ತಾವು ದಯಮಾಡಿ ಇದನ್ನು ನಡೆಸಿ ಕೊಡಬೇಕು ಎಂದರೆ, ಆಗಲಿ ಎಂದರೆ. ಆಗ ನಾವು ತಮ್ಮ ಗಮನಕ್ಕೂ ಈ ವಿಚಾರ ತಂದಾಗ, ತಾವು ತಕ್ಷಣವೇ What I have promised it should be honoured ಎಂದು ಹೇಳಿದಿರಿ. ಇದುವರೆವಿಗೂ ಮಾಡಲಿಲ್ಲ. ಬಹುಶಃ ಮಂತ್ರಿಗಳು ಅಧಿಕಾರ ನಡೆಸುತ್ತಿದ್ದಾರೋ ಅಥವಾ ಬ್ಯೂರೋಕ್ರಾಟ್ಸ್ ಅಧಿಕಾರ ಮಾಡುತ್ತಿದ್ದಾರೋ ಎನ್ನುವ ಭಾವನೆ ಬಂದಿದೆ. ಏಕೆಂದರೆ, ಮಂತ್ರಿಗಳದ್ದು ಏನೂ ನಡೆಯುತ್ತಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸುಬ್ಬಾರೆಡ್ಡಿಯವರೆ, ಹಾಗಾದರೆ ನಮ್ಮ ಉಸ್ತುವಾರಿಯನ್ನು ಎಲ್ಲಾ ತಾವೇ ವಹಿಸಿಕೊಂಡಿರುವ ಹಾಗೆ ಮಾತನಾಡುತ್ತೀರಲ್ಲಾ ಹೇಗೆ? ನಮ್ಮ ಇಲಾಖೆಯಲ್ಲಿ ನಡೆಯುವ ವ್ಯವಹಾರದ ಬಗ್ಗೆ ತಮಗೆ ಇಷ್ಟು ಸಂಪೂರ್ಣವಾದ ಮಾಹಿತಿ ಇದೆ. ನಮ್ಮದ್ದೇನೂ ನಡೆಯುತ್ತಿಲ್ಲವೆಂದು ಹೇಗೆ ಹೇಳುತ್ತೀರಿ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳ ಎದುರೇ ಈ ವಿಚಾರ ಹೇಳಬೇಕೆನ್ನುವ ಆಸೆ ಇತ್ತು. ಯಾರೇ ಬ್ಯೂರೊಕ್ರಾಟ್ಸ್ ಆಗಿರಲಿ, whoever he may be, ಫೈನಾನ್ಸ್ ಸೆಕ್ರೆಟರಿಯಾಗಿರಬಹುದು ಇನ್ನು ಯಾರಾದರೂ ಆಗಿರಬಹುದು; ಮಾನ್ಯ ಮುಖ್ಯಮಂತ್ರಿಗಳ ಮಾತಿಗೆ ಬೆಲೆಕೊಡದೇ ಇದ್ದಾರೆ ಹೇಗೆ? ಲಾ - ಸಕ್ರೆಟರಿಯವರು ಎರಡು ಪತ್ರಗಳನ್ನು ಬಹಳ ಸೀರಿಯೆಸ್ಸಾಗಿ ಬರೆದಿರುತ್ತಾರೆ, This is a promise given by the Chief Minister ಎಂದು ಅವರ ಮಾತಿಗೆ ಏನಾಯಿತು? ಇಷ್ಟೊಂದು ದುಃಖಕರವಾದ ಸಂಗತಿಯನ್ನು ಅವರ ಗಮನಕ್ಕೆ ನಾನು ತರುತ್ತಿದ್ದೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಓಪನ್ನಾಗಿ ಹೇಳಿ ಸುಮಾರು ಏಳು ತಿಂಗಳುಗಳು ಕಳೆದರೂ ಏನೂ ಆಗಿಲ್ಲ; ಅವರು ಕೇವಲ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆಂದು ಹೇಳಿದರು. Finance Department is in his hands. He is the Chief Minister of our State. How can they go against his statement and promise made by the Chief Minister? ಮಾನ್ಯ ಮುಖ್ಯಮಂತ್ರಿಗಳಿಗೇ ಈ ರೀತಿ ಆದರೆ ಇನ್ನು ಬೇರೆ ಮಂತ್ರಿಗಳ ಗತಿ ಏನು? ಅವರ ಮಾತಿಗೆ ಗೌರ್ನಮೆಂಟ್‌ನಲ್ಲಿ ವ್ಯಾಲ್ಯೂ ಇಲ್ಲ ಎಂದರೆ ಹೇಗೆ? ಬೇರೆ ಬೇರೆ ಸಣ್ಣ ಮಂತ್ರಿಗಳ ಮಾತನ್ನು ದೇವರೇ ಕಾಪಾಡಬೇಕು. ನಮ್ಮ ಮಾನ್ಯ ಶಿವಕುಮಾರ್‌ರವರೇನು "ಕೆಲಸ ಮಾಡದಿರುವ ಮಂತ್ರಿಗಳನ್ನು ತೆಗೆದುಹಾಕಿ" ಎಂದು ಹೇಳಿದ್ದಾರೆ, ಏಕೆ ಬೇಕು ಇವರು? ಇಲ್ಲಿ ಅನೇಕರು ಮಲಗುವುದಕ್ಕೆ ಬಂದಿರುವುದು? ಮಂತ್ರಿಗಳಲ್ಲಿ ಕೆಲವರು ಸೀನಿಯರ್ ಮಂತ್ರಿಗಳು ಇರುತ್ತಾರೆ, ಉದಾ:ಗೆ ಸೀನಿಯರ್ ಲಾಯರ್ಸ್ ಇದ್ದ ಹಾಗೆ, ಯಾರೋ ಜೂನಿಯರ್‌ಗೆ ಅದೇನೋ ನೋಡಿಕೊಳ್ಳಪ್ಪ ಎಂದು ಹೇಳಿದ ಹಾಗೆ, ನಾನು ಇಲ್ಲಿ ಗಮನಿಸುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಗಳು ಕರೆಕ್ಟಾಗಿ ಅಸ್ಲೆಂಬಿಗೆ ಅಟೆಂಡ್ ಆಗುತ್ತಾರೆ, ನಾನೂ ಕೂಡ ಅವರ ಹಾಗೆ ಕಲಿಯಬೇಕು ಎಂದೆನ್ನಿಸುತ್ತದೆ, ಏಕೆಂದರೆ ನನಗೂ ಕೋರ್ಟ್‌ಗೆ ಹೋಗಬೇಕು ಎನ್ನುವ ಭಾವನೆ ಇದೆ. ಅನೇಕ ಮಂತ್ರಿಗಳನ್ನು ಕೇಳಿದರೆ ಕೌನ್ಸಿಲ್‌ನಲ್ಲಿ ಇದ್ದಾರೆ ಎಂದು ಹೇಳುತ್ತಾರೆ, ನಾನು ಕೌನ್ಸಿಲ್‌ಗೆ ಹೋಗಿ ನೋಡಿದೆ ಅಲ್ಲಿ ಯಾರೂ ಇರಲಿಲ್ಲ. ಸಿವಿಲ್ ಕೋರ್ಟಿನಲ್ಲಿ ಕೇಳಿದರೆ ಹೈಕೋರ್ಟ್‌ಗೆ ಹೋಗಿದ್ದಾರೆಂದೂ, ಹೈಕೋರ್ಟಿನಲ್ಲಿ ಹೋಗಿ ನೋಡಿದರೆ ಸಿವಿಲ್ ಕೋರ್ಟಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಅಲ್ಲಿಯೂ ಇರುವುದಿಲ್ಲ ಇಲ್ಲಿ ಇರುವುದಿಲ್ಲ. ಇದು ಏನು ವ್ಯವಸ್ಥೆ? ಯಾವಾಗಲೂ ನಾವು ಸಂಪ್ರದಾಯವನ್ನು ಬಹಳ ಮುಖ್ಯವಾಗಿ ನೋಡಬೇಕಾಗುತ್ತದೆ. ಮಾನ್ಯ ಅರಣ್ಯ ಸಚಿವರಾದ ಶ್ರೀಮಾನ್ ರಂಗನಾಥ್‌ರವರು ಬಹಳ ಹಿರಿಯ ಸಚಿವರು, ಬಹಳ ವರ್ಷಗಳ ಅನುಭವ ಅವರಿಗೆ ಇದೆ, ಬನ್ನೇರುಘಟ್ಟದಲ್ಲಿ ರೈತರ ಕಷ್ಟ ಏನಾಗಿದೆ ಎಂದರೆ, ವರ್ಷಕ್ಕೆ ಒಂದು ಸಲ ಅಥವಾ ಎರಡು ಸಲ ಆನೆಗಳ ಹಿಂಡು 30-40 ಆನೆಗಳು ಬಂದು ಇಡೀ ಲ್ಯಾಂಡ್‌ಗೆ ನುಗ್ಗಿ ಇಡೀ ಬೆಳೆಯನ್ನೆಲ್ಲಾ ಹಾಳು ಮಾಡಿ ಹೋಗುತ್ತವೆ. ಇದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇದಕ್ಕೇನಾದರೂ ಬಜೆಟ್ ಪ್ರೊಪೋಸಲ್ ಕೊಟ್ಟಿದ್ದೀರಾ? ಇದಕ್ಕೇನಾದರೂ ಮಾಡಿದ್ದೀರಾ ಎಂದು ಬಜೆಟ್ ಅನ್ನು ನೋಡಿದೆ, ಇದರ ಬಗ್ಗೆ

ಏನೂ ಮಾಡಿಲ್ಲ. ಬನ್ನೇರುಘಟ್ಟದಲ್ಲಿ ನನ್ನದು ಸ್ವಲ್ಪ ಲ್ಯಾಂಡ್ ಇದೆ, ನಾನು ಆಗಾಗ ಅಲ್ಲಿಗೆ ಹೋದಾಗ ಅಲ್ಲಿನ ರೈತರು ಏನು ಸಾರ್ ಅರಣ್ಯ ಸಚಿವರು ಏನು ಮಾಡುತ್ತಿಲ್ಲವಲ್ಲಾ ಎಂದು ಹೇಳುತ್ತಾರೆ, ಅದಕ್ಕೆ ನಾನು, ಏನಪ್ಪ ಮಾಡುವುದು ನಾನು ಅವರನ್ನು ಬಂದು ನೋಡಿ ಸಾರ್ ಎಂದು ಕೇಳಿದೆ, ಅವರು ಬರುತ್ತೇನೆಂದು ಹೇಳಿದರು; ಬಂದರು ಆದರೆ ಆ ದಿನ ನಾನು ಬರುವುದಕ್ಕಾಗಲಿಲ್ಲ. Every year it is a regular feature How to put an end to this?

ಶ್ರೀ ಕೆ.ಹೆಚ್. ರಂಗನಾಥ್ : ತಾವು ನನ್ನ ಕರೆದಿರಿ ನಾನು ಆ ದಿನ ಬಂದೆ, ತಾವು ಏಕೆ ಬರಲಿಲ್ಲ? ನನ್ನ ಜೊತೆಗೆ ತಾವು ಏಕೆ ಬರಲಿಲ್ಲ? ಆಮೇಲೆ ತಾವು ಕರೆದರೂ ನಾನು ಬರುತ್ತಲೇ ಇಲ್ಲ.

Sri K.N. Subba Reddy : I am sorry to say. The pollution Incharge Minister, ಮಾನ್ಯ ರಂಗನಾಥ್‌ರವರು ಪರಿಸರ ಮಂತ್ರಿಗಳು, ನಮ್ಮ ಕ್ಷೇತ್ರದಲ್ಲಿ ಗಿಡ ಹಾಕಬೇಕು ನೀವು ಬರಬೇಕು ಎಂದು ಕೇಳಿದಾಗ, ಅವರು ನನ್ನ ಕೈಯಲ್ಲಿ ಅದು ಆಗುವುದಿಲ್ಲ ಎಂದರೆ, ಅದಕ್ಕೆ ನಾನು ಏಕೆ ಎಂದು ಕೇಳಿದಾಗ, ಅವರು ಏತಕ್ಕೆ ಗಿಡ ಹಾಕುವುದು ಎಂದರು, ಬೇಕಾದರೆ ಕೇಳಿ ಇದೇ ಮಾತು ಹೇಳಿದರು.

ಶ್ರೀ ಕೆ.ಹೆಚ್. ರಂಗನಾಥ್ : ನೀವು ಕರೆದಿರಿ ನಾನು ಬರುತ್ತೇನೆ ಎಂದು ಹೇಳಿದೆ, ನೀವು ಬರಲಿಲ್ಲ, ಹೀಗಾಗಿ ನಾನು ಬರುವುದೇ ಬಿಟ್ಟುಬಿಟ್ಟೆ, ಏಕೆಂದರೆ, ತಮಗೆ ಅದು ಇಷ್ಟವಿಲ್ಲವೆಂದ ಮೇಲೆ ನಾನೇಕೆ ಬರಬೇಕು ?

Sri K.N. Subba Reddy :- In fact, I congratulate Mr. Inamdar. ಕೆಲವು ಬಂಕ್‌ಗಳನ್ನು ಸರ್‌ಪ್ರೈಸ್ ಚೆಕ್ ಮಾಡಿಸಬೇಕು ಎಂದು ನಾನು ಅವರಿಗೆ ಹೇಳಿದೆ. ಹಿಂದಿನ ಮಂತ್ರಿಗಳು ಇದ್ದಾಗ ನಾನು ಶಾಸಕನಾಗಿರಲಿಲ್ಲ ಆದರೂ ನಾನು ಅವರನ್ನು ಕರೆದು ಕೊಂಡು ಹೋಗಿ ಸುಮಾರು 12 ಪೆಟ್ರೋಲ್ ಬಂಕ್‌ಗಳನ್ನು ಚೆಕ್ ಮಾಡಿದಾಗ, 6 ಪೆಟ್ರೋಲ್ ಬಂಕ್‌ಗಳ ಮೇಲೆ ಕೇಸ್ ಹಾಕಿ ಕ್ಲೋಸ್ ಮಾಡಿಸಿದರು. We are happy. Lawyers are also very happy. Even public were also very happy. ಎರಡನೇ ದಿನ ನೋಡಿದರೆ ಎಲ್ಲಾ ಪೆಟ್ರೋಲ್ ಬಂಕ್‌ಗಳು ಓಪನ್ನಾಗಿವೆ. ನಂತರ ನಾನು ಮಂತ್ರಿಗಳಿಗೆ ಫೋನು ಮಾಡಿ ಅದು ಏನಾಯಿತು ಎಂದು ವಿಚಾರಿಸಿದೆ, ಆಗ ಅವರು ಅದು ಎಲ್ಲಾ ಸರಿಹೋಯಿತು ಬಿಡಿ ಎಂದರು. ಇನಾಂದಾರ್ ಅವರನ್ನು I realyy congratulate Mr. Inamdar ಅವರು ಮಾತ್ರ ಬಸವನಗುಡಿ ಕ್ಷೇತ್ರದಲ್ಲಿ ಐದು ಪೆಟ್ರೋಲ್ ಬಂಕ್‌ಗಳನ್ನು ಚೆಕ್ ಮಾಡಿದರು, ಎರಡು ಮಾತ್ರ ಮೇಷರ್‌ಮೆಂಟ್‌ನಲ್ಲಿ ಸರಿಯಾಗಿ ಇರಲಿಲ್ಲ. ಮತ್ತು ಅಡಲ್ಟ್ರೇಷನ್ ಸರಿ.

5.00 ಪಿ.ಎಂ.

ಎರಡು ಪ್ರಕರಣಗಳಿಗೆ ಸಂಬಂಧಪಟ್ಟಂತೆ ದೂರನ್ನು ದಾಖಲು ಮಾಡಿದರು. ಇದು ನನಗೆ ಸಂತೋಷವಾಯಿತು. ಬಸ್‌ಗಳನ್ನು ಪರಿಶೀಲನೆ ಮಾಡೋಣ ಬನ್ನಿ ಎಂದು ಸನ್ಮಾನ್ಯ ಸಗೀರ್ ಅಹಮದ್‌ರವರಿಗೆ ಹೇಳಿದ್ದಕ್ಕೆ, ಅವರು ಎಲ್ಲಾದರೂ ಹೋಗಲಿ ಡಪ್ಪಾ ಎಂದು ಹೇಳಿದರು.

ಹಾಗೆಯೇ, ಸಬ್ ರಿಜಿಸ್ಟ್ರಾರ್ ಕಛೇರಿಯನ್ನು ಚೆಕ್ ಮಾಡೋಣ ಬನ್ನಿ ಎಂದು ಸನ್ಮಾನ್ಯ ಶ್ರೀ ಕಂಠಯ್ಯರವರಿಗೆ ಹೇಳಿದ್ದಕ್ಕೆ ಅವರೂ ಸಹ ಎಲ್ಲಾದರೂ ಹೋಗಲಿ ಬಿಡಿ ಎಂದು ಹೇಳಿದರು. ಆದರೆ ಮಾನ್ಯ ಧರ್ಮಸಿಂಗ್‌ರವರಿಗೆ ಬಂದು ಕಟ್ಟಡವನ್ನು ನೋಡಬೇಕೆಂದು ಹೇಳಿದ ತಕ್ಷಣವೇ ಅವರು ಬಂದು ಬಿಲ್ಡಿಂಗ್‌ನ್ನು ನೋಡಿದರು. ತಕ್ಷಣವೇ ಅವರು ಮುಖ್ಯ ಇಂಜನಿಯರ್‌ರವರಿಗೆ he ordered on the spot to take up the work tomorrow onwards. I am very happy about that. That is how you can do the work. ನೀವೇ ನಿರುತ್ಸಾಹಕರಾದರೆ ನಾವೇನು ಮಾಡೋಣ? ಗಿಡ ಹಾಕುವುದಕ್ಕೆ ಬರಬೇಕೆಂದು ಸನ್ಮಾನ್ಯ ರಂಗನಾಥ್‌ರವರಿಗೆ ಕೇಳಿದ್ದಕ್ಕೆ, ನಾನೇತಕ್ಕೆ ಬರಬೇಕಪ್ಪ ಎಂದು ಹೇಳಿದರು. ಈ ರೀತಿಯಾದಂಥ ಪರಿಸ್ಥಿತಿ ನಿಮ್ಮಿಂದ ಆಗಬಾರದು. ಯಾವುದಾದರೊಂದು ರೀತಿಯಾದ ಡ್ರೈವ್ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಎಲ್ಲಾ ಕಡೆ ನಾವು ಕರೆಯುವುದಕ್ಕೆ ಆಗುತ್ತದೆಯೇ ಅಥವಾ ಅವರು ಎಲ್ಲಾ ಕಡೆ ಬರುವುದಕ್ಕೆ ಆಗುತ್ತದೆಯೇ? ಬೆಗ್ಗರ್ಸ್‌ಗಳನ್ನು ನೋಡಬೇಕು, ಆದ್ದರಿಂದ ನನ್ನ ಜೊತೆ ಬನ್ನಿ ಎಂದು ಸನ್ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಹೇಳಿದಕ್ಕೆ ಅವರು ಹೋಗೋಣ ಬನ್ನಿ ಎಂದು ನನ್ನನ್ನು ಲಾರಿಯಲ್ಲಿಯೇ ಕರೆದುಕೊಂಡು ಹೋದರು. ಆ ಸಂದರ್ಭದಲ್ಲಿ ನಾವು ಅನೇಕ ಬೆಗ್ಗರ್‌ಗಳನ್ನು ಹಿಡಿದೆವು. ಈಗ ಅಲ್ಲಿ ಅಧಿಕಾರಿಯನ್ನೂ ಚೇಂಜ್ ಮಾಡುವುದರಿಂದ ಇವತ್ತಿನದಿವಸ ಎಲ್ಲಾ ಕಡೆ ಬೆಗ್ಗರ್ಸ್ ಜಾಸ್ತಿ ಆಗಿದ್ದಾರೆ. ಇವತ್ತಿನ ದಿವಸ ಡ್ರೈವ್ ಮಾಡಬೇಕು. Continuously you must make it point as to how to improve the system. ಮೊದಲು ನೀವು ಸರಿಯಾಗಿ ಇರಬೇಕು. "ಯಥಾ ರಾಜ ತಥಾ ಪ್ರಜಾ" ಎನ್ನುವ ಹಾಗೆ ನೀವು ಸರಿಯಾಗಿ ಇದ್ದರೆ ಮಾತ್ರ ಬೇರೆಯವರಿಗೆ ಹೇಳಬಹುದು. ನಾವೇ ಸರಿಯಾಗಿ ಇಲ್ಲದಿದ್ದರೆ, ಇದನ್ನು ಮಾಡಲು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಸಹಕಾರ ನಮಗೆ ಬೇಕಾಗಿದೆ. ಆದ್ದರಿಂದ ಅವರು ಕೊಡತಕ್ಕಂಥ ಸಲಹೆಗಳನ್ನು ನಾವು ಮಾನ್ಯತೆ ಮಾಡುತ್ತೇವೆ. ಮಾನ್ಯ ಸದಸ್ಯರು ಈಗಾಗಲೇ ಹೇಳಿದ ಹಾಗೆ ನಾವು ಮುಂದಿನ ದಿನಗಳಲ್ಲಿ ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯಕ್ಕೆ ಸ್ಪಂದಿಸುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿರುವುದರಿಂದ ಇನ್ನೂ ಎರಡು ನಿಮಿಷಗಳ ಕಾಲ ಮಾತನಾಡುವುದಕ್ಕೆ ತಾವು ಅವಕಾಶ ಕೊಡಿ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ, ಅವರಿಗೆ ಇನ್ನೂ ಅವಕಾಶ ಕೊಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಮುಖ್ಯಮಂತ್ರಿಯವರು ನಾನು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತುಂಬಾ ಸಂತೋಷ. ಹೈಕೋರ್ಟ್‌ನಲ್ಲಿ 100 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕಾಗಿ ನೋಟಿಫಿಕೇಷನ್ ಹೊರಡಿಸಿದ್ದರು. 100 ಪೋಸ್ಟ್‌ಗಳಿಗೆ ಸುಮಾರು 7000 ಜನ ಅರ್ಜಿಗಳನ್ನು ಹಾಕಿದ್ದಾರೆ. Unemployment is increasing, all over

India, not Karnataka only. ಹಾಗೆಯೇ ಕೋಲಾರ ಜಿಲ್ಲೆಯ ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಖಾಲಿ ಇರತಕ್ಕಂಥ 6 ಪೋಸ್ಟ್‌ಗೆ (ಅಮೀನ) 600 ಅರ್ಜಿಗಳು ಬಂದಿವೆ. ಇವರೆಲ್ಲರೂ ಕೂಡ ಪದವೀಧರು ಆಗಿದ್ದಾರೆ. ಇವತ್ತಿನ ದಿವಸ ಎಷ್ಟು ಅಲಾರ್ಮಿಂಗ್ ಸಿಚ್ಯುವೇಶನ್ ಇದೆ. ಇವತ್ತಿನದಿವಸ ಸಾಕಷ್ಟು ಇಂಜಿನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಇದರಿಂದ ಏನು ಆಗುತ್ತದೆ ಎಂದರೆ, unemployment is increasing, How to put an end to this? ಅನೇಕರು ಖಾಸಗಿ ಕಾಲೇಜುಗಳನ್ನು ಪ್ರಾರಂಭ ಮಾಡಿ ಕೋಟ್ಯಾಂತರ ರೂಪಾಯಿ ಅರ್ನ್ ಮಾಡುತ್ತಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಶಿಕ್ಷಣ ಪದ್ಧತಿ ಬಗ್ಗೆ ಮಾತನಾಡುತ್ತಾ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದರು. I welcome that proposal. ಏಕೆಂದರೆ, ಇವತ್ತಿನದಿವಸ ಖಾಸಗಿ ಸಂಸ್ಥೆಗಳು ಇರುವುದರಿಂದ ಸರ್ಕಾರಿ ಶಾಲೆಗಳು ಮತ್ತು ಕಾಲೇಜುಗಳು ಸಂಪೂರ್ಣವಾಗಿ ಮುಚ್ಚಿವೆ. ನಾನು ಈ ಸಂದರ್ಭದಲ್ಲಿ ಒಂದು ನಿದರ್ಶನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ, ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಒಂದು ಮುಖ್ಯವಾದ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ರಾಮಕೃಷ್ಣ ಆಶ್ರಮದವರು ಬನ್ನೇರುಘಟ್ಟದ ಹತ್ತಿರ 10 ವರ್ಷಗಳ ಹಿಂದೆ ಒಂದು ಹಳ್ಳಿಯನ್ನು ತೆಗೆದುಕೊಂಡಿದ್ದರು. ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರತಕ್ಕಂಥ ಚಿದಾನಂದ ಸ್ವಾಮಿಜಿಯವರು ಇವತ್ತಿನದಿವಸ ಅಮೇರಿಕಾದಲ್ಲಿದ್ದಾರೆ. ಅವರು ತೆಗೆದುಕೊಂಡಿರತಕ್ಕಂಥ ಹಳ್ಳಿ ಎಂಥದು ಎಂದರೆ, ಅಲ್ಲಿಗೆ ಹೋಗುವುದಕ್ಕೆ ಒಂದು ರಸ್ತೆ ಕೂಡ ಇರಲಿಲ್ಲ. ಸ್ವಾಮಿಜಿಯವರು ಕಷ್ಟಪಟ್ಟು ಆ ಹಳ್ಳಿಗೆ ಹೋಗಿ, ಅಲ್ಲೊಂದು ಶಾಲೆ ಮಾಡಬೇಕೆಂದು ಸದರಿ ಹಳ್ಳಿಯನ್ನು ಅಡಾಪ್ಟ್ ಮಾಡಿಕೊಂಡರು. ಪ್ರಾರಂಭದಲ್ಲಿ ಮೂರ್ನಾಲ್ಕು ಜನ ವಿದ್ಯಾರ್ಥಿಗಳಿದಂಥ ಶಾಲೆಯಲ್ಲಿ ಇವತ್ತಿನದಿವಸ ಸುಮಾರು 450 ಜನ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ರೀತಿ ಬೆಳೆಯಲು ಕಾರಣ ಏನೆಂದರೆ, ಸುಮಾರು 15 ರಿಂದ 20 ಕಿ.ಮೀ ದೂರದಿಂದ ಬರತಕ್ಕಂಥ ಮಕ್ಕಳಿಗೆ ಊಟ ಮತ್ತು ಬಟ್ಟೆ ಕೊಡುತ್ತಿದ್ದಾರೆ. ನಾಲ್ಕು ಜನ ವಿದ್ಯಾರ್ಥಿಗಳು ಇದ್ದಂಥ ಶಾಲೆಯಲ್ಲಿ ಇವತ್ತಿನದಿವಸ 450 ವಿದ್ಯಾರ್ಥಿಗಳ ಸಂಖ್ಯೆ ಆಗಬೇಕಾದರೆ ಅಲ್ಲಿ ಯಾವರೀತಿಯಾದ ಪರಿಸ್ಥಿತಿ ಇದೆ ಎನ್ನತಕ್ಕಂಥದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಖಾಸಗಿ ಶಾಲೆಗಳಿಗೆ ರೈಡ್ ಮಾಡಬೇಕು. ಆದ್ದರಿಂದ ತಾವು ಬರಬೇಕೆಂದು ಮಾನ್ಯ ವಿಶ್ವನಾಥ್‌ರವರಿಗೆ ನಾನು ಹೇಳಿದೆ. ಆದರೆ ಅವರು ಬರಲಿಲ್ಲ. ಹಿಂದೆ ಶಿಕ್ಷಣ ಸಚಿವರಾಗಿದ್ದಂಥ ಶ್ರೀಮಾನ್ ಗೋವಿಂದೇಗೌಡ ಇದ್ದಂಥ ಸಮಯದಲ್ಲಿ ನಾನು ಶಾಸಕ ಕೂಡ ಆಗಿರಲಿಲ್ಲ. ಆದರೆ, ಒಂದು ಸಲ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹೋಗೋಣ ಬನ್ನಿ ಎಂದು ಹೇಳಿದ್ದಕ್ಕೆ ಅವರು ನಮ್ಮ ಜೊತೆ ಬಂದರು. ಆ ಸಂದರ್ಭದಲ್ಲಿ ನಾಲ್ಕು ಖಾಸಗಿ ಶಾಲೆಗಳಿಗೆ ಭೇಟಿ ನೀಡಿದೆವು. ಈ ನಾಲ್ಕು ಶಾಲೆಗಳಲ್ಲಿಯೂ ಕೂಡ ಸುಮಾರು 30 ರಿಂಧ 35 ಸಾವಿರದವರೆಗೆ ಡೊನೇಷನ್ ಪಡೆದುಕೊಂಡಿದ್ದನ್ನು ಗಮನಿಸಿ ತಕ್ಷಣವೇ ಅವರ ಮೇಲೆ ದೂರನ್ನು ದಾಖಲು ಮಾಡಲು ಮಾನ್ಯ ಸಚಿವರು ಸೂಚಿಸಿದರು. ಬೆಂಗಳೂರು ನಗರದಲ್ಲಿ ಮಕ್ಕಳು ಓದಬೇಕಾದರೆ ಸಾಕಷ್ಟು ತೊಂದರೆ ಇದೆ. ಈ ರೀತಿಯಾದ ವ್ಯವಸ್ಥೆ ಇರತಕ್ಕಂಥ ಬೆಂಗಳೂರಿನಲ್ಲಿ ಏನು ಮಾಡಬೇಕೆಂದು ಶ್ರೀಮಾನ್ ವಿಶ್ವನಾಥ್‌ರವರಿಗೆ ನಾನು ಹೇಳುವುದೇನೆಂದರೆ, You can streamline the entire system.' How to streamline? You must put an end to this donation menace. How to put an end? You stage a drive. ಅನೇಕ ಖಾಸಗಿ ಶಾಲೆಗಳಿಗೆ

ಭೇಟಿ ನೀಡಿ ಡೊನೇಷನ್ ತೆಗೆದುಕೊಳ್ಳುವವರನ್ನು ಹಿಡಿಯಿರಿ, "Come on, you come with me. I will show you." ಎಂದು ಹೇಳಿದೆ. ಅವರು ಒಂದು ದಿನ ಬರುತ್ತೇನೆಂದು ಹೇಳಿದರು. ಆದರೆ, ಅವರು ಬರಲಿಲ್ಲ. ಇನ್ನೊಂದು ದಿನ ಬರುತ್ತೇನೆಂದರು ಹೇಳಿದರು, ಆದರೆ ಅವತ್ತೂ ಕೂಡ ಬರಲಿಲ್ಲ. ಮಾನ್ಯ ಸಚಿವರು ಕಾಂಟ್ರೊವರ್ಷಿಯಲ್ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟು ಅವರ ಪಿರೀಯಡ್ ಎಲ್ಲಾ ಗೊಂದಲದಲ್ಲಿಯೇ ಕಳೆದು ಹೋಯಿತು. ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ರೈಡ್ ಮಾಡೋಣ. I will take you ಎಂದು ಹೇಳಿದ್ದಕ್ಕೆ, ಬನ್ನಿ ಹೋಗೋಣ ಎಂದು ಮಾನ್ಯ ವಿಶ್ವನಾಥ್‌ರವರು ಹೇಳಿದರು.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಸುಬ್ಬಾರೆಡ್ಡಿಯವರ ಜೊತೆ ಹೋಗಿ ಖಾಸಗಿ ಸಂಸ್ಥೆಗಳನ್ನು ರೈಡ್ ಮಾಡಬೇಕಾಗಿದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಎಂ.ಟಿ.ಆರ್. ಹತ್ತಿರ ಬನ್ನಿ ಎಂದು ಮಾನ್ಯ ಸಚಿವರಿಗೆ ಹೇಳಿದೆ. ಅದೇ ರೀತಿಯಾಗಿ ಅವರು ಎಂ.ಟಿ.ಆರ್. ಹತ್ತಿರ ಬಂದರು. ಆನಂತರ ಒಂದು ಸರ್ಕಾರಿ ಶಾಲೆಗೆ ಭೇಟಿ ನೀಡಿದೆವಷ್ಟೆ. ಯಾವುದೇ ಖಾಸಗಿ ಶಾಲೆಗಳಿಗೆ ಹೋಗಲಿಲ್ಲ. ಈ ಸಂದರ್ಭದಲ್ಲಿ ಸನ್ಮಾನ್ಯ ಗೋವಿಂದೇಗೌಡರನ್ನು ಏತಕ್ಕಾಗಿ ಜ್ಞಾಪಕ ಮಾಡಿಕೊಳ್ಳುತ್ತಿದ್ದೇನೆದಕ್ಕೆ He had a vision. Sri Govinda Gowda took a lot of interest in the matter. ಅಧಿವೇಶನ ನಡೆಯತಕ್ಕಂಥ ಸಂದರ್ಭದಲ್ಲಿ ಕೆಲವೊಂದು ಶಾಲೆಗಳಿಗೆ ಹೋಗೋಣ ಬನ್ನಿ ಎಂದು ಮಾನ್ಯ ಸಚಿವರಿಗೆ ಹೇಳಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಹೋಗೋಣವೆಂದು ಮಾನ್ಯ ಸಚಿವರೇ ಹೇಳಿದರು. ಆದರೆ, ಅವರೇ ಬರಲಿಲ್ಲ. ಸೋಮವಾರ ರಜಾ ಇದೆ. ಆದ್ದರಿಂದ ಮಂಗಳವಾರ ಹೋಗೋಣ ಎಂದು ಮತ್ತೆ ಹೇಳಿದರು. ನಾನು ಮಂಗಳವಾರ ಅವರ ಮನೆಗೆ ದೂರವಾಣಿ ಮಾಡಿ ಕೇಳಿದ್ದಕ್ಕೆ ಮಾನ್ಯ ಸಚಿವರು ಮೈಸೂರಿನಲ್ಲಿದ್ದಾರೆಂದು ತಿಳಿಸಿದರು. ಇಂಥದನ್ನು ಮಾಡಬೇಕೆಂದರೆ, you must have some intention to do something. ಎಲ್ಲವನ್ನೂ ಮಾನ್ಯ ಮುಖ್ಯಮಂತ್ರಿಯವರು ಮಾಡುವುದಕ್ಕೆ ಆಗುತ್ತದೆಯೇ? He has got lot of ideads. How to put an end? ಬಸ್‌ಗಳನ್ನು ಚೆಕ್ ಮಾಡೋಣ ಬನ್ನಿ ಎಂದು ಮಾನ್ಯ ಸಗೀರ್ ಅಹಮದ್‌ರವರಿಗೆ ಹೇಳಿದರೆ, ಅವರು ವಿಧಾನಸಭೆಯಲ್ಲಿ ನಗಿಸಿಕೊಂಡು ಕಾಲ ಹಾಕಿಕೊಂಡು ಹೋಗುತ್ತಿದ್ದಾರಷ್ಟೆ. ಇವತ್ತಿನದಿವಸ ಡ್ರೈವ್ ಮತ್ತು ಇನ್‌ಟೆನ್‌ಷನ್ ಇರಬೇಕು. Something must be done to the people. ಇದು ಇಲ್ಲದೇ ಇದ್ದರೆ ಏನನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಇನಾಂದಾರ್‌ರನ್ನು ಬಿಟ್ಟರೆ, ಯಾವ ಮಂತ್ರಿಗಳಿಗೂ ಕೂಡ ಐಡಿಯಾ ಇಲ್ಲ. ಇನ್ನು ಮಾನ್ಯ ಧರ್ಮಸಿಂಗ್‌ರವರ ಬಗ್ಗೆ I have got great respect for him. ಏಕೆಂದರೆ ನಾನು ಬರಬೇಕೆಂದು ದೂರವಾಣಿ ಮಾಡಿದ ತಕ್ಷಣವೇ ಬಂದು ಕೋರ್ಟ್‌ನ ಕಟ್ಟಡದ ಸಜ್ಜಾಗಳು ಬೀಳುತ್ತಿರುವುದನ್ನು ನೋಡಿದರು. ಹಾಗೆಯೇ ತಕ್ಷಣವೇ ಸರಿಪಡಿಸುವುದಕ್ಕೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಿದರು. ಈ ಬಜೆಟ್‌ನಲ್ಲಿ ಗುಡ್ ಮತ್ತು ಬ್ಯಾಡ್ ಎರಡೂ ಇದೆ. But, one thing is what you can collect, what suggestions you can make, how to improve the system, how to do it. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿ ಹಾಗೂ ಹಣಕಾಸಿನ ಮಂತ್ರಿಗಳೂ ಕೂಡ ಆಗಿದ್ದಾರೆ. ಇವತ್ತಿದಿವಸ

ಸಿಸ್ಟಮ್‌ನಲ್ಲಿ ಬ್ಯೂರೊಕ್ರಾಟ್ಸ್ ಇರುವುದರಿಂದ ಮಾನ್ಯ ಮುಖ್ಯಮಂತ್ರಿಯವರ ಹೆಸರಿಗೆ ಕಳಂಕ ಬರತಕ್ಕಂಥ ಪರಿಸ್ಥಿತಿ ಬಂದಿದೆ. ಅನೇಕ ವಕೀಲರೂ ಕೂಡ ಇದರ ಬಗ್ಗೆ ಫೀಲ್ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಚೀಫ್ ಜಸ್ಟೀಸ್‌ರವರು ಒಂದೇ ಡಯಾಸ್ ಮೇಲೆ ಇಂಥ ಒಂದು ಮಾತನ್ನು ಮಾತನಾಡಿರುವಾಗ ಇದುವರೆಗೂ ಕೊಟ್ಟಿಲ್ಲವೆಂದರೆ, what is the position? ನಾನು ಒಂದು ಸಲ ಇದನ್ನು ಸೀರಿಯಸ್ ಆಗಿ ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದೆ. No, no once it is honoured, I have already promised. No question of going back. ಎಂದು ಹೇಳಿದರು. ಆದರೆ ಅದರ ಎಫೆಕ್ಟ್ ಏನಾಯಿತು? ಲೆಟರ್‌ಗೆ ಈ ರೀತಿಯಾದರೆ, ಹೇಗೆ? ಮಾನ್ಯ ಅಧ್ಯಕ್ಷರೆ, ನನಗೆ ಇನ್ನೊಂದು ನಿಮಿಷ ಅವಕಾಶ ಮಾಡಿ ಕೊಡಿ. ಒಂದು ಲೆಟರ್‌ನಲ್ಲಿ ತಾವು ಬರೆದಿರುತ್ತೀರಿ. ನಾಳೆ 30ನೇ ತಾರೀಖು ಲಾಸ್ಟ್ ಡೇಟ್, ಒಂದು ಹೆಡ್ ಮಾಸ್ಟರ್ ಪೋಸ್ಟಿಗೆ, ಹಿ ಮೆ ಬಿ ಅಪಾಯಿಂಟೆಡ್ ಎಂದು, ಅದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಕಛೇರಿಗೆ ಹೋಯಿತು, ಫೈಲ್ ಬರಲಿಲ್ಲ, ಅದರ ಸಲುವಾಗಿ ನಾನು ಓಡಾಡಿ ನನ್ನ ಕೈಯಿಂದ ಆಗುವುದಿಲ್ಲವೆಂದು ಹೇಳಿಬಿಟ್ಟೆ. ಅವರು ನನ್ನ ಕ್ಷೇತ್ರದವರು. ಮಾನ್ಯ ಸಚಿವರು ಅವರ ಪ್ರೈವೇಟ್ ಸೆಕ್ರೆಟರಿಯವರ ಹತ್ತಿರ ಇದೆ ಎಂದು ಹೇಳಿದರು, ಅವರು ಪ್ರೈವೇಟ್ ಸೆಕ್ರೆಟರಿಯವರ ಹತ್ತಿರ ಹುಡುಕಿದರು, ಪ್ರೈವೇಟ್ ಸೆಕ್ರೆಟರಿಯವರು ಕೊಡುತ್ತೇನೆ, ಅದು ಇದು ಎಂದು ನನಗೆ ಹೇಳಿದರು. ಅದು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರಲಿಲ್ಲ. ನಾನು ಕೊನೆಗೆ ತಿರುಗಿ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬಂದೆ, ಇದು ಸೆಕೆಂಡ್ ರೌಂಡ, ಆ ಲೆಟರ್‌ಗಳೆಲ್ಲಾ ನನ್ನ ಹತ್ತಿರ ಇವೆ. ತಾವು ಇದನ್ನು ನೋಡಿ ಈ ಸಿಸ್ಟಮ್‌ನ್ನು ಚೇಂಜ್ ಮಾಡಬೇಕು. ಆಮೇಲೆ ಏನಾಯಿತು, ತಾವು Immediately put up that file. ಎಂದು ಬರೆದಿರಿ. ಅದು ಮಾನ್ಯ ವಿಶ್ವನಾಥರವರ ಆಫೀಸಿಗೆ ಹೊಯಿತು. ನಾನು ಅವರ ಕೈಗೆ ಕೊಟ್ಟು, ಸರ್ ನೋಡಿ ಇದು ಬಹಳ ಸೀರಿಯಸ್ಸಾಗಿದೆ, ಮೂರನೇ ಸಲ ನಾನು ಹೇಳುವುದೆಂದು ಹೇಳಿದೆ, ಅವರು ಇನ್ನೊಂದು ಏನು ಮಾಡಿಬಿಟ್ಟಿದ್ದಾರೆಂದರೆ, ಅವರ ಪ್ರೈವೇಟ್ ಸೆಕ್ರೆಟರಿಯವರು ಇನ್ನೊಬ್ಬರನ್ನು ಅರೇಂಜ್ ಮಾಡಿಬಿಟ್ಟಿದ್ದಾರೆ. ಇವರಿಗೆ ಅದು ಗೊತ್ತಿಲ್ಲ, ಅವರು ಪ್ಲಾನ್ ಮಾಡಿ ಬಿಟ್ಟಿದ್ದಾರೆ, 30ನೇ ತಾರೀಖಿಗೆ ಇನ್ನೊಬ್ಬನು ಹೋಗಿಚಾರ್ಜ್ ತೆಗೆದುಕೊಂಡು ಬಿಟ್ಟಿದ್ದಾನೆ, ನಾನೇನು ಮಾಡಲಿ ಅಂತಾರೆ ಆಗ ಮಾನ್ಯ ಸಚಿವರು ಏನು ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಾದರೂ ಏನು ಮಾಡಿಯಾರು. ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಅವನು ಫೈಲ್ ಕಳುಹಿಸಿ ಕೊಡಲೇ ಇಲ್ಲ, ಏಕೆಂದರೆ ಅವನು ನಾಳೆ ಒಂದು ದಿವಸ ಕಾಯುತ್ತಿದ್ದಾನೆ. ಅವರು ಚಾರ್ಜ್ ತೆಗೆದುಕೊಂಡ ಮೇಲೆ ಅದು ಮುಗಿದು ಹೊಯಿತು. ಮಾನ್ಯ ಮುಖ್ಯಮಂತ್ರಿಗಳು ಬರೆದ ಲೆಟರ್ ಏನಾಯಿತು. ಅದರ ವಾಲ್ಯು ಏನಾಯಿತು? ಮಾನ್ಯ ವಿಶ್ವನಾಥ್‌ರವರೂ ಕೂಡ ಬರೆದಿರುತ್ತಾರೆ. I will see that it is done. ಪಾಪ ಅವರು ಹೇಳಿ ಮೂರು ದಿವಸವಾಯಿತು. ಅವರೆ ಮೂರು ದಿವಸದಿಂದ ಇಲ್ಲ.

ಶ್ರೀ ಹೆಚ್. ವಿಶ್ವನಾಥ್ : ಇಲ್ಲ ಸ್ವಾಮಿ ನಾವು ಇಲ್ಲಿಯೇ ಇದ್ದೇವೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಏಕೆಂದರೆ ಇರುವುದನ್ನು ಹೇಳುತ್ತಿದ್ದೇನೆ. ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ಏಕೆಂದರೆ ನೀವು ರಜೆಯ ದಿವಸ

ಮೈಸೂರಿಗೆ ಹೊರಟು ಹೋಗುತ್ತೀರಿ. ಇಲ್ಲಿ ಇರುವುದೇ ಇಲ್ಲ. ಯಾವ ಮಂತ್ರಿಗಳೂ ಕೂಡ ಇಲ್ಲಿ ಇರುವುದಿಲ್ಲ. ಅವರು ತಮ್ಮ ಕ್ಷೇತ್ರಕ್ಕೆ ಮಾತ್ರ ಹೋಗುವುದು. ಅವರು ಕರ್ನಾಟಕದ ಮಿನಿಸ್ಟರ್‌ಗಳು ಅಲ್ಲ, ಗುಲ್ಬರ್ಗಾಕ್ಕೆ ಖರ್ಗೆಯವರು ಮತ್ತು ಧರ್ಮಸಿಂಗ್‌ರವರು ಇಬ್ಬರೂ ಹೊರಟು ಹೋಗುತ್ತಾರೆ. ಚಿಕ್ಕಮಗಳೂರಿನಲ್ಲಿ ಶ್ರೀ ಸಗೀರ್ ಅಹಮ್ಮದ್, ಶ್ರೀಮತಿ ಮೋಟಮ್ಮನವರು ಹಾಗೂ ಮಾನ್ಯ ಚಂದ್ರೇಗೌಡರು ಸಿಕ್ಕಿದರು. ನಿಮ್ಮಿಬ್ಬರಿಗೂ ಪ್ರಶಸ್ತಿ ಕೊಡಿಸುತ್ತೇನೆಂದು ಹೇಳಿದೆ, ನೀವು ಇಬ್ಬರು ಎಷ್ಟು ಚೆನ್ನಾಗಿ ರೋಡ್ ಮಾಡಿಸಿದ್ದೀರಿ, ಮೂರು ಜನ ಮಂತ್ರಿಗಳು ಇದ್ದೀರಿ ಬೇಲೂರಿನಿಂದ ಎಷ್ಟು ಚೆನ್ನಾಗಿ ರಸ್ತೆಯನ್ನು ಮಾಡ್ಲಿಸಿದ್ದೀರೆಂದು ಹೇಳಿದೆ. ಶ್ರೀಮತಿ ಮೊಟಮ್ಮನವರಿಗೆ ಈ ತರಹ ಮಾಡಿದ್ದೀರಲ್ಲಾ ಎಂದು ಹೇಳಿದೆ, ನಂತರ ಮಾನ್ಯ ಚಂದ್ರೇಗೌಡರಿಗೆ ನೀವು ಕ್ಯಾಬಿನೆಟ್ ಮಿನಿಸ್ಟರು ಬೇಲೂರಿನಿಂದ ಚಿಕ್ಕಮಗಳೂರಿಗೆ ಬರುವುದಕ್ಕಾಗುವುದಿಲ್ಲ ಎಂದೆ ಏನು ಮಾಡುವುದು ಏನೇನೋ ಪ್ರಯತ್ನವನ್ನು ಮಾಡಿದೆ ಅದನ್ನು ಮಾಡುವುದಕ್ಕಾಗಲಿಲ್ಲವೆಂದು ಹೇಳಿದರು. ನೀವೇ ಈ ತರಹ ಹೇಳಿದರೆ ಇನ್ನೇನು ಮಾಡುವುದು ಎಂದು ಹೇಳಿದೆ. ಹಿಂದೆ ಚೌಡರೆಡ್ಡಿಯವರು ಹೋಂ ಮಿನಿಸ್ಟರ್‌ರಾಗಿದ್ದಾಗ ಹಾಗೂ ಪಿಡಬ್ಲ್ಯೂಡಿ ಮಿನಿಸ್ಟರು ಆಗಿದ್ದರು. ಆಗ ನಿಮ್ಮ ರೋಡ್ ಪರಿಸ್ಥಿತಿ ಈ ರೀತಿಯಾಗಿದೆ ಎಂದು ನಾನು ಹೇಳಿದ್ದೆ. ಎಲ್ಲವನ್ನೂ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕಾಗುವುದಿಲ್ಲ. ಮಂತ್ರಿಗಳೂ ಕೂಡ ಬಹಳ ಇಂಪಾರ್ಟೆಂಟ್, ನಿಮ್ಮ ಪಾರ್ಟಿಯ ಯುವಕರೇ ಅನ್ನುತ್ತಿದ್ದಾರೆ, "Deadwood must be removed." That has to be done. ಇಲ್ಲದಿದ್ದರೆ ಇದು ಆಗುವುದಿಲ್ಲ. ಈಗ ಏನಾಗಿದೆ ಎಂದರೆ, ಇಂಟ್ರೆಸ್ಟ್ ಇಲ್ಲದಿರುವ ಮಂತ್ರಿಗಳು, ಹೇಗೋ ಕಾಲವನ್ನು ಹಾಕಿಕೊಂಡು ಹೋಗೋಣ, ಮೂರು ವರ್ಷವಾಗಿ ಹೊಯಿತು. ಇನ್ನೆರಡು ವರ್ಷಗಳ ಕಾಲವನ್ನು ಹಾಕಿಕೊಂಡು ಹೋದರೆ ಮುಗಿದು ಹೋಗುತ್ತದೆ. ಆ ರೀತಿ ಎಂದರೆ, ಅದು ಆಗುವುದಿಲ್ಲ. What they have done for the State?

ಶ್ರೀ ಎಂ. ಮಹದೇವ್ (ರೇಷ್ಮೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಎಲ್ಲರಿಗೂ ಇಂಟ್ರೆಸ್ಟ್ ಇದೆ, ನೀವು ಏಕೆ ಇಂಟ್ರೆಸ್ಟ್ ಇಲ್ಲ ಇಂಟ್ರೆಸ್ಟ್ ಇಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಿಮ್ಮದು ಹೇಳುವುದಕ್ಕೆ ಹೊರಟರೆ ದೇವರೇ ಕಾಪಾಡಬೇಕು. ಅವರ ಅನುಭವವನ್ನು ಹೇಳು ಎಂದರೆ ಹೇಳಿ ಬಿಡುತ್ತೇನೆ. ನಾನು ಸಿಲ್ಕ್ ಏರಿಯಾದಿಂದ ಬಂದವನು, ಶಿಡ್ಲಘಟ್ಟಕ್ಕೆ ನಾನು ಹೋದಾಗ ಅವರ ಹೇಳುತ್ತಾರೆ, ಮಹಾದೇವ ಅವರಿಗೆ ಅದನ್ನು ಹೇಳಿ, ಇದನ್ನು ಹೇಳಿ ಎಂದು ಹೇಳಿತ್ತಾರೆ, ಇವರ ಹತ್ತಿರ ಏನು ಹೇಳುವುದು?

ಶ್ರೀ ಎಂ. ಮಹಾದೇವ : ನೀವು ಹೇಳಿದ ಹಾಗೆಲ್ಲಾ ಕೇಳಿದ್ದೇನಲ್ಲಾ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಏನು ಕೇಳಿರುತ್ತೀರಿ. ಈ ಸೆಷನ್ ಕೂಡ ನಾಳೆ ಮುಗಿದು ಹೋಗುತ್ತದೆ, ಪಾರ್ಲಿಮೆಂಟ್ ಈಗ ಎಷ್ಟು ದಿವಸದಿಂದ ನಡೆಯುತ್ತಿದೆ, ನೀವು 10 ದಿವಸದಲ್ಲಿ ಮುಗಿಸಿ ಬಿಟ್ಟಿದ್ದೀರಿ, ಏಕೆಂದರೆ ಬಹಳ ಪ್ಲಾನ್ ಮಾಡಿದ್ದೀರಿ. ಇವತ್ತು ಪ್ರೆಸೆಂಟ್ ಮಾಡಿ ನಾಳೆ ದಿವಸ ಅಪ್ರೂವಲ್ ಮಾಡಿಕೊಂಡು ಹೋದರೂ ಆಯಿತು, ಏತಕ್ಕೆ ಬೇಕು. At least you must have some time to speak on each and every subject. ನಾನು ಹೊಸದಾಗಿ ಶಾಸಕನಾಗಿರಬಹುದು, ಅನೇಕ ಹಿರಿಯ ಜನ ಶಾಸಕರು

ಹಾಗೂ ಮಾನ್ಯ ಸಿಂಧ್ಯರವರು ಇದ್ದಾರೆ; ಹಾಗೂ ಎಸ್.ಎಸ್. ಪಾಟೀಲ್‌ರು ಇದ್ದಾರೆ. ನಾನು ಹುಡುಗನಾಗಿದ್ದಾಗಲಿಂದಲೂ ಪೇಪರ್‌ನ್ನು ಓದುತ್ತಿದ್ದೆ, ಬಜೆಟ್ ಅಧಿವೇಶನ ಎಂದರೆ ಒಂದೂವರೆ ತಿಂಗಳವರೆಗೆ ಸಾಮಾನ್ಯವಾಗಿ ನಡೆಯುತ್ತಿತ್ತು. ಎಲ್ಲಾ ಸಬ್ಜೆಕ್ಟ್ ಮೇಲೆ ಡಿಸ್‌ಕಸ್‌ಷಾ ಮಾಡಿ, ಎಲ್ಲಾ ಶಾಸಕರು ಡಿಸ್‌ಕಸ್ ಮಾಡಿ, ಪ್ರಪೋಸಲ್ಸ್ ಕೊಟ್ಟು, ಎಜ್ಯುಕೇಷನ್, ರೆವಿನ್ಯೂ, ಪಿಡಬ್ಲ್ಯೂಡಿ, ಇದರ ಬಗ್ಗೆ ಚರ್ಚೆಯಾಗುತ್ತಿತ್ತು, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಐಡಿಯಾ ಇತ್ತು, ಅವರು ಟ್ರೆಡ್ ಡೇಸ್ ಆಗಲೇಬೇಕೆಂದು ಹೇಳುತ್ತಿದ್ದರು. ಸಬ್ಜೆಕ್ಟ್ ಕಮಿಟಿಗಳು ಎಂದು ಹೇಳಿ ಇಲ್ಲಿ 10 ದಿವಸದಲ್ಲಿ ಮುಗಿಸಿ ಬಿಡುತ್ತಾರೆ, ನಾನು ಖಂಡಿತವಾಗಿ ಒಂದು ಯೋಚನೆಯನ್ನು ಮಾಡುತ್ತಿದ್ದೇನೆ. ತಾವು ಹಿರಿಯರು ಅನುಭವವುಳ್ಳವರು, ಲೇಜಿಸ್ಲೇಟರ್ ಆಗಿದ್ದೀರಿ, ಅನೇಕ ಕಡೆ ಅನುಭವ ಹೊಂದಿದವರಾಗಿ ನೋಡಿದ್ದೀರಿ. ಒಳ್ಳೆಯ ಸಂಪ್ರದಾಯಗಳನ್ನು ಹಾಕಿಕೊಡುತ್ತಿದ್ದೀರಿ, ಇಲ್ಲಿ ಅದು ಬೇಕಾಗಿರುವುದು. ಒಂದೊಂದು ಸಲ ಹಿಂದುಗಡೆ ಕುಳಿತಿರುವವರು ಎದ್ದೇಳುತ್ತಾರೆ. ತಾವು ಕೆಲವು ಸಲ ಬೇಡ ಸುಮ್ಮನೆ ಇರಬೇಕೆಂದು ಹೇಳಿದ್ದೀರಿ. ಮಾನ್ಯ ದೇವರಾಜ್ ಅರಸ್‌ರವರು ಎದ್ದು ಮಾತನಾಡುತ್ತಿದ್ದರೆ, ಯಾರೂ ಮಾತನಾಡುತ್ತಿರಲಿಲ್ಲ. ಅವರು ಹೌಸ್‌ಗೆ ಬಂದರೆ ಎಲ್ಲಾ ಶಾಸಕರು ಹಾಗೂ ಮಂತ್ರಿಗಳು ಇರುವವರು ಎಂದು ಹಿರಿಯ ಶಾಸಕರು ನಮಗೆ ಹೇಳುತ್ತಿದ್ದಾರೆ. ಇವಾಗ ಏನು ಮಾಡುತ್ತಾರೆ, ಇವತ್ತು ನೋಡಿ ಎಷ್ಟು ಜನ ಇದ್ದಾರೆ, ಇವತ್ತು ಬಿಡಿ ಎಲೆಕ್ಷನ್ ಇದೆ, ರಿಸಲ್ಟ್ ಸಲುವಾಗಿ ಕಾಯುತ್ತಿದ್ದಾರೆ ಇರಲಿ. I am very happy. Several proposals given by the learned Chief Minister are really laudable. I am very happy about that one. In that way, particulary, ನಾರ್ತ್ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಆದಷ್ಟು ಬೇಗ ಅದರ ಬಗ್ಗೆ ತಾವು ಪ್ರಯತ್ನವನ್ನು ಮಾಡಬೇಕು, ಎಲ್ಲಾ ಶಾಸಕರ ಒಂದು ಭಾವನೆ ಏನಿದೆ ಎಂದರೆ, ಮಾನ್ಯ ಮುಖ್ಯ ನ್ಯಾಯಾಧೀಶರು ಕೋರ್ಟ್ ಕಟ್ಟಡ ಮುಗಿದಾಗ ಅಥವಾ ಅದರ ಓಪನಿಂಗ್ ಇದ್ದಾಗ, ನಮ್ಮನ್ನು ಕರೆಯುವುದಿಲ್ಲವೆಂದು ಅನೇಕ ಶಾಸಕರಲ್ಲಿ ಇದೆ. ನಮ್ಮ ಆರಗ್ ಜ್ಞಾನೇಂದ್ರರವರೂ ಕೂಡ ತಮ್ಮ ಕ್ಷೇತ್ರದಿಂದ ಫೋನ್ ಮಾಡಿದ್ದರು. ಮಾನ್ಯ ಮುಖ್ಯ ನ್ಯಾಯಾಧೀಶರ ಹತ್ತಿರ ಈ ವಿಷಯದ ಬಗ್ಗೆ ನಾನು ಮಾತನಾಡಿದ್ದೇನೆ. ಆಗ ಮಾನ್ಯ ಮುಖ್ಯ ನ್ಯಾಯಾಧೀಶರು ಒಂದು ಮಾತನ್ನು ಹೇಳಿದರು. ಇದರ ಬಗ್ಗೆ ಮಾನ್ಯ ಕಾನೂನು ಸಚಿವರು ಸ್ವಲ್ಪ ಇಂಟ್ರೆಸ್ಟ್ ತೆಗೆದುಕೊಳ್ಳಬೇಕು. ಅವರು ಯಾವಾಗಲೂ ಬಿಜಿಯಾಗಿಯೇ ಇರುತ್ತಾರೆ, ನಾವು ಅವರ ಹತ್ತಿರ ಮಾತನಾಡಿ, ಎಲ್ಲಾ ಶಾಸಕರಲ್ಲಿಯು ಒಂದು ಭಾವನೆ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಸುಬ್ಬಾರೆಡ್ಡಿಯವರೆ, ನೀವು ಅಸೋಸಿಯೇಷನ್ ಪ್ರೆಸಿಡೆಂಟ್‌ರು, ನೀವು ಇದರ ಬಗ್ಗೆ ಇಂಟ್ರೆಸ್ಟ್ ತೆಗೆದುಕೊಳ್ಳಬೇಕು. ನಮ್ಮೆಲ್ಲರ ಇಂಟ್ರೆಸ್ಟ್‌ನ್ನು ನೀವು ಕಾಪಾಡಿ. ನಿಮ್ಮ ಕೋಟ್ ಎಲ್ಲಿ ಹೋಯಿತು; ಅಲ್ಲಿ ಬಿಸಿಲಿನಲ್ಲಿ ಕೋಟ್ ಹಾಕುತ್ತೀರಿ ಇಲ್ಲಿ ಸ್ವಲ್ಪ ಚಳಿ ಇದೆ, ನೀವು ಕೋಟ್ ಹಾಕಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ನಾನು ಹೇಳಿದ್ದೇನೆ. ಮಾನ್ಯ ಕಾನೂನು ಸಚಿವರು ಬಂದರೆ ಒಂದು ದಿವಸ, ನಾವು ಹೇಳಬಹುದು. ಹಿಂದಿನ ಮುಖ್ಯ ನ್ಯಾಯಾಧೀಶರು ಏನು ಹೇಳಿದ್ದಾರೆಂದರೆ, ಕೆಲವು ಶಾಸಕರ ಮೇಲೆ ಕೇಸ್ ಇದ್ದು, ಅವರು ಡಯಾಸ್ ಮೇಲೆ ಬಂದಾಗ, cases against legislators or something like that

ಆಗ ಅವರಿಗೆ ಎಂಬ್ರಾಸಿಂಗ್ ಸಿಚ್ಯುಯೇಷನ್ ಆಗುತ್ತದೆ, ಆದ್ದರಿಂದ ಇದು ಬೇಡವೆಂದು ಇದರ ಬಗ್ಗೆ ಫುಲ್ ಕೋರ್ಟ್‌ನಲ್ಲಿ ತೀರ್ಮಾನ ಮಾಡಿದ್ದಾರೆ. ಈಗ ಅವರು ಸುಪ್ರೀಂಕೋರ್ಟ್‌ನಲ್ಲಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಇದರ ಬಗ್ಗೆ ಫುಲ್ ಕೋರ್ಟ್‌ನಲ್ಲಿ ಡಿಸ್‌ಕಸ್ ಮಾಡಿ, ಕೆಲವರು ಮಾಡುವುದರ ರಿಂದ ಏನೂ ತಪ್ಪಿಲ್ಲ, ಅವರು ಅನೇಕ ಏನು ಹೇಳಿದರೆಂದರೆ ಮೇಲೆ ಕೇಸ್‌ಸ್ ಇವೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸುಬ್ಬಾರೆಡ್ಡಿಯವರೇ, ಯಾವ ಶಾಸಕರ ಮೇಲೆ ಅಥವಾ ಮಂತ್ರಿಗಳ ಮೇಲೆ ಕೇಸ್ ಇವೆ, ಅನೇಕರ ಮೇಲೆ ಕೇಸೆಸ್ ಇವೆ ಎಂದು ಹೇಳಿದರೆ ಹೇಗೆ? This is not good.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಕೆಲವು ಇನ್‌ಸ್ಟೆಂನ್‌ಸಸ್ ಆದಕ್ಕಾಗಿ ಎಲ್ಲವೂ ಆಗಬಾರದೆಂದು ಹೇಳುವುದಿಲ್ಲ. We will request the learned Chief Justice.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಉಪಾಧ್ಯಕ್ಷರೆ, ಸುಬ್ಬಾರೆಡ್ಡಿಯವರು ಹೇಳಿದ ಹಾಗೆ ಬರೀ ಕೋರ್ಟಿನವರು ಅಲ್ಲ, ತಾವೂ ಕೂಡ ಒಂದು ಆದೇಶವನ್ನು ಹೊರಡಿಸಿದ್ದೀರಿ. ಶಾಸಕರನ್ನು ಕರೆಯಬಹುದು ಅಷ್ಟೆ, ಮೊದಲ ಪ್ರಿಸೈಡ್ ಮಾಡಬೇಕೆಂದು ಇತ್ತು. ಶಾಸಕರ ಕ್ಷೇತ್ರದಲ್ಲಿ ಏನೇ ಕೆಲಸ ಕಾರ್ಯಗಳು ಇದ್ದರೂ ಅವರೇ ಅಧ್ಯಕ್ಷರಾಗಬೇಕೆಂದು ಇತ್ತು, ತಾವು ಅದನ್ನು ಹಿಂದಕ್ಕೆ ತೆಗೆದುಕೊಂಡಿರುತ್ತೀರಿ. ಕರೆಯಬಹುದು ಅಥವಾ ಕರೆದು ಎಲ್ಲಿಯಾದರೂ ಕುಳಿತುಕೊಳ್ಳಬಹುದು ಅಷ್ಟೆ. ಇದನ್ನು ತಾವು ನೋಡಬೇಕು. ಇದರಲ್ಲಿ ಶಾಸಕರ ಗೌರವದ ಪ್ರಶ್ನೆ ಇರುತ್ತದೆ. ಇದರಲ್ಲಿ ವಿರೋಧ ಪಕ್ಷ, ಅಥವಾ ಆಡಳಿತ ಪಕ್ಷವೆಂದು ಅಲ್ಲ, ನಮ್ಮ ಡಿಸಿಯವರು ಫೋನ್ ಮಾಡಿ ನಮ್ಮಲ್ಲಿ ನಡೆಯುವ ಕಾರ್ಯಕ್ರಮದ ಬಗ್ಗೆ ಕೇಳಿದರೆ, ಅವರನ್ನು ಏನೂ ಪ್ರಿಸೈಡ್ ಮಾಡಬೇಕೆಂದು ಇಲ್ಲವೆಂದು ಡಿ.ಪಿ.ಎ.ಆರ್‌ನವರು ಉತ್ತರ ಹೇಳಿದರು. ಕೋರ್ಟಿನವರು ಅಲ್ಲದೆ, ಇದನ್ನು ಸರ್ಕಾರದವರೂ ಕೂಡ ಮಾಡಿರುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :- ಮಾನ್ಯ ಉಪಾಧ್ಯಕ್ಷರೆ, ನಮ್ಮ ತೀರ್ಥಹಳ್ಳಿ ಪ್ರಕರಣದಲ್ಲಿ ಮಾನ್ಯ ಕಾನೂನು ಸಚಿವರು ಮತ್ತು ಮಾನ್ಯ ಸಭಾಧ್ಯಕ್ಷರು ಹೋಗಿ ಮಾತನಾಡಿ ಬಂದರು. ಅವರು ಆಯಿತು ಎಂದು ಹೇಳಿ ಎಲ್ಲವೂ ಆಯಿತು. ಆಮೇಲೆಯೂ ಕೂಡ ಅವರು ಒಪ್ಪಲಿಲ್ಲ, ನಾನು ತೀರ್ಥಹಳ್ಳಿಯನ್ನು ಬಂದ್ ಮಾಡಿ ಎಲ್ಲವನ್ನೂ ಮಾಡಿದ್ದೇನೆ. ಮಾನ್ಯ ಜಿಲ್ಲಾ ಮಂತ್ರಿಗಳು ನನಗೆ ಯಾಕಪ್ಪ ನ್ಯಾಯಾಂಗದ ಜೊತೆಗೆ ಅವರೇನೋ ಬರುತ್ತಿದಾರೆ ಬಂದ್ ಮಾಡುವುದು ಅನಾವಶ್ಯಕವೆಂದು ಹೇಳಿದರು. ಇಲ್ಲದೆಹೋದರೆ ಅವತ್ತು ಸಾರ್ವಜನಿಕ ಕಾರ್ಯಕ್ರಮವನ್ನು ರದ್ದು ಮಾಡಿದರು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಇದು ನಮ್ಮ ಇಡೀ ಶಾಸಕಾಂಗಕ್ಕೆ ಮಾಡತಕ್ಕಂತಹ ಅಪಮಾನವೆಂದು ನಾವು ಭಾವಿಸದೆಹೋದರೆ, ಕಷ್ಟವಾಗುತ್ತದೆ. ಇಲ್ಲದೇ ಹೋದರೆ ನಾವು ಅವರಿಗೆ ಕೋರ್ಟು ಕಟ್ಟಡವನ್ನು ಕಟ್ಟಿಕೊಡಬಾರದು. ಅವರೇನೋ ಸುಪೀರಿಯರ್ ಎಂದು ತಿಳಿದುಕೊಂಡರೆ ಹೇಗಾಗುತ್ತದೆ? ನಾವು ಕೋರ್ಟು ಬಿಲ್ಡಿಂಗ್ (ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು) ಕಟ್ಟುವುದಕ್ಕಾಗುತ್ತದೆ, ನಾವು ಬಜೆಟ್‌ನಲ್ಲಿ ಕೋರ್ಟು ಬಿಲ್ಡಿಂಗ್‌ಗೆ ಹಣವನ್ನು ಇಲ್ಲಿಯೇ ಮಂಜೂರು ಮಾಡಬೇಕು, ಅದೆಲ್ಲವೂ

ಆದ ಮೇಲೆ ಅವರ ಪಕ್ಕದಲ್ಲಿ ಕುಳಿತುಕೊಳ್ಳಬಾರದು ಎಂದು ಹೇಳಿದರೆ ನಾವು ಜಡ್ಡ್‌ಸ್‌ಗೆ ಅನ್‌ಟಚ್‌ಬಲ್ಲಾ? ಇದರ ಬಗ್ಗೆ ನಿರ್ಣಯವನ್ನು ಮಾಡುವುದಾದರೂ ಹೇಗೇ? ಸಾರ್ ಈ ಬಗ್ಗೆ ದಯವಿಟ್ಟು ತಾವು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಹೈಕೋರ್ಟಿನ ನ್ಯಾಯಾಧೀಶರ ಜೊತೆಗೆ ಏನಾದರೊಂದು ಮಾಡಿ ಪರಿಹಾರವನ್ನು ಮಾಡದೇ ಹೋದರೆ ಮಾನ್ಯ ಸಭಾಪತಿಯವರದ್ದೂ ಕೂಡ ಮೊನ್ನೆ ಉಡುಪಿಯಲ್ಲಿ ಹಾಗೆಯೇ ಆಯಿತು. ಎಲ್ಲಾ ಕಡೆಗಳಲ್ಲೂ ಹೀಗೆಯೇ ಆಗುತ್ತಿದೆ. ಇದೆಲ್ಲಿಯವರೆವಿಗೂ ತೆಗೆದುಕೊಂಡು ಹೋಗಿ ಮುಟ್ಟಿಸುವುದು. ಇಲ್ಲದೆ ಹೋದರೆ ಅವರನ್ನು ತಡೆಯುವುದಕ್ಕೆ ನಾವೇನಾದರೂ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಅರಗಜ್ಞಾನೇಂದ್ರರವರೆ, ಒಂದು ನಿಮಿಷ, ಇದರ ಬಗ್ಗೆ ಇತ್ತೀಚಿಗೆ 15 ದಿವಸಗಳ ಹಿಂದೆ ಚೀಫ್‌ಜಸ್ಟಿಸ್‌ರವರ ಜೊತೆ ರಾಜಭವನದಲ್ಲಿ ಮಾತನಾಡಿದ್ದೇನೆ. ಅವರು ಕೆಲವು ಪಾಯಿಂಟ್‌ಗಳನ್ನು ನನಗೆ ಹೇಳಿದ್ದಾರೆ, ವಿರೋಧಪಕ್ಷದ ನಾಯಕರು ಮತ್ತು ನಮ್ಮ ಲಾ ಮಿನಿಸ್ಟರ್ ಕರೆಸಿ ನಾನು ಮಾತನಾಡಿ ಆಮೇಲೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಲೇಟೆಸ್ಟ್ 10 ಡೇಸ್ ಬ್ಯಾಕ್.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವೇ ತಮ್ಮ ಛೇಂಬರಿನಲ್ಲಿ ಹೇಳಿದ್ದೀರಿ, ಇಲ್ಲಿ ಚರ್ಚೆ ಮಾಡುವುದು ಬೇಡ ಒಳ್ಳೆಯದಾಗುವುದಿಲ್ಲ, ನಾನು ಸರಿ ಮಾಡುತ್ತೇನೆಂದು ಹೇಳಿದ್ದೀರಿ.

ಶ್ರೀ ಅರಗಜ್ಞಾನೇಂದ್ರ : ತಾವು ಚೀಫ್ ಜಸ್ಟೀಸ್‌ರವರ ಮನೆಗೆ ಹೋದಿರಿ.

ಅಧ್ಯಕ್ಷರು : ಆಯಿತು, ಅದು ಹಳೆಯ ಕಥೆ.

ಶ್ರೀ ಅರಗಜ್ಞಾನೇಂದ್ರ : ಇದು ಹೇಗಾಗುತ್ತದೆ?

ಅಧ್ಯಕ್ಷರು: ಲೇಟೆಸ್ಟ್ ಆಗಿ 10 ಡೇಸ್ ಬ್ಯಾಕ್ ರಾಜಭವನದಲ್ಲಿ ಚೀಫ್ ಜಸ್ಟೀಸ್ ಜೊತೆ ನಾನು ಮಾತನಾಡಿದ್ದೇನೆ. ಅಲ್ಲಿ ನನಗೆ ಸಮಯ ಸಿಕ್ಕಿತು ನಾನು ಮಾತನಾಡಿದ್ದೇನೆ. ಅವರು ನನಗೆ ಕೆಲವು ಪಾಯಿಂಟ್ಸ್‌ಗಳನ್ನು ಹೇಳಿದ್ದಾರೆ. ವಿರೋಧಪಕ್ಷದ ನಾಯಕರು ಹಾಗೂ ರೂಲಿಂಗ್ ಪಾರ್ಟಿಯ ನಾಯಕರು ಕರೆಸಿ ನಾನು ಮಾತನಾಡಿ ಅವರುಗಳು ಏನೇನು ಹೇಳುತ್ತಾರೆ ಅದನ್ನು ನಿಮ್ಮ ಮುಂದಿಟ್ಟು ಆಮೇಲೆ ಮುಂದೆ ಹೇಳಿದರೆ I think, he may agree. ಎಂದು ನನಗೆ ಕಾಣಿಸುತ್ತದೆ.

ಶ್ರೀ ಅರಗಜ್ಞಾನೇಂದ್ರ : ಸಾರ್ ಅದರಲ್ಲಿ ಏನು ಮಾತನಾಡುವುದು ಇದೆ?

ಅಧ್ಯಕ್ಷರು : ದಿಸ್ ಈಸ್ ದಿ ಲೇಟೆಸ್ಟ್ ಎಂದು ನಾನು ಹೇಳುತ್ತಿದ್ದೇನೆ. ನಾನು 10 ಡೇಸ್ ಬ್ಯಾಕ್ ಮಾತನಾಡಿದ್ದೇನಲ್ಲಾ?

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿಯವರು ಏನು ಮಾತನಾಡಿದರು, ಕೇಸ್‌ಗಳು ಇರುತ್ತವೆಂದು ಹೇಳಿದರು. ಕೇಸ್‌ಗಳು ಇರುತ್ತವೆಂದು ನಾವು ಅವರ ಪಕ್ಕದಲ್ಲಿ ಕುಳಿತುಕೊಂಡ ತಕ್ಷಣ ಅವರನ್ನು ಜಡ್ಜ್‌ಮೆಂಟ್ ಮಾಡಿ ಎಂದು ಯಾರಾದರೂ ಹೇಳಿದರಾ?

ಅಧ್ಯಕ್ಷರು : ಮಾನ್ಯ ಅರಗಜ್ಞಾನೇಂದ್ರರವರೆ, ಆ ಮಾತು ಬೇಡ.

ಶ್ರೀ ಅರಗಜ್ಞಾನೇಂದ್ರ : ನಾವು ನಮ್ಮ ಮೇಲೆ ಯಾರದು ಯಾವ ಕೇಸ್?

ಅಧ್ಯಕ್ಷರು : ನಾನು ಲೇಟೆಸ್ಟ್ ಎಂದು ಹೇಳುತ್ತಿದ್ದೇನಲ್ಲಾ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಈ ವಿಚಾರ ಸುಮಾರು ಎರಡು ವರ್ಷಗಳಿಂದಲೂ ನಡೆಯುತ್ತಿದೆ. ಈ ಬಗ್ಗೆ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಕಟ್ಟಡಕ್ಕೆ ಜಾಗವನ್ನು ಒದಗಿಸತಕ್ಕಂತಹವರು, ಹಣವನ್ನು ಒದಗಿಸತಕ್ಕಂತಹವರು, ಪ್ಲಾನ್ ಮಾಡಿಸಿ ಎಸ್ಟಿಮೇಟ್ ತಯಾರು ಮಾಡಿಸಿ, ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್‌ನ್ನು ಕೊಟ್ಟು ಕಟ್ಟಡವನ್ನು ಕಟ್ಟಿಸತಕ್ಕಂತಹವರು ಸರ್ಕಾರ. ಸರ್ಕಾರವೆಂದರೆ ಲೆಜಿಸ್ಲೇಚರ್‌ನಿಂದ ಮಂಜೂರಾತಿ ಆಗುತ್ತದೆ. ಉದಾಹರಣೆಗೆ ಜಿಲ್ಲಾ ಪಂಚಾಯಿತಿಯವರು ವಾಟರ್‌ಸಪ್ಲೈ ಸ್ಕೀಮ್‌ವಾಟರ್‌ಟ್ಯಾಂಕ್ ಕಟ್ಟಿಸುತ್ತಾರೆ, ನಾವು ಕಟ್ಟಿಸಿದ ಮೇಲೆ ಇನಾಗ್ಯುರೇಷನ್ ಮಾಡಿ ಪಂಚಾಯಿತಿಗೆ ಹ್ಯಾಂಡ್‌ಓವರ್ ಮಾಡುತ್ತೇವೆ. ಅದೇ ರೀತಿಯಾಗಿ ನಾವು ಬಿಲ್ಡಿಂಗ್‌ನ್ನು ಕಟ್ಟಿಸಿ, ಅದನ್ನು ನಾವು ಇನ್ಯಾಗುರೇಟ್ ಮಾಡಿ ಕೋರ್ಟಿಗೆ ಹ್ಯಾಂಡ್‌ಓವರ್ ಮಾಡೋಣ. ಅವರಿಗೆ ಬೇಕಾಗಿರುವಂತಹದ್ದು ಅಕಾಮಡೇಷನ್, ನಾವು ಎಲ್ಲಿ ಎಡವಿದ್ದೇವೋ ನನಗಂತೂ ಅರ್ಥವಾಗುತ್ತಿಲ್ಲ. ಕೋರ್ಟಿನ ವ್ಯಾಪ್ತಿ ಎಷ್ಟು ಇದೆಯೋ ಅಷ್ಟು ಮಾಡೋಣ. ಅವರಿಗೆ ಗೌರವನ್ನು ಕೊಡೋಣ, ನಮ್ಮ ಅಧಿಕಾರವನ್ನು ತೆಗೆದುಕೊಂಡು ಅವರಿಗೆ ಕೊಟ್ಟು, ನಾವು ಅವರನ್ನು ಅತ್ತುಕರೆದು ನಮ್ಮನ್ನು ಕರೆಯಿರಿ, ಕರೆಯಿರಿ, ಎಂದು ಹೇಳುತ್ತಿದ್ದೆವಲ್ಲಾ, ಇದರ ಬಗ್ಗೆ ಏತಕ್ಕಾಗಿ ತೀರ್ಮಾನವನ್ನು ಮಾಡಬಾರದು? ಗೃಹಪ್ರವೇಶವನ್ನು ಮಾಡಿ, ಅವರಿಗೆ ಅಕಾಮಡೇಷನ್‌ನ್ನು ಒದಗಿಸಿಕೊಡೋಣ. ಅವರಿಗೆ ಬೇಕಾಗಿರುವಂತಹದ್ದು ಅಕಾಮಡೇಷನ್, ಮಾಡಿಕೊಡೋಣ. ನಾವು ಕಟ್ಟಡವನ್ನು ಕಟ್ಟಿಸಿ ಅವರ ಕೈಯಲ್ಲಿ ಉದ್ಘಾಟನೆಯನ್ನು ಮಾಡಿಸಬೇಕೇ? ಅದು ಅವರ ಕೆಲಸವೇ? ನ್ಯಾಯಾಂಗದ ಕೆಲಸವೇ ಬೇರೆ, ಈ ಕೆಲಸವಲ್ಲ. ಆಡಳಿತಾಂಗದ ಕೆಲಸ ಇದು, ಆದ್ದರಿಂದ ಇವತ್ತಾದರೂ ಮಾನ್ಯ ಮುಖ್ಯಮಂತ್ರಿಗಳು ಈ ದಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಎಲ್ಲಾ ಶಾಸಕರುಗಳು ಎರಡು ವರ್ಷಗಳಿಂದ ಅವರವರ ಕ್ಷೇತ್ರದಲ್ಲಿ ಇದು ಅವರ ಹಕ್ಕಿನ ಪ್ರಶ್ನೆಯಾಗಿರುತ್ತದೆ. ಇದರ ಬಗ್ಗೆ ನಾವು ಪಕ್ಷಾತೀತವಾಗಿ ಕೇಳುತ್ತಲೇ ಇದ್ದೇವೆ, ಇನ್ನಾದರೂ ಇತ್ಯರ್ಥ ಮಾಡಿಲ್ಲವೆಂದರೆ, ಹೇಗೆ? ಇವತ್ತೇ ಇದರ ಬಗ್ಗೆ ಆದೇಶವನ್ನು ಹೊರಡಿಸಿ. ನಿಮಗೆ ಬೇಕಾಗಿರುವಂತಹ ಕಟ್ಟಡವನ್ನು ಕಟ್ಟಿ ನಾವು ಇನಾಗ್ಯುರೇಟ್ ಮಾಡಿಕೊಡುತ್ತೇವೆ. ಅಷ್ಟು ಮಾಡಿದರೆ ಸಾಕು ಮಿಕ್ಕಿದನ್ನು ಅವರು ಮಾಡಿಕೊಳ್ಳಲಿ.

ಅಧ್ಯಕ್ಷರು : ಆದೇಶವನ್ನು ಹೊರಡಿಸುವುದಕ್ಕಾಗುವುದಿಲ್ಲ, ಮಾನ್ಯ ಸೋಮಶೇಖರ್‌ರವರೆ, ದಯವಿಟ್ಟು ಕೇಳಿ, ಇದನ್ನು ಯಾವತ್ತಾದರೂ ಕೊನೆಗಾಣಿಸಬೇಕೆಂದು ಹೇಳಿ ಅವರ ಹತ್ತಿರ ಸುಮಾರು 20 ನಿಮಿಷಗಳ ಕಾಲ ರಾಜಭವನದಲ್ಲಿ ಮಾತನಾಡಿದ್ದೇನೆ. ಮಾನ್ಯ ಪಾಟೀಲರೇ, ತಾವು ದಯವಿಟ್ಟು ಕೇಳಿ, ಇದರ ಬಗ್ಗೆ ಮಾತನಾಡಿದ್ದೇನೆ. ಅವರು 5-6 ಪಾಯಿಂಟ್‌ಗಳನ್ನು ನನಗೆ ಹೇಳಿದ್ದಾರೆ. ವಿರೋಧಪಕ್ಷದ ನಾಯಕರನ್ನು ಕರೆಸಿ ನಾನು ಮಾತನಾಡಿ ತಿಳಿಸುತ್ತೇನೆ. ಇದರ ಬಗ್ಗೆ ಒಂದು 15 ದಿವಸ ತಡೆಯಿರಿ. ಅವರಿಗೂ ಇದನ್ನು ಸಾಲ್ವ್ ಮಾಡಬೇಕೆಂದು ಮೈಂಡ್‌ನಲ್ಲಿ ಇದೆ, ಇದರ ಬಗ್ಗೆ ನನಗೆ ಹೇಳಿದ್ದಾರೆ. ಇದನ್ನು ಸಾಲ್ವ್ ಮಾಡೋಣ, ಈ

ಪಾಯಿಂಟ್‌ಗಳಿಗೆ ನಿಮ್ಮ ಲೀಡರ್‌ಗಳು ವಿರೋಧಪಕ್ಷದ ನಾಯಕರುಗಳು ಅಥವಾ ಬೇರೆ ನಾಯಕರುಗಳು ಏನು ಹೇಳುತ್ತಾರೋ ವಿಚಾರಿಸಿಕೊಂಡು ಬನ್ನಿ ಎಂದು ನನಗೆ ಹೇಳಿದ್ದಾರೆ. ನನಗೆ ಇವರ್‍ಯಾರು ಕೈಗೆ ಸಿಕ್ಕಿಲ್ಲ. ಇನ್ನೊಂದು ಹದಿನೈದು ದಿವಸಗಳಲ್ಲಿ I think, I am going to solve that problem.

ಶ್ರೀ ಎಸ್.ಎಸ್. ಪಾಟೀಲ್ : ಕೋರ್ಟಿನದ್ದು ಆಯಿತು. ನಮ್ಮ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕೂಡ ಶಾಸಕರು ಅಧ್ಯಕ್ಷರಾಗಬೇಕೆನ್ನುವುದನ್ನು ಹೊರಗೆ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು : ಅದರ ಬಗ್ಗೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮೊನ್ನೆ ಲಕ್ಕುಂಡಿ ಉತ್ಸವಾದರೆ ನಮ್ಮ ಡಿಸಿಯವರು ಫೋನ್ ಮಾಡಿ ಕೇಳಿದರೆ ಶಾಸಕರು ಅಧ್ಯಕ್ಷರಾಗಬೇಕೆಂದು ಎಲ್ಲೂ ಇಲ್ಲ, ಆ ಆದೇಶ ತೆಗೆದುಹಾಕಲಾಗಿದೆ. ನೀವು ಬೇಕಾದವರನ್ನು ಅಧ್ಯಕ್ಷರನ್ನಾಗಿ ಮಾಡಬಹುದು ಎಂದು ಹೇಳಿದ್ದಾರೆ. ಇದೂ ಮೊನ್ನೆ ಆಗಿದೆ. ಯಾವ ಶಾಸಕರೂ ಅಧ್ಯಕ್ಷರಾಗಿಲ್ಲ. ಬೇಕಾದರೆ ಕರೆಯಬಹುದು, ಇಲ್ಲದಿದ್ದರೆ ಬಿಡಬಹುದು, ಕರೆಯಬಹುದು ಎಂದು ಹೇಳಿದ್ದಾರೆ.

ಶ್ರೀ ಚಂದ್ರಕಾಂತ್ ಬೆಲ್ಲದ್ ಗುರಪ್ಪ : ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ನಲ್ಲಿ ಕರೆಸುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಅಲ್ಲಿ ಒಂದು ಪ್ರಶ್ನೆ ಇದೆ, ಬೇಕಾದಷ್ಟು ಸದಸ್ಯರು ನನಗೆ ಪತ್ರವನ್ನು ಬರದಿದ್ದಾರೆ. ತಕ್ಷಣ ನಾವು ಸಂಬಂಧಪಟ್ಟ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ, ಮುಖ್ಯಕಾರ್ಯದರ್ಶಿಯವರಿಗೆ ಕಳುಹಿಸುತ್ತೇವೆ. ಅಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆಯೇ ಹೊರತು ಬಹುಶಃ ಸರ್ಕಾರದವರು ಏನೂ ತಪ್ಪು ಮಾಡಿರುವುದಿಲ್ಲ; ಎಂದು ನನಗೆ ಕಾಣಿಸುತ್ತದೆ.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ : ನೀವು ಆ ಅಧಿಕಾರಿಗಳನ್ನು ಸರಿ ಮಾಡಬೇಕಲ್ಲಾ? ಅಧಿಕಾರಿಗಳಿಗೆ ಸರಿಯಾದಂತಹ ಆದೇಶವನ್ನು ಕಳುಹಿಸಿ.

ಅಧ್ಯಕ್ಷರು : ಅಲ್ಲಿ ಲೋಕಲ್ ಆಫೀಸರ್ಸ್‌ಗಳು ತಪ್ಪು ಮಾಡುತ್ತಾರೆ, ಕೆಲವು ಅಧಿಕಾರಿಗಳಿಗೆ ಪ್ರೋಟೋಕಾಲ್ ಎಂದರೆ ಏನೂ ಗೊತ್ತಿರುವುದಿಲ್ಲ. ಲೋಕಲ್ ಆಗಿ ಯಾವ ರೀತಿಯಾಗಿ ಹಾಕಬೇಕೆಂದು ಗೊತ್ತಿಲ್ಲ. ಮೊನ್ನೆ ಚಿಕ್ಕಬಳ್ಳಾಪುರದಲ್ಲಿ ನನ್ನ ಹೆಸರನ್ನು ಕೊನೆಯಲ್ಲಿ ಎಂ.ವಿ. ವೆಂಕಟಪ್ಪ ಎಂದು ಹಾಕಿದ್ದರು. ಏನು ಮಾಡುವುದು? ಇದು ಲೋಕಲ್ ಆಫೀಸರ್‌ಗೆ ಗೊತ್ತಾಗುವುದಿಲ್ಲ. ಅಲ್ಲಿ ಡೆಪ್ಯುಟಿ ಕಮೀಷನರ್‌ರವರು ಲೋಕಲ್ ಅಫೀಸರ್‌ಗಳಿಗೆ ಸರಿಯಾಗಿ ವಾರ್ನ್‌ಮಾಡಬೇಕು. ಲೋಕಲ್ ಅಫೀಸರ್‌ಗಳಿಗೆ ಇಡೀ ರೀತಿಯಾಗಿ ಪ್ರೊಟೋಕಾಲ್ ಹಾಕಬೇಕೆಂದು ತಿಳಿಸಬೇಕು. ಜಿಲ್ಲಾಧಿಕಾರಿಗಳು ಲೋಕಲ್ ಆಫೀಸರ್‌ಗಳಿಗೆ ಟಿಪ್ಪಣಿಯನ್ನು ಕಳುಹಿಸಿಕೊಡಬೇಕು, ಪಾಪ ಅವರಿಗೆ ಗೊತ್ತಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಸುತ್ತೋಲೆಗಳೇ ಹಾಗೆ ಬಂದಿದೆ. ಇವರು ಸುತ್ತೋಲೆಯನ್ನು ಬದಲಾವಣೆ ಮಾಡಿದ್ದಾರೆ.

ಶ್ರೀ ಅರಗಜ್ಞಾನೇಂದ್ರ : ಸುತ್ತೋಲೆಯನ್ನು ವಾಪಸ್ಸು ಪಡೆದಿದ್ದಾರೆ.

ಅಧ್ಯಕ್ಷರು : ಸರ್ಕಾರದವರು ಬೇಕಾದಷ್ಟು ಸಲ ಸುತ್ತೋಲೆಯನ್ನು ಕಳುಹಿಸಿ ಕೊಟ್ಟಿದ್ದಾರೆ. ಲೋಕಲ್ ಆಫೀಸರ್ಸ್‌ಗಳು ತಪ್ಪು ಮಾಡಿದರೆ ಸರ್ಕಾರದವರು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್ : ಆ ಸುತ್ತೋಲೆಯೇ ಆಗಿದೆ ತಾವು ತರಿಸಿನೋಡಬಹುದು. ತಾವೇ ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ನಾವು ತಮಗೆ ಕೇಳಬೇಕಾಗುತ್ತದೆ.

ಶ್ರೀ ಅರಗಜ್ಞಾನೇಂದ್ರ : ಇಲ್ಲಿ ಜಗಳವಾಡುವುದು ಏನೂ ಇಲ್ಲ.

Mr. Speaker : The Chief Secretary should take initiative in this regar.

ಯಾರು ಅಲ್ಲಿ ತಪ್ಪು ಮಾಡುತ್ತಾರೋ ಅವರಿಗೆ ಒಂದು ಸಲ ಶಿಕ್ಷೆಯಾದರೆ ಆಗ ಗೊತ್ತಾಗುತ್ತದೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಾರಸಗಟಾಗಿ ನಿಯಮಾವಳಿಗಳನ್ನು ಉಲ್ಲಂಘನೆಯಾಗುತ್ತಿದೆ. ಇಷ್ಟಿದ್ದರೂ ಕೂಡ ಅನೇಕ ಸಂದರ್ಭಗಳಲ್ಲಿ ಗಮನಕ್ಕೆ ತಂದರೂ ಕೂಡ ಸರಿಪಡಿಸುವಂತಹ ವ್ಯವಸ್ಥೆಗಳಾಗಲಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ : ಇಲ್ಲಿ ಚರ್ಚೆನಡೆಯುತ್ತಿದೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟರೆ ಆಗುತ್ತದೆ.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಸಚಿವರು ಅಧಿಕಾರಿಗಳಿಗೆ ಹೇಳಿ ಇಂಥಹದನ್ನು ಮಾಡಬೇಕೆಂದು ಇನ್‌ಸ್ಟ್ರಕ್ಷನ್ ಕೊಡುವಂತಹ ಸ್ಥಿತಿ ಬಂದರೆ, ಪ್ರೊಟೋಕಾಲ್‌ನ್ನು ಉಲ್ಲಂಘಿಸುವಂತಹ ಸ್ಥಿತಿ ಬಂದರೆ ನಮ್ಮ ರಕ್ಷಣೆಗೆ ಮಾನ್ಯ ಅಧ್ಯಕ್ಷರೆ, ತಾವೇ ಬರಬೇಕಾಗುತ್ತದೆ. ಸ್ಪಷ್ಟವಾಗಿ ಇಂತಹ ಉಲ್ಲಂಘನೆ ಮಾಡುವಂತಹ ಮಂತ್ರಿಗಳಿರಲಿ, ಅಧಿಕಾರಿಗಳಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹದ್ದು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ವಿಷಯ ಏತಕ್ಕಾಗಿ ಪ್ರಸ್ತಾಪವಾಯಿತೆಂದರೆ, ಅನೇಕ ಸದಸ್ಯರ ಅಭಿಪ್ರಾಯವನ್ನು ನಾವು ಮಾತನಾಡಿದಾಗ ಈ ಕಾರ್ಯಕ್ರಮಗಳಿಗೆ ನಮ್ಮನ್ನು ಕರೆಯುವುದಿಲ್ಲವೆಂದು ಒಂದು ವಿಷಯ ಬಂದಿತ್ತು. ಅದರ ಬಗ್ಗೆ ನಾನು ಮುಖ್ಯ ನ್ಯಾಯಾಧೀಶರ ಜೊತೆಗೆ ಮಾತನಾಡಿದ್ದೇನೆ. ಹಿಂದೆ ಫುಲ್ ಕೋರ್ಟ್ ಮೀಟಿಂಗ್‌ನಲ್ಲಿ ಇದರ ಬಗ್ಗೆ ಡಿಸ್‌ಕಷನ್ ಆಗಿ ಹಿಂದೆ ಜಸ್ಟೀಸ್ ಪ್ರೇಮ್‌ಚಂದ್ ಜೈನ್ ಇದ್ದರು, ಆವಾಗ ಅವರು ಈ ಒಂದು ಡೈರಕ್ಷನ್‌ನ್ನು ಕೊಟ್ಟರು, ಎಂಎಲ್‌ಎಗಳನ್ನು ಕರೆಸಬಾರದು ಎಂದು ಜಸ್ಟೀಸ್ ಸಿ.ವಿ.ರೆಡ್ಡಿಯವರು ಇದ್ದಾಗ ಅವರೂ ಕೂಡ ಇದರ ಬಗ್ಗೆ ಪದೇ ಪದೇ ಡಿಸ್‌ಕಷನ್ ಮಾಡಿ ಶಾಸಕರನ್ನು ಅವಮಾನ ಮಾಡಬೇಕೆಂತಲ್ಲ, ಶಾಸಕರೂ ಕೂಡಬೇಕು, ಆದರೆ ಕೆಲವರ ಮೇಲೆ ಯಾವುದೋ ಒಂದು ಕ್ರೈಂನಲ್ಲಿ ಇನ್‌ವಾಲ್ವ್ ಆಗಿರುತ್ತಾರೆ. ಕೆಲವು ಕ್ರಿಮಿನಲ್ ಕೇಸಸ್ ಇಂತಹದಲ್ಲಿ ಇದ್ದರೆ ಅವರ ಜೊತೆ ನಾವು ಡಿಸ್ಟ್ರಿಕ್ಟ್ ಜಡ್ಜ್ ಎಲ್ಲರೂ

ಇರುವಾಗ ಈ ರೀತಿಯಾದಾಗ ಏನು ಮಾಡುವುದು. ಕ್ರೈಂ ಯಾವುದೋ ಒಂದು ಆಗಿರುತ್ತದೆ, ಯಾವುದೋ ಒಂದು he is an accused in one case. ಅವರು ಮತ್ತು ಇವರು ಡಯಾಸ್‌ನಲ್ಲಿದ್ದಾಗ ಇದೇನಾಗುತ್ತದೆ. the matter is before the district judge or a magistrate court. ಇಂತಹ ಇಷ್ಯೂಗಳಲ್ಲಿ ಅವರಿಗೆ ಬೇಕಾದರೆ ನೀವು ಬೇಡವೆನ್ನಿ, ಶ್ರೀ ಅರಗಜ್ಞಾನೇಂದ್ರ, ನಮ್ಮ ಸಭಾಪತಿಯವರಾಗಲಿ, ರಾಮಯ್ಯನವರಾಗಿಲಿ, ಇಂತಹವರು ಆಗುವಾಗ ನಾನೂ ಕೂಡ ಡಿಸ್‌ಕಸ್ ಮಾಡಿದೆ. ಅವರು ಹೇಳಿದರು. Speaker is also very much interested and discussed this issue. ಆಗ ಏನು ಹೇಳಿದರೆಂದರೆ, ಲಾ ಮಿನಿಸ್ಟರ್ ಮತ್ತು ನೀವು you can discuss this issue. ಎಂದು ಹೇಳಿದ್ದಾರೆ. ತಾವು, ನಾವು ಮತ್ತು ಲಾ ಮಿನಿಸ್ಟರ್ ಮಾತನಾಡಿ ಇದನ್ನು ಮಾಡಿದರೆ ಖಂಡಿತ. ಏಕೆಂದರೆ ನಮ್ಮ ಶಾಸಕರಿಗೆ ಯಾವ ರೀತಿಯಲ್ಲಿಯೂ ಕೂಡ ಅವಮಾನವಾಗಬಾರದು. ಎನ್ನುವುದಷ್ಟೆ ಭಾವನೆ ಬಂದಿರುವುದು. ಆ ಭಾವನೆಗೆ ನಾವು ಸ್ಪಂದಿಸಬೇಕಾಗುತ್ತದೆ. ಯಾವ ರೀತಿಯಲ್ಲಾದರೂ ಮುಖ್ಯನ್ಯಾಯಾಧೀಶರ ಗಮನಕ್ಕೆ ತಂದು ಈ ರೀತಿಯಾದ ಹಾಗೆ ಮಾಡಬೇಕು. ತಮ್ಮ ಮುಖಾಂತರ ನಾವು ಮತ್ತು ಲಾ ಮಿನಿಸ್ಟರ್ ಮೀಟಿಂಗ್ ಫಿಕ್ಸ್‌ಆಫ್ ಮಾಡಿಸಿ ಒಂದು ದಿವಸ ಹೋದರೆ ಈ ಬಹಳ ಮುಖ್ಯವಾದಂತಹ ಸಮಸ್ಯೆಯನ್ನು ನಾವು ಬಗೆಹರಿಸಬಹುದು. ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟು ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ(ಹುಲಿಯಾರು ದುರ್ಗ) : ಮಾನ್ಯ ಅಧ್ಯಕ್ಷರೆ, ನನಗೆ ಆಶ್ವಾಸನೆಯನ್ನು ಕೊಟ್ಟು 2 ವರ್ಷಗಳಾಯಿತು. ಇದು ಯಾವುದೇ ಒಂದು ಪಕ್ಷದ ಶಾಸಕರಿಗೆ ಅಥವಾ ಒಂದು ವರ್ಗದ ಶಾಸಕರಿಗೆ ಸೀಮಿತವಾದಂತಹ ಪ್ರಶ್ನೆಯಲ್ಲ. This way or that way it should be decided. ಇಲ್ಲ, ನಮ್ಮ ಶಾಸಕರ ಹಕ್ಕಿಗೆ, ಶಾಸಕರ ಇತಿಮಿತಿಗಳಿಗೆ ಮಿತಿ ತರುವಂತಹ ಅಧಿಕಾರ ವ್ಯಾಪ್ತಿ ಈ ರಾಷ್ಟ್ರದ ನ್ಯಾಯಾಂಗಕ್ಕೆ ಇದೆ ಎಂದು ತೀರ್ಮಾನವನ್ನು ತೆಗೆದುಕೊಳ್ಳುವುದಾದರೆ ನಾವು ಯಾರೂ ಮಾತನಾಡುವುದಿಲ್ಲ. ಆದಿಲ್ಲ ಎನ್ನುವುದಾದರೆ ಇದು ಯಾವುದಾದರೂ ಒಂದು ವಿಧದಲ್ಲಿ ತೀರ್ಮಾನವಾಗಲೇ ಬೇಕಾಗುತ್ತದೆ. ಈ ತಿಪ್ಪೆಸಾರಿಸುವಂತಹ ಕೆಲಸದಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಸಮಸ್ಯೆಗಳು ಬಗೆಹರಿಯುವುದಿಲ್ಲ, ಈ ಕಾಯಿಲೆಯೂ ಮುಂದುವರಿಯುತ್ತದೆ. ಆದರೆ ನನಗೆ ನಾವು ಛೇಂಬರಿನಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ ಇದನ್ನು ಬಗೆಹರಿಸುತ್ತೇನೆಂದು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟರಿ, ಇವತ್ತಿನವರೆವಿಗೂ ಅದು ಬಗೆಹರಿದಿಲ್ಲ. ಇದು ತಾತ್ವಿಕವಾಗಿ ನಮ್ಮೆಲ್ಲರಿಗೂ ಅತ್ಯಂತ ನೋವು ತರುವಂತಹ ವಿಷಯ.

5.30 ಪಿ.ಎಂ.

ಯಾರೋ ನನ್ನ ಮೇಲೂ ಕ್ರಿಮಿನಲ್ ಕೇಸ್ ಇದೆ. ಇವತ್ತಿಗೂ ನಾನು ತುಮಕೂರು ಕೋರ್ಟ್‌ನಲ್ಲಿ ಕಟಕಟೆಯ ಮೇಲೆ ನಿಂತುಕೊಳ್ಳುತ್ತೇನೆ. ಜಡ್ಜ್‌ಗಳ ಮೇಲೂ ಬೇಕಾದಷ್ಟು ಜನರ ಮೇಲೆ ಲಂಚದ ಆರೋಪವಿದೆ. ಜಡ್ಜ್‌ಗಳು ಆಕಾಶದಿಂದ ಇಳಿದು ಬಂದಿದ್ದಾರೇನು? ಎಲ್ಲರೂ ಸರ್ವಜ್ಞ ಮುತ್ತುಗಳೇ, ಅಲ್ಲೂ ಇದ್ದಾರೆ ಇಲ್ಲೂ ಇದ್ದಾರೆ ಇದನ್ನೇ ಗಮನದಲ್ಲಿಟ್ಟುಕೊಂಡು ಯಾರೋ ಒಬ್ಬರ ಮೇಲೆ ಕ್ರಿಮಿನಲ್ ಕೇಸು ಇದೆಯೆಂದು you exclude him specifically.

We have no objection. If he has committed a crime which is so much serious. ಅಂತಹದ್ದು ಏನಾದರೂ ಇದ್ದರೆ ಸ್ಪೆಷಲ್ ಕೇಸುಗಳಲ್ಲಿ ಎಕ್ಸ್‌ಕ್ಲೂಡ್ ಮಾಡಿ ಇಂತಹವನು ಅಯೋಗ್ಯನಂತಲೋ ಅಥವಾ ಇಂತಹ ಒಂದು ಕ್ರಿಮಿನಲ್ ಕೇಸು ಇದೆಯೆಂದು ಮಾಡಿ. ಇಲ್ಲಿಂದ ಅಸಿಸ್ಟೆಂಟ್ ಗೌರ್‍ನಮೆಂಟ್ ಪ್ಲೀಡರ್ ಮಾಡುವಾಗ ಹೈಕೋರ್ಟ್‌ಗೆ ಹೆಸರನ್ನು ಕಳುಹಿಸುವಾಗ ರಾಜಕಾರಣಿಗಳು ಇವರಿಗೆ ಅಸ್ಪೃಶ್ಯರಾಗುವುದಿಲ್ಲ. ಸಭೆಯಲ್ಲಿ ಪಕ್ಕದಲ್ಲಿ ಕುಳಿತುಕೊಂಡು ಸಭೆ ನಡೆಸಿಬಿಟ್ಟರೆ ಹೇಗೆ ರಾಜಕಾರಣಿಗಳು ಅಸ್ಪೃಶ್ಯರಾಗುತ್ತಾರೆ? ಇದು ತಾತ್ವಿಕವಾಗಿ ನೋವು ತರತಕ್ಕದ್ದು. I don't know why the society is looking towards the politicians with the contemptuous mood or a contemptuous approach. ನನಗೆ ಇದು ಅರ್ಥವಾಗುವುದಿಲ್ಲ. ಮಾನ್ಯ ಸುಬ್ಬಾರೆಡ್ಡಿಯವರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಇಷ್ಟೊಂದು ಖಾರವಾಗಿ ಮಾತನಾಡುವ ಅವಶ್ಯಕತೆ ಇಲ್ಲ.

ಶ್ರೀ ವೈ.ಕೆ. ರಾಮಯ್ಯ : ನಾನು ನ್ಯಾಯಾಂಗ ಮತ್ತು ಅವರ ಕಾರ್ಯವ್ಯಾಪ್ತಿಯನ್ನು ಪ್ರಶ್ನೆ ಮಾಡುವುದಕ್ಕೆ ಸಿದ್ಧನಿಲ್ಲ. ಆ ಬಗ್ಗೆ ಶಾಸಕರದ್ದು ಏನೂ ಅಭ್ಯಂತರವಿಲ್ಲ. ಅವರ ವ್ಯಾಪ್ತಿಯಲ್ಲಿ ಏನಾದರೂ ಇದ್ದರೆ ಅವರು ಚಲಾಯಿಸಲಿ. ತಾವು ಇವತ್ತು ನಮಗೆ ಮಾಡಬೇಕಾದ ಉಪಕಾರ ಇಷ್ಟೆ. ನಾನು ಕೇಳುತ್ತೇನೆ, ಹೇಳುತ್ತೇನೆ ಎನ್ನುವುದರಲ್ಲಿ ತಾವು ಎರಡು ವರ್ಷ ತುಂಬಿಸಿದ್ದೀರಿ. ಮತ್ತೊಂದು ಸಾರಿ ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಇದು ಒಬ್ಬ ಶಾಸಕರಿಗೆ ಸಂಬಂಧಪಟ್ಟಿದ್ದಲ್ಲ, ಒಂದು ಪಕ್ಷಕ್ಕೆ ಸಂಬಂಧಪಟ್ಟಿದ್ದಲ್ಲ. ಇಡೀ ನಮ್ಮ ಶಾಸಕವರ್ಗಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಶಾಸಕರನ್ನು ಪಕ್ಕದಲ್ಲಿ ಕೂರಿಸಿಕೊಂಡು ಸಭೆ ಮಾಡುವುದು ಸಮಾರಂಭ ಮಾಡುವುದು ಅವರ ಘನತೆಗೆ, ಗಾಂಭೀರ್ಯಕ್ಕೆ ದೊಡ್ಡ ಸ್ಥಾನಮಾನಗಳಿಗೆ ಚ್ಯುತಿ ತರುತ್ತದೆನ್ನುವುದು ಒಟ್ಟಾರೆ ಎಲ್ಲರದ್ದೂ ಅಭಿಪ್ರಾಯವಾದರೆ ಆ ರೀತಿ ಒಂದು ತೀರ್ಮಾನ ಮಾಡಿ. ಅದಿಲ್ಲದಿದ್ದರೆ ಮಾಮೂಲಿಯಾಗಿ ಶಾಸಕರಿಗೆ ದಕ್ಕಬೇಕಾದ, ಸಿಗಬೇಕಾದ ಸ್ಥಾನಮಾನವನ್ನು ಒದಗಿಸಿ ಕೊಡುವುದಕ್ಕೆ ನೀವು ಪ್ರಯತ್ನ ಮಾಡಬೇಕು. ನೀವು ಇದಕ್ಕೆ ಮುಂದಾಗಬೇಕು ನಾಯಕತ್ವವನ್ನು ವಹಿಸಬೇಕು. You must hurry up.

ಅಧ್ಯಕ್ಷರು : ಮಾನ್ಯ ರಾಮಯ್ಯನವರೇ, ನಾನು ಆ ಕೆಲಸ ಮಾಡುತ್ತಿದ್ದೇನೆ. ಅದು ಈಗ ಫೈನಲ್ ಸ್ಟೇಜ್‌ಗೆ ಬಂದಿದೆ. ಮುಂದಿನ ಅಧಿವೇಶನ ಮೇ ಅಥವಾ ಜೂನ್ ತಿಂಗಳಿನಲ್ಲಿ ಸೇರುತ್ತದೆ. ಅಷ್ಟರಲ್ಲಿ ಸೆಟಲ್‌ಮೆಂಟ್ ಮಾಡೋಣ.

ಶ್ರೀ ವೈ.ಕೆ. ರಾಮಯ್ಯ : ತಾವು ಇಲ್ಲಿ ಮಂತ್ರಿಗಳಿಗೆ ಸರ್ಕಾರಕ್ಕೆ ಗಡುವು ಕೊಡುತ್ತೀರಿ. ಇಷ್ಟರಲ್ಲಿ ಆಗಬೇಕೆಂದು ಗಡುವು ಕೊಡುತ್ತೀರಿ. ಹಾಗೆಂದು ತಾವು ಒಂದು ಗಡುವು ಹಾಕಿಕೊಂಡರೆ ಒಳ್ಳೆಯದು.

ಅಧ್ಯಕ್ಷರು : ನೀವು ಒಳ್ಳೆಯ ಮಾತು ಹೇಳುತ್ತೀರಿ. ನಾವು ಅವರು ಅಣ್ಣತಮ್ಮಂದಿರು ಇದ್ದಹಾಗೆ. ಕೋರ್ಟ್‌ಗಳು ಜ್ಯುಡಿಷಿಯರಿ ನಾವು ಲೆಜಿಸ್ಲೇಚರ್ ನಾವು ಅವರು ಅಣ್ಣತಮ್ಮಂದಿರು.

ಶ್ರೀ ವೈ.ಕೆ. ರಾಮಯ್ಯ : ನಾವು ಅವರು ಅಣ್ಣತಮ್ಮಂದಿರು ಇದ್ದಹಾಗೆ ಕಾಣುವುದಿಲ್ಲ. ಅಣ್ಣತಮ್ಮಂದಿರ ಮನೋಭಾವ ಅವರಲ್ಲಿ ಇದ್ದಿದ್ದರೆ ಇಷ್ಟೊಂದು ಕಾಂಟೆಮ್‌ಚ್ಯುಯಸ್ ಆಗಿ ನಮ್ಮನ್ನು ಅವರು ಟ್ರೀಟ್ ಮಾಡುತ್ತಿರಲಿಲ್ಲ.

ಅಧ್ಯಕ್ಷರು : ಮುಂದಿನ ಅಧಿವೇಶನ ಬರುವುದರೊಳಗೆ ಎಲ್ಲಾ ಸರಿ ಹೋಗುತ್ತದೆ ಇರಿ. I will see that the entire matter is settled.

ಶ್ರೀ ವೈ.ಕೆ. ರಾಮಯ್ಯ : ಸರಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಕಾಂಟೆಮ್‌ಚ್ಯುಯಸ್ ಆಗಿ ಟ್ರೀಟ್ ಮಾಡುತ್ತಾರೆಂದು ಏನು ಹೇಳಿದ್ದಾರೆ I take objection for that. ಯಾವುದೋ ಒಂದು ಘಟನೆ ಮೇಲೆ ಅದನ್ನೇ ಆಧಾರವಾಗಿಟ್ಟುಕೊಂಡು ನ್ಯಾಯಾಧೀಶರ ಬಗ್ಗೆ ಮಾತನಾಡುವುದು ಸರಿಯಲ್ಲ. ನಾವು ರಿಕ್ವೆಸ್ಟ್ ಮಾಡಿದ್ದೇವೆ. ತಾವು ಲಾ ಮಿನಿಸ್ಟರ್ ಹಾಗೂ ಮಾನ್ಯ ರಾಮಯ್ಯನವರು ಹೇಳಿದ ಮೇಲೆ I have raised that issue with the Chief Jutice. The Chief Justice said, "We will reconsider the entire issue." ರೀ ಕನ್ಸೀಡರ್ ಮಾಡಲಿಕ್ಕೆ ತಾವು ಮಾತನಾಡಿದ್ದೀರಿ ಲಾ ಮಿನಿಸ್ಟರ್ ಮಾತನಾಡಿದ್ದಾರೆ.

ಅಧ್ಯಕ್ಷರು : ಒಂದು ವಿಷಯ ರಾಜ್ಯಮಟ್ಟದಲ್ಲಿ ಪ್ರೋಟೋಕಲ್ ಇದೆಯಲ್ಲಾ, ಅಲ್ಲಿಗೆ ನಾನು ವಾರಕ್ಕೊಂದು ಲೆಟರ್ ಬರೆದು ಇನ್ವಿಟೇಷನ್ ಕಾರ್ಡ್ ಅಟ್ಯಾಚ್ ಮಾಡಿ ಬರೆಯುತ್ತಿದ್ದೇನೆ. ಮುಖ್ಯ ಕಾರ್ಯದರ್ಶಿಯವರು ಎಲ್ಲಾ ತಹಶೀಲ್ದಾರ್‌ರವರಿಗೆ ಅಥವಾ ಯಾರಿಗೆ ಕಳುಹಿಸಬೇಕೋ ಅವರಿಗೆ ಕಳುಹಿಸಿ ಅಧಿಕಾರಿಗಳಿಗೆ ಸ್ವಲ್ಪ ಸ್ಟ್ರಿಕ್ಟ್ ಆಗಿ ಫಾಲೋ ಮಾಡಬೇಕೆಂದು ಸರ್ಕಾರದಲ್ಲಿ ನನ್ನ ವಿನಂತಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ತಾವು ಇರಲಿಲ್ಲ, ಉಪಾಧ್ಯಕ್ಷರು ಇದ್ದರು. ನಾನು ಮಾತನಾಡಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದರು. ನಾನು ಭಾಷಣ ಮುಗಿಸುತ್ತಿದ್ದರೂ ಕೂಡ ಮತ್ತೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ತಮಗೆ ಧನ್ಯವಾದಗಳು. ಮಾತನಾಡುವ ಸದಸ್ಯರು ಇವತ್ತು ಎಷ್ಟು ಹೊತ್ತಾದರೂ ಮುಗಿಸಬೇಕು. ನಾಳೆ 10 ಗಂಟೆಗೆ ಉತ್ತರ ಇದೆ. ಇವತ್ತು ಏಳೂವರೆ ಎಂಟೂವರೆ ಗಂಟೆಯವರೆಗೂ ಕುಳಿತುಕೊಂಡು ಮುಗಿಸಬೇಕು. ಆಕಸ್ಮಾತ್ ಈ ಸಂದರ್ಭದಲ್ಲಿ ಯಾರಾದರೂ ಮಾತನಾಡಲಿಕ್ಕೆ ಅವಕಾಶ ಆಗದಿದ್ದರೆ ಮುಂದಿನ ಸಾರಿ ಜನರಲ್ ಡಿಸ್‌ಕಷನ್‌ನಲ್ಲಿ ಸಮಯ ಕೊಡುತ್ತೇನೆ. ಅದಕ್ಕೆ ಈಗಲೇ ಪ್ರಾಮಿಸ್ ಮಾಡುತ್ತೇನೆ. ಈಗ ಮಾನ್ಯ ಸದಸ್ಯರಾದ ಶಹಜಾನ್ ಡೊಂಗರರಾಗ್‌ರವರು ಮಾತನಾಡಿ.

ಶ್ರೀ ಶಹಜಾನ್ ಡೊಂಗರಗಾವ್ : (ಅಥಣಿ) ಮಾನ್ಯ ಅಧ್ಯಕ್ಷರೆ, ತಾವು ನನಗೆ ಬಜೆಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ವರ್ಷದ ಬಜೆಟ್ ಒಂದು ಇತಿಹಾಸವನ್ನು ಸೃಷ್ಟಿಸಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಸ್ವಿಚ್ ಹಾಕಿಕೊಳ್ಳಿ, ಸ್ವಿಚ್ ಸರಿಯಿಲ್ಲದಿದ್ದರೆ ಬೇರೆ ಸೀಟಿನಲ್ಲಿ ನಿಂತು ಮಾತನಾಡಿ ಅದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ನಾಳೆ ಉತ್ತರ ಇದೆ. ಅದು ಆದ ನಂತರ ಶಾಸನ ರಚನೆಗಳನ್ನು ತೆಗೆದುಕೊಳ್ಳುತ್ತೇವೆ ಅದು ಆದಮೇಲೆ ಪ್ರಶ್ನೋತ್ತರ ವೇಳೆ ಒಂದು ದಿವಸದ್ದು ಮಾತ್ರ ಹಾಕಿಕೊಂಡಿದ್ದೇವೆ. ನಾಳೆ ಕೂಡ 7 ಗಂಟೆಯವರೆಗೆ ಸಭೆ ನಡೆಸಬೇಕಾಗುತ್ತದೆ. ನಾಳೆ ಬೆಳಿಗ್ಗೆ ಬಿಲ್ಲುಗಳು ಇಲ್ಲಿ ಪಾಸಾಗಿ ವಿಧಾನಪರಿಷತ್ತಿಗೆ ಹೋಗಿ ಬರಬೇಕಾಗುತ್ತದೆ. ಅಲ್ಲಿಂದ ವಾಪಸ್ಸು ಬರುವವರೆಗೆ ನಾವು ಕಾಯಬೇಕು. ಅವರು 7 ಗಂಟೆಗೆ ಕಳುಹಿಸುತ್ತಾರೋ 8 ಗಂಟೆಗೆ ಕಳುಹಿಸುತ್ತಾರೋ ಗೊತ್ತಿಲ್ಲ. ಆದಕ್ಕೋಸ್ಕರ ಬಿಸಿನೆಸ್ ಅನ್ನು ರೆಗ್ಯುಲರ್ ಆಗಿ ಮಾಡಬೇಕೆಂದು ಇದ್ದೇನೆ. ಪಾರ್ಲಿಮೆಂಟ್‌ನಲ್ಲಿ ರಾತ್ರಿ 11 ಗಂಟೆಯವರೆಗೂ ಕೂಡುತ್ತಾರೆ, ನ್ಯಾವೇಕೆ ಕೂಡಬಾರದು? let us show an example. We may sit up to 8 p.m tomorrow.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ರಿಟನ್ ಸ್ಪೀಚ್ ಕೊಡುವುದಕ್ಕೆ ಅವಕಾಶವಿದ್ದರೆ ನಾವು ನಮ್ಮ ಭಾಷಣವನ್ನು ಬರೆದು ಕೊಡುತ್ತೇವೆ. ಆಗ ತಾವು ಬೇಗ ಮುಗಿಸಬಹುದು.

ಅಧ್ಯಕ್ಷರು : ರೂಲ್ಸ್‌ನಲ್ಲಿ ಅವಕಾಶ ಇದ್ದರೆ ನೋಡೋಣ.

ಶ್ರೀ ಶಹಜಾನ್ ಡೊಂಗರಗಾವ್ : ಮಾನ್ಯ ಅಧ್ಯಕ್ಷರೆ, ತಾವು 2002-2003ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಪ್ರಥಮವಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ವರ್ಷದ ಬಜೆಟ್ ಐತಿಹಾಸಿಕ ಬಜೆಟ್ ಎಂದು ಹೇಳುವುದಕ್ಕೆ ಸಂತೋಷವೆನಿಸುತ್ತದೆ. ನಾನು ಪ್ರಥಮವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಈವೊಂದು ಬಜೆಟ್‌ನಲ್ಲಿ ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ವಿಶೇಷವಾಗಿ ಕೃಷಿ, ಗ್ರಾಮೀಣಾಭಿವೃದ್ಧಿ, ನೀರಾವರಿ ವಿದ್ಯುತ್ ಹಾಗೂ ಶಿಕ್ಷಣ ಈ ಎಲ್ಲ ಕ್ಷೇತ್ರಗಳಿಗೆ ಹೆಚ್ಚಿನ ಆಧ್ಯತೆಯನ್ನು ಕೊಟ್ಟು ಕರ್ನಾಟಕದ ಜನತೆ ಪ್ರಮುಖ ಸಮಸ್ಯೆಗಳನ್ನು ಎದುರಿಸುವುದಕ್ಕೆ ಕರ್ನಾಟಕದ ಪ್ರಗತಿಗೋಸ್ಕರ ಈ ಬಜೆಟ್‌ನಲ್ಲಿ ಎಲ್ಲಾ ಅಂಶಗಳನ್ನು ಅಳವಡಿಸಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಕೃಷಿ ಪ್ರಧಾನವಾದ ರಾಜ್ಯ. ಕೃಷಿಯಲ್ಲಿ ಮುಖ್ಯವಾಗಿ ನೀರಾವರಿ ನೀರಾವರಿ ಮತ್ತು ವಿದ್ಯುತ್ ಎರಡು ಕಣ್ಣುಗಳಿದ್ದಂತೆ ಮತ್ತು ವಿದ್ಯುತ್‌ಗೆ ಹೆಚ್ಚು ಹಣವನ್ನು ಒದಗಿಸಿರುವುದನ್ನು ಕಾಣುತ್ತಿದ್ದೇವೆ. ನೀರಾವರಿಗೆ ಇವತ್ತು 2979ಕೋಟಿ ರೂಪಾಯಿ ಅನುದಾನವನ್ನು ನಿಗಧಿಪಡಿಸಲಾಗಿದೆ. ವಿದ್ಯುಚ್ಛಕ್ತಿಗೆ 7730 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿ ರೈತರಿಗೆ ನೀರಾವರಿಗೆ ಬೇಕಾಗಿರುವ ವಿದ್ಯುತ್ತನ್ನು ಒದಗಿಸಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕೃಷಿಗೆ ಸುಧಾರಣೆಗೋಸ್ಕರ ವಿದ್ಯುತ್ ಕೊರತೆಯನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕ್ರೊಳ್ಳಲಾಗಿದೆ. ಈವೊಂದು ಆಯವ್ಯಯದಲ್ಲಿ ಪ್ರಚಾರಕ್ಕೋಸ್ಕರ ಕೆಲವೊಂದು ಕಾರ್ಯಕ್ರಮಗಳಿವೆಯೆಂದು ಕೆಲವು ಮಾನ್ಯ ಸದಸ್ಯರು ಮಾಡಿರುವ ಟೀಕೆಗಳನ್ನು ನಿಜವಾಗಿಯೂ ಒಪ್ಪಿಕೊಳ್ಳಲಿಕ್ಕೆ ಆಗುವುದಿಲ್ಲ. ಯಾವುದಾದರೂ ಒಂದು ಮಹತ್ ಸಾಧನೆಯಾಗದಬೇಕಾದರೆ ಯಾವುದಾದರೂ ಒಳ್ಳೆಯ ಕೆಲಸವಾಗಬೇಕಾದರೆ ಪ್ರಚಾರ

ಮಾಡಬೇಕಾಗುತ್ತದೆ. ಅದಕ್ಕೆ ಯಾವುದಾದರೂ ಒಂದು ಯೋಚನೆ ಅಥವಾ ಸಾಧನೆ ಇರಬೇಕಾಗುತ್ತದೆ. ಅದಕ್ಕಾಗಿ ಯಾರೂ ಪ್ರಚಾರ ಮಾಡುವುದಿಲ್ಲ. ಈ ಬಜೆಟ್‌ನ್ನು ಕರ್ನಾಟಕ ರಾಜ್ಯದ ಜನತೆ, ರಾಷ್ಟ್ರದ ಜನತೆ ಎಲ್ಲಾ ಬುದ್ಧಿಜೀವಿಗಳು ಪ್ರಶಂಸೆಯನ್ನು ಮಾಡಿದ್ದಾರೆ. ಈ ಹಿನ್ನಲೆಯಲ್ಲಿ ನಾವು ಪ್ರಚಾರಪ್ರಿಯವಾದ ಬಜೆಟ್ ಎಂದು ಹೇಳುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾವು ಇವತ್ತು ನೋಡುತ್ತಿದ್ದೇವೆ, ವಿದ್ಯುತ್‌ನ ಕೊರತೆಯ ಬಗ್ಗೆ ಅನೇಕ ಜನ ಮಾನ್ಯಸದಸ್ಯರು ವಿರೋಧಪಕ್ಷದವರೂ ಸಹ ಬಹಳಷ್ಟು ಆತಂಕವನ್ನು ವ್ಯಕ್ತಪಡಿಸಿ ಟೀಕೆಯನ್ನು ಮಾಡಿದ್ದಾರೆ. ನಾವು ಪರಿಸ್ಥಿತಿಯನ್ನು ಬಹಳಷ್ಟು ಅಭ್ಯಾಸ ಮಾಡಿ ಯಾವುದೇ ವಿಷಯದ ಬಗ್ಗೆ ಹೇಳಬೇಕಾಗುತ್ತದೆ. ಕಳೆದವರ್ಷ ಮಾನ್ಯ ಮುಖ್ಯಮಂತ್ರಿಗಳು ನಿರಂತರವಾಗಿ ವಿದ್ಯುತ್‌ನ್ನು ಪೂರೈಕೆ ಮಾಡಿಸಿಕೊಡುತ್ತೇವೆ ಎನ್ನುವಂಥ ವಿಷಯವನ್ನು ಹೇಳಿದ್ದು ನಿಜ. ಆದರೆ ಮ್ಯಾನ್ ಪ್ರಪೋಸಸ್, ಗಾಡ್ ಡಿಸ್‌ಪೋಸಸ್ ಎಂದು ಹೇಳುವಂತೆ ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ. ಅಂದರೆ ಕಳೆದವರ್ಷ ಭೀಕರ ಬರಗಾಲವನ್ನು ನಮ್ಮ ರಾಜ್ಯದಲ್ಲಿ ನಾವೆಲ್ಲರೂ ಎದುರಿಸಿದಂಥ ದುಸ್ಥಿತಿ ಬಂದಿತ್ತು. ಈ ಭೀಕರ ಬರಗಾಲದಿಂದ ಪಾರಾಗುವಂಥ ದುಸ್ಥಿತಿಯಲ್ಲಿ ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ಕುಡಿಯುವ ನೀರಿಗೆ ಸಾಗಾಣಿಕೆಯನ್ನು ಮಾಡಿರುವಂಥಾದ್ದು, ಆ ಮೇಲೆ ಕೊಳವೆಬಾವಿಗಳ ಮುಖಾಂತರ ಇಂತಹ ಒಂದು ಬರ್ಬರಸ್ಥಿತಿಯನ್ನು ನಿಭಾಯಿಸಿರುವುದು ಒಂದು ಒಳ್ಳೆಯ ಸಾಧನೆ ಎಂದು ಇವತ್ತು ಹೇಳಬೇಕಾಗುತ್ತದೆ. ಯಾವಾಗ ಬರಗಾಲದಲ್ಲಿ ಮಳೆ ಕಡಿಮೆಯಾಗಿ, ಜಲಾಶಯಗಳಲ್ಲಿ ನೀರು ಇರಲಾರದಂಥ ಪರಿಸ್ಥಿತಿಯಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದ ಕೊರತೆಯುಂಟಾದಾಗ ನಮ್ಮ ರಾಜ್ಯ ಸರ್ಕಾರದವರು ಬೇರೆ ರಾಜ್ಯ ಸರ್ಕಾರಗಳಿಂದ ವಿದ್ಯುತ್‌ನ್ನು ಖರೀದಿ ಮಾಡಿದಂಥಾದ್ದಾಗಲೀ, ಅಥವಾ ಬೇರೆ ಬೇರೆ ಥರ್ಮಲ್ ಯುನಿಟ್ ಹಾಗೂ ಬೇರೆ ಉತ್ಪಾದನೆಗಳನ್ನು ಉತ್ಪಾದಿಸುವಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಇಂತಹ ಒಂದು ಪ್ರಸಂಗದಲ್ಲಿ ನಾವು ವಿದ್ಯುತ್ ಕೊರತೆ ಬಗ್ಗೆ ಅಥವಾ ಇದನ್ನು ಸರ್ಕಾರ ಸರಿಯಾಗಿ ನಿಭಾಯಿಸುವಿಕೆಯನ್ನು ಮಾಡಿಲ್ಲ ಎನ್ನುವಂಥಾದ್ದು ಸರಿಯಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಉತ್ತರ ಕರ್ನಾಟಕದ ಸದಸ್ಯನಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ, ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಏಕೆಂದರೆ ಪ್ರಾರಂಭದಿಂದಲೂ ನಾವು ಕೇಳುತ್ತಿದ್ದೆವು ಏನೆಂದರೆ ಉತ್ತರ ಕರ್ನಾಟಕ ಇವತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದೆ, ಪ್ರಾದೇಶಿಕ ಅಸಮತೋಲನವಾಗಿದೆ. ಯಾರೂ ಇದರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ ಎನ್ನುವಂಥ ವಿಷಯಗಳ ಬಗ್ಗೆ ಬಹಳಷ್ಟು ಸಲ ಪ್ರಾರಂಭದಿಂದಲೂ ನಾವು ಕೇಳುತ್ತಿದ್ದೆವು. ಆದರೆ ಈ ವರ್ಷದ ಆಯವ್ಯಯದಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು, ಹೆಚ್ಚಿನ ಆದ್ಯತೆಯನ್ನು ಉತ್ತರ ಕರ್ನಾಟಕಕ್ಕೆ ಕೊಟ್ಟಿರುವಂಥಾದ್ದು ಏನಿದೆ ಇದನ್ನು ಉತ್ತರ ಕರ್ನಾಟಕದ ಎಲ್ಲಾ ಜನರೂ ಕೂಡ ಸ್ವಾಗತಿಸಿದ್ದಾರೆ. ಇದನ್ನೆಂದಿಗೂ ಉತ್ತರ ಕರ್ನಾಟಕದ ಜನ ಮರೆಯುವುದಿಲ್ಲವೆನ್ನುವ ಈ ವಿಷಯವನ್ನು ಹೇಳುತ್ತಾ ಜನತೆಯ ಆಶಾಭಾವನೆಯನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪ್ರಮುಖವಾಗಿ ಎಲ್ಲಾ ಸನ್ಮಾನ್ಯ ಸದಸ್ಯರುಗಳು ಹೇಳಿದಂತೆ ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವಂಥಾದ್ದು. ಇದರ

ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಂಡು ಆ ಹಿನ್ನಲೆಯಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ನಿಗದಿಪಡಿಸಿರುವುದು ನಿಜವಾಗಿಯೂ ನಮ್ಮ ಉತ್ತರ ಕರ್ನಾಟಕಕ್ಕೆ ಕೊಟ್ಟಿರುವಂಥ ಒಂದು ಅಮೂಲ್ಯವಾದ ಕೊಡುಗೆಯೆಂದು ನಾವು ಇವತ್ತು ಹೇಳಬೇಕಾಗುತ್ತದೆ. ಅದೇ ರೀತಿ ಸಹಕಾರ ಕ್ಷೇತ್ರದ ಭೀಷ್ಮರಾಗಿದ್ದ ದಿವಂಗತ ಕೆ.ಹೆಚ್. ಪಾಟೀಲರ ಹೆಸರಿನಲ್ಲಿ ಪೀಠ ಸ್ಥಾಪನೆ ಮಾಡಿರುವಂಥಾದ್ದು, ಆಮೇಲೆ ಹೈದರಾಬಾದ್ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿರುವಂಥಾದ್ದು, ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲೆಗಳಲ್ಲಿ 1030 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಹಮ್ಮಿಕ್ಕೊಂಡಿರುವ ಜಲನಿರ್ಮಲ ಯೋಜನೆಯು ಉತ್ತರಕರ್ನಾಟಕಕ್ಕೆ ಇನ್ನೊಂದು ಗರಿಯನ್ನು ಕೊಟ್ಟಂತಾಗಿದೆ ಎಂದು ಹೇಳುವುದಕ್ಕೆ ನಮಗೆ ಅಭಿಮಾನ ಎನಿಸುತ್ತದೆ. ಅದೇ ರೀತಿಯಲ್ಲಿ ಧಾರವಾಡ ನಗರದಲ್ಲಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವಲ್ಲಿ ಈ ನಿಟ್ಟಿನಲ್ಲಿ ಮತ್ತು ತರ್ಕಬದ್ಧವಾದ ವೈಚಾರಿಕ ಸ್ಫೂರ್ತಿಯನ್ನು ತುಂಬುವ ದೃಷ್ಟಿಯಲ್ಲಿ ಧಾರವಾಡ, ಬಳ್ಳಾರಿ ಮತ್ತು ಇನ್ನೊಂದು, ಈ ಮೂರು ಜಿಲ್ಲೆಗಳಲ್ಲಿ ಈ ರೀತಿಯ ಒಂದು ಸಂಸ್ಥೆಗಳನ್ನು ಸ್ಥಾಪಿಸಿ ಈ ಚಟುವಟಿಕೆಗಳಿಗಾಗಿ 20 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿರುವಂಥಾದ್ದು ಇದು ಉತ್ತರ ಕರ್ನಾಟಕಕ್ಕೆ ಕೊಟ್ಟಿರತಕ್ಕಂಥ ಇನ್ನೊಂದು ಕೊಡುಗೆಯೆಂದು ಹೇಳುವುದಕ್ಕೆ ನನಗೆ ಇವತ್ತು ಬಹಳ ಸಂತೋಷವಾಗುತ್ತದೆ. ಅಲ್ಪಸಂಖ್ಯಾತರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವುದಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ವಕ್ಫ್ ಸಂಸ್ಥೆಗಳಿಗೆ ಇರುವಂಥ ಅನುದಾನವನ್ನು ದ್ವಿಗುಣ ಗೊಳಿಸಿರುವಂಥಾದ್ದು ಆಮೇಲೆ ಹಜ್‌ಯಾತ್ರಿಕರಿಗೆ ಅನುಕೂಲ ಮಾಡಿಕೊಡಲಾಗಿದೆ. ವಿಶೇಷವಾಗಿ ಬೆಂಗಳೂರಿನಲ್ಲಿ ಲಕ್ಷಗಟ್ಟಲೆ ಹಜ್‌ಯಾತ್ರಿಕರು ಯಾತ್ರೆ ಹೋಗುವಾಗ ಅನುಕೂಲತೆಯನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ಹಜ್ ಭವನ ಅಥವಾ ಕಟ್ಟಡಕ್ಕಾಗಿ ಮೂರು ಕೋಟಿ ರೂಪಾಯಿಗಳನ್ನು ಅನುದಾನವಾಗಿ ನಿಗದಿಪಡಿಸಿರುವಂಥಾದ್ದು, ಆಮೇಲೆ ಹತ್ತು ಸಾವಿರ ಫಲಾನುಭವಿಗಳಿಗೆ ಇವತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅವರಿಗೆ ಸಾಲವನ್ನು ಕೊಡುವಂಥ ಈ ಎಲ್ಲಾ ಯೋಜನೆಗಳನ್ನು ಏನು ವಿಶೇಷವಾಗಿ ಅಲ್ಪಸಂಖ್ಯಾತರಿಗೆ ಕೊಡ ಮಾಡುವಲ್ಲಿ ಈ ಬಜೆಟ್‌ನಲ್ಲಿ ಆಸ್ಪದ ಕೊಟ್ಟಿರುವಂಥಾದ್ದು ಬಹಳ ಮುಖ್ಯವಾದದು. ಈ ಅಲ್ಪಸಂಖ್ಯಾತರಿಗೆ ಮತ್ತು ಬಡಜನರಿಗೆ ಮನೆಗಳನ್ನು ಕೊಡುವ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ರಾಜೀವಗಾಂಧಿ ಆಶ್ರಯ ಯೋಜನೆಯ ಅಡಿಯಲ್ಲಿ ಮಾಡಿರುವಂಥ ಕಾರ್ಯಕ್ರಮಗಳನ್ನು ಎಲ್ಲರೂ ಮೆಚ್ಚಿಕೊಂಡಿದ್ದು, ಇವತ್ತು ಇಡೀ ದೇಶದಲ್ಲಿ ಇದು ಪ್ರಶಂಸೆಗೆ ಒಳಪಟ್ಟಿದೆ. ಈಗಾಗಲೇ 2,98,000 ಮನೆಗಳನ್ನು ಈ ಸರ್ಕಾರ ನಿರ್ಮಾಣ ಮಾಡಿದೆ. ಯಾವ ಸರ್ಕಾರ 11 ಲಕ್ಷ ಮನೆಗಳನ್ನು ನಾವು ಕಟ್ಟಿಕೊಡುತ್ತೇವೆ ಎನ್ನುವಂಥ ಒಂದು ನಿರ್ಧಾರವನ್ನು ಪ್ರಾರಂಭದಲ್ಲಿ ಘೋಷಣೆ ಮಾಡಿತ್ತು. ಈ ಒಂದು ಬಜೆಟ್‌ನಲ್ಲಿ ಅದನ್ನು ಪುನರುಚ್ಚರಿಸಲಾಗಿದೆ. ಅದೇರೀತಿ ಕೊಳಚೆ ನಿರ್ಮೂಲನ ಮಂಡಳಿಯಿಂದ ಬೆಂಗಳೂರಿನಲ್ಲಿ ವಿಶೇಷವಾಗಿ ಬೆಂಗಳೂರು ಪಟ್ಟಣದಲ್ಲಿ ಹತ್ತು ಸಾವಿರ ಮನೆಗಳನ್ನು ನಿರ್ಮಾಣ ಮಾಡಿ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವಂಥ ಬಡವರಿಗಾಗಿ ಈ ಆಸ್ಪದವನ್ನು ಮಾಡಿಕೊಟ್ಟಿರುವಂಥಾದ್ದು, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರನ್ನು ಎತ್ತಿ ಹಿಡಿಯಲಿಕ್ಕೆ, ಈ ಜನರಿಗೆ ಪ್ರಗತಿಯನ್ನು ಕಲ್ಪಿಸಿಕೊಡಲಿಕ್ಕೆ ಅವರ ಕಲ್ಯಾಣ ಆಗಬೇಕೆನ್ನುವ

ದೃಷ್ಟಿಯಿಂದ ಈ ಆಶ್ರಯ ಯೋಜನೆಯಲ್ಲಿ ಅರ್ಧದಷ್ಟು ಅಂದರೆ ಶೇಕಡಾ 50ರಷ್ಟು ಮನೆಗಳನ್ನು ಕಡ್ಡಾಯವಾಗಿ ಇವರಿಗೆ ಮೀಸಲಿಟ್ಟಿರುವಂಥ ಕ್ರಮ ನಿಜವಾಗಿಯೂ ಸ್ವಾಗತಾರ್ಹ ಈ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಬಡವರಿಗೆ, ಅಲ್ಪಸಂಖ್ಯಾತರಿಗೆ, ಎಲ್ಲಾ ಹಿಂದುಳಿದ ವರ್ಗಗಳಿಗೆ ಸಹಾಯಮಾಡಿ ಅವರನ್ನು ಮೇಲೆತ್ತುವಂಥ ಒಂದು ಪ್ರಾಮಾಣಿಕ ಪ್ರಯತ್ನ ಈ ಬಜೆಟ್‌ನಲ್ಲಿ ಮಾಡಲಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ ಶೈಕ್ಷಣಿಕ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಅನೇಕ ಸವಲತ್ತುಗಳನ್ನು, ಅನೇಕ ಯೋಜನೆಗಳನ್ನು ಕೈಗೊಂಡಿದ್ದಾರೆ. ಈ ಸಂದರ್ಭದಲ್ಲಿ ನನ್ನ ಒಂದು ವೈಯಕ್ತಿಕ ಅಭಿಪ್ರಾಯವನ್ನು ಹೇಳಬಯಸುತ್ತೇನೆ. ಅಧ್ಯಕ್ಷರೇ, ನಮ್ಮ ದೇಶ ಕೃಷಿ ಪ್ರಾಧನವಾಗಿರತಕ್ಕಂಥ ದೇಶ. ಇಲ್ಲಿ ಯಾವುದೇ ಶಿಕ್ಷಣವಾಗಲಿ, ಅದು ಕೃಷಿಯಲ್ಲಿ ಬಹಳ ಮಹತ್ವದ ಪಾತ್ರವನ್ನು ನಿಭಾಯಿಸಬೇಕಾಗಿರುತ್ತದೆ. ದಯೆಯೇ ಧರ್ಮದ ಮೂಲವಯ್ಯ - ಎಂದು ಅಣ್ಣ ಬಸವಣ್ಣನವರ ಒಂದು ವಚನವನ್ನು ನಾವು ಕೇಳುತ್ತೇವೆ. ಆದರೆ ಇವತ್ತು ಏನಾಗಿದೆ ಎಂದರೆ ಶಿಕ್ಷಣವೇ ನಿರುದ್ಯೋಗದ ಮೂಲವಯ್ಯ ಎನ್ನುವಂಥ ಪರಿಸ್ಥಿತಿ ಎಲ್ಲಾ ಕಡೆ ನಿರ್ಮಾಣವಾಗಿದೆ. ಇವತ್ತು ವಿದ್ಯಾವಂತರು, ಯುವಕರು ಕೃಷಿ ಕಡೆ ತಮ್ಮ ಒಲವನ್ನು ತೋರಿಸುತ್ತಿಲ್ಲ. ವಿದ್ಯಾವಂತರಿಗೆ ಕೃಷಿ ಕಡೆ ಹೆಚ್ಚಿನ ಒಲವು ಬರುವಂಥ ನಿಟ್ಟಿನಲ್ಲಿ ಇವತ್ತು ನಾವು ಪ್ರಾಥಮಿಕ ಶಿಕ್ಷಣ ಇರಲಿ, ಪ್ರೌಢಶಿಕ್ಷಣ ಇರಲಿ, ಅಥವಾ ಕಾಲೇಜು ಶಿಕ್ಷಣವಾಗಲಿ, ಕೃಷಿ ಬಗ್ಗೆ ಹೆಚ್ಚಿನ ಜ್ಞಾನ ಕೊಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಇನ್ನೂ ಹೆಚ್ಚಿಗೆ ಮಾಡುವ ಅವಶ್ಯಕತೆ ಇದೆಯೆಂದು ನನಗನ್ನಿಸುತ್ತದೆ. ಒಬ್ಬ ಕೃಷಿಕನಾಗಿ ನಾನು ಕಂಡಿರುವ ಅನುಭವದ ಪ್ರಕಾರ ನಮ್ಮ ದೇಶದಲ್ಲಿರುವಂಥ ಕೃಷಿ ಮತ್ತು ಇಸ್ರೇಲ್, ಚೈನಾ ಮತ್ತು ಬೇರೆ ದೇಶಗಳಲ್ಲಿ ಇರುವಂಥ ಕೃಷಿಯಲ್ಲಿ ನಾವು ಅಂತರವನ್ನು ನೋಡಿದ್ದೇವೆ. ಅವರು ಮಾಡುವಂಥ ಯಾವುದೇ ಕೃಷಿಯಲ್ಲಿ ವೈಜ್ಞಾನಿಕವಾಗಿ ಇಲ್ಲ, ತಮ್ಮ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮಾಡುವುದರಿಂದ ನಮ್ಮ ದೇಶದಲ್ಲಿ ನಾವು ಏನು ಉತ್ಪಾದನೆ ಮಾಡುತ್ತೇವೆ ಅದರ ಅನೇಕ ಪಟ್ಟಿನಷ್ಟು ಹೆಚ್ಚು ಉತ್ಪಾದನೆಯನ್ನು ಅವರು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಒಳ್ಳೆಯ ಗುಣಮಟ್ಟವನ್ನೂ ಕೂಡ ಅವರು ಕಾದುಕೊಂಡು ಹೋಗುತ್ತಿದ್ದಾರೆ. ಅದಕ್ಕಾಗಿ ಅವಶ್ಯಕವಾಗಿ ಪ್ರತಿಯೊಬ್ಬ ರೈತನಲ್ಲಿ ಕೃಷಿ ಬಗ್ಗೆ ಮಹತ್ವದ ಜ್ಞಾನ ಬೇಕಾಗಿದೆ. ಆದ್ದರಿಂದ ನಾವು ಪ್ರಾಥಮಿಕ ಹಂತದಿಂದಲೇ ಶಾಲೆಗಳಲ್ಲಿ ಕೃಷಿ ಬಗ್ಗೆ ಸಿಲಬಸ್‌ನ್ನು ಅಳವಡಿಸುವುದು ಅವಶ್ಯಕತೆಂದು ನನಗನ್ನಿಸುತ್ತದೆ. ಈಗ ನಾವೇನು ಕಲಿಯುತ್ತೇವೆ 'ರ' ಜೊತೆಗೆ ಮಣ್ಣು, 'ಟ' ಜೊತೆಗೆ ನೀರು, 'ಇ' ಜೊತೆಗೆ ವಾತಾವರಣ, 'ಕ' ಜೊತೆಗೆ ಬೆಳೆಸಂರಕ್ಷಣೆ ಎನ್ನುವಂಥ ಈ ರೀತಿಯ ಕೃಷಿ ಬಗ್ಗೆ ಎಲ್ಲಾ ಜ್ಞಾನವನ್ನು ಪಡೆದು ಇವತ್ತು ಒಬ್ಬ ಪದವೀಧರ ಕಾಲೇಜಿನಿಂದ ಹೊರಗೆ ಬಂದರೆ ಅವನೊಬ್ಬ ಪ್ರಗತಿಪರ ರೈತನಾಗುವಂತಿರಬೇಕು. ಆತ ಒಬ್ಬ ಕೃಷಿ ತಜ್ಞನಾಗಬೇಕು ಎನ್ನುವಂಥ ನಿಟ್ಟಿನಲ್ಲಿ ನಾವು ಶಿಕ್ಷಣದಲ್ಲಿ ಕೆಲವೊಂದು ಸಿಲಬಸ್‌ನ್ನು ಅಳವಡಿಸಿ ಶಿಕ್ಷಣದಲ್ಲಿ ಕೆಲವೊಂದು ಬದಲಾವಣೆಯನ್ನು ಮಾಡುವುದು ಅವಶ್ಯಕತೆ ಇದೆಯೆಂದು ನನಗೆ ಈ ಸಂದರ್ಭದಲ್ಲಿ ಅನ್ನಿಸುತ್ತದೆ. ನನ್ನ ಈ ಅಭಿಪ್ರಾಯವನ್ನು ನಾನು ತಮ್ಮ ಮುಂದೆ, ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ರೈತ ಸಂಪರ್ಕ ಕೇಂದ್ರಗಳು ಕಳೆದ ಒಂದು ವರ್ಷದಿಂದ ಪರಿಣಾಮಕಾರಿಯಾಗಿ ಈ ರಾಜ್ಯದಲ್ಲಿ ನಿಭಾಯಿಸುತ್ತಿವೆ. ಇವುಗಳು ಹನ್ನೆರಡು ಕೋಟಿ ರೂಪಾಯಿಗಳಷ್ಟು ಬಿತ್ತನೆ ಬೀಜಗಳನ್ನು ವಿತರಿಸಿರುವುದು ಒಂದು ಅತ್ಯುತ್ತಮ ಸಾಧನೆಯೆಂದು

ನಾನು ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ವಿಶೇಷವಾಗಿ ಕೃಷಿಯಲ್ಲಿ ಕೀಟ ನಾಶಕಗಳನ್ನು ಪರೀಕ್ಷಿಸುವ ಪ್ರಯೋಗಾಲಯಗಳನ್ನು ಮಾಡಿರುವಂಥಾದ್ದು ಬಹಳ ಸ್ವಾಗತಾರ್ಹ ವಿಷಯ. ಬೆಂಗಳೂರು, ಬಳ್ಳಾರಿ ಮತ್ತು ಧಾರವಾಡ ನಗರಗಳಲ್ಲಿ ಇಂತಹ ಒಂದು ಕೇಂದ್ರಗಳನ್ನು ಸ್ಥಾಪಿಸಿ ಕೃಷಿ ಕ್ಷೇತ್ರದಲ್ಲಿ ಮಹತ್ವದ ಕಾರ್ಯಕ್ರಮಗಳನ್ನು ನಾವು ಪ್ರಾರಂಭಿಸಿದಂತಾಗಿದೆ. ಜೈವಿಕ ತಂತ್ರಜ್ಞಾನ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಇವತ್ತು ಐದು ಕೋಟಿ ರೂಪಾಯಿಗಳನ್ನು ನಿಗದಿಪಡಿಸಿರುವುದು ಕೃಷಿಗೆ ಅಥವಾ ಕೃಷಿ ತಂತ್ರಜ್ಞಾನದಲ್ಲಿ ಒಳ್ಳೆಯ ಒಂದು ಹೆಜ್ಜೆಯನ್ನು ಇಟ್ಟಂತಾಗಿದೆ. ಕೆಲವು ಮಾನ್ಯ ಸದಸ್ಯರುಗಳು ಈ ಬಜೆಟ್ ಬಗ್ಗೆ ಅನಾವಶ್ಯಕವಾಗಿ ಕೆಲವು ಶಬ್ದಗಳನ್ನು ಉಪಯೋಗಿಸಿರುವುದು ನಿಜವಾಗಿಯೂ ನನಗೆ ವಿಷಾದನೀಯ ಎನ್ನಿಸುತ್ತದೆ. ಈ ವರ್ಷದ ಬಜೆಟ್‌ನಲ್ಲಿ ಮೋಸಗಾರಿಕೆ, ಮೋಸ ಎನ್ನುವಂಥ ಶಬ್ದ ಬಂತು. ಕೆಲವು ಶಾಸಕರು ಇದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಮಾನ್ಯ ವಿರೋಧಪಕ್ಷದ ನಾಯಕರು ಇದು ಮೋಸಗಾರಿಕೆಯ ಒಂದು ಬಜೆಟ್ ಒಂದು ಹೇಳಿದರು. ಇದು ಸಮ್ಮತವಾದದ್ದು ಅಲ್ಲವೆಂದು ನನಗನ್ನಿಸುತ್ತದೆ. ಮೋಸ ಮಾಡುವಂಥ ಯಾವ ಅಂಶವೂ ಇದರಲ್ಲಿ ಇಲ್ಲ. ಯಾವುದೇ ಒಂದು ಬಜೆಟ್ ರಾಜ್ಯದ ಜನತೆಯ ಮುಂದೆ ಅಂಕಿಅಂಶಗಳನ್ನು ಇಟ್ಟು, ಮಂಡಿಸಿರುವಾಗ ಇದು ಪಾರದರ್ಶಕವಾಗಿರುವಂಥ ಬಜೆಟ್, ಎಲ್ಲರಿಗೂ ಅನುಕೂಲಕರವಾಗಿರತಕ್ಕಂಥ ಬಜೆಟ್ ಎಂದು ಎಲ್ಲರೂ ಶ್ಲಾಘಿಸಿರುವಾಗಿ ಮೋಸ ಎನ್ನುವಂಥ ಶಬ್ದವನ್ನು ಉಪಯೋಗ ಮಾಡಬಾರದಾಗಿತ್ತು. ಈ 'ಮೋಸ' 'ಕಳ್ಳತನ' 'ದರೋಡೆ' ಇಂತಹ ಶಬ್ದಗಳನ್ನು ನಾವು ಕಾಣುವುದು ಪೊಲೀಸ್ ಸ್ಟೇಷನ್ ಅಥವಾ ಬೇರೆ ಕಡೆಗಳಲ್ಲಿ. ಈ ಬಜೆಟ್ ಬಗ್ಗೆ ಇಂತಹ ಶಬ್ದಗಳನ್ನು ಉಪಯೋಗ ಮಾಡಬಾರದಾಗಿತ್ತು. ನಿಜವಾಗಿಯೂ ಶಬ್ದದ ಅರ್ಥವನ್ನು ಸರಿಯಾಗಿ ಅರ್ಥೈಸಿಕೊಂಡು ಉಪಯೋಗಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಒಟ್ಟಿನಲ್ಲಿ ರಾಜ್ಯದ ಎಲ್ಲಾ ಪ್ರಮುಖ ಯೋಜನೆಗಳನ್ನು ಪ್ರಾರಂಭಿಸಲು ಹಾಗೂ ಎಲ್ಲಾ ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲು ಹಾಗೂ ರಾಜ್ಯದ ಸರ್ವಾಂಗೀಣ ಪ್ರಗತಿಗಾಗಿ ರೂಪಿಸಿರುವಂಥ ಈ ಆಯವ್ಯಯವನ್ನು ನಾನು ಸ್ವಾಗತಿಸುತ್ತಾ, ಈ ಸರ್ಕಾರಕ್ಕೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ತಮಗೂ ಕೂಡ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚೆಲುವರಾಯಸ್ವಾಮಿ : (ನಾಗಮಂಗಲ) ಮಾನ್ಯ ಅಧ್ಯಕ್ಷರೇ, 2002-2003ರ ಆಯವ್ಯಯವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವುದಲ್ಲಿ ಕೆಲವೊಂದನ್ನು ನಾನು ಭಾಗಶಃ ಒಪ್ಪುವುದಾದರೂ ಅವರು ಕಳೆದ ಎರಡು ವರ್ಷಗಳಲ್ಲಿ ಏನು ಆಯವ್ಯಯವನ್ನು ಮಂಡಿಸಿರತಕ್ಕಂಥ ಸಂದರ್ಭದಲ್ಲಿ ಅವರು ಪುಸ್ತಕದಲ್ಲಿ ಏನು ಓದುತ್ತಾರೆ ಆ ಬಜೆಟ್‌ನಲ್ಲಿ ಸಂಪೂರ್ಣವಾದ ಅನುಷ್ಠಾನಗೊಂಡಿರತಕ್ಕಂಥಾದ್ದನ್ನು ನೋಡಿದರೆ ಅದು ಒಂದು ವಿಪರ್ಯಾಸವೇ ಸರಿ. ಅದು ಬಜೆಟ್‌ನ ನಿಜವಾದ ಅರ್ಥವನ್ನು ಕಳೆದುಕೊಳ್ಳುತ್ತದೆ. ಈ ರಾಜ್ಯದ 5 ಕೋಟಿ ಜನರನ್ನು ಪ್ರತಿನಿಧಿಸತಕ್ಕಂಥ ಸರ್ಕಾರ ಒಂದು ಬಜೆಟ್‌ನ್ನು ಮಂಡಿಸಿದಾಗ ಅದನ್ನು ಸಂಪೂರ್ಣವಾಗಿ ಅನುಷ್ಠಾನ ಗೊಳಿಸಬೇಕಾಗುತ್ತದೆ. ಇವತ್ತಿನ ಆರ್ಥಿಕ ಪರಿಸ್ಥಿತಿಯನ್ನು ನಾವು ಹೇಳಬೇಕಾಗಿಲ್ಲ. ಇವತ್ತು ರಾಜ್ಯದಲ್ಲಿ ಒಂದು ರಸ್ತೆಯನ್ನು ಮಾಡಬೇಕಾದರೂ ಹುಡ್ಕೋ ಮತ್ತು ನಬಾರ್ಡ್ ಲೋನ್ ಬಿಟ್ಟರೆ ರಾಜ್ಯ ಸರ್ಕಾರ ಅನುದಾನದಿಂದ ಈ ಕೆಲಸವನ್ನು ಮಾಡುತ್ತೇವೆ ಎನ್ನುವ

ಪರಿಸ್ಥಿತಿ ಕಾಣುತ್ತಿಲ್ಲ. ನಾವು ಪ್ರತಿದಿನ ಪತ್ರಿಕೆಯಲ್ಲಿ ನೋಡತಕ್ಕಂಥಾದ್ದೇ ಅದಕ್ಕೆ ಸಾಕ್ಷಿ. ಜೊತೆಗೆ ನೌಕರರ ಸಂಬಳಕ್ಕೂ ಸಹ ಸಾಲ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಸರ್ಕಾರದಲ್ಲಿದೆ. ಮಂಡ್ಯ ಜಿಲ್ಲೆಯವರು ನನಗೆ ಫೋನ್ ಮಾಡಿದ್ದರು. ವೈನ್ ಸ್ಟೋರ್‌ನವರು. ಜೂನ್ ತಿಂಗಳಲ್ಲಿ ಕಟ್ಟಬೇಕಾದ ಶುಲ್ಕವನ್ನು ಅಡ್ವಾನ್ಸ್ ಆಗಿ ಈ ತಿಂಗಳೇ ಕಟ್ಟಿ ಸರ್ಕಾರದಲ್ಲಿ ಹಣ ಇಲ್ಲ ಎಂದು ಅಬ್ಕಾರಿ ಇಲಾಖೆಯವರು ಒತ್ತಾಯ ಮಾಡುತ್ತಿದ್ದಾರೆಂದು. ಸರ್ಕಾರ ಬಡ್ಡಿಯನ್ನು ವಸೂಲಿ ಮಾಡದೇ ಇರತಕ್ಕಂಥ ಪರಿಸ್ಥಿತಿ ನೂರಾರು ಇವೆ. ಜೂನ್ ತಿಂಗಳಲ್ಲಿ ಕಟ್ಟಬೇಕಾದ ಶುಲ್ಕವನ್ನು ಮಾರ್ಚಿ ತಿಂಗಳಲ್ಲೇ ಕಟ್ಟಿ ಇಲ್ಲದಿದ್ದರೆ ಕ್ಲೋಸ್ ಮಾಡಿ ಎನ್ನತಕ್ಕಂಥ ನಿರ್ದೇಶನ ಸರ್ಕಾರದಿಂದ ಇದೆ ಎಂದು ಹೇಳುತ್ತಿದ್ದಾರೆ. ಇದು ಅನಿವಾರ್ಯವೇ, ಇದು ಏಕೆ ಬರುತ್ತಿದೆ ಎನ್ನುವುದನ್ನು ಆಡಳಿತ ಪಕ್ಷದವರು ಮತ್ತು ಹಣಕಾಸಿನ ಮಂತ್ರಿಗಳೂ ಆದ ಮಾನ್ಯ ಮುಖ್ಯಮಂತ್ರಿಗಳು ನೋಡಬೇಕಾಗುತ್ತದೆ. ಆಶ್ರಯ ಯೋಜನೆಯಡಿಯಲ್ಲಿ ಒಂದು ವರ್ಷಕ್ಕೆ 10 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿ ಮೊದಲನೇ ಹೆಜ್ಜೆಯನ್ನು ಇಟ್ಟರಿ ಸರ್ಕಾರ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ನಾನು ಹೇಳುವುದಾದರೆ ಮೊದಲನೇ ಕಂತಿನಲ್ಲಿ 600 ಎರಡನೇ ಕಂತಿನಲ್ಲಿ 500 ಮನೆಗಳನ್ನು ಎರಡೂವರೆ ವರ್ಷಗಳಲ್ಲಿ ಕೊಟ್ಟಿದ್ದಾರೆ. 1100 ಮನೆಗಳು ಇಲ್ಲಿಯವರೆಗೂ ನಾಗಮಂಗಲ ತಾಲ್ಲೂಕಿಗೆ ತಲುಪಿದೆ. ಅಂದರೆ ಎರಡೂವರೆ ವರ್ಷಕ್ಕೆ 1100 ಮನೆಗಳಾದರೂ ಇನ್ನು ಎರಡೂವರೆ ವರ್ಷಕ್ಕೆ 1200 ಮನೆಗಳು, ಆದರೆ ಇಡೀ ರಾಜ್ಯದಲ್ಲಿ 10 ಲಕ್ಷ ಮನೆಗಳನ್ನು ಯಾವ ರೀತಿ ಕೊಡುವುದಕ್ಕೆ ಸಾಧ್ಯ? ಇದರ ಗುಟ್ಟೇನು ಎಂದು ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಹೇಳಬೇಕು. ವಾಸ್ತಾವಾಂಶವನ್ನು ನಮಗೆ ಹೇಳಿದರೆ ಸರಿಯಾಗುತ್ತದೆ. ಕುಡಿಯುವ ನೀರಿಗೆ ಹಣಕಾಸಿನ ಸಮಸ್ಯೆ ಇಲ್ಲ ಎಂದು ಪತ್ರಿಕೆಗಳಲ್ಲಿ ಆಗಾಗ ಬರುತ್ತಿರುತ್ತದೆ. ಈಗಿರುವ ಬೋರ್‌ವೆಲ್‌ಗಳಲ್ಲಿ ಎಲ್ಲಿ ನೀರು ಬರುತ್ತಿಲ್ಲವೋ ಅಲ್ಲಿ ಮತ್ತೊಂದು ಬೋರ್‌ವೆಲ್ ಹಾಕುವುದಕ್ಕೆ ಹಣ ಇಲ್ಲ ಎಂದು ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾಧಿಕಾರಿಗಳಿಂದ ಕೇಳಿ ಬರುತ್ತಿದೆ. ಈ ಮಾತನ್ನು ನಾವು 2-3 ಮೀಟಿಂಗ್ ಮಾಡಿದಾಗ ಹೇಳಿದರು. ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸರ್ಕಾರ ಅನೇಕ ಇಂತಹ ನ್ಯೂನ್ಯತೆಗಳನ್ನು ಇಟ್ಟುಕೊಂಡು ಎಲ್ಲವೂ ಸರಿಯಾಗಿದೆ ಎಲ್ಲವನ್ನೂ ನಾವು ಮಾಡುತ್ತಿದ್ದೇವೆಂದು ಹೇಳುವುದಕ್ಕಿಂತ ಮಾಡತಕ್ಕಂಥ ಕೆಲಸವನ್ನು ಬಜೆಟ್‌ನಲ್ಲಿ ಹೇಳಿರುವುದನ್ನು ಪರಿಪೂರ್ಣವಾಗಿ ಮುಗಿಸತಕ್ಕಂಥ ನಿಟ್ಟಿನಲ್ಲಿ ಹೋಗತಕ್ಕಂಥಾದ್ದು ಒಂದು ಒಳ್ಳೆಯ ಪ್ರವೃತ್ತಿ ಎಂದು ನಾನು ಭಾವಿಸುತ್ತೇನೆ. ಹತ್ತಾರು ವರ್ಷಗಳಿಂದ ನೀರಾವರಿಗೆ ಇಟ್ಟಂತಹ ಹಣ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಖೋತಾ ಮಾಡತಕ್ಕಂಥಾದ್ದನ್ನು ನಾವು ನೋಡಿರಲಿಲ್ಲ. ಇವತ್ತು ನಮ್ಮ ಮಂಡ್ಯ ಜಿಲ್ಲೆಯಲ್ಲಿ ಪ್ಲಾನ್‌ನಲ್ಲಿ ಜಿಲ್ಲಾ ಪಂಚಾಯತಿಗೆ ಸಂಬಂಧಪಟ್ಟಂತೆ 20 ಪರ್ಸೆಂಟ್ ಖೋತಾ ಮಾಡಿದ್ದಾರೆಂದು ಹೇಳಿದರು. ನಮ್ಮ ತಾಲ್ಲೂಕಿಗೆ ಸೇರತಕ್ಕಂಥ ಯಡಿಯಾರು ವಿಭಾಗದಲ್ಲಿ ಕಳೆದ ಸಲ 4 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡಬೇಕಾಗಿತ್ತು. ಆದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಹಣಕಾಸು ಇಲಾಖೆಯಲ್ಲಿ ಕೇಳಿದರೆ ಕೊನೆಯ ಪಕ್ಷ 50 ಲಕ್ಷ ರೂಪಾಯಿ ಬಿಡುಗಡೆ ಮಾಡಲು ಹಣ ಇಲ್ಲ ಎಂದು ಹೇಳುತ್ತಾರೆ. ಈ ರೀತಿಯಾದರೆ ಆ ಹಣ ಲ್ಯಾಪ್ಸ್ ಆಗುತ್ತದೆ. ಇನ್ನು ಮುಂದಿನ ವರ್ಷಗಳಲ್ಲಿ ಎಷ್ಟು ಉತ್ತಮ ಕೆಲಸ ನಡೆಯುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈ ಬಜೆಟ್‌ನಲ್ಲಿ ಕೆಲವು ಒಳ್ಳೆಯ ತೀರ್ಮಾನಗಳನ್ನು ಈ ಬಜೆಟ್‌ನಲ್ಲಿ ತೆಗೆದುಕೊಂಡಿದ್ದರೂ ಇದರ ಇಂಪ್ಲಿಮೆಂಟೇಷನ್ ಪರಿಸ್ಥಿತಿಯನ್ನು ನೋಡಿದಾಗ

ನಮ್ಮ ಎರಡು ವರ್ಷಗಳ ಅನುಭವದಲ್ಲಿ ಹೇಳುವುದಾದರೆ ಇದು ಇಂಪ್ಲಿಮೆಂಟೇಷನ್ ಆಗುವುದಿಲ್ಲ ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಇನ್ನು ಶಿಕ್ಷಣ ಇಲಾಖೆಯ ಬಗ್ಗೆ ಹೇಳುವುದಾದರೆ ಕಳೆದ ಎರಡು ವರ್ಷದಲ್ಲಿ ಯಾವುದೇ ಶಿಕ್ಷಕರ ಕೊರತೆ ಇಲ್ಲದಂತೆ, ಕೊಠಡಿಗಳ ಕೊರತೆ ಇಲ್ಲದಂತೆ ಮಾಡುತ್ತೇವೆಂದು ಹೇಳಿದರು. ಕೆಲವು ಪದವೀಪೂರ್ವ ಕಾಲೇಜುಗಳು ಕಳೆದ 30 ವರ್ಷಗಳಿಂದ ಯಾವ ಕಟ್ಟಡ ಇತ್ತೋ ಅದೇ ಕಟ್ಟಡ ಇದೆ. ಹೈಸ್ಕೂಲ್‌ಗಳು ಮಂಜೂರಾಗಿ 2-3 ವರ್ಷಗಳು ಕಟ್ಟಡ ಇಲ್ಲದೇ ಇರುವ ಪರಿಸ್ಥಿತಿ ಮುಂದುವರಿದಿದೆ. ಶಿಕ್ಷಕರು ಇಲ್ಲದೇ ಇರುವ ಪರಿಸ್ಥಿತಿ ಇದೆ. ಇಷ್ಟೆಲ್ಲಾ ನ್ಯೂನ್ಯತೆಗಳನ್ನು ಇಟ್ಟುಕೊಂಡು ನಾವು ಶಿಕ್ಷಣ ಇಲಾಖೆಯಲ್ಲಿ ಶಿಕ್ಷಣವನ್ನು ಕೊಡುತ್ತಿದ್ದೇವೆಂದು ಹೇಳುವುದಕ್ಕೆ ಸರ್ಕಾರಕ್ಕೆ ಯಾವ ನೈತಿಕ ಹಕ್ಕು ಇದೆ ಎಂದು ನಾನು ಕೇಳುತ್ತೇನೆ. ಕಳೆದ ಎರಡೂವರೆ ವರ್ಷಗಳಲ್ಲಿ ಪದವಿ ಪೂರ್ವ ಕಾಲೇಜು ಇರಬಹುದು, ಪ್ರೌಢ ಶಾಲೆ ಇರಬಹುದು, ಪ್ರಾಥಮಿಕ ಶಾಲೆ ಇರಬಹುದು ಇಲ್ಲಿ ಕಟ್ಟಡಗಳು ಮತ್ತು ಶಿಕ್ಷಕರ ಕೊರತೆಯನ್ನು ನಿಭಾಯಿಸಿದ್ದಾರಾ? ಅವರು ಅಂಕಿಅಂಶಗಳನ್ನು ಕೊಡಲಿ ನಾನು ಒಪ್ಪುವುದಕ್ಕೆ ತಯಾರಾಗಿದ್ದೇನೆ. ಒಂದು ಸಂದರ್ಭದಲ್ಲಿ ಹುಡ್ಕೋ ಸಾಲ ಬರುತ್ತಿದೆ ಮುಂದಿನ ದಿನಗಳಲ್ಲಿ ನಾವು ರಾಜ್ಯದಲ್ಲಿ ಕೊರತೆ ಇರತಕ್ಕಂಥ ಎಲ್ಲಾ ಶಾಲಾ ಕಟ್ಟಡಗಳ ಕಟ್ಟುತ್ತೇವೆಂದು ಹೇಳಿದರು. ಹುಡ್ಕೋ ಸಾಲ ಬರುತ್ತದೆಂದು ಕೇಳಿ ಎರಡೂವರೆ ವರ್ಷವಾಯಿತು ಇನ್ನೂ ಎರಡೂವರೆ ವರ್ಷ ಇದೇ ಪರಿಸ್ಥಿತಿ ಮುಂದುವರಿಯುತ್ತದೆಯೋ ಏನೋ ಎನ್ನುವಂತಹ ಪರಿಸ್ಥಿತಿ ಇದೆ. ಈ ಒಂದು ಹೇಳಿಕೆಯನ್ನು ಇಟ್ಟು ಏನಾದರೂ ಒಂದು ಕಾರ್ಯಗತ ಮಾಡತಕ್ಕಂಥಾ ನಿಟ್ಟಿನಲ್ಲಿ ಹೋಗಲು ಸಾಧ್ಯವೇ ಎಂದು ಯೋಚನೆ ಮಾಡಬೇಕಾಗಿದೆ. ಶಿಕ್ಷಣ ಇಲಾಖೆಯಲ್ಲಿ ಜ್ಯೂನಿಯರ್ ಕಾಲೇಜು ಮತ್ತು ಹೈಸ್ಕೂಲ್‌ಗಳಲ್ಲಿ ಕಟ್ಟಡಗಳ ಕೊರತೆ ಎಲ್ಲಾ ತಾಲ್ಲೂಕುಗಳಲ್ಲಿ ಇದೆ. ಈ ಬಗ್ಗೆ ಸರ್ಕಾರ ಒಂದು ಕಠಿಣ ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಟ್ಟಂತೆ ಆಗುವುದಿಲ್ಲ. ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಗೆ ಸರ್ಕಾರದಿಂದ ಏನು ಹಣವನ್ನು ಬಿಡುಗಡೆ ಮಾಡುತ್ತೇವೆ ಆ ಹಣ ಸರಿಯಾಗಿ ಖರ್ಚಾಗುತ್ತಿದೆಯೇ ಎಂಬುದನ್ನು ನೋಡಬೇಕಿದೆ. ಅದು ರಸ್ತೆಗಳಿಗೆ ಕೊಡತಕ್ಕಂಥ ಹಣ ಇರಬಹುದು, ಸಣ್ಣ ಪುಟ್ಟ ಕಟ್ಟಡಗಳಿಗೆ ಕೊಡತಕ್ಕಂಥ ಹಣ ಇರಬಹುದು ಈ ಹಣ ಸರಿಯಾಗಿ ಉಪಯೋಗ ಆಗುತ್ತಿದೆಯೇ ಎನ್ನುವ ಬಗ್ಗೆ ರಾಜ್ಯದ ಯಾವುದಾದರೂ ಒಂದು ಜಿಲ್ಲೆಯನ್ನು ಆಯ್ಕೆ ಮಾಡಿ ಆ ಜಿಲ್ಲೆಯ ವರದಿ ತರಿಸಿ ನೋಡಿದರೆ ಗೊತ್ತಾಗುತ್ತದೆ. ಜಿಲ್ಲಾ ಪಂಚಾಯತಿ ವ್ಯವಸ್ಥೆಯಲ್ಲಿ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಕೊಟ್ಟಿರುವ ಹಣಕ್ಕೆ ಸರಿಯಾಗಿ ರಸ್ತೆ ಆಗಿದೆಯೇ, ಡಾಂಬರೀಕರಣ ಆಗಿದೆಯೇ, ಸೇತುವೆಗಳು ಆಗಿದೆಯೇ ಎಂಬುದನ್ನು ನೋಡಿ. ತಾವು ಯಾವುದಾದರೊಂದು ಏಜನ್ಸಿಯಿಂದ ಬೇಕಾದರೂ ವರದಿ ತರಿಸಿ. ಆ ವರದಿಯಲ್ಲಿ ವ್ಯತ್ಯಾಸವಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಒಂದು ಅವಕಾಶವಾಗುತ್ತದೆ. ಎಷ್ಟೋ ಜಿಲ್ಲಾ ಪಂಚಾಯತಿಗಳಲ್ಲಿ ತಾವು ಕೊಡತಕ್ಕಂಥ ಹಣ ರಸ್ತೆಗಳ ಪಕ್ಕದಲ್ಲಿ ಡ್ರೈನ್ ಹೊಡೆದು ಸ್ವಲ್ಪ ಮಣ್ಣು ಹರಡಿ ಬಿಲ್ ಮಾಡಿತೆಗೆದುಕೊಂಡು ಹೋಗುವಂತಹ ವ್ಯವಸ್ಥೆ ಇದೆ. ಇವತ್ತು ಮಂಡ್ಯ ಜಿಲ್ಲೆಯಲ್ಲಿ ನಾನ್ ಪ್ಲಾನ್‌ನಲ್ಲಿ 9 ಕೋಟಿ ರೂ. ಇದೆ. ಈ 9 ಕೋಟಿ ರೂ.ಗಳಲ್ಲಿ ಎಷ್ಟು ಕಿಲೋಮೀಟರ್ ರಸ್ತೆ ಡಾಂಬರೀಕರಣ ಮಾಡಿದ್ದಾರೆ. ಎಷ್ಟು ಮೆಟಲಿಂಗ್ ಮಾಡಿದ್ದಾರೆ ಎನ್ನುವ ವರದಿ ತರಿಸಿ, ಆಗ ಗೊತ್ತಾಗುತ್ತದೆ. ಈ ರೀತಿ ಎಷ್ಟೋ

ಜಿಲ್ಲೆಗಳಲ್ಲಿ ಹಣ ದುರುಪಯೋಗವಾಗುತ್ತಿದೆ. ಇದರ ಬಗ್ಗೆ ತಾವು ಯಾರೂ ಗಮನಹರಿಸತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಶಾಸಕರು ಜಿಲ್ಲಾ ಪಂಚಾಯತಿಯಲ್ಲಿ ಕೇಳುವ ಅಧಿಕಾರ ಇಲ್ಲ ಎನ್ನುವ ರೀತಿಯಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ನಡೆಯುತ್ತಿವೆ.

6.00 ಪಿ.ಎಂ.

ಕುಡಿಯುವ ನೀರಿನ ಸಮಸ್ಯೆಯಲ್ಲಿ ಕೆಲವು ಎನ್ ಆರ್ ಡಬ್ಲ್ಯೂ ಎಸ್, ಎ ಆರ್ ಡಬ್ಲ್ಯೂ ಎಸ್ ಎಂದು ಸ್ಕೀಮ್‌ಗಳನ್ನು ಮಂಜೂರು ಮಾಡುವುದಷ್ಟೇ ಜಿಲ್ಲಾ ಪಂಚಾಯ್ತಿಯ ಕೆಲಸವಾಗಿರುತ್ತದೆ. ನೀರನ್ನು ಕುಡಿಸತಕ್ಕ ಅಂತಿಮ ಘಟ್ಟದವರೆಗೂ, ಆ ಜವಾಬ್ದಾರಿಯನ್ನು ಸರ್ಕಾರ ಹೊರುವುದಿಲ್ಲ. ಒಂದುಕಡೆ ಕೆ ಪಿ ಟಿ ಸಿ ಎಲ್ ಸಮಸ್ಯೆ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಸೋರ್ಸಸ್ ಇಲ್ಲವೆಂದು ಹೇಳುತ್ತಾರೆ. ಒಂದುಸಾರಿ, ಒಂದು ಬೋರ್ ಹಾಕಿದರೆ, ಅದರಲ್ಲಿ ನೀರು ಬರಲಿಲ್ಲವೆಂದರೆ ಮತ್ತೊಂದು ಟೆಸ್ಟ್ ಮಾಡಲಿಕ್ಕೆ 3-4 ತಿಂಗಳು ತೆಗೆದುಕೊಳ್ಳುತ್ತಾರೆ. ಅಷ್ಟರೊಳಗೆ ಟ್ಯಾಂಕ್ ಕಟ್ಟಿ 2-3 ವರ್ಷವಾದರೂ ಸಹ ನೀರಿನ ಸಮಸ್ಯೆ ನೀಗುವುದಿಲ್ಲ. ಏನಾದರೂ ಬೋರ್ ಫೇಲ್ಯೂರ್ ಆದರೆ, ಬೆಂಗಳೂರು ಮಟ್ಟದಿಂದ ಬಂದು ಪರೀಕ್ಷೆ ಮಾಡಿ, ಅನುಮತಿ ಕೊಡುವುದಕ್ಕೆ ಕೊನೇಪಕ್ಷ ಒಂದು ವರ್ಷವಾಗುತ್ತದೆ. ಇಂತಹ ಅನೇಕ ಸರಳವಾದಂಥ ಸಮಸ್ಯೆಗಳನ್ನು ಗುರುತಿಸಿ, ಹಣವನ್ನು ಕೊಡತಕ್ಕಂಥಾದ್ದು ಒಂದು ಕಡೆಯಾದರೆ, ಕೊಟ್ಟಹಣ ಯಾವ ರೀತಿ ಈ ರಾಜ್ಯದ ಅಭಿವೃದ್ಧಿಗೆ ಬಳಕೆಯಾಗುತ್ತದೆ? ಕೆಲವು ಇಲಾಖೆಗಳಲ್ಲಿ ಕೊಡತಕ್ಕಹಣ ಮತ್ತು ಸವಲತ್ತು ಏನಿದೆ, ಹಿಂದುಳಿದವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಬಡವರಿಗೆ ಸರಿಯಾಗಿ ತಲುಪುತ್ತಾ ಇದೆಯೇ ಎಂಬುದನ್ನು ಮಾಡುತ್ತಾ ಇಲ್ಲ. ಕೆಲವು ಕಡೆ ಇರಿಗೇಷನ್‌ನಲ್ಲಿ ಪಿ ಡಬ್ಲ್ಯೂ ಡಿನಲ್ಲಿಯೂ ಸರಿಯಾಗಿ ಕೆಲಸಗಳಾಗುತ್ತಾ ಇಲ್ಲ. ಬೀದರ್ ಶ್ರೀರಂಗಪಟ್ಟಣ ರಸ್ತೆಯನ್ನೇ ತೆಗೆದುಕೊಳ್ಳಿ. ಮಾನ್ಯ ಧರ್ಮಸಿಂಗ್‌ರವರು ಸಮರ್ಥ ಮಂತ್ರಿಗಳಾಗಿದ್ದರು. ಕಳೆದ ಎರಡು ವರ್ಷಗಳಿಲ್ಲಿಯೇ ನಮ್ಮದು ಪ್ರಾರಂಭವಾಗುತ್ತದೆಂದು ಹೇಳಿದ್ದರು. ಇನ್ನೂವರೆಗೆ ಸಹ ಅದು ಪ್ರಾರಂಭವಾಗಲಿಲ್ಲ. ಪ್ರಾರಂಭವಾಗುವುದು ಆರುತಿಂಗಳು ಲೇಟಾದರೂ, ಅದಕ್ಕೆ ಮೆಯಿನ್‌ಟೆನೆನ್ಸ್, ಎರಡು ವರ್ಷಗಳಲ್ಲಿ ವರ್ಲ್ಡ್ ಬ್ಯಾಂಕಿನವರು ಬೀದರ್ ಶ್ರೀರಂಗಪಟ್ಟಣ ರಸ್ತೆಯನ್ನು ಮಾಡುತ್ತವೆಂದು ಹೇಳಿದರೇ ಅವತ್ತಿನಿಂದ ಇಲ್ಲಿಯವರೆಗೂ ಯಾವುದೇ ಹಣವನ್ನು ಖರ್ಚು ಮಾಡಬೀಳತಕ್ಕಂಥ ಗುಂಡಿ ಇರಬಹುದು. ಇನ್ನಾವುದೇ ರಸ್ತೆಯ ದುರಸ್ತಿಯನ್ನು ಮಾಡಲಿಕ್ಕೆ ಹಣವನ್ನು ಖರ್ಚುಮಾಡಬೇಡಿ ಎಂದು ಆದೇಶವಾಗಿದೆ. ಆದರೆ, ಅಲ್ಲಿ ಓಡಾಡತಕ್ಕ ಜನಕ್ಕೆ ನಾವು ಉತ್ತರ ಹೇಳುವುದಕ್ಕಾಗುವುದಿಲ್ಲ ಮೈಸೂರಿನಿಂದ ಆದಿಚುಂಚನಗಿರಿ ಮತ್ತು ತುರುವೇಕೆರೆವರೆಗೆ ಇರತಕ್ಕ ರಸ್ತೆ .. ನೋಡಲಿಕ್ಕೆ ಆಗುವುದಿಲ್ಲ. ಅಷ್ಟು ಸಮಸ್ಯೆ ಇರತಕ್ಕಂಥ ರಸ್ತೆಗಳಾಗಿವೆ. ಇಂತಹ ಅನೇಕ ಸಮಸ್ಯೆಗಳನ್ನು ತಾವು ಸರಿಪಡಿಸಲಿಕ್ಕೆ ಮುಂದಾಗದೇ ಇದ್ದರೆ, ಜನಕ್ಕೆ ಕಷ್ಟವಾಗುತ್ತದೆ. ಎಲ್ಲೋ ಒಂದು ಕಡೆ ನಾವು ಮಾಡುತ್ತಾ ಇದ್ದೇವೆಂದು ಹೇಳತಕ್ಕಂಥಾದ್ದು ಅಲ್ಲ. ಇಡೀ ರಾಜ್ಯದಲ್ಲಿ ಎಲ್ಲಾ ಭಾಗದಲ್ಲೂ ಸಮಗ್ರವಾಗಿ, ಎಲ್ಲಿ ಏನು ಕೊರತೆ ಇದೆ, ಅದನ್ನು ಮಾಡತಕ್ಕ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಈ ವರ್ಷ ಇರಿಗೇಷನ್‌ಗೆ ಕೊಟ್ಟಿರತಕ್ಕ ಅನುದಾನ ಹೆಚ್ಚಿದ್ದರೂ, ಕಾವೇರಿ ಬೇಸಿನ್‌ಗೆ ಬಹಳ ಕಡಿಮೆ ಇದೆ. ಇದು ಏನೆಂದು ನಮಗೆ ಯಾರಿಗೂ ಅರ್ಥವಾಗುತ್ತಾ ಇಲ್ಲ. ಆದರಲ್ಲಿಯೂ ಹೇಮಾವತಿಗೆ 40 ಕೋಟಿ ರೂ. ಹಣವನ್ನು ಇಟ್ಟಿದ್ದಾರೆ. ಈ 40 ಕೋಟಿ

ರೂ. ಇವತ್ತಿನ ಬಾಕಿ ಬಿಲ್ಲುಗಳಿಗೂ ಸಹಿತ ಆಗುವುದಿಲ್ಲ. ಇದರ ಅರ್ಥ ಮುಂದಿನ ವರ್ಷ ಯಾವುದೇ ಕೆಲಸವನ್ನು ತೆಗೆದುಕೊಳ್ಳಬಾರದು ಎಂಬ ನಿರ್ದೇಶನವನ್ನು ಇಲ್ಲಿಂದ ಕೊಟ್ಟ ಪರಿಸ್ಥಿತಿ ಇದೆ. ಇವತ್ತು ಬಾರಿ 60-70 ಕೋಟಿ ರೂ.ಗಳು ಇದ್ದು, 2002-03ನೇ ಸಾಲಿಗೆ 40 ಕೋಟಿ ರೂ. ಕೊಟ್ಟರೆ ಯಾವ ರೀತಿ ಮುಂದಿನ ವರ್ಷದ ಕೆಲಸವನ್ನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ದಯಮಾಡಿ ಸರ್ಕಾರ ಯೋಚನೆ ಮಾಡಬೇಕು. ಆರೋಗ್ಯ ಇಲಾಖೆಯಲ್ಲಿ ಇಲ್ಲಿಯವರೆಗೆ ರೂರಲ್‌ನಲ್ಲಿರತಕ್ಕ ಕೆಲವು ಎ.ಎನ್.ಎಂ. ಸೆಂಟರುಗಳಲ್ಲಿ ಕೊನೇಪಕ್ಷ ಒಬ್ಬೊಬ್ಬ ಎ ಎನ್ ಎಂ ಕೊಟ್ಟರೂ ಸಹ ಅವರ ಸಮಸ್ಯೆ ಬಗೆಹರಿಯುತ್ತದೆಂದರೆ, ಇಲ್ಲಿಯವರೆಗೂ ಮಾಡಲಿಕ್ಕಾಗಲಿಲ್ಲ. ಒಬ್ಬ ಟೆಕ್ನೀಷಿಯನ್ ಹಾಕಿ ಎಂದರೆ, ಡಿ.ಸಿ. ಯವರಿಗೆ ಹೇಳಿದ್ದೇವೆಂದು ಹೇಳುತ್ತಾರೆ, ಆದರೆ, ಡಿ ಸಿ ಯವರು ಅದು ನಮಗೆ ಸಂಬಂಧ ಇಲ್ಲವೆಂದು ಹೇಳುತ್ತಾರೆ. ಎಕ್ಸರೇ ಯೂನಿಟ್ ಇರುತ್ತದೆ, ಅಲ್ಲಿ ಟೆಕ್ನೀಷಿಯನ್ ಇರುವುದಿಲ್ಲ. ಟೆಕ್ನೀಷಿಯನ್ ಇದ್ದರೆ ಎಕ್ಸರೇ ಯೂನಿಟ್ ಇರುವುದಿಲ್ಲ. ಈ ತರಹ ಸಮಸ್ಯೆಯನ್ನು ನಾವು ಪದೇ ಪದೇ ಸದನದ ಮೂಲಕ ಹೇಳುತ್ತಾ ಹೋದರೆ, ಇದು ಸರ್ಕಾರಕ್ಕೆ ಗೌರವಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಶಿಕ್ಷಣ ಇಲಾಖೆಯಲ್ಲಿ ಇನ್ನೊಂದು ಮಹತ್ತರವಾದಂಥ ಬದಲಾವಣೆ ಏನೆಂದರೆ, ಈ ಸರ್ಕಾರದವರು ಜನರಲ್ ಟ್ರಾನ್ಸ್‌ಫರ್ ಮಾಡುವುದಿಲ್ಲವೆಂದರು. ಆದರೆ, ವರ್ಷವಿಡೀ ಟ್ರಾನ್ಸ್‌ಫರ್ ಆಗುತ್ತಲೇ ಇವೆ. ಅದರಲ್ಲೂ ನನ್ನ ತಾಲ್ಲೂಕಿನಲ್ಲಿ, ಮುಖ್ಯಮಂತ್ರಿಯವರ ಕಛೇರಿಯಲ್ಲಿ 365 ದಿವಸವೂ ಟ್ರಾನ್ಸ್‌ಫರ್ ಆದೇಶ ಬರುತ್ತಲೇ ಇರುತ್ತದೆ. ಇದು ಪಾರದರ್ಶಕ ಸರ್ಕಾರ ಎಂಬುದನ್ನು ಒಪ್ಪಬಹುದೇ ಎನ್ನುವುದನ್ನು ತಾವು ದಯಮಾಡಿ ಯೋಚನೆ ಮಾಡಬೇಕು. ಯಾವ ಆಫೀಸರ್ ಯಾವತ್ತು ಇರುತ್ತಾನೆ, ಯಾವತ್ತು ಹೋಗುತ್ತಾನೆ ಎಂಬುದು ಗೊತ್ತಿಲ್ಲ. ಒಬ್ಬ ಪ್ರೈಮರಿ ಸ್ಕೂಲ್ ಟೀಚರನ್ನು ವರ್ಷದಲ್ಲಿ ಮೂರು ಬಾರಿ ಟ್ರಾನ್ಸ್‌ಫರ್ ಮಾಡಿದರು. ಮಾನ್ಯ ಅಧ್ಯಕ್ಷರಿಗೆ ನಾನು ಜೀರೋ ಹವರ್‌ನಲ್ಲಿ ಕೇಳಿದೆ. ಅವಕಾಶವಾದರೆ ಕೊಡುತ್ತೇನೆ, ಇವತ್ತು, ನಾಳೆ ಕೊಡಲಿಕ್ಕೆ ಆಗುವುದಿಲ್ಲವೆಂದರು. ಇವತ್ತು ಬಜೆಟ್ ಮೇಲೆ ಮಾತನಾಡುವಾಗ ಹೇಳಿದರೆ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲ. ಮೂರು ಬಾರಿ ವರ್ಷದಲ್ಲಿ ವರ್ಗಾವಣೆ ಮಾಡಿದರು. ಇಂತಹ ಅನೇಕ ನ್ಯೂನತೆಗಳನ್ನು ಮಾಡುತ್ತಿದ್ದಾರೆ. ವಿರೋಧ ಪಕ್ಷದಲ್ಲಿ ಯಾರೂ ಶಾಸಕರಾಗಬಾರದೇ, ಅಥವಾ ರೂಲಿಂಗ್‌ಪಾರ್ಟಿಯಲ್ಲಿದವರಿಗೆ ಮಾತ್ರ ಈ ರೀತಿ ನಿಮಗೆ ಅವಕಾಶಗಳಿದೆಯೇ, ಅದನ್ನಾದರೂ ಸರ್ಕಾರ ನೇರವಾಗಿ ಹೇಳಿದರೆ ನಾವು ಅದನ್ನು ಕೇಳುವುದನ್ನು ಬಿಡುತ್ತೇವೆ. ಒಬ್ಬ ಆಫೀಸರ್ ಕೊನೇಪಕ್ಷ ಒಂದೆರಡು ವರ್ಷ ಒಂದೇ ಜಾಗದಲ್ಲಿ ಇದ್ದರೆ ಮಾತ್ರ, ಏನಾದರೂ ಕೆಲಸ ಮಾಡಲಿಕ್ಕೆ ಸಾಧ್ಯ ಆರು ತಿಂಗಳಿಗೊಮ್ಮೆ ವರ್ಗಾವಣೆ ಮಾಡುವುದಾದರೆ ಆ ತಾಲ್ಲೂಕಿನ ಅಭಿವೃದ್ಧಿ ಕೆಲಸಗಳನ್ನು ಹೇಗೆ ನಿರ್ವಹಿಸುವುದಕ್ಕಾಗುವುತ್ತದೆ? ಇದನ್ನು ದಯಮಾಡಿ ತಾವು ಯೋಚನೆ ಮಾಡಬೇಕು. ಮೊನ್ನೆ ಡಿಪಿಸಿನಲ್ಲಿ ಸಿ ಆರ್ ಸಿ ಸೆಂಟರುಗಳಲ್ಲಿ ಮಾಡಿದ್ದಾರೆ. ಕೋ ಆರ್ಡಿನೇಟರ್ ಆಗಿ ಯಾವುದೇ ಅರ್ಹತೆ ಇಲ್ಲದಿರತಕ್ಕಂಥ ವ್ಯಕ್ತಿಯನ್ನು 10 ವರ್ಷ ಡಿ ಪಿ ಸಿ ನಲ್ಲಿ ಸಿ ಆರ್ ಸಿ ಕೋ ಆರ್ಡಿನೇಟರ್ ಆಗಬೇಕಾದರೆ ಪ್ರೈಮರಿ ಸೂಕಲ್ ಟೀಚರ್ ಆಗಿ 10 ವರ್ಷ ಆಗಿರಬೇಕು. ಮತ್ತು ಡಿ ಪಿ ಇ ಪಿ ಟ್ರೈನಿಂಗ್ ಆಗಬೇಕು. ಮತ್ತು ಡಿ ಪಿ ಐ ಹತ್ತಿರ ಒಂದು ಕಮಿಟಿ ಇದೆ. ಆ ಕಮಿಟಿಯಲ್ಲಿ ಇಟ್ಟು ಪಾಸ್ ಮಾಡಬೇಕು. ಇದು ಯಾವುವೂ ಇಲ್ಲದೇ ಇರತಕ್ಕಂಥ ಮೂರು ಜನ ಶಿಕ್ಷಕರನ್ನು ಕೋ ಆರ್ಡಿನೇಟರ್ ಆಗಿ ಮಾಡಿದ್ದಾರೆ. ಅದನ್ನು ಡಿ ಪಿ

ಸಿಯಿಂದ ರದ್ದುಪಡಿಸಿ ಎಂದು ಕಮೀಷನರ್ ಆಫೀಸಿಗೆ ಬರೆದರೆ ಅವರು ರದ್ದುಪಡಿಸಿ ಒಂದು ಲೆಟರ್ ಕಳುಹಿಸಿದ್ದಾರೆ, ಮತ್ತೆ ಎರಡು ದಿವಸವಾದ ಮೇಲೆ ಮತ್ತೆ ಆದೇಶ ಬರುವವರೆಗೂ ತಡೆಹಿಡಿಯುವುದು ಎಂದು ಬರೆಯುತ್ತಾರೆ. ಇವತ್ತು ಅವರು ಹೊರಡಿಸಿರತಕ್ಕ ಸುತ್ತೋಲೆ ಮತ್ತು ನಾರಮ್ಸ್‌ಗೆ ಅನುಗುಣ ಇಲ್ಲದೇ ಇರತಕ್ಕಂಥ ಆದೇಶವನ್ನು ಸರ್ಕಾರದಿಂದ ಮಾಡಿದರೆ, ಈ ಸರ್ಕಾರದ ತೀರ್ಮಾನಕ್ಕೆ, ಇವರು ಮಾಡಿರತಕ್ಕ ಆದೇಶಕ್ಕೆ ಬೆಲೆ ಕೊಡದೇ ಇದ್ದರೆ, ಗೌರವ ಬರುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈ ಸರ್ಕಾರ ವರ್ಗಾವಣೆಯನ್ನು ನಡೆಸುತ್ತಿರತಕ್ಕ ರೀತಿ ನೋಡಿದರೆ, ಇದಕ್ಕಿಂತ ಕೆಳಮಟ್ಟಕ್ಕೆ ಇನ್ನಾವ ಸರ್ಕಾರವೂ ಮಾಡಿರಲಿಲ್ಲವೇನೋ ಎಂಬ ಪರಿಸ್ಥಿತಿ ನಮ್ಮ ಕಣ್ಮುಂದೆ ಇದೆ. ಇದನ್ನು ಮುಖ್ಯಮಂತ್ರಿಯವರು ಏನಾದರೂ ಸರಿಪಡಿಸದೇ ಇದ್ದರೆ, ಮುಂದಿನ ಅಸೆಂಬ್ಲಿಯಲ್ಲಿ ನಮ್ಮದೇ ಆದಂಥ ಹೋರಾಟವನ್ನು ಮಾಡಬೇಕಾಗುತ್ತದೆ. ಇದು ಗೌರವ ಬರತಕ್ಕಂಥಾದ್ದು ಅಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವರ್ಷ ಮಂಡಿಸಿರತಕ್ಕಂಥ ಆಯವ್ಯಯವನ್ನು ದಯಮಾಡಿ ಕಳೆದ ಎರಡು ವರ್ಷ ಯಾವ ರೀತಿ ಬುಕ್ಕಿನಲ್ಲಿ ಮಾತ್ರ ಉಳಿದಿದೆಯೋ ಅದೇ ರೀತಿ ಉಳಿಯಬಾರದು. ಶಾಸಕರಿಗೆ 25 ಲಕ್ಷ ರೂ. ಅನುದಾನ ಎಂದು ಕೊಟ್ಟರು. ಹನ್ನೆರಡೂವರೆ ಲಕ್ಷ ರೂ. ರಿಲೀಸ್ ಮಾಡಿದ್ದಾರೆ, ಇನ್ನೂ ಹನ್ನೆರಡೂವರೆ ಲಕ್ಷ ರೂ. ಕೊಟ್ಟಿಲ್ಲ. ಫೋನ್ ಮಾಡಿ ಕೇಳಿದರೆ 30ಕ್ಕೆ ಕೊಡುತ್ತೇವೆಂದು ಹೇಳುತ್ತಾರೆ, 30ಕ್ಕೆ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. 25 ಲಕ್ಷ ರೂ. ಎಂದು ಹನ್ನೆರಡೂವರೆ ಲಕ್ಷ ರೂ. ಕೊಟ್ಟು ಕ್ಲೋಸ್ ಮಾಡಿದರೆ, ಮುಂದಿನ ವರ್ಷ 40 ಲಕ್ಷ ರೂ. ಎಂದು ಹೇಳಿ 20 ಲಕ್ಷ ರೂ. ಕೊಟ್ಟು, 20 ಲಕ್ಷ ರೂ. ಕೊನೆಯಲ್ಲಿ ಮುಗಿಸಿದರೆ ಅದಕ್ಕೆ ಪ್ರಯೋಜನ ಏನಾಯಿತು? ಆದರಿಂದ, ನೀವೇನು ಬಜೆಟ್‌ನಲ್ಲಿ ಮಂಡಿಸಿರುತ್ತೀರೋ ಅದನ್ನು ಅನುಷ್ಠಾನ ಗೊಳಿಸತಕ್ಕಂಥ ನಿಟ್ಟಿನಲ್ಲಿ ಹೋದಾಗ ಮಾತ್ರ ಆ ಆಯವ್ಯಯಕ್ಕೆ ಬೆಲೆ ಇರುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ದಯಮಾಡಿ, ರಸ್ತೆಗಳು, ಕುಡಿಯುವ ನೀರು, ಅದರಲ್ಲೂ ಕೆ ಪಿ ಟಿ ಸಿ ಎಲ್‌ನಲ್ಲಿತಕ್ಕ ಸಮಸ್ಯೆಯನ್ನು ನಿವಾರಣೆ ಮಾಡಬೇಕು. ಇವತ್ತು ದಿವಸಕ್ಕೆ ಕೊನೇ ಪಕ್ಷ 12 ಗಂಟೆ ಬೇಡ, 8 ಗಂಟೆ ಕೊಟ್ಟರೆ ಸಾಕು ಎಂದು ರೈತರು ಹೇಳುತ್ತಾರೆ. ಕೊಡತಕ್ಕಂಥ ವಿದ್ಯುತ್‌ನಲ್ಲಿ 4 ಗಂಟೆಗೊಂದು ಸಾರಿ ಕಟ್ ಮಾಡಿ ಎಂದು ಹೇಳುತ್ತಾರೆ. ಇವತ್ತು ಒಂದು ಗಂಟೆ ಕಾಲ, ಒಂದೇ ಸಮನೆ ಕೊಡಲಿಕ್ಕಾಗದೇ ಇರತಕ್ಕ ಪರಿಸ್ಥಿತಿ ಕೆಲವು ತಾಲ್ಲೂಕುಗಳಲ್ಲಿ ಮತ್ತು ಕೆಲವು ಜಿಲ್ಲೆಗಳಲ್ಲಿ ಇದೆ. ಇದನ್ನು ನೀವು ಸರಿಪಡಿಸದೆ ರೈತರಿಗೆ, ಇವತ್ತು ಅಕ್ರಮ ಸಕ್ರಮದಲ್ಲಿ ನೀವು ತೆಗೆದುಕೊಂಡಿರತಕ್ಕ ತೀರ್ಮಾನವನ್ನು ಯಾವ ರೈತರೂ ಸಕ್ರಮ ಮಾಡಿಕೊಳ್ಳಲಿಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ರೈತರ ಮುಂದೆ ಇದೆ. ಅದನ್ನು ನೀವೇನಾದರೂ ಯೋಚನೆ ಮಾಡಿದ್ದೀರಾ? ರೈತರಿಗೆ ಮೂಲಭೂತವಾದಂಥ ಸಮಸ್ಯೆಯನ್ನೇ ಬಗೆಹರಿಸಲಿಕ್ಕೆ ಹೋಗದೇ ಇದ್ದರೆ, ನಾವು ರೈತರ ಪರವಾಗಿ ಇದ್ದೇವೆ, ರೈತರ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂಬ ನಿಟ್ಟಿನಲ್ಲಿ ಹೇಳತಕ್ಕಂಥಾದ್ದಕ್ಕೆ ಯಾವುದೇ ತರಹದ ನೈತಿಕ ಹಕ್ಕಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಟ್ಟಾರೆ ಈ ಬಜೆಟ್ ಮಾಮೂಲಿಯಾಗಿರತಕ್ಕಂಥಾದ್ದನ್ನು ಹೊರತುಪಡಿಸಿ ಏನಾದರೂ ಈ ವರ್ಷದಲ್ಲಿ ಪರವಾಗಿಲ್ಲವೆಂಬ ರೀತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೇ, 2002-03ನೇ ಸಾಲಿನ ಮುಂಗಡ ಪತ್ರದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, 2002-03ನೇ ಸಾಲಿನ ಮುಂಗಡಪತ್ರವು ಬಹಳ ನಿರಾಶಾದಾಯಕ ಬಜೆಟ್ ಎಂದು ನಾನು ಕರೆಯಬಯಸುತ್ತೇನೆ. ಇವೊತ್ತು 2000-01, 2001-02ನೇ ಸಾಲಿನಲ್ಲಿ ಮುಂಗಡಪತ್ರದಲ್ಲಿ ಹಲವಾರು ಇಲಾಖೆಗಳ ಬಗ್ಗೆ, ರಾಜ್ಯದ ಅಭಿವೃದ್ಧಿಯ ಬಗ್ಗೆ ಮತ್ತು ಇರುವ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯವನ್ನು ಕೊಟ್ಟಿದ್ದಾರೆ. ಆದರೆ ಇವೊತ್ತಿನ ಬಜೆಟ್‌ನ್ನು ನಾವು ನೋಡಿದಾಗ ಕೃಷಿಗೆ ಜಾಸ್ತಿ ಒತ್ತನ್ನು ಕೊಡುತ್ತಾರೆ ಹಾಗೂ ಕೃಷಿ ಅಭಿವೃದ್ಧಿಗೆ ಹೆಚ್ಚು ಗಮನಕೊಡುತ್ತೇವೆಂದು ಹೇಳಿದ್ದಾರೆ. ಬಜೆಟ್‌ನ ಕೊರತೆಯನ್ನು ನಾವು ನೋಡಿದಾಗ 1375 ಕೋಟಿ ರೂ.ಗಳ ಕೊರತೆಯನ್ನು ಈ ಬಜೆಟ್‌ನಲ್ಲಿ ಕಾಣುತ್ತೇವೆ. ಇದರ ಅರ್ಥ ಏನೆಂದರೆ, ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕಂಥಾದ್ದು ಮತ್ತು ರಾಜ್ಯದ ಆದಾಯವನ್ನು ಹೆಚ್ಚಿಸತಕ್ಕಂಥ ಕೆಲಸ ಆಗಿಲ್ಲವೆಂದು ನಾವು ಹೇಳಬೇಕಾಗುತ್ತದೆ. ಈ ಬಜೆಟ್‌ನ ಬಗ್ಗೆ ಒಂದು ಸುಭಾಷಿತವನ್ನು ಉದ್ಧರಿಸಿ ಹೇಳುವುದಾದರೆ, ಕೊರಡಿಯಲ್ಲಿ ಕರುಗಳನ್ನು ಕಟ್ಟಿದಂಥ ಹಗ್ಗವನ್ನು ಧಾಟಬಾರದು, ರಭಸದಿಂದ ಮಳೆಯಾಗುತ್ತಿರುವ ಸಂದರ್ಭದಲ್ಲಿ ಮನುಷ್ಯರು ಓಡಿ ಹೋಗಬಾರದು, ನೀರಿನಲ್ಲಿ ನಮ್ಮ ನೆರಳನ್ನು ನೋಡಬಾರದು, ಇವುಗಳೆಲ್ಲವೂ ನಿಯಮಕ್ಕೆ ವಿರುದ್ಧವಾದವುಗಳು. ನಮ್ಮ ಬಜೆಟ್‌ನ್ನು ನೋಡಿದಾಗಲೂ ನಮಗೆ ಹಾಗೆ ಅನ್ನಿಸುತ್ತದೆ. ಮೂರು ವರ್ಷಗಳಿಂದ ನಮ್ಮ ಸಣ್ಣ ನೀರಾವರಿ ಮಂತ್ರಿಗಳ ಬಗ್ಗೆ ಮತ್ತು ಜಲಸಂವರ್ಧನೆ ಯೋಜನೆ ಬಗ್ಗೆ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಸಚಿವರು ಯುವಕರು ಮತ್ತು ಅಭಿರುಚಿಯನ್ನು ಹೊಂದಿರುವವರಾಗಿದ್ದಾರೆ. ಅವರಿಗೆ ಕೊಟ್ಟ ಸಣ್ಣ ನೀರಾವರಿ ಖಾತೆಯಲ್ಲಿ ಅವರು ದಕ್ಷತೆಯಿಂದ ಕೆಲಸವನ್ನು ಮಾಡಲು ಹೊರಡಿದ್ದಾರೆ. ಇವೊತ್ತು ಸಣ್ಣ ನೀರಾವರಿಯಲ್ಲಿ ಕಡಿಮೆ ಬಂಡವಾಳದಲ್ಲಿ ಬಡವರಿಗೆ ಒಂದು ಉತ್ತಮ ಬದುಕನ್ನು ಕೊಡಬೇಕೆಂದು ಆಶೆಯನ್ನು ಅವರು ಹೊಂದಿದ್ದರು. ಮಾನ್ಯ ಸಚಿವ ಕುಮಾರ್ ಬಂಗಾರಪ್ಪರವರು ಒಂದು ಸರ್ವೆಯನ್ನು ಕೂಡ ಈ ಕುರಿತು ಮಾಡಿದರು ಹಿಂದೆ ನಮ್ಮ ಪೂರ್ವಜರು, ಅನೇಕ ಜನ ಪಾಳೆಗಾರರು, ರಾಜರುಗಳನ್ನು ಸೇರಿದಂತೆ ಆಳಿದಂಥ ಸಂದರ್ಭದಲ್ಲಿ ಕೆರೆಕಟ್ಟೆಗಳನ್ನು ಅವರು ನಿರ್ಮಾಣ ಮಾಡಿದ್ದರು. ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವ ಹಾಗೆ ಕೋಲಾರದಲ್ಲಿ ಅಂಥ ಬಹಳಷ್ಟು ಕೆರೆಕಟ್‌ಗಳು ನಿರ್ಮಾಣ ಮಾಡಿದ್ದರು. ಸರ್ವೆ ಮಾಡಿದಾಗ ಕನಿಷ್ಟ ನಮ್ಮ ರಾಜ್ಯದಲ್ಲಿ 50 ಸಾವಿರ ಕೆರೆಗಳಿವೆ. ಆದರಲ್ಲಿ ಕನಿಷ್ಟ ಪಕ್ಷ 25 ಸಾವಿರ ಕೆರೆಗಳನ್ನು ಪುನರುಜ್ಜೀವನಗೊಳಿಸಬೇಕು, ಅವುಗಳಲ್ಲಿನ ಹೂಳೆತ್ತುವ ಕೆಲಸವನ್ನು ಮಾಡಿದರೆ, ಆ ಮೂಲಕ ರೈತರ ಹಾಗೂ ಜನಜೀವನದ ಹಲವಾರು ವರ್ಗಗಳನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿದೆ ಎಂಬ ಚಿಂತನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದರು. ಅದು ಬಹಳ ಸ್ವಾಗತಾರ್ಹವಾದ ಕಾರ್ಯ ಎಂದು ನಾವೆಲ್ಲರೂ ಹೇಳಿದ್ದೆವು. ಮೊನ್ನೆ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಹಿರೇಹಳ್ಳ ಪ್ರಾಜೆಕ್ಟ್‌ನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡತಕ್ಕಂಥ ಕಾಲದಲ್ಲಿ ಹಲವಾರು ಯೋಜನೆಗಳ ಬಗ್ಗೆ ಏನು ಚಿಂತನೆಯನ್ನು ನಡೆಸಿದ್ದರು ಅದಕ್ಕೆ, ನಾವುಗಳು ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೆವು. ಅಂಥ ಒಂದು ಕನಸು ನಮ್ಮ ಮುಖ್ಯಮಂತ್ರಿಯವರಲ್ಲಿ ಇದೆ ಎಂಬುದನ್ನು ಅವರು ತೋರಿಸಿದ್ದರು. ಆದರೆ ಸಣ್ಣ ನೀರಾವರಿ ಇಲಾಖೆ ಹಾಗೂ ಜಲಸಂವರ್ಧನೆ ಯೋಜನೆಯನ್ನು ತೆಗೆದುಕೊಂಡಾಗ ಅವರ ಚಿಂತನೆಗೆ ಪೂರಕವಾಗಿ ಅದಕ್ಕೆ ಹಣಕಾಸನ್ನು ಒದಗಿಸಿಕೊಡುವ ಕೆಲಸವನ್ನು ಮಾಡಿಲ್ಲ

ಎಂಬುದು ಸ್ಪಷ್ಟವಾಗುತ್ತದೆ. ಇವೊತ್ತು ನಾವು ಕೇವಲ ಸಾಲಗಳನ್ನು ತೆಗೆದುಕೊಂಡು ಬಂದು, ನಮ್ಮ ರಾಜ್ಯದ ಅಭಿವೃದ್ಧಿಯನ್ನು ಮಾಡುತ್ತೇವೆ ಅಂದರೆ, ಕಷ್ಟವಾಗುತ್ತದೆ. ಇವೊತ್ತು ವಿಶ್ವಬ್ಯಾಂಕ್‌ನವರು, ಹುಡ್ಕೋದಂಥವರು, ಮುಂತಾದ ಆರ್ಥಿಕ ಸಂಸ್ಥೆಗಳು ಕೊಡುವ ಹಣವನ್ನು ಅವರ ಆದೇಶದಂತೆ ನಾವು ಕೆಲಸಕಾರ್ಯಗಳನ್ನು ಕೈಗೊಳ್ಳುವಂತಾಗಿದೆ. ಅವರ ಮಾರ್ಗಸೂಚಿಗಳ ಆಧಾರಮೇಲೆ ನಾವು ಕೆಲಸಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಇವೊತ್ತು ನಮ್ಮ ರಾಜ್ಯದ ಆದಾಯವನ್ನು ಹೆಚ್ಚು ಮಾಡದೇ ಇದ್ದ ಸಂದರ್ಭದಲ್ಲಿ ಆದ್ಯತೆಯ ಕೆಲಸಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದನ್ನು ಬಜೆಟ್ ಒತ್ತಿ ಹೇಳುತ್ತಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಗುಜರಾತ್‌ನಲ್ಲಿ ಜಲಜನಕ ಕಥೆ ಎಂದು ಹೇಳಿ ಒಂದು ಪತ್ರಿಕೆಯಲ್ಲಿನ ಲೇಖನವನ್ನು ನಾನು ನೋಡಿದ್ದೇನೆ. ಅಲ್ಲಿ ಹಮ್ಮಿಕೊಂಡ ಅರ್ಥಪೂರ್ಣ ಕಾರ್ಯಕ್ರಮಗಳ ಬಗ್ಗೆ ಅದರಲ್ಲಿ ವಿವರಗಳಿದ್ದುವು. ಜಲಜನಕ ಕಥೆಯ ವಿವರಗಳನ್ನು ನೀಡಿದ ಡಾ॥ ರಾಜೇಂದ್ರ ಸಿಂಗ್ ಎನ್ನುವವರು ಅದರಲ್ಲಿನ ಕಾರ್ಯವಿವರಗಳು ಸಮಾಜಕ್ಕೆ ಹೇಗೆ ಊರುಗೋಲಾಗಿ ಪರಿಣಮಿಸಿತು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಸುಮಾರು ಎಂಟು ವರ್ಷಗಳ ಹಿಂದೆ ಗುಜರಾತ್‌ನಲ್ಲಿ ಐದು ನದಿಗಳು ಬತ್ತಿ ಹೋಗಿದ್ದವಂತೆ. ಅಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತಿತರ ನೀರಿನ ಸಮಸ್ಯೆಗಳು ಮತ್ತು ಮಳೆಯ ಅಂಕಿಅಂಶಗಳನ್ನು ಪರಿಶೀಲಿಸಿದಾಗ, ಅಲ್ಲಿ ಸತತವಾಗಿ ಬರಗಾಲವನ್ನು ಕಾಣುತ್ತೇವೆ. ಅದನ್ನು ಗಮನಿಸಿದ ಮಹಾನ್ ನಾಯಕ ಡಾ॥ ರಾಜೇಂದ್ರ ಸಿಂಗ್‌ರವರು ಚಿಕ್ಕಚಿಕ್ಕದಾದ ಬ್ಯಾರೇಜುಗಳನ್ನು ಮತ್ತು ಬಂಡ್‌ವರ್ಕ್‌ಗಳನ್ನು ರೈತರ ಸಹಯೋಗದಿಂದ ಅಲ್ಲಿ ನಿರ್ಮಾಣ ಮಾಡಿದಂಥ ಒಂದು ಪತ್ರವನ್ನು ನಾವು ನೋಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಅವರು ಈ ಅಭೂತಪೂರ್ವ ಕೆಲಸವನ್ನು ಮಾಡಿದ ಮೇಲೆ ಅದರ ಪರಿಣಾಮವಾಗಿ ಬತ್ತಿದ ಐದು ನದಿಗಳು ಇವೊತ್ತು ತುಂಬಿ ಹರಿಯುತ್ತಿವೆ ಎಂದು ತಿಳಿದು ಬರುತ್ತದೆ. ಇದರ ಪರಿಣಾಮವಾಗಿ ಅಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಸಾಧ್ಯವಾಗಿದೆ, ಕುಡಿಯುವ ನೀರನ್ನು ಕೊಡಲು ಸಾಧ್ಯವಾಗಿದೆ, ಜಲಮೂಲದಿಂದ ಕೃಷಿಯ ಉತ್ಪಾದನೆಯನ್ನು ಜಾಸ್ತಿ ಮಾಡಲು ಸಾಧ್ಯವಾಗಿದೆ, ಎಂಬ ಒಂದು ಚಿಂತನೆಯನ್ನು ನಮ್ಮ ರಾಜ್ಯದಲ್ಲಿ ತರಲು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಪ್ರಯತ್ನಿಸುತ್ತಾರೆಂಬ ಮಹದಾಶೆಯನ್ನು ನಾನು ಇಟ್ಟುಕೊಂಡಿದ್ದೆನು. ಆದರೆ ಅದು ಇವರಿಂದ ಆಗುತ್ತಾ ಇಲ್ಲ. ಇವರು ಸಾಲ ತೆಗೆದುಕೊಂಡೇ ಯೋಜನೆಗಳನ್ನು ಮಾಡಬೇಕು, ಸಾಲ ಕೊಡತಕ್ಕಂಥವರ ನಿರ್ದೇಶನ ಮತ್ತು ಆದೇಶಗಳ ಮೇಲೆ ನಾವು ಕೆಲಸ ಮಾಡಬೇಕು, ಮತ್ತು ಯೋಜನೆಗಳನ್ನು ನಾವು ಪ್ರಾರಂಭ ಮಾಡುವುದಾದರೆ, ಆರ್ಥಿಕವಾಗಿ ನಾವು ಸ್ವಾವಲಂಬಿಗಳಾಗುತ್ತೇವೆ ಎಂದು ಹೇಳುವುದಲ್ಲಿ ಯಾವ ಅರ್ಥವೂ ಇಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ನಮ್ಮ ಬಹಳಷ್ಟು ಜನ ನಾಯಕರುಗಳಾದ ಮಾನ್ಯ ಸಿಂಧ್ಯರವರು, ಜಗದೀಶ ಶೆಟ್ಟರ್‌ರವರು, ಎಸ್.ಎಸ್. ಪಾಟೀಲ್‌ರವರು ಬಹಳ ಚೆನ್ನಾಗಿ ತಮ್ಮ ಮಾತನ್ನು ಸದನದಲ್ಲಿ ಆಡಿದ್ದಾರೆ. ಅದರ ವಿವರಕ್ಕೆ ನಾನು ಹೋಗುವುದಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ಹಿರೇಹಳ್ಳ ಪ್ರಾಜೆಕ್ಟ್‌ನ್ನು ರಾಷ್ಟ್ರಕ್ಕೆ ಅರ್ಪಿಸಕ್ಕಂಥ ಸಂದರ್ಭದಲ್ಲಿ ನಮ್ಮ ಭಾರಿ ನೀರಾವರಿ ಮಂತ್ರಿಗಳವರಾದ ಶ್ರೀ ಹೆಚ್.ಕೆ. ಪಾಟೀಲರು ಒಂದು ಮಾತನ್ನು ಹೇಳಿದರು. ಇರತಕ್ಕಂಥ ಹಿರೇಹಳ್ಳ ಡ್ಯಾಂನ್ನು ಒಂದು ಮೀಟರ್‌ನಷ್ಟು ಏರಿಸುತ್ತೇವೆ, ಎಂದು ಸ್ಥಳೀಯವಾಗಿ ಒಂದು ಆದೇಶವನ್ನೂ ಕೂಡ

ಕೊಟ್ಟರು. ಇನ್ನೂ ಹತ್ತು ಸಾವಿರ ಎಕರೆ ಪ್ರದೇಶಕ್ಕೆ ನೀರು ಒದಗಿಸಲು ಕ್ರಮ ಜರುಗಿಸುತ್ತೇವೆಂದು ಹೇಳಿದ್ದರು. ಆ ಕೆಲಸ ಏನಾಗಿದೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಉತ್ತರದಲ್ಲಿ ನಾನು ನಿರೀಕ್ಷೆ ಮಾಡುತ್ತೇನೆ. ಅಂದು ನಾವು ಆ ಪ್ರದೇಶದ ಶಾಸಕರುಗಳು, ಎಂಪಿಗಳವರು, ಮುಂತಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಾಯಪೂರ್ವಕವಾಗಿ ಈ ಕುರಿತು ವಿಜ್ಞಾಪಿಸಿಕೊಂಡಿದ್ದೆವು. ನಮ್ಮ ಹೊಸ ಜಿಲ್ಲೆ ಕೊಪ್ಪಳದ ಅಭಿವೃದ್ಧಿಗೆ ತಾವುಗಳು ಒತ್ತು ಕೊಡಬೇಕಾಗಿದೆ, ಇಲ್ಲಿಗೆ ಹೆಚ್ಚು ಹೆಚ್ಚು ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುತ್ತಾರೆಂಬ ಭಾವನೆ ಮತ್ತು ನಿರೀಕ್ಷೆಯಲ್ಲಿ ನಾವಿದ್ದೇವೆ, ತಾವುಗಳು ಅತ್ಯಂತ ಪ್ರಗತಿಪರ ಮುಖ್ಯಮಂತ್ರಿಗಳಾಗಿದ್ದೀರಿ ಎಂದು ಕೇಳಿಕೊಂಡಾಗ, ಕೊಪ್ಪಳಕ್ಕೆ 100 ಕೋಟಿ ರೂ.ಗಳ ಒಂದು ಪ್ಯಾಕೇಜ್ ಪ್ರಾಜೆಕ್ಟ್‌ನ್ನು ಯೋಜನೆಯನ್ನು ಅನೌನ್ಸ್ ಮಾಡುತ್ತೇವೆ ಎಂದು ಅವರು ಹೇಳಿದ್ದರು. ನಮ್ಮ ಜಿಲ್ಲಾ ಮಂತ್ರಿಯವರಾದ ಮಾನ್ಯ ಮಲ್ಲಿಕಾರ್ಜುನ ನಾಗಪ್ಪರವರೂ ಕೂಡ ಇಲ್ಲಿ ಉಪಸ್ಥಿತರಿದ್ದಾರೆ. 15 ದಿನಗಳ ಹಿಂದೆ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳಿಗೆ ಒಂದು ಸಂದೇಶವನ್ನೂ ಕೂಡ ಕೊಟ್ಟಿದ್ದರು. ಮುಖ್ಯಕಾರ್ಯದರ್ಶಿ ಮತ್ತು ಜಿಲ್ಲಾಧಿಕಾರಿಗಳಿಗೆ, ತಾಲ್ಲೂಕುವಾರು ಅಭಿವೃದ್ಧಿಪರ ಯೋಜನೆಯ ಕರಡು ಪ್ರಸ್ತಾವನೆಯನ್ನು ಕಳುಹಿಸಿಕೊಡಿ ಎಂದು ಸರಕಾರದ ಮಟ್ಟದಲ್ಲಿ ಅದನ್ನು ತರಿಸಿಕೊಂಡಿದ್ದಾರೆ. ಆದರೆ ಅದರ ವಿಚಾರದ ಬಗ್ಗೆ ಬಜೆಟ್ ನೋಡಿದರೆ ಏನೂ ಕಾಣಿಸುತ್ತಾ ಇಲ್ಲ. ಅದಕ್ಕೆ ಒತ್ತು ಕೊಡತಕ್ಕಂಥ ಯಾವ ವಿಚಾರವು ಪ್ರಸ್ತಾಪವಾಗಿಲ್ಲ. ಅದಕ್ಕಾಗಿ ಮುಖ್ಯಮಂತ್ರಿಯವರು ಏನು ಘೋಷಣೆ ಮಾಡಿದ್ದಾರೆ, ಆ ಭಾಗ ಹಿಂದುಳಿದಿದ್ದು ಅದರ ಅಭಿವೃದ್ಧಿಯಾಗ ಬೇಕೆಂದು ಅವರು ಬಯಸಿದ್ದಾರೆ ಅದನ್ನು ಕಾರ್ಯಗತ ಮಾಡಬೇಕು. ಯಾವ ತರಹ ಮಂಡ್ಯ ಜಲ್ಲೆಗೆ 300 ಕೋಟಿ ರೂ.ಗಳ ಯೋಜನೆಯನ್ನು ಇಟ್ಟುಕೊಂಡಿದ್ದಾರೆ, ಅದೇ ರೀತಿ ಕೊಪ್ಪಳ ಜಿಲ್ಲೆಗೂ ಕೂಡ ಒತ್ತನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇನೆ. ಕೊಪ್ಪಳ, ಗದಗ, ಚಾಮರಾಜನಗರ ಉಡುಪಿ, ಮುಂತಾಗಿ ಹೊಸದಾದ ಏಳು ಜಿಲ್ಲೆಗಳನ್ನು ಹಿಂದೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಇದ್ದಂಥ ಕಾಲದಲ್ಲಿ ಮಾಡಿದ್ದರು. ಆ ಹೊಸ ಜಿಲ್ಲೆಗಳಿಗೆ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿರುವುದನ್ನು ಬಜೆಟ್‌ನಲ್ಲಿ ನೋಡಲು ಸಾಧ್ಯವಿಲ್ಲ. ಅದಕ್ಕೋಸ್ಕರ ಹೊಸ ಜಿಲ್ಲೆಗಳ ಅಭಿವೃದ್ಧಿಗಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು. ಇವೊತ್ತು ಹಲವಾರು ವಿಚಾರಗಳ ಬಗ್ಗೆ ಮಾನ್ಯ ಸದಸ್ಯರಾದ ಸುಬ್ಬಾರೆಡ್ಡಿಯವರು ಹೇಳಿದರು. ಡಿಸ್ಟ್ರಿಕ್ ಕೋರ್ಟ್‌ನಲ್ಲಿ ಏನೇನು ಸೌಲಭ್ಯಗಳು ಇರಬೇಕು ಎಂಬುದ್ನು ಹೇಳಿದ್ದಾರೆ. ಹಾಗೆಯೇ ಲೇಬರ್‌ಕೋರ್ಟ್‌ನ ಸೌಲಭ್ಯಗಳ ಬಗ್ಗೆಯೂ ಹೇಳಿದ್ದಾರೆ. ಅಂಥ ಅನೇಕ ಸೌಲಭ್ಯಗಳನ್ನು ಹೊಸ ಜಿಲ್ಲೆಗಳು ಇನ್ನೂ ಪಡೆಯ ಬೇಕಾಗಿದೆ. ಅಂಥ ಯಾವ ವಿಚಾರಗಳನ್ನೂ ಅವರು ಬಜೆಟ್‌ನಲ್ಲಿ ಪ್ರಸ್ತಾಪಿಸಿಲ್ಲ. ನಾವು ಆ ಕುರಿತು ನಿರೀಕ್ಷೆಯನ್ನು ಮಾಡುತ್ತೇವೆ ಇವೊತ್ತು ನಮ್ಮ ಭಾಗದಲ್ಲಿ ಸಿಂಗಟಾಲೂರು ಯೋಜನೆಯಿಂದ ರಾಯಚೂರು, ಗದಗ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳು ಜನರು ರೈತರು ಬಹಳ ಆತಂಕದಿಂದ ನೋಡುತ್ತಾ ಇದ್ದಾರೆ. ಹಾಗೆ ನಮ್ಮ ಸರಕಾರ ಇದ್ದಾಗ 7.6ಟಿಎಂಸಿ ಯನ್ನು ಅದಕ್ಕೆ ಅಲೋಕೇಷನ್ ಮಾಡಿದ್ದರು. ಸುಮಾರು 40 ಸಾವಿರ ಎಕರೆ ನೀರಾವರಿ ಒಳಪಡುವ ಯೋಜನೆಯನ್ನು ಪ್ರಾರಂಭ ಮಾಡಿದರು. ಈ ಸರ್ಕಾರ ಬಂದ ಮೇಲೆ ಮಾನ್ಯ ಹೆಚ್‌ಕೆ ಪಾಟೀಲರು ಒಂದು ಚಿಂತನೆ ಮಾಡಿದರು. ಬಹಳ ಹೆಮ್ಮೆಯಿಂದ ನಾನು ಈ ಮಾತು ಹೇಳುತ್ತೇನೆ. ಅವರು ಅಂಕಿಅಂಶಗಳನ್ನು ತರಿಸಿಕೊಂಡರು. ಕಳೆದ 40 ವರ್ಷದಿಂದ ಪ್ರತಿವರ್ಷ ಸರಾಸರಿ ಎಷ್ಟು ನೀರು ಎಕ್ಸಸ್ ಆಗಿ ನದಿ ಮೂಲಕ ಆಂಧ್ರಕ್ಕೆ

ಹೋಗುತ್ತದೆಂಬುದನ್ನು ಅವರು ಸರ್ವೆ ಮಾಡಿಸಿದರು. ಅದು 100 ರಿಂದ 60, 70 ಟಿಎಂಸಿಗಳಷ್ಟು ಎಕ್ಸೆಸ್ ನೀರು ಪ್ರತಿವರ್ಷ ನದಿ ಮೂಲಕ ಸಮುದ್ರಕ್ಕೆ ಹೋಗುತ್ತದೆ ಎಂಬುದನ್ನು ಅವರು ಗಮನದಲ್ಲಿಟ್ಟುಕೊಂಡು ಸಿಂಗಟಾಲೂರು ಪ್ರಾಜೆಕ್ಟನ್ನು ಅನೌನ್ಸ್ ಮಾಡಿದರು. ಅದಕ್ಕಾಗಿ 18.6 ಟಿಎಂಸಿ ನೀರಿನಿಂದ 1.67 ಲಕ್ಷ ಎಕರೆ ನೀರಾವರಿ ಮಾಡಬೇಕೆಂದು ಒಂದು ಬೃಹತ್ ಯೋಜನೆಯನ್ನು ಕೈಗೊಂಡರು. ಅದಕ್ಕೆ ಪೂರ್ವ ತಾಂತ್ರಿಕ ಸಮಿತಿಯಿಂದ ಒಪ್ಪಿಗೆ ಪಡೆದುಕೊಂಡಿದ್ದರು. ಆಡಳಿತಾತ್ಮಕ ಅನುಮತಿಯನ್ನೂ ಪಡೆದಿದ್ದರು, ಸಚಿವ ಸಂಪುಟದ ಒಪ್ಪಿಗೆಯನ್ನೂ ಪಡೆದಿದ್ದರು ಮತ್ತು ತಜ್ಞರಾದ ಬಿಸಿ ಅಂಗಡಿಯವರು ಒಂದು ವರದಿ ಕೊಟ್ಟಿದ್ದರು ಇಷ್ಟು ಟಿಎಂಸಿ ನೀರನ್ನು ನೀವು ಬಳಕೆ ಮಾಡಿಕೊಳ್ಳಬಹುದು ಅಂತ. ಆದಾಗ್ಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೆಸಿ ರೆಡ್ಡಿ ಎಂಬುದರ ಆಯೋಗವನ್ನು ರಚನೆ ಮಾಡಿದರು. ಕೆಸಿ ರೆಡ್ಡಿ ಆಯೋಗದ ವರದಿ ಬಂದ ನಂತರ ಸಿಂಗಟಾಲೂರು ಯೋಜನೆ ಅಷ್ಟು ಸಮಂಜಸವಲ್ಲ ಕೆಳಭಾಗದ ರೈತರಿಗೆ ಇದರಿಂದ ಹಾನಿಯಾಗುತ್ತದೆಂದು ವರದಿ ಬಂದ ಮೇಲೆ ಇವತ್ತು ಎಲ್ಲಾ ಕಡೆ ಚಳವಳಿ ಪ್ರಾರಂಭವಾಗಿವೆ. ರಾಯಚೂರಿನವರಿಗೆ ನಮಗೆ ನೀರು ಕಡಿಮೆಯಾಗುತ್ತದೆಂದು ಆತಂಕ ಆಗಿದೆ. ಬಳ್ಳಾರಿಯವರಿಗೆ ಕೂಡ ನೀರು ಕಡಿಮೆಯಾಗುತ್ತದೆ ಎಂಬ ಆತಂಹ ವ್ಯಕ್ತ ಪಡಿಸುತ್ತಾರೆ ಮತ್ತು ನಾವು ಕೊಪ್ಪಳದವರು ಹಿಂದೆ ಪ್ರಾಜೆಕ್ಟ್ ನಿರ್ಮಾಣವಾಗುವ ಕಾಲಕ್ಕೆ ಹಡಗಲಿ ಮತ್ತು ಕೊಪ್ಪಳ ಕ್ಷೇತ್ರದವರು 30 ರಿಂದ 35 ಗ್ರಾಮಗಳನ್ನು ಕಳೆದುಕೊಂಡಿದ್ದೇವೆ. ಆ ಸಂದರ್ಭದಲ್ಲಿ ತ್ಯಾಗ ಮಾಡಿದ್ದೇವೆ, ಮನೆ ಮಠಗಳನ್ನು ಕಳೆದುಕೊಂಡಿದ್ದೇವೆ. ಆ ಪ್ರಾಜೆಕ್ಟ್ ಆಗಲಿ, ಕೆಳ ಭಾಗದವರೂ ರೈತರು, ನಾವೂ ರೈತರು ಎಂಬ ಆಶಯದಿಂದ ನಾವು ಆ ಸಂದರ್ಭದಲ್ಲಿ ತ್ಯಾಗ ಮಾಡಿದೆವು. ಇವತ್ತು ನಮಗೆ 60 ರಿಂದ 70 ಟಿಎಂಸಿ ನೀರೇನಿದೆ ಅದನ್ನು ಬಳಸಿಕೊಳ್ಳಲು ಏನು ಅವಕಾಶವಿದೆ ಅದಕ್ಕೆ ಮಾನ್ಯ ಹೆಚ್‌ಕೆ ಪಾಟೀಲರು ಮನಸು ಮಾಡಿರೂ ಕೂಡ ಮುಖ್ಯಮಂತ್ರಿಗಳು ಕೆಸಿ ರೆಡ್ಡಿ ಎಂಬುದರ ಸಮಿತಿ ರಚನೆ ಮಾಡಬೇಕಾದ ಅವಶ್ಯಕತೆ ಏನಿತ್ತು ಎಂದು ಒಂದು ಪ್ರಶ್ನೆಯನ್ನು ನಾವು ಹಾಕಬೇಕಾಗುತ್ತದೆ. ಏಕೆಂದರೆ ಇಲ್ಲಿ ಪತ್ರಿಕೆಯಲ್ಲಿ ಬಂದಿದೆ ಎಚ್‌ಕೆ ಮತ್ತು ಕೃಷ್ಣರವರ ತಿಕ್ಕಾಟ ಅಂತ. ಒಬ್ಬರು ಮಾಡಬೇಕೆಂದು ಇನ್ನೊಬ್ಬರು ಮಾಡಬಾರದು ಎಂದು ಏನಾದರೂ ಭಿನ್ನಾಭಿಪ್ರಾಯವಿದೆಯೋ ಎಂಬುದನ್ನು ಅವರಿಂದ ಸ್ಪಷ್ಟೀಕರಣ ಕೇಳಲು ಬಯಸುತ್ತೇವೆ.

ಶ್ರೀ ಎನ್.ಎಸ್. ಬೋಸರಾಜು (ಮಾನ್ವಿ) : ಅಧ್ಯಕ್ಷರೇ, ನನ್ನ ಸ್ನೇಹಿತರು ಹೇಳಿದಂತೆ ಸಿಂಗಟಾಲೂರು ವಿಷಯದಲ್ಲಿ ನಮ್ಮ ರಾಯಚೂರು, ಕೊಪ್ಪಳಗಳ ರೈತರ ಹಾಲಿ ತುಂಗಭದ್ರಾ ಅಚ್ಚುಕಟ್ಟಿನಲ್ಲಿರುವಂತಹ ಒಂಭತ್ತೂವರೆ ಲಕ್ಷ ಎಕರೆಗೆ ತೊಂದರೆಯಾಗಬಹುದು ಎಂಬ ಅನುಮಾನ ಬಂದ ಕೂಡಲೇ ಸಹಜವಾಗಿ ಮುಖ್ಯಮಂತ್ರಿಗಳಿಗೆ ರೈತರು ಒಟ್ಟಾರೆ ಸೇರಿ ಮಾತನಾಡಿದಂತಹ ಸಂದರ್ಭದಲ್ಲಿ ತಜ್ಞ ಸಮಿತಿಯ ಆಶ್ವಾಸನೆ ಅವರು ನೀಡಿದರು. ಅವರಿಂದ ಒಂದು ವರದಿ ತರಿಸಿ ಕೊಂಡು ಹಾಲಿ ತುಂಗಭದ್ರ ಅಚ್ಚುಕಟ್ಟುದಾರರಿಗೆ ಯಾವುದೇ ತೊಂದರೆಯಾಗದಂತೆ ವಿಷಯವನ್ನು ಸರಿಪಡಿಸುವುದಕ್ಕಾಗಿ ಕೆಸಿ ರೆಡ್ಡಿಯವರ ಸಮಿತಿ ರಚನೆ ಮಾಡಿರುವುದು ಈಗಾಗಲೇ ಎಲ್ಲರ ಗಮನದಲ್ಲಿದೆ. ಆ ವರದಿ ಬಂದನಂತರ ಸಂಬಂಧಪಟ್ಟ ಅಚ್ಚುಕಟ್ಟಿನ ರೈತರು ಹಾಗೂ ಜನಪ್ರತಿನಿಧಿಗಳ ಜೊತೆ ಮಾತನಾಡಿ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಸರಿಪಡಿಸುತ್ತೇನೆಂದು ಅವರು ಈಗಾಗಲೇ ವಾಗ್ದಾನ ಮಾಡಿದ್ದಾರೆ. ಹಾಗಾಗಿ ಮುಖ್ಯಮಂತ್ರಿಗಳು ಕೆಸಿ ರೆಡ್ಡಿ ಸಮಿತಿ ರಚನೆ ಮಾಡಿದ್ದು ಅಲ್ಲಿನ ರೈತರ ಹಿತದೃಷ್ಟಿಯಿಂದ, ಅಲ್ಲಿನ ಸಮಸ್ಯೆಯನ್ನು

ಸರಿಪಡಿಸುವ ದೃಷ್ಟಿಯಿಂದ ಮಾಡಿದ್ದೇ ಅಲ್ಲಿನ ರೈತರ ಹಿತದೃಷ್ಟಿಯಿಂದ, ಹೊರತು ಯಾರಿಗೂ ತೊಂದರೆ ಕೊಡಬೇಕೆಂದು ಅಲ್ಲ. ಇದನ್ನು ನಮ್ಮ ಸ್ನೇಹಿತರು ದಯವಿಟ್ಟು ಗಮನಿಸಬೇಕು.

ಶ್ರೀ ಕರಡಿ ಸಂಗಣ್ಣ : ಮಾನ್ಯ ಬೋಸರಾಜು ಅವರ ಉತ್ತರ ಅವರ ಸ್ಯಾಟಿಸ್‌ಫ್ಯಾಕ್ಷನ್‌ಗಾಗಿ ಕೊಳ್ಳಬಹುದು. ನೀರಾವರಿ ಮಂತ್ರಿಗಳೋ ಮಾನ್ಯ ಮುಖ್ಯಮಂತ್ರಿಗಳೋ ಉತ್ತರ ಕೊಟ್ಟಿದ್ದಿದ್ದರೆ ಚೆನ್ನಾಗಿತ್ತು. ಹಿರಿಯ ಮಂತ್ರಿಗಳ್ಯಾರಿಗೂ ಈ ಕಡೆ ಲಕ್ಷ್ಯ ಇಲ್ಲ, ಮಾನ್ಯ ಚಿಮ್ಮನಕಟ್ಟಿಯವರು ನಮ್ಮ ಭಾಗದವರು ಎಂದು ತೃಪ್ತಿಪಟ್ಟುಕೊಳ್ಳಬೇಕು. ಆತಂಕ ಏನಾಗಿದೆ ಅಂದರೆ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿಗಳ ಜನರಿಗೆ ತೊಂದರೆಯಾಗುತ್ತದೆ ಎಂಬ ಭಾವನೆ ಸಹಜವಾಗಿ ಬಂದಿದೆ. ನಾವೂ ಬಯಸುವುದು, ಎಚ್‌ಕೆಯವರು ಏನು ಮಾಡಿದ್ದಾರೆ ಅದರ ಸ್ಟೋರೇಜ್‌ನ್ನು ಹೆಚ್ಚಿಸುವ ಕೆಲಸವಾಗಬೇಕು ಮತ್ತು ಎಲ್ಲೆಲ್ಲಿ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡಲು ಸಾಧ್ಯವಿದೆಯೋ ಅವುಗಳ ಲೊಕೇಷನ್ ಮಾಡಿ ಸಿಂಗಟಾಲೂರು ಪ್ರಾಜೆಕ್ಟ್ ಜೊತೆ ಜೊತೆಗೆ ಬ್ಯಾಲೆನ್ಸಿಂಗ್ ರಿಸರ್ವಾಯರ್‌ಗಳನ್ನೂ ಸರ್ಕಾರ ಕೈಗೆತ್ತಿಕೊಂಡರೆ ಈ ಆತಂಕವನ್ನು ನಿವಾರಣೆ ಮಾಡಲು ಸಾಧ್ಯವಿದೆ. ಮತ್ತು ಕೊಪ್ಪಳಕ್ಕೆ ಇದರಲ್ಲಿ ಅನ್ಯಾಯವಾಗಿದೆ. ಸುಮಾರು 8 ಸಾವಿರ ಎಕರೆ ಇವರು ತೂರಿಸಿದ್ದಾರೆ ಅದು ಹಿಂದೆ ನಾವು ತ್ಯಾಗ ಮಾಡಿದ ಕ್ಷೇತ್ರ ಮತ್ತು ವಯಬಿಲಿಟಿ ಇರುವಂಥದ್ದು, ನಮ್ಮ ಪಕ್ಕದಲ್ಲೇ ನದಿ ಹರಿಯುತ್ತದೆ, ಕೆಲವು ಹಳ್ಳಿಗಳು ನದಿ ದಂಡೆಯಲ್ಲೇ ಇವೆ ಗದಗ್‌ನಂತಹ ಪ್ರದೇಶಕ್ಕೆ ಇವತ್ತು ಮೂರು ಲಿಫ್ಟ್ ಮಾಡುತ್ತಿದ್ದಾರೆ, ಅದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಅತಿಪಕ್ಕದಲ್ಲೇ ಇರುವವರನ್ನು ನಿರ್ಲಕ್ಷಿಸುವುದನ್ನು, ಇದರ ಅಲೋಕೇಷನ್, ಡಿಸೈನ್ ಇವನ್ನೆಲ್ಲಾ ನೋಡಿದರೆ ಕೆಟ್ಟದು ಅನಿಸುತ್ತದೆ. ಅದಕ್ಕೆ ನಮ್ಮ ಹೋರಾಟ ಏನೆಂದರೆ ಕನಿಷ್ಟ ನಮ್ಮ ಕೊಪ್ಪಳ ಕ್ಷೇತ್ರದಲ್ಲೇ ಬೆಳಗಟ್ಟಿ ಮತ್ತು ರಗನಾತನಹಳ್ಳಿ ಬಳಿ ರಿಸರ್ವಾಯರ್ ಮಾಡಲು ಅವಕಾಶ ಇದೆ. ಅಲ್ಲಿ ಮೂರು ಟಿಎಂಸಿ ನೀರನ್ನು ಸ್ಟೋರೇಜ್ ಮಾಡಿ, ಲಿಫ್ಟ್ ಮಾಡಿದರೆ ಸಂಪೂರ್ಣ ನಮ್ಮ ಭಾಗಕ್ಕೆ ನೀರಾವರಿ ಕೊಡಲು ಸಾಧ್ಯವಿದೆ. ಅದಕ್ಕಾಗಿ ನನ್ನ ಒತ್ತಾಯವಿದೆ. ಇವತ್ತು ಸಿಂಗಟಾಲೂರಿಗೆ ಅಲೋಕೇಷನ್ ಬಹಳ ಕಡಿಮೆ ಇದೆ. ನನ್ನ ಕ್ಷೇತ್ರಕ್ಕೆ ಅನ್ಯಾಯವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ಸಿಂಗಟಾಲೂರು ಪ್ರಾಜೆಕ್ಟನ್ನು ತ್ವರಿತವಾಗಿ ತೆಗೆದುಕೊಳ್ಳುವ ಕಾರ್ಯಕ್ರಮ ಆಗಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಭಾರಿ ನೀರಾವರಿ ಸಚಿವರು ಜಿಲ್ಲೆಯವರನ್ನೆಲ್ಲಾ ಕರೆಸಿ ಏನು ಮಾಡಲು ಸಾಧ್ಯವಿದೆ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅದಲ್ಲದೆ, ಇವತ್ತು ರೋಡ್ಸ್ ಬಗ್ಗೆ. ಸ್ಟೇಟ್ ಹೈವೇಗಳ ಬಗ್ಗೆ ಡಿಸ್ಟ್ರಿಕ್ಟ್ ಪ್ಯಾಕೇಜ್‌ನ್ನು ಹಿಂದೆ ಎಲ್ಲಾ ಜಿಲ್ಲೆಗಳಲ್ಲೂ ಸರ್ಕಾರ ಮಾಡಿತ್ತು ಆದರೆ ಕೊಪ್ಪಳ ಮತ್ತು ಉಡುಪಿ ಜಿಲ್ಲೆಗಳಿಗೆ ಅನ್ಯಾಯವಾಗಿದೆ. ಒಂದು ಕಿಮೀ ಕೂಡ ರಿಕಾರ್ಪೆಟ್ ನಮ್ಮಲ್ಲಿ ಪ್ರಪೋಸ್ ಮಾಡಿಲ್ಲ. ಅಧಿವೇಶನದಲ್ಲಿ ನಾವು ಎರಡು ಕಡೆ ಪ್ರಸ್ತಾಪ ಮಾಡಿದೆವು. ಅಧಿಕಾರಿಗಳ ಮಟ್ಟದಲ್ಲಿ ಮಾನ್ಯ ಲೋಕೋಪಯೋಗಿ ಸಚಿವ ಧರ್ಮಸಿಂಗ್‌ಅವರು ಡೈರೆಕ್ಷನ್ ಕೂಡ ಕೊಟ್ಟರು. ಅದನ್ನು ರೀಎಸ್ಟಿಮೇಟ್ ಮಾಡಿಸಿ ಅದಕ್ಕೆ ಪ್ರಾವಿಜನ್ ಮಾಡುತ್ತೇವೆ ಎಂದು ಹೇಳಿದರು. ರೀಎಸ್ಟಿಮೇಟ್ ಕಾರ್ಯ ಇವತ್ತು ಸೆಕ್ರೆಟರಿಯವರ ಮಟ್ಟಕ್ಕೆ ಬಂದಿದೆ. ಮಾನ್ಯ ಲೋಕೋಪಯೋಗಿ ಸಚಿವರು ಅನ್ಯಾಯವನ್ನು ಸರಿಪಡಿಸಬೇಕಾಗುತ್ತದೆ. ಏಕೆಂದರೆ ಡಿಸ್ಟ್ರಿಕ್ಟ್ ಪ್ಯಾಕೆಜ್ ಕೆರದ ಮೇಲೆ ಮುಂದಿನ

ಮೂರು ವರ್ಷ ಏನೂ ಮಾಡಲು ಸಾಧ್ಯವಿಲ್ಲ. ಇವತ್ತು ಸ್ಟೇಟ್‌ಹೈವೆ ಮೇಲೆ ಚಲಿಸಲು ಸಾಧ್ಯವಿಲ್ಲ. ಈ ಅನ್ಯಾಯವನ್ನೂ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತಾ, ಇನ್ನು ವಿದ್ಯುಚ್ಛಕ್ತಿ ಬಗ್ಗೆ, ಅಕ್ರಮ ಸಕ್ರಮ ಮಾಡಲು 6ನೇ ತಾರೀಖು ಕೊನೇ ಡೇಟ್ ಎಂದು ಕೊಟ್ಟಿದ್ದೀರಿ, 6ರ ನಂತರ ರೈತನನ್ನ ಜೈಲಿಗೆ ಹಾಕುವ ಕಾರ್ಯಕ್ರಮವನ್ನು ಆಕ್ಟ್‌ನಲ್ಲಿ ತಂದಿದ್ದೀರಿ. ಇದು ಬಹಳ ದುರುಂತಮಯವಾದ ಆಕ್ಟ್. ಮಾನ್ಯ ವೀರಕುಮಾರ್ ಪಾಟೀಲ್ ಸಾಹೇಬರು ಇದ್ದಾರೆ. ಬಹಳ ಕಳಕಳಿಯಿರುವವರು, ನಿಜವಾಗಲೂ ಅವರನ್ನು ಮೆಚ್ಚುತ್ತೇವೆ. ಆದರೆ ಇಡೀ ರೈತ ಸಮೂಹಕ್ಕೆ ಬಹಳ ತೊಂದರೆಯಾಗಿದೆ. ಶೇಕಡ 23ರಷ್ಟು ದರ ಹೆಚ್ಚಿಸಿದ್ದೀರಿ. ಅಕ್ರಮ ಸಕ್ರಮ ಎಂದು ಏನು ಮಾಡುತ್ತಿದ್ದೀರಿ ಅದರ ಶೇಕಡವಾರು 23,28 ಪರ್ಸೆಂಟ್ ಆದರೆ ಒಬ್ಬ ಸರ್ವಿಸ್ ಕೆನೆಕ್ಷನ್‌ಗೆ 11080 ರೂ ಇವತ್ತು ತುಂಬಬೇಕಾಗುತ್ತದೆ. ಎಲ್ಲಿಂದ ತುಂಬಲು ಸಾಧ್ಯವಿದೆ. ಹೋದಸಲ ರೈತ ಬರಗಾಲ ಅನುಭವಿಸಿದ್ದಾನೆ. ಈಗ ವಿದ್ಯುತ್ ಅಭಾವದಿಂದ ಉತ್ಪಾದನೆ ಇಲ್ಲ, ಹೇಗೆ ಕಟ್ಟಲು ಸಾಧ್ಯ? ಅದಕ್ಕಾಗಿ ತಾವು ಕಾಲಾವಕಾಶ ಕೊಡುವ ಕೆಲಸ ಮಾಡಬೇಕಾಗಿದೆ. 6ನೇ ತಾರೀಖು ಡೆಡ್‌ಲೈನ್ ಆದರೆ ಇಡೀ ರಾಜ್ಯ ತುಂಬಾ ಹಾಹಾಕಾರ ಆಗುತ್ತದೆ. ನಮ್ಮ ಜಿಲ್ಲೆಯಲ್ಲಿ 95ರಿಂದ, ತಮ್ಮ ಗಮನಕ್ಕೂ ತಂದಿದ್ದೇನೆ, 2001 ರವರೆಗೆ ಡಿಪಾಜಿಟ್ ಮಾಡಿಕೊಂಡಿದ್ದೀರಿ. ಕಾಮಗಾರಿ ಆದೇಶವನ್ನೂ ಕೊಟ್ಟಿದ್ದೀರಿ. ಆದರೆ ಅದನ್ನು ಅನ್‌ಆಥರೈಸ್ಡ್ ಎಂದು ಘೋಷಣೆ ಮಾಡಿದ್ದೀರಿ. ಅವರಿಗೆ ಆರ್‌ಆರ್ ನಂಬರ್ ಇಶ್ಯೂ ಮಾಡಿಲ್ಲ ಇದಕ್ಕೆ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ನಿರೀಕ್ಷಿಸುತ್ತೇವೆ. ಅದರಲ್ಲಿ ಇಲಾಖೆಯ ತಪ್ಪಿದೆ. ಅವತ್ತೇ ನೀವು ಆರ್‌ಆರ್ ನಂಬರ್ ಇಶ್ಯೂ ಮಾಡಬಹುದಿತ್ತು ಠೇವಣಿ ಕಟ್ಟಿಸಿ ಕೊಂಡಿದ್ದೀರಿ ವರ್ಕ್ ಆರ್ಡರ್ ಕೊಟ್ಟಿದ್ದೀರಿ ಆರ್.ಆರ್.ನಂಬರ್ ಏಕೆ ಇಶ್ಯೂಮಾಡಿಲ್ಲ. ಆದ್ದರಿಂದ ಇಲಾಖೆಯ ತಪ್ಪು ನಿರ್ಣಯದಿಂದಲೂ ರೈತರಿಗೆ ಇವತ್ತು ಅನ್ಯಾಯವಾಗುತ್ತದೆ.

6.30 ಪಿಎಂ.

ಹೆಚ್ಚುವರಿ ಡಿಪಾಸಿಟ್ ಏನು ಮಾಡಿದ್ದಾರೆ, ಅದನ್ನು ಕಳೆದು ಹೆಚ್ಚುವರಿ ಡಿಪಾಸಿಟ್ ಮಾಡಿ. ಆಗ ಆರ್‌ಆರ್ ನಂಬರನ್ನು ಇಷ್ಯೂ ಮಾಡುತ್ತೇವೆಂದು ಹೇಳಿದ್ದಾರೆ. ಇದು ಬಹಳ ತಪ್ಪಾಗುತ್ತದೆ. ಇದರ ವಿಷಯದಲ್ಲಿ ತಾವು ಈಗಲೇ ಸ್ಪಷ್ಟವಾದ ಆದೇಶವನ್ನು ಕೊಡಬೇಕು. ಇವತ್ತು ಅಕ್ರಮ ಸಕ್ರಮ ಮಾಡುವುದುಕ್ಕೂ ಕಾಲಾವಕಾಶವನ್ನು ಕೊಡುತ್ತೀರಿ ಎಂದು ಭಾವಿಸಿ ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ವಿಚಾರಗಳನ್ನು ಆಯವ್ಯಯದಲ್ಲಿ ತೋರಿಸಿದ್ದಾರೆ. ಇವತ್ತು ಹೈಕೋರ್ಟ್ ಬೆಂಚ್ ಇರಬಹುದು, ಇನ್ನು ಮೈನಾರಿಟಿಯವರಿಗೆ ಹೆಚ್ಚು ಆರ್ಥಿಕ ನೆರವು ಕೊಡತಕ್ಕಂಥದ್ದು ಇರಬಹುದು, ಕೆಲವು ವಿಚಾರಗಳನ್ನು ನಾವು ಸ್ವಾಗತ ಮಾಡಿ ಇವತ್ತು ಜಾಸ್ತಿ ಏನೂ ಮಾತನಾಡದೆ ಸಣ್ಣನೀರಾವರಿಗೆ ಒತ್ತು ಕೊಡುವ ಕೆಲಸವಾಗಬೇಕು. ಯಾವುದೇ ಮೂಲದಿಂದ ಸಾಲವನ್ನಾದರೂ ತರಬಹುದು, ಆ ರೀತಿ ಏನಾದರೂ ತಂದು ಇವತ್ತು ರಾಜ್ಯದಲ್ಲಿರತಕ್ಕ ಪ್ರಥಮ ಹಂತದಲ್ಲಿ ಹತ್ತು ಸಾವಿರ ಕೆರೆಯನ್ನೋ, ಐದು ಸಾವಿರ ಕೆರೆಯನ್ನೋ ತೆಗೆದುಕೊಳ್ಳುತ್ತಿರೆಂದು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀರಂಗಪಟ್ಟಣ) : ಮಾನ್ಯ ಅಧ್ಯಕ್ಷರೇ, ಈ ವರ್ಷದ ಆಯವ್ಯಯದ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಪ್ರಾರಂಭಿಸುತ್ತೇನೆ. ಈ ವರ್ಷದ ಆಯವ್ಯಯ ಜನಪರವಾಗಿದೆ ಮತ್ತು ಸರ್ವಾಂಗೀಣವಾಗಿದೆ ಮತ್ತು ನಮ್ಮ ಅನೇಕ ವಿರೋಧ ಪಕ್ಷದ ನಾಯಕರುಗಳು ಅನೇಕ ವಿಚಾರಗಳಲ್ಲಿ ಇದನ್ನು ಪ್ರಶಂಸೆ ಮಾಡಿದ್ದಾರೆ. ಇಂಥ ಆಯವ್ಯಯವನ್ನು ಕೊಟ್ಟ ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತಿದ್ದೇನೆ. ಈ ಒಂದು ಬಜೆಟ್ ವಿಚಾರವಾಗಿ ನಾನು ಮಹಿಳೆಯರ ಬಗ್ಗೆ ಮಾತನಾಡಲು ಬಯಸುತ್ತೇನೆ. ಸ್ತ್ರೀ ಶಕ್ತಿ ಬಗ್ಗೆ ಮತ್ತು ಮಹಿಳೆಯರ ಬಗ್ಗೆ ಏನೆಂದರೆ ನಮ್ಮ ಈ ಒಂದು ಜನಸಂಖ್ಯೆಯ ನೂರು ಭಾಗದಲ್ಲಿ 50 ಭಾಗದಷ್ಟು ನಮ್ಮ ಮಹಿಳೆಯರಿದ್ದಾರೆ. ಇವರು ಅನೇಕ ವರ್ಷಗಳಿಂದರೂ ಆರ್ಥಿಕವಾಗಿ ಅನಾದರಣೆಗೊಳಗಾಗಿದ್ದಾರೆ. ಅವರುಗಳು ಸ್ವತಂತ್ರರಾಗದೆ ಬಹಳಷ್ಟು ಮಾನಸಿಕ ಹಿಂಸೆಯಲ್ಲಿ ತೊಳಲಾಡುತ್ತಿದ್ದರು. ಇಂಥ ಒಂದು ದುರವಸ್ಥೆ ಸ್ಥಿತಿಯಲ್ಲಿ ಇದ್ದಂಥ ಮಹಿಳಾ ವರ್ಗಕ್ಕೆ ನಮ್ಮ ಸರ್ಕಾರ ಮತ್ತು ನಮ್ಮ ಜಿಲ್ಲೆಯ ಮಾನ್ಯ ಮುಖ್ಯಮಂತ್ರಿಗಳು ಬಹಳ ಒತ್ತಾಸೆಯನ್ನು ಕೊಟ್ಟು ಮುದುಡಿದ ಮುಖಗಳು ಮತ್ತು ಮನಸ್ಸಿಗೆ ಒಂದು ರೀತಿ ಸುಪ್ತವಾದ ಇದ್ದಂಥ ಒಂದು ಚೈತನ್ಯವನ್ನು, ಒಂದು ಶಕ್ತಿಯನ್ನು ತಂದುಕೊಟ್ಟು ಅವರಿಗೆ ಬೆಂಬಲವನ್ನು ಕೊಟ್ಟು ಬಹಳಷ್ಟು ಅವರ ಒಂದು ಸಂತೋಷಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದು ಪ್ರಶಂಸನೀಯವಾದುದು. ಒಂದು ರೂಪಾಯಿ ಬೇಕಾದರೂ ಮನೆಯಲ್ಲಿ ಪುರುಷರ ಒಂದು ಅಧೀನಕ್ಕೆ ಒಳಪಟ್ಟು ಸಂಕೋಚಪಟ್ಟುಕೊಂಡು ಅವರು ಹಣವನ್ನು ಕೇಳಬೇಕಾಗಿತ್ತು. ಅಂಥ ಒಂದು ಪರಿಸ್ಥಿತಿ ಒದಗಿತ್ತು. ಸಾಮಾನ್ಯ ಮಹಿಳೆಯರ ಬಗ್ಗೆ ನಾನು ಹೇಳುತ್ತಿರುವುದು ಇಂಥ ಒಂದು ಸಂಕಷ್ಟ ಸ್ಥಿತಿಯಲ್ಲಿ ಇದ್ದಂಥ ಮಹಿಳೆಯರಿಗೆ ಸ್ತ್ರೀ ಶಕ್ತಿ ಕಾರ್ಯಕ್ರಮದಡಿಯಲ್ಲಿ ಸರ್ಕಾರವು ಸ್ವಸಹಾಯ ಸಂಘಗಳನ್ನು ರಚಿಸಿ ಅವರಿಗೆ ಒಂದು ಕಾನೂನುಬದ್ಧವಾದ ಸಂಘ ಸಂಸ್ಥೆಗಳನ್ನು ಅನುವು ಮಾಡಿಕೊಟ್ಟು 74, 512 ತಂಡಗಳು ಇದರಿಂದ ರೂಪುಗೊಂಡಿವೆ. ಮತ್ತು 40.49 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ಈ ಯೋಜನೆಯ ಆವರ್ತ ನಿಧಿಗೆ ಮತ್ತು ತರಬೇತಿಗಾಗಿ 21 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತು ಈ ವರ್ಷ ಈ ತಂಡಗಳು ಹೆಚ್ಚು ಅನುಕೂಲ ಪಡೆಯಲು ಅನುವಾಗುವಂತೆ ಮುಂದಿನ ವರ್ಷ ಬ್ಯಾಂಕುಗಳಿಂದ 100 ಕೋಟಿ ರೂ.ಗಳಷ್ಟು ಸಾಲ ಸೌಲಭ್ಯಗಳು ದೊರಕಲಿದೆ. ಇಂಥ ಒಂದು ಸೌಲಭ್ಯ, ಇಂಥ ಒಂದು ಬೆಂಬಲ ಹಿಂದೆ ಯಾವತ್ತೂ ನಮ್ಮ ಮಹಿಳೆಯರಿಗೆ ದೊರಕಿರಲಿಲ್ಲ. ನಮ್ಮ ಘನ ಸರ್ಕಾರ, ನಮ್ಮ ಕಾಂಗ್ರೆಸ್ ಸರ್ಕಾರ ಈ ಒಂದು ಚೈತನ್ಯವನ್ನು, ಶಕ್ತಿಯನ್ನು, ಸ್ತ್ರೀಶಕ್ತಿ ಎಂಬ ರೂಪಕೊಟ್ಟು ನಮ್ಮ ಮಹಿಳೆಯರಿಗೆ ಶಕ್ತಿಯನ್ನು ತಂದುಕೊಟ್ಟಿದ್ದಾರೆ. ಮತ್ತು ಹೆಣ್ಣುಮಕ್ಕಳ ವಿಚಾರದಲ್ಲಿ ನಡೆಯುತ್ತಿರುವ ದೌರ್ಜನ್ಯ ಮತ್ತು ವರದಕ್ಷಿಣೆ ಪಿಡುಗು ಈ ವಿಚಾರಗಳು ನಮ್ಮ ಸಮಾಜದಲ್ಲಿ ಬಹಳಷ್ಟು ಹೆಚ್ಚಿವೆ. ಹೆಣ್ಣು ಮಕ್ಕಳನ್ನು ಸೀಮೆಎಣ್ಣೆ ಹಾಕಿ ಸುಡುವುದು; ನೇಣು ಹಾಕುವುದು, ವಿಷ ಕೊಡುವುದು, ಕತ್ತು ಹಿಸುಕಿ ಸಾಯಿಸುವುದು, ಇಂಥ ಅನೇಕ ದೌರ್ಜನ್ಯಗಳ ನಡೆಯುತ್ತಿವೆ. ಇದನ್ನು ಸಮಾಜ ಕಣ್ಣುಕಟ್ಟಿಕೊಂಡು ನೋಡುತ್ತಿದೆ. ಜನರು ಜಾಗ್ರತರಾಗಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರಾದಿಯಾಗಿ ವಿರೋಧಿ ಪಕ್ಷದಲ್ಲಿ ಯಾರೂ ಇಲ್ಲ. ಚರ್ಚೆ ಬೇಕು ಎಂದು ಕೇಳುತ್ತಾರೆ. ಚರ್ಚೆ

ನಡೆದಾಗ ಬಿಜೆಪಿ ನಾಯಕರೂ ಇಲ್ಲ, ಬಿಜೆಪಿ ಒಬ್ಬ ಶಾಸಕರೂ ಸದನದಲ್ಲಿ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : 43 ಜನರು ಮಂತ್ರಿಗಳಿದ್ದಾರೆ. ಆಡಳಿತ ಪಕ್ಷದ ಮುಂದಿನ ಲೈನನ್ನೂ ನೋಡಿ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೇ, ಮಹಿಳೆಯರ ಬಗ್ಗೆ ಸಮಾಜದಲ್ಲಿ ಇಂಥ ದೌರ್ಜನ್ಯಗಳು ಹೆಚ್ಚುತ್ತಿವೆ. ಈ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ನಾವೊಂದು ಕಠಿಣವಾದ ಕಾನೂನನ್ನು ತರಬೇಕಾಗಿದೆ. ಮತ್ತು ಈ ವಿಚಾರದಲ್ಲಿ ಪೊಲೀಸ್‌ನವರು ಬಹಳ ಮುಖ್ಯವಾಗಿ ಅವರು ತಮ್ಮ ಕರ್ತವ್ಯ ಪರಿಪಾಲನೆಯನ್ನು ಮಾಡಬೇಕಾಗುತ್ತದೆ. ಯಾವುದೇ ವಿಚಾರದ ಬಗ್ಗೆಯೂ ಒಂದು ದೌರ್ಜನ್ಯ ನಡೆದಾಗ ಸಂಬಂಧಪಟ್ಟವರು ಅವರ ಮನೆಯವರೇ ಆಗಲೀ, ಯಾರೇ ಆಗಲಿ, ವಿಚಾರವನ್ನು ತಿಳಿಸಿದಾಗ ಇದು ನಮಗೆ ಸಂಬಂಧಪಟ್ಟಿಲ್ಲ, ಏನಾದರೂ ಸಾವುನೋವುಗಳಾದರೆ ಮಾತ್ರ ನಾವು ಬರುವುದು, ಎಂದು ಹೇಳಿ ಸುಮ್ಮನೆ ಕೂರುತ್ತಾರೆ. ಈ ವಿಚಾರದಲ್ಲಿ ಕಠಿಣ ಕ್ರಮವನ್ನು ತೆಗೆದುಕೊಳ್ಳುವಂತೆ ನಮ್ಮ ಸರ್ಕಾರವು ಪೊಲೀಸ್‌ನವರಿಗೆ ವಿಶೇಷ ಸಲಹೆಗಳನ್ನೋ ಅಥವಾ ಸೂಕ್ತವಾದ ಒಂದು ಮಾರ್ಗದರ್ಶನವನ್ನೋ ಕೊಡಬೇಕೆಂದು ಹೇಳುತ್ತೇನೆ. ಈ ರೀತಿ ದೌರ್ಜನ್ಯಕ್ಕೆ ಒಳಗಾದ ಸ್ತ್ರೀಯರಿಗೆ ಒಂದು ವರದಾನವಾಗಿ ಬಂದಿರುವ ಸ್ವಶಕ್ತಿ, ಅಥವಾ ಸ್ತ್ರೀಶಕ್ತಿ ಕಾರ್ಯಕ್ರಮ ಬಹಳಷ್ಟು ಉಪಯೋಗವಾಗಿದೆ. ನಾನು ಇದನ್ನು ಪ್ರಶಂಸುತ್ತಿದ್ದೇನೆ. ಶಿಕ್ಷಣ ವಿಚಾರದಲ್ಲಿ ಯಾವುದೇ ಒಂದು ಸಮಾಜಕ್ಕೆ ಆಗಲಿ, ಒಂದು ದೇಶಕ್ಕೆ ಆಗಲಿ ಶಿಕ್ಷಣ ಬಹಳ ಅಗತ್ಯ. ಇಂದಿನ ದಿನಗಳಲ್ಲಿ ಶಿಕ್ಷಣಕ್ಕೆ ಬಹಳ ಪ್ರಮುಖವಾದ, ಒಂದು ವಿಶೇಷವಾದ ಪ್ರೋತ್ಸಾಹ ದೊರಕುತ್ತಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಗರಿಷ್ಠ ಆದ್ಯತೆ ನೀಡಲು ನಮ್ಮ ಸರ್ಕಾರ ಮುಂದಾಗಿದೆ ಮತ್ತು ಪಿಯುಸಿವರೆಗೆ ಉಚಿತವಾಗಿ ಹೆಣ್ಣು ಮಕ್ಕಳಿಗೆ ವ್ಯಾಸಂಗವನ್ನು ಕೊಡಲಾಗುತ್ತದೆ. ಮತ್ತು ಪ್ರಸಕ್ತ ವರ್ಷ ಮತ್ತು ನಮ್ಮ ಸರ್ಕಾರಿ ಶಾಲೆಗಳ 7ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಸಮವಸ್ತ್ರ ಹಂಚುವ ಯೋಜನೆಯನ್ನು ವಿಸ್ತರಿಸಲಾಗಿದೆ. ಮತ್ತು ನಮ್ಮದೇ ಆದಂಥ ಒಂದು ಶೈಕ್ಷಣಿಕವಾಗಿ ಹಿಂದುಳಿದ ಗುಲ್ಬರ್ಗ, ಬೀದರ್, ರಾಯಚೂರು, ಬಿಜಾಪುರ, ಕೊಪ್ಪಳ, ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿನ ಅರ್ಹತೆ ಪಡೆದ ಎಲ್ಲಾ ಹೆಣ್ಣುಮಕ್ಕಳನ್ನು ವಿದ್ಯಾರ್ಥಿವೇತನ ಯೋಜನೆಯಡಿ ತರಲಾಗುತ್ತಿದೆ. ಅದೇ ರೀತಿ ಇನ್ನೂ ಮಿಕ್ಕಿರುವ ಅನೇಕ ಜಿಲ್ಲೆಗಳನ್ನೂ ಸಹ ಇದರಲ್ಲಿ ಅಳವಡಿಸಿಕೊಳ್ಳಬೇಕೆಂದು ನಾನಾದರೂ ಕೂಡ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಮತ್ತು ಈ ಮಕ್ಕಳಿಗೆ ಸ್ಕೂಲುಗಳಲ್ಲಿ ಪೌಷ್ಟಿಕತೆ ಪರಮ ಆದ್ಯತೆ ಆಗಿದೆ. ಅಂಗನವಾಡಿ ಕೇಂದ್ರಗಳಲ್ಲಿ ಮೂರು ವರ್ಷದ ಒಳಗಿನ ವಯೋಮಾನದ ಮಕ್ಕಳಿಗೆ ಒದಗಿಸುತ್ತಿರುವ ತಿಂಡಿ ಮತ್ತು ಪೌಷ್ಟಿಕ ಆಹಾರದ ಜೊತೆಗೆ ಕರ್ನಾಟಕವು ಹಾಲು ಒಕ್ಕೂಟದ ಮೂಲಕ ಹಾಲು ಒದಗಿಸುವ ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಇದು ಮಕ್ಕಳ ಪೌಷ್ಟಿಕಾಂಶದ ಬೆಳವಣಿಗೆಗೆ ಬಹಳ ಮುಖ್ಯವಾದುದು. ನಾವೆಲ್ಲರೂ ಇದನ್ನು ಸ್ವಾಗತಿಸಬೇಕು.

ಈಗ ಆಶ್ರಯ ವಸತಿ ಯೋಜನೆ ವಿಚಾರ. ಆಶ್ರಯ ವಸತಿ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಸುಮಾರು 50 ಪರ್ಸೆಂಟ್ ಅವರ ಒಂದು ಹೆಸರಿನಲ್ಲಿ ಖಾತೆ ಆಗಬೇಕು, ಅವರ ಹೆಸರಿನಲ್ಲಿ ಮನೆ ಇರಬೇಕು ಎನ್ನುವಂತಹ ಒಂದು ಉದಾರ ನೀತಿಯನ್ನು ಸರ್ಕಾರ ಜಾರಿಗೆ

ತಂದಿದೆ. ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದರು, ಈಗಲೂ ಹೇಳಲಾಗುತ್ತಿದೆ. ಅಂತಹ ಒಂದು ಸೊಲ್ಲು ಇನ್ನು ಮುಂದೆ ಬರದೇ ಇರುವ ನಿಟ್ಟಿನಲ್ಲಿ ಅವರಿಗೂ ಒಂದು ಭದ್ರವಾದ ನೆಲೆ ಇರಲಿ. ತಾನು ತನ್ನ ಮಕ್ಕಳು ಇರುವಂತಹ ಒಂದು ಸ್ಥಾನ ಇರಲಿ ಹೇಳಿ ಬಿಟ್ಟು ಅವರ ಹೆಸರಿನಲ್ಲಿ ಖಾತೆ ಆಗುತ್ತಿದೆ. ಆಶ್ರಯ ಮತ್ತು ಅಂಬೇಡ್ಕರ್, ರಾಜೀವ್ ಗಾಂಧಿ ವಸತಿ ಯೋಜನೆ ಅಡಿ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೂ ಗುಡಿಸಲು ಇರಬಾರದು, ಎಲ್ಲಾ ಕಡೆ ಸೂರು ಇರಬೇಕು ಗುಡಿಸಲು ಇರಲೇ ಬಾರದು ಎನ್ನುವ ಒಂದು ಆಶಯದ ಮೇಲೆ ಎಲ್ಲಾ ಮನೆಗಳನ್ನು ಆಶ್ರಯದ ಅಡಿಯಲ್ಲಿ ಪ್ರತಿ ಒಂದು ಗ್ರಾಮದಲ್ಲಿ ಗುಡಿಸಲುಗಳು ನಿರ್ಮೂಲನೆ ಆಗುತ್ತಿದ್ದು, ಅದರ ಬದಲಿಗೆ ಒಳ್ಳೆಯ ಆಶ್ರಯ ಮನೆಗಳನ್ನು ಕಟ್ಟಿಸಲಾಗುತ್ತಿದೆ. ನನ್ನದಾದರೂ ಸರ್ಕಾರದಲ್ಲಿ ಒಂದು ಮನವಿ ಏನೆಂದರೆ ಆಶ್ರಯ ಮನೆಗಳಿಗೆ ಕೊಡುವಂತಹ 20 ಸಾವಿರ ರೂಪಾಯಿಗಳು ಸಾಲದಾಗಿದೆ. ಹೆಣ್ಣು ಮಕ್ಕಳು ಮನೆಗಳನ್ನು ಕಟ್ಟಿಕೊಳ್ಳಬೇಕಾದರೆ ಸಾಲ ಸೋಲ ಅವರಿಗೆ ದೊರೆಯುವುದು ಕಷ್ಟ ಆಗುತ್ತದೆ. ಆದ್ದರಿಂದ ನಮ್ಮ ಘನ ಸರ್ಕಾರ 30 ಸಾವಿರ ರೂಪಾಯಿಗಾದರೂ ಇದನ್ನು ಏರಿಸಿ, ಆ ಒಂದು ಅನುದಾನದ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಈ ಒಂದು ವಿಚಾರ. ಅನೇಕ ಆಶ್ರಯ ಮನೆಗಳು ಕರ್ನಾಟಕದಾದ್ಯಂತ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಲಾಗುತ್ತಿದೆ. ಮತ್ತು ಕೊಳಚೆ ನಿರ್ಮೂಲನಾ ಮಂಡಲಿಯ ಅಡಿಯಲ್ಲಿ ಅನೇಕ ವಸತಿ ಹೀನರಿಗೆ ವಸತಿಗಳನ್ನು ಒಟ್ಟಾಗಿ 20 ಮನೆ, 30 ಮನೆ ಈ ತರಹ ಒಂದೇ ಸ್ಥಳದಲ್ಲಿ ನಿರ್ಮಿಸುವ ಕಾರ್ಯಕ್ರಮ ನಡೆಯುತ್ತಿದೆ. ನನ್ನ ಒಂದು ಶ್ರೀರಂಗಪಟ್ಟಣ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ತರಹ ಎರಡು ಮೂರು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಮನೆಗಳನ್ನು ಕಟ್ಟಲಾಗಿದೆ. ನಾವು ಈ ಮಂಡಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವೆ. ಶೌಚಾಲಯಗಳೂ ಸಹ ನಿರ್ಮಾಣ ಆಗುತ್ತಿದೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈ ತರಹ ನಿರ್ಮಾಣ ಆಗಬೇಕು ಎಂದು ನಾನು ಹೇಳಬಯಸುತ್ತೇನೆ. ಇನ್ನು ಆರೋಗ್ಯದ ವಿಚಾರ. ಅನೇಕ ಕಡೆಗಳಲ್ಲಿ 30 ಹಾಸಿಗೆ ಇರುವಂತಹ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ 100 ಹಾಸಿಗೆಗಳ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ನನ್ನ ಕ್ಷೇತ್ರವಾದ ಶ್ರೀರಂಗಪಟ್ಟಣದಲ್ಲಿ ಬಹಳ ಐತಿಹಾಸಿಕವಾದ ಈ ಒಂದು ಪ್ರದೇಶದಲ್ಲಿ 100 ಬೆಡನ್ ಒಂದು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಮತ್ತು ಇಲ್ಲಿ ಬಹಳ ಮುಖ್ಯವಾಗಿ ಹೆದ್ದಾರಿ ಆದ್ದರಿಂದ ಅನೇಕ ಅಪಘಾತಗಳು ಆಗುತ್ತಿರುತ್ತದೆ. ಆದ್ದರಿಂದ ಒಂದು ಪ್ರತ್ಯೇಕವಾದಂತಹ ವ್ಯವಸ್ಥೆ ಆಗಬೇಕು. ಆಕ್ಸಿಡೆಂಟ್ ಆದಾಗ ಟ್ರಾಮಾ ಸೆಂಟರ್ ಎನ್ನುವುದನ್ನು ಮಾಡಿಕೊಡಬೇಕೆಂದು ನಾನಾದರೂ ಕೇಳಿಕೊಳ್ಳುತ್ತಿದ್ದೇನೆ. ಈ ವರ್ಷದಲ್ಲಿ ಕರ್ನಾಟಕದಲ್ಲಿ ಪೋಲಿಯೋ ರೋಗವನ್ನು ಮುಕ್ತಗೊಳಿಸಲು, ಪೋಲಿಯೋವನ್ನು ತೊಡೆದು ಹಾಕುವ ಅಂತಿಮ ಹಂತದಲ್ಲಿ ನಾವಿದ್ದೇವೆ. ಪಲ್ಸ್ ಪೋಲಿಯೋ ನಿರೋಧಕ ಚುಚ್ಚು ಮದ್ದು, ಸರ್ಕಾರ ನಡೆಸಿದ ಪ್ರಯತ್ನದಿಂದ ಇದು ಬಹಳಷ್ಟು ಕೊನೆಗೊಳ್ಳುತ್ತಿದೆ. ಕ್ಷಯ, ಹೆಚ್‌ಐವಿ, ಏಡ್ಸ್ ಅಪಾಯಕಾರಿ ಈ ಒಂದು ರೋಗಗಳು ಬಹಳಷ್ಟು ಹೆಚ್ಚುತ್ತಿದೆ. ಇದಕ್ಕೆ ಬೇಕಾಗಿರುವಂತಹ ಔಷಧಿಗಳು ಹಾಗೂ ರೋಗಗಳನ್ನು ನಿಯಂತ್ರಿಸಲು ಔಷಧಿಗಳಿಗೆ ಯಾವ ಕರವನ್ನೂ ವಿಧಿಸದೇ ಅದಕ್ಕೆ ಒಂದು ಒಳ್ಳೆಯ ಸಹಾಯವನ್ನು, ಒಳ್ಳೆಯ ಪ್ರಯತ್ನವನ್ನು ನೀಡುತ್ತಿದೆ. ಇನ್ನು ರಸ್ತೆಗಳ ವಿಚಾರ. ಹಿಂದೆ ಈಗ ಎರಡು ಎರಡೂವರೆ ವರ್ಷದ ಹಿಂದೆ ನಾವು ಮೈಸೂರು ಬೆಂಗಳೂರು ಮತ್ತು ಜಿಲ್ಲಾವಾರು ರಸ್ತೆಗಳಲ್ಲಿ ಓಡಾಡಬೇಕಾದರೆ ಜನ

ಏನು ಹೇಳುತ್ತಿದ್ದರು ಎಂದರೆ ಸರ್ಕಾರ ಏನು ನಿದ್ರೆ ಮಾಡುತ್ತಿದೆಯೇ? ಏಕೆ ಇಷ್ಟು ಅಲಕ್ಷ್ಯ? ಜನಗಳಿಗೆ ಓಡಾಡಲು ಸೌಕರ್ಯ ನೀಡಲು ಸರ್ಕಾರ ಇರುವುದಲ್ಲವೇ? ನಾವು ಕೊಟ್ಟಂತಹ ಕರಗಳು ಏನಾಗುತ್ತಿದೆ? ನಮ್ಮ ಹತ್ತಿರ ಅಷ್ಟೊಂದು ಟ್ಯಾಕ್ಸ್‌ನ್ನು ವಸೂಲಿ ಮಾಡುತ್ತಾರೆ. ರಸ್ತೆಗಳು ಗುಂಡಿ ಬಿದ್ದು ಹೋಗಿದೆಯಲ್ಲಾ, ಇದರಲ್ಲಿ ನಾವು ಹೇಗೆ ಓಡಾಡುವುದು ಎಂದು ಬಹಳಷ್ಟು ಜನ ಟೀಕೆ ಮಾಡುತ್ತಿದ್ದರು, ಅವರ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಆದರೆ ನಮ್ಮ ಸರ್ಕಾರ ಬಂದ ಮೇಲೆ ರಸ್ತೆಗಳೆಲ್ಲಾ ಎಷ್ಟು ನುಣಪಾಗಿ, ಬಹಳಷ್ಟು ಒಳ್ಳೆಯ ಸೌಕರ್ಯಗಳು ಆಗಿ ವಾಹನಗಳ ಸಂಚಾರಕ್ಕೆ ಮತ್ತೆ ಯಾವುದೇ ರೀತಿಯ ತೊಂದರೆ ಆಗದೇ ಬಹಳ ಅನುಕೂಲಕರವಾಗಿ ರಸ್ತೆಗಳ ನಿರ್ಮಾಣ ಆಗುತ್ತಿದೆ. ಮತ್ತೆ ಜಿಲ್ಲಾವಾರು ರಸ್ತೆಗಳೂ ಸಹ ಬಹಳಷ್ಟು ಸುಧಾರಿಸಿದೆ.

(ಗೊಂದಲ)

ಶ್ರೀ ಕರಡಿ ಸಂಗಣ್ಣ : ಸತ್ಯ ಹೇಳುತ್ತಿದ್ದಾರೆ, ಕಣ್ಣಿಗೆ ಕಾಣುವುದನ್ನು ಹೇಳುತ್ತಿದ್ದಾರೆ. ಏನು ಅಭಿವೃದ್ಧಿ ಆಗಿದೆ, ಅದನ್ನು ಹೇಳುತ್ತಿದ್ದಾರೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ : ನನ್ನ ಕ್ಷೇತ್ರದಲ್ಲಿ ನಾನು ಕಂಡ ಹಾಗೆ ಕನ್ನಡಿ ಎಂತಲೇ ಹೇಳಬಹುದು. ಏಕೆಂದರೆ ಹಿಂದೆ ನೋಡಿದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಯನ್ನು ನೋಡಿದರೆ ಆ ದರ್ಜೆಗೆ ಏರಿಸಬಹುದು ಅಂದರೆ ಕನ್ನಡಿ ಇದ್ದ ಹಾಗೆ ಇದೆ ಎಂದು ಹೇಳಬಹುದು.

(ಗೊಂದಲ)

ಈಗ ನಮ್ಮ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಬಹಳಷ್ಟು ರಸ್ತೆಗಳು ನಿರ್ಮಾಣ ಆಗಿವೆ. ಇನ್ನು ಈ ಒಂದು ಗ್ರಾಮೀಣ ಪ್ರದೇಶದ ರಸ್ತೆಗಳು ಅಂದರೆ ಹಳ್ಳಿಗಳ ರಸ್ತೆಗಳು ಆಗಬೇಕಾಗಿದೆ. ಆದಕ್ಕೆ ನಾನು ನಮ್ಮ ಒಂದು ಜಿಲ್ಲೆ ಮಂಡ್ಯ ಜಿಲ್ಲೆಗೆ ನಮ್ಮಲ್ಲರೇ ಆದ ಮಾನ್ಯ ಮುಖ್ಯಮಂತ್ರಿಗಳು ರಸ್ತೆಗಳು ಅಭಿವೃದ್ಧಿಗೆ 300 ಕೋಟಿ ರೂಪಾಯಿಗಳ ಅವಕಾಶ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ವಿಶೇಷವಾಗಿ ನನ್ನ ಅಭಿನಂದನೆಗಳು. ಮಿಕ್ಕವು ಕ್ರಮೇಣವಾಗಿ ಎಲ್ಲಾ ಜಿಲ್ಲಾಗಳಿಗೂ ಜಾರಿ ಮಾಡುತ್ತೇವೆ, ಕೊಡುತ್ತೇವೆಂದು ಎಂದೂ ಕೂಡ ಒಪ್ಪಿಕೊಂಡಿದ್ದಾರೆ. ಬೇರೆಯವರು ನಮ್ಮ ಬಗ್ಗೆ ಟೀಕೆ ಮಾಡುವುದರಲ್ಲಿ ಅರ್ಥ ಇಲ್ಲ. ಏಕೆಂದರೆ ನಮ್ಮ ಪ್ರತಿ ಒಂದು ಹಳ್ಳಿಯ ರಸ್ತೆಗಳು ಬಹಳಷ್ಟು ಹದಗೆಟ್ಟಿವೆ. ಆದ್ದರಿಂದ ನಾನು ರೈತರ ಪರವಾಗಿ ನಾನು ಈ ತರಹ ಮಾತನಾಡುತ್ತಿರುವುದು. ಪ್ರತಿ ಒಂದು ಹಳ್ಳಿಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಗಾಡಿಗಳು, ಸೈಕಲ್‌ಗಳು, ಸಂಚರಿಸುತ್ತವೆ. ಬಡ ರೈತರಿಗೆ ಅನುಕೂಲ ಆಗುವಂತಹ ರಸ್ತೆಗಳು ಆಗಬೇಕಾಗಿದೆ. ಈ ಒಂದು 300 ಕೋಟಿ ರೂಪಾಯಿ ಅವಕಾಶ ಮಾಡಿಕೊಟ್ಟಿರುವುದು ನಿಜಕ್ಕೂ ಒಂದು ಒಳ್ಳೆಯ ಯೋಜನೆ. ಮತ್ತು ಒಳ್ಳೆಯ ಕೆಲಸ. ಬೇರೆ ಜಿಲ್ಲೆಗಳಿಗೂ ಸಹ ನಾವು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾವೂ ಕೇಳುತ್ತಿದ್ದೇವೆ. ನಮ್ಮ ರೀತಿಯೇ ಎಲ್ಲಾ ಕಡೆಗೂ ಕೊಡಬೇಕೆಂದು ಕೇಳುತ್ತಿದ್ದೇವೆ. ನಮ್ಮ ಕರ್ನಾಟಕದಾದ್ಯಂತ ಎಲ್ಲಾ ರಸ್ತೆಗಳನ್ನೂ ಮಾಡಬೇಕೆಂದು ನಾವೂ ಸಹ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇವೆ. ಇನ್ನು ನೀರಿನ ವಿಚಾರ. ಶ್ರೀರಂಗಪಟ್ಟಣದ ಬಗ್ಗೆ ಮೊದಲಿಗೆ ನಾನು ಹೇಳುತ್ತಿರುವುದು ಅದೊಂದು ದ್ವೀಪ. ಅಲ್ಲಿ ಸುತ್ತಲೂ ಕಾವೇರಿ ನದಿ ಹರಿಯುತ್ತಿದ್ದರೂ ಸಹ ಆ ಜನರಿಗೆ ಕುಡಿಯುವುದಕ್ಕೆ ನೀರೇ ಇಲ್ಲ. ಏಕೆಂದರೆ, ಆ ವ್ಯವಸ್ಥೆಯನ್ನು ಇನ್ನೂ ಮಾಡಿಲ್ಲ.

ಪೈಪುಗಳ ಮುಖಾಂತರ ನೀರನ್ನು ಸರಬರಾಜು ಮಾಡುವಂಥ ವ್ಯವಸ್ಥೆ ಇನ್ನೂ ಆಗಿಲ್ಲ. ಆದುದರಿಂದ, ಆಯವ್ಯಯದಲ್ಲಿ ಕುಡಿಯುವ ನೀರಿಗೆ ಆದ್ಯತೆ ನೀಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಈ ಹಿಂದೆ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಶ್ರೀರಂಗಪಟ್ಟಣಕ್ಕೆ ಓವರ್‌ಹೆಡ್ ಟ್ಯಾಂಕ್, ಹಾಗೂ ಜಾಕ್‌ವೆಲ್ ಮೂಲಕ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಿಕೊಟ್ಟಿದ್ದು, ಆ ಕಾರ್ಯಕ್ರಮದ ಉದ್ಘಾಟನೆಯನ್ನು ನಾನೇ ಮಾಡಿರುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಸದಸ್ಯರು ಹೇಳಿದ್ದು ನಿಜ ಕೊಡಗಿನಲ್ಲಿ ಕಾವೇರಿ ನದಿ ಹುಟ್ಟಿ ಹರಿದರೂ ಅಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೆ ಕಷ್ಟವಾಗಿದೆ.

ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ : ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಾನು ಒಂದು ಬೇಡಿಕೆಯನ್ನು ಕಳುಹಿಸಿಕೊಟ್ಟಿದ್ದೇನೆ. ಪೈಪುಗಳನ್ನು ಅಳವಡಿಸುವ ಮೂಲಕ ಶುದ್ಧವಾದ ಕಾವೇರಿ ನೀರನ್ನು ಗ್ರಾಮೀಣ ಪ್ರದೇಶಗಳಿಗೆ ಸರಬರಾಜು ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ನೀರಾವರಿ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಕ್ಷೇತ್ರದ ಬಹಳಷ್ಟು ಪ್ರದೇಶ ನೀರಾವರಿಗೆ ಒಳಪಟ್ಟಿರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ಒಣಭೂಮಿ ಇದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತ ತನ್ನ ಜಮೀನಿನಲ್ಲಿ ಒಂದು ಬೆಳೆಯಾದರೂ ಬೆಳೆಯಲು ಅವಕಾಶವಾಗಿದೆ. ಕೆಲವು ಕಡೆಗಳಲ್ಲಿ ಒಂದು ಬೆಳೆಗೆ ಮಾತ್ರ ನೀರಾವರಿಯಾಗುತ್ತಿದೆ. ಎಲ್ಲಾ ಒಣಭೂಮಿಗಳಿಗೆ ನೀರಾವರಿ ವ್ಯವಸ್ಥೆಗೊಳಪಡಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಶ್ರೀರಂಗಪಟ್ಟಣದ ವ್ಯಾಪ್ತಿಯಲ್ಲಿ ಬರುವ ಸುಮಾರು 300-400 ವರ್ಷಗಳಷ್ಟು ಹಿಂದೆ ನಿರ್ಮಿಸುವ ಸಿಡಿಎಸ್ ನಾಲೆ ಆಧುನೀಕರಣವಾಗಬೇಕು. ನಾಲೆಯಲ್ಲಿ ಸಿಲ್ಟ್ ಬಹಳಷ್ಟು ತುಂಬಿರುವುದರಿಂದ ಮುಂದಕ್ಕೆ ನೀರು ಹೋಗಲು ಅಡಚಣೆಯುಂಟಾಗುತ್ತಿರುವುದರಿಂದ ಈ ಸಿಲ್ಟನ್ನು ತೆಗೆದುಹಾಕುವ ಕೆಲಸವನ್ನು ಅತಿಶೀಘ್ರವಾಗಿ ನಡೆಸಿಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇದು ನನ್ನ ಶ್ರೀರಂಗಪಟ್ಟಣ ಕ್ಷೇತ್ರಕ್ಕೆ ಸೀಮಿತವಾಗಿ ಕೇಳಿಕೊಳ್ಳುತ್ತಿದ್ದೇನೆ ಅನ್ನುವಂಥಾದ್ದಲ್ಲ. ಕರ್ನಾಟಕದ ಪ್ರಯಾಣಿಕರಿಗೆ ಹೆಚ್ಚು ಸೌಲಭ್ಯ ಕಲ್ಪಿಸಲು ನೂತ ಡಿಪೋಗಳನ್ನು, ಶೌಚಾಲಯ ಮತ್ತು ಬಸ್ ನಿಲ್ದಾಣಗಳನ್ನು ರಾಜ್ಯದ ವಿವಿದೆಡೆಗಳಲ್ಲಿ ನಿರ್ಮಿಸಲಾಗುತ್ತಿದೆ ಎಂದಿದ್ದಾರೆ. ಶ್ರೀರಂಗಪಟ್ಟಣ ಕ್ಷೇತ್ರಕ್ಕೂ ಒಂದು ನೂತನ ಬಸ್ ಡಿಪೋ ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಇದೊಂದು ಐತಿಹಾಸಿಕ ನಗರವಾಗಿದ್ದು, ಇಲ್ಲಿಗೆ ವಿದೇಶಿ ಪ್ರವಾಸಿಗರು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಬಸ್ಸುಗಳ ಸೌಕರ್ಯ ಅತ್ಯಗತ್ಯವಾಗಿ ಕಲ್ಪಿಸಬೇಕಿರುವುದರಿಂದ ಬಸ್ ಡಿಪೋ ಮಂಜೂರು ಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಆಯವ್ಯಯ ಪತ್ರ ನಿಜವಾಗಿಯೂ ಪ್ರಶಂಸನೀಯ ಹಾಗೂ ಇದೊಂದು ಜನಪ್ರಿಯ ಬಜೆಟ್ ಆಗಿದೆಯೆಂದು ಜನಸಾಮಾನ್ಯರು ಕೊಂಡಾಡುತ್ತಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು 2002-03ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿದ ಸಂದರ್ಭದಲ್ಲಿ ಈ ಕುರಿತ ಚರ್ಚೆಯಲ್ಲಿ ಭಾಗವಹಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇವೊತ್ತು ಕೊಡಗಿನಲ್ಲಿ ಕಾಫಿ ಬೆಳೆಯುವ ಬೆಳೆಗಾರರು ಪಾಪಿಗಳಾಗಿದ್ದಾರೆ! ಕಾಫಿ ಬೆಳೆಗಾರರ ಕಣ್ಣೀರು ಒರೆಸುವಂಥ ಕೆಲಸ ಇದುವರೆವಿಗೂ ಯಾವುದೇ ಸರ್ಕಾರದಿಂದ ಆಗಿಲ್ಲ. ಅದರಲ್ಲೂ ಕರ್ನಾಟಕ ಸರ್ಕಾರದಿಂದ ಈ ಕಾರ್ಯವಾಗಲಿಲ್ಲವೆನ್ನುವುದು ಬೇಸರದ ಸಂಗತಿಯಾಗಿದೆ. ಕಾಫಿ ಬೆಳೆಗಾರರು ಕರೆದಂಥ ಸಭೆಗಳಿಗೆ ಕಾಂಗ್ರೆಸ್ ಪಕ್ಷದ ಮಂತ್ರಿಗಳೂ ಹೋಗಿದ್ದಾರೆ. ಡಿಸೆಂಬರ್ 12ರಂದು ಚಿಕ್ಕಮಗಳೂರಿನಲ್ಲಿ ಕಾಫಿ ಬೆಳೆಗಾರರ ಸಭೆ ನಡೆದ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಮೋಟಮ್ಮನವರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಡಿ.ಬಿ. ಚಂದ್ರೇಗೌಡರು ಮತ್ತು ಸಾರಿಗೆ ಸಚಿವರಾದ ಶ್ರೀ ಸಿ.ಆರ್. ಸಗೀರ್ ಅಹಮದ್‌ರವರು ಭಾಗವಹಿಸಿ ತದನಂತರ ಅವರು ಮಾತನಾಡುತ್ತಾ, ತಾವು ಬೇಕಾದರೆ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಕಾಫಿ ಬೆಳೆಗಾರರ ಪರವಾಗಿ ಹೋರಾಟ ಮಾಡುತ್ತೇನೆ ಎಂದಿದ್ದು ಇವೊತ್ತು ಅವರ್‍ಯಾರು ಸಹ ಸದನದಲ್ಲಿ ಕಾಣುತ್ತಿಲ್ಲ. ಕೊಡಗಿಗೆ 15 ದಿವಸಗಳ ಮುಂಚೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಹೆಚ್. ವಿಶ್ವನಾಥ್‌ರವರು ಬಂದಿದ್ದರು. ಅವರು ಬಂದಿದ್ದಾಗ ಮಾತನಾಡಿದ್ದು ಪತ್ರಿಕೆಗಳಲ್ಲಿ ವರದಿಯಾಗಿದ್ದು ಆ ಕಟಿಂಗ್ಸ್ ನನ್ನ ಹತ್ತಿರ ಇದೆ. ಕಾಫಿ ಬೆಳೆಗಾರರಿಗೆ ಸಿಹಿ ಸುದ್ದಿ ಇದೆ ಎಂದಿದ್ದಾರೆ. ಆದರೆ, ಅದು ಕಹಿ ಸುದ್ದಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಜ್‌ನಲ್ಲಿ ರಾಗಿ, ಭತ್ತ, ಕೊಬ್ಬರಿ, ಮೆಕ್ಕೆಜೋಳ ಮತ್ತು ಅಡಿಕೆ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಭಾರತ ಸರ್ಕಾರದ ಬೆಂಬಲದೊಂದಿಗೆ ಕೊಡಲು ಉದ್ದೇಶಿಸಿರುವುದಾಗಿ ಹೇಳಿದ್ದಾರೆ. ಕಾಫಿ ಬೆಳೆಗಾರರು ಏನು ಪಾಪ ಮಾಡಿದ್ದರು? ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಕೊಡಗಿಗೆ ಬಂದಂಥ ಸಂದರ್ಭದಲ್ಲಿ ಹೇಳಿದ್ದನ್ನು ಕೇಳಿ ಕಾಫಿ ಬೆಳೆಗಾರರೆಲ್ಲೂ ಬಹಳ ಸಂತೋಷಪಟ್ಟರು. ನಮ್ಮ ಕಾಫಿ ಬೆಳೆಗಾರರು ಕರ್ನಾಟಕ ಸರ್ಕಾರದಿಂದ ಏನಾದರೂ ಟ್ಯಾಕ್ಸ್ ಬಿಡುಗಡೆಯಾಗ ಬಹುದೆಂದು ತಿಳಿದುಕೊಂಡಿದ್ದರು. ಆದರೆ, ಇವೊತ್ತು ಕಾಫಿ ಬೆಳೆಗೆ ಮಾತ್ರ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್‌ನ್ನು ಸರ್ಕಾರ ವಿಧಿಸಿದೆ. ಇನ್ನಿತರ ಅಗ್ರಿಕಲ್ಚರ್ ಪ್ರಾಡಕ್ಟ್‌ಗಳಾದ ಜೋಳ, ಕೊಬ್ಬರಿ, ಅಡಿಕೆ ಇದಾವುದಕ್ಕೂ ಸರ್ಕಾರ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ವಿಧಿಸಿಲ್ಲ. ಇದರೊಂದಿಗೆ ಸೇಲ್ಸ್ ಟ್ಯಾಕ್ಸ್‌ನ್ನು ಸಹ ಹಾಕಿದ್ದೀರಿ. ಇನ್‌ಕಮ್ ಟ್ಯಾಕ್ಸ್ ಆ್ಯಕ್ಟ್ ಸೆಕ್ಷನ್ 18:3ಎ ರೀತ್ಯ ಫೈಲ್ ತೆಗೆದುಕು 1987ರಿಂದಲೂ ಕಾಫಿ ಬೆಳೆಗಾರರ ಮೇಲೆ ಫೆನಾಲ್ಟಿಯ ಹೊರೆ ಹಾಕುವಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಈ ದಿಸೆಯಲ್ಲಿ ಸದರಿ ಬೆಳೆಗಾರರ ಸಂಕಷ್ಟದ ಕಣ್ಣೀರನ್ನು ಒರೆಸುವಂಥ ಕೆಲಸವನ್ನು ಕೇಂದ್ರ ಹಾಗೂ ರಾಜ್ಯಗಳೆರಡೂ ಕೂಡಿ ಮಾಡಬೇಕಾಗುತ್ತದೆ. ನನಗೆ ತಿಳಿದಂತೆ ಸರ್ಕಾರದ ಬೊಕ್ಕಸಕ್ಕೆ 1976ನೇ ಇಸವಿಯಿಂದ ಸುಮಾರು 80 ಕೋಟಿ ರೂಪಾಯಿಗಳಷ್ಟು ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ಕೊಡಗಿನಿಂದಲೇ ಬಂದಿದೆ. ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳೆರಡೂ ಸೇರಿದಂತೆ ಸುಮಾರು 150 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಕಟ್ಟಿದ್ದೇವೆ. ಅಲ್ಲದೆ, ಕಳೆದ 20-25 ವರ್ಷಗಳಿಂದಲೂ ಕಾಫಿ ಬೆಳೆಗೆ ರೇಟ್ ಇದ್ದಾಗಲೂ ಇನ್‌ಕಮ್ ಟ್ಯಾಕ್ಸ್‌ನ್ನು ಕಟ್ಟಿದ್ದೇವೆ. ಇವೊತ್ತು ಕಾಫಿಗೆ ಬೆಲೆಯಿಲ್ಲ. ಅದಕ್ಕೋಸ್ಕರ ಈ ಕಾಫಿಗೆ

ಏನು ಟ್ಯಾಕ್ಸ್ ವಿಧಿಸಿದ್ದೀರಿ ಈ ಅದನ್ನು ಕಾಫಿ ಬೆಲೆ ಏರುವ ತನಕವಾದರೂ ವಿಧಿಸಿರುವ ಟ್ಯಾಕ್ಸ್‌ನ್ನು ಸಸ್ಪೆಂಡ್‌ನಲ್ಲಿಡಬೇಕು ಹಾಗೂ ಯಾವುದೇ ರೀತಿಯ ನೋಟಿಸ್ ಜಾರಿ ಮಾಡಬಾರದು ಮತ್ತು ಬೆಳೆಗಾರರಿಗೆ ತೊಂದರೆ ಕೊಡಬಾರದು ಎಂದು ಹೇಳುತ್ತಾ ಇವೊತ್ತು ಕಾಫಿ ಬೆಳೆಗಾರರೆಲ್ಲರೂ ಒಂದಾಗಿ ಎದ್ದು ನಿಂತಿದ್ದಾರೆ. ಸರ್ಕಾರದಿದಂ ಮೊದಲಿನಿಂದಲೂ ಕೊಡಗು ಜಿಲ್ಲೆಗೆ ಯಾವುದೇ ಬೆನಿಫಿಟ್ ಆಗಲೇ, ಸ್ಪೆಷಲ್ ಗ್ರಾಂಟ್ ಆಗಲೀ ಕೊಟ್ಟಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ ಪತ್ರಿಕೆಯವರು ಅವರನ್ನು ಉದ್ದೇಶಿಸಿ ತಾವು ಇವೊತ್ತು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದೀರಿ, ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಚಳುವಳಿಯ ಕೂಗು ಎದ್ದಿರುವ ಹಿನ್ನೆಲೆಯಲ್ಲಿ ನಿಮ್ಮ ಸರ್ಕಾರವೇನಾದರೂ ಅಧಿಕಾರಕ್ಕೆ ಬಂದರೆ ತಾವು ಇದನ್ನು ಯಾವ ರೀತಿ ದಮನ ಮಾಡುತ್ತೀರಿ ? ಎಂದು ಪತ್ರಿಕೆಯವರು ಪ್ರಶ್ನಿಸಿದಾಗ ಅವರು ಉತ್ತರಿಸುತ್ತಾ ಈ ಕೊಡಗನ್ನು ಕಡೆಕಾಣಿಸಿದ್ದಾರೆ. ಸರಿಯಾದ ರಸ್ತೆ ಇಲ್ಲ. ಉನ್ನತ ವಿದ್ಯಾಭ್ಯಾಸ ಮಾಡಲು ಮೆಡಿಕಲ್ ಕಾಲೇಜ್ ಇಲ್ಲ.

7.00 ಪಿ.ಎಂ

ಇಂಜಿನೀಯರಿಂಗ್ ಕಾಲೇಜು ಇಲ್ಲ ಈ ರೀತಿ ಕಡೆಗಾಣಿಸಿದ್ದರಿಂದ ಅಲ್ಲಿನ ಜನತೆ ಸಪಪೇಟ್ ರಾಜ್ಯ ಬೇಕು ಎಂದು ಕೇಳುತ್ತಿದ್ದಾರೆ. ಆದ್ದರಿಂದ ನಾನ ಕೊಡಿಗಿಗೆ ಒಂದು ಸ್ಪೆಷಲ್ ಪ್ಯಾಕೇಜ್ ಮಾಡುತ್ತೇನೆಂದು ಹೇಳಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ:- ನಿಮ್ಮಲ್ಲಿ ಬುದ್ದಿ ಇತ್ತು. ಸಂಪತ್ತು ಇತ್ತು, ಆಗ ಎಲ್ಲಾ ಇದ್ದುಕೊಂಡು ಆಗ ಮಾಡಿಕೊಳ್ಳುವುದು ಬಿಟ್ಟು ಈಗ ಮಾಡಲಿಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ಅಪ್ಪಚ್ಚು ರಂಜನ್:- ನಮ್ಮ ಕೊಡಗಿನ ಜನತೆಯ ಅಭ್ಯಾಸವೇನೆಂದರೆ ಬಹಳ ಶ್ರೀಮಂತಿಕೆಯ ಹೃದಯ. ಕೊಡಗಿನಲ್ಲಿ ಎಷ್ಟೋ ಸರ್ಕಾರಿ ಕಟ್ಟಡಗಳಿಗೆ ದಾನದ ರೂಪದಲ್ಲಿ ಅಲ್ಲಿನ ಕಾಫಿ ಬೆಳೆಗಾರರು ಹಣವನ್ನು ಕೊಟ್ಟಿದ್ದಾರೆ. ಸರ್ಕಾರದಿಂದ ಎಷ್ಟು ಬಂದಿದೆ ಎಂಬುದನ್ನೂ ತಾವು ಅದರ ಪಟ್ಟಿ ತರಿಸಿ ನೋಡಬಹುದು. ಆ ರೀತಿ ವಿಶಾಲ ಮನೋಭಾವದಿಂದ ಇದ್ದಂತಹ ಕಾಫಿ ಬೆಳೆಗಾರರು, ಆದರೆ ಅವರ ಪರಿಸ್ಥಿತಿ ಇವತ್ತು ಬಹಳ ಚಿಂತಾಜನಕವಾಗಿದೆ. ಆ ದೃಷ್ಟಿಯಿಂದ ತಾವು ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್‌ನ್ನು ಮತ್ತು ಸೇಲ್ಸ್ ಟ್ಯಾಕ್ಸ್‌ನ್ನು ಕೈ ಬಿಡಬೇಕು ಎಂದು ಹೇಳುತ್ತಾ ಇವತ್ತು ಬಜೆಟ್‌ನಲ್ಲಿ ಏನಾಗಿದೆ ಅಂದರೆ ಚಿಕೋರಿಗೆ ಮೊದಲು 10 ಪರ್ಸಂಟ್ ಟ್ಯಾಕ್ಸ್ ಹಾಕಿದ್ದರು. ಆದರೆ ಈಗ 4 ಪರ್ಸೆಂಟ್ ಹಾಕಿದ್ದಾರೆ. 6 ಪರ್ಸೆಂಟ ಕಡಿಮೆ ಮಾಡಿದ್ದಾರೆ. ನನಗ್ನನಿಸುತ್ತದೆ ಚಿಕೋರಿಗೆ ಟ್ಯಾಕ್ಸ್ ಹೆಚ್ಚು ಮಾಡಬೇಕಾಗಿತ್ತು. ಕೇಂದ್ರ ಸರ್ಕಾರ ಇಂಪೋರ್ಟ್ ಡ್ಯೂಟಿಗೆ ನೂರು ಪರ್ಸೆಂಟ್ಸ್ ಟ್ಯಾಕ್ಸ್ ಹಾಕಿದೆ. ರಾಜ್ಯ ಸರ್ಕಾರ ಕೂಡ ಚಿಕೋರಿಗೆ 10 ಪರ್ಸೆಂಟ್ ಅಥವಾ 20 ಪರ್ಸೆಂಟ್ ಟ್ಯಾಕ್ಸ್ ಹಾಕಬೇಕಾಗಿತ್ತು. ಆಗ ಕಾಫಿ ಬೆಳೆಗಾರರಿಗೆ ಅನುಕೂಲವಾಗುತ್ತಿತ್ತು. ಆ ಕೆಲಸ ಮಾನ್ಯ ಮುಖ್ಯಮಂತ್ರಿಗಳು ಮಾಡಲಿಲ್ಲ. ಮತ್ತು ಕೊಡಗು ಜಿಲ್ಲೆಗೆ ಒಂದು ವಿಶೇಷ ಪ್ಯಾಕೇಜ್ ಮಾಡಿ ಎಂದು ಕೇಳಿದಾಗ

ಸನ್ಮಾನ್ಯ ಮುಖ್ಯಮಂತ್ರಿಗಳು ಇದೇನ್ನು ಕೊಡಗಿನ ಜಿಲ್ಲಾ ಪಂಚಾಯಿತಿ ಬಜೆಟ್ ಅಲ್ಲ ಎಂದು ಹೇಳಿದರು. ನಾನೀಗ ಮಾನ್ಯ ಮುಖ್ಯಮಂತ್ರಿಗಳನ್ನು ನೇರವಾಗಿ ಕೇಳಬಯಸುತ್ತೇನೆ. ತಾವು

ಮಂಡ್ಯ ಜಿಲ್ಲೆಗೆ 300 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದೀರಿ. ಈ ವರ್ಷವೇ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಇದೇನು ಮಂಡ್ಯ ಜಿಲ್ಲಾ ಪಂಚಾಯಿತಿ ಬಜೆಟ್ ? ಮಾನ್ಯ ಮುಖ್ಯಮಂತ್ರಿಗಳು ಬರೀ ಮಂಡ್ಯ ಜಿಲ್ಲೆಯ ಮುಖ್ಯಮಂತ್ರಿಗಳೇ? ಅವರು ಇಡೀ ರಾಜ್ಯದ ಮುಖ್ಯಮಂತ್ರಿಗಳು. ಇದನ್ನು ಅವರು ಮನಸ್ಸಿನಲ್ಲಿಡಬೇಕಾಗಿತ್ತು. ಇದರ ಜೊತೆಗೆ ಕುಡಿಯುವ ನೀರಿನ ವಿಚಾರ. ಕಳೆದ ಸಲ ಕುಡಿಯುವ ನೀರಿನ ವಿಚಾರದಲ್ಲಿ ನನಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಇವತ್ತು ಏನಾಗಿದೆ ಕುಡಿಯುವ ನೀರಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತದೆ. ಅದು ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ನನ್ನ ಒಂದು ಸಲಹೆ ಎನೇದರೆ ಕುಡಿಯುವ ನೀರಿನ ಅರ್ಬನ್ ವಾಟರ್ ಸಪ್ಲೈ ಮತ್ತು ಜಿಲ್ಲಾ ಪಂಚಾಯತಿ ವತಿಯಿಂದ ಕುಡಿಯುವ ನೀರು ಇದಕ್ಕೆ ಸಪರೇಟ್ ಆಗಿ ಒಂದು ವಿಂಗ್ ಮಾಡಿದರೆ ಬಹಳ ಉತ್ತಮ ಏಕೆಂದರೆ ಒಂದು ಜಿಲ್ಲೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ನೋಡಿಕೊಳ್ಳಲು ಒಬ್ಬರು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಇನ್ನೂ 3-4 ಜನ ಸಿಬ್ಬಂದಿ ಇದ್ದರೆ ಅವರು ವಾರ್‌ಫುಟಿಂಗ್‌ನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಇಲ್ಲಿ ಮಾತ್ರವಲ್ಲ. ಅರ್ಬನ್ ವಾಟರ್ ಸಪ್ಲೈನಿಂದ ಹಿಡಿದು ಜಿಲ್ಲೆಯಲ್ಲಿ ತಾಲ್ಲೂಕು ಮಟ್ಟದಲ್ಲಿ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ಅದಕ್ಕಾಗಿಯೇ ಒಂದು ಡಿಪಾರ್ಟ್‌ಮೆಂಟ್ ಮಾಡುವುದು ಉತ್ತಮ ಎಂಬುದು ನನ್ನ ಅಭಿಪ್ರಾಯ. ಇದರ ಜೊತೆಗೆ ಆರ್.ಟಿ.ಸಿ ಯನ್ನು ನಮ್ಮ ಕೊಡಗು ಜಿಲ್ಲೆಯಿಂದ ಹಿಡಿದು ರಾಜ್ಯದ ಎಲ್ಲಾ ಕಡೆಗಳಲ್ಲಿಯು ಕಂಪ್ಯೂಟರೀಕರಣ ಮಾಡಿದ್ದಾರೆ. ಬಹಳ ಸಂತೋಷದ ವಿಚಾರ. ಆದಷ್ಟು ಬೇಗ ಆರ್.ಟಿ.ಸಿ ಯನ್ನು ಪಡೆದುಕೊಳ್ಳಬಹುದು ಎನ್ನುವ ಉದ್ದೇಶದಿಂದ ಸರ್ಕಾರ ಮಾಡಿದೆ ಅದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಆರ್.ಟಿ.ಸಿ.ಗೆ ತೆಗೆದುಕೊಳ್ಳುವಂತಹ ಚಾರ್ಜ್ ಒಂದು ಆರ್.ಟಿ.ಸಿ.ಗೆ ಒಂದು ಸರ್ವೆ ನಂಬರ್‌ಗೆ 15 ರೂಪಾಯಿಗಳನ್ನು ತಾವು ಚಾರ್ಜ್ ಮಾಡುತ್ತಿದ್ದೀರಿ. ನನ್ನ ಹೆಸರಿನಲ್ಲಿ ಸುಮಾರು 60 ಸರ್ವೆ ನಂಬರ್‌ಗಳು ಇವೆ. ಒಂದೊಂದು ಸರ್ವೆ ನಂಬರ್‌ಗೆ 15 ರೂಪಾಯಿ ಆದರೆ 60 ಸರ್ವೆ ನಂಬರ್‌ಗೆ ಎಷ್ಟು ಹಣ ಆಯಿತು ? ಇವತ್ತು ಒಬ್ಬ ಬಡ ಕಾರ್ಮಿಕನಿಗೆ ಮೂರು ಮುಕ್ಕಾಲು ಸೆಂಟ್, 5 ಸೆಂಟ್ ಜಾಗ ಇದ್ದರೆ ಅವನು ಆ ಎಲ್ಲಾ ಸರ್ವೆ ನಂಬರ್‌ಗೂ ಒಂದೊಂದು ಆರ್.ಟಿ.ಸಿ ತೆಗೆದುಕೊಳ್ಳಬೇಕಾಗುತ್ತದೆ. ಆ ಎಲ್ಲಾ ಸರ್ವೆ ನಂಬರ್‌ಗೆ ಆರ್.ಟಿ.ಸಿ. ತೆಗೆದಾಗ ಅವನಿಗೆ 4 ಸರ್ವೆ ನಂಬರ್‌ಗಳು ಇದರೆ 60 ರೂಪಾಯಿ ಕೊಡುವಂತಹ ಪರಿಸ್ಥಿತಿಯಾಗುತ್ತದೆ. ಇದರಿಂದ ಬಡವರಿಗೆ ರೈತರಿಗೆ ದೊಡ್ಡ ಹೊರೆ ಬೀಳುತ್ತದೆ. ಮೊದಲು ಜಮಾ ಬಂದಿ ಕೊಡುವ ಪದ್ದತಿ ಇತ್ತು. ಅವರು ಆಗ 2 ರೂಪಾಯಿ ಸ್ಟ್ಯಾಂಪ್ ಜೊತೆಗೆ 10 ರೂಪಾಯಿ ಫೀಜು ಕಟ್ಟಿದ್ದರೆ ಒಟ್ಟು 12 ರೂಪಾಯಿ ಕಟ್ಟಿದರೆ 60 ಸರ್ವೆನಂಬರ್‌ಗಳನ್ನು ಒಂದೇ ಜಮಾಮಂದಿಯಲ್ಲಿ ಬರೆದು ಕೊಡುತ್ತಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ:- ಅಕ್ಷರಗಳ ಮೇಲೆ ಫೀಜು. ಇಷ್ಟು ಅಕ್ಷರಗಳು ಇದ್ದರೆ ಅಷ್ಟು ಕಾಪಿಯಿಂಗ್ ಫೀಜು ಎಂದು ಇರುತ್ತದೆ. ಅದು ಹೇಗೆ ವ್ಯತ್ಯಾಸವಾಗುತ್ತದೆ ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ತಮಗೆ ಬೇಕಾದರೆ ನಾನ ದಾಖಲೆ ಕಳುಹಿಸಿಕೊಡುತ್ತೇನೆ. ನಾನು ದಾಖಲೆ ಇಲ್ಲದೇ ಮಾತನಾಡುವುದಿಲ್ಲ. ನಾನು ತಮಗೆ ಈಗಲೇ ಒಂದು ಜಮಾಬಂದಿಯನ್ನು ಕಳುಹಿಸಿ ಕೊಡುತ್ತೇನೆ. ತಾವು ಬೇಕಾದರೆ ನೋಡಬಹುದು. ನಮ್ಮ ಕೊಡಗಿನಲ್ಲಿ ಸುಮಾರು 300 ಟೆನ್ಯೂರ್‌ಗಳನ್ನು ಇವೆ.

ಶ್ರೀ ಕಾಗೋಡು ತಿಮ್ಮಪ್ಪ :- ಜಮಾ ಬಂದಿ ಪ್ರಶ್ನೆ ಅಲ್ಲ, ಸರ್ಟಿಫೈಡ್ ಕಾಪಿ ತೆಗೆದು ಕೊಳ್ಳಬೇಕಾದರೆ ಏನು ಮಾಡಬೇಕು ಸರ್ವೆ ನಂಬರ್‌ಗಳು ನಿಮ್ಮಲ್ಲಿಯೂ ಇವೆ. ಒಂದು ಸರ್ವೆ ನಂಬರ್‌ಗೆ ಒಂದು ಪಹಣಿ ಇದೆ. ಆ ಪಹಣಿ ದಾಖಲೆ ತೆಗೆದುಕೊಳ್ಳಬೇಕಾದರೆ ಅದು ಒಂದು ಗುಂಟೆ ಇದ್ದರೂ ಒಂದು ಪಹಣಿ ನೂರು ಎಕರೆ ಇದ್ದರೂ ಒಂದೇ ಸರ್ವೆ ನಂಬರ್ ಇದ್ದರೆ ಲ್ಯಾಂಡ್ ರೆವಿನ್ಯೂ ಅಕ್ಟ್ ನಿಮಗೂ ಒಂದೇ ನಮಗೂ ಒಂದೇ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಕೊಡಗಿನ ಬಹಳಷ್ಟು ಟೆನ್ಯೂರ್‌ಗಳು ಇರುವುದರಿಂದ ನಮಗೆ ಬೇರೆ ರೀತಿಯಲ್ಲಿದೆ. ನಾವು ಸಾಲಕ್ಕೆ ಬೇಕಾದರೂ ಜಮಾಬಂದಿಯನ್ನೇ ತೆಗೆದುಕೊಳ್ಳುತ್ತೇವೆ. ಇದಕ್ಕೆ ಎರಡು ರೂ. ಸ್ಟಾಂಪ್ ಹಾಕಿ 15 ರೂ. ಕಟ್ಟಿದರೆ ಇದರಲ್ಲಿ ನಮಗೆ ಸಂಬಂಧಪಟ್ಟ ಸರ್ವೆ ನಂ ಎಷ್ಟಿದೆ ಅಷ್ಟನ್ನೂ ಬರೆದು ಕೊಡುತ್ತಾರೆ. ಒಂದೇ ವಿಲೇಜ್‌ನಲ್ಲಿರುವ ಎಲ್ಲಾ ಸರ್ವೆನಂ.ಗಳನ್ನು ಬರೆದು ಕೊಡುತ್ತಾರೆ.

ಶ್ರೀ ಸೋಮಶೇಖರ್:- ಈ ಟೆನ್ಯೂರ್‌ಗಳನ್ನು ಯಾವ ರೀತಿ ಮಾಡಬೇಕೆನ್ನುವುದು ಬಹಳ ವರ್ಷಗಳಿಂದ ಇದ್ದ ಸಮಸ್ಯೆ. ಕೊನೆಗೆ ನಮ್ಮ ಸರ್ಕಾರವಿದ್ದಾಗ ಅದನ್ನು ಬಗೆಹರಿಸಿ ಅರ್ಡರ್ಸ್ ಇಶ್ಯೂಮಾಡಿದ್ದೇವೆ. ಈವತ್ತು ಸೋಮವಾರಪೇಟೆಯಲ್ಲಿ ಆಗುತ್ತಿದೆ. ಇದು ಸುಮಾರು 40-50 ವರ್ಷಗಳಿಂದ ಇದ್ದ ಸಮಸ್ಯೆ. ನಮ್ಮ ರಾಜ್ಯದಲ್ಲಿದ್ದಂತಹ ವ್ಯವಸ್ಥೆಗೂ ಕೊಡಗಿನಲ್ಲಿದ್ದಂತಹ ವ್ಯವಸ್ಥೆಗೂ ಬಹಳ ವ್ಯತ್ಯಾಸ ಇದೆ. 11-12 ಟೆನ್ಯೂರ್ಸ್ ಇವೆ. ಅವರು ಹೈಕೋರ್ಟಿಗೆ ಹೋಗಿ ಅವರು ತೀರ್ಮಾನ ಕೊಟ್ಟು ಅದರ ಮೇಲೆ ಮಾಡಿದ್ದಾರೆ. ಅದಕ್ಕೆ ಒಂದೊಂದು ಗ್ರೂಪ್‌ಮಾಡಿ 1999ರಲ್ಲಿ ಅರ್ಡರ್ಸ್ ಇಶ್ಯೂ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಟೆನ್ಯೂರ್ ಬೇರೆ ಇರಬಹುದು. ಸರ್ವೆ ನಂಬರ್ಸ್ ಇದ್ದೇ ಇವೆ.

ಶ್ರೀ ಸೋಮಶೇಖರ್:- ಲ್ಯಾಂಡ್ ರೆವಿನ್ಯೂ ಅಕ್ಟ್‌ಗೂ ಟೆನ್ಯೂರ್‌ಗಳಿಗೂ ಬಹಳ ವ್ಯತ್ಯಾಸ ಇದೆ.

(ಈ ಹಂತದಲ್ಲಿ ಶ್ರೀ ಬಿ.ಆರ್ ಯಾವಗಲ್ ಅವರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ಎಂ.ಪಿ ಅಪ್ಪಚ್ಚು ರಂಜನ್:- ನಾನು ಕಳುಹಿಸಿ ಕೊಡುತ್ತೇನೆ.

ಶ್ರೀ ಎನ್ ಯೋಗೀಶ್ ಭಟ್:- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತೊಂದು ಸಮಸ್ಯೆ ಇದೆ. ಮೂಲಗೇಣಿ ಪ್ರಾಪರ್ಟಿಗೆ ಸಂಬಂಧಪಟ್ಟಿರತಕ್ಕಂದಾದ್ದು. ಅಲ್ಲಿ 6 ತಿಂಗಳಿಂದ ಕಂಪ್ಯೂಟರೀಕರಣಗೊಂಡರೂ ಸಹ ಇವು ದಾಖಲಾಗಿಲ್ಲವೆಂದು

ಕಂಪ್ಯೂಟರೀಕರಣವಾದ ಕಾಪಿ ಆರ್.ಟಿ.ಸಿ ಅಪ್ಲೈ ಮಾಡಿದವರಿಗೆ ಸಿಗುತ್ತಿಲ್ಲ. ಲಿಖಿತವಾಗಿಯಾದರೂ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೇ, ಆರ್.ಟಿ.ಸಿ ಕೊಡುವಂತಹ ಸಂದರ್ಭದಲ್ಲಿ ಇದನ್ನು ತಾವು ಹೋಬಳಿ ಮಟ್ಟಕ್ಕೆ ತರಬೇಕು. ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿನವರು ಒಂದೇ ಜಾಗಕ್ಕೆ ಬರಬೇಕಾದರೆ ಒಂದು ಆರ್.ಟಿ.ಸಿ ಗೆ ಅವನು ಕಡಿಮೆ ಪಕ್ಷ 3 ರೂಪಾಯಿ ಆದರೂ ಬಸ್ ಚಾರ್ಜ್‌ಗಾಗಿ ಖರ್ಚು ಮಾಡಬೇಕು. ಆದ್ದರಿಂದ ಮೊದಲು ಹೇಗೆ ಇತ್ತು ಅದೇ ರೀತಿ ಆರ್.ಟಿ.ಸಿ ಯನ್ನು ಒಂದೇ ಪೇಜ್‌ನಲ್ಲಿ ಅವನಿಗೆ ಸಂಬಂಧಪಟ್ಟ ಸರ್ವೆ ನಂಬರ್‌ಗಳನ್ನು ಸೇರಿಸಿ ಪ್ರಿಂಟ್ ಮಾಡುವಂತಹ ಕೆಲಸ ಮಾಡದಿದ್ದರೆ ಬಹಳಷ್ಟು ರೈತರು ಇದರಿಂದ ಸಂಕಷ್ಟಕ್ಕೆ ಒಳಗಾಗುತ್ತಾರೆ. ನಿಮ್ಮ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಾರೆಂದು ಹೇಳಿದರೂ ಕೂಡ ತಪ್ಪಾಗಲಾರದು. ಮಾನ್ಯ ಮುಖ್ಯಮಂತ್ರಿಗಳು ಆಗಲೇ ಇರಲಿಲ್ಲ. ನಮ್ಮ ಪಕ್ಕದ ಕೇರಳ ಸರ್ಕಾರ ಬಹಳಷ್ಟು ಹಣಕಾಸಿನ ಮುಗ್ಗಟ್ಟು ಇದ್ದರೂ ಕೂಡ ಕಾಫಿ ಬೆಳೆಗಾರರಿಗೆ ಸಬ್ಸಿಡಿಯನ್ನು ಕೊಡುವುದಕೋಸ್ಕರ 6 ಕೋಟಿ ರೂಪಾಯಿಗಳನ್ನು ಮುಡಿಪಾಗಿಟ್ಟಿದ್ದಾರೆ. ರಬ್ಬರ್‌ಗೆ 9 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಕಾಳುಮೆಣಸಿಗೆ 8 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ಈ ರೀತಿ ಬೆಳೆಗಾರರ ಕಣ್ಣು ಒರೆಸುವಂಥ ಕೆಲಸವನ್ನು ಕೇರಳ ಸರ್ಕಾರ ಮಾಡಿದೆ. ಅಂತಹ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಕಾಫಿ ಬೆಳೆಗಾರರ ಮೇಲೆ ಏಕೆ ಎಷ್ಟು ನಿಷ್ಠೂರವಾಗಿನಡೆಸಿ ಕೊಳ್ಳುತ್ತಾರೆಂದು ನಾನು ಕೇಳಬೇಕಾಗುತ್ತದೆ. ಆದ್ದರಿಂದ ಕಾಫಿ ಬೆಳೆಗಾರರ ಕಣ್ಣು ಒರೆಸುವಂತಹ ಕೆಲಸವನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಾ ಇವತ್ತು ನಮ್ಮ ಗೃಹ ಮಂತ್ರಿಗಳೂ ಸಹ ಇಲ್ಲೇ ಇದ್ದಾರೆ.

ಶ್ರೀಮತಿ ಮೋಟಮ್ಮ: ಮಾನ್ಯ ಅಪ್ಪಚ್ಚು ರಂಜನ್‌ರವರೇ, ತಾವು ಆಗಲೇ ಮಾತನಾಡುತ್ತಾ ನಾನು ಕಾಫಿ ಬೆಳೆಗಾರರಿಗೆ ಬೆಂಬಲ ಬೆಲೆ ಕೊಡದೇ ಇದ್ದರೆ ರಾಜೀನಾಮೆ ಕೊಡುತ್ತೇನೆ ಎಂದು ಸಮಾರಂಭವೊಂದರಲ್ಲಿ ಹೇಳಿದ್ದಾಗಿ ಸದನದಲ್ಲಿ ಹೇಳಿದಿರಂತೆ. ರಾಜ್ಯ ಸರ್ಕಾರ ಬೆಂಬಲ ಬೆಲೆಯನ್ನು ಘೋಷಿಸುವುದಿಲ್ಲ. ಆ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತದೆ. ಕೇವಲ ಅಗ್ರಿಕಲ್ಚರಲ್ ಟ್ಯಾಕ್ ಇತ್ಯಾದಿ ಕೆಲಸವನ್ನು ಮಾತ್ರ ಸರ್ಕಾರ ಮಾಡುತ್ತದೆ. ಕೇಂದ್ರ ಸರ್ಕಾರ ಕಾಫಿಗೆ ಬೆಂಬಲ ಬೆಲೆಯನ್ನು ಕೊಡುವುದು. ಆ ಕೆಲಸವನ್ನು ನೀವೇ ಮಾಡಬೇಕಾಗಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾರ್ಕೆಟ್ ಇಂಟರ್‌ವೆನ್‌ಷನ್ ಸ್ಕೀಮ್ ಅನ್ನು ತಾವು ಘೋಷಣೆ ಮಾಡಬೇಕಾಗುತ್ತದೆ. ಬಜೆಟ್ ಭಾಷಣದ 6ನೇ ಪುಟದಲ್ಲಿನ 20ನೇ ಕಡಿಕೆಯಲ್ಲಿ "ಪ್ರಸಕ್ತ ವರ್ಷ ಸರ್ಕಾರವು ಆವರ್ತ ನಿಧಿಯಿಂದ 125 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಮೆಕ್ಕೆಜೋಳ, ರಾಗಿ, ಭತ್ತ ಮತ್ತು ಕೊಬ್ಬರಿ ಬೆಳೆಗಳಿಗೆ ಬೆಂಬಲ ಬೆಲೆ ಒದಗಿಸಿದೆ. ಅಡಿಕೆ ಬೆಲೆ ಕೂಡ ವಿಪರೀತ ಏರಿಳಿತಕ್ಕೆ ಒಳಗಾಗುತ್ತಿದ್ದು ಭಾರತ ಸರ್ಕಾರದ ಬೆಂದಬಲದೊಂದಿಗೆ ಇದನ್ನು ಸಹಾ ಈ ಯೋಜನೆಯಡಿ ಸೇರಿಸಲು ನಾನು ಉದ್ದೇಶಿಸಿದ್ದೇನೆ" ಎಂದು ಹೇಳಲಾಗಿದೆ. ಮೇಡಮ್‌ರವರು ದಯವಿಟ್ಟು ಇದನ್ನು ಸ್ವಲ್ಪ ಓದುವುದು ಒಳ್ಳೆಯದು. ಮಾನ್ಯ ಸಚಿವರು ಬಹಳ ಆತುರದಿಂದ ಒಂದೊಂದು ಸಾರಿ ಕೆಲಸ ಮಾಡುತ್ತೀರಿ. ನಾನು ಇವತ್ತು ಕವರ್ ಬಿಟ್ಟು

ಬಂದೆ. ನಾನು ತಮಗೆ ಒಂದು ಪತ್ರ ಬರೆದಿದ್ದೆ. ಆ ಪತ್ರಕ್ಕೆ ಮಾನ್ಯ ಸಚಿವರು ಕಳುಹಿಸಿದ್ದಾರೆ. ಅಂಗನವಾಡಿ ಕಾರ್ಯಕರ್ತರನ್ನು ಸೂಪರ್‌ವೈಸರ್ ಆಗಿ ಪ್ರಮೋಷನ್ ಯಾವಾಗ ಕೊಡುತ್ತೀರಿ? ಈ ದಿಸೆಯಿಂದ ತ್ವರಿತವಾದ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ನಾನು ನನ್ನ ಪತ್ರದಲ್ಲಿ ಆಗ್ರಹಿಸಿದ್ದೆ. ನನ್ನ ಆ ಪತ್ರಕ್ಕೆ ನೇರವಾಗಿ ಮಾನ್ಯ ಸಚಿವರಿಂದಲೇ ಉತ್ತರ ಬಂದಿದೆ. ಆದರೆ ಆ ಪತ್ರದ ಕೊನೆಯಲ್ಲಿ ಮಾನ್ಯ ಸಚಿವರಾದ ಮೋಟಮ್ಮನವರ ಸಹಿಯೇ ಇಲ್ಲ. ನಾನು ಇವತ್ತು ಮರೆತು ಹೋಗಿಬಿಟ್ಟೆ. ನನಗೆ ಇವತ್ತು ಮಾತನಾಡಲು ಅವಕಾಶ ಸಿಗುವುದಿಲ್ಲವೆಂದು ನಾನು ಭಾವಿಸಿದ್ದೆ. ಸಹಿ ಹಾಕದೇ ಮಾನ್ಯ ಸಚಿವರು ಪತ್ರವನ್ನು ಕಳುಹಿಸಿದ್ದಾರೆ. ಈ ಸರ್ಕಾರದಲ್ಲಿ/ಪತ್ರ ಬರೆಯುವ ಸಂದರ್ಭದಲ್ಲಿ ಸಹಿ ಒಂದು ಹಾಕದೇ ಕಳುಹಿಸುವಂತಹ ಮಂತ್ರಿಗಳಿದ್ದಾರೆ ಎನ್ನುವುದಾದರೆ ಈ ಸರ್ಕಾರದ ಕೆಲಸ ಯಾವ ರೀತಿ ನಡೆಯುತ್ತಿದೆ ಎಂಬ ಬಗ್ಗೆ ಚಿಂತನೆ ಮಾಡಬೇಕಾಗಿದೆ.

ಶ್ರೀಮತಿ ಮೋಟಮ್ಮ:- ಒಂದಕ್ಕೊಂದು ಸಂಬಂಧವಿಲ್ಲದಂತೆ ಮಾತನಾಡುತ್ತಿದ್ದೀರಲ್ಲಾ. ನೀವು ಬಜೆಟ್ ಬಗ್ಗೆ ಮಾತನಾಡುತ್ತಿರುವಾಗ ಪತ್ರದ ಬಗ್ಗೆ ಏಕೆ ಹೇಳುತ್ತೀರಿ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಬಜೆಟ್ ಮೇಲೆ ಮಾತನಾಡುವಾಗ ಯಾವ ವಿಚಾರದ ಬಗ್ಗೆಯೂ ಸಹಾ ಹೇಳಬಹುದಾಗಿದೆ. ತಮ್ಮ ವೈಫಲ್ಯತೆ ಬಗ್ಗೆ ನಾವು ಹೇಳಬಹುದು.

ಶ್ರೀ ಬಿ.ಎನ್. ಬಚ್ಚೇಗೌಡ:- ಜವಾಬ್ದಾರಿ ಸ್ಥಾನದಲ್ಲಿರುವಂತಹ ಮಾನ್ಯ ಮಂತ್ರಿಗಳು ಎಲ್ಲೋ ಓವರ್ ಸೈಟಾಗಿ ಸಹಿ ಬಿಟ್ಟು ಹೋಗಿರಬೇಕು, ಐಯಾಮ್ ಸಾರಿ ಎನ್ನುವಂತಹ ಮಾತನ್ನು ಹೇಳಬೇಕು. ಅದನ್ನು ಬಿಟ್ಟು ನೀವು ಆ ರೀತಿ ಮಾತನಾಡಬಾರದು ಎಂದು ಹೇಳುವುದು ಸರಿಯಲ್ಲ. It is your mistake. A letter was sent without signature from your side. ತಾವು ತಮ್ಮ ತಪ್ಪನ್ನು ಒಪ್ಪಿಕೊಳ್ಳದೇ ಈ ರೀತಿ ಮಾತನಾಡಿದರೆ ಹೇಗೆ? ಮಾನ್ಯ ಛೇರ್ಮನ್ ರವರೇ, ತಾವೇ ಹೇಳಿ ಮಾನ್ಯ ಮಂತ್ರಿಗಳು ಈ ರೀತಿ ಹೇಳುವುದು ಸರಿಯೇ ?

ಛೇರ್ಮನ್:- ಬೇರೊಂದು ವಿಷಯವನ್ನು ಪ್ರಸ್ತಾಪಿಸಿ ಮಾತನಾಡುತ್ತಿದ್ದಾಗ ಸದಸ್ಯನಾಗಿ ಈ ವಿಷಯ ಪ್ರಸ್ತಾಪಿಸಿದ್ದರಿಂದ ಮಾನ್ಯ ಮಂತ್ರಿಗಳು ಆ ರೀತಿ ಹೇಳಿದರು. ಇದರಲ್ಲಿ ಬೇರೇನೂ ಉದ್ದೇಶವಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಸದಸ್ಯರೊಬ್ಬರು ಮಾನ್ಯ ಮಂತ್ರಿಗಳು ಸಹಿ ಇಲ್ಲದ ಪತ್ರವೊಂದನ್ನು ತಮಗೆ ಕಳುಹಿಸಿದ ಬಗ್ಗೆ ನೇರವಾಗಿ ಪ್ರಸ್ತಾಪಿಸಿದಾಗ ಮಾನ್ಯ ಮಂತ್ರಿಗಳು ಅದು ಬಹುಶಃ ಓವರ್ ಸೈಟಿನಿಂದಾದ ತಪ್ಪಾಗಿರಬೇಕು, ದಯವಿಟ್ಟು ಕ್ಷಮಿಸಿ, ಮುಂದೆ ನಾನು ಆ ರೀತಿ ಆಗದಂತೆ ನನ್ನ ತಪ್ಪನ್ನು ಸರಿಪಡಿಸಿಕೊಳ್ಳುತ್ತೇನೆ ಎಂದು ಹೇಳಬೇಕಿತ್ತು. ಅದನ್ನು ಬಿಟ್ಟು ಆ ರೀತಿ ಏಕೆ ಹೇಳುತ್ತೀರಿ ಎಂದರೆ ಹೇಗೆ ? Is this the answer we expect here ?

ಛೇರ್ಮನ್:- ಮಾನ್ಯ ಮಂತ್ರಿಗಳು ಹೀಗೆಯೇ ಉತ್ತರ ಕೊಡಬೇಕೆಂದು ತಾವು ಏಕೆ ಕೇಳುತ್ತೀರಿ/ ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡುತ್ತಾರೆ ಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ನಾನು ಸಹಿ ಹಾಕದೇ ಪತ್ರ ಕಳುಹಿಸಿರುವ ಬಗ್ಗೆ ಹೇಳಿದರೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಅದು ಬಜೆಟ್ ವಿಚಾರವಲ್ಲ

ಎಂದು ಹೇಳಿದರು. ನಾನು ಆಗಲೇ ಮಾತನಾಡಿದಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಸದನದಲ್ಲಿ ಇರಲಿಲ್ಲ. ಮಾನ್ಯ ಸಚಿವರು ಡಿಸೆಂಬರ್ 13 ರಂದು ಚಿಕ್ಕಮಗಳೂರಿನಲ್ಲಿ ನಡೆದ ಕಾಫಿ ಬೆಳೆಗಾರರ ಹೋರಾಟದ ಪ್ರತಿಭಟನಾ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಮಾನ್ಯ ಸಚಿವರು, ನಾನು ಕಾಫಿ ಬೆಳೆಗಾರರ ಪರವಾಗಿದ್ದೇನೆ, ಕಾಫಿ ಬೆಳೆಗಾರರಿಗೆ ತೊಂದರೆಯಾದರೆ ನಾನು ಮಂತ್ರಿ ಮಂಡಲಕ್ಕೆ ರಾಜೀನಾಮೆ ಕೊಟ್ಟು ಕಾಫಿ ಬೆಳೆಗಾರರ ಜೊತೆಗೆ ಹೋರಾಟಕ್ಕೆ ಬರುತ್ತೇನೆ ಎಂದು ಹೇಳಿದ್ದರು. ಅದನ್ನು ಅವರು ಉಳಿಸಿಕೊಂಡಿದ್ದೀರಾ ಎಂದು ನೇರವಾಗಿ ಅಧ್ಯಕ್ಷರ ಮುಖಾಂತರ ನಾನು ಕೇಳಬಯಸುತ್ತೇನೆ. ಸಚಿವರು ಹೇಳಿದ ಬಗ್ಗೆ ಪತ್ರಿಕೆಗಳಲ್ಲಿ ಸಹಾ ವರದಿಯಾಗಿದೆ.

ಛೇರ್ಮನ್:- ಏನೋ ಒಂದು ಸಂದರ್ಭದಲ್ಲಿ ಹಾಗೆ ಹೇಳಿರಬಹುದು ಬಿಡಿ.

ಶ್ರೀಮತಿ ಮೋಟಮ್ಮ:- ಕಾಫಿ ಬೆಳೆಗಾರರಿಗೆ ಬೆಂಬಲ ಬೆಲೆ ನಿಗದಿ ಮಾಡದಿದ್ದರೆ ನಾನು ರಾಜೀನಾಮೆ ನೀಡುವುದಾಗಿ ಹೇಳಿದ್ದೆ ಎಂದು ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದರ ಬಗ್ಗೆ ನಾನು ಸ್ಪಷ್ಟೀಕರಣ ನೀಡಬಯಸುತ್ತೇನೆ. ಅಂದಿನ ಚಿಕ್ಕಮಗಳೂರಿನ ಸಭೆಯಲ್ಲಿ ನಾನೂ ಇದ್ದೆ, ಮಾನ್ಯ ಸದಸ್ಯರೂ ಇದ್ದರು. ತಮಗೆ ಗೊತ್ತಿದ್ದಂತೆ ಕಾಫಿ ಬೆಳೆಗಾರರ ಪೈಕಿ ಬಂದವರೊಬ್ಬರು ಆ ದಿನ ಅಲ್ಲಿ ಗಲಾಟೆ ಮಾಡಿದರು. ನೀವೆಲ್ಲಾ ನಮ್ಮ ಸಹಾಯಕ್ಕೆ ಬರದಿದ್ದರೆ ರಾಜೀನಾಮೆ ಕೊಟ್ಟು ಮಂತ್ರಿ ಮಂಡಲದಿಂದ ಹೊರಗಡೆ ಬರಬೇಕು ಎನ್ನುವ ಮಾತನ್ನು ಹೇಳಿದ್ದರು. ನನಗೆ ಮಾತ್ರವಲ್ಲ, ಕಾಫಿ ಬೆಳೆಯುವ ಪ್ರದೇಶದಿಂದ ಮಂತ್ರಿಗಳೆಲ್ಲಾ ರಾಜೀನಾಮೆ ಕೊಡಬೇಕು ಎಂದು ಅಂದು ಆಗ್ರಹಿಸಲಾಗಿತ್ತು. ಆ ಸಂದರ್ಭದಲ್ಲಿ, ರಾಜೀನಾಮೆ ಕೊಡುವುದರಿಂದ ನಿಮಗೆ ಉಪಯೋಗವಾಗುವುದಾದರೆ, ನಾವು ರಾಜೀನಾಮೆ ಕೊಡೋಣ ಎಂಬ ಮಾತನ್ನು ಹೇಳಿದನೇ ವಿನಃ ಬೆಂಬಲ ಬೆಲೆಯನ್ನು ಕರ್ನಾಟಕ ಸರ್ಕಾರ ಕೊಡದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ ಎನ್ನುವ ಮಾತನ್ನು ನಾನು ಹೇಳಲಿಲ್ಲ.

ಛೇರ್ಮನ್:- ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಿರುವುದರಿಂದ, ಆ ವಿಷಯ ಬಿಟ್ಟು ಮಾನ್ಯ ಸದಸ್ಯರು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಮಂತ್ರಿಗಳು, ನಾನು ಕಾಫಿ ಬೆಳೆಗಾರರ ಪರವಾಗಿದ್ದೇನೆ, ಕಾಫಿ ಬೆಳೆಗಾರರಿಗೆ ಅನ್ಯಾಯವಾದರೆ ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದೇ ಸಂದರ್ಭದಲ್ಲಿ ಮಾನ್ಯ ಚಂದ್ರೇಗೌಡರು, ನಾನು ರಾಜೀನಾಮೆ ಕೊಡುವುದಿಲ್ಲ. ನಾನು ಬಹಳಷ್ಟು ಸರ್ಕಾರಗಳನ್ನು ನೋಡಿದ್ದೇನೆ, ರಾಜೀನಾಮೆ ಕೊಟ್ಟು ಮೂಲೆಗೆ ಹೋಗಲಿಕ್ಕೆ ನಾನು ತಯಾರಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ತಾವು ಏಕೆ ಈಗ ಮಾತನ್ನು ಈ ರೀತಿ ತಿರುಗಿಸುತ್ತೀರಿ ? ನಾನು ಮಾನ್ಯ ಸಚಿವರು ಹೇಳದೇ ಇರುವ ಯಾವ ವಿಚಾರವನ್ನೂ ಸಹ ಇಲ್ಲಿ ಪ್ರಸ್ತಾಪಿಸಿಲ್ಲ. ಅವರು ಹೇಳಿದ ವಿಚಾರವನ್ನೇ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಛೇರ್ಮನ್:- ಇರಲಿ ಬಿಡಿ, ತಾವು ಬೇರೆ ವಿಚಾರ ಪ್ರಸ್ತಾಪ ಮಾಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ದಯವಿಟ್ಟು ಕಾಫಿ ಬೆಳೆಗಾರರ ಕಣ್ಣೀರು

ಒರೆಸುವಂತಹ ಕೆಲಸವನ್ನು ಮಾಡಬೇಕು ಎಂದು ಕೋರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಕೊಡಗಿನ ಮೇಲೆ ಅಪಾರವಾದಂತಹ ಗೌರವ ಇದೆ ಎಂದು ನಾನು ತಿಳಿದುಕೊಂಡಿದ್ದನೆ. ನಿನ್ನೆ ನಾನು ಮಂಡ್ಯದಿಂದ ಬರುವ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಬಳಿ ರಸ್ತೆ ಬದಿಯಲ್ಲಿ ಬಹಳಷ್ಟು ನೀರು ಕಂಡೆ, ಬಹಳಷ್ಟು ಜನ ಆ ನೀರಿನಲ್ಲಿ ಬಟ್ಟೆಯನ್ನು ಒಗೆಯುತ್ತಿದ್ದರು. ಆದರೆ ಇವತ್ತು ನಮ್ಮ ಕೊಡಗಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂರೆಯಾಗಿದೆ. ಅದರ ಜೊತೆಗೆ ಬಟ್ಟೆ ಒಗೆಯಲಿಕ್ಕೆ ಒಂದೆರಡು ಕಿಲೋಮೀಟರ್ ನಡೆದು ಹೋಗುವಂತಹ ಪರಿಸ್ಥಿತಿ ಕೂಡಾ ಇದೆ. ಕೊಡಗಿನಲ್ಲಿ ಸಾಕಷ್ಟು ಮಳೆಯಾಗುವುದಿಲ್ಲವೇ ಎಂದು ತಾವು ಕೇಳಬಹುದು. ನಮ್ಮ ಸೋಮವಾರಪೇಟೆ ತಾಲ್ಲೂಕಿನಲ್ಲಿ ನಾಲ್ಕು ಗ್ರಾಮ ಪಂಚಾಯಿತಿಗಳು ಹಾಸನಕ್ಕೆ ಸೇರಿದಂತಹ ಪರಿಸ್ಥಿತಿ ಇದೆ. ತಾವು ಅಲ್ಲಿಗೆ ಲಿಫ್ಟ್ ಇರಿಗೇಷನ್ ಒಂದನ್ನು ಕೊಟ್ಟರೆ ತಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಇದರಿಂದಾಗಿ ಸೋಮವಾರ ಪೇಟೆಯ ಜನತೆಯ ಕುಡಿಯುವ ನೀರಿನ ಬವಣೆ ನೀಗುವುದಲ್ಲದೆ, ಸರಿಯಾಗಿ ಬೆಳೆಯನ್ನು ಬೆಳೆಸುವಂತಹ ಕೆಲಸ ಸಹಾ ಇದರಿಂದ ಆಗುತ್ತದೆ. ನಮ್ಮ ಕೊಡಗಿಗೆ ತಾವು ಮೂರು ಜನ ಮಂತ್ರಿಗಳನ್ನು ಕೊಟ್ಟಿದ್ದೀರಿ. ಬಹಳ ಸಂತೋಷ. ಆದರೆ ಈ ಮೂರು ಜನ ಮಂತ್ರಿಗಳೂ ಕೂಡ ಕಾಫಿ ವಿಚಾರದಲ್ಲಿ ಯಾವುದೇ ಸಂದರ್ಭದಲ್ಲಿ ಹೋರಾಟ ಮಾಡುವ ಬಗ್ಗೆ ಚಕಾರವನ್ನೇ ಎತ್ತಿಲ್ಲ, ಕಾಫಿ ಬೆಳೆಗೆ ತೊಂದರೆಯಾದರೆ, ಅವರ ಅಡಿಪಾಯ ಸಹ ಅಲ್ಲಾಡುತ್ತದೆ. ದಯವಿಟ್ಟು ಈ ಕಾಫಿ ಬೆಳೆಗೆ ತಾವು ಬೆಂಬಲ ಬೆಲೆ ಘೋಷಣೆ ಮಾಡುವುದರೊಂದಿಗೆ, ತಮ್ಮ ಕೈಯಿಂದ ಎಷ್ಟೆಲ್ಲಾ ಸಾಧ್ಯವಾಗುತ್ತದೋ ಅಷ್ಟು ಸಹಾಯವನ್ನು ಮಾಡಬೇಕೆಂದು ಕೋರುತ್ತೇನೆ. ಎಲ್ಲರೂ ಪ್ಲಾಂಟರ್‌ಗಳೇ, ಆದರೆ ಕಾಫಿ ವಿಚಾರ ಬಂದಾಗ ಯಾರೂ ಕೂಡ ಮಾತನಾಡುತ್ತಿಲ್ಲ, ಏನು ಮಾಡುವುದು ?

ಶ್ರೀಮತಿ ಸುಮಾ ವಸಂತ್:- ನಮಗೂ ಕೂಡ ಕಾಫಿ ಬೆಳೆಗಾರರ ಬಗ್ಗೆ ಕಾಳಜಿ ಇದೆ. ನಾವು ಆ ಬಗ್ಗೆ ಸದನದಲ್ಲಿ ಮಾತನಾಡದೇ ಇರಬಹುದು. ದೆಹಲಿಗೆ ನಿಯೋಗವೊಂದನ್ನು ನಾವು ಈ ದಿಸೆಯಲ್ಲಿ ಕೊಂಡೊಯ್ದು ಸಂಬಂಧಪಟ್ಟವರೊಡನೆ ಮಾತನಾಡಿದ್ದೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಛೇರ್ಮನ್‌ರವರೇ, ನಾನು ದೆಹಲಿಗೆ ಹೋಗಿರಲಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಎಲ್ಲಾ ಸಂದರ್ಭಗಳಲ್ಲಿ ನಡೆದ ಮೀಟಿಂಗ್‌ಗಳಿಗೆ ನಾನು ಬಂದಿದ್ದೇನೆ, ಅಲ್ಲೂ ಕೂಡಾ ಹೋಗಿದ್ದೇನೆ. ಮಾನ್ಯ ಮಂತ್ರಿಗಳು ಆಗಾಗ ದೆಹಲಿಗೆ ಹಾರಬಹುದು, ಏಕೆಂದರೆ ತಮ್ಮ ವಿಮಾನ ಯಾನದ ವೆಚ್ಚವನ್ನು ಸರ್ಕಾರ ಭರಿಸುತ್ತದೆ. ನಾವು ಅಲ್ಲಿಗೆ ಹೋಗುವುದಾದರೆ, ನಾವು ನಮ್ಮ ಕಿಸೆಯಿಂದ ಹಾಕಿಕೊಂಡು ಹೋಗಬೇಕಾಗುತ್ತದೆ. ಇದು ನಮಗೆ ಸ್ವಲ್ಪ ಕಷ್ಟವಾಗುತ್ತದೆ.

ಶ್ರೀಮತಿ ಮೋಟಮ್ಮ:- ತಾವು ಹಾಗೆ ಹೇಳಬಾರದು. ದೆಹಲಿಗೆ ನಾವು ಅದಕ್ಕೋಸ್ಕರ ಹೋಗಿ ಮಾತನಾಡುವುದು ಬೇರೆ. ಆದರೆ ನಿಮ್ಮ ಗ್ರೋಯರ್ಸ್ ಅಸೋಸಿಯೇಷನ್‌ರವರ ಜೊತೆಗೆ ಪ್ರತ್ಯೇಕವಾದ ನಿಯೋಗವೊಂದನ್ನು ನಾವು ಕರೆದುಕೊಂಡು ಹೋಗಿರಲಿಲ್ಲವೇ? ವಿಧಾನ ಪರಿಷತ್ತಿನ ಸಭಾಪತಿಗಳೂ ಕೂಡ ಆ ನಿಯೋಗದೊಂದಿಗೆ ಇದ್ದರು, ಆಗ ನಾವು ಕೇಂದ್ರ ಸರ್ಕಾರದ ಕಾಮರ್ಸ್ ಮಿನಿಸ್ಟರ್ ಮತ್ತು ಫೈನಾನ್ಸ್ ಮಿನಿಸ್ಟರ್‌ರವರನ್ನು ಭೇಟಿ ಮಾಡಿ ರಿಕ್ವೆಸ್ಟ್ ಮಾಡಿ ಬಂದೆವು. ಆಗ ನೀವು ಏಕೆ ಬರಲಿಲ್ಲ ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಆಗ ನನಗೆ ಬರಲಿಕ್ಕೆ ಸಾಧ್ಯವಾಗದೇ ಇದ್ದುದರಿಂದ ನಾನು ಬರಲಿಲ್ಲ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಆಗ ತಾವೇ ಡೆಲಿಗೇಷನ್‌ವೊಂದನ್ನು ತೆಗೆದುಕೊಂಡು ಹೋಗುವುದಾಗಿ ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಎಸ್.ಎಂ. ಕೃಷ್ಣ:- ನಿಮ್ಮ ಅಸಹಾಯಕತೆಯ ಪ್ರಾಮಾಣಿಕತೆಯನ್ನು ನಾವೆಲ್ಲರೂ ಒಪ್ಪುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಸನ್ಮಾನ್ಯ ಮುಖ್ಯಮಂತ್ರಿಗಳೇ, ನಾನು ಪ್ರಾಮಾಣಿಕವಾಗಿ ಮಾತನಾಡುವುದನ್ನು ಕಲಿತಿದ್ದೇನೆ ಮತ್ತು ಪ್ರಾಮಾಣಿಕವಾಗಿ ಇರಲಿಕ್ಕೂ ಕೂಡ ಕಲಿತಿದ್ದೇನೆ. ನಾನು ಕೆಲವು ಸಂದರ್ಭಗಳಲ್ಲಿ ನಮ್ಮ ಶಾಸಕರ ಜೊತೆಗೆ ಈ ಸರ್ಕಾರದಿಂದ ಶಾಸಕರುಗಳಿಗೆ ಕೊಡುತ್ತಿರುವಂತಹ ಸವಲತ್ತುಗಳು ಸಾಲದು ಎಂಬ ಮಾತನ್ನು ಹೇಳುತ್ತಿರುತ್ತೇನೆ. ಇವತ್ತು ಒಂದು ತಾಲ್ಲೂಕಿನಲ್ಲಿ ತಹಸೀಲ್ದಾರ್, ಸಿ.ಡಿ.ಪಿ ಅವರಿಗೆ ಎಗ್ಸಿಕ್ಯೂಟಿವ್ ಆಫೀಸರ್, ಬಿ.ಡಿ. ಓ ಗೆ ಇತ್ಯಾದಿ ಸರ್ಕಾರಿ ಅಧಿಕಾರಿಗಳಿಗೆ ಜೀಪ್‌ಗಳನ್ನು ಒದಗಿಸಿಕೊಡಲಾಗಿದೆ. ಎಂ.ಪಿ.ಗಳಿಗೆ ಸರ್ಕಾರ ಕಾರನ್ನೇ ನೀಡಿದೆ. ಇವೆಲ್ಲಾ ಬೇಕು ನಿಜ. ಆದರೆ ಶಾಸಕರ ಪರಿಸ್ಥಿತಿ ಏನಾಗಿದೆ ಎಂದರೆ, ಅವರು ತಮ್ಮ ಸ್ವಂತ ವೆಹಿಕಲನ್ನು ತೆಗೆದುಕೊಂಡು, ಅವರೇ ಪೆಟ್ರೋಲ್:ಡೀಸೆಲ್ ಹಾಕಿಸಿಕೊಂಡು ಸುತ್ತಬೇಕಾಗಿದೆ. ಇವತ್ತು ನಮ್ಮ ಪರಿಸ್ಥಿತಿ ತಹಸೀಲ್ದಾರರಿಗಿಂತ ಕಡಿಮೆಯಾಗಿದೆ. ಪ್ರಾಮಾಣಿಕವಾಗಿ ಕಲಸ ಮಾಡುವ ಸಲುವಾಗಿ ನಾನ ಇಲ್ಲಿಗೆ ಬಂದಿದ್ದೇನೆ. ನನ್ನ ಹಾಗೆ ಸುಮಾರು ಶಾಸಕರುಗಳು ಬಂದಿರಬಹುದು. ಅಂತಹ ಸಂದರ್ಭದಲ್ಲಿ ಅವರಿಗೆ ಸರ್ಕಾರದಿಂದ ಸರಿಯಾದ ಸವಲತ್ತಗಳು ಸಿಕ್ಕಿದರೆ, ಅವರು ಪ್ರಾಮಾಣಿಕವಾಗಿ ಕಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ತಾವು ಮುಖ್ಯಮಂತ್ರಿಗಳಾಗಿರುವ ಸಂದರ್ಭದಲ್ಲಿ ಶಾಸಕರುಗಳಿಗೆ ಹೆಚ್ಚು ಸವಲತ್ತು ಒದಗಿಸಬೇಕೆಂದು ಕೋರುತ್ತೇನೆ. ನಮಗೆ ಸಂಬಳ ಜಾಸ್ತಿ ಮಾಡಿ ಎಂದು ನಾನು ಕೇಳುತ್ತಿಲ್ಲ. ನಮಗೆ ಓಡುವಂತಹ ಒಂದು ವೆಹಿಕಲ್ ಅನ್ನು ಕೊಟ್ಟು ....

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್:- ಮಾನ್ಯ ಛೇರ್ಮನ್‌ರವರೇ, ಹಿಂದಿನ ಸರ್ಕಾರದ ಅವಧಿಯಲ್ಲಿ ಆ ಕ್ಷೇತ್ರದ ವಿವಿಧ ಇಲಾಖೆಯ ವೆಹಿಕಲ್‌ಗಳನ್ನು ಶಾಸಕರು ಕ್ಷೇತ್ರದಲ್ಲಿ ಪ್ರವಾಸ ಮಾಡುವಂತಹ ಸಂದರ್ಭದಲ್ಲಿ ತಿಂಗಳಿನಲ್ಲಿ 20 ದಿನ ಕೊಡಬೇಕು ಎನ್ನುವಂತಹ ಸರ್ಕ್ಯೂಲರ್‌ವೊಂದನ್ನು ಇಶ್ಯೂ ಮಾಡಿದ್ದರು. ಆದರೆ ಈಗಿನ ಸನ್ನಿವೇಶದಲ್ಲಿ ಅದು ಎಫೆಕ್ಟ್‌ನಲ್ಲಿ ಇಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನ ಹರಿಸಬೇಕು.

7.30 ಪಿ.ಎಂ

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:- ಹೌದು, 20 ದಿವಸಗಳೂ ವೆಹಿಕಲ್ ಕೊಡಬೇಕು ಹಾಗೂ ಹತ್ತಿರದ ಆಫೀಸ್‌ನಲ್ಲಿಯ ಟೆಲಿಫೋನ್ ಕನ್‌ಕ್ಷನನ್ನು ಶಾಸಕರ ಆಫೀಸ್‌ಗೂ ಕೊಡಬೇಕು ಎಂದು ಕೊಟ್ಟಿದರು. ಆದರೆ ಇವೊತ್ತು ಯಾರೂ ಕೊಡುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಶಾಸಕರನ್ನು ಪ್ರಾಮಾಣಿಕವಾಗಿ ಹೆಚ್ಚು ಕೆಲಸ ಮಾಡುವ ಹಾಗೆ ಮಾಡುವುದಕ್ಕೆ ಶಾಸಕರಿಗೆ ಬೇಕಾದ ಅಗತ್ಯ ಸವಲತ್ತುಗಳನ್ನು ಕೊಡಬೇಕು. ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆಂದು

ಹೇಳುತ್ತಾ ಮತ್ತು ಕಾಫಿ ಬೆಳೆಗಾರರಿಗೆ ಹೆಚ್ಚು ರಿಯಾಯಿತಿಯನ್ನು ಘೋಷಣೆ ಮಾಡುವುದರೊಂದಿಗೆ ಕೇಂದ್ರ ಸರ್ಕಾರಕ್ಕೆ ಡೆಲಿಗೇಷನ್ ಹೋಗುವಂಥ ಸಂದರ್ಭದಲ್ಲಿ ತಾವೂ ಕೂಡ ಬರಬೇಕೆಂದು ಹೇಳುತ್ತಾ ನನಗೆ ಬಜೆಟ್ ಮೇಲೆ ಭಾಷಣ ಮಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಅನುಸೂಯಮ್ಮ ನಟರಾಜನ್ (ಚಿಕ್ಕಬಳ್ಳಾಪುರ):- ಗೌರವಾನ್ವಿತ ಸಭಾಧ್ಯಕ್ಷರೇ ಈ ವರ್ಷದ ಜನಪದವಾದ ಆಯವ್ಯಯ 2002-03ರ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಂಥ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಪ್ರಾರಂಭ ಮಾಡುತ್ತೇನೆ. ಪ್ರಕೃತಿಯಲ್ಲಿ ಮನುಷ್ಯ ಜೀವಿಸಲು ಗಾಳಿ ಬೆಳಕು ಬೇಕಾಗುತ್ತದೆ. ಪ್ರಕೃತಿಯಲ್ಲಿ ಗಾಳಿ ಬೆಳಕು ಸಿಗುತ್ತದೆ. ನೀರು ಕೂಡ ಸಿಗುತ್ತದೆ. ಅದನ್ನು ನಾವು ಯಾವ ರೀತಿ ಬಳಸಿಕೊಳ್ಳಬೇಕು. ಯಾವ ರೀತಿಯಲ್ಲಿ ಅದನು ಕಾಪಾಡಿಕೊಳ್ಳಬೇಕು ಎನ್ನುವುದು ಮುಖ್ಯ ಏಕೆಂದರೆ ಪ್ರತಿಯೊಂದು ಜೀವಿಗೂ ನೀರು ಅತ್ಯವಶ್ಯಕ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ. ನಾವು ಗೆದ್ದ ತಕ್ಷಣ ಹಳ್ಳಿಗಳಿಗೆ ಹೋದೆವು. ಅಲ್ಲಿ ಎಲ್ಲಿ ನೋಡಿದರೂ ನೀರಿಗೆ ಹಾಹಾಕಾರ ಇರುತ್ತಿತ್ತು. ನಾವು ಹೋದ ಕಡೆಯಿಲ್ಲಿಲ್ಲಾ ಇಲ್ಲಿ ಮನೆಗಳಲ್ಲಿ ನೀರಿಲ್ಲ ಆದುದರಿಂದ ಎಳನೀರು ತೆಗೆದುಕೊಳ್ಳಿ ಎಂದು ನಮಗೆ ಕೊಡುತ್ತಿದ್ದರು. ಇಂಥ ಸನ್ನಿವೇಶ ಅರಿತ ನಮ್ಮ ಸರ್ಕಾರ ಪ್ರತಿಯೊಂದು ಹಳ್ಳಿಗೂ ಬೋರ್ ಪಾಯಿಂಟ್ಸ್ ಹಾಕಿಸಿತು. ಇದರಿಂದಾಗಿ ನಮ್ಮ ಚಿಕ್ಕಬಳ್ಳಾಪುರದಲ್ಲಿ ಸುಮಾರು 100 ಕೊಳವೆ ಬಾವಿಗಳು ಬಂದಿವೆ. ಈ ವಿಚಾರವನ್ನು ನಾವು ಎದೆ ತಟ್ಟಿಕೊಂಡು ಹೇಳುತ್ತೇವೆ. ಇನ್ನು ಓ.ಎಸ್.ಟಿ. ಟ್ಯಾಂಕ್ ಬಗ್ಗೆ ಹೇಳುವುದಾದರೆ ಹಿಂದಿನ ಹತ್ತು ವರ್ಷಗಳಲ್ಲಿ ಕೇವಲ ಎರಡೇ ಎರಡು ಓ.ಎಸ್.ಟಿ. ಟ್ಯಾಂಕ್ ಆಗಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎರಡೇ ವರ್ಷಗಳಲ್ಲಿ ನಮ್ಮ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಹದಿನಾಲ್ಕು ಓ.ಎಸ್.ಟಿ. ಟ್ಯಾಂಕ್ ಆಗಿವೆ. ಈ ಓ.ಎಸ್.ಟಿ. ಟ್ಯಾಂಕ್ ನಡಿಯಲ್ಲಿ ಮನೆ ಮನೆಗೂ ಒಂದು ಕೊಳಾಯಿ ವ್ಯವಸ್ಥೆ ಆಗಿದೆ. ಈಗ ಗ್ರಾಮಾಂತರದವರು ನೀರಿನ ಸಮಸ್ಯೆ ಇಲ್ಲದೇ ಆರಾಮವಾಗಿದ್ದಾರೆ. ಇನ್ನು ರಸ್ತೆಗಳ ಬಗ್ಗೆ ಹೇಳಬೇಕೆಂದರೆ ಈ ರಸ್ತೆಗಳು ಎಲ್ಲಿ ನೋಡಿದರೂ ಕೂಡ ಹದಗೆಟ್ಟಿತ್ತು. ನಮ್ಮ ಸಹೋದರಿಯವರು ಹೇಳಿದ ಹಾಗೆ ಕಳೆದ ಹತ್ತು ವರ್ಷಗಳಲ್ಲಿ ಯಾವ ರಸ್ತೆಗಳೂ ಕೂಡ ಮೆಷಿನ್‌ಗಳನ್ನು, ಟಾರ್ ಹಾಗೂ ಜಲ್ಲಿ ಮುಖ ನೋಡಿಯೇ ಇರಲಿಲ್ಲ. ಇಂಥ ಸಮಯದಲ್ಲಿ ಬಂದ ನಮ್ಮ ಸರ್ಕಾರ ರಸ್ತೆಗಳ ಬಗ್ಗೆ ಯೋಜನೆ ಹಾಕಿಕೊಂಡು ಪ್ರತಿ ಶಾಸಕರ ಕ್ಷೇತ್ರದಲ್ಲಿ 100 ಲಕ್ಷ ರೂ.ಗಳಲ್ಲಿ ಅವರು ಆಯ್ಕೆ ಮಾಡಿಕೊಂಡ ರಸ್ತೆಗಳಲ್ಲಿ ಟಾರ್ ಹಾಕಿಸುವ ಹಾಗೆ ಮಾಡಿದ್ದರಿಂದ ಒಳ್ಳೆಯದಾಯಿತು. ಇನ್ನು ನಬಾರ್ಡ್ ಯೋಜನೆಯಲ್ಲೂ ಕೂಡ ಎರಡು ರಸ್ತೆಗಳಾಯಿತು. ಇದೇ ರೀತಿ ಲೋಕೋಪಯೋಗಿ ಇಲಾಖೆಯಿಂದ 140 ಲಕ್ಷ ರೂ.ಗಳ ರಸ್ತೆಗಳಾಯಿತು. ಇನ್ನು ಪ್ಯಾಚ್ ವರ್ಕ್‌ಂತೂ ಎಲ್ಲಾ ರಸ್ತೆಗಳಲ್ಲೂ ನಡೆಯುತ್ತಲೇ ಇದೆ. ಇದಲ್ಲದೇ ತಾಲ್ಲೂಕು ಪಂಚಾಯಿತಿಯಿಂದಲೂ ಸಣ್ಣಪುಟ್ಟ ರಸ್ತೆಗಳು ಆಗುತ್ತಿವೆ. ಇದಕ್ಕೆ ನಾವೆಲ್ಲರೂ ಹೆಮ್ಮೆಪಡುತ್ತೇವೆ. ಇನ್ನು ಈ ಆಯವ್ಯಯದಲ್ಲಿ ನಬಾರ್ಡ್‌ನಡಿ 164 ಕೋಟಿ ರೂ.ಗಳ ವೆಚ್ಚದಲ್ಲಿ 2252 ಕಿ.ಮೀ. ರಸ್ತೆಗಳ ದುರಸ್ತಿ ಕೆಲಸವಾಗುತ್ತಿದೆ. 86 ಪ್ರಮುಖ ಜಿಲ್ಲಾ ರಸ್ತೆಗಳ ಕೆಲಸವನ್ನು 65 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಗೊಳ್ಳುತ್ತಿರುವುದಕ್ಕೆ ನಮ್ಮ ಸರ್ಕಾರಕ್ಕೆ ನಾನು ಅಭಿನಂದನೆಗಳನ್ನು

ಸಲ್ಲಿಸುತ್ತೇನೆ. ಇನ್ನು ಕೃಷಿಯ ಬಗ್ಗೆ ಹೇಳಬೇಕೆಂದರೆ ನಮ್ಮ ಸರ್ಕಾರ ರೈತರ ಬಗ್ಗೆ ಅತಿ ಹೆಚ್ಚಿನ ಜಾಗೃತಿಯನ್ನು ತೆಗೆದುಕೊಂಡು ಕೃಷಿ ಸಲುವಾಗಿಯೇ 5010 ಕೋಟಿ ರೂ.ಗಳನ್ನು ವಿದ್ಯುತ್‌ಗಾಗಿ ಹಾಗೂ 2900 ಕೋಟಿ ರೂ.ಗಳನ್ನು ನೀರಾವರಿಗಾಗಿ ಖರ್ಚು ಮಾಡುತ್ತಿದೆ. ಇದು ಅತ್ಯಂತ ಹೆಮ್ಮೆ ಪಡುವ ವಿಚಾರವೇ ಆಗಿದೆ. ಇನ್ನು ವ್ಯವಸಾಯ ಮಾರುಕಟ್ಟೆ ಮೂಲಕ ನಮ್ಮ ಚಿಕ್ಕಬಳ್ಳಾಪುರದಲ್ಲಿ ರಾಗಿ ಬೆಳೆಗಾರರಿಂದ ಒಂದು ಕ್ವಿಂಟಾಲ್ ರಾಗಿಗೆ ಸುಮಾರು 485 ರೂ.ಗಳನ್ನು ನಿಗಧಿಗೊಳಿಸಿ ಸುಮಾರು 13 ಸಾವಿರ ಕ್ವಿಂಟಾಲ್ ರಾಗಿಯನ್ನು ನ್ಯಾಯಬೆಲೆಯಲ್ಲಿ ಸಾರ್ಕರ ತೆಗೆದುಕೊಂಡಿದೆ. ಇದರಿಂದಾಗಿ ರೈತರಿಗೆ ಅನುಕೂಲವಾಗಿ ನ್ಯಾಯ ಒದಗಿಸಿದ ಹಾಗೆ ಆಯಿತು. ಇಂಥ ಕ್ರಮವನ್ನು ನಮ್ಮ ಕಡೆ ಇತಿಹಾಸದಲ್ಲಿಯೇ ನಮ್ಮ ಸರ್ಕಾರ ಮೊದಲು ತೆಗೆದುಕೊಂಡಿದ್ದಕ್ಕೆ ನಾವು ಹೆಮ್ಮೆ ಪಡುತ್ತೇವೆ. ಒಬ್ಬ ರೈತನಿಗೆ ಅನ್ಯಾಯವಾಗಿದೆ ಎಂದು ವಿರೋಧ ಪಕ್ಷದವರು ಪದೇ ಪದೇ ಹೇಳುತ್ತಲೇ ಇರುತ್ತಾರೆ. ಆದರೆ 99 ರೈತರಿಗೆ ಅನುಕೂಲವಾಗಿರುವ ಬಗ್ಗೆ ಅವರು ಇಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ಇನ್ನು ರೈತರಿಂದ ಕಡ್ಡಾಯವಾಗಿ ಸಾಲವನ್ನು ವಸೂಲಾತಿ ಸರ್ಕಾರ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ಹೇಳುವುದೇನೆಂದರೆ ಆ ವಸೂಲಿ ರೈತರಿಗೋಸ್ಕರವೇ ಮಾಡುತ್ತಿರುವುದು, ರೈತರು ಸಾಲವನ್ನು ಮರುಪಾವತಿ ಮಾಡಿದಾಗ ಅದೇ ಹಣವನ್ನು ಇನ್ನೂ ಕೆಲವು ರೈತರಿಗೆ ಕೊಟ್ಟು ಎಷ್ಟೋ ರೈತರುಗಳನ್ನು ಅಭಿವೃದ್ಧಿಪಡಿಸಬಹುದು ಎನ್ನುವ ಅಭಿಪ್ರಾಯದಿಂದಲೇ ನಮ್ಮ ಸರ್ಕಾರ ಸಾಲ ವಸೂಲಾತಿ ಕ್ರಮವನ್ನು ತೆಗೆದುಕೊಂಡಿದೆ.ಇಡೀ ರಾಷ್ಟ್ರದಲ್ಲಿಯೇ ಅತಿ ದೊಡ್ಡ ಒಣಭೂಮಿಯನ್ನು ನಮ್ಮ ಕರ್ನಾಟಕ ಹೊಂದಿದ್ದು ಎರಡನೆಯ ಸ್ಥಾನ ಪಡೆದಿದೆ. ಇದರಲ್ಲಿ ಜಲಾನಯನ ಇಲಾಖೆಗೆ ಸುಮಾರು ದುಡ್ಡನ್ನು ಖರ್ಚುಮಾಡದೇ ಈಗ 690 ಕೋಟಿ ರೂ.ಗಳನ್ನು ವಿಶ್ವಬ್ಯಾಂಕ್ ನೆರವಿನಿಂದ ಸಾಲವನ್ನು ನಮ್ಮ ಸರ್ಕಾರ ಪಡೆಯುತ್ತಿದೆ. ಈ ಜಲಾನಯನದಿಂದ ಅಲ್ಲಲ್ಲಿ ರೈತರಿಗೆ ಕುಡಿಯುವುದಕ್ಕೆ ನೀರು, ಹಸುಕರುಗಳಿಗೆ ಕುಡಿಯುವುದಕ್ಕೆ ನೀರು ಹಿಂದೆ ಇರುತ್ತಿರಲಿಲ್ಲ. ಈ ಪಿಕಪ್ಸ್, ಚೆಕ್‌ಡ್ಯಾಮ್ಸ್ ನಿಂದ ಎಷ್ಟೋ ರೈತರಿಗೆ ಹೊಲಗಳ ಹತ್ತಿರ ನೀರು ಶೇಖರಣೆಯಾಗಿ ಆನೇಕ ಉಪಯೋಗಗಳು ಈಗ ಆಗುತ್ತಿದೆ. ಅದಕ್ಕೆ ನನ್ನ ಸರ್ಕಾರಕ್ಕೆ ನನ್ನ ವಂದನೆಗಳನ್ನು ತಿಳಿಸುತ್ತೇನೆ. ಇನ್ನು ಕೆರೆಗಳು ಕ್ಷೇಮವಾಗಿದ್ದರೆ ಆ ಹಳ್ಳಿ ಮತ್ತು ಜನರು ಕ್ಷೇಮವಾಗಿರುತ್ತಾರೆ ಎನ್ನುವ ಧ್ಯೇಯವನ್ನಿಟ್ಟುಕೊಂಡು ಕೆರೆ ಬಳಕೆದಾರರ ಸಂಘವನ್ನು ಮಾಡಿದ್ದರೆ. ಕೆರೆಗಳ ಕ್ಷೇಮಾಭಿವೃದ್ಧಿಯನ್ನು ಆ ಹಳ್ಳಿಯವರೇ ನೋಡಿ ಕೊಳ್ಳುತ್ತಾರೆ. ಕೆರೆಗಳ ಹೂಳನ್ನು ಎತ್ತುತ್ತಿಲವೆಂದು ವಿರೋದ ಪಕ್ಷದವರು ಪದೇ ಪದೇ ಹೇಳುತ್ತಿರುತ್ತಾರೆ ಇವರು ಕೆರೆಯ ಹೂಳನ್ನು ಎತ್ತಬೇಕು ಎತ್ತಬೇಕು ಎಂದು ಹೇಳುತ್ತಾರಲ್ಲಾ, ಮೊನ್ನೆ ನಮ್ಮ ಚಿಕ್ಕಬಳ್ಳಾಪುರದ ಚಗಲಪುರದಲ್ಲಿ ಹೊಳೆತ್ತುವ ಕಾರ್ಯಕ್ರಮವನ್ನು ನೋಡುವುದಕ್ಕೆ ಸೋಮವಾರ ನಾನು ಹೋಗಿದ್ದೆ. ಮೂರೂವರೆ ಅಡಿ ಕೆಳಗೆ ತೇವದ ಪದರವಿದೆ. ಅಷ್ಟು ಹೊಲ ಹಾಗೂ ಕೆರೆ ಸಮಭಾಗ ನೆಲಸಮವಾಗಿ ಇವೆರಡರಲ್ಲಿ ಯಾವುದು ಹೊಲ ಮತ್ತು ಯಾವುದು ಕೆರೆ ಎಂಬುದೇ ಗೊತ್ತಾಗುತ್ತಿರಲಿಲ್ಲ. ನಮ್ಮಸರ್ಕಾರ ಬಂದು ಎರಡು ವರ್ಷಗಳಾಗಿರುವಾಗ ಎರಡು ಸಲ ಮಳೆಗಾಲ ಬಂದಿದೆ. ಈ ಎರಡು ವರ್ಷದಲ್ಲಿ ಒಂದರ್ಧ ಅಡಿ ಹೂಳು ತುಂಬಿರಬಹುದು, ಇನ್ನು ಮೂರು ಅಡಿ ಹೂಳು ಯಾವ ಸರ್ಕಾರ ಇದ್ದಾಗ ತುಂಬಿದೆ ಎಂಬ ಬಗ್ಗೆ ವಿರೋಧ ಪಕ್ಷದವರು ಯೋಚನೆ ಮಾಡಬೇಕು. ಮೊದಲಿಂದ ಹೂಳು ಎತ್ತಿದ್ದರೆ ಇಷ್ಟು ತೊಂದರೆಯಾಗಿ ಬರಗಾಲ ಬರುವ

ಪ್ರಮೇಯವೇ ಬರುತ್ತಿರಲಿಲ್ಲ. ಈಗ ನಮ್ಮ ಸರ್ಕಾರ ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಆದರಲ್ಲಿ ಹೋಬಳಿಗೆ ಒಂದು ಕೆರೆಯಲ್ಲಿ ಹೂಳೆತ್ತಬಹುದು, ಆದರೆ ಅದಕ್ಕೆ ಒಂದು ಮಿತಿ ಇರುತ್ತದೆ. ಒಂದು ಹೋಬಳಿಗೆ ಒಂದು ಕೆರೆಯ ಹೂಳೆತ್ತಿದರೆ ನಾಲ್ಕು ಹಳ್ಳಿಗಳಿಗೆ ಉಪಯೋಗವಾಗುತ್ತದೆ. ಆದುದರಿಂದ ಕ್ರಮೇಣ ಕೆಲವು ಕೆಲವಕ್ಕೆ ಹೂಳನ್ನು ಎತ್ತುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಇನ್ನು ಆರೋಗ್ಯದ ಬಗ್ಗೆ ಹೇಳಬೇಕೆಂದರೆ ಕರ್ನಾಟಕವನ್ನು ಪೋಲಿಯೋದಿಂದ ಮುಕ್ತಗೊಳಿಸುವ ಸಲುವಾಗಿ ನಮ್ಮ ಸರ್ಕಾರ ಪದೇ ಪದೇ ಪೋಲಿಯೋ ಡ್ರಾಫ್ಸ್ ಕಾರ್ಯಕ್ರಮವನ್ನು ಹಾಕಿಕೊಳ್ಳತ್ತಲೇ ಬಂದಿದೆ. ಈ ಭಯಪೀಡಿತ ರೋಗವನ್ನು ಹೋಗಲಾಡಿಸಲು ಕ್ರಮ ತೆಗೆದುಕೊಂಡು ಯಶಸ್ವಿ ಕೂಡ ಆಗಿದೆಯಾದ ಕಾರಣ ಇನ್ನು ಪೋಲಿಯೋ ಡ್ರಾಫ್ಸ್ ಹಾಕುವ ಪ್ರಮೇಯವಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ಟಿ.ಬಿ., ಏಡ್ಸ್, ಬೈಪಾಸ್, ಹೃದಯ ಕಾಯಿಲೆ, ಕ್ಯಾನ್ಸರ್‌ನಂಥ ಅನೇಕ ಕಾಯಿಲೆಗಳು ನಮ್ಮ ಜನರನ್ನು ಕಾಡುತ್ತಿದೆ. ನಮ್ಮ ಸರ್ಕಾರ ಅಂಥವರನ್ನೆಲ್ಲಾ ಗಮನಿಸಿದೆ. ಬೀಡಿ ಸೀಗರೇಟ್ ಸೇದುವುದರಿಂದ ಪಾನ್ ಪಾರಾಗ್ ಹಾಕುವುದರಿಂದ, ಅಡಿಕೆ ಹೆಚ್ಚು ಹಾಕುವುದರಿಂದ ಟಿ.ಬಿ. ಬರಬಹುದಾದ್ದರಿಂದ ಇಂದು ಟಿ.ಬಿ. ಆಸ್ಪತ್ರೆಗಳು ಹೆಚ್ಚು ಅವಶ್ಯಕವಾಗಿವೆ. ಅಧ್ಯಕ್ಷರೆ, ಟಿ.ಬಿ. ಕಾಯಿಲೆ ಕಡಿಮೆಯಾಗುತ್ತಿದೆ ಎಂದು ಅಂದುಕೊಂಡಿದ್ದೀರಿ, ಆದರೆ ಅದು ಜಾಸ್ತಿಯಾಗಿದೆ. ಆದುದರಿಂದ ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳು ಹತ್ತು ಜಿಲ್ಲೆಗಳಲ್ಲಿ ಕ್ಷಯ ರೋಗ ನಿವಾರಣಾ ಆಸ್ಪತ್ರೆಗಳನ್ನು ತೆಗೆಯಲು ಹೊರಟಿರುವುದು ಒಳ್ಳೆಯ ಸಂಗತಿಯಾಗಿದೆ. ಅದಕ್ಕೆ ನಾನು ಅಭಿನಂದನೆ ಸಲ್ಲಿಸಿ ನಮ್ಮ ಚಿಕ್ಕಬಳ್ಳಾಪುರಕ್ಕೂ ಒಂದು ಟಿ.ಬಿ. ಆಸ್ಪತ್ರೆ ಬೇಕು ಎಂದು ನಾನು ಮತ್ತೆ ಮತ್ತೆ ಕೇಳುತ್ತೇನೆ. ಇನ್ನು ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾನಾದರೂ ಹೇಳುತ್ತೇನೆ. ನಗರಗಳಲ್ಲಿ ಈ ವಿಚಾರದಲ್ಲಿ ಜನರು ಜಾಗೃತರಾಗಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆ ಮೀತಿ ಮೀರಿ ಬೆಳೆಯುತ್ತಿದೆ. ಆದಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆಯ ಕಡಿವಾಣಕ್ಕೆ ಬೇಕಾದ ತಿಳುವಳಿಕೆಯನ್ನು ಜಾಗೃತಿ ಕಾರ್ಯಕ್ರಮದ ಮೂಲಕ ಕೊಡಬೇಕೆಂದು ನಾನಾದರೂ ಕೇಳಿಕೊಳ್ಳುತ್ತೇನೆ. ಇದಕ್ಕಾಗಿ ಆಯವ್ಯಯದಲ್ಲಿ 875 ಕೋಟಿ ರೂ.ಗಳಿಗಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಿ ಜನಸಂಖ್ಯೆಯನ್ನು ಕಡಿಮೆ ಮಾಡಿ ಅಭಿವೃದ್ಧಿಯಲ್ಲಿ ಹೆಚ್ಚು ಯಶಸ್ವಿಯಾಗುವಂತೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇನ್ನು ಜಿಲ್ಲಾ ಮಟ್ಟದ ಪ್ರಾಣಿ ರೋಗ ಪತ್ತೆ ಕಾರ್ಯಕ್ರಮಕ್ಕೆ 250 ಕೋಟಿ ರೂ.ಗಳನ್ನು ಇಟ್ಟಿರುವುದು ಬಹಳ ಸಂತೋಷಕರವಾದ ವಿಚಾರ. ಮೂಕ ಪ್ರಾಣಿಗಳಿಗೆ ರೋಗ ನಿರೋಧ ಶಕ್ತಿ ಬರುವಂತೆ ಮಾಡಿ ರೋಗ ತಡೆಗಟ್ಟಲು ಅನೇಕ ಪರೀಕ್ಷೆಗಳನ್ನು ಮಾಡಿ ಗೋವು, ಕುರಿಗಳು ಸೇರಿದಂತೆ ಎಲ್ಲಾ ಪ್ರಾಣಿಗಳನ್ನು ಉಳಿಸಿಕೊಳ್ಳಲು ನಮ್ಮ ಸರ್ಕಾರ ಪ್ರಯತ್ನ ಮಾಡಿ ಅಭಿವೃದ್ಧಿಯತ್ತ ನಡೆಯುತ್ತಿರುವುದಕ್ಕೆ ನಾನು ಸರ್ಕಾರಕ್ಕೆ ಅಭಿನಂದನೆ ತಿಳಿಸುತ್ತೇನೆ. ಅತಿ ಸರಳಪದ್ಧತಿ ಮೂಲಕ ಪಡಿತರ ಚೀಟಿ ವಿತರಣೆ ಮಾಡುತ್ತಿರುವುದು ತುಂಬಾ ಒಳ್ಳೆಯ ಕಾರ್ಯಕ್ರಮವೇ ಆಗಿದೆ. ಏಕೆಂದರೆ ಬಿ.ಪಿ.ಎಲ್. ಚೆನ್ನಾಗಿರುವವರಿಗೇ ಸೇರುತ್ತಿತ್ತು. ಆದರೆ ಈಗ ಈ ಸರ್ವೆಯಿಂದ ಬಿ.ಪಿ.ಎಲ್ ಕಡುಬಡವರಿಗೆ ಸೇರುತ್ತದೆ ಮತ್ತು ಅದರಲ್ಲೂ ವಿಶೇಷವಾಗಿ ಅಂತ್ಯೋದಯ ಎನ್ನುವ ಕಾರ್ಡ್ ವಿತರಣೆಯಿಂದ ಎಷ್ಟೋ ಅತಿ ಕಡು ಬಡವರಿಗೆ ಅನುಕೂಲವಾಗಿದೆಯಾದ ಕಾರಣಕ್ಕೆ ನಮ್ಮ ಸರ್ಕಾರಕ್ಕೆ ಅಭಿನಂದನೆಯನ್ನು ನಾನು ಹೆಮ್ಮೆಯಿಂದ ತಿಳಿಸುತ್ತೇನೆ. ಇನ್ನು ಶಿಕ್ಷಣದ ಬಗ್ಗೆ...

ಛೇರ್‌ಮನ್:- ಇನ್ನು ಬಹಳ ಜನರು ಮಾತನಾಡಬೇಕಾಗಿರುವುದರಿಂದ ತಾವು ಬೇಗ ಭಾಷಣ ಮುಗಿಸಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ):- ಛೇರ್‌ಮನ್‌ರವರೆ, ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಅವರಿಗೆ ಇನ್ನೂ ಸ್ವಲ್ಪ ಕಾಲ ಭಾಷಣ ಮಾಡುವುದಕ್ಕೆ ಅವಕಾಶ ಕೊಡಿ.

ಛೇರ್‌ಮನ್:- ಮಾತನಾಡಿ

ಶ್ರೀಮತಿ ಅನುಸೂಯಮ್ಮ ನಟರಾಜನ್:- ವಂದನೆಗಳು, ಫೆಬ್ರವರಿ ತಿಂಗಳ 14, 15 ಮತ್ತು 16 ರಂದು ನಮ್ಮ ಚಿಕ್ಕಬಳ್ಳಾಪುರಕ್ಕೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಆಗಮಿಸಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳಿಗೆ ಕೊಡಲೇಬೇಕೆಂದು ಶಾಲೆಯನ್ನು ಉದ್ಘಾಟನೆಯನ್ನು ಮಾಡಿದರು. ನಮ್ಮ ಕಾಂಗ್ರೆಸ್ ಧ್ಯೇಯವೂ ಕೂಡ ಇದೇ ಆಗಿದ್ದು ಪ್ರತಿಯೊಬ್ಬರೂ ಕೂಡ ಅಕ್ಷರಾಭ್ಯಾಸವನ್ನು ಮಾಡಬೇಕು ಎಂಬುದೇ ಆಗಿದೆ. ಗ್ರಾಮಾಂತರ ಮಟ್ಟದಲ್ಲಿ ಎಷ್ಟೋ ವಿದ್ಯಾರ್ಥಿಗಳು ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟುಬಿಟ್ಟಿರುತ್ತಾರೆ. ಇಂಥವರೆಲ್ಲರೂ ಕಡ್ಡಾಯವಾಗಿ ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಬೇಕು ಎಂಬುದೇ ನಮ್ಮ ಸರ್ಕಾರದ ಧ್ಯೇಯ. ವಿದ್ಯಾರ್ಥಿಗಳಿಗೆ ಹಾಜರಾಗಲು ಪ್ರೋತ್ಸಾಹಕವಾಗಿ ಹೆಚ್ಚು ಹೆಚ್ಚು ಸ್ಕಾಲರ್‌ಶಿಫ್ ಕೊಡುತ್ತಿದ್ದಾರೆ ಹಾಗೂ 7ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ಹೊಸದಾಗಿ ಸಮವಸ್ತ್ರಗಳನ್ನು ವಿತರಣೆ ಮಾಡುತ್ತಿದ್ದಾರೆ. ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬುಕ್ಸ್‌ಗಳನ್ನು ಕೊಡುತ್ತಿದ್ದಾರೆ . ಇದಲ್ಲದೆ ಶಾಲಾಭಿವೃದ್ಧಿಯಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದರಿಂದ ಪೋಷಕರು, ಹಳ್ಳಿಯ ಮುಖ್ಯಸ್ಥರು ಇದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಕ್ಕಳು ಶಾಲೆಗೆ ಬರುವಂತೆ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಇಂಥ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ನನ್ನ ಸರ್ಕಾರಕ್ಕೆ ಹೃದಯಪೂರ್ವಕ ವಂದನೆಗಳನ್ನು ತಿಳಿಸುತ್ತೇನೆ. ವಿಶೇಷವಾಗಿ ಮುಂದಿನ ಆರ್ಥಿಕ ವರ್ಷದಲ್ಲಿ ಗಿರಿಜನ ಪ್ರಯೋಜನ ಕಾರ್ಯಕ್ರಮದಡಿಯಲ್ಲಿ ವಸತಿ, ಶಿಕ್ಷಣ, ಸಣ್ಣ ನೀರಾವರಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಸುಧಾರಿಸಲು ಸರ್ಕಾರ ಗಮನವನ್ನು ಕೇಂದ್ರಿಕರಿಸಿದೆ. ಇದಕ್ಕಾಗಿ ನಮ್ಮ ಸರ್ಕಾರಕ್ಕೆ ನಾನು ಮತ್ತೆ ಮತ್ತೆ ವಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಮರಗಳ ಕೆಳಗಡೆ ಬದುಕನ್ನು ಸಾಗಿಸುವ ಈ ಗಿರಿಜನರನ್ನು ಸಾಮಾನ್ಯವಾಗಿ ಗಮನಿಸುವುದಿಲ್ಲ. ಇಂಥದ್ದರಲ್ಲಿ ನಮ್ಮ ಘನ ಸರ್ಕಾರ ಗಮನಿಸಿ ಅವರಿಗೆ ವಸತಿ, ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯ ಮತ್ತು ಎಲ್ಲಾ ಸವಲತ್ತುಗಳನ್ನು ಕೊಡಬೇಕೆಂದು ಸೂಕ್ಷ್ಮವಾಗಿ ಕರುಣೆ ತೋರಿರುವುದಕ್ಕೆ ನಾನು ಎಷ್ಟೋ ಹೆಮ್ಮೆಯನ್ನು ಪಡುತ್ತೇನೆ. ಇನ್ನು ಮಹಿಳೆಯರ ಬಗ್ಗೆ ನಮ್ಮ ಸೋದರಿ ಪಾರ್ವತಮ್ಮನವರು ತುಂಬಾ ಚೆನ್ನಾಗಿ ಹೇಳಿದ್ದಾರೆ. ಈಗ ಹಳ್ಳಿಗಳಲ್ಲಿ ಮಹಿಳೆಯರು ಚತುರತೆಯಿಂದ ಮಾತನಾಡುವುದು, ಸ್ವಂತ ಕಾಲ ಮೇಲೆ ನಿಂತು ಜೀವನ ನಡೆಸುವುದು, ಮಕ್ಕಳನ್ನು ಓದಿಸುವ ಪ್ರವೃತ್ತಿ 'ಸ್ತ್ರೀ ಶಕ್ತಿ' ಯೋಜನೆಯಿಂದ ಬರುವಂತೆ ಸರ್ಕಾರ ಮಾಡಿದೆ. ಇದಕ್ಕಾಗಿ ಹೆಣ್ಣು ಮಕ್ಕಳ ಪರವಾಗಿ ನಾನು ಸರ್ಕಾರಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ. ಹೆಣ್ಣು ಮಕ್ಕಳಿಗೆ ಈ ರೀತಿಯ ಆದ್ಯತೆಯನ್ನು ನೀಡಿರುವುದಕ್ಕೆ ಭಾರತ ಮಾತೆಗೆ, ಭೂಮಿ ತಾಯಿಗೆ ಹೆತ್ತ ತಾಯಿಗೆ ಬೆಲೆ ಕೊಡುವ ರೀತಿ ನಮಗೆಲ್ಲಾ ಬಿಲಿ ಕೊಟ್ಟಿರುವುದಕ್ಕೆ ಸರ್ಕಾರಕ್ಕೆ ವಂದನೆಗಳನ್ನು ತಿಳಿಸುತ್ತೇನೆ. ಇನ್ನು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಂಡು

3962 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇದರಿಂದ ಕೂಲಿನಾಲಿ ಮಾಡಿ ವಿದ್ಯಾಭ್ಯಾಸ ಮಾಡಿರುವ ಹರಿಜನ ವಿದ್ಯಾರ್ಥಿಗಳಿಗೆ ಇದರಿಂದ ಉದ್ಯೋಗ ದೊರೆಯುವಂತಾಗಿದೆಯೆಂದು ನಾನು ಸರ್ಕಾರಕ್ಕೆ ಪದೇ ಪದೇ ವಂದನೆಗಳನ್ನು ಹೇಳುತ್ತಾ ನಮ್ಮ ಮುಖ್ಯಮಂತ್ರಿಗಳು ನಮಗೆಲ್ಲಾ ಕ್ಷೇತ್ರಾಭಿವೃದ್ಧಿಗೆ 40 ಲಕ್ಷ ರೂ.ಗಳನ್ನು ಕೊಟ್ಟು, ಕಂಪ್ಯೂಟರ್ ಕೊಟ್ಟು ಸಹಕರಿಸಿರುವುದಕ್ಕೆ ನನ್ನ ಹೃದಯಪೂರ್ವಕ ವಂದನೆಗಳನ್ನು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಎಂ. ಲಮಾಣಿ (ಬ್ಯಾಡಗಿ):- ಮಾನ್ಯ ಛೇರ್‌ಮನ್‌ರವರೆ, 2002-03ನೇ ಸಾಲಿನ ಬಜೆಟ್ ಬಗ್ಗೆ ಎಲ್ಲಾ ಜನ ಪ್ರತಿನಿಧಿಗಳು, ಜನ ಸಾಮಾನ್ಯರು ಪ್ರತಿಕ್ರಿಯೆಯನ್ನು ನೀಡಿ ಇಂಥ ಉತ್ತಮವಾದ ಬಜೆಟ್ ಹಿಂದಿನ ಯಾವ ಸರ್ಕಾರ ಕೂಡ ಮಾಡಿರಲ್ಲಿಲ್ಲ. ಈಗಿನ ಸರ್ಕಾರ ಅತ್ಯುತ್ತಮವಾದ ಬಜೆಟ್‌ನ್ನು ಈ ಸಾಲಿನಲ್ಲಿ ನೀಡಿದೆ ಎಂದು ಉತ್ತಮವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾನು ಹೆಚ್ಚಿನ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರ ಸುಮಾರು ವರ್ಷಗಳಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುತ್ತೇವೆ. ತುಂಬುತ್ತೇವೆ ಎಂದು ಹೇಳಿ ಹುದ್ದೆಗಳನ್ನು ತುಂಬುವಾಗ ಎಸ್‌ಸಿ:ಎಸ್‌ಟಿ ಯವರನ್ನು ಮುಂದಿನ ಹುದ್ದೆಗಳನ್ನು ತುಂಬುವಾಗ ತೆಗೆದುಕೊಳ್ಳಲಾಗುವುದು ಎನ್ನುವ ಮುಚ್ಚಳಿಕೆಯನ್ನು ಬರೆಸಿಕೊಂಡು ಹೋಗುತ್ತಿತ್ತು. ಇಂಥ ಸಂದರ್ಭದಲ್ಲಿ ನಮ್ಮ ಸರ್ಕಾರ 3000 ಬ್ಯಾಕ್ ಲಾಗ್ ಹುದ್ದೆಗಳನ್ನು ತುಂಬಲು ಮುಂದಾದದ್ದು ಅತ್ಯಂತ ಸ್ವಾಗತಾರ್ಹವಾದ ಕಾರ್ಯಕ್ರಮವಾಗಿದೆ. ಇದರ ಜೊತೆಗೆ ಕೃಷಿ ಮತ್ತು ನೀರಾವರಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಹಿಂದೆಂದೂ ಕಾರಣದಂಥ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಿ ಉತ್ತರ ಕರ್ನಾಟಕದಲ್ಲಿ ಸುಮಾರು 1956ರಿಂದಲೂ ಕನಸಾಗಿದ್ದ ಅಪ್ಪರ್ ತುಂಗಾ ಯೋಜನೆಯನ್ನು ಹಿಂದಿನ ಸರ್ಕಾರದಲ್ಲಿ 5 ವರ್ಷಗಳ ಅವಧಿಯಲ್ಲಿ 10 ಕಿ.ಮೀ. ಕೂಡ ಚಾನಲ್ ತೆಗೆಯದೇ ಇದ್ದರೂ ಕೂಡ ನಮ್ಮ ಸರ್ಕಾರ ಬಂದಮೇಲೆ 120 ಕಿ.ಮೀ. ಕಾಲುವೆಯನ್ನು ಹಾಗೂ ಡ್ಯಾಮ್‌ನ್ನು ಕಟ್ಟುವ ಎರಡೂ ಕೆಲಸವನ್ನು ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಹಣವನ್ನು ಒದಗಿಕೊಟ್ಟಿದ್ದಾರೆ. ಆದುದರಿಂದ ಹಾವೇರಿ ಜಿಲ್ಲೆಯ ಸುಮಾರು ಎರಡೂವರೆ ಲಕ್ಷ ಎಕರೆ ಜಮೀನಿಗೆ ನೀರಾವರಿ ಒದಗಿಸತಕ್ಕಂಥ ಸವಲತ್ತನ್ನು ಮುಂದಿನ 2004ನೇ ಇಸವಿಯಲ್ಲಿ ಸಂಪೂರ್ಣವಾಗಿ ನೀರಾವರಿಯನ್ನು ಮಾಡಿ ಈಗಿನ ಮಂಡ್ಯ ಜಿಲ್ಲೆಯನ್ನು ಹೋಲಿಸತಕ್ಕ ಒಂದು ಅವಕಾಶವನ್ನು ಮಾಡುವತ್ತ ಹಾಗೂ ಉತ್ತಮವಾದ ಭತ್ತದ ಕಣಜವನ್ನಾಗಿಯೇ ಮಾಡುವ ಒಂದು ಅವಕಾಶವನ್ನು ಕೊಟ್ಟಿರುವುದರ ಜೊತೆಗೆ ಯು.ಕೆ.ಪಿ. ಯೋಜನೆಯನ್ನು ಮುಗಿಸುವತ್ತ ಕೂಡ ಸರ್ಕಾರ ಬಹಳಷ್ಟು ಹಣವನ್ನು ಮೀಸಲಾಗಿಟ್ಟಿರುವುದರ ಬಗ್ಗೆ ಉತ್ತರ ಕರ್ನಾಟಕದ ಜನರೆಲ್ಲರೂ ತುಂಬು ಹೃದಯದಿಂದ ಸ್ವಾಗತವನ್ನು ಮಾಡುತ್ತಾರೆ. ಮಾನ್ಯ ಛೇರ್‌ಮನ್‌ರವರೆ, ನಾನೂ ಕೂಡ ಸಣ್ಣ ಲಂಬಾಣಿ ತಾಂಡದಿಂದ ಹುಟ್ಟಿ ಬೆಳೆದಂಥ ಒಬ್ಬ ಯುವಕ. ಇಲ್ಲಿಯವರೆಗೆ ಲಂಬಾಣಿ ತಾಂಡಗಳನ್ನು ಬಹಳ ನೆಗ್ಲೆಕ್ಟ್ ಆಗಿ ಪರಿಗಣಿಸಿದ್ದರು. ಮೊನ್ನೆ ಕನಕಪುರದ ಚುನಾವಣೆಗೆ ನಾನು ಹೋದಾಗ ಅಲ್ಲಿ ಪ್ರತಿಯೊಂದು ತಾಂಡಾಗಳಿಗೆ ಹೋಗಿ ನೋಡಿದರೆ ಕಣ್ಣೀರಿನ ಕಥೆಯನ್ನು ಹೇಳತಕ್ಕಂಥ ವ್ಯವಸ್ಥೆ ನೋಡಿ ನಾನು ಬಹಳಷ್ಟು ದುಃಖಿತನಾಗಿದ್ದೆ. ಆ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಕಂದಾಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡಿ 100 ಗ್ರಾಮಗಳಿಗೆ ಇದ್ದ ಹಿಂದಿನ ವ್ಯವಸ್ಥೆಯನ್ನು ಹತ್ತು ಮನೆಗಳಾದರೂ ಅಡ್ಡಿಯಿಲ್ಲ, ಅವುಗಳಿಗೆ

ಪರಿವರ್ತನೆ ಮಾಡಿಕೊಡಬೇಕು ಎಂದು ಕೇಳಿಕೊಂಡಾಗ ಇವೊತ್ತು ಈ ಮಸೂದೆಯನ್ನು ಮಾರ್ಪಡಿಸಿ ಎಲ್ಲಾ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿರುವುದು ಇತಿಹಾಸದಲ್ಲಿ ಇದೊಂದು ಪ್ರಥಮ ವ್ಯವಸ್ಥೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನಾನು ಬಹುತೇಕ ತಿಳಿದುಕೊಂಡಿದ್ದೇನೆಂದರೆ, ಉತ್ತರ ಕರ್ನಾಟಕದಲ್ಲಿ ಮಾತ್ರ ನಾವು ಹಿಂದುಳಿದಿದ್ದೇವೆ ಎಂದು ತಿಳಿದುಕೊಂಡಿದ್ದೆ. ಯಾವ ಪ್ರದೇಶ ರಾಜಧಾನಿಗೆ 50-55 ಕಿಲೋಮೀಟರ್ ಸಮೀಪದಲ್ಲಿ ಇದ್ದು. ಆ ತಾಂಡಾಗಳ ಪರಿಸ್ಥಿತಿ ನೋಡಿದರೆ ಅಲ್ಲಿ ಕುಡಿಯುವ ನೀರು ಹಾಗೂ ಕರೆಂಟ್ ಎರಡು ಬಿಟ್ಟುರೆ ಆಶ್ರಯ ಯೋಜನೆಗಳಲ್ಲಿ ಮನೆಗಳನ್ನು ಕೊಟ್ಟಿಲ್ಲ. ಹಾಗೂ ಅವರಿಗೆ ರಸ್ತೆಗಳನ್ನು ಮಾಡಿಲ್ಲ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ನಾವು ಎಷೋ ಸಲ ನಡೆದುಕೊಂಡು ಹೋದಂತಹ ಪ್ರಸಂಗಗಳನ್ನು ಅನುಭವಿಸಿದ್ದು, ಇದು ನಾಚಿಕೆ ತರುವಂತಹ ಪರಿಸ್ಥಿತಿಯನ್ನು ಮನಗಂಡಿದ್ದೇವೆ. ಈ ಭಾಗದಿಂದ ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಪ್ರಧಾನ ಮಂತ್ರಿಗಳಾಗಿ ಹೋಗಿದ್ದಾರೆ.ಆದರೂ ಕೂಡ ಆ ಜನತೆಗೆ ಕನಿಷ್ಟ ಸವಲತ್ತುಗಳು ದೊರೆಯದೆ ಇರುವುದನ್ನು ಕಂಡು ಸರ್ಕಾರವನ್ನು ಒತ್ತಾಯ ಪಡಿಸಿದಾಗ, ಇದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲವೆಂದು ಹೇಳಿ ನೆನೆಗುದಿಗೆ ಬಿದ್ದಿರತಕ್ಕಂಥ ತಾಂಡಾಗಳಲ್ಲಿ 10 ಮನೆಗಳಾದರೂ ಅಡ್ಡಿಯಿಲ್ಲ ಅದಕ್ಕೆ ಸಂಪೂರ್ಣವಾಗಿ ಸವಲತ್ತುಗಳನ್ನು ಒದಗಿಸುವಂತಹ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕಂದಾಯ ಮಂತ್ರಿಗಳು ಒದಗಿಸಿರುವುದರಿಂದ ಆ ಜನಾಂಗದ ಪರವಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಜೊತೆಗೆ ಇವತ್ತು 'ಭೂಮಿ' ಎನ್ನುವ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಹಾಕಿಕೊಂಡಿದ್ದಾರೆ. ರೈತ ಸಂಕಷ್ಟು ಪರಿಸ್ಥಿತಿಯಲ್ಲಿದ್ದಾಗ ತಕ್ಷಣವೇ ತಹಸೀಲ್ದಾರ್ ಕಚೇರಿಗೆ ಹೋಗಿ ಮಾಹಿತಿಯನ್ನು ಪಡೆಯತಕ್ಕಂಥ ವ್ಯವಸ್ಥೆಯನ್ನು ಮುಂದುವರೆಸಿ ಅನುಕೂಲವನ್ನು ಈ ಸರ್ಕಾರ ಮಾಡಿಕೊಟ್ಟಿದೆ. ಅದನ್ನು ಹೋಬಳಿ ಮಟ್ಟದಲ್ಲಿ ಈ ಸಾರಿ ಪ್ರಾರಂಭ ಮಾಡಬೇಕೆಂದು ಹಮ್ಮಿಕೊಂಡಿರುವುದು ಸ್ವಾಗತಾರ್ಹ ವಿಚಾರ. ಜೊತೆಗೆ ಯಾವ ಹಳ್ಳಿಗಳಲ್ಲೆ ಹಿಂದಿ ದಿನಘಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಯಾವ್ಯಾವ ಶಾಸಕರ ವಶೀಲೆ ಇದೆ ಹಾಗೂ ಮಂತ್ರಿಗಳ ಮಾತು ಹೆಚ್ಚು ನಡೆಯುತ್ತದೆ ಅಲ್ಲಲ್ಲೇ ಮಾಡಿಕೊಂಡಿದ್ದಾರೆ. ಆದರೆ ಈಗ ಎಲ್ಲಾ ಹಳ್ಳಿಗಳಿಗೂ ವಿಸ್ತರಣೆ ಮಾಡಬೇಕೆನ್ನುವ ದೃಷ್ಟಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆಗೆಯುವಂತಹ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಹಾಗೆ ಪಶುವೈದ್ಯ ಶಾಲೆಗಳ ಬಗ್ಗೆ ಈ ಸಲದ ಬಜೆಟ್‌ನಲ್ಲೆ ಪ್ರಸ್ತಾಪ ಮಾಡಿಲ್ಲ. ಆದುದರಿಂದ ಪಶುವೈದ್ಯ ಶಾಲೆಗಳನ್ನು ಕೂಡ ದಿನಗಳ ಸಂಖ್ಯೆಗೆ ಅನುಗುಣವಾಗಿ ಪ್ರಾರಂಭ ಮಾಡುವಂತಹ ಕೆಲಸವನ್ನು ಮುಂದಿನ ದಿನಗಳಲ್ಲೆ ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. 1986ರಿಂದ ಈಚೆಗೆ ಶಾಶ್ವತ ಅನುದಾನರಹಿತ ಶಾಲೆಗಳನ್ನು ತೆಗೆದುದ್ದು ಅಂತಹ ಶಾಲೆಗಳನ್ನು ಮಠಾಧಿಪತಿಗಳು ನಡೆಸುತ್ತಿದ್ದರು. ಆದರೆ ಹಿಂದಿನ ಸರ್ಕಾರ ಯಾವ ಕೆಟ್ಟು ಸಂಪ್ರದಾಯದ ಮೇಲೆ ಅಂತಹ ಶಾಲೆಗಳನ್ನು ತೆಗೆಯುವುದಕ್ಕೆ ಅನುಮತಿ ಕೊಟ್ಟಿತ್ತೋ ನನಗೆ ತಿಳಿಯಲಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಒತ್ತಾಯಪೂರ್ವಕವಾಗಿ ಎಲ್ಲರೂ ಹೋಗಿ ಕೇಳಿಕೊಂಡಾಗ

1987 ರಿಂದ 1992 ರವರೆಗೆ, ಎಸ್‌ಸಿ:ಎಸ್‌ಟಿ ಮ್ಯಾನೇಜ್‌ಮೆಂಟ್‌ನಲ್ಲಿ ಯಾವ ಶಾಲೆಗಳನ್ನು ನಡೆಸುತ್ತಿದ್ದಾರೆ ಅಂತಹ ಎಲ್ಲಾ ಶಾಲೆಗಳಿಗೆ ಅನುದಾನವನ್ನು ಕೊಡತಕ್ಕಂಥ ವಿಚಾರಕ್ಕೆ ಈಗಾಗಲೇ ಕ್ಯಾಬಿನೇಟ್‌ನಲ್ಲಿ ಮಂಜೂರು ಮಾಡಿ ಮುಂದಿನ ದಿನಗಳಲ್ಲಿ ಅಂತಹವರಿಗೆ ಕೂಡ ಅನುದಾನ ಕೊಡುವುದಕ್ಕೆ ಸರ್ಕಾರ ಮುಂದೆ ಬಂದಿದೆ. ಹಾಗೆ ಉತ್ತರ ಕರ್ನಾಟಕದಲ್ಲಿ ಬಹಳ್ಟು ವರ್ಷದಿಂದ ಹೈಕೋರ್ಟ್ ಪೀಠವನ್ನು ಸ್ಥಾಪಿಸಬೇಕೆನ್ನುವುದರ ಬೇಡಿಕೆಯನ್ನು ಮುಂದೂಡಿ, ಅನೇಕ ಸಲ ಕೋರ್ಟ್‌ಗಳನ್ನು ಬಂದ್ ಮಾಡಿ, ಅಷ್ಟಲ್ಲದೆ ಸಾರ್ವಜನಿಕರ ಆಸ್ತಿಗೆ ಹಾನಿ ಮಾಡಿ, ಇವತ್ತು ಹೈಕೋರ್ಟ್ ಪೀಠವನ್ನು ಯಾರು ಮಾಡಬೇಕೆಂದು ಹಿಂದಿನ ಸರ್ಕಾರದಲ್ಲಿ ಇಚ್ಛೆಯನ್ನು ಪಡೆದಿದ್ದರು ಅವರು ಮಾಡದೇ ಇದ್ದರೂ ಸಹ ಅದಕ್ಕೆ ನಮ್ಮ ಸರ್ಕಾರ ಆಸಕ್ತಿಯನ್ನು ತೋರಿ ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ 10 ಕೋಟಿ ರೂಪಾಯಿಗಳ ಒಂದು ವ್ಯವಸ್ಥೆಯನ್ನು ಮಾಡಿದೆ. ಮತ್ತು ಅದಕ್ಕೆ ಹೆಚ್ಚಿಗೆ ಬೇಕಾದಲ್ಲಿ ನಾವು ಕೊಡುತ್ತೇವೆ ಎನ್ನುವ ವಿಚಾರವನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಇನ್ನು ಮಾನ್ಯ ದಿವಂಗತ ಕೆ.ಹೆಚ್. ಪಾಟೀಲ್ ಅವರು ಸಹಕಾರ ರಂಗದಲ್ಲಿ ತಮ್ಮ ಪ್ರತಿಭೆಯಿಂದ ಭೀಷ್ಮ ಎನ್ನುವ ಹೆಸರನ್ನು ಪಡೆದಿದ್ದರು. ಆದುದರಿಂದ ಸಹಕಾರ ಕ್ಷೇತ್ರದಲ್ಲೆ ಅವರ ಹೆಸರು ಉಳಿಯಬೇಕೆಂದು, ಅವರ ಹೆಸರಿನಲ್ಲಿ ಒಂದು ಸಹಕಾರಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಮುಂದೆ ಬಂದಿದೆ. ಇನ್ನು ನಾವು ಶಾಸಕರಾದಾಗ ಬಹುತೇಕ ಹಳ್ಳಿಗಳಲ್ಲಿ ಸಂಪರ್ಕ ರಸ್ತೆಗಳ ವ್ಯವಸ್ಥೆ ಕೆಟ್ಟದಾಗಿದ್ದು ಯಾವ ರಸ್ತೆಗಳೂ ಸಹ ಉತ್ತಮವಾಗಿರಲಿಲ್ಲ. ಈ ಮಾತನ್ನು ಬಹುಶಃ ಎಲ್ಲಾ ವಿರೋಧಪಕ್ಷದ ಸದಸ್ಯರು ಒಪ್ಪುತ್ತಾರೆ. ಆದುದರಿಂದ ತಮ್ಮ ತಮ್ಮ ಕ್ಷೇತ್ರದಲ್ಲಿ ಒಂದು ಕೋಟಿ ರೂಪಾಯಿ ಹಣವನ್ನು ಕೊಡುವಂತಹ ಒಂದು ಯೋಜನೆ ಮುಂದಿನ ಒಂದೆರಡು ವರ್ಷಗಳಲ್ಲಿ ಮುಂದುವರೆದು, ಆಗ ಯಾವ ಹಳ್ಳಿಗಳಲ್ಲೂ ಕೂಡ ಡಾಂಬರ್ ರಸ್ತೆಗಳು ಇಲ್ಲವೆಂದು ಹೇಳುವುದಕ್ಕೆ ಯಾವ ಊರುಗಳೂ ಇರುವುದಿಲ್ಲವೆಂಬುದು ನನ್ನ ಭಾವನೆ. ಬಹುತೇಕ ನನ್ನ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ ಎಂದರೆ 2004ನೇ ಇಸವಿಯಲ್ಲಿ ಚುನಾವಣೆ ಕಾಲಕ್ಕೆ "ಊರಿಗೊಂದು ಟಾರು ತಲೆಗೊಂದು ನೂರು," ಎನ್ನುವ ಸಿದ್ಧಾಂತದ ಮೇರೆಗೆ ಹೋಗಿ ಈ ವಿಚಾರವನ್ನು ತಿಳಿಸಿ ನನ್ನ ಕ್ಷೇತ್ರದಲ್ಲಿ ಈಗಾಗಲೇ 60 ರಿಂದ 75ರಷ್ಟು ಹಳ್ಳಿಗಳಿಗೆ ಡಾಂಬರೀಕರಣ ರಸ್ತೆಯನ್ನು ಸಂಪೂರ್ಣವಾಗಿ ಮಾಡಿದ್ದೇವೆಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಮುಂದಿನ ದಿನಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಕ್ಷೇತ್ರವಾರು ಕೊಡಬೇಕೆಂದು ಕೇಳಿದ್ದು, ಅವರು ತಾಲ್ಲೂಕುವಾರು ಕೊಡುತ್ತೇವೆಂದು ಹೇಳಿದ್ದಾರೆ. ಬಹುತೇಕ ಆ ಗೊಂದಲವನ್ನು ನಿವಾರಣೆ ಮಾಡುತ್ತಾರೆಂದು ಭಾವಿಸುತ್ತಾ, ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿ ಕೊಟ್ಟಲ್ಲೆ ಎಲ್ಲಾ ಹಳ್ಳಿಗಳಲ್ಲಿ ಸಂಪರ್ಕ ರಸ್ತೆಗಳು ಡಾಂಬರೀಕರಣ ರಸ್ತೆಗಳಾಗುತ್ತವೆ ಎನ್ನುವ ಮಾತನ್ನು ಹೇಳುತ್ತಾ, ಇನ್ನು ಶಾಸಕರಿಗೆ ಈಗ 25 ಲಕ್ಷ ರೂಪಾಯಿಗಳಿಂದ 40 ಲಕ್ಷ ರೂಪಾಯಿಗಳವರೆಗೆ ಅನುದಾನವನ್ನು ಕೊಡುತ್ತೇವೆಂದು ವ್ಯಕ್ತಪಡಿಸಿದ್ದಾರೆ. ಮೊದಲು ಎಂ.ಪಿ ಗಳು ಹಳ್ಳಿಗಳಿಗೆ ಹೋದಾಗ ಅವರನ್ನೇ ಎಲ್ಲಾ ಕಾರ್ಯಕ್ರಮಗಳಿಗೆ ಕರೆಯಿರಿ ಎಂದು ಹೇಳಿ ಶಾಸಕರನ್ನು ಬಹಳ ನೆಗ್ಲೆಟ್ ಮಾಡುತ್ತಿದ್ದರು. ಅಂತಹ ಒಂದು ಪರಿಸ್ಥಿತಿಯಲ್ಲೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಶಾಸಕರ ಘನತೆ ಗೌರವರನ್ನು ಕಾಪಾಡುವುದಕ್ಕೆ ಅವರ ಜೇಬಿನಲ್ಲಿ 40 ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದರಿಂದ ಶಾಸಕರ

ಘನತೆ ಗೌರವ ಹೆಚ್ಚಾಗುವುದಲ್ಲದೆ, ನಾವು ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ಹೋದಾಗ ಹಳ್ಳಿಗಳಲ್ಲಿ ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ನಮ್ಮ ನಿಧಿಯಿಂದ ಕೊಡುವಂತಹ ಕೆಲಸಕ್ಕೆ ಸರ್ಕಾರ ಮುಂದೆ ಬಂದಿದೆ. ಅದರ ಜೊತೆಗೆ ಇನ್ನೊಂದು ವಿಚಾರವೇನೆಂದರೆ ದರೋಡೆಗಳು ಮತ್ತು ಕೊಲೆಗಳು ಹೆಚ್ಚಾಗಿರತಕ್ಕಂಥ ಸಂದರ್ಭದಲ್ಲಿ ಪೋಲೀಸ್ ಸಿಬ್ಬಂದಿಗಳಿಗೆ ಪೋಲೀಸ್ ವಸತಿ ಗೃಹಗಳಿಗೆ ಸಾಕಷ್ಟು ಹಣವನ್ನು ಕೊಟ್ಟಿದೆ. ಅದರ ಜೊತೆಗೆ ಹೆಚ್ಚು ಪೋಲೀಸ್ ಸಿಬ್ಬಂದಿಯನ್ನು ಕೂಡ ಮುಂದಿನ ದಿನಗಳಲ್ಲಿ ನೇಮಕ ಮಾಡತಕ್ಕಂಥ ಕೆಲವನ್ನು ಸರ್ಕಾರ ಕೈಗೊಂಡಿದೆ. ಇದರ ಜೊತೆಗೆ ವಿದ್ಯುತ್ ಕಳವು ಮಾಡತಕ್ಕಂಥ ಹಾಗೂ ವಿದ್ಯುತ್ ಸೋರಿಗೆ ಆಗತಕ್ಕಂಥ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ವಿದ್ಯುಚ್ಛಕ್ತಿ ಸಚಿವರು ಒಂದು ಕಠಿಣವಾದಂತಹ ಕಾನೂನನ್ನು ಮಾಡಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಅನುಕೂಲವಾಗುವಂತಹ ವಿಚಾರದಲ್ಲಿ ಕಾನೂನನ್ನು ಸಡಿಲಿಕೆ ಮಾಡಬೇಕು. ಮತ್ತು ಮೀಟರ್‌ಗಳನ್ನು ಅಳವಡಿಸುವುದರಿಂದ ಬಹಳಷ್ಟು ರೈತಾಪಿ ಜನರಿಗೆ ತೊಂದರೆಯಾಗುತ್ತದೆ ಎನ್ನುವ ವಿಚಾರವನ್ನು ಸರ್ಕಾರ ಗಮನಕ್ಕೆ ತರುತ್ತಿದ್ದೇನೆ. ರೈತರು ಮೀಟರ್ ಅಳವಡಿಸಿ ಕರೆಂಟ್ ತೆಗೆದುಕೊಳ್ಳುವಂತಹ ಪರಿಸ್ಥಿತಿಯಲ್ಲೆ ಇಲ್ಲ. ಏಕೆಂದರೆ ನೀರನ್ನು 500 ರಿಂದ 600 ಅಡಿ ಆಳದಿಂದ ನೀರನ್ನು ಮೇಲಕ್ಕೆ ಎತ್ತತಕ್ಕಂಥ ಪರಿಸ್ಥಿತಿ ಇದೆ. ಇತ್ತೀಚೆಗೆ 700-800 ಅಡಿ ಬೋರ್ ಹೊಡೆರೂ ಕೂಡ ನೀರು ಸಿಗತಕ್ಕಂಥ ಪರಿಸ್ಥಿತಿ ಇಲ್ಲ. ಇವತ್ತು ಹಳ್ಳಿಗಳಲ್ಲಿ ನೀರನ್ನು ಬೋರ್‌ನಿಂದ ಮೇಲಕ್ಕೆ ಹೊಡೆದುಕೊಂಡು ತೊಟ್ಟಿಯಲ್ಲಿ ಸಂಗ್ರಹ ಮಾಡಿಕೊಂಡು ನೀರಾವರಿ ಮಾಡತಕ್ಕಂಥ ಪರಿಸ್ಥಿತಿ ಇರುವುದರಿಂದ ಮಾನ್ಯಮುಖ್ಯಮಂತ್ರಿಗಳು ವಿದ್ಯುತ್ ಮೇಲೆ ಇರತಕ್ಕಂಥ ಕಡಿವಾಣವನ್ನು ರೈತಾಪಿ ವರ್ಗದ ಜನರಿಗೆ ಸಡಿಲಿಸಿ ಕೊಟ್ಟರೆ ಬಹಳಷ್ಟು ಒಳ್ಳೆಯದಾಗುತ್ತದೆಂದು ಹೇಳುತ್ತಾ, ಇನ್ನು ಕೆರೆಗಳ ಅಭಿವೃದ್ಧಿಗಾಗಿ ಜಲಾನಯನ ಅಷ್ಟೇ ಅಲ್ಲ, ಉತ್ತರ ಕರ್ನಾಟಕದ ಹನ್ನೊಂದು ಜಿಲ್ಲೆಗಳಲ್ಲಿ ಕೆರೆಗಳ ಅಭಿವೃದ್ಧಿ, ಚೆಕ್ ಡ್ಯಾಂ ಕಟ್ಟುವುದು, ಅಂತರ್ಜಲವನ್ನು ಮೇಲಕ್ಕೆತ್ತಕ್ಕೆ ತರುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಇನ್ನು ರೈತ ಕಾಯಕ ಕೆರೆ ಮುಂತಾದ ಜಲಸಂವರ್ಧನೆ ಕೆರೆಗಳನ್ನು ಮಾಡತಕ್ಕಂಥ ಕೆಲಸವನ್ನು ಕೂಡ ಇವತ್ತು ಉತ್ತಮವಾಗಿ ಮಾಡುತ್ತಿದ್ದಾರೆ.ಇದರಿಂದ ಮುಂದಿನ ದಿನಗಳಲ್ಲಿ ಬಹುತೇಕವಾಗಿ ಎಲ್ಲಾ ಯೋಜನೆಗಳು ಸಕ್ಸಸ್ ಆದರೆ ಬರಗಾಲ ಬವಣೆಯಿಂದ ಪಾರಾಗಬಹುದು ಎನ್ನುವ ವಿಚಾರವನ್ನು ಹೇಳುತ್ತೇನೆ. ಇನ್ನು ಈ ರಾಜ್ಯದಲ್ಲಿ ಸ್ವಚ್ಛ ಗ್ರಾಮ ಯೋಜನೆಯನ್ನು , ಸರ್ಕಾರ ವತಿಯಿಂದ 18 ಲಕ್ಷ ರೂಪಾಯಿಗಳು ಹಾಗೂ ಊರ ವಂತಿಗೆಯಿಂದ ಎರಡು ಲಕ್ಷ ರೂಪಾಯಿಗಳನ್ನು ಎತ್ತಿ ಒಟ್ಟು 20 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸ್ವಚ್ಛ ಗ್ರಾಮ ಯೋಜನೆಯನ್ನು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಏರ್ಪಡಿಸಿದ್ದರು. ಅದು ಬಹಳ ದೊಡ್ಡ ಯೋಜನೆ ಎಂದು ತಿಳಿದುಕೊಂಡಿದ್ದೆವು. ಆದರೆ ಇವತ್ತು ಮತ್ತೊಂದು ಜಲ ನಿರ್ಮಲ ಯೋಜನೆ ಎಂದು ಮಾಡಿದ್ದು, ಐದು ಪರ್ಸೆಂಟ್ ಊರವಂತಿಗೆಯಿಂದ 10 ಪರ್ಸೆಂಟ್ ಗ್ರಾಮ ಪಂಚಾಯಿತಿಯಿಂದ ಹಾಗೂ ಉಳಿದಂತಹ 85 ಪರ್ಸೆಂಟ್ ವರ್ಲ್ಡ್ ಬ್ಯಾಂಕ್ ಯೋಜನೆಯಲ್ಲಿ ತೊಡಗಿಸಿದರೆ ಬರೀ 20 ಲಕ್ಷ ರೂಪಾಯಿ ಏಕೆ ಒಂದು ಕೋಟಿ ರೂಪಾಯಿಯವರೆಗೆ ಇವತ್ತು ಈ ಕೆಲಸವನ್ನು ತೆಗೆದುಕೊಂಡು ಮಾಡಬಹುದು. ಇಂತಹ ಯೋಜನೆ ಹಿಂದೆಯೂ ಇರಲಿಲ್ಲ. ಮುಂದೆಯೂ ಬರುವುದಿಲ್ಲ. ಇಂತಹ ಯೋಜನೆಗೆ ನಮ್ಮ

ಮಾನ್ಯ ಮುಖ್ಯಮಂತ್ರಿಯವರು, ನಮ್ಮ ಸರ್ಕಾರ ಹೆಚ್ಚು ಒತ್ತು ಕೊಟ್ಟು ಕೆಲಸವನ್ನು ಮಾಡುತ್ತಿದ್ದಾರೆ. ಇಂತಹ ಯೋಜನೆಗಳು ಇನ್ನು ನಾಲ್ಕೈದು ವರ್ಷಗಳು ಮುಂದುವರೆದರೆ, ಮುಂದಿನ ದಿವಸಗಳಲ್ಲಿ ಬರುವಂತಹ ಸರ್ಕಾರಗಳಿಗೆ, ಮುಂದೆ ಬರುವಂತಹ ಜನ ಪ್ರತಿನಿಧಿಗಳಿಗೆ ಮತ್ತೆ ಎಂ.ಎಲ್.ಎ ಗಳಿಗೆ ಮುಂದೆ ಏನು ಕೆಲಸ ಮಾಡಬೇಕೆಂಬುದು ಗೊತ್ತಾಗುತ್ತದೆ. ಅಷ್ಟು ಉತ್ತಮ ರೀತಿಯಲ್ಲಿ ನನ್ನ ಕ್ಷೇತ್ರದಲ್ಲಿ ಕೆಲಸಗಳಾಗುತ್ತಿವೆ. ಇವತ್ತು ಬಡವರು ಅವರು ಪಟ್ಟಣ ಪ್ರದೇಶಗಳಲ್ಲಿರಬಹುದು. ಇಲ್ಲಿ ಒಂದು ಸಾವಿರ ಮನೆಗಳನ್ನು, ಎರಡು ಸಾವಿರ ಮನೆಗಳನ್ನು ಕಟ್ಟುವಂಥದ್ದನ್ನು ನಾವು ಹಿಂದೆಂದೂ ನೋಡಿರಲಿಲ್ಲ. ಇಂತಹ ಯೋಜನೆಗಳನ್ನು ಇವತ್ತು ನಮ್ಮ ಸರ್ಕಾರ ಹಾಕಿಕೊಂಡಿದೆ, ಇವತ್ತು 5 ರೂ, 10ರೂ.ಗಳನ್ನು ಪಿಗ್ಮಿ ಕಟ್ಟುವಂತಹ ವ್ಯವಸ್ಥೆಯನ್ನು ತಂದಿರುವರೆಂದರೆ ಅದು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮತ್ತು ಗ್ರಾಮೀಣ ಜನತೆಗೆ ಹೆಚ್ಚಿನ ಒತ್ತನ್ನು ಕೊಟ್ಟು ಈ ಕಾರ್ಯಕ್ರಮವನ್ನು ಮಾಡಿದ್ದಾರೆ. ಇವತ್ತು ಬೀಡಿ ಕಾರ್ಮಿಕರು, 5ರೂ, 10ರೂ.ಗಳಿಗೆ ಕೂಲಿ ಮಾಡುವಂತಹ ಹಮಾಲಿ ಕೂಲಿ ಮಾಡತಕ್ಕಂಥವರು ಸಹ ಹಣವನ್ನು ಉಳಿಸಿ, ಪ್ರತಿದಿವಸವಾಗದಿದ್ದರೂ ಪ್ರತಿ ತಿಂಗಳೂ ಮೂರು ನೂರು ರೂಪಾಯಿಗಳನ್ನು ಉಳಿಸುವಂತಹ ಒಂದು ವ್ಯವಸ್ಥೆಯನ್ನು ತಂದು ಇವತ್ತು ನಮ್ಮ ಬ್ಯಾಡಗಿ ನಗರದಲ್ಲಿ ಒಂದು ಸಾವಿರ ಮನೆಗಳನ್ನು ಕೊಡುವಂತಹ ವ್ಯವಸ್ಥೆಯನ್ನು ತಂದಿದೆ. ಇಂತಹ ಅತ್ಯುತ್ತಮವಾದಂತಹ ಕೆಲಸವನ್ನು ಬೇರೆ ಯಾರು ಮಾಡಲಿಲ್ಲವೆಂದು ಬಹಳ ಹೆಮ್ಮೆಯಿಂದ ಹೇಳುವಂತಹ ಪರಿಸ್ಥಿತಿ ಇವತ್ತು ಇದೆ. ಇನ್ನು 10ನೇ ಮತ್ತು 11ನೇ ಹಣಕಾಸಿನ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತ್‌ಗಳಿಗೆ ನಾವು ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಟ್ಟಿದ್ದೇವೆ. ಮತ್ತೆ ಹುಡ್ಕೋ ಯೋಜನೆಯಲ್ಲಿ ದೊಡ್ಡ ಪಟ್ಟಣವಾದರೆ ಒಂದು ಕೋಟಿ ರೂಪಾಯಿಗಳನ್ನು ಕೊಡುವಂಥಾದ್ದು ಮತ್ತು ಸಣ್ಣ ಪುರಸಭೆಗಳಾಗಿದ್ದಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಡುವಂಥಾದ್ದು, ಅಲ್ಲಿ ಡಾಂಬರೀಕರಣ ಮಾಡುವಂಥಾದ್ದು, ವಿದ್ಯುಚ್ಛಕ್ತಿಯನ್ನು ಪೂರೈಸುವಂಥಾದ್ದು, ಕುಡಿಯುವ ನೀರಿನ ಯೋಜನೆಗಳನ್ನು ಹಾಕುವಂಥಾದ್ದು, ಇದನ್ನು ಯಾರೂ ಮಾಡಿರುವುದಿಲ್ಲ. ಇಲ್ಲಿ ವಿರೋಧಪಕ್ಷದವರು ಸುಮ್ಮನೆ ಹೇಳುತ್ತಾರೆ. ಅವರು ಏನು ಮಾಡಿದ್ದಾರೆಂಬುದನ್ನು ಅವರೇ ಹೇಳಬೇಕು. ನಾನು ನಿರ್ದಾಕ್ಷಿಣ್ಯವಾಗಿ ಹೇಳುವುದೇನೆಂದರೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳವರೆಗೂ ಮಾಡಿರುವಂತಹ ಕೆಲಸಕ್ಕೂ, ಈಗ ನಾವು ಎರಡೂವರೆ ವರ್ಷಗಳಲ್ಲಿ ಮಾಡಿರುವಂತಹ ಕೆಲಸವನ್ನು ತುಲನಾತ್ಮಕವಾಗಿ ನೋಡಿದರೆ ನಮಗೆ ಹೆಮ್ಮೆಯಾಗುವಂತಹ ಕಾರ್ಯಕ್ರಮಗಳನ್ನು ಈ ಸರ್ಕಾರ ಕೊಟ್ಟಿದೆಯೆಂದು ಹೇಳುತ್ತೇನೆ. ಇದರ ಜೊತೆಗೆ ಕೊಟ್ಟೂರು ಮತ್ತು ಹರಿಹರ ರೈಲ್ವೆ ಕೆಲಸ ಬಹಳ ವರ್ಷಗಳಿಂದ ಆಗದೇ ಇದ್ದಂಥಾದ್ದನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಯವರು "ರೈಲ್ವೆ ಕಾರ್ಪೊರೇಷನ್" ಎಂಬ ಹೊಸ ಯೋಜನೆಯನ್ನು ನಿರ್ಮಾಣ ಮಾಡಿ, ಸರ್ಕಾರಕ್ಕೆ ವಿಶೇಷ ಪ್ರಕರಣವೆಂದು ಇದನ್ನು ಪರಿಗಣಿಸಿ ಇದಕ್ಕೆ ಸುಮಾರು ಹಣವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಮಾನ್ಯ ಜಾಫರ್ ಷರೀಫ್ ಅವರನ್ನು ನಾವು ನೆನೆಪು ಮಾಡಿಕೊಳ್ಳಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಹಿಂದೆಂದೂ ಮಾಡಲಾಗದಷ್ಟು ತಮ್ಮ ಅಧಿಕಾರದ ಅವಧಿಯಲ್ಲಿ ರೈಲ್ವೆ ವಲಯಗಳನ್ನು ಇವರು ಮಾಡಿದರು. ಆದರೆ ಈಗ ಕಳೆದ ನಾಲ್ಕು ವರ್ಷಗಳಿಂದ ಒಂದು ಬ್ರಾಡ್ ಗೇಜ್‌ಗಳು ಆಗದೇ ಇರುವುದನ್ನು ನೋಡಿದರೆ ನಮಗೆ ಬಹಳ ದುಃಖವಾಗುತ್ತದೆ. ಇನ್ನು ನಮ್ಮ ಸರ್ಕಾರ ಪರಿಶಿಷ್ಟ

ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇವತ್ತು ಹನ್ನೊಂದು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ಇನ್ನು ಇವರಿಗೆ ಶೇಕಡಾ 50 ರಷ್ಟು ಮನೆಗಳನ್ನು ಕೊಡುವಂತೆ ಮಾಡಿರುವಂಥಾದ್ದನ್ನು ನಾವು ಮುಂದಿನ ದಿವಸಗಳಲ್ಲಿ ಸ್ವಾಗತ ಮಾಡುವಂಥಾದ್ದು, ಅದೇ ರೀತಿಯಲ್ಲಿ ಲಂಬಾಣಿ ತಾಂಡಗಳನ್ನು ಮಾಡಿದರಷ್ಟೇ ಸಾಲದು, ಕೊರಚ, ಕೊರಮ, ಕುರುಬರ ದೊಡ್ಡಿಗಳು, ರೆಡ್ಡಿಗರ ದೊಡ್ಡಿಗಳು, ಇವರ ಗ್ರಾಮಗಳನ್ನು ಇವತ್ತು ಕಂದಾಯ ಗ್ರಾಮಗಳಿಗಾಗಿ ಮಾಡಿ, ಅವರಿಗೂ ಇಂತಹ ಸವಲತ್ತುಗಳು ದೊರೆಯುವಂತೆ ಸರ್ಕಾರ ಮುಂದಿನ ದಿವಸಗಳಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಇನ್ನು ಅನೇಕ ವಿಚಾರಗಳಲ್ಲಿ ಹಳ್ಳಿಗಳಲ್ಲಿ ಕೃಷಿಕ ರೈತರಿಗೆ ಮುಂದಿ ದಿವಸಗಳಲ್ಲಿ ಸುಮಾರು 6 ಲಕ್ಷ ಜನರಿಗೆ ಬೆಳೆ ವಿಮೆಯನ್ನು ಕೊಡುವಂತಹ ಬೃಹತ್ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಇನ್ನು ನಮ್ಮ ಹಾವೇರಿ ಜಿಲ್ಲೆಯಲ್ಲಿ ಬರಗಾಲ ಬಂದಿದೆ. ಇದರ ಬಗ್ಗೆ ಪತ್ರಿಕೆಗಳಲ್ಲೂ ಓದಿದ್ದೀರಿ. ಇವತ್ತು ಮೂರು ತಾಲ್ಲೂಕುಗಳನ್ನು ಬರಗಾಲ ಪ್ರದೇಶವೆಂದು ಘೋಷಿಸಿ, ಇನ್ನು ನಾಲ್ಕು ತಾಲ್ಲೂಕುಗಳನ್ನು ಬರಗಾಲದಿಂದ ಹೊರಗಿಟ್ಟಿದ್ದಾರೆ. ನಾವು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆದಿದ್ದೇವೆ. ಇಲ್ಲಿ ನಮ್ಮ ಜನರೆಲ್ಲರೂ ಗುಳೆ ಹೋಗುತ್ತಿದ್ದಾರೆ. ಆದುದರಿಂದ ಈ ನಾಲ್ಕು ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ಇದರ ಜೊತೆಗೆ ಕೆ.ಸಿ.ಸಿ ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಘಗಳು ಇವತ್ತು ರೈತರ ಹೊಲಗಳನ್ನು ಹರಾಜು ಹಾಕುತ್ತಿವೆ. ತಾವು ದಯಮಾಡಿ ಇವರ ಸಹಾಯಕ್ಕೆ ಬರಬೇಕೆಂದು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ, ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್ ಯೋಗೀಶ್‌ಭಟ್(ಮಂಗಳೂರು) ಮಾನ್ಯ ಉಪಾಧ್ಯಕ್ಷರೇ, ನನಗೆ 2002-2003ನೇ ಆಯವ್ಯಯ ಪತ್ರದ ಮೇಲೆ ಚರ್ಚಿಸಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಈ ಬಜೆಟ್ ಬಗ್ಗೆ ಒಂದೇ ಮಾತಿನಲ್ಲಿ ಅಭಿಪ್ರಾಯ ಏನೆಂದು ಕೇಳಿದರೆ, ಬಹಳ ಆಕರ್ಷಕ ಘೋಷಣೆಯ ದುರ್ಬಲ ನಿರ್ವಹಣೆಯ ಬಜೆಟ್ ಎಂದು ಹೇಳಬೇಕಾಗುತ್ತದೆ. ನಾನು ಯಾವ ಕಾರಣಕ್ಕೋಸ್ಕರ ಈ ರೀತಿ ಹೇಳುತ್ತಿದ್ದೇನೆಂದರೆ ವಿಶೇಷವಾಗಿ ಸಂಪನ್ಮೂಲಗಳನ್ನು ಜೋಡಿಸುವ ವಿಚಾರದಲ್ಲಿ ಸರ್ಕಾರ ವಿಫಲವಾಗಿದೆ ಎಂದು ಹೇಳುವಂಥಾದ್ದು, ಮತ್ತು ಎರಡನೆಯದಾಗಿ ನಿಗದಿತ ಇಲಾಖೆಗಳಿಗೆ ಹಣವನ್ನು ಖರ್ಚು ಮಾಡುವಂಥಾದ್ದರಲ್ಲಿಯೂ ಕೂಡ ವಿಫಲವಾಗಿದೆ. ಈ ಎರಡು ಕಾರಣಗಳಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಕೌಶಲ್ಯಕ್ಕೆ ರಾಷ್ಟ್ರದಲ್ಲೇ ಖ್ಯಾತಿ ಗಳಿಸಿದೆ ಎಂಬ ಮಾತು ಬಂದಿದೆ. ಆದರೆ ಎರಡು, ಮೂರು ತಿಂಗಳುಗಳಿಂದ ಅಧ್ಯಾಪಕರುಗಳಿಗೆ ವೇತನ ಸಿಗುತ್ತಿಲ್ಲ. ರಾಜ್ಯ ಅನುದಾನಿತ ಖಾಸಗಿ ಐ.ಟಿ. ನೌಕರರ ಸಂಘದ ಮನವಿಯಂತೆ ನಾಲ್ಕು ತಿಂಗಳುಗಳಿಂದ ಸಿಬ್ಬಂದಿಗಳಿಗೆ ಸಂಬಳ ಸಿಕ್ಕಿಲ್ಲ. ಟ್ರೆಜರಿಗಳಲ್ಲಿ ಚೆಕ್‌ಗಳು ಪೆಂಡಿಂಗ್ ಇವೆ. ಇಂತಹ ಅನೇಕ ಸಮಸ್ಯೆಗಳು ಎದುರು ಇರುವಾಗ ಯಾವ ರೀತಿಯಾಗಿ ನಮ್ಮ ಆರ್ಥಿಕ ಕೌಶಲ್ಯತೆಯನ್ನು ತೋರಿಸುತ್ತಿದ್ದೇವೆಂಬ ಪ್ರಶ್ನೆ ನಮ್ಮ ಎದುರು ಬರುತ್ತಿದೆ. ಅದೇ ರೀತಿಯಲ್ಲಿ ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆಗೆ ಕಳೆದ ವರ್ಷಕ್ಕಿಂತ ಈ ಸಾರಿ ಎಂಭತ್ತು ಕೋಟಿ ರೂಪಾಯಿಗಳ ಕಡಿತಗೊಳಿಸಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ 79 ಕೋಟಿ

ರೂಪಾಯಿಗಳನ್ನು ಕಡಿತ ಮಾಡಿದ್ದಾರೆ. ಶಿಕ್ಷಣ, ಕ್ರೀಡೆ, ಸಂಸ್ಕೃತಿಗೆ 80 ಕೋಟಿ ರೂಪಾಯಿಗಳ ಕಡಿತ ಮಾಡಿದೆ. ತೀವ್ರವಾದಂತಹ ವಿದ್ಯುತ್ ಸಮಸ್ಯೆ ಇದ್ದರೂ ಸಹಿತ ಕಳೆದ ವರ್ಷಕ್ಕಿಂತ ಈ ವರ್ಷ 53 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿದ್ದಾರೆ. ಗ್ರಾಮೀಣಾಭಿವೃದ್ಧಿಗೆ 63ಕೋಟಿ ರೂಪಾಯಿಗಳ ಕಡಿತ ಮಾಡಲಾಗಿದೆ. ಈ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಿತ ಸಂಗ್ರಹದಲ್ಲಿ 1,375 ಕೋಟಿ ರೂಪಾಯಿಗಳು ಕಡಿಮೆಯಾಗಿದೆ ಎಂದು ಹೇಳುವ ಅಂಶವನ್ನು ಕೂಡ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ರಾಜ್ಯಕ್ಕೆ ಹಾಕಿರುವಂತಹ ಹಣದಲ್ಲಿ ಹಿಂದಿನಿಂದ ಉಳಿದು ಬಂದ 95.55ಕೋಟಿ ರೂಪಾಯಿಗಳು ಇತ್ತು, ಮಾರ್ಚ್ 18ರ ವೇಳೆಗೆ 134.59 ಕೋಟಿ ರೂಪಾಯಿಗಳು ಇತ್ತು. ಈ ಹಣವನ್ನು ಬಳಸುವ ವಿಚಾರದಲ್ಲೂ ಕೂಡ ಸರ್ಕಾರ ವಿಫಲವಾಗಿದೆ ಎಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನು ಅಬಕಾರಿ ಬಾಬಿನಲ್ಲಿ 2001-2002ರಲ್ಲಿ 2,086 ಕೋಟಿ ರೂಪಾಯಿಗಳ ಗುರಿಯನ್ನು ನಿಗದಿಗೊಳಿಸಲಾಗಿತ್ತು. ಆದರೆ ವಾಸ್ತವವಾಗಿ 1,550.03 ಕೋಟಿ ರೂಪಾಯಿಗಳು ಮಾತ್ರ ವಸೂಲಾಗಿದೆ. ಈ ಬಾಬಿನಲ್ಲಿ 536 ಕೋಟಿ ರೂಪಾಯಿಗಳ ಹಣ ಕೊರತೆ ಇದೆ. ವಾಣಿಜ್ಯ ತೆರಿಗೆ ಸಂಗ್ರಹಣೆಯಲ್ಲಿ 555 ಕೋಟಿ ರೂಪಾಯಿಗಳ ಕಡಿಮೆ ಸಂಗ್ರಹಣೆ ಇದೆ. ಇಂತಹ ಅನೇಕ ವಿವರಗಳು ಇವೆ. ನನಗೆ ಹೇಳಲು ಸಮಯಾವಕಾಶವಿಲ್ಲದೇ ಇರುವುದರಿಂದ ನಾನು ಹೇಳುವುದಕ್ಕೆ ಆಗುತ್ತಿಲ್ಲ. ಅಬಕಾರಿ ಬಾಕಿ ತೆರಿಗೆ, ಕರ ಸಮಾಧಾನ ಯೋಜನೆ, ಜಾರಿಯ ಬಗ್ಗೆ ಕಾಯಿದೆ ವಿಧಾನ ಮಂಡಲದಲ್ಲಿ ಪಾಸು ಆಗಿ ಎರಡು ವರ್ಷಗಳಾಯಿತು. ಆದರೆ ಇದನ್ನು ಜಾರಿಗೊಳಿಸಲು ದಿನಾಂಕವನ್ನು ಪ್ರಕಟಿಸಿಲ್ಲ. ಏಕೆ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತಿದೆ. ಇಲ್ಲಿ ರೈತರ ಐದು ಸಾವಿರ ರೂಪಾಯಿಗಳಿಗೆ ಅವರ ಆಸ್ತಿಯನ್ನು ಜಪ್ತಿ ಮಾಡಿ ಹರಾಜು ಹಾಕುವಂತಹ ವ್ಯವಸ್ಥೆ ಇರುವಾಗ, ಇವರ ಬಗ್ಗೆ ಏಕೆ ತಾರತಮ್ಯ ಎಂದು ಕೇಳುವಂಥಾದ್ದು, ಮತ್ತೆ ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಯವರು ಸ್ವತಃ ಆಸಕ್ತಿಯನ್ನು ತೆಗೆದುಕೊಂಡು ಅಬಕಾರಿ ಮತ್ತು ವಾಣಿಜ್ಯ ತೆರಿಗೆಯನ್ನು ಮರ್ಜ್ ಮಾಡಿದಂತಹ ಸಂದರ್ಭದಲ್ಲಿ ಶೇ. 20ರಷ್ಟು ಇಂಪ್ರೂವ್‌ಮೆಂಟ್ ತೋರಿಸುತ್ತೇನೆಂಬ ಮಾತನ್ನು ಹೇಳಿದ್ದರು. ಆದರೆ ಇಲ್ಲಿ ಶೇಕಡ 8.3 ಆಗಿರುವುದರಿಂದ ತಾವು I will roll back ಎಂದು ಹೇಳುವಂತಹ ಮಾತನ್ನು ತಾವು ಉಳಿಸಿಕೊಳ್ಳುತ್ತಿರೆಂಬ ಮಾತನ್ನು ಹೇಳುತ್ತೇನೆ. 1999-2000ನೇ ಇಸವಿಯಲ್ಲಿ ಸಿ.ಎ.ಜಿ. ಯವರ ವರದಿಯ ಆಧಾರದಲ್ಲಿ 4,448.72 ಕೋಟಿ ರೂಪಾಯಿಗಳನ್ನು ಬಳಸಿದ ಕೆಲವು ಬೇಡಿಕೆಗಳಲ್ಲಿ ಮಾತ್ರ 334.46 ಕೋಟಿ ರೂಪಾಯಿಗಳ ಮೊತ್ತವನ್ನು ಹೆಚ್ಚು ಖರ್ಚು ಮಾಡಿದಂತಹ ವರದಿ ಇದೆ. ಉದಾಹರಣೆಗೆ ಕೃಷಿಗೆ 49.30 ಕೋಟಿ ರೂಪಾಯಿಗಳು, ಭಾರಿ ಕೈಗಾರಿಕಾ ಉದ್ದಿಮೆಗೆ 35 ಕೋಟಿ ರೂಪಾಯಿಗಳು, ಈ ರೀತಿಯಾಗಿ ವಿವರಗಳು ಬರುತ್ತಿವೆ. ಇನ್ನು ವಿಶೇಷವಾಗಿ ರಾಜ್ಯಸರ್ಕಾರದ ತೆರಿಗೆ ಸಂಗ್ರಹದಲ್ಲಿ ಲೋಪ ದೋಷಗಳಿರುವಂಥಾದ್ದು ಭಾರತ ಸರ್ಕಾರಜ ಸಿ.ಎ.ಜಿ. ಯವರು ಪತ್ತೆ ಹಚ್ಚಿದ್ದಾರೆ. ಸರ್ಕಾರಕ್ಕೆ ಒಟ್ಟು 381 ಕೋಟಿ ರೂಪಾಯಿಗಳು ನಷ್ಟವಾಗಿದೆಯೆಂದು ವರದಿಯಲ್ಲಿದೆ. 1,633 ಪ್ರಕರಣವಿದ್ದು ಇದರಲ್ಲಿ ಕಂಡು ಬಂದಿದೆ. ರಾಜ್ಯ ವಿತ್ತೀಯ ಕೊರತೆಗಳನ್ನು ಶೂನ್ಯಕ್ಕೆ ತರುವಂತಹ ಒಂದು ಪ್ರಯತ್ನ ಘೋಷಣೆ ಇದ್ದರೂ ಕೂಡ ಶೇಕಡಾ 10ಅನ್ನು ಮೀರಿರುವಂಥಾದ್ದು ಅಪಾಯಕರವಾದಂತಹ ಬೆಳವಣಿಗೆಯಾಗಿದೆ. ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಯೋಜನಾ ಗಾತ್ರಕ್ಕೆ ತಕ್ಕಂತೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಆಗಿರುವಂತಹ ನ್ಯೂನ್ಯತೆಯನ್ನು ಹೇಳುತ್ತೇನೆ. ವಿಶೇಷವಾಗಿ ಮಾರ್ಚ್ ತಿಂಗಳ್ಲಿ ಬಜೆಟ್‌ನಲ್ಲಿ ನಿಗದಿ ಪಡಿಸಲ್ಪಟ್ಟ ಹೆಚ್ಚಿನ ಹಣವನ್ನು ಖರ್ಚು ಮಾಡುವಂತಹ ಸಂಸ್ಕೃತಿಯನ್ನು ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾರ್ಚ್ ತಿಂಗಳಲ್ಲಿ 30ರೊಳಗೆ ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂತಹ ಪ್ರವೃತ್ತಿಯನ್ನು ನಿಲ್ಲಿಸಿ, ಅದನ್ನು ಹಂತ ಹಂತವಾಗಿ ಖರ್ಚು ಮಾಡುವಂಥಾದ್ದಕ್ಕೆ ಸೂಕ್ತ ಮಾರ್ಗದರ್ಶವನ್ನು, ಸೂಚನೆಯನ್ನು ಕೊಡಬೇಕೆಂದು ವಿಶೇಷವಾದ ವಿನಂತಿಯನ್ನು ತಮ್ಮಲ್ಲಿ ಮಾಡುತ್ತಿದ್ದೇನೆ.ಇನ್ನು ವಿಶೇಷವಾಗಿ ಆಯುರ್ವೇದಿಕೆ ಔಷಧಿಯ ಬಗ್ಗೆ ಉಲ್ಲೇಖ ಮಾಡುವುದಾದರೆ ದಕ್ಷಿಣ ಭಾರತ, ಕೇರಳ, ಆಂಧ್ರಪ್ರದೇಶ, ಹಾಗೂ ತಮಿಳುನಾಡುಗಳಲ್ಲಿ ಶೇಕಡಾ 4 ರಿಂದ ಶೇಕಡಾ 6ರಷ್ಟು ಮಾತ್ರ ಸೇಲ್ಸ್ ಟ್ಯಾಕ್ಸ್ ಇದೆ. ಆದರೆ ನಮ್ಮಲ್ಲಿ ಶೇಕಡಾ 12ರಷ್ಟು ತೆರಿಗೆ ಏರಿಸುವಂಥಾದ್ದು, ಅಲಟರ್‌ನೇಟೀವ್ ಮೆಡಿಸನ್ ಸಿಸ್ಟಂ ಎಂದು ಹೇಳುವಂಥ ಆಧಾರದಲ್ಲಿ ಇದನ್ನು ಮಾಡಿರುವಂಥಾದ್ದು ಸರಿಯಲ್ಲ. ಇದನ್ನು ತಾವು ಪುನರ್ ವಿಮರ್ಶೆ ಮಾಡಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಊರಿನ ಹಳ್ಳಿಗಳಲ್ಲಿಯೂ ಕೂಡ ವಿಶೇಷವಾಗಿ ಸಂಗ್ರಹಿಸುವಂತಹ ವನಸ್ಪತಿಗಳಿಗೆ 4 ಪರ್ಸೆಂಟ್ ಆ್ಯಡ್ ಆಗುವುದರಿಂದ 16 ಪರ್ಸೆಂಟ್ ಆಗುವುದರಿಂದ ಅದನ್ನು ಪುನರ್‌ವಿಮರ್ಶಿಸಿ ಹಿಂದಿನ ತೆರಿಗೆಯನ್ನು ಮಾಡಬೇಕೆಂಬುದನ್ನು ಮತ್ತು ಕೃಷಿ ಮತ್ತು ಸಂಬಂಧಿತ ವಲಯಗಳ ಬಗ್ಗೆ 5100 ಕೋಟಿ ರೂಪಾಯಿಗಳು ಎಂದು ಇದೆ. 2000 ಕೋಟಿ ರೂಪಾಯಿಗಳ ವಿದ್ಯುತ್ ಸಹಾಯಧನ, 2900 ಕೋಟಿ ರೂಪಾಯಿಗಳು ನೀರಾವರಿ ವೆಚ್ಚವನ್ನು ಕಳೆದರೆ ನೇರವಾಗಿ ಕೃಷಿಗೆ ಸಿಕ್ಕಿರುವಂತದ್ದು 200 ಕೋಟಿ ರೂಪಾಯಿಗಳು ಮಾತ್ರ ಎಂದು ಹೇಳುತ್ತೇನೆ. ಸ್ತ್ರೀಶಕ್ತಿ ಕಾರ್ಯಕ್ರಮಗಳ ಬಗ್ಗೆ ಅದರ ಅಪಾರ ಯಶಸ್ವಿನ ಬಗ್ಗೆ ಸಾಕಷ್ಟು ಹೆಗ್ಗಳಿಕೆ ಇದೆ. ಆದರೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ 29 ಲಕ್ಷ ರೂಪಾಯಿಗಳ ಅವರ್ತನಿಧಿ ಸ್ಯಾಂಕ್ಷನ್ ಆಗಿ ಕೊನೆಗೆ ಅದರಲ್ಲಿ 22 ಲಕ್ಷ ರೂಪಾಯಿಗಳನ್ನು ಹಿಂತೆಗೆದುಕೊಂಡಿದ್ದಾರೆ. ಅಲ್ಲಿ 7 ಲಕ್ಷ ರೂಪಾಯಿಗಳು ಮಾತ್ರ ಉಪಯೋಗವಾಗಿದೆ. ಹೆಚ್ಚಿನ ಕಡೆಗಳಲ್ಲಿ ಸ್ಪರ್ಧಾತ್ಮಕವಾಗಿ ನಮಗೆ ಏಕೆ ಕೊಟ್ಟಿಲ್ಲವೆಂದು ದೊಡ್ಡ ಪ್ರಶ್ನೆ ಎದ್ದು ಬಂದಿದೆ. ನಾನು ತೆಗೆದುಕೊಂಡ ವಿವರಗಳ ಆಧಾರದಲ್ಲಿ 75355 ಸ್ವಸಹಾಯ ತಂಡಗಳ ರಚನೆಯ ಬಗ್ಗೆ ಹೇಳಿದ್ದಾರೆ.

ಶ್ರೀ ಕರಡಿ ಸಂಗಪ್ಪ ಅಮರಪ್ಪ:- ಮಾನ್ಯ ಉಪಾಧ್ಯಕ್ಷರೆ, ಬಹಳ ಒಳ್ಳೆಯ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ತಾವು ಬಜೆಟ್‌ನಲ್ಲಿ ನಿಗಧಿಪಡಿಸಿರತಕ್ಕಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ತಾವು ಬಜೆಟ್‌ನಲ್ಲಿ ನಿಗಧಿಪಡಿಸಿರತಕ್ಕಂತಹ ಹಣವನ್ನು ಅದಕ್ಕೆ ಪೂರೈಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್:- ನನ್ನ ಕ್ಷೇತ್ರದಲ್ಲಿ 29 ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿದ್ದು ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 22 ಲಕ್ಷ ರೂಪಾಯಿಗಳು ವಿತಡ್ರಾ ಆಗಿದೆ. ನಂತರ 11114 ಸ್ವಸಹಾಯ ಗುಂಪುಗಳಿಗೆ ಮಾತ್ರ ಆಗಿದೆ. ಟೋಟಲ್ 75ರಲ್ಲಿ ಸುಮಾರು 15 ಪರ್ಸೆಂಟ್ ಗುಂಪುಗಳಿಗೆ ಮಾತ್ರ ಇವತ್ತು ಸಹಾಯಧನವನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ಸುಮಾರು

1013 ಲಕ್ಷ ರೂಪಾಯಿಗಳನ್ನು ಹಿಂತೆಗೆದು ಕೊಳ್ಳಲಾಗಿದೆ. ಈ ರೀತಿಯಾದರೆ ಅದು ಘೋಷಣೆಯಲ್ಲಿರುತ್ತದೆಯೋ ಹೊರತು ಯಾವುದೇ ರೀತಿಯಲ್ಲಿ ಸ್ತ್ರೀಶಕ್ತಿ ಕಾರ್ಯರೂಪಕ್ಕೆ ಬರುವುದಿಲ್ಲ. ಇದು ನಿಜವಾಗಿಯೂ ಅನುಷ್ಠಾನವಾಗಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಮತ್ತು ಸ್ಥಳೀಯ ಆಡಳಿತ ಸಂಸ್ಥೆಯ ಲೆಕ್ಕಪತ್ರಗಳ ಬಗ್ಗೆ:ಅಭಿವೃದ್ಧಿ ಯೋಜನೆಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಆಂಧ್ರ ಪ್ರದೇಶದ ಜನ್ಮಭೂಮಿ ಕಾರ್ಯಕ್ರಮದ ಒಂದು ಈ ರೀತಿಯಲ್ಲಿ ತರಹದ ಇವೊಲ್ಯೂಷನ್ ಅನ್ನು ವಿನಂತಿ ಮಾಡುತ್ತೇನೆ ಅದರಲ್ಲೂ ವಿಶೇಷವಾಗಿ ಸೋಷಿಯಲ್ ಆಡಿಟ್ ಮತ್ತು ಡೆವಲಪ್‌ಮೆಂಟ್ ಆಡಿಟ್ ಎರಡನ್ನೂ ಅಳವಡಿಸಬೇಕು, ಇದಕ್ಕೆ ಶಾಸಕಾಂಗ ಸ್ಥಾನಮಾನವನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಮಾಹಿತಿಯನ್ನು ಪಡೆಯುವಂತಹ ವ್ಯವಸ್ಥೆ ಜೊತೆಯಲ್ಲಿ ವಿಜಲೆನ್ಸ್ ಕಮಿಟಿಯನ್ನು ಪ್ರತಿ ವಿಭಾಗದಲ್ಲಿ ಗ್ರಾಮೀಣ ಪ್ರದೇಶದಲ್ಲಿಯೂ ಕೂಡ ಅದನ್ನು ಜೋಡಿಸಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಆಡಳಿತದಲ್ಲಿ ಜನರುಗಳು ಭಾಗವಹಿಸುವ ಬಗ್ಗೆ ವಿಶೇಷವಾಗಿ ಒತ್ತನ್ನು ಕೊಡುವ ಬಗ್ಗೆ, ನನಗೆ ಸಿಕ್ಕಿದ ಮಾಹಿತಿಯ ಪ್ರಕಾರ ಎನ್‌ಜಿಒ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದವರು 400 ಕೋಟಿ ರೂಪಾಯಿಗಳು, ಸುಮಾರು 4000 ಕೋಟಿ ರೂಪಾಯಿಗಳ ವಿದೇಶಿ ನೆರವು ಸಿಗುತ್ತಿದೆ.

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ನಾನು ಸ್ತ್ರೀಶಕ್ತಿ ಕಾರ್ಯಕ್ರಮದ ಬಗ್ಗೆ ಕ್ಲಾರಿಫಿಕೇಷನ್ ಕೊಡುತ್ತೇನೆ. ಎಲ್ಲಾ ಜಿಲ್ಲೆಗಳಲ್ಲಿ ಗುಂಪುಗಳಾಗಿದೆ. ಅಷ್ಟು ಗುಂಪುಗಳಿಗೆ ಒಮ್ಮೆಗೆ ನಾವು ಈ ನಿಧಿಯನ್ನು ಕೊಟ್ಟಿಲ್ಲ. ಅಲ್ಲಿ ನಾವು ಗ್ರೆಡೇಷನನ್ನು ಮಾಡಿದ್ದೇವೆ. ಪ್ರಾರಂಭದಲ್ಲಿ ಯಾರು ಈ ಸ್ತ್ರೀಶಕ್ತಿ ಗುಂಪುಗಳನ್ನು ಮಾಡಿದ್ದರು ಇಂಟರ್‌ನಲ್ ಲೆಂಡಿಂಗ್ ಸ್ಟಾರ್ಟ್ ಮಾಡಿದ್ದರೂ ಅವರು ನಿಯಮಾನುಸಾರ ಆ ಒಂದು ಸಭೆಗಳನ್ನು ನಡೆಸಿಕೊಂಡು ಬಂದು ಚೆನ್ನಾಗಿ ಮಾಡಿಕೊಂಡು ಬಂದರು. ಮೊದಲನೆ ಕಂತಿನಲ್ಲಿ ಒಂದಿಷ್ಟು ಜನಗಳಿಗೆ ಇಡೀ ರಾಜ್ಯದಲ್ಲಿ ಸುಮಾರು 12 ಕೋಟಿ ರೂಪಾಯಿಗಳನ್ನು 26-12-2001ರಲ್ಲಿ ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಎಲ್ಲಾ ಗುಂಪುಗಳಿಗೂ ಎಲ್ಲಾ ಜಿಲ್ಲೆಗಳಲ್ಲೂ ಸಿಕ್ಕಿರುವುದಿಲ್ಲ. ಉಳಿದವರಿಗೂ ಅದನ್ನು ಕೊಡಬೇಕೆಂಬುದು ನಮ್ಮ ಒಂದು ಇಚ್ಛೆ ಹಾಗೂ ಸರ್ಕಾರ ಒಂದು ಇಚ್ಛೆಯಾಗಿದೆ. ಅದಾಗುತ್ತದೆ. ಅದರಜೊತೆಯಲ್ಲಿ ಅಪ್ರೀಷಿಯೇಟ್‌ನ್ನು ನೀವು ಮಾಡಬೇಕು ಸ್ವರ್ಣಜಯಂತಿ ಶಹರಿ ಯೋಜನೆಯ ಹಣವನ್ನು ಕೂಡ ಒಂದೊಂದು ಗುಂಪಿಗೆ 5 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ, ಒಂದು ಗುಂಪಿಗೆ 10 ಸಾವಿರ ರೂಪಾಯಿಗಳನ್ನು ಕೊಡುವಂತಹ ವ್ಯವಸ್ಥೆಗಳಾಗಿದೆ. ಅದು ಕೆಲವೊಂದು ಗುಂಪಿಗಳಿಗೆ ಈಗಾಗಲೇ ತಲುಪಿದೆ. ಇದನ್ನು ಮುಂದೆ ನಿಲ್ಲಿಸುವುದಿಲ್ಲ.

ಶ್ರೀ ಎನ್. ಯೋಗೀಶ್‌ಭಟ್:- ಮಾನ್ಯ ಸಚಿವರಿಗೆ ತಮ್ಮನ್ನು ಬೆಂಬಲಿಸಿಕೊಂಡೇ ನನ್ನ ಮಾತನ್ನು ಹೇಳುತ್ತಿದ್ದೇನೆ. ತಮ್ಮ ಇಲಾಖೆಗೆ ಅನ್ಯಾಯವಾಗಿದೆನ್ನುವ ದೃಷ್ಟಿಯಿಂದಲೇ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ತಮ್ಮನ್ನು ಸಪೋರ್ಟ್ ಮಾಡುವ ದೃಷ್ಟಿಯಿಂದಲೇ ಈ ಮಾತುಗಳನ್ನು ಒತ್ತು ಕೊಟ್ಟು ಹೇಳಿದ್ದೇನೆ. ವಿಶೇಷವಾಗಿ ಆಡಳಿತದಲ್ಲಿ ಜನರುಗಳು ಎನ್‌ಜಿಒ ಸಂಸ್ಥೆಗಳು ಭಾಗವಹಿಸುವ ಬಗ್ಗೆ ಒತ್ತನ್ನು ನಾವು ಕೊಡಬೇಕಾಗಿದೆ. 4000 ರೂಪಾಯಿಗಳ ವಿದೇಶಿ ನೆರವು

ಸಿಗುತ್ತಿದೆ. 400 ಕೋಟಿ ರೂಪಾಯಿ ಕೇಂದ್ರಸರ್ಕಾರದ ನೆರವು ಸಿಗುತ್ತಿದೆ. ಗ್ರಾಮೀಣ ಮಟ್ಟದಲ್ಲಿ ಯೋಜನೆಗಳನ್ನು ತರಿಸುವಾಗ ವಿಶೇಷವಾಗಿ ಟೆಕ್ನೋಕ್ರಾಟಿಕ್ ಕಾಂಪೋನೆಂಟ್, ಆಕಾಡೆಮಿಕ್ ಕಾಂಪೊನೆಂಟ್ ಮತ್ತು ಡೆಮೋಕ್ರಾಟಿಕ್ ಕಾಂಪೊನೆಂಟ್ ಈ ಮೂರನ್ನು ಜೊತೆಯಲ್ಲಿ ಸೇರಿಸಿಕೊಂಡಿರುವಂತಹ ಒಂದು ವಿಶೇಷ ವ್ಯವಸ್ಥೆಯನ್ನು ಮಾಡಿದರೆ ಹೆಚ್ಚು ಲಾಭದಾಯಕವಾಗುತ್ತದೆಂಬ ಉದಾಹರಣೆಯನ್ನು ಕುಂದರಕೋಡಿ ಪ್ರಯೋಗದಲ್ಲಿ ಯಶಸ್ವಿಯಾಗಿ ಅಳವಡಿಸಿರುವುದು ಹೇಳುವಂತಹದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮತ್ತು ಬ್ಯೂರೋಕ್ರಾಟಿಕ್ ಬಿಹೇವ ರಿಯಲ್‌ಪ್ಯಾಟ್ರನ್‌ನ್ನು ಬದಲಾಯಿಸುವ ಬಗ್ಗೆ ಸರ್ಕಾರದವರು ಹೆಚ್ಚು ಒತ್ತನ್ನು ಕೊಡಬೇಕು. ಸಾಮಾಜಿಕ ಬದ್ಧತೆ ಹಾಗೂ ಕಳಕಳಿಯ ಬಗ್ಗೆ ಇದರ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕೆಂಬ ವಿನಂತಿಯನ್ನು ಕೂಡ ಮಾಡುತ್ತಿದ್ದೇನೆ. ಅಂತರ್‌ಜಲದ ಬಗ್ಗೆ ಹೇಳುವುದಾದರೆ, ಕರಾವಳಿಯ ಮೂರು ಜಿಲ್ಲೆಗಳಿಗೆ ಕುಡಿಯುವ ನೀರು, ವ್ಯವಸಾಯ ಹಾಗೂ ಮಿನಿ:ಹೈಡಲ್ ಪ್ರಾಜೆಕ್ಟ್ ಇದಕ್ಕೆ ಸಂಬಂಧಪಟ್ಟಂತಹ ಪಶ್ಚಿಮವಾಹಿನಿಯ ಬಗ್ಗೆ ಯಾವುದೇ ಉಲ್ಲೇಖವನ್ನು ಮಾಡಿರುವುದಿಲ್ಲ. ಬಹುಶಃ ಈ ಪಶ್ಚಿಮ ವಾಹಿನಿ ಕರಾವಳಿಯ 3 ಜಿಲ್ಲೆಗಳಿಗೂ ಕೂಡ ಹೆಚ್ಚಿನ ಶಕ್ತಿಯನ್ನು ಕೊಡುವುದರಿಂದ ಇದರ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಕರಾವಳಿ ಪ್ರದೇಶಗಳಿಗೆ ಸಮುದ್ರ ಕೊರೆತದಂತಹ ಭೀಕರವಾದಂತಹ ಸಮಸ್ಯೆಯನ್ನು ಪರಿಹರಿಸಲು ಯಾವ ಅನುದಾನವನ್ನು ಇಟ್ಟಿಲ್ಲವೆನ್ನುವಂತಹ ಅಂಶ ಹಾಗೂ ಕರ್ನಾಟಕ ರೈಲು ಯೋಜನೆಗಳ ಅಭಿವೃದ್ಧಿಗೆ ಕೆ-ರೈಡ್ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ವಿಶೇಷವಾಗಿ ವಿನಂತಿಯನ್ನು ಮಾಡುವುದೇನೆಂದರೆ, ಇದರ ಬಗ್ಗೆ ತಾವು 2005ರ ಗಡುವನ್ನು ಇಟ್ಟಿದ್ದೀರಿ, ಕಳೆದ ಎರಡು ವರ್ಷಗಳ ಹಿಂದೆ ಅದನ್ನು ಘೋಷಣೆಯನ್ನು ಮಾಡಿರುತ್ತೀರಿ. ಈ ತರಹ ಹೋದರೆ ಖಂಡಿತವಾಗಿಯೂ ಆಗುವುದಿಲ್ಲ. ನೇರವಾಗಿ ನಮಗೆ ಸಾಧ್ಯವಿಲ್ಲವೆಂದರೆ ಸಾಧ್ಯವಿಲ್ಲವೆಂದು ಘೋಷಣೆಯನ್ನು ಮಾಡೋಣ. ಇದರ ಬಗ್ಗೆ ನೇರವಾಗಿ ಕೇಂದ್ರ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಿ ಅದನ್ನು ಮಾಡುವಂತಹ ಪ್ರಯತ್ನವನ್ನು ಮಾಡಿದರೆ ಹೆಚ್ಚು ಯಶಸ್ವಿಯನ್ನು ಪಡೆಯಬಹುದೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಇದರಲ್ಲಿ ರಾಜ್ಯಸರ್ಕಾರದ್ದು 28 ಪರ್ಸೆಂಟ್ ಕಾಂಪೊನೆಂಟ್ ಕೇಂದ್ರಸರ್ಕಾರದ್ದು 44 ಪರ್ಸೆಂಟ್ ಕಾಂಪೋನೆಂಟ್ ಇರುತ್ತದೆ. ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್‌ನಿಂದ ಪಡೆಯಬೇಕಾಗಿತ್ತು. ಇದರಲ್ಲಿ ಎರಡೂ ವರ್ಷಗಳಿಂದಲೂ ಯಾವುದೇ ಪ್ರಗತಿಯನ್ನು ಆಗಿಲ್ಲವೆಂದು ನಾನು ನೋವಿನಿಂದ ಹೇಳುತ್ತಿದ್ದೇನೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಸಾಕಷ್ಟು ಉಲ್ಲೇಖಗಳು ಬಜೆಟ್‌ನಲ್ಲಿದೆ. ನಮ್ಮ ಆಸೆ ಇರುವಂತಹದ್ದು ಮಂಗಳೂರು ವಿಮಾನನಿಲ್ದಾಣವನ್ನು ಕೂಡ ಅಂತರಾಷ್ಟ್ರೀಯಮಟ್ಟದಲ್ಲಿ ಬೆಳೆಸಬೇಕೆಂಬನಿಟ್ಟಿನಲ್ಲಿ 126 ಕೋಟಿ ರೂಪಾಯಿಗಳ ಸ್ಪೆಷಲ್ ಪ್ಯಾಕೇಜ್ ಇದೆ. ಅದನ್ನು ಏರ್‌ಪೋರ್ಟ್ ಆಥಾರಿಟಿಗೆ ಶೀಘ್ರದಲ್ಲಿ ಹಸ್ತಾಂತರಿಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ವಿಶೇಷ ಕಾಳಜಿ ವಹಿಸಬೇಕೆಂಬ ಮಾತನ್ನು ಕೇಳುತ್ತಿದ್ದೇನೆ. ಅದರಲ್ಲೂ ವಿಶೇಷವಾಗಿ ಕರಾವಳಿ ಮೀನುಗಾರರ ಬಗ್ಗೆ ನಮಗೆ ಡೀಸೆಲ್ ಸಬ್ಸಿಡಿಯ ಬಗ್ಗೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಅದರ ಜೊತೆಯಲ್ಲಿ ವಿಶೇಷವಾಗಿ ಮೀನುಗಾರಿಕೆ ಇವತ್ತು ಜೀವಂತವಾಗಿರುವುದು. ಆ ಐಸ್‌ಗಳ

ಉಪಯೋಗದಿಂದ ಅದನ್ನು ಹೆಚ್ಚು ಕಾಲ ಬಾಳಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಈ ಐಸ್‌ನ ಮೇಲೆ 12 ಪರ್ಸೆಂಟ್ ತೆರಿಗೆಯನ್ನು ಏರಿಸುವುದು ಸರಿಯಲ್ಲ. 4 ಪರ್ಸೆಂಟ್ ಇರುವಾಗಲೇ ಮೀನು ಕ್ಷಾಮ ಇರುವಂಥ ಸಂದರ್ಭದಲ್ಲಿ ಅದನ್ನು ರದ್ದುಪಡಿಸುವಂತಹ ವಿನಂತಿ ಇರುವಂತಹ ಸಂದರ್ಭದಲ್ಲಿಯೇ ಅದನ್ನು 15 ಪರ್ಸೆಂಟ್‌ಗೆ ಏರಿಕೆ ಮಾಡಿರುವಂತಹದ್ದು ಸರಿಯಲ್ಲ ಪಕ್ಕದ ಕೇರಳ ರಾಜ್ಯದಲ್ಲಿ ಯೂನಿಟ್‌ಗೆ ಕೆಪಿಟಿಸಿಎಲ್‌ನಲ್ಲಿ ವಿದ್ಯುತ್ ಯೂನಿಟ್‌ಗೆ ಬೆಲೆ ಕಡಿಮೆ ತೆರಿಗೆಯು ಕಡಿಮೆ ಇರುವುದರಿಂದ 100 ಟನ್‌ಗಿಂತ ಜಾಸ್ತಿ, ಕಾಸರಗೋಡು ಜಿಲ್ಲೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬರುತ್ತಿರುವುದರಿಂದ ನಮ್ಮ ಐಸ್ ಫ್ಯಾಕ್ಟರಿಗಳು ಇವತ್ತು ಸಾಕಷ್ಟು ನಷ್ಟವನ್ನು ಅನುಭವಿಸುತ್ತಿರುವಂತಹ ಹಿನ್ನೆಲೆಯಲ್ಲಿ ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಕೈಗಾರಿಕಾ ಉತ್ಪನ್ನಗಳ ಜಿಲ್ಲಾ ಮಾರುಕಟ್ಟೆ ಕೇಂದ್ರ, ಉತ್ಪನ ವಸ್ತುಗಳ ಗುಣಮಟ್ಟವನ್ನು ಪರೀಕ್ಷಿಸಲು ಪ್ರತಿ ಜಿಲ್ಲೆಗೆ ಅತ್ಯಾಧುನಿಕ ಉಪಕರಣಗಳನ್ನು ಲ್ಯಾಬೊರೇಟರಿ ಸ್ಥಾಪನೆ ಮಾಡುವಂತಹದ್ದು ಹಾಗೂ ಮಂಗಳೂರಿಗೆ ಎಕ್ಸ್‌ಪೋರ್ಟ್ ಪ್ರಮೋಷನ್ ಪಾರ್ಕ್‌ನ್ನು ಶೀಘ್ರದಲ್ಲಿಯೇ ಅದನ್ನು ಉದ್ಘಾಟನೆ ಮಾಡಬೇಕು ಹಾಗೂ ಸ್ಪೆಷಲ್ ಎಕಾನಾಮಿಕ್ ಜೋನ್ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಗೆ ಆರ್ಥಿಕ ಶಕ್ತಿಯನ್ನು ರಾಜ್ಯಕ್ಕೆ ಆರ್ಥಿಕ ಶಕ್ತಿಯನ್ನು ಕೊಡುವಂತಹ ತಾಕತ್ತು ಇರುವಂತಹ ಈ ಸ್ಪೆಷಲ್ ಎಕಾನಾಮಿಕ್ ಜೋನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಒತ್ತನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ ಪದೇ ಪದೇ ವಿನಂತಿ ಮಾಡುವುದೇನೆಂದರೆ ಯುಎಎಸ್ ಟ್ರಾನ್ಸ್ ಅಂಟ್ವಾಂಟ್‌ನಿಂದ 96 ದೇಶಗಳನ್ನು ಆಳಸಮುದ್ರದ ಹಾಗೂ ಪ್ರಾಜೆಕ್ಟ್ ಆಫೀಸ್ ನಾಮಾಂಕಿತ 250 ಮಿಲಿಯನ್ ಮೆಗಾಬೈಟ್ ಬಹು ಒಂದು ಕೇಬಲ್ ಮಂಗಳೂರಿನಿಂದ ಕೇವಲ 6 ಕಿ.ಮೀ. ದೂರದಲ್ಲಿ ಹೋಗುತ್ತಿದೆ. ಅದನ್ನು ಎಲ್ಲಿಯಾದರೂ ಲಿಂಕ್ ಮಾಡುವುದಕ್ಕೆ ಸಾಧ್ಯವಾದಲ್ಲಿ ಇಂಟರ್‌ನ್ಯಾಷನಲ್ ಸ್ವಿಚ್‌ಗೇರ್ ಸಿಸ್ಟಮ್‌ನ್ನು ಮಂಗಳೂರಿನಲ್ಲಿ ಅಳವಡಿಸಿ ಇದರಿಂದಾಗಿ ಕರ್ನಾಟಕ ರಾಜ್ಯಕ್ಕೂ ಕೂಡ ಲಾಭವಾಗುತ್ತದೆ. ಜಿಲ್ಲೆಗೂ ಕೂಡ ಲಾಭವಾಗುತ್ತಿದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದ ಒಂದು ಒತ್ತನ್ನು ಕೊಡಬೇಕೆಂಬ ಒಂದು ವಿನಂತಿಯನ್ನು ಮಾಡುತ್ತಿದ್ದೇನೆ. ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ. ಈ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದೆ ಮ್ಯಾಥಮೆಟಿಕ್ಸ್ ಪೇಪರ್‌ನಲ್ಲಿ ಆಗಿರುವಂತಹ ಲೋಪದೋಷಗಳನ್ನು ನಾನು ತಮ್ಮ ಗಮನಕ್ಕೆ ನೀಡಲಿಕ್ಕೆ ಇಚ್ಛಿಸುತ್ತಿದ್ದೇನೆ.

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ ಹಾಗೂ ಬಂದರು ಸಚಿವರು):- ಈ ಐಸ್‌ಗೆ 12 ಪರ್ಸೆಂಟ್ ಆಗಿದ್ದನ್ನು ಕಳೆದಸಾರಿ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾವು ಮೀನುಗಾರರ ಜೊತೆಯಲ್ಲಿ ಚರ್ಚೆ ಮಾಡಿ 4 ಪರ್ಸೆಂಟ್ ಇಳಿಸಿದರು. ಮತ್ತೆ ಈ ಸಾರಿ 12 ಪರ್ಸೆಂಟ್ ಬಂದಿದೆ ಅದನ್ನು ಸರಿಪಡಿಸುತ್ತೇವೆಂದು ಈಗಾಗಲೇ ಹಣಕಾಸಿನ ಕಾರ್ಯದರ್ಶಿಯವರು ಒಪ್ಪಿಕೊಂಡಿದ್ದಾರೆ. ಅದು ಓವರ್‌ಸೈಟಿನಲ್ಲಿ ಬಿದ್ದಿದೆ ಎಂದು ಹೇಳಿದ್ದಾರೆ.

ಶ್ರೀ ಎನ್. ಯೋಗೀಶ್‌ಭಟ್:- ಅದಕ್ಕಾಗಿ ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮ ಮೂಲಕ ಕ್ಲಾರಿಫಿಕೇಷನ್ ಬಂದಿದಕ್ಕಾಗಿ ವಂದನೆಗಳು. ಧಾರ್ಮಿಕ ದತ್ತಿಯ

ಇಲಾಖೆಗೆ ಸಂಬಂಧಪಟ್ಟ ಹಾಗೆ ನಮ್ಮ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಗಲ್ಲಿಗಲ್ಲಿಗಳಲ್ಲಿಯೂ ಒಂದೊಂದು ಮಂದಿರಗಳಿವೆ ಇದರ ಬಗ್ಗೆ ತಮ್ಮ ಮೂಲಕ ವಿನಂತಿಯನ್ನು ಮಾಡುವುದೆಂದರೆ, ಧಾರ್ಮಿಕ ದತ್ತಿ ಇಲಾಖೆಗೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂಬ ವಿನಂತಿಯನ್ನು ಕೂಡ ನಾನು ಮಾಡುತ್ತಿದ್ದೇನೆ. ಕೊಟ್ಟಿರುವಂತಹ ಅನುದಾನವು ಏನೇನೂ ಸಾಲದಾಗಿದೆ. ಅದೇ ರೀತಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸ್ವಲ್ಪ ಹೆಚ್ಚಳ ಅನುದಾನದಲ್ಲಾದರೂ ಕೂಡ ಯಕ್ಷಗಾನಕ್ಕಾಗಿ ವಿಶೇಷವಾದ ಅಕಾಡೆಮಿಯನ್ನು ಮಾಡಬೇಕು. ಹಾಗೂ ಬ್ಯಾರಿ ಭಾಷೆಗೆ ಸಂಬಂಧಪಟ್ಟ ಹಾಗೆ ಅಕಾಡೆಮಿಯನ್ನು ಮಾಡಬೇಕೆಂಬ ವಿನಂತಿಯನ್ನು ಕೂಡ ಮಾಡುತ್ತಿದ್ದೇನೆ. ವಿಶೇಷವಾಗಿ ಗೃಹಸಚಿವರು ಇದ್ದಾರೆ. ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಸಿಬ್ಬಂದಿಗಳ ಕೊರತೆ ಬಹಳ ತೀವ್ರವಾಗಿದೆ. 70ರ ದಶಕದಲ್ಲಿರುವಂತಹ ಪೋಲೀಸ್ ಪಡೆ ನಮ್ಮ ಕ್ಷೇತ್ರದಲ್ಲಿದೆ. ಇವತ್ತು ಟ್ರಾಫಿಕ್ ಕಂಡಿಷನ್ ಮತ್ತು ಸಾಕಷ್ಟು ಉಲ್ಬಣಗೊಳ್ಳುವಂತಹ ಸಂದರ್ಭದಲ್ಲಿ ಪೋಲೀಸ್ ಸಿಬ್ಬಂದಿಗಳ ನೇಮಕಾತಿಯನ್ನು ನಮ್ಮ ಜಿಲ್ಲೆಗೆ ವಿಶೇಷವಾಗಿ ಮಂಗಳೂರಿಗೆ ಹೆಚ್ಚು ಬೇಕೆಂದು ಹೇಳುತ್ತಿದ್ದೇನೆ. 15 ವರ್ಷಗಳು ದಾಟಿರುವಂತಹ ವಾಹನಗಳನ್ನು ಅದರ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟಿದ್ದೀರಿ. ಆದರೆ ನಮ್ಮಲ್ಲಿರುವಂತಹ ಸರ್ಕಾರಿ ವಾಹನಗಳಿಗೆ 20 ವರ್ಷಗಳಾಗಿದೆ. ಅದು ಯಾವುದೇ ರೀತಿಯಲ್ಲಿಯೂ ಉಪಯೋಗವಾಗದಂತಹ ಸ್ಥಿತಿಯಲ್ಲಿದೆ. ಕೊನೆಯದಾಗಿ ಒಂದೆರಡು ಪಾಯಿಂಟ್‌ಗಳಲ್ಲಿ ಮುಗಿಸುತ್ತಿದ್ದೇನೆ. ವಿಶೇಷವಾಗಿ ಇಎಸ್‌ಐ ಆಸ್ಪತ್ರೆಗಳ ಸುಧಾರಣೆಯ ಬಗ್ಗೆ ಹೇಳುವುದಾದರೆ ಫುಲ್‌ಟೈಮ್ ಡಾಕ್ಟರ್‌ಗಳನ್ನು ನೇಮಕ ಮಾಡಬೇಕು. ವಿಶೇಷವಾಗಿ ಲಕ್ಷಾಂತರ ಬೀಡಿ ಕಾರ್ಮಿಕರ ಸಂಘಟಿತ ಕಾರ್ಮಿಕ:ಬಗ್ಗೆ ಕಲ್ಯಾಣದ ವಿಶೇಷವಾದ ಒತ್ತನ್ನು ನಾವು ಕೊಡಬೇಕಾಗಿದೆ. ಮತ್ತು ಚಿನ್ನದ ಕೆಲಗಾರರು, ಟೈಲರ್ಸ್ ಅಸೋಸಿಯೇಷನ್‌ನಿಂದ ಬಂದವರು ರೆಪ್ರೆಸೆಂಟೇಷನ್‌ನ ಆಧಾರದಲ್ಲಿ ಸಾಕಷ್ಟು ಆತ್ಮಹತ್ಯೆಯ ಹಗರಣಗಳು ವರದಿಯಾಗಿರುವಂತಹ ಹಿನ್ನೆಲೆಯಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೋಸ್ಕರ ವಿಶೇಷವಾದ ಕಾರ್ಯಕ್ರಮವನ್ನು ನಡೆಸಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ಕೇರಳ ರಾಜ್ಯದಲ್ಲಿ ಅಳವಡಿಸಿದಂಥ ಕ್ಷೇಮ ನಿಧಿಗೆ ಸಂಬಂಧಪಟ್ಟ ವಿಶೇಷ ಸ್ಕೀಂ ಏನಿದೆ ಅದನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಡ ಟೈಲರ್ಸ್ ಆಸೋಸಿಯೇಷನ್ ಹಾಗೂ ಇನ್ನಿತರ ಅಸಂಘಟಿತ ಕಾರ್ಮಿಕರಿಗೆ ಅದನ್ನು ಒದಗಿಸಬೇಕೆನ್ನುವಂಥ ವಿನಂತಿಯನ್ನು ಮಾಡುತ್ತಾ, ವಿಶೇಷವಾಗಿ ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ವಿಶೇಷ ಪ್ರಾಧಾನ್ಯತೆ ಕೊಟ್ಟು ಸಿಬ್ಬಂದಿಗಳ ಕೊರತೆಯಿದ್ದು, ಅದನ್ನು ಸರಿಪಡಿಸುವ ಕೆಲಸವನ್ನು ಮಾಡಬೇಕು. ದಕ್ಷಿಣ ಕನ್ನಡದಲ್ಲಿ ಇರುವಂಥ ಪ್ರೆಸ್ಟೀಜಿಯನ್ ಆಗಿರುವಂಥ ವೆನ್‌ಲಾಕ್ ಮತ್ತು ಲೇಡಿ ಘೋಷನ್ ಆಸತ್ರೆಯಲ್ಲಿ ಇವತ್ತು ಒಬ್ಬನೇ ಒಬ್ಬ ಎಕ್ಸ್‌ರೇ ಟೆಕ್ನಿಷಿಯನ್ ಇಲ್ಲ, ಒಬ್ಬನೇ ಒಬ್ಬ ಫಾರ್ಮಸಿಸ್ಟ್ ಇಲ್ಲ. ಮಾನ್ಯ ಆರೋಗ್ಯ ಸಚಿವರು ಇಲ್ಲಿ ಇದ್ದಾರೆ. ಆಸ್ಪತ್ರೆ ಹೇಗೆ ನಡೆಸುವುದೆಂಬುದು ಗೊತ್ತಾಗುತ್ತಿಲ್ಲ. ಇಂಥ ದುಸ್ಥಿತಿಯಲ್ಲಿರುವಂಥ ಆಸ್ಪತ್ರೆ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕನಿಷ್ಠ ಜಿಲ್ಲಾಧಿಕಾರಿಗಳಿಗೆ ಅದನ್ನು ಎಂಟ್ರಸ್ಟ್ ಮಾಡಿ ಆ ಆಸ್ಪತ್ರೆಯಲ್ಲಿ ಎರಡು ಲಕ್ಷ ಪೇಷಂಟ್‌ಗಳಿಗೆ ಕೊಡುವಂಥ ಸೇವೆಯನ್ನು ಚೆನ್ನಾಗಿ ಕೊಡುವ ನಿಟ್ಟಿನಲ್ಲಿ ತಾವು ವಿಶೇಷವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವಂಥ ವಿನಂತಿಯನ್ನು ಮಾಡುತ್ತಾ, ಕೆ.ಎಂ.ಸಿ. ಯಂಥ ಸಂಸ್ಥೆಯೊಂದಿಗೆ ಸಹಭಾಗಿತ್ವದಲ್ಲಾದರೂ ನಡೆಸಲಿಕ್ಕೆ ಮಾತುಕತೆ ನಡೆಸಿ ಮಾಡಿದರೆ

ಒಳ್ಳೆಯದಾಗಬಹುದೆನ್ನುವ ವಿನಂತಿಯನ್ನು ಮಾಡಿ, ನಂತರ ತೆರಿಗೆ ಸುಧಾರಣೆ ಬಗ್ಗೆ, ಟರ್ನ್‌ಓವರ್ ಟ್ಯಾಕ್ಸ್ ಬಗ್ಗೆ ಅದರ ರದ್ಧತಿ ಬಗ್ಗೆ ಸಾಕಷ್ಟು ಶ್ಲಾಘನೆ ಇದೆ. ಆದರೆ ಇದರ ಜೊತೆಯಲ್ಲಿರುವ ಸೇಲ್ಸ್ ಟ್ಯಾಕ್ಸ್‌ನಲ್ಲಿ ಸೆಕೆಂಡ್ ಸೇಲ್ಸ್. ಥರ್ಡ್ ಸೇಲ್ಸ್ ಹೀಗೆ ಎಲ್ಲದರಲ್ಲಿಯೂ 1.5, 1.5 ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದರಿಂದ, ಮಲ್ಟಿ ಟ್ಯಾಕ್ಸೇಷನ್ ಬರುವುರಿಂದ ಈಗ ಇದಕ್ಕಿಂತ ಅದು ಆಗಬಹುದೆಂದು ಹೇಳುವಂಥ ಭಾವನೆ ಟ್ರೇಡರ್ಸ್‌ನಲ್ಲಿ ಬರುತ್ತಿದೆ. ಹಾಗೆಯೇ ಅಡಿಕೆ ಬೆಂಬಲ ಬೆಲೆಯನ್ನು ಶೀಘ್ರದಲ್ಲಿಯೇ ಘೋಷಣೆ ಮಾಡಬೇಕು. ಮತ್ತು ಅಡಿಕೆ ಮೇಲಿನ ಮಾರಾಟ ತೆರಿಗೆ 4 ಪರ್ಸೆಂಟ್‌ನ್ನು ದಯವಿಟ್ಟು ರದ್ದುಪಡಿಸಬೇಕೆಂದು ವಿನಂತಿಯನ್ನು ಮಾಡಿ, ಲೈಫ್ ಟ್ಯಾಕ್ಸ್ ಕಟ್ಟಿದ ವಾಹನಗಳ ಮೇಲೂ ಕೂಡ ತೆರಿಗೆಯನ್ನು ಹೊರಿಸುವಂಥ ವ್ಯವಸ್ಥೆ ಸರಿಯಲ್ಲ. ಲೇಖನ ಸಾಮಾಗ್ರಿಗಳ ಮೇಲೆ 12 ಪರ್ಸೆಂಟ್ ಟ್ಯಾಕ್ಸ್ ಹಾಕಿರುವಂಥದ್ದನ್ನು ತಾವು ಪುನರ್ ಪರಿಶೀಲಿಸಬೇಕು. ಪೆಟ್ರೋಲ್, ಡೀಸಲ್‌ನ ಯೂನಿಟ್ ಮೇಲೆ ಹಾಕಿರುವಂಥ ತೆರಿಗೆಯ ಬಗ್ಗೆ ಕೂಡ ಪುನರ್‌ವಿಮರ್ಶೆ ಮಾಡಬೇಕೆಂದು ಹೇಳುತ್ತಾ, ಕೊನೆಯದಾಗಿ, ಕರಾವಳಿ ಅಭಿವೃದ್ಧಿ ಮಂಡಳಿ ಪ್ರವಾಸೋದ್ಯಮಕ್ಕೆ ವಿಶೇಷ ಪ್ರಾಮುಖ್ಯತೆ ಕೊಡಬೇಕೆನ್ನುವಂಥ ವಿನಂತಿಯನ್ನು ಮಾಡಿ, ಕೊಟ್ಟಿರುವಂಥ ಅವಕಾಶಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇವೆ.

ಶ್ರೀ ಸುಭಾಷ್ ಆಲ್ಲೂರ್ (ಹುಮ್ನಾಬಾದ್):- ಮಾನ್ಯ ಉಪಾಧ್ಯಕ್ಷರೆ, 2002-2003ನೇ ಸಾಲಿನ ಬಜೆಟ್ ಮೇಲೆ ಈಗಾಗಲೇ ಬಹಳಷ್ಟು ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ವಿಶೇಷವಾಗಿ ಬೀದರ್ ಜಿಲ್ಲೆಗೆ ಯಾವ ರೀತಿ ಅನಾನುಕೂಲವಾಗಿದೆ ಎನ್ನುವುದರ ಬಗ್ಗೆ ನಾನು ಈ ಸದನದ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ಆಲಮಟ್ಟಿ ಅಣೆಕಟ್ಟು , ಬೆಣ್ಣೆತೊರಾ, ಮಲ್ಲಾಮರಿ, ಚುಲ್ಕಿನಾಲಾ, ಮಸ್ಕಿನಾಲ, ನಾರಾಯಣಪುರ ಬಲದಂಡೆ ಕಾಲುವೆ, ಇವೆಲ್ಲಾ ಯೋಜನೆಗಳನ್ನು 2002-2003ನೇ ಸಾಲಿನಲ್ಲಿ ಈ ರಾಷ್ಟ್ರಕ್ಕೆ ಸಮರ್ಪಿಸಲಾಗುವುದೆಂದು ತಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ. ಇದು ಸ್ವಾಗತ ಮಾಡತಕ್ಕಂಥ ವಿಚಾರವಾಗಿದೆ. ತಮ್ಮ ಗಮನಕ್ಕೆ ತರುವುದು ಇಷ್ಟೆ ಅದೇನೆಂದರೆ, ಈ ಬಜೆಟ್ ಕಾಪಿಯಲ್ಲಿ ಮಿಸ್‌ಪ್ರಿಂಟ್ ಆಗಿದೆಯೋ ಏನೋ ಗೊತ್ತಿಲ್ಲ. ಕಾರಂಜಾ ಯೋಜನೆಯನ್ನು ತಾವು ಮರೆತುಬಿಟ್ಟಿದ್ದೀರೇನೋ ಎಂದೆನಿಸುತ್ತಿದೆ. ಇದು ಬೀದರ್ ಜಿಲ್ಲೆಯಲ್ಲಿರತಕ್ಕಂಥ ಏಕೈಕ ನೀರಾವರಿ ಯೋಜನೆಯಾಗಿದ್ದು, ಸುಮಾರು 30 ವರ್ಷಗಳಿಂದ ಈ ಕಾರ್ಯ ನಡೆಯುತ್ತಿದೆ. ಸುಮಾರು 10 ಕೋಟಿ ರೂಪಾಯಿಗಳ ಎಸ್ಟಿಮೇಟ್‌ನಿಂದ ಪ್ರಾರಂಭವಾಗಿ ಇವತ್ತು 350 ಕೋಟಿ ರೂಪಾಯಿಗಳಷ್ಟು ಖರ್ಚಾದರೂ ಸಹ ಇನ್ನೂ ಆ ಕಾರ್ಯ ಮುಗಿದಿಲ್ಲ. ಆದರೂ ಕೂಡ ಬೆಣ್ಣೆತೊರಾ, ಆಲಮಟ್ಟಿ, ಮಸ್ಕಿನಾಲಾ ಚುಲ್ಕಿನಾಲಾ ನೋಡಿದರೆ ಇದರ ಒಂದು ಸರಿಸಮಾನಾಗಿ ಕಾರಂಜಾ ಯೋಜನೆಯ ಕೆಲಸ ಆಗಬೇಕಾಗಿತ್ತು. ಆದ್ದರಿಂದ ತಮ್ಮ ಉತ್ತರದಲ್ಲಿ ಈ ಕಾರಂಜಾ ಯೋಜನೆಯನ್ನು ಸಹ 2002-2003ನೇ ಸಾಲಿನ ಬಜೆಟ್‌ನಲ್ಲಿ ಸೇರಿಸಬೇಕೆಂದು ಒತ್ತಾಯದ ಮೂಲಕ ತಮ್ಮ ಗಮನವನ್ನು ಸೆಳೆಯುತ್ತೇನೆ. ನಮ್ಮ ಮಾನ್ಯ ಭಾರೀ ನೀರಾವರಿ ಸಚಿವರು ಎರಡು ಸಲ ಕಾರಂಜಾ ಯೋಜನೆಗೆ ಬಂದಿದ್ದಾಗ, ಇದನ್ನು ಎರಡು ಅಥವಾ ಮೂರು ಸಲ ಪ್ಯಾಕೇಜ್ ಮಾಡಿ ಕೆಲಸವನ್ನು ಮಾಡಿಸುತ್ತೇನೆ ಎನ್ನುವಂಥ ಆಶ್ವಾಸನೆಯನ್ನು ಸಹ ಕೊಟ್ಟಿದ್ದರು. ಈ ಯೋಜನೆಯ ಕೆಲಸ ಸುಮಾರು 30 ವರ್ಷದಿಂದ ನಡೆಯುತ್ತಿದೆ. ಈ ಕೆಲಸವನ್ನು ಎಷ್ಟು ಬೇಗ ಮುಗಿಸುತ್ತೀರೋ ಅಷ್ಟು ಒಳ್ಳೆಯದು

ನಮ್ಮ ರಾಜ್ಯಕ್ಕೆ, ನಮ್ಮ ಜನಗಳಿಗೆ ಆಗುತ್ತದೆ. ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಬೀದರ್-ಗುಲ್ಬರ್ಗಾ ರೈಲ್ವೆ ಲೈನ್ ಬಗ್ಗೆ ಹೇಳುವುದಾದರೆ, ಕಳೆದ ರೈಲ್ವೆ ಮಂತ್ರಿಯವರು ಬೀದರ್‌ನಲ್ಲಿ ಶಂಕುಸ್ಥಾಪನೆ ಮಾಡಿ ಅದಕ್ಕೆ ಈ ವರ್ಷದಲ್ಲಿ ಬಜೆಟ್‌ನಲ್ಲಿ ಅವರು 15 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಇದರ ಬಗ್ಗೆ ಏನೂ ಪ್ರಸ್ತಾವನೆ ಮಾಡಿಲ್ಲ. ಈ ಬೀದರ್-ಗುಲ್ಬರ್ಗಾ ರೈಲ್ವೆ ಲೈನ್ ಮಾಡುವುದರಿಂದ ಸುಮಾರು 8 ಲೋಕಸಭಾ ಕ್ಷೇತ್ರಗಳಿಗೆ ಲಾಭ ಆಗುತ್ತದೆ. ಮಹಾರಾಷ್ಟ್ರದ ಕೆಲವು ಸ್ಥಳಗಳಿಗೆ ಮತ್ತು ಬೀದರ್-ಗುಲ್ಬರ್ಗಾ ಈ ಭಾಗದ ಜನಗಳಿಗೆ ಲಾಭ ಆಗತಕ್ಕಂಥ ಯೋಜನೆ ಇದು. ಅದರ ಜೊತೆಗೆ ನಾಲ್ಕು ತಾಸು ಮೊದಲು ನಾವು ದಿಲ್ಲಿಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅಂದರೆ ಸಮಯದ ಉಳಿತಾಯ ಕೂಡ ಆಗುತ್ತದೆ. ಈ ರೀತಿಯಾಗಿ ನಮ್ಮ ರಾಜ್ಯಕ್ಕೆ ಜನಗಳಿಗೆ ಲಾಭ ಆಗುವಂಥದ್ದಕ್ಕೆ ಪ್ರತ್ಯೇಕವಾಗಿ ಈ ಸಲ 15 ಕೋಟಿ ರೂಪಾಯಿಗಳನ್ನು ಕೊಟ್ಟರೆ ಇದರಿಂದ ಲ್ಯಾಂಡ್ ಅಕ್ವಿಜಿಷನ್ ಅಥವಾ ಬೇರೆ ಕಲಸವನ್ನು ಈ ವರ್ಷದಲ್ಲಿ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಮಾಡಬೇಕೆಂದು ತಮ್ಮ ಗಮನವನ್ನು ಸೆಳೆಯುತ್ತೇನೆ. ಇನ್ನು ಬೀದರ್ ಶ್ರೀರಂಗಪಟ್ಟಣ ರಸ್ತೆಯನ್ನ ಮಾಡಿ ಅದನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೀರಿ. ಅದನ್ನು ಎರಡು ಮೂರು ಫೇಸ್‌ನಲ್ಲಿ ಮಾಡಿದರೆ ವಿಳಂಬವಾಗಬಹುದು. ಈ ರಸ್ತೆಯನ್ನು ಮಾಡುವುದಾದರೆ ಬೀದರ್‌ನಿಂದ ಪ್ರಾರಂಭ ಮಾಡಬೇಕೆಂದು ನಮ್ಮ ವಿನಂತಿಯಾಗಿದೆ. ಬೆಂಗಳೂರಿನಿಂದ ನಮ್ಮ ಜಿಲ್ಲೆಗೆ 750 ಕಿ.ಮೀ. ಇದ್ದು ನಾವು ರಾಜ್ಯದ ಕೊನೆಯಿಂದ ಬೆಂಗಳೂರಿಗೆ ಬರತಕ್ಕಂಥವರು. ನಾನು ಮಾನ್ಯ ಲೋಕೋಪಯೋಗಿ ಸಚಿವರನ್ನು ಭೇಟಿ ಮಾಡಿ ಕೇಳಿದಾಗ ಅದು ಆ ಕಡೆಯಿಂದ ಪ್ರಾರಭವಾಗುತ್ತದೆ. ಅದು ಮುಂದಿನ ವರ್ಷದಿಂದ ಬರುತ್ತದೆ. ಎನ್ನತಕ್ಕಂಥ ಮಾತನ್ನು ಹೇಳಿದರು. ಅದಕ್ಕಾಗಿ ತಾವೂ ಕೂಡ ನಮ್ಮ ಜಿಲ್ಲೆಗೆ ಪ್ರಾಶಸ್ತ್ಯ ಕೊಡಬೇಕು. ಈ ರಸ್ತೆ ಬೀದರ್‌ನಿಂದ ಪ್ರಾರಂಭವಾಗಬೇಕೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ವಿದ್ಯುತ್ ಬಗ್ಗೆ ಹೇಳುವುದಾದರೆ, ವಿದ್ಯುತ್ ಕೊರತೆ ಎಲ್ಲಾ ಕಡೆ ಇರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಇಂಥ ಒಂದು ಫೀಸಿಬಿಲಿಟಿ ಇದೆ. ಒಂದು ಥರ್ಮಲ್ ಪ್ಲಾಂಟ್ ಮಾಡತಕ್ಕಂಥದ್ದಕ್ಕೆ ಕೂಡ ಒಂದು ಒಳ್ಳೆಯ ಜಿಯೊಗ್ರಫಿಕಲ್ ವಾತಾವರಣ ಇದೆ. ಈ ಜಿಲ್ಲೆಯಲ್ಲಿ ನಮ್ಮ ಹತ್ತಿರ ನೀರು ಇದೆ. ಮತ್ತು ನಮಗೆ ಬೇಕಾದಂಥ ಕೋಲ್ ಅಲ್ಲಿಯೇ ಸಿಗುವುದರಿಂದ, ನೀರನ್ನು ಅಳವಡಿಸಿಕೊಂಡು ಮಾಡುವುದರಿಂದ ಅಲ್ಲಿ ಒಂದು ಒಳ್ಳೆಯ ಪ್ರಾಜೆಕ್ಟ್ ಆಗುತ್ತದೆ. ಮತ್ತು ಆದರಿಂದ ನಮ್ಮ ಜಿಲ್ಲೆಗೆ ವಿದ್ಯುತ್ ಬರ ನೀಗಿಸತಕ್ಕಂಥ ಕಾರ್ಯಕ್ರಮ ಇದೆ. ಇದನ್ನು ತಾವು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದರೆ, ಇದು ಮುಂದೆ ನಮಗೆ ಲಾಭದಾಯಕ ಆಗಬಹುದು. ನಮ್ಮ ಜಿಲ್ಲೆ ವಿದ್ಯುತ್ ಬರದಿಂದ ಮುಕ್ತ ಆಗಬಹುದಾಗಿದ್ದು ಇದನ್ನು ತಾವು ಗಮನಿಸಬೇಕು ಎನ್ನುತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ಭಾರತ ಸರ್ಕಾರ ಹಂಪಿ ಕ್ಷೇತ್ರವನ್ನು ಅಂತರಾಷ್ಟ್ರೀಯ ತಾಣವನ್ನಾಗಿ ಮಾಡುತ್ತಿದೆ. ತಾವೂ ಕೂಡ ಈ ಬಜೆಟ್‌ನಲ್ಲಿ ಹಂಪಿಯ ಸಮಗ್ರ ಅಭಿವೃದ್ಧಿಗೆ ಒಂದು ಪ್ರಾಧಿಕಾರವನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈ ರೀತಿ ಮಾಡುವುದಕ್ಕೆ ಸ್ವಾಗತವನ್ನು ಮಾಡುತ್ತೇವೆ. ಈ ಒಂದು ಸಮಯದಲ್ಲಿ ತಮ್ಮ ಗಮನಕ್ಕೆ ತರಬಯಸುವ ವಿಷಯವೇನೆಂದರೆ, ಬೀದರ್ ಜಿಲ್ಲೆಯಲ್ಲಿರುವಂಥ ಬಸವಕಲ್ಯಾಣದ ಬಗ್ಗೆ

ಹೇಳುವುದಾದರೆ. ಇಡೀ ಜಗತ್ತಿಗೆ ಶಾಂತಿಸಂದೇಶವನ್ನು ಕೊಟ್ಟಂಥ, ಇಡೀ ಮಾನವ ಕುಲಕೋಟಿಗೆ ಸಂದೇಶ ಕೊಟ್ಟಂಥ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸತಕ್ಕಂಥ ಬಸವಣ್ಣನವರ ಕರ್ಮಭೂಮಿಯಾದಂಥ ಬಸವಕಲ್ಯಾಣದಲ್ಲಿ ಒಂದು ಪ್ರಾಧಿಕಾರವನ್ನು ಸ್ಥಾಪನೆ ಮಾಡಬೇಕೆಂಬುದು ಆ ಭಾಗದ ಜನರ ವಿನಂತಿಯಾಗಿದೆ. ಮಾನ್ಯ ಸಭಾನಾಯಕರಲ್ಲಿ ವಿನಂತಿಸುವುದೇನೆಂದರೆ, ಬರತಕ್ಕಂಥ ಬಸವ ಜಯಂತಿಯನ್ನು ನಾಡಹಬ್ಬವನ್ನಾಗಿ ಮಾಡಬೇಕೆಂದು ಈಗಾಗಲೇ ತಾವು ಘೋಷಣೆ ಮಾಡಿರುವುದನ್ನು ನಾನು ಪೇಪರ್‌ನಲ್ಲಿ ಓದಿದ್ದೇನೆ. ಬಸವ ಜಯಂತಿಯನ್ನು ಮಹಾರಾಷ್ಟ್ರದಲ್ಲಿ ಕೂಡ ಮಾಡುತ್ತಿದ್ದಾರೆ. ಅಲ್ಲಿ ಮಾಡಬೇಕಾದರೆ ನಮ್ಮಲ್ಲಿ ಮಾಡತಕ್ಕಂಥದ್ದು ದೊಡ್ಡ ಮಾತೇನಲ್ಲ. ನಾವು ಮಾಡಲೇ ಬೇಕು. ಪಟ್ಟದಕಲ್ಲು ಉತ್ಸವ, ದಸರಾ ಉತ್ಸವ ಹೀಗೆ ಬೇರೆ ಬೇರೆ ಉತ್ಸವಗಳನ್ನು ನಾವು ರಾಜ್ಯದಲ್ಲಿ ಯಾವ ರೀತಿ ಮಾಡುತ್ತೇವೆಯೋ ಅದೇ ರೀತಿ ಬಸವ ಉತ್ಸವವನ್ನು ಕೂಡ ಪ್ರಾರಂಭ ಮಾಡಬೇಕು. ನಾಡಿಗೆ, ರಾಜ್ಯಕ್ಕೆ ಶ್ರೀಮಂತಿಕೆಯನ್ನು ಕೊಟ್ಟಂಥ, ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕದಲ್ಲಿ ಜಗತ್ತಿಗೆ ಸಂದೇಶವನ್ನು ಕೊಟ್ಟಂಥ ಬಸವೇಶ್ವರರ ಉತ್ಸವವನ್ನು ಮಾಡತಕ್ಕಂಥದ್ದಕ್ಕೆ ಈ ಬಜೆಟ್‌ನಲ್ಲಿ ಪ್ರಸ್ತಾಪ ಮಾಡುತ್ತೀರಿ ಎನ್ನುವಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಹಾಗೆಯೇ, ವಿಶೇಷವಾಗಿ ನಮ್ಮ ಕರ್ನಾಟಕ ರಾಜ್ಯಕ್ಕೆ ವಚನ ಸಾಹಿತ್ಯ ಕೊಡುಗೆಯನ್ನು ಕೊಟ್ಟಂಥ, ನಮ್ಮ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದಂಥ ವಚನ ಸಾಹಿತ್ಯವನ್ನು ಮಾಡಿರುವಂಥದ್ದು ಕಲ್ಯಾಣದ ಕರ್ಮಭೂಮಿಯಲ್ಲಿ ಅನೇಕ ಶರಣರ ಪರಿಚಯವನ್ನು, ಅನೇಕ ವಚನ ಸಾಹಿತಿಗಳ ಪರಿಚಯವನ್ನು ಈ ನಾಡಿಗೆ, ಜಗತ್ತಿಗೆ ನಾವು ಮಾಡಬೇಕಾಗಿದೆ. ಇದನ್ನು ವಚನ ಉತ್ಸವದ ಮೂಲಕ ಮಾಡುವುದಕ್ಕೆ ಸಾಧ್ಯವಿದೆ ವಿನಃ ಬರೀ ಬಸವ ಜಯಂತಿ ಮಾಡುವುದರಿಂದ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನು ವಿದ್ಯುತ್ ವಿಭಾಗದಲ್ಲಿ ನಮಗೆ ಈಗಾಗಲೇ ಬಹಳ ಕೊರತೆ ಇದೆ. ಬಹಳಷ್ಟು ಕಳ್ಳತನ ಆಗುತ್ತಿದೆ. ಸರಬರಾಜಿನಲ್ಲಿ ಸೋರಿಕೆ ಆಗುತ್ತಿದೆ ಎನ್ನುವರು ಎಲ್ಲರಿಗೂ ಗೊತ್ತಿರುವ ವಿಚಾರ. ಈಗ ಕಾನೂನಿನಲ್ಲಿ ತಿದ್ದುಪಡಿ ತಂದು ವಿದ್ಯುತ್ ಸಂಪರ್ಕಗಳನ್ನು ಅಕ್ರಮ ಸಕ್ರಮ ಮಾಡಬೇಕೆಂದು ಎಲ್ಲಾ ಹಳ್ಳಿಗಳಿಗೂ ಹೇಳಿದ್ದಾರೆ. ವಿದ್ಯುತ್ ಅಕ್ರಮ ಸಕ್ರಮ ಮಾಡುವುದರಲ್ಲಿ ನಮ್ಮ ಬೀದರ್ ಜಿಲ್ಲೆ ಮೊದಲನೇ ಸಾಲಿನಲ್ಲಿ ಇರುತ್ತದೆಂದು ನಾನು ಮೊನ್ನೆಯ ದಿವಸ ಕೇಳಿದಾಗ ಚೇರ್‌ಮನ್‌ರವರು ಹೇಳಿದರು. ಆದರೆ ಇದು ಗೃಹಬಳಕೆಯಲ್ಲಿ ಮಾತ್ರ. ಆದರೆ ಐ.ಪಿ. ಸೆಟ್ ಮಾತ್ರ ಇನ್ನೂ ಸರಿ ಆಗುತ್ತಿಲ್ಲ. ಐ.ಪಿ. ಸೆಟ್‌ನಲ್ಲಿ ಪರ್ ಹೆಚ್.ಪಿ.ಗೆ 900 ರೂಪಾಯಿಗಳನ್ನು ಮಾಡಿದ್ದೀರಿ. ಈಗ ಒಂದು ಹೆಚ್.ಪಿ.ಗೆ ಹೊಸ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ 900 ರೂಪಾಯಿ ಪರ್ ಹೆಚ್.ಪಿ.ಆದರೆ 1200 ರೂಪಾಯಿಗಳನ್ನು ಮೀಟರ್ ಚಾರ್ಜ್‌ಗೆಂದು ತೆಗೆದುಕೊಳ್ಳುತ್ತಿದ್ದಾರೆ. ಸರ್ವೀಸ್ ಚಾರ್ಜ್ 5000 ರೂಪಾಯಿಗಳೆಂದು ಮಾಡಿದ್ದಾರೆ. ಹೀಗೆ ಒಟ್ಟು ಸುಮಾರು 11, 12 ಸಾವಿರ ರೂಪಾಯಿಗಳು ಆಗುವುದರಿಂದ ಯಾರೂ ಹೊಸದಾಗಿ ಕನೆಕ್ಷನ್ ತೆಗೆದುಕೊಳ್ಳುವುದಕ್ಕೆ ಮುಂದೆ ಬರುತ್ತಿಲ್ಲ. ಸದನದಲ್ಲಿ ಮಾನ್ಯ ವಿದ್ಯುತ್ ಮಂತ್ರಿಯವರು ಮತ್ತು ಮಾನ್ಯಸಭಾನಾಯಕರು ಇರುವುದರಿಂದ ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಸರ್ವೀಸ್ ಚಾರ್ಜ್ ಎಂದು 5000 ರೂಪಾಯಿ ಏನಿದೆ. ಇದನ್ನು ಕಡಿಮೆ ಮಾಡಬೇಕು. ಹಾಗೆಯೇ ಅಕ್ರಮ ಸಕ್ರಮ ಮಾಡುವುದಕ್ಕೆ ಏಪ್ರಿಲ್ 6ನೇ ತಾರೀಖು ಕೊನೆಯ ದಿವಸ ಎಂದು ಏನು ಹೇಳಿದ್ದೀರಿ ಅದನ್ನು ಕೂಡ ಏಪ್ರಿಲ್

ಕೊನೆಯವರೆಗೆ ಮುಂದುವರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲಾ ಮಂತ್ರಿಯವರು ಇಲ್ಲಿ ಇದ್ದಾರೆ. ಸುಮಾರು 6-7 ತಿಂಗಳುಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ಬೀದರ್ ಜಿಲ್ಲೆಗೆ ಬಂದಿದ್ದಾಗ, ಬೀದರ್ ಜಿಲ್ಲೆಗಾಗಿ 12 ಕೋಟಿ ರೂಪಾಯಿಗಳ ಒಂದು ಪ್ಯಾಕೇಜ್‌ನ್ನು ಡಿಕ್ಲೇರ್ ಮಾಡಿದ್ದರು. ಅದು ಅವರಿಗೆ ನೆನಪು ಇದೆಯೋ ಇಲ್ಲವೋ ಗೊತ್ತಿಲ್ಲ. ಇದು ಸದರಿ ಬಜೆಟ್‌ನಲ್ಲಿ ಬಂದಿರಬಹುದೆಂದು ನಾನು ಗಮನಿಸಿ ನೋಡಿದೆ. ಆದರೆ ಇಲ್ಲಿ ಇಲ್ಲ. ನಾನು ವಿನಂತಿ ಮಾಡುವುದೇನೆಂದರೆ ಮಂಡ್ಯ ಜಿಲ್ಲೆಗ ಕೊಟ್ಟಿರುವಂಥ 300 ಕೋಟಿ ರೂಪಾಯಿಗಳಲ್ಲಿ 100 ಕೋಟಿ ರೂಪಾಯಿಗಳನ್ನು ಅಲ್ಲಿಂದ ಕಟ್ ಮಾಡಿ ಅದನ್ನು ತಾವು ಬೀದರ್ ಜಿಲ್ಲೆಗೆ ಕೂಡಲೇ ಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಬೀದರ್ ಜಿಲ್ಲೆಗೆ ಬಂದಾಗ ಘೋಷಣೆ ಮಾಡಿದಂಥ ರೀತಿಯಲ್ಲಿ 100 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಈ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಮೊದಲನೇ ಬಾರಿ ನಮ್ಮ ಜಿಲ್ಲೆಗ ಬಂದಾಗ ಕೊಟ್ಟಿರುವಂಥ ವಚನವನ್ನು ಉಳಿಸಿಕೊಳ್ಳುತ್ತೀರೆಂದು ನಮ್ಮ ಜಿಲ್ಲೆಯ ಪರವಾಗಿ ಭಾವಿಸಿದ್ದೇವೆ. ಇನ್ನು ಶಿಕ್ಷಣ ಕ್ಷೇತ್ರದಲ್ಲಿ ಮಾನ್ಯ ಮಂತ್ರಿಗಳು ಬಹಳಷ್ಟು ಕೆಲಸಗಳನ್ನು ಮಾಡುತ್ತಿದ್ದಾರೆ. ಅಷ್ಟೇ ಪ್ರಚಾರ ಆಗುತ್ತಿದೆ ಮತ್ತು ಅಷ್ಟೇ ಗೊಂದಲ ಕೂಡ ಆಗುತ್ತಿದೆ. ಕೇಂದ್ರ ಸರ್ಕಾರವಾಗಲೀ, ರಾಜ್ಯಸರ್ಕಾರವಾಗಲೀ ಇನ್ನು ಮೇಲೆ ಅಗ್ಗದ ಪ್ರಚಾರಗಳನ್ನು ಬಿಟ್ಟುಬಿಡಬೇಕೆಂದು ನನಗನ್ನಿಸುತ್ತದೆ. ಇದನ್ನು ಮಾಡದೇ ಹೋದರೆ ನಿಮಗೂ ಕೂಡ ಸರ್ಕಾರ ನಡೆಸುವುದಕ್ಕೆ ಕಷ್ಟವಾಗಬಹುದು ಮತ್ತು ಕೇಂದ್ರ ಸರ್ಕಾರಕ್ಕೆ ಕೂಡ ಕಷ್ಟವಾಗಬಹುದೇನೋ. ಈ ಮಾತನ್ನು ಏಕೆ ಹೇಳಬೇಕಾಯಿತು ಎಂದರೆ, ಬಿಸಿ ಊಟ ಕೊಡಬೇಕೆಂದು ನಿಮ್ಮನ್ನು ಯಾರು ಕೇಳಲಿಲ್ಲ. ಯಾರು ಸ್ಟ್ರೈಕ್ ಮಾಡಲಿಲ್ಲ. ನೀವು ಇವತ್ತು ಬಿಸಿ ಊಟ ಕೊಡುತ್ತಿಲ್ಲ ಅಥವಾ ಅರಿದ ಊಟವನ್ನು ಕೊಡುತ್ತಿಲ್ಲ. ಇದು ಸುಮ್ಮನೆ ಪ್ರಚಾರ ಅಷ್ಟೆ. ಇವತ್ತು ಸಮವಸ್ತ್ರ ಕೊಡಿ ಎಂದು ಯಾರೂ ನಿಮ್ಮ ಮುಂದೆ ಬಂದು ಸ್ಟ್ರೈಕ್ ಮಾಡಿಲ್ಲ. ಸಮವಸ್ತ್ರ, ಬಿಸಿ ಊಟದ ಬದಲು ಒಳ್ಳೆಯ ಶಾಲಾ ಕಟ್ಟಡವನ್ನು ಕಟ್ಟಿ ಮಕ್ಕಳಿಗೆ ಅಲ್ಲಿ ವಿದ್ಯೆ ಕಲಿಯುವಂಥ ವಾತಾವರಣವನ್ನು ಒದಗಿಸಿಕೊಟ್ಟರೆ ಸಾಕು. ಹಾಸ್ಟಲ್‌ಗಳನ್ನು ಮಾಡತಕ್ಕಂಥದ್ದು, ಒಳ್ಳೆಯ ಶಿಕ್ಷಕರನ್ನು ಕೊಟ್ಟು ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವಂಥ ಕಾರ್ಯವನ್ನು ಮಾಡಬೇಕೇ ಹೊರತಾಗಿ ಬಿಸಿ ಊಟ, ಸಮವಸ್ತ್ರವನ್ನು ಇಲ್ಲಿ ಯಾರೂ ಕೇಳಲಿಲ್ಲ. ಇದಕ್ಕೆ ಹಣವನ್ನು ಕೊಡುವುದರಿಂದ ಈಗಾಗಲೇ ಕೊರತೆ ಬಜೆಟ್ ಆಗಿದ್ದು ಅದು ಇನ್ನೂ ಹೆಚ್ಚಾಗಬಹುದೆಂದು ನನಗನ್ನಿಸುತ್ತದೆ. ಆದ್ದರಿಂದ ಇದನ್ನು ಕೈಬಿಡಬೇಕು ಎನ್ನತಕ್ಕಂಥದ್ದು ನನ್ನ ವಿಚಾರವಾಗಿದೆ. ಇನ್ನು ಶಾಸಕರ ನಿಧಿಗೆ 25 ಲಕ್ಷ ರೂ.ನಿಂದ 40 ಲಕ್ಷ ರೂ.ಗಳಿಗೆ ಹೆಚ್ಚು ಮಾಡಿದ್ದಾರೆ. ಇದರಿಂದ ಅನುಕೂಲವಾಗಿದೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ನನ್ನ ಮನವಿ ಏನೆಂದರೆ, ತಾವು ಅನೇಕ ಕಂಡಿಷನ್‌ಗಳನ್ನು ಹಾಕಬಾರದು. ತಾವು ಕಂಡಿಷನ್ ಹಾಕಿದರೆ ನಾವು ಆ ನಿಧಿಯ ಹಣವನ್ನು ಸರಿಯಾಗಿ ಉಪಯೋಗ ಮಾಡುವುದಕ್ಕಾಗುವುದಿಲ್ಲ. ಎಂ.ಪಿ.ಗಳಿಗೆ ಕೊಡುತ್ತಿರುವ ಬಜೆಟ್‌ನ್ನು ಅವರು ಹೇಗೆ ಉಪಯೋಗ ಮಾಡುತ್ತಾರೋ ಅದೇ ರೀತಿ ಇಂಥಿಂಥದ್ದಕ್ಕೆ ಮಾತ್ರ ಖರ್ಚು ಮಾಡಬೇಕೆಂದು ಕಂಡಿಷನ್ ಹಾಕದೆ ಎಂ.ಪಿ. ಗಳಂತಯೇ ಖರ್ಚು ಮಾಡುವುದಕ್ಕೆ ನಮಗೂ ಅವಕಾಶ ಕೊಟ್ಟರೆ ಮಾತ್ರ ನಮ್ಮ ಜನಗಳ ಹತ್ತಿರ ಹೋಗಿ ಅವರ ಸಮಸ್ಯೆಗಳಿಗೆ ನಾವು ಸ್ಪಂದನೆ ಮಾಡುವುದಕ್ಕೆ ಆಗುತ್ತದೆ.

ಆದ್ದರಿಂದ ಹೆಚ್ಚಿಗೆ ಕಂಡಿಶನ್‌ಗಳನ್ನು ಹಾಕದೆ ಈಗ ಹಾಕಿರುವಂಥ ಕಂಡಿಷನ್‌ಗಳಲ್ಲಿ ಸಡಿಲಿಕೆ ಮಾಡಬೇಕೆಂದು ನಮ್ಮ ವಿನಂತಿಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): – ಮಾನ್ಯ ಉಪಾಧ್ಯಕ್ಷರೆ, ಕಂಡಿಷನ್ ಆ ರೀತಿ ಹಾಕದೇ ಹೋದರೆ ಎಲ್ಲರೂ ತಮಗೆ ಬೇಕಾದ ಕಡೆಗೆ, ಪ್ರೈವೇಟ್ ಇನ್ಸ್ಟಿಟ್ಯೂಷನ್ ಮುಂತಾದ ಕಡೆಗೆ ಅಂದರೆ ಅತ್ಯಾವಶ್ಯಕವಲ್ಲದ ಕಡೆಗೆ ಹಣವನ್ನು ಕೊಡುತ್ತಾರೆ. ಕುಡಿಯುವ ನೀರಿಗೆ ರಸ್ತೆಗೆ ಹಣ ಕೊಡುವುದಿಲ್ಲ ಸಂಬಳ ಕೊಡುವುದಕ್ಕೆ ಹಣ ಇಲ್ಲವೆಂದು ಪ್ರೈವೆಟ್ ಇನ್ಸ್ಟಿಟ್ಯೂಷನ್‌ಗೆ ಗ್ಯಾರೆಂಟಿ ಎಂದು ಹಣ ಕೊಡುತ್ತಾರೆ. ಹೀಗಾಗಿ ನಾವು ಯಾವ ಉದ್ದೇಶಕ್ಕಾಗಿ ಹಣವನ್ನು ಕೊಡುತ್ತೇವೆಯೋ ಆ ಉದ್ದೇಶ ಸಫಲವಾಗುವುದಿಲ್ಲ. ಕುಡಿಯುವ ನೀರಿಗೆ ಆ ಹಣವನ್ನು ಉಪಯೋಗ ಮಾಡಿದರೆ ಅಡ್ಡಿಯಿಲ್ಲ. ಕಮ್ಯುನಿಟಿ ಹಾಲಿಗೆ ಉಪಯೋಗ ಮಾಡಿದರೆ ಅಡ್ಡಿಯಿಲ್ಲ. ಅನೇಕ ಕಡೆ ಈಗ ಏನು ನಡೆದಿವೆ ಎಂದರೆ ಹೆಚ್ಚು ಕಡಿಮೆ ಕಮ್ಯುನಿಟಿ ಹಾಲ್ ಎಂದು ಗುಡಿಗುಡಾರಗಳನ್ನೇ ಜಾಸ್ತಿ ಕಟ್ಟುತ್ತಿದ್ದಾರೆ. ಆ ಹಣವನ್ನು ಕುಡಿಯುವ ನೀರಿಗೆ, ಸ್ಕೂಲ್ ಬಿಲ್ಡಿಂಗ್, ರಸ್ತೆಗಳು, ಚರಂಡಿಗಳ ಬಗ್ಗೆ ಯಾರೂ ಸಹ ಕೊಡುತ್ತಿಲ್ಲ. ಅದಕ್ಕೆ ಹಾಗಾಗಬಾರದೆನ್ನುವ ದೃಷ್ಟಿ ಇಟ್ಟುಕೊಂಡು ಕಂಡಿಷನ್‌ಗಳನ್ನು ಹಾಕಿದ್ದೇವೆ.

ಶ್ರೀ ಸುಭಾಶ್ ಕಲ್ಲೂರ್:- ಸನ್ಮಾನ್ಯ ಉಪಾಧ್ಯಕ್ಷರೆ, ಪ್ರೈವೇಟ್ ಇನ್ಸ್ಟಿಟ್ಯೂಷನ್‌ಗೆ ಕೊಡತಕ್ಕಂಥದ್ದಕ್ಕೆ ತಡೆಯಲು ಕಂಡಿಷನ್‌ಗಳನ್ನು ಹಾಕಲಿ. ಬೇಡ ಎಂದು ಹೇಳುವುದಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಉಪಾಧ್ಯಕ್ಷರೆ, ಗುಡಿಗುಡಾರಗಳಿಗೆ ಜಾಸ್ತಿ ಹಣ ಕೊಡುತ್ತಿದ್ದಾರೆಂದು ಮಾನ್ಯ ಗೃಹ ಸಚಿವರು ಹೇಳಿದರು. ನೀವು ಧರ್ಮದತ್ತಿ ಇಲಾಖೆಗಾದರೂ ಹೆಚ್ಚು ಹಣ ಕೊಡಿ. ಅವರಿಗಾದರೂ ಹೆಚ್ಚು ಬಜೆಟ್ ಕೊಟ್ಟರೆ ಗುಡಿಗುಡಾರಗಳನ್ನು ಕಟ್ಟುವವರಿಗಾದರೂ ಅನುಕೂಲವಾಗುತ್ತದೆ. ಆದ್ದರಿಂದ ಲೋಕಸಭಾ ಸದಸ್ಯರಿಗೆ ಏನು ನಾರ್ಮ್ಸ್ ಇದೆ ಅದನ್ನು ನಮಗೆ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಒಟ್ಟಿನಲ್ಲಿ ಇದ್ದಂಥ ಹಣದಲ್ಲಿ ಯಾವುದಕ್ಕೆ ಪ್ರೈಯಾರಿಟಿ ಕೊಡಬೇಕೆಂದು ನಾವು ನೋಡಲೇ ಬೇಕಾಗುತ್ತದೆ. ಸ್ವತಃ ನಾವು ನಮ್ಮ ಮನೆ ಬಜೆಟ್ ಖರ್ಚು ಮಾಡುವಾಗ ಅವಶ್ಯಕತೆ ಅನುಸಾರವಾಗಿ ಹಣವನ್ನು ಖರ್ಚು ಮಾಡುತ್ತೇವೆ. ಹಾಗೆಯೇ ನಿಮಗೆ ಅಲಾಟ್ ಮಾಡಿದಂಥ ಹಣ ಪ್ರೈಯಾರಿಟಿ ಮೇಲೆ ಕುಡಿಯುವ ನೀರಿಗೆ ಮೊದಲು ಕೊಡಬೇಕೋ ಅಥವಾ ಗುಡಿಗಳಿಗೆ ಮೊದಲು ಕೊಡಬೇಕೋ ರಸ್ತೆಗೆ ಮೊದಲು ಹಣ ಕೊಡಬೇಕೋ ಅಥವಾ ಕಮ್ಯುನಿಟಿ ಹಾಲ್‌ಗೆ ಮೊದಲು ಕೊಡಬೇಕೋ, ಅವುಗಳ ಬಗ್ಗೆ ನೀವೇ ಇದ್ದಂಥ ಹಣದಲ್ಲಿ ಪ್ರೈಯಾರಿಟಿ ಇಟ್ಟುಕೊಂಡು ಕೊಡಬೇಕು. ನೀವು ಸಫಿಷಯಂಟ್ ಫಂಡ್ ಕೊಟ್ಟರೆ ಈ ಸಮಸ್ಯೆಯೇ ಉದ್ಭವಿಸುವುದಿಲ್ಲ ಎಂದು ಹೇಳಿದರೆ ಹೇಗೆ ?

ಶ್ರೀ ಸುಭಾಶ್ ಕಲ್ಲೂರ್:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾನ್ಯ ಗೃಹಮಂತ್ರಿಯವರು ಹೇಳಿತಕ್ಕಂಥ ವಿಚಾರ ಸರಿ ಇದೆ. ಇಲ್ಲವೆಂದು ಹೇಳುವುದಿಲ್ಲ. ಆದರೂ ಕೂಡ ನಮ್ಮಲ್ಲಿ ಜನ ಹೆಚ್ಚಿಗೆ ಕೇಳತಕ್ಕಂಥದ್ದು ನಮ್ಮ ಊರಿಗೆ ಸಮುದಾಯ ಭವನ ಮೊದಲು ಮಾಡಿ. ರಸ್ತೆ ನಂತರ ಮಾಡಿ ಎಂದು ಹೇಳುತ್ತಾರೆ. ಜನಗಳ ಭಾವನೆ ಕೂಡ ಒಂದೊಂದು ಸಲ ಬೇರೆಯಾಗಿರುತ್ತದೆ.

ಅವರ ಟೇಸ್ಟ್ ಬೇರೆಯದಾಗಿದ್ದು ಅವರ ಸ್ಟೈಲ್‌ನಲ್ಲಿಯೇ ಕೇಳುತ್ತಾರೆ. ನಾವು ಹಣವನ್ನು ಕೊಡದಿದ್ದಾಗ, ಶಾಸಕರಾಗಿ ಇವರು ನಾವು ಕೇಳಿದಂಥ ಒಂದು ಕಮ್ಯುನಿಟಿ ಹಾಲ್‌ನ್ನು ಕಟ್ಟಿಕೊಟ್ಟಿಲ್ಲ ಎನ್ನತಕ್ಕಂಥದ್ದನ್ನು ಹೇಳುತ್ತಾರೆ. ಇಂಥ ಸಂದರ್ಭದಲ್ಲಿ ನಾವು ಕೊಡದಿದ್ದರೆ ಧರ್ಮಸಂಕಟಕ್ಕೆ ಒಳಗಾಗುವಂಥದ್ದು ನಿಮಗೂ ಇದೆ ನಮಗೂ ಇದೆ. ಆದರೆ ನಮ್ಮ ಶ್ರೀ ಕರಡಿ ಸಂಗಣ್ಣನವರು ಹೇಳಿದ ಹಾಗೆ ತಾವು ಧಾರ್ಮಿಕ ದತ್ತಿ ಇಲಾಖೆಗೆ ಹೆಚ್ಚಿನ ಅನುದಾನವನ್ನು ಕೊಟ್ಟರೆ ಧಾರ್ಮಿಕ ದತ್ತಿ ಮೂಲಕ ನಾವು ಗುಡಿಗೋಪುರಗಳನ್ನು ಕಟ್ಟಬಹುದು. ಇಲ್ಲದಿದ್ದರೆ ಶಾಸಕರ ವಿಧಿಯಿಂದ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕಾದರೂ ಸಡಿಲಿಕೆಯನ್ನು ಮಾಡಲೇಬೇಕು. ಯಾವುದಾದರೂ ಒಂದು ಮಾಡದಿದ್ದರೆ. ಅಲ್ಲಿಯ ಜನ ಶಾಸಕರು ಹೇಳಿದರೆ ಆಗಿಬಿಡುತ್ತದೆ ಎಂದು ತಿಳಿದುಕೊಂಡಿರುತ್ತಾರೆ. ನಾವು ಇದಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೆ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರೆ ಜನರು ತಪ್ಪು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಮಾನ್ಯಮುಖ್ಯಮಂತ್ರಿಯವರು ಈ ವಿಷಯದಲ್ಲಿ ಸ್ವಲ್ಪ ಸಡಿಲಿಕೆ ಕೊಟ್ಟು ಪ್ರಾಶಸ್ತ್ಯವನ್ನು ಮೊದಲು ಕುಡಿಯುವ ನೀರು, ಶಿಕ್ಷಣಕ್ಕೆ ಕೊಟ್ಟು ಆ ಮೇಲಾಯಾದರೂ ಇರತಕ್ಕಂಥ ಹಣವನ್ನು ಇತರೆ ವಿಚಾರಗಳಿಗೆ ಕೊಡುವುದಕ್ಕೆ ನಮಗೆ ಸಡಿಲಿಕೆ ಕೊಡಬೇಕೆನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಲಂಬಾಣಿ ತಾಂಡವನ್ನು ಕಂದಾಯ ಗ್ರಾಮವನ್ನಾಗಿ ಮಾಡಿದ್ದೀರಿ, ಇದಕ್ಕೆ ಸ್ವಾಗತವನ್ನು ಮಾಡುತ್ತೇವೆ. ಗುಲ್ಬರ್ಗಾದಲ್ಲಿ ತೊಗರಿ ಅಭಿವೃದ್ಧಿಗೆ ಐದು ಕೋಟಿ ರೂಪಾಯಿಗಳನ್ನು ಕೊಟ್ಟು ಈಗಾಗಲೇ ಸ್ಥಾಪನೆ ಮಾಡತಕ್ಕಂಥದ್ದಕ್ಕೆ ನಾವು ಸ್ವಾಗತವನ್ನು ಮಾಡುತ್ತೇವೆ. ಉತ್ತರ ಕರ್ನಾಟಕ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವ ಸಲುವಾಗಿ ಈಗಾಗಲೇ 10 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಇನ್ನು ಕಪ್ಪು ಮತ್ತು ಬೂದು ವಲಯಗಳಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲು ಕ್ರಮ ಕೈಗೊಳ್ಳುವುದಕ್ಕೆ ತಾವು ಆದೇಶ ಕೊಟ್ಟಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಸರ್ವೀಸ್ ಚಾರ್ಜ್ ಎಂದು 5000 ರೂ. ಎಂದು ಮಾಡಿರುವುದು ಬಹಳ ಹೆಚ್ಚು. ಅದನ್ನು ಕಡಿಮೆ ಮಾಡಬೇಕು. ಹೊಸ ಕನೆಕ್ಷನ್ 5-6 ಸಾವಿರ ರೂಪಾಯಿಗಳು ಖರ್ಚಿನಲ್ಲಿ ಮುಗಿಯುವಂತೆ ಆದರೆ ಅನಧಿಕೃತವಾಗಿ ಪಂಪ್‌ಸೆಟ್ ಹಾಕಿಕೊಂಡಿರುವವರು ಸಕ್ರಮಗೊಳಿಸಲು ಮುಂದೆ ಬರುತ್ತಾರೆ. ಸುಮಾರು 12 ಸಾವಿರ ರೂ.ಗಳಷ್ಟು ಆಗುವುದಾದರೆ ಯಾರು ಸಹ ಮುಂದೆ ಬರುವುದಿಲ್ಲ. ಈ ವಿಧೇಯಕವನ್ನು ತಾವು ಏನು ತಂದಿದ್ದೀರಿ, ಜನರು ಅಲ್ಲಿ ಕೇವಲ ಮನೆಗಳನ್ನಷ್ಟೇ ಸಕ್ರಮಗೊಳಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಐ.ಪಿ. ಸೆಟ್‌ನದ್ದು ಇನ್ನೂ ಸಕ್ರಮವಾಗುತ್ತಿಲ್ಲ ಆದ್ದರಿಂದ ಸರ್ವೀಸ್ ಚಾರ್ಜ್ ಐದು ಸಾವಿರ ಏನಿದೆ ಅದನ್ನು ತೆಗೆದುಹಾಕಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ತನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) ಮಾನ್ಯ ಉಪಾಧ್ಯಕ್ಷರೆ, 2002-2003ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲಿಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಕೊನೆಯ ಭಾಷಣ ನನ್ನದು ಆಗಿರುವುದರಿಂದ ಕೊನೆಗೆ ಹಾಳೂರಿಗೆ ಉಳಿದವನೇ ಗೌಡ ಎನ್ನುವ ಗಾದೆಯ ಹಾಗೆ ಆಗಿಬಿಟ್ಟಿದೆ. ಮಾನ್ಯ ಮುಖ್ಯಮಂತ್ರಿಯವರು 2002-2003ನೇ ಸಾಲಿನ ಆಯವ್ಯಯವನ್ನು

ಮಂಡಿಸಿದ್ದಾರೆ. ಕಾಂಗ್ರೆಸ್ ಸರ್ಕಾರದ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಇದು ಮೂರನೆಯ ಅಯವ್ಯಯವಾಗಿದೆ. ಯಾವುದೇ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಬೇಕಾದರೆ, ಅದನ್ನು ಜನರಿಗೆ ತಲುಪಿಸಬೇಕೆನ್ನುವ ಉದ್ದೇಶ ಎಲ್ಲಾ ಸರ್ಕಾರದ್ದು ಆಗಿರುತ್ತದೆ. ಹಾಗೆಯೇ ಈ ಸರ್ಕಾರದ ಮುಖ್ಯಸ್ಥರಾದ ಮುಖ್ಯಮಂತ್ರಿಗಳು ಕೂಡ ಅದನ್ನು ಯೋಜನೆ ಮಾಡಿರುತ್ತಾರೆ. ಆದರೆ ಕೆಲವೊಂದು ಕಾರ್ಯಕ್ರಮಗಳು ಅಧಿಕಾರಿಗಳ ನಿರ್ಲಕ್ಷ್ಯದಿಂದ ನಮ್ಮ ಕಾನೂನಿನ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿರುವ ವ್ಯವಸ್ಥೆಯಿಂದ ಜನರಿಗೆ ಮುಟ್ಟಿಲಿಕ್ಕೆ ಸಾಧ್ಯವಾಗುತ್ತಿಲ್ಲ. ಆ ಸಾರಿ ಕೃಷಿಗೆ ಹೆಚ್ಚು ಆದ್ಯತೆಯನ್ನು ಅಯವ್ಯಯದಲ್ಲಿ ಕೊಟ್ಟಿದ್ದೇವೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಕಳೆದ ವರ್ಷ ರೈತರು ಏನು ಆತ್ಮಹತ್ಯೆ ಮಾಡಿಕೊಂಡರು, ಯಾವ ಕಾರಣದಿಂದ ಆತ್ಮಹತ್ಯೆಯಾಗುತ್ತದೆ ಒಂದು ವೈಜ್ಞಾನಿಕವಾದ ಆಲೋಚನೆಯನ್ನು ಮಾಡುವಂಥ ಪ್ರಯತ್ನವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಬೇಕಾಗುತ್ತದೆ. ನಾನು ಹೈಟೆಕ್ ಮುಖ್ಯಮಂತ್ರಿಗಳು ಎಂದು ಹೇಳಿದರೂ ಕೂಡ, ಕೃಷಿಯಲ್ಲಿ ಕೂಡ ಅವರು ಹೈಟೆಕನ್ನು ಅಳವಡಿಸಿದರೆ ನಾವು ಅವರನ್ನು ಅಭಿನಂದಿಸುತ್ತೇವೆ. ನಾನು ಇವತ್ತಿನ ಪರಿಸ್ಥಿತಿಯನ್ನು ಹೇಳುವುದಕ್ಕೆ ಹೋಗುವುದಾದರೆ, ಈಗಾಗಲೇ ಮುಖ್ಯಮಂತ್ರಿಗಳು ಮಾತನಾಡಿದ ಸಂದರ್ಭದಲ್ಲಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ನಾವು ಪ್ರಕೃತಿಯ ವಿಕೋಪಕ್ಕೆ ಒಳಗಾಗಿದ್ದೇವೆ. ಒಂದು ಕಡೆ ರೈತರು ಸಂಕಷ್ಟದಲ್ಲಿದ್ದಾರೆ. ಒಂದು ಕಡೆ ನುಸಿರೋಗ ಇದೆ. ಒಂದು ಕಡೆ ಅಡಿಕೆ ಬೆಲೆ ಕಡಿಮೆಯಾಗಿದೆ. ನನ್ನ ಕ್ಷೇತ್ರದ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾದರೆ ನಮಗೆ ಇಷ್ಟು ವರ್ಷ ಕಷ್ಟ ಗೊತ್ತಾಗಿರಲಿಲ್ಲ. ಏಕೆಂದರೆ ಕಾಫಿ ತೋಟದಲ್ಲಿ ನನ್ನ ಕ್ಷೇತ್ರದಲ್ಲಿ ಶೇಕಡಾ 70 ರಿಂದ 80 ಭಾಗ ಅಲ್ಲಿ ಹೋಗಿ ಜನ ಕೂಲಿಯನ್ನು ಮಾಡುತ್ತಿದ್ದರು. ಇವತ್ತು ಕಾಫಿ ಬೆಲೆ ಕಡಿಮೆಯಾಗಿರುವುದರಿಂದ ಏನಾಗಿದೆ ಎಂದರೆ, ನನ್ನ ಕ್ಷೇತ್ರದಲ್ಲಿ ಇವತ್ತು ಅವರು ಒಂದು ಹೊತ್ತಿನ ಊಟಕ್ಕೂ ಕೂಡ ಯೋಜನೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಇದರ ಬಗ್ಗೆ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನೀವು ನುಸಿರೋಗಕ್ಕೆ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತೀರಿ. ನಾನು ಖರ್ಚು ಮಾಡಿಲ್ಲವೆಂದು ಹೇಳುವುದಿಲ್ಲ. ಮುಖ್ಯಮಂತ್ರಿಗಳು ಚಿಕ್ಕಮಗಳೂರಿಗೆ ಬಂದಂಥ ಸಂದರ್ಭದಲ್ಲಿ ಹೇಳಿದಾಗ, ನಾನೊಬ್ಬ ವಿರೋಧ ಪಕ್ಷದ ಒಬ್ಬ ಸದಸ್ಯನಾಗಿದ್ದರೂ ಕೂಡ ಅವರು ಪರಿಪಾಲನೆ ಮಾಡಿದರು. ಆದರೆ ಆ ಅಧಿಕಾರಿಗಳು ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಇವತ್ತು ವಿಫಲರಾಗಿದ್ದಾರೆ. ಅದನ್ನು ಮುಖ್ಯ ಮಂತ್ರಿಗಳು ಗಮನಿಸಬೇಕಾಗುತ್ತದೆ. 12 ಕೋಟಿ ರೂಪಾಯಿಗಳು ಖರ್ಚಾಗಿದ್ದರೂ ಕೂಡ ಆ ನುಸಿರೋಗವನ್ನು ತಡೆಗಟ್ಟಲಿಕ್ಕೆ

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಸಾಧ್ಯವಾಗಿಯೇ ಕಪ್ಪು ತಲೆ ಹುಳದ ರೋಗ ಬಂದಿರುವುದನ್ನು ನಿವಾರಣೆ ಮಾಡುವುದಕ್ಕೆ 12 ಕೋಟಿ ರೂಪಾಯಿಗಳನ್ನು ಯಾವ ರೀತಿಯಲ್ಲಿ ಖರ್ಚು ಮಾಡಿದರು ಎನ್ನುವುದನ್ನು ಮಾನ್ಯ ಮಂತ್ರಿಗಲಾಗಲಿ ಅಥವಾ ಮುಖ್ಯ ಮಂತ್ರಿಗಳಾಗಲಿ ಯೋಜನೆ ಮಾಡಬೇಕು. ನಾನು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತಂದಿದ್ದೇನೆ. ಚಿಕ್ಕಮಗಳೂರು ಜಿಲ್ಲೆಗೆ ಬಂದಾಗ ಅವರು ಹೇಳಿದ್ದರು ಕಡೂರು, ಬೀರೂರು, ತರೀಕೆರೆಯಲ್ಲಿ ವಿದ್ಯುತ್ತಿನ ತೊಂದರೆ ಇದೆ.

ಐಪಿ ಸೆಟ್‌ಗಳು ಇವೆ. ಅವುಗಳು ಚೆನ್ನಾಗಿ ನಡೆಯಬೇಕು. 380ರವರೆಗೆ ಒಂದು ಓಲ್ಟೇಜ್ ಇರಬೇಕೆಂದು ಅಡಿಷನಲ್ ಟ್ರಾನ್ಸ್‌ಫಾರ್ಮರ್‌ನ್ನು ಮೂರು ಸಬ್‌ಡಿವಿಜನ್‌ಗಳಿಗೆ ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟರು. ಅವರು 5 ಕೋಟಿ 40 ಲಕ್ಷ ರೂಪಾಯಿಗಳ ಒಂದು ವೆಚ್ಚದ ವ್ಯವಸ್ಥೆಯನ್ನು ಮಾಡಿದರು. ಅವರು ಕೇವಲ 8 ತಿಂಗಳಲ್ಲಿ ಅದನ್ನು ಮಾಡಿದರು. 5 ಕೋಟಿ 38 ಲಕ್ಷ ರೂಪಾಯಿಗಳ ಹಣ ಇವತ್ತು ಅಲ್ಲಿ ಬಂದು ಬಿದ್ದಿದೆ. ಕೆಲಸ ಅಲ್ಲಿ ನಡೆದಿದೆ ಆ ಸಿಟಿ ಬ್ರೇಕರ್ ಎನ್ನುವುದು, ಅದರ ಬೆಲೆ ಕೇವಲ 60 ರಿಂದ 70 ಸಾವಿರ ರೂ. ಆಗಬಹುದು. ಅದನ್ನು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಹೇಳಿರುತ್ತಾರೆ. ಇಲ್ಲವೇ ಒಂದು ಸಮಾರಂಭದಲ್ಲಿ ಹೇಳಿರುತ್ತಾರೆ. ಅದನ್ನು ನಿಜ ಮಾಡಬೇಕು. ಅವರು ಒಂದು ಸಲ ರೈತರಿಗೆ 8 ಗಂಟೆಗಳ ಕಾಲ ಕರೆಂಟ್ ಕೊಡುತ್ತೇನೆಂದು ಹೇಳಿದರು. ಕೇವಲ ಒಂದು ಸಿಟಿ ಬ್ರೇಕರ್ 60 ರಿಂದ 70 ಸಾವಿರ ರೂಪಾಯಿಗಳು ಮೂರು ಸಬ್ ಡಿವಿಜಿಗಳಿಗೆ ಹೆಚ್ಚು ಕಡಿಮೆ ಮೂರು ನಾಲ್ಕು ಲಕ್ಷ ರೂಪಾಯಿಗಳು ಆಗಬಹುದು. ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ವಿದ್ಯುತ್ತಿನ ತೊಂದರೆಯಿಂದ ಕುಡಿಯುವ ನೀರಿನ ಸಮಸ್ಯೆಯಾಗಿದೆ. ರೈತರು ಬೇಸಿಗೆಯಲ್ಲಿ ಬೆಳೆಯುವ ಬೆಳೆಗಳಿಗೆ ತೊಂದರೆಯಾಗಿದೆ. ಅದು ಏನಾದರೂ ವ್ಯವಸ್ಥೆಯಾಗಿದ್ದರೆ, ಇವತ್ತು ನಾವು ವಿದ್ಯುತ್ತಿನ ಬಗ್ಗೆ ಮಾತನಾಡುವಂತೆ ಇರಲಿಲ್ಲ. ಕಡೂರು ತರೀಕೆರೆ, ಬೀರೂರು ಹಾಸನ ಜಿಲ್ಲೆ, ಇದರ ಬಗ್ಗೆ ಮಾನ್ಯ ಶ್ರೀ ಕಂಠಯ್ಯನವರಿಗೂ ಗೊತ್ತು. ಕುಡಿಯುವ ನೀರಿನ ಎಷ್ಟು ತೊಂದರೆಯಾಗಿದೆ ಎಂದು ಕಾರಣ ಏನು ಎಂದರೆ, ವಿದ್ಯುತ್ತಿನ ತೊಂದರೆಯಾಗಿದೆ. ನಾವು ಮಾನ್ಯ ಶಿಕ್ಷಣ ಸಚಿವರ ಸಾಧನೆಯ ಬಗ್ಗೆ ಹೇಳಬೇಕಾಗುತ್ತದೆ. ಆ ಸಾಧನೆಯನ್ನು ನೋಡಿ. ಮಾನ್ಯ ರೆವಿನ್ಯೂ ಸಚಿವರು ನನಗೆ ನೀರು ಕುಡಿಯಿರಿ ಎಂದು ಹೇಳುತ್ತಿದ್ದಾರೆ. ಅವರು ನನಗೆ ನೀರು ಕೊಡಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಹತ್ತು ನಿಮಿಷ ಎಲ್ಲರೂ ಸುಮ್ಮನೆ ಇದ್ದರೆ ನಾನು ಮುಗಿಸಿ ಬಿಡುತ್ತೇನೆ. ನಾನು ಸಮಸ್ಯೆಗಳನ್ನು ಮಂತ್ರಿಗಳ ಹಾಗೂ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ನುಸಿ ರೋಗಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ನಿಮ್ಮ ಅಧಿಕಾರಿಗಳು ಏನು ಮಾಡಿದರು ಎಂದು ಹೇಳಿದರೆ, ಕಡೂರು, ಬೀರೂರು, ತರೀಕೆರೆ, ಅರಸೀಕೆರೆ, ತಿಪಟೂರಿನಲ್ಲಿ ಎಷ್ಟು ತೆಂಗಿನ ಮರ ಇವೆ ಎಂಬ ಬಗ್ಗೆ ಸರ್ವೆ ಮಾಡಿರುವುದನ್ನು, ಸರಿಯಾಗಿ ಮಾಡಲಿಲ್ಲ. ಅದಕ್ಕೆ ರೆವಿನ್ಯೂ ಇಲಾಖೆಯವರು ಸಹಕಾರವನ್ನು ಕೊಡಲಿಲ್ಲ. 35 ಲಕ್ಷ ತೆಂಗಿನ ಮರಗಳು ಎಂದು ತಾವು ಬಂದ ಸಂದರ್ಭದಲ್ಲಿ ಹೇಳಿದರು. ಈಗ ಅವರು ಹೇಳುತ್ತಾರೆ. ಸರ್ಕಾರ ಕೊಟ್ಟಿರುವ ಒಂದು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಸುಮಾರು ಒಂದು ಕೋಟಿ ಮೇಲೆ ಕಡೂರು ಮತ್ತು ತರೀಕೆರೆ ತಾಲ್ಲೂಕಿನಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ತೆಂಗಿನ ಮರಗಳು ಇರುವುದರಿಂದ ಒಂದು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಇನ್ನು ಹೆಚ್ಚಿಗೆ ಹಣ ಬೇಕಾಗುತ್ತದೆಂದು ಹೇಳುತ್ತಾರೆ. ಅದಕ್ಕೆ ತಾವು ಗಮನವನ್ನು ಹರಿಸಬೇಕಾಗುತ್ತದೆ. ಈಗಾಗಲೇ 40 ಪರ್ಸೆಂಟ್ ಏನು ಹಣವನ್ನು ಕೊಟ್ಟಿರುತ್ತೀರಿ ಅದರಿಂದ ನಿವಾರಣೆಯಾಗಿದೆ. ಆ ನಿವಾರಣೆಯಾಗಿರುವುದರಿಂದ ಮುಂದಿನ ಉಳಿಕೆ 60 ಪರ್ಸೆಂಟ್ ಹಣವನ್ನು ಆರ್ಥಿಕ ವರ್ಷದಲ್ಲಿ ಕೊಟ್ಟು ಸಹಾಯವನ್ನು ಮಾಡಿದರೆ, ರೈತರನ್ನು ಅವರ ಸಂಕಷ್ಟದಿಂದ ಪಾರು ಮಾಡಬಹುದು. ರೈತರು ಬೆಳೆದಿರುವ

ಬೆಳೆಗೆ ಮಾರುಕಟ್ಟೆ ಇರುವುದಿಲ್ಲ. ಒಂದು ನಿಂಬೆ ಹಣ್ಣಿನ ಬೆಲೆ ಒಂದು ತೆಂಗಿನ ಕಾಯಿಗೆ ಇರುವುದಿಲ್ಲ. ಕೊಬ್ಬರಿ ಬೆಂಬಲ ಬೆಲೆಗೆ ಒಂದು ಕೇಂದ್ರವನ್ನು ನೀವು ಕಡೂರಿನಲ್ಲಿ ತೆರೆದಿರುತ್ತೀರಿ. ನಮಗೆ ಅರಸೀಕೆರೆಯಲ್ಲಿ ಅನ್ಯಾಯವಾಗಿತು ಅದನ್ನು ಕಡೂರಿನಲ್ಲಿ ಕೊಡಲಿಕ್ಕೆ ಪ್ರಯತ್ನವನ್ನು ಮಾಡಿದಿರಿ. ಅಧಿಕಾರಿಗಳು ಏನು ಮಾಡಿದರು ಇದರ ಬಗ್ಗೆ ತಾವು ತನಿಖೆಯನ್ನು ಮಾಡಿಸಬೇಕಾಗುತ್ತದೆ. ಉತ್ತಮವಾದ ಕೊಬ್ಬರಿಯನ್ನು ಕೊಂಡುಕೊಳ್ಳಬೇಕೆಂದು ಸರ್ಕಾರ ಏನು ಒಂದು ಆದೇಶವನ್ನು ಮಾಡಿತ್ತು ಅದು ಆ ಕೇಂದ್ರದಲ್ಲಿ ನಡೆಯಲಿಲ್ಲ. ಈಗಾಗಲೇ ನಾನು ತಮಗೆ ಒಂದು ಪತ್ರವನ್ನು ಕೂಡ ಕೊಟ್ಟಿರುತ್ತೇನೆ. ನಮ್ಮಲ್ಲಿ ಈಗಾಗಲೇ ರಾಗಿ ಬೆಳೆ ಬಂದಿದೆ. ರೈತರಲ್ಲಿ ದುಡ್ಡಿಲ್ಲ ಒಂದು ರಾಗಿಯ ಕೇಂದ್ರವನ್ನು ತೆರೆಯಬೇಕು. ಇದಕ್ಕೆ ತಾವು ಆದೇಶವನ್ನು ಮಾಡಿರುತ್ತೀರಿ. ಆದರೆ ಇನ್ನು ಕೂಡ ರಾಗಿ ಕೇಂದ್ರ ತೆರೆದಿಲ್ಲ. ಯಾವುದೇ ಸರ್ಕಾರ ಇರಲಿ, ನಾನು ಆ ಸರ್ಕಾರ, ಈ ಸರ್ಕಾರವೆಂದು ಟೀಕೆ ಮಾಡುವುದಿಲ್ಲ. ಕೆಲವೊಂದು ಕಾರ್ಯಕ್ರಮಗಳನ್ನು ಮಾಡುವ ಸಂದರ್ಭದಲ್ಲಿ ಆದರಿಂದ ಒಳ್ಳೆಯದು ಆಗುತ್ತದೆ. ಕೆಲವೊಂದು ನ್ಯೂನತೆಗಳಿಂದ ಸಾರ್ವಜನಿಕರಿಂದ ದೂರನ್ನು ಎದುರಿಸಬೇಕಾದ ಸಂದರ್ಭ ಸರ್ಕಾರಕ್ಕೆ ಬರುತ್ತದೆ. ಆದ್ದರಿಂದ ದಯಮಾಡಿ ಒಂದು ರಾಗಿ ಬೆಂಬಲ ಕೇಂದ್ರವನ್ನು ಆದಷ್ಟು ಬೇಗ ಕಡೂರಿನಲ್ಲಿ ತೆರೆಯಲಿಕ್ಕೆ ಪ್ರಯತ್ನವನ್ನು ಮಾಡಬೇಕೆನ್ನುವ ಒಂದು ವಿಚಾರವನ್ನು ಹೇಳಿ, ನಿಮ್ಮನ್ನು ನಾನು ಅಭಿನಂದಿಸಬೇಕಾಗುತ್ತದೆ. ನಿಮ್ಮ ಸರ್ಕಾರದಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಕಟ್ಟಡಗಳನ್ನು ಕಟ್ಟಬೇಕೆಂದು, ನಿರ್ಧರಿಸಿದ್ದೀರಿ ಸಮಾಜ ಕಲ್ಯಾಣ ಅಥವಾ ಹಿಂದುಳಿದ ವರ್ಗ ಇರಬಹುದು. ಅಲ್ಪಸಂಖ್ಯಾ ತರ ಇಲಾಖೆ ಇರಬಹುದು. ಆದರೆ ನೀವು ಈ ವರ್ಷದ ಆಯವ್ಯಯದಲ್ಲಿ ಏನು ಹೇಳಿರುತ್ತೀರಿ. ಹೊಸ ವಿದ್ಯಾರ್ಥಿ ನಿಲಯಗಳನ್ನು ತೆರೆಯುವುದರ ಬಗ್ಗೆ ತಾವು ಹೇಳಿರುವುದಿಲ್ಲ. ಬಹಳಷ್ಟು ಬೇಡಿಕೆ ಇದೆ. ಇವತ್ತು ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪಂಗಡ, ಗಿರಿಜನ ಇದರ ಅಂಕಿ ಅಂಶಗಳನ್ನು ತೆಗೆದುಕೊಂಡರೆ, ನಾವು 52 ವರ್ಷದಿಂದ ಏನು ವಿದ್ಯಾರ್ಥಿ ನಿಲಯಗಳನ್ನು ತೆರೆದಿದ್ದೇವೆ. ಅದು ಇವತ್ತು ಸಾಲುತ್ತಿಲ್ಲ. ತಾವು ಬಜೆಟ್‌ನಲ್ಲಿ ಹೇಳಿರುತ್ತೀರಿ. ಎಷ್ಟು ವಿದ್ಯಾರ್ಥಿ ನಿಲಯಗಳನ್ನು ತೆಗೆಯುತ್ತೇವೆಂದು ಹೇಳುವ ಪ್ರಯತ್ನವನ್ನು ಮಾಡಿರುವುದಿಲ್ಲ. ಕಟ್ಟಡಗಳನ್ನು ಕಟ್ಟಿ ಮುಂದೆ ಮಾಡಬೇಕೆಂದಿದ್ದಿರೋ ಏನೋ ನನಗೆ ಗೊತ್ತಿಲ್ಲ ಒಂದು ನಾನು ನಿಮಗೆ ಕೇಳಿಕೊಳ್ಳುತ್ತೇನೆ. ನಮ್ಮ ಸಾಧನೆಯನ್ನು ತೋರಿಸಬೇಕಾದರೆ, ನಮ್ಮ ಜನ 100ಕ್ಕೆ 100 ರಷ್ಟು ಅಕ್ಷರಸ್ಥರಾದಾಗ ಮಾತ್ರ ನಮ್ಮ ಯೋಜನೆಗಳು ಫಲಪ್ರದವಾಗುತ್ತವೆ. ಆಗ ನಾವು ಒಂದು ಆರೋಗ್ಯಕರವಾದ ಸಮಾಜವನ್ನು ನಿರ್ಮಾಣ ಮಾಡಬಹುದು. ಅದಕ್ಕಾಗಿ ನಾನು ತಮ್ಮಲ್ಲಿ ಬೇಡಿಕೊಳ್ಳುವುದೇನೆಂದರೆ, ಸ್ವಲ್ಪ ಪ್ರೀ ಮ್ಯಾಟ್ರಿಕ್ ಹಾಗೂ ಪೋಸ್ಟ್ ಮ್ಯಾಟ್ರಿಕ್ ಹಾಸ್ಟೆಲ್‌ಗಳನ್ನು 2002-03ನೇ ಸಾಲಿನಲ್ಲಿ ತೆರೆಯುವ ಪ್ರಯತ್ನವನ್ನು ಮಾಡಬೇಕು. ನಾಳೆ ತಮ್ಮ ಉತ್ತರದಲ್ಲಿ ಈ ಸಭೆಗೆ ತಿಳಿಸುತ್ತೀರೆಂದು ನಾನು ಅಂದು ಕೊಂಡಿದ್ದೇನೆ. ಇನ್ನು ವಿದ್ಯುತ್ತಿನ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರದಲ್ಲೂ ಕೂಡ ಕೆಲವೊಂದು ಸಮಸ್ಯೆಗಳನ್ನು ಎದುರಿಸಿರುತ್ತೇವೆ. ಇವತ್ತು ಬೇಕಾದರೆ ಆಹಾರ ಪದಾರ್ಥಗಳನ್ನು ತರಬಹುದು. ಆದರೆ ವಿದ್ಯುತ್ ತರುವುದಕ್ಕೆ ಸಾಧ್ಯವಿಲ್ಲ. ವಿದ್ಯುತ್‌ನ್ನು ಉತ್ಪಾದನೆ ಮಾಡುವುದಕ್ಕೆ ನೀವು ಸಾಕಷ್ಟು ಹಣವನ್ನು ಇಟ್ಟಿರುತ್ತೀರಿ. ಯಾವುದರಲ್ಲಿ ನೀವು ಅದನ್ನು ತಯಾರು ಮಾಡುತ್ತೀರಿ. ನಾವು ಬರೀ ಹೈಡಲ್‌ನಲ್ಲಿ ವಿದ್ಯುತ್‌ನ್ನು ತಯಾರು ಮಾಡುವುದರಲ್ಲಿಯೇ ಇದ್ದೇವೆ. ತಮಿಳುನಾಡಿನ ಬಗ್ಗೆ ಇವತ್ತು ನಾನು ಯಾವುದೋ

ಒಂದು ಪತ್ರಿಕೆಯಲ್ಲಿ ಓದಿದೆ. ಅಲ್ಲಿ ಸೂರ್ಯನಿಂದ ಒಂದು ಇಂಧನವನ್ನು ತಯಾರಿಸುವಂಥ ವ್ಯವಸ್ಥೆಗೆ ಒಂದು ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ ಎನ್ನುವ ವಿಚಾರವನ್ನು ಅಲ್ಲಿಯ ಸರ್ಕಾರದವರು ಪ್ರಸ್ತಾಪ ಮಾಡಿದ್ದಾರೆ. ಆ ಒಂದು ವ್ಯವಸ್ಥೆ ಏನಾದರೂ ನಮ್ಮ ರಾಜ್ಯದಲ್ಲಿ ತಂದರೆ ಮಾತ್ರ ನಮ್ಮ ರೈತರಿಗೆ ಇರತಕ್ಕಂಥ ವಿದ್ಯುತ್ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕಾಗುತ್ತದೆ. ತಾವು ಇದನ್ನು ಗಮನಿಸಬೇಕು ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಹಿಂದುಳಿದ ವರ್ಗದವರಿಗೆ ನೀವು ಹೆಚ್ಚಿನ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಏಕೆಂದರೆ, ಮಾನ್ಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಶಿವಮೊಗ್ಗದ ಒಂದು ಸಮಾರಂಭದಲ್ಲಿ ಮಾತನಾಡುತ್ತಾ ಪ್ರತಿ ವರ್ಷ 10 ಸಾವಿರ ಫಲಾನುಭವಿಗಳಿಗೆ ಸ್ವಯಂ ಉದ್ಯೋಗವನ್ನು ಕಲ್ಪಿಸಿ ಕೊಡಲಾಗುತ್ತದೆ ಎಂದು ಹೇಳಿದ್ದರು. ಆದರೆ, ಇವತ್ತಿನ ದಿವಸ ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಅಧಿಕಾರಿಗಳು ಹಿಂದೆ ಬಿದ್ದಿದ್ದಾರೆ. ಹಾಗೆಯೇ ಅವರಿಗೆ ಇಲ್ಲ ಸಲ್ಲದ ದಾಖಲಾತಿಗಳನ್ನು ಕೇಳತಕ್ಕಂಥದನ್ನು ಮಾಡುತ್ತಿದ್ದಾರೆ. ಹಿಂದುಳಿದ ವರ್ಗದ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಬ್ಯಾಂಕಿನಿಂದ ಸಾಲವನ್ನು ಕೊಡಿಸುವಂಥ ವ್ಯವಸ್ಥೆ ಮಾಡಿದ್ದೇವೆ. ಆದರೆ, ಹಿಂದುಳಿದ ವರ್ಗದವರಿಗೆ ನಿಜವಾಗಿಯೂ ಕೂಡ ಸಾಲ ಸಿಗುತ್ತಿಲ್ಲ. ಇದನ್ನು ತಾವು ಸರಿಪಡಿಸಬೇಕಾಗುತ್ತದೆ. ಇವತ್ತಿನ ದಿವಸ ಹಿಂದುಳಿದ ವರ್ಗದವರಿಗೆ ಮತ್ತು ಪರಿಶಿಷ್ಠ ಜನಾಂಗದವರಿಗೆ ನಾವು ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಟ್ಟಾಗ ಮಾತ್ರ ಆ ಒಂದು ಸಮುದಾಯವನ್ನು ಮೇಲಕ್ಕೆ ತರುವಂಥ ಪ್ರಯತ್ನ ನಿಮ್ಮಿಂದಾಗಬೇಕು ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ನಿಂಜಲಿಂಗಪ್ಪನವರ ಕನಸು ಏನಿತ್ತು ಅದನ್ನು ನನಸು ಮಾಡಬೇಕೆಂದು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ತಾವು ವಿರೋಧಪಕ್ಷದಲ್ಲಿದ್ದೀರಿ ಆಗ ನಾವು ವಿದ್ಯಾರ್ಥಿಗಳಾಗಿದ್ದೆವು. ಇವತ್ತು ಅವರ ಕನಸನ್ನು ನನಸು ಮಾಡುವಂತಹ ಪ್ರಯತ್ನವಾಗಬೇಕು. ಇಲ್ಲದಿದ್ದರೆ. ಚಿತ್ರದುರ್ಗ ಜಿಲ್ಲೆ ಮತ್ತು ಚಿಕ್ಕಮಗಳೂರಿನ ಕೆಲವೊಂದು ತಾಲ್ಲೂಕುಗಳಲ್ಲಿರತಕ್ಕಂಥ ಭೂಮಿ ಇನ್ನು 10 ರಿಂದ 15 ವರ್ಷಗಳಲ್ಲಿ ಬರಡಾಗುತ್ತದೆ. ರಾಜಾಸ್ಥಾನದಲ್ಲಿರತಕ್ಕಂಥ ಬಿಕ ನೀರ್ ಏನಿದೆ ಆ ಸಮಸ್ಯೆಯನ್ನು ನಾವು ಇಲ್ಲಿಯೂ ಕೂಡ ಎದುರಿಸಬೇಕಾಗುತ್ತದೆ. ಇವತ್ತು ನಮ್ಮ ತಾಲ್ಲೂಕಿನಲ್ಲಿ ಒಂದು ಬೋರ್‌ವೆಲನ್ನು ಹೆಚ್ಚು ಕಡಿಮೆ 300 ರಿಂದ 400 ಅಡಿಗಳಷ್ಟು ಕೊರೆಯಬೇಕಾಗುತ್ತದೆ. ಇವತ್ತು ತಜ್ಞರ ಒಂದು ವರದಿಯ ಪ್ರಕಾರ 350ರ ಮೇಲೆ 500 ಅಡಿಗಳ ಒಳಗಡೆ ನೀರು ಸಿಕ್ಕಿದರೆ ಅದರಲ್ಲಿ ಫ್ಲೋರೈಡ್ ಇರುತ್ತದೆ. ಈ ಫ್ಲೋರೈಡ್‌ನಿಂದ ಮನುಷ್ಯರ ಆರೋಗ್ಯದ ಮೇಲೆ ಬಹಳ ಪರಿಣಾಮವನ್ನು ಬೀರುತ್ತದೆ. ಹಾಗೆಯೇ ಮನುಷ್ಯರ ಮೂಳೆಗಳು ಮೃದುವಾಗಿ ಅವರು ಅಂಗವಿಕಲರಾಗುವಂತಹ ವಿಚಾರ ತಮ್ಮ ಗಮನಕ್ಕೆ ತಂದಿದ್ದಾರೆ. ಈಗಾಗಲೇ ರಾಜೀವ್‌ಗಾಂಧಿ ಡ್ರಿಂಕಿಂಗ್ ವಾಟರ್ ಮಿಷನ್‌ರವರು ತರಿಕೆರೆ, ಹೊಸದುರ್ಗ, ಅರಸಿಕೆರೆ, ಚಳ್ಳಕೆರೆ ತಾಲ್ಲೂಕುಗಳಿಗೆ ಬಂದು ಈಗಾಗಲೇ ಸರ್ವೆ ಮಾಡಿದ್ದಾರೆ. ನಮಗೆ ಆದಷ್ಟು ಬೇಗ ಈ ಒಂದು ಬೋರ್‌ವೆಲ್ ವಾಟರನ್ನು ಬಿಟ್ಟು, ನದಿಗಳಿಂದ ಅಥವಾ ಜಲಸಂಪನ್ಮೂಲಗಳಿಂದ ಕುಡಿಯುವ ನೀರನ್ನು ಒದಗಿಸುವಂಥ ಕೆಲಸ ಆಗಬೇಕು. ಅಬ್ಬಿ ಫಾಲ್ಸ್‌ನಲ್ಲಿ ಮಳೆಗಾಲದಲ್ಲಿ 3 ಟಿಎಂಸಿ ಮತ್ತು ಬೇಸಿಗೆಯಲ್ಲಿ ಒಂದೂವರೆ ಟಿಎಂಸಿ ನೀರು ಸಿಗುತ್ತದೆ. ಈಗಾಗಲೇ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು

ಇದನ್ನು ಸರ್ವೆ ಮಾಡಿಸಿದ್ದಾರೆ. ಆದ್ದರಿಂದ, ಅಭಿಫಾಲ್ಸ್ ಯೋಜನೆಯನ್ನು ನೀವು ಅನುಷ್ಠಾನಕ್ಕೆ ತಂದರೆ ಕಡೂರು, ತರಿಕೆರೆ, ಹೊಸದುರ್ಗ, ಚಳ್ಳಕೆರೆ, ಜಗಳೂರು ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಗ್ರಾಮಗಳಿಗೆ ಒಳ್ಳೆಯ ಖನಿಜ ರಹಿತವಾದಂಥ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬಹುದು. ಇದು ಮಾನ್ಯ ಅರಣ್ಯ ಸಚಿವರಾದಂಥ ಶ್ರೀ ರಂಗನಾಥ್‌ರವರಿಗೂ ಸಹ ಗೊತ್ತು. ಈಗಾಗಲೇ ಕ್ವಾಲಿಟಿ ಕಂಟ್ರೋಲ್‌ನವರು ಸರ್ವೆ ಕೆಲಸವನ್ನು ಮಾಡಿದ್ದಾರೆ. ಇದಕ್ಕಾಗಿ ಸುಮಾರು 75 ರಿಂದ 80 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಎನ್ನತಕ್ಕಂಥದರ ಬಗ್ಗೆ ಕೂಡ ಇಲಾಖೆಯ ಅಧಿಕಾರಿಗಳು ಮತ್ತು ತಜ್ಞರು ಒಂದು ವರದಿಯನ್ನು ಇನ್ನು ಕೆಲವೇ ದಿವಸಗಳಲ್ಲಿ ಕೊಡಬಹುದು. ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಕೆರೆಗಳು ಖಾಲಿಯಾಗಿವೆ. ಹಾಗೆಯೇ ಭೂಮಿಗಳೆಲ್ಲಾ ಬರಡಾಗಿದೆ. ಆದ್ದರಿಂದ, ಅಬ್ಬಿಫಾಲ್ಸ್ ನೀರಿನ ಯೋಜನೆಯನ್ನು ಅನುಷ್ಠಾನಕ್ಕೆ ತಂದರೆ, ಅಂತರ್ಜಲ ಹೆಚ್ಚಾಗುತ್ತದೆ. ಹಾಗೆಯೇ ಶುದ್ಧವಾದ ಕುಡಿಯುವ ನೀರೂ ಸಹ ಸಿಗುತ್ತದೆ. ಆದ್ದರಿಂದ, ಇದಕ್ಕಾಗಿ ತಾವು ಹೆಚ್ಚಿನ ಒತ್ತನ್ನು ಕೊಡಬೇಕು. ಈಗಾಗಲೇ ನಬಾರ್ಡ್‌ನ ಆರ್‌ಐಡಿಎಫ್-7 ಕಾಮಗಾರಿಗಳನ್ನು ತಾವು ತೆಗೆದುಕೊಂಡಿದ್ದೀರಿ. ಇಲ್ಲಿ ನಾನು ನಿಮ್ಮ ಪಾರದರ್ಶಕತೆ ಬಗ್ಗೆ ಕ್ವೆಶ್ಚನ್ ಮಾಡುವುದಿಲ್ಲ. ಮತ್ತು ನಬಾರ್ಡ್ ಕೆಲಸಕ್ಕೆ ಟೆಂಡರ್ ಕರೆಯಬಾರದು ಎಂದು ಹೇಳುವುದಿಲ್ಲ. ಆದರೆ, ಸದರಿ ಯೋಜನೆ ಅಡಿಯಲ್ಲಿ ಹಣ ಖರ್ಚಾಗುತ್ತಿದೆಯೇ ಹೊರತು ಕೆಲಸ ಮಾತ್ರವಾಗುತ್ತಿಲ್ಲ. 1997-1998ರಲ್ಲಿ ಆರ್‌ಎಡಿಎಫ್ ಅಡಿಯಲ್ಲಿ ಮಾಡಿರತಕ್ಕಂಥ ಕೆಲಸಕ್ಕೆ ಈಗಾಗಲೇ ಟೆಂಡರ್ ಕರೆದು ಕೆಲಸ ವಹಿಸಿಕೊಟ್ಟರೂ ಸಹ ಇಲ್ಲಿಯವರೆವಿಗೂ ಸದರಿ ಕೆಲಸಗಳು ಆಗುತ್ತಿಲ್ಲ. ಆದರೆ, ನಾವು ನಬಾರ್ಡ್‌ನಿಂದ ತಂದಿರತಕ್ಕಂಥ ಹಣಕ್ಕೆ ಬಡ್ಡಿಯನ್ನು ಕೊಡುತ್ತಿದ್ದೇವೆ. ಈ ಒಂದು ಯೋಜನೆಯನ್ನು ಮಾಡುವುದಕ್ಕೋಸ್ಕರ ಸರ್ಕಾರ ನಬಾರ್ಡ್‌ನಿಂದ ಸಾಲ ತಂದಿರತಕ್ಕಂಥದಕ್ಕೆ ಬಡ್ಡಿಯನ್ನು ಕೊಡುತ್ತಿದೆ. ಆದರೆ, ಸದರಿ ಯೋಜನೆ ಅಡಿಯಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರತಕ್ಕಂಥದರ ಬಗ್ಗೆ ಮಂತ್ರಿಗಳು ಏತಕ್ಕಾಗಿ ವಿಚಾರ ಮಾಡುತ್ತಿಲ್ಲ ? ಇವತ್ತಿನ ದಿವಸ ಸರ್ಕಾರದ ಕೆಲಸವನ್ನು ಮಾಡಿದರೆ ನಮಗೆ ಬಿಲ್ ಆಗುವುದಿಲ್ಲ ಎನ್ನತಕ್ಕಂಥ ಪರಿಸ್ಥಿತಿಗೆ ಗುತ್ತಿಗೆದಾರರು ಬಂದಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ಕಡಿಮೆ 288 ಲಕ್ಷ ರೂಪಾಯಿಗಳಷ್ಟು ಗುತ್ತಿಗೆದಾರರಿಗೆ ಕೊಡುವುದು ಬಾಕಿ ಇದೆ. ನಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಈ ವರ್ಷದ ಯೋಜನೆಯಲ್ಲಿ ಸೇರಿಸಿದ್ದೀರಾ ಎಂದು ಅಧಿಕಾರಿಗಳಿಗೆ ಹೇಳಿದ್ದಕ್ಕೆ, ಅದನ್ನು ಸೇರಿಸುವುದಕ್ಕೆ ಬರುವುದಿಲ್ಲವೆಂದು ಅವರು ಹೇಳಿದರು. ತಾವು ಮುಖ್ಯಮಂತ್ರಿಗಳಾಗಿ ಬಳ್ಳಾರಿ ಜಿಲ್ಲೆಗೆ 3000 ಕೋಟಿ ರೂ. ಮತ್ತು ಮಂಡ್ಯ ಜಿಲ್ಲೆಗೆ 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಇದನ್ನು ನಾವು ಮಾಡಿಕೊಳ್ಳಬೇಡಿ ಎಂದು ಹೇಳುವುದಿಲ್ಲ. ಆದರೆ ಇಡೀ ರಾಜ್ಯವನ್ನು ಸರ್ವತೋಮುಖವಾದ ಅಭಿವೃದ್ಧಿಯತ್ತಾ ಹೊತ್ತುಕೊಂಡು ಹೋಗುವಂಥ ಜವಾಬ್ದಾರಿಯನ್ನು ಹೊಂದಿದ್ದೀರಿ. ಈ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದೇನೆಂದರೆ, ಖರ್ಚಾದ ಹಣದಲ್ಲಿ ಈಗಾಗಲೇ ಮಾಡಿರತಕ್ಕಂಥ ಕಾಮಗಾರಿಗಳ ಗುಣಮಟ್ಟ ಚೆನ್ನಾಗಿರುವುದಿಲ್ಲ. ಇದು ಪರಿಶೀಲನೆಯಾಗಬೇಕು. ಇವತ್ತಿನ ದಿವಸ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೋಸ್ಕರ ಸರ್ಕಾರದ ಮಟ್ಟದಲ್ಲಿ ಎಷ್ಟು ಸಾವಿರ ಕೋಟಿ ರೂಪಾಯಿಗಳನ್ನು

ಖರ್ಚು ಮಾಡಿದ್ದೇವೆ ಎನ್ನತಕ್ಕಂಥದ್ದು ಮತ್ತು ಎಷ್ಟು ಮೂಲಭೂತ ಸೌಕರ್ಯಗಳು ಸಿಕ್ಕಿವೆ ಎನ್ನತಕ್ಕಂಥದ್ದನ್ನು ತಮ್ಮ ಆಡಳಿತದ ವ್ಯವಸ್ಥೆಯಿಂದ ಗಮನಿಸಿದಾಗ ಮಾತ್ರ ಅಭಿವೃದ್ಧಿ ಕಾರ್ಯಗಳು ನಿಜವಾಗಿಯೂ ಕೂಡ ಜನರಿಗೆ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆ. ನವೆಂಬರ್ 28ನೇ ತಾರೀಖು ಆ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದರು. ಆದರೆ, ಇಲ್ಲಿಯವರೆವಿಗೂ ಅದನ್ನು ತರಲಿಲ್ಲ. ಅಣ್ಣಾಹಜಾರೆಯವರು ಮಾಡಿರುವಂಥ ಒಂದು ಸಾಧನೆಯನ್ನು ಕಮಿಟಿ ಪ್ರವಾಸ ಹೋಗಿದ್ದಂಥ ಸಂದರ್ಭದಲ್ಲಿ ನಾವು ನೋಡಿದ್ದೇವೆ. ಅವರು ಮಹಾರಾಷ್ಟ್ರದಲ್ಲಿ ಮಾಡಿರತಕ್ಕಂಥ ಕಾರ್ಯಕ್ರಮಗಳನ್ನು ಏನಾದರೂ ನಮ್ಮ ರಾಜ್ಯದಲ್ಲಿ ರೂಪಿಸಿದ್ದೇ ಆದರೆ ಇವತ್ತು ನಮಗೆ ಕುಡಿಯುವ ನೀರಿನ ಸಮಸ್ಯೆ ಮತ್ತು, ಭೂಮಿಯಲ್ಲಿ ತೇವಾಂಶವನ್ನು ಇಡಲಿಕ್ಕೆ ಸಾಕಷ್ಟು ಅನುಕೂಲವಾಗುತ್ತದೆಂಬ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಆದಷ್ಟು ಬೇಗ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮಗಳನ್ನು ತಾವು ಕೈಗೊಳ್ಳಬೇಕೆಂದು ಹೇಳುವುದರ ಜೊತೆಗೆ ನಾನು ಅಧ್ಯಯನ ಮಾಡಿದ ಪ್ರಕಾರ ಸಣ್ಣ ನೀರಾವರಿ ಇಲಾಖೆಗೆ ತಾವು ಇದಕ್ಕಾಗಿ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆಯಾಗಿದೆ. ಕೆಲವೊಂದು ಅಚ್ಚುಕಟ್ಟು ಪ್ರದೇಶಗಳನ್ನು ಏನಾದರೂ ದುರಸ್ಥಿ ಮಾಡಿದರೆ, ರೈತರಿಗೆ ಒಳ್ಳೆಯ ವ್ಯವಸ್ಥೆಯಲ್ಲಿ ನೀರನ್ನು ಕೊಡಬಹುದೆನ್ನುವ ವಿಚಾರವನ್ನು ಹೇಳುತ್ತೇನೆ. ಕಡೂರಿನಲ್ಲಿ ಇದೊಂದು ಕೊಬ್ಬರಿ ಕೇಂದ್ರವನ್ನು ತೆರೆಯಬೇಕೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:- ಈಗಾಗಲೇ ಸಮಯವಾಗಿದೆ. ಆದ್ದರಿಂದ, ಮಾನ್ಯ ಸಂಗಣ್ಣನವರು ಮಧ್ಯದಲ್ಲಿ ದಯವಿಟ್ಟು ಮಾತನಾಡುವುದಕ್ಕೆ ಹೋಗಬೇಡಿ. ನೀವೇನು ಹೇಳುತ್ತೀರಿ, ಅದಕ್ಕೆ ಈ ಕಡೆಯಿಂದ ಮತ್ತೆ ಉತ್ತರಕೊಡಬೇಕಾಗುತ್ತದೆ. ಆದ್ದರಿಂದ, ಈಗ ಸಮಯ ಇಲ್ಲದೇ ಇರುವುದರಿಂದ ಇದೆಲ್ಲಾ ಬೇಕಾಗಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಬೇಕು. ಏಕೆಂದರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಬಿ. ಕೃಷ್ಣಮೂರ್ತಿಯವರು ಸಣ್ಣ ನೀರಾವರಿ ಬಗ್ಗೆ ಪ್ರಸ್ತಾಪ ಮಾಡಿತಕ್ಕಂಥದನ್ನು ಮಾನ್ಯ ಮುಖ್ಯಮಂತ್ರಿಯವರೂ ಕೂಡ ಗಮನಿಸಬೇಕಾಗುತ್ತದೆ. ಬಜೆಟ್‌ನಲ್ಲಿ ಎರಡು-ಮೂರು ವರ್ಷಗಳಿಂದ ಅಲೋಕೇಶನ್ ಮಾಡಿದ್ದಾರೆ. ಆದರೆ, ಇವತ್ತಿನದಿವಸ 30 ಪರ್ಸೆಂಟ್ ಬಜೆಟ್ ಇದ್ದರೂ ಕೂಡ ಕೆಲಸಗಳಾಗುತ್ತಿಲ್ಲ. ರಾಜ್ಯದಲ್ಲಿ ನಾವು ಕೆಲಸ ಮಾಡಿದರೂ ಕೂಡ ನಮಗೆ ಪೇಮೆಂಟ್ ಆಗುವುದಿಲ್ಲ ಎನ್ನತಕ್ಕಂಥ ಭಾವನೆ ಗುತ್ತಿಗೆದಾರರಿಗೆ ಬಂದಿದೆ. ರೈತರಿಗೆ ಇವತ್ತಿನದಿವಸ ಸಣ್ಣ ನೀರಾವರಿ ಬಹಳ ಮುಖ್ಯವಾಗಿರುವುದರಿಂದ, ತಾವು ಇದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ಆಯಿತು. ಮಾನ್ಯ ಕೃಷ್ಣಮೂರ್ತಿಯವರೇ ತಾವು ದಯವಿಟ್ಟು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ.ಬಿ. ಕೃಷ್ಣಮೂರ್ತಿ:- ಇವತ್ತಿನದಿವಸ ನಮ್ಮ ಜಿಲ್ಲೆಯಲ್ಲಿ ಸುಮಾರು 75 ರಿಂದ 80 ಕೆರೆಗಳಿವೆ. ಈ ವರ್ಷ ಮಳೆ ಬರಲಿಲ್ಲವೆಂಬುದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಬಂದಿದೆ. ಇವತ್ತು ನಾವು ಭೀಕರವಾದ ಕ್ಷಾಮವನ್ನು ಎದುರಿಸುತ್ತಿದ್ದೇವೆ. ಇವತ್ತಿನದಿವಸ

ದನಕರುಗಳ ಮೇವಿಗೆ ಮತ್ತು ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಇವತ್ತು ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳು ಮಲೆನಾಡು ಪ್ರದೇಶಗಳಿಗೆ ಸೇರಿದ್ದರೂ ಕೂಡ ಈ ಸಾರಿ ಪ್ರಕೃತಿಯ ವಿಕೋಪಕ್ಕೆ ಒಳಗಾಗಿದ್ದೇವೆ. ನಮ್ಮ ಪಕ್ಕದ ಜಿಲ್ಲೆಯವರಾಗಿರುವ ಮತ್ತು ನಮಗೆ ಬಹಳ ಹತ್ತಿರದವರಾಗಿರುವ ಮಾನ್ಯ ರೆವಿನ್ಯೂ ಸಚಿವರು ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಳೆ ಬಾರದೆ ಬರಗಾಲಕ್ಕೆ ಒಳಗಾಗಿದೆ ಎಂದು ವಿಧಾನಸಭೆಯಲ್ಲಿ ಒಂದು ಸಲವೂ ಪ್ರಸ್ತಾಪ ಮಾಡಿಲಿಲ್ಲ ಮತ್ತು ಇತ್ತ ಕಡೆ ಗಮನ ಹರಿಸುತ್ತಿಲ್ಲ. ಆದರೆ, ಹಾಸನ ಜಿಲ್ಲೆಯಲ್ಲಿ ಮಳೆ ಬಂದಿದೆಯೋ ಏನೋ ಗೊತ್ತಿಲ್ಲ. ಕುಡಿಯುವ ನೀರಿನ ವ್ಯವಸ್ಥೆಗೆ ಹಣ ಕೊಟ್ಟಿದ್ದೇವೆಂದು ಇವತ್ತಿನದಿವಸ ರೆವಿನ್ಯೂ ಇಲಾಖೆಯವರು ಹೇಳುತ್ತಿದ್ದಾರೆ. ಆದರೆ, ಅವರು ಕೊಟ್ಟಿರುವ ಹಣ ಏನಾಗಿದೆ ಎಂದರೆ "ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ"ಯಂತಾಗಿದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳಿ ಈ ದಿವಸ ಬಜೆಟ್‌ನ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಸನ್ಮಾನ್ಯ ಅಧ್ಯಕ್ಷರಿಗೆ ನನ್ನ ವೈಯಕ್ತಿಕ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಸದನವನ್ನು ಬೆಳಿಗ್ಗೆ 10-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 8 ಗಂಟೆ 50 ನಿಮಿಷಕ್ಕೆ ಮುಂದೂಡಲ್ಪಟ್ಟು ನಾಳೆ ದಿನಾಂಕ:28ನೇ ಮಾರ್ಚ್ 2002ರ ಗುರುವಾರ ಬೆಳಿಗ್ಗೆ 10-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಸರ್ಕಾರಿ ಶಾಖಾ ಮುದ್ರಣಾಲಯ, ಟಮಕ, ಕೋಲಾರ - ೫೭೩೧೦೧